

ಗಾನ-ಕಲೆ
ಪರೀಕ್ಷಾಸಾಧನ
ಹಬೆಶಕ್ತಿ
ಆಕಾಶಗಮನ

ಗತಕಾಲದ ಗುರುತುಗಳು

ಮಹಾವ್ಯಕ್ತಿವೃತ್ತಾಂತಗಳಿಂದ ವ್ಯಕ್ತವಾದ ಮಾನವವರ್ಗದ
ಚರಿತ್ರೆಯ ಅವಲೋಕನ

ಎಫ್. ಜಿ. ಪಿಯರ್ಸ್
ಬಿ.ಎ. ಆನರ್ಸ್ (ಲಂಡನ್), ಎಫ್.ಆರ್.ಜಿ.ಎಸ್., ಎಫ್.ಆರ್.ಎಸ್.ಎ.
ಪ್ರಿನ್ಸಿಪಲ್, ಸಿಂಧಿಯ ಸ್ಕೂಲ್, ಗ್ವಾಲಿಯರ್

'ಜಗತ್ತಿನಲ್ಲಿ ಮನೋಭಾವದ ಪ್ರಭಾವವೇ ದೊಡ್ಡದು'

ಹಂಫ್ರಿ ಮಿಲ್‌ಫರ್ಡ್
ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್
ಲಂಡನ್ ಬೊಂಬಾಯಿ ಕಲ್ಕತ್ತ ಮದರಾಸ್

GATAKALADA GURUTUGALU

Translated into Kannada from

Footprints on the Sands of Time

by F. G. Pearce

First published in Kannada, 1943

ಕನ್ನಡದಲ್ಲಿ ಮೊದಲನೆಯ ಮುದ್ರಣ—೧೯೪೩

ವೆಸ್ಲಿ ಪ್ರೆಸ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು ಸಿಟಿ

ಪೀಠಿಕೆ

ಇದು ವೀರಪುರುಷರ ವೃತ್ತಾಂತ ಹೇಳುವ ಪುಸ್ತಕವಲ್ಲ. ಚರಿತ್ರೆಯಲ್ಲಿ ಪ್ರಸಿದ್ಧಿಪಡೆದ ಕೆಲವರ ವೃತ್ತಾಂತವನ್ನು ಹೇಳುವ ಪ್ರಯತ್ನವೇನೋ ಅಹುದು. ಅವರೆಲ್ಲರೂ ಸತ್ಪುರುಷರಲ್ಲಿ ಗಣ್ಯರಾದವರಲ್ಲ. ಅವರಲ್ಲಿ ಕೆಲವರು ಜಗತ್ತಿನಲ್ಲಿ ಬೀರಿದ ಶಕ್ತಿಪ್ರಭಾವಗಳಿಗೆ ಮೂಲಕಾರಣಕರ್ತರೂ ಅಲ್ಲ. ನದಿಯ ಪ್ರವಾಹಬಲದಿಂದ ವಿದ್ಯುದುತ್ಪತ್ತಿಮಾಡಿಕೊಳ್ಳಲು ಮೇಲ್ಗಡೆ ನೀರನ್ನು ತಡೆದು ತಿರುಗಿಸಿಕೊಳ್ಳುವ ನಳಿಗೆಗಳಂತೆ ಅವರು ತಮ್ಮ ಕಾಲದಶಕ್ತಿ ಪ್ರಭಾವಗಳಿಗೆ ನಳಿಗೆಗಳಾಗಿದ್ದಿರಬಹುದು; ಅವರ ಉದ್ದೇಶಗಳಲ್ಲಿ ಘನತೆ ಯೆಂಬುದಿಲ್ಲದೆ ಇದ್ದಿರಬಹುದು.

ಆದಾಗ್ಯೂ ಅವರು ಪ್ರಸಿದ್ಧರು; ಏಕೆಂದರೆ ಮುಖ್ಯರು. ಆದಕಾರಣ ಅವರ ಹೆಸರುಗಳನ್ನು ಕೇಳದೆ ಅವರ ಕಾರ್ಯಕಲಾಪಗಳನ್ನು ತಿಳಿಯದೆ ಇರಲು ಸುಶಿಕ್ಷಿತರೆನಿಸಿಕೊಳ್ಳತಕ್ಕವರಾರಿಗೂ ಅಧಿಕಾರವಿರುವುದಿಲ್ಲ.

ನನ್ನ ಸ್ವಂತಶಾಲೆಯಲ್ಲಿಯೇ ಅವಶ್ಯವಾಗಿ ಕಂಡುಬಂದಕಾರಣ ನಾನಿದನ್ನು ಬರೆದೆ. ಪೆರಿಕ್ಲೀಸನ ಅಥವಾ ಪಾಲನ ಹೆಸರನ್ನು ಕೇಳದಿದ್ದ ಶಾಸ್ತ್ರಾಧ್ಯಾಯಿಗಳು; ಡಾರ್ವಿನ್ನನ ಸಿದ್ಧಾಂತವೇನೆಂತಲೋ ಎಡಿಸನ್ ಪತ್ತೆ ಮಾಡಿದುದೇನೆಂತಲೋ ಸ್ವಲ್ಪವಾದರೂ ಅರಿಯದ ಕಲಾವಿಭಾಗಾಧ್ಯಾಯಿಗಳು; ಜಸ್ಟಿನಿಯನ್, ಬಾಲಿವಾರ್ ಅಥವಾ ಲಿಸ್ಟರ್ ಎಂಬುದೇನೆಂದು ವಿಸ್ಮಯಪಡುವ ಇತರ ನಾನಾ ಜನರು. ಇಂತಹ ನನ್ನ ಅನುಭವವನ್ನೇ ಪಡೆದಿರಬಹುದಾದ ಇತರರಿಗೂ ಉಪಯುಕ್ತವಾದೀತೆಂಬ ನಂಬಿಕೆಯಿಂದ ಪುಸ್ತಕವನ್ನು ಪ್ರಕಟನೆಗೆ ಕೊಟ್ಟೆನು.

ವ್ಯಕ್ತಿಗಳನ್ನಾರಿಸಿಕೊಳ್ಳುವುದರಲ್ಲಿ ನಾನು ಸರಿಯಾದ ಆಯ್ಕೆ ಮಾಡಿದ್ದೇನೆಯೋ ಇಲ್ಲವೋ ಎನ್ನುವಾಗ ಅಭಿಪ್ರಾಯಭೇದವಿದ್ದೇ ಇರಬೇಕು. ಮಹಾಪುರುಷರ ಉದಯಕ್ಕೆ ಕಾಲಮಹಿಮೆ ಕಾರಣವೋ ಅಥವಾ ಕಾಲಮಹಿಮೆಗೆ ಮಹಾಪುರುಷರು ಕಾರಣರೋ ಎಂಬುದು ಹಳೆಯ ಒಗಟು. ಯಾರ ಮನಸ್ಸಿಗೂ ನೋವಾಗದಂತೆ ನಾನು ಸಾಧ್ಯವಾದ ಮಟ್ಟಿಗೆ ವಿಷಯನಿರೂಪಣೆ ಮಾಡಿದ್ದೇನೆ. ಮತಬೋಧಕರಿಬ್ಬರ ವಿಷಯದಲ್ಲಿ ಉದ್ದೇಶಪೂರ್ವಕವಾಗಿ ಸ್ಥಾಪಕರಿಗಿಂತಲೂ ಮುಖ್ಯಪ್ರಚಾರಕರನ್ನು ಕುರಿತು ಹೆಚ್ಚಾಗಿ ಬರೆದಿದ್ದೇನೆ.

ವ್ಯಕ್ತಿಗಳ ಆಯ್ಕೆಯಲ್ಲಿ ಎರಡು ಲಕ್ಷ್ಯಗಳನ್ನು ಮನಸ್ಸಿನಲ್ಲಿಟ್ಟು ಕೊಂಡೆನು. ಕಾಲಗತಿಯ ಲಕ್ಷಣಗಳನ್ನು ತಾವು ತಾಳಿಯೋ ಕಾಲಗತಿಯ ಮೇಲೆ ತಮ್ಮ ಮಹಿಮೆಯನ್ನು ಬೀರಿಯೋ ಜೀವಿಸಿದಂತಹವರನ್ನೇ ಆರಿಸ ಬೇಕೆಂಬುದೊಂದು. ಆ ವ್ಯಕ್ತಿಗಳು ಹುಟ್ಟದಿದ್ದ ಪಕ್ಷದಲ್ಲಿ ಚರಿತ್ರೆಯ ಗತಿ ಬೇರೆಯಾಗುತ್ತಿತ್ತೆನ್ನುವಂತಿರಬೇಕು. ಎರಡನೆಯದು ಆಯ್ಕೆಯಲ್ಲಿ ಬಂದ ವ್ಯಕ್ತಿಗಳ ನಡುವೆ ಸರಿಸುಮಾರಾಗಿಯಾದರೂ ಸಮಾನವಾದ ಕಾಲಾಂತರ ವಿರಬೇಕೆಂಬ ಅಂಶ. ಏಕಧಾರೆಯಾಗಿ ವೃತ್ತಾಂತವಿರಲು ಅದು ಅವಶ್ಯಕ. ಅಂಧಕಾರಯುಗವೆಂಬ ಕಾಲಾವಧಿ ಅದಕ್ಕೆ ಅಪವಾದವಾಗಿ ಕಾಣಬಹುದು; ಕಾರಣ ಸ್ಪಷ್ಟ.

ಘಟನಾವಳಿಗಳ ವೃತ್ತಾಂತ ವಿದ್ಯಾರ್ಥಿಗಳಿಗೆ ಸ್ಫುಟವಾಗುವಂತೆ ಕಾಲ ಸೂಚಿಗಳೂ, ನಕ್ಷೆಗಳೂ, ಚಿತ್ರಗಳೂ ಪುಸ್ತಕದಲ್ಲಿ ಸೇರಿವೆ.

ಇರುವ ಮೂವತ್ತು ಅಧ್ಯಾಯಗಳನ್ನು ನೂರಹತ್ತು ಪಾಠಗಳನ್ನಾಗಿ ವಿಭಾಗಿಸಿ ಪ್ರತಿಯೊಂದು ಪಾಠಕ್ಕೂ ಮುಖ್ಯ ಪ್ರಶ್ನೆಯನ್ನು ಮೊದಲಲ್ಲೇ ಕೊಟ್ಟಿದೆ. ವಾರಕ್ಕೆ ಮೂರೋ ನಾಲ್ಕೋ ಪಾಠಗಳನ್ನು ಗೊತ್ತುಮಾಡಿದರೆ ಒಂದು ವರ್ಷಾವಧಿಯಲ್ಲಿಯೇ ಪುಸ್ತಕದ ಪಾಠ ಪೂರಯಿಸುವುದು.

ಎಫ್. ಜಿ. ಪಿ.

ವಿದ್ಯಾರ್ಥಿಗಳಿಗೆ

೧

ವಿಜ್ಞಾನಶಾಸ್ತ್ರಗಳ ವಿಭಾಗವನ್ನಾರಿಸಿಕೊಳ್ಳುವುದೋ ಕಲಾವಿಭಾಗವನ್ನಾರಿಸಿಕೊಳ್ಳುವುದೋ ಯಂತ್ರಶಾಸ್ತ್ರವನ್ನೋದುವುದೋ ವೈದ್ಯಶಾಸ್ತ್ರಗಳನ್ನೋದುವುದೋ ವಾಣಿಜ್ಯವಿಭಾಗವನ್ನೋದುವುದೋ ನೀವು ಈ ವೇಳೆಗಾಗಲೇ ನಿಶ್ಚಯಮಾಡಿಕೊಳ್ಳದೆಇದ್ದರೆ ಬೇಗನೆ ಮಾಡಿಕೊಳ್ಳಬೇಕಾಗುವುದು. ಆದರೆ ನೀವು ನಿಜವಾಗಿ ಸುಶಿಕ್ಷಿತರೆನಿಸಿಕೊಳ್ಳಬೇಕಾದರೆ ಪೃಥ್ವಿಯ ಚರಿತ್ರೆಯಲ್ಲಿ ನಡೆದ ಮುಖ್ಯ ಘಟನೆಗಳನ್ನೂ ಆ ಘಟನೆಗಳಿಗೆ ಕಾರಣರಾದ ಘನ ವ್ಯಕ್ತಿಗಳನ್ನೂ ಸ್ವಲ್ಪಮಾತ್ರವಾದರೂ ತಿಳಿದಿರಬೇಕು. ವಿಜ್ಞಾನಶಾಸ್ತ್ರಗಳನ್ನು ನೀವು ಆರಿಸಿಕೊಳ್ಳುವುದಾದರೂ ಪೆರಿಕ್ಲೀಸ್ ಅಥವಾ ಲಿಯೊನಾರ್ಡೊಡ ವಿಂಚೀ ಅಥವಾ ಅಕ್ಬರ್ ಅಥವಾ ವಾಷಿಂಗ್ಟನ್ ಲೋಕದಲ್ಲಿ ಏನು ಕೆಲಸಮಾಡಿದರೆಂಬುದನ್ನು ಸ್ವಲ್ಪವಾದರೂ ತಿಳಿಯದಿರುವುದು ತರವಲ್ಲ. ಕಲಾವಿಭಾಗವನ್ನಾರಿಸಿಕೊಂಡವರಿಗೆ ರಾಜರ್‌ಬೇಕನ್, ಗಲಿಲಿಯೊ, ಲಿಸ್ಟರ್ ಮತ್ತು ಎಡಿಸನ್ ನಡೆಸಿದ ಕಾರ್ಯವೇನೆಂಬ ಜ್ಞಾನವಿಲ್ಲದಿರುವುದು ತರವಲ್ಲ. ಲೋಕದಲ್ಲಿ ಯೋಗ್ಯತೆಯಿಂದ ಬಾಳಲು ಆ ಜ್ಞಾನವಿದ್ದೇ ಇರಬೇಕು.

ಪರಸ್ಪರಸಂಬಂಧವಿಲ್ಲದಿರುವ ವೀರರ ವೃತ್ತಾಂತಮಾಲೆಯನ್ನು ಈ ಪುಸ್ತಕದಲ್ಲಿಟ್ಟಿಲ್ಲ. ಈ ನಮ್ಮ ಜಗತ್ತು ಸಭ್ಯತೆ ನಾಗರಿಕತೆಗಳನ್ನು ಯಾವ ರೀತಿಯಲ್ಲಿ ಪಡೆಯುತ್ತಿದೆಯೆಂಬುದನ್ನು ತಿಳಿಸಿಕೊಡಲು ಪುಸ್ತಕದಲ್ಲಿ ಯತ್ನ ಮಾಡಿದೆ. ಆ ವೃತ್ತಾಂತದಲ್ಲಿ ನಿಮಗೆ ಸ್ವಾರಸ್ಯಕಾಣಲೆಂದು ನನ್ನ ಬಯಕೆ. ನಡೆದ ಚಲನವಲನಗಳನ್ನು ವಿವರಿಸಿಕೊಡುವಾಗ ಅವುಗಳಲ್ಲಿ ಬರುವ ಪ್ರಧಾನ ವ್ಯಕ್ತಿಗಳ ಹೆಸರುಗಳನ್ನು ಪಟಗಳಿಗಾಗಿಡುವ ಮೊಳೆಗಳಂತೆ ಉಪಯೋಗಿಸಿದೆ. ಆ ವ್ಯಕ್ತಿಗಳೆಲ್ಲರೂ ಘನವಾದ ಕರ್ತವ್ಯವನ್ನು ನಡೆಸಿದವರಲ್ಲ; ಆದರೆ ಅವರು ತಮ್ಮ ಪ್ರಭಾವದ ಗುರುತುಗಳನ್ನು ಸ್ಪಷ್ಟವಾಗಿ ಹಿಂದೆ ಬಿಟ್ಟು ಕಾಲವಾದರು. ಅವರ ತರುವಾಯ ಬಾಳಿದವರಿಗೆ ಆ ಗುರುತುಗಳು ಸ್ಫುಟವಾಗಿ ಕಾಣಿಸಿದುವು. ಆದುದರಿಂದ ಜ್ಞಾನವಂತರೆಂದೆನಿಸಿಕೊಳ್ಳಬೇಕಾದರೆ ನೀವು ಆ ವ್ಯಕ್ತಿಗಳ ಕಾರ್ಯಕಲಾಪವೇನಾಯಿತೆಂದೂ ಹಾಗೇಕಾಯಿತೆಂದೂ ತಿಳಿದಿರುವುದು ಅವಶ್ಯಕ.

೨

ಮುಖ್ಯಪ್ರಶ್ನೆಗಳನ್ನು ಉಪಯೋಗಿಸಿಕೊಳ್ಳುವ ಬಗೆ

ಇತರ ಪುಸ್ತಕಗಳಲ್ಲಿ ನಾನು ಕೊಟ್ಟ ಮುಖ್ಯಪ್ರಶ್ನೆಗಳಿಂದ ತಮಗೆ ವಿಶೇಷ ಸಹಾಯವಾಯಿತೆಂದು ಹಿಂದುಸ್ಥಾನದ ಅನೇಕ ಭಾಗಗಳ ವಿದ್ಯಾರ್ಥಿಗಳು ನನಗೆ ತಿಳಿಸಿದ್ದಾರೆ. ಆದ್ದರಿಂದ ಈ ಪುಸ್ತಕದಲ್ಲಿಯೂ ಅವುಗಳನ್ನು ಉಪಯೋಗಿಸಿದ್ದೇನೆ. ಅವುಗಳಿಂದ ಮೂರು ಬಗೆಯ ಪ್ರಯೋಜನಗಳು.

ಮೊದಲು ಪಾಠದ ವಿಷಯವೇನೆಂಬುದನ್ನು ಸುಲಭವಾಗಿ ತಿಳಿಸಿಕೊಡುವ ಶಿರೋನಾಮಗಳಂತೆ ಅವು.

ಎರಡನೆಯದಾಗಿ ಪಾಠದ ಒಟ್ಟು ಸಾರಾಂಶವೇನೆಂದು ಬೇಗನೆ ಗ್ರಹಿಸಲು ಸುಲಭವಾಗುವುದು. ಪ್ರತ್ಯಕ್ಷರವನ್ನೂ ಪ್ರತಿಶಬ್ದವನ್ನೂ ಓದಿಕೊಂಡು ಕ್ಲಿಷ್ಟವಾದ ಶಬ್ದಗಳಿಗೆ ಅರ್ಥವೇನೆಂದು ನಿಘಂಟಿನಲ್ಲಿ ಹುಡುಕಾಡುತ್ತ ಜರುಗಿಸುವುದು ಕೆಲವು ಗ್ರಂಥಗಳನ್ನೋದುವಾಗ ಅವಶ್ಯಕ. ಚರಿತ್ರೆಯ ವೃತ್ತಾಂತವನ್ನೋದಿಕೊಳ್ಳುವಾಗ ಆ ರೀತಿಯಿಂದ ಕಾಲವಿಲಂಬವಾಗುವುದು. ಪುಸ್ತಕವನ್ನೋ ಪತ್ರಿಕೆಯನ್ನೋ ಹಿಡಿದ ತರುವಾಯ ಒಂದೆರಡು ಬಾರಿ ವೇಗವಾಗಿ ಓದಿಕೊಳ್ಳುವ ವೇಳೆಗೆ ತಾತ್ಪರ್ಯವೇನೆಂದು ಗ್ರಹಿಸುವ ಅಭ್ಯಾಸ ನಿಮಗಾಗಬೇಕು. ಈ ಪುಸ್ತಕದ ಪ್ಯಾರಾಗಳನ್ನೋದುವಾಗ ಪ್ರತಿಶಬ್ದಕ್ಕೂ ನಿಲ್ಲದೆ ಮುಖ್ಯವಾದ ಅಭಿಪ್ರಾಯವೇನೆಂದು ಹುಡುಕುತ್ತ ಓದಬೇಕು. ಆಗ ನಿಮಗೆ ಆ ಅಭ್ಯಾಸವಾಗುವುದು.

ಅಭಿಪ್ರಾಯವೇನೆಂದು ಹುಡುಕುವುದರಲ್ಲಿ ಮುಖ್ಯಪ್ರಶ್ನೆಯಿಂದ ನಿಮಗೆ ಸಹಾಯವಾಗುವುದು. ಏಕೆಂದರೆ ಮುಖ್ಯಪ್ರಶ್ನೆಗಳೆಲ್ಲವೂ ಮುಂದೆ ಬರುವ ವಿಷಯವನ್ನು ತೆರೆದಿಡುವ ಬೀಗದ ಕೈಗಳಂತೆ. ಆ ಮುಖ್ಯಪ್ರಶ್ನೆಗಳನ್ನು ಈ ರೀತಿಯಾಗಿ ಉಪಯೋಗಿಸಿಕೊಳ್ಳುವುದು ಮೇಲು:

(ಕ) ಎಚ್ಚರವಾಗಿಯೂ ನಿದಾನವಾಗಿಯೂ ಮುಖ್ಯಪ್ರಶ್ನೆಯನ್ನೋದಿಕೊಳ್ಳಿ; ಕೇಳಿರುವುದೇನೆಂದು ಮನಸ್ಸಿನಲ್ಲಿ ದೃಢಪಡಿಸಿಕೊಳ್ಳಿ.

(ಖ) ತರುವಾಯ ಸೀಸದಕಡ್ಡಿ ಹಿಡಿದು ಬೇಗನೆ ಮುಂದಿನ ವಿವರವನ್ನು ಓದಿ. ಕಷ್ಟವಾದ ಶಬ್ದ ಕಂಡರೆ ಗುರುತಿಟ್ಟು ಸದ್ಯಕ್ಕೆ ಹಾಗಿರಲೆಂದು ಬಿಟ್ಟುಬಿಡಿ; ನಿಘಂಟನ್ನು ಬಿಚ್ಚಬೇಡಿ.

(ಗ) ಆ ಪಾಠವೆಲ್ಲವನ್ನೂ ವೇಗವಾಗಿ ಒಂದುಬಾರಿ ಓದಿದ ತರುವಾಯ

ಮೇಲಿನ ಮುಖ್ಯಪ್ರಶ್ನೆಗೆ ಉತ್ತರವೇನೆಂದು ನಿಮ್ಮ ಮನಸ್ಸಿನಲ್ಲಿ ಮಾತ್ರ ಯತ್ನಿಸಿ. ಮುಖ್ಯಪ್ರಶ್ನೆಗೆ ಉತ್ತರ ಆ ಪಾಠದಲ್ಲಿ ಎಲ್ಲಿಯೋ ಇದ್ದೇ ಇರುವುದು. ಬಹುಶಃ ನಿಮಗೆ ತಕ್ಷಣ ದೊರಕೀತು. ದೊರಕದಿದ್ದರೆ ಪುನಃ ವೇಗವಾಗಿ ಓದಿನೋಡಿ. ಈ ಸಲ ಖಂಡಿತವಾಗಿಯೂ ಉತ್ತರವು ನಿಮಗೆ ದೊರಕುತ್ತದೆ. ಪ್ರಶ್ನೆಗೆ ಉತ್ತರವೇ ಆ ಪಾಠದ ಮುಖ್ಯವಿವರವಾಗಿರುತ್ತದೆ.

ನಿಮಗೆ ಬೇಕಾದುದು ಆ ಮುಖ್ಯವಿವರ. ಅಷ್ಟುಮಾತ್ರ ನಿಮಗೆ ಬೋಧೆಯಾದರೆ ನೀವು ಗುರುತುಮಾಡಿದ ಶಬ್ದಗಳಲ್ಲಿ ಅನೇಕ ಶಬ್ದಗಳ ಅರ್ಥ ತಾನಾಗಿಯೇ ಸ್ಪಷ್ಟವಾಗಬಹುದು. ಆಗಲೂ ತಿಳಿಯದಿರುವ ಶಬ್ದವಿದ್ದರೆ ಆಗ ಅದರ ಅರ್ಥವನ್ನು ನಿಘಂಟಿನಲ್ಲಿ ನೋಡಿ.

ಮುಖ್ಯಪ್ರಶ್ನೆಗಳ ಮೂರನೆ ಪ್ರಯೋಜನ ಪುನರಾವೃತ್ತಿಯಲ್ಲಿ. ಆ ಸಮಯದಲ್ಲಿ ಪ್ರಶ್ನೆಗಳಿಂದ ಬಹಳ ಉಪಕಾರವುಂಟು. ಇರುವ ಮುಖ್ಯ ಪ್ರಶ್ನೆಗಳೆಲ್ಲಕ್ಕೂ ನೀವು ಉತ್ತರಕೊಡಬಲ್ಲವರಾದರೆ ಪಾಠಗಳ ವಿಷಯವನ್ನು ನೀವು ಗ್ರಹಿಸಿರುವಿರೆಂದು ನಿರ್ಣಯಮಾಡಬಹುದು.

ಅನುಕ್ರಮಣಿಕೆ

		ಪುಟ
	ಪೀಠಿಕೆ	(೩)
	ವಿದ್ಯಾರ್ಥಿಗಳಿಗೆ	(೫)
ಅಧ್ಯಾಯ		
೧.	ಮಾನವಸಭ್ಯತೆಯ ಮೊದಲು	೧
೨.	ಸಭ್ಯತೆಯ ತೊಟ್ಟಿಲುಗಳು	೧೦
೩.	ಪುರಾತನ ಗ್ರೀಕರು	೨೫
೪.	ವಿಶ್ವದೃಷ್ಟಿಯ ಸಿಕಂದರ್	೩೬
೫.	ಧರ್ಮಾಶೋಕ ಚಕ್ರವರ್ತಿ	೪೬
೬.	ಪುರಾತನ ರೋಮಕರು	೫೫
೭.	ಕ್ರೈಸ್ತಮತದ ಏಳಿಗೆ	೭೧
೮.	ಬೃಹತ್ತರ ಭಾರತ	೭೯
೯.	ಪೈಗಂಬರರ ಧರ್ಮಸ್ಥಾಪನೆ	೮೭
೧೦.	ಇಸ್ಲಾಮಿ ವ್ಯಾಪ್ತಿ ಕ್ರುಸೇಡುಗಳು	೯೪
೧೧.	ಮಂಗೋಲರ ಸಾಮ್ರಾಜ್ಯ	೧೦೬
೧೨.	ಪ್ರಾಟೆಸ್ಟೆಂಟರ ಉದ್ಯಮ	೧೧೩
೧೩.	ರಿನೇಸ್ಸಾನ್ಸ್ ಕಾಲ	೧೨೦
೧೪.	ಯಾನಸಾಹಸ ಪೃಥ್ವೀಪರಿಚಯಗಳು	೧೩೪
೧೫.	ಐರೋಪ್ಯ ಜನಾಂಗಗಳು	೧೪೪
೧೬.	ಅಕ್ಬರ್ ಮತ್ತು ಶಿವಾಜಿ	೧೫೦
೧೭.	ದರ್ಪಿಷ್ಠ ದೊರೆಗಳು	೧೬೧
೧೮.	ಇಂಗ್ಲಿಷರ ಅಭ್ಯುದಯ	೧೭೪
೧೯.	ಜಾರ್ಜ್ ವಾಷಿಂಗ್ಟನ್ ಮತ್ತು ಅಮೆರಿಕದ ಸ್ವಾತಂತ್ರ್ಯಸಾಧನೆ	೧೮೩
೨೦.	ವಾಲ್ಟೇರ್, ರೂಸೊ ಮತ್ತು ಪೇಯ್ನ್	೧೯೧
೨೧.	ಫ್ರಾನ್ಸ್ ಮಹಾಪಲ್ಲಟ ಮತ್ತು ನಪೋಲಿಯನ್	೧೯೮

ಅಧ್ಯಾಯ ಪುಟ

೨೨. ಆರ್ಕರೈಟ್, ವಾಟ್ ಮತ್ತು ಸ್ಟೀವನ್‌ಸನ್—ಔದ್ಯೋಗಿಕ ಪಲ್ಲಟ ೨೧೨
೨೩. ಮಾರ್ಕ್ಸ್ ಮತ್ತು ಷಾಫ್ಟ್‌ಸ್‌ಬೆರಿ—ಸಮಾಜಸಂಸ್ಕಾರ ೨೨೮
೨೪. ಬಾಲಿವಾರ್ ಮತ್ತು ಲಿಂಕನ್ ೨೩೯
೨೫. ಶಾಸ್ತ್ರಜ್ಞಾನಸಾಧಕ ಚಾರ್ಲ್ಸ್ ಡಾರ್ವಿನ್ ೨೫೦
೨೬. ಆಧುನಿಕಕಾಲದಲ್ಲಿ ವಿಜ್ಞಾನೋಪಾಯಗಳ ಸಾಧನೆ ೨೬೨
೨೭. ಇಟಲಿ, ಜರ್ಮನಿ ಮತ್ತು ಜಪಾನ್ ದೇಶಗಳು ೨೭೬
೨೮. ನಮ್ಮ ಸ್ವಂತ ಕಾಲಗತಿಯ ಗುರುತುಗಳು ೨೮೬
೨೯. ಸಮಸ್ತಸೈನ್ಯಾಧಿಪತಿ ಚಿಯಾಂಗ್ ಕೈಷೇಕ್ ಮತ್ತು ಸತ್ಯಾಗ್ರಹಿ
ಗಾಂಧೀಜೀ ೨೯೬
೩೦. ಕಡೆಗೆ ನಮ್ಮ ಗುರಿಯೇನು ? ೩೦೫

ಚಿತ್ರಗಳು ಮತ್ತು ನಕ್ಷೆಗಳು

ಜೀವನ ವಿಕಾಸ .... ಪುಸ್ತಕದ ಆದಿಯಲ್ಲಿ
ಮಾನವ ಜೀವಿತ .... ,, ,,
ಸಭ್ಯತೆಯ ಅಭ್ಯುದಯ .... ,, ಅಂತ್ಯದಲ್ಲಿ

ಪುಟ

ಶಿಲೆಯ ಆಯುಧಗಳು (Oxford University Press, Helen Corke: *Class Books of World History, I*) ೩
ಪಶುಪಾಲಕರ ಮತ್ತು ಕೃಷಿಜೀವಿಗಳ ನಾಡುಗಳು (Oxford University Press, Helen Corke: *Class Books of World History, IV*) ೫
ಮೊಹೆಂಜೊದರೋ—ತಟಾಕ (Government of India, Archæological Department) ೧೧
ಆರ್ಯರು ದ್ರಾವಿಡರೊಂದಿಗೆ ಹೋರಾಡುತ್ತಿರುವುದು ೧೪
ಸಭ್ಯತೆಯ ತೊಟ್ಟಿಲುಗಳು ೧೭
ಕುಂಗ್‌ಫುತ್ಸು (Photograph by Lady Hosie) ೨೧
ಚೀನೀಯರ ಪಿತೃಪೂಜೆ (Oxford University Press, Helen Corke: *Class Books of World History, II*) ೨೨

ಚಿತ್ರಗಳು ಮತ್ತು ನಕ್ಷೆಗಳು

ಪುಟ

ಅಲಂಕೃತ ಪುಷ್ಪಪಾತ್ರೆಗಳು—ಚೀನೀ (Courtesy of the Trustees, British Museum) ೨೩

ಅಥೀನೀ ದೇವತೆಯ ಚಿತ್ರವುಳ್ಳ ಗ್ರೀಕರ ಪುಷ್ಪಪಾತ್ರೆ (Courtesy of the Trustees, British Museum) ೨೫

ಪೆರಿಕ್ಲೀಸ್ (Courtesy of the Trustees, British Museum) ೩೦

ಅಥೆನ್ಸ್ ನಗರಭಾಗ—ಪಾರ್ಥಿನಾನ್ (Oxford University Press, *Paths of Peace, IV*) ೩೧

ಬಯಲಿನ ನಾಟಕಶಾಲೆ, ಗ್ರೀಕರದು (Oxford University Press, *Paths of Peace, IV*) ೩೧

ಸೋಕ್ರಟೀಸ್ (Oxford University Press, *Paths of Peace, IV*) ೩೩

ಪ್ಲೇಟೊ (Courtesy of the Earl of Leicester) ೩೪

ಅರಿಸ್ಟಾಟಲ್ (Photograph by W. F. Mansell) ೩೪

ಪರ್ಸೆಪಾಲಿಸ್ ನಗರದ ಗುರುತುಗಳು (Photograph by Dr Sarre) ೩೮

ಸಿಕಂದರ್ ಮಹಾಶಯ (Clarendon Press, *Oxford History of India*) ೪೦

ಸಿಕಂದರನ ಸಾಮ್ರಾಜ್ಯ (Clarendon Press, A. W. F. Blunt: *The Ancient World*) ೪೧

ಗ್ರೀಕರು ರಚಿಸಿದ ಬುದ್ಧವಿಗ್ರಹ (Clarendon Press, Macdonell: *India's Past*) ೪೩

ಬುದ್ಧದೇವ (Rischgitz Art Agency) ೪೮

ಅಶೋಕನ ಸ್ತಂಭಗಳಲ್ಲೊಂದು (Government of India, Archæological Department) ೫೧

ತಿಬ್ಬತ್—ಲ್ಹಾಸದಲ್ಲಿರುವ ದೊಡ್ಡ ಬೌದ್ಧವಿಹಾರ (Clarendon Press, Bell: *Tibet, Past and Present*) ೫೩

ರೋಮಕ ಪದಾತಿ ೫೯

ಶ್ರೀಮಂತ, ಶ್ರೀಮಂತನ ಹರ್ಮ್ಯ ೬೧

ಬಡವ, ಬಡವನ ಕುಟೀರ ೬೧

ಜೂಲಿಯಸ್ ಸೀಸ್ಲರ್ (British Museum) ೬೨

ರೋಮಕ ಸಾಮ್ರಾಜ್ಯ ೬೪

ಕಾಲೊಸಿಯಂ (Photograph by Anderson) ೬೬

ರೋಮಕರ ಮಂದಿರವೊಂದು (Restoration after Carey and Deam in Rostovtzeff's *A History of the Ancient World*, Clarendon Press) ೬೮

ಬೃಹತ್ತರ ಭಾರತ ೮೩

ಚಿತ್ರಗಳು ಮತ್ತು ನಕ್ಷೆಗಳು

ಪುಟ

ಇಸ್ಲಾಮಿನ ದಿಗ್ವಿಜಯ ೯೦

ಬಾರಬುದೂರ್ ಮಂದಿರ—ಜವದ್ವೀಪ (Clarendon Press, N. J. Krom: *The Life of Buddha*) ೯೭

ಬರಾಖಾನರ ಸಾಮ್ರಾಜ್ಯ ೧೦೮

ಲ್ಯೂಥರ್ (Photograph by F. Bruckmann) ೧೧೬

ರಾಜರ್ ಬೇಕನ್ (Courtesy, Bodleian Library) ೧೨೧

ಚಿತ್ರ ಬರೆಯುತ್ತಲಿರುವ ಲಿಯೊನಾರ್ಡೊ (Oxford University Press, *Paths of Peace II*) ೧೨೪

ಷೇಕ್ಸ್‌ಪಿಯರ್ ಕಾಲದ ರಂಗಮಂಟಪ ೧೨೯

ಗಲಿಲಿಯೋ ೧೩೧

ಹದಿನಾರನೆ ಶತಮಾನದ ಮುದ್ರಣಾಲಯ ೧೩೫

ಕ್ರಿಸ್ಟೊಫರ್ ಕೊಲಂಬಸ್ (Oxford University Press, *Paths of Peace IV*) ೧೩೭

ಕೊಲಂಬಸನ ಪತಾಕನೌಕೆ ೧೩೯

ಯಾನಸಾಹಸಿಗಳ ಮಾರ್ಗಗಳು ೧೪೧

ಕಾನ್‌ಸ್ಟಾಂಟಿನೋಪಲ್—ಸೆಂಟ್ ಸೋಫಿಯ ಮಸೀದಿ (Oxford University Press, Helen Corke: *Class Books of World History, II*) ೧೪೮

ಅಕ್ಬರ್ (Clarendon Press, *Oxford History of India*) ೧೫೩

ಶಿವಾಜಿ (Clarendon Press, *Oxford History of India*) ೧೫೭

೧೪ ನೆ ಲೂಯಿ ೧೬೩

೧೭೪೩ ರಲ್ಲಿ ಕಾಮನ್ಸ್ ಸಭೆ ೧೬೬

ಆಲಿವರ್ ಕ್ರಾಮ್ವೆಲ್ ೧೬೯

ಇತ್ತೀಚಿನಕಾಲದ ಕಾಮನ್ಸ್‌ಸಭೆಯ ದೃಶ್ಯ ೧೭೦

೧೭೫೦ ರಲ್ಲಿ ಉತ್ತರ ಅಮೆರಿಕದ ರಾಜಕೀಯ ವಿಭಾಗ (Oxford University Press, Corke: *A Book of Modern Peoples*) ೧೭೬

ಹಿರಿಯ ಪಿಟ್ ೧೭೯

ಜಾರ್ಜ್ ವಾಷಿಂಗ್ಟನ್ ೧೮೫

ರೂಸೊ (Oxford University Press, Hoyland: *A Brief History of Civilization*) ೧೯೫

ಗಿಲ್ಲೊಟೀನ್ ಯಂತ್ರ ೨೦೦

ನಪೋಲಿಯನ್ ಬೋನಪಾರ್ಟ್ ೨೦೪

ಲಾರ್ಡ್ ನೆಲ್ಸನ್ ೨೦೬

ನಪೋಲಿಯನ್ನನ ಅತ್ಯುನ್ನತಿ ೨೦೭

ಪುಟ

ವ್ಯಾಪಾರಕ್ಕಾಗಿ ವೇಗಸಂಚಾರಿಗಳಾದ ಹಡಗುಗಳನ್ನು ಕಟ್ಟಿದರು (*The Illustrated London News*) ೨೧೪

ನೂಲುವುದು—ಕಯ್ಯಿಂದ, ಯಂತ್ರದಿಂದ (i) from a drawing by George Walker, (ii) from *Economic Botany*, Plate VI ೨೧೭

ನೇಯ್ಗೆ—ಕಯ್ಯಿಂದ, ಯಂತ್ರದಿಂದ (i) from *Recueil de Planches*, (ii) from Baines' *History of the Cotton Manufacture in Great Britain*, 1835) ೨೧೮

ಹಾರ್ಗ್ರೀವ್ಸನ ಸ್ಪಿನ್ನಿಂಗ್‌ಜೆನ್ನಿ ೨೧೯

ಹೆರನ್ನನ ಹಬೆಯಂತ್ರ (Oxford University Press, Hoyland: *A Brief History of Civilization*).... .... ೨೨೧

ನ್ಯೂಕೋಮೆನ್ನನ ಯಂತ್ರ, ವಾಟನ ಏಕಕ್ರಿಯಾ ಯಂತ್ರ (Oxford University Press, Helen Corke: *Class Books of World History, II*) ೨೨೩

ಸ್ಟೀವನ್ಸನ್ನನ ಸ್ವಂತ ಚಲನಯಂತ್ರ—ರಾಕೆಟ್ ೨೨೬

ಎಲಿಸಬೆತ್ ಫ್ರೈ (Oxford University Press, *Paths of Peace, I*) ೨೩೪

ಲಾರ್ಡ್ ಷಾಫ್ಟ್ಸ್‌ಬೆರಿ, ಬಾಲಕರ ರಕ್ಷಕ (Oxford University Press, *Paths of Peace, II*) ೨೩೬

ದಕ್ಷಿಣ ಅಮೆರಿಕದ ರಾಷ್ಟ್ರಗಳು ೨೪೧

ವರ್ಜಿನಿಯದಲ್ಲಿ ಗುಲಾಮರ ಹರಾಜು ೨೪೩

ದಿಮ್ಮಿಗಳಿಂದ ಕಟ್ಟಿದ ಮನೆ ೨೪೬

ಅಬ್ರಹಾಂ ಲಿಂಕನ್ (Photograph by Barnard) ೨೪೭

ಚಾರ್ಲ್ಸ್ ಡಾರ್ವಿನ್ (Photograph by F. Bruckmann) ೨೫೬

ಆಧುನಿಕಕಾಲದ ಏರೋಪ್ಲೇನ್ ೨೬೩

ಲಾರ್ಡ್ ಲಿಸ್ಟರ್ ೨೬೪

ಲೂಯಿ ಪ್ಯಾಸ್ಟೂರ್ (Oxford University Press, *Paths of Peace, II*) ೨೬೫

ಗೌರೀಶಂಕರ ಶಿಖರದ ಮೇಲೆ ಹಾರಾಟ (Courtesy of Lt-Col Etherton) ೨೬೮

ಫೋನೊಗ್ರಾಫಿನೊಡನೆ ಎಡಿಸನ್ ೨೭೧

ಗರಿಬಾಲ್ಡಿ (From an engraving taken from a photograph by D. J. Pound) ೨೭೮

ಅಧ್ಯಕ್ಷ ವಿಲ್ಸನ್ ೨೮೮

ಚಿಯಾಂಗ್ ಕೈಷೇಕ್ ೨೯೮

ಮಹಾತ್ಮಾ ಗಾಂಧೀಜೀ (Photograph by Spencer Arnold, Esq., London) ೩೦೨

೧ನೇ ಅಧ್ಯಾಯ

ಮಾನವಸಭ್ಯತೆಯ ಮೊದಲು

ಮುಖ್ಯಪ್ರಶ್ನೆ ೧: ಕಪಿಮಾನವನಿಗಿಂತ ಆದಿಮಾನವನ ಬುದ್ಧಿ ಹೆಚ್ಚಾಗಿತ್ತೆಂದು ಹೇಗೆ ಹೇಳುವುದು?

ಸೂರ್ಯನ ಸುತ್ತ ನಮ್ಮ ಭೂಮಿಯು ಎಷ್ಟು ವರ್ಷಗಳಿಂದ ತಿರುಗುತ್ತಲಿದೆ? ೩೦೦ಕೋಟಿವರ್ಷಗಳ ಕಾಲದಿಂದ ಎಂದು ಶಾಸ್ತ್ರಜ್ಞರು ಹೇಳುವ ಉತ್ತರ.

ಆಕಾಶದಲ್ಲಿ ಎಷ್ಟೋ ನಕ್ಷತ್ರಗಳು ಕಾಣುತ್ತವೆ. ಅವುಗಳ ಮಧ್ಯೆ ನಮ್ಮ ಸೂರ್ಯನೊಂದು ಸಣ್ಣ ನಕ್ಷತ್ರ. ನಮ್ಮ ಸೂರ್ಯನ ಸುತ್ತ ಗ್ರಹಗಳು ತಿರುಗುತ್ತಿರುವಂತೆಯೇ ಪ್ರತಿ ನಕ್ಷತ್ರದ ಸುತ್ತಲೂ ತಿರುಗುವ ಬೇರೆಬೇರೆ ಗ್ರಹಗಳುಂಟು. ಪ್ರತಿ ನಕ್ಷತ್ರವೂ ಒಂದು ಸೂರ್ಯಮಂಡಲ, ಒಂದು ಸೌರವ್ಯೂಹ. ಅಸಂಖ್ಯಾತವಾಗಿರುವ ಈ ಸೌರವ್ಯೂಹಗಳ ಒಟ್ಟು ರಾಶಿಗೆ ಬ್ರಹ್ಮಾಂಡವೆಂದು ಹೆಸರು.

ಮೊದಲು ಭೂಮಿ ಸೂರ್ಯನ ಭಾಗವಾಗಿತ್ತು. ತರುವಾಯ ಕಳಚಿಕೊಂಡು ಉರಿಯುತಲಿದ್ದು ಸೂರ್ಯನ ಸುತ್ತ ತಿರುಗುತ್ತ ಗುಂಡನೆಯ ಆಕಾರವನ್ನು ತಾಳಿತು. ಆಕಾಶದಲ್ಲಿ ಸುತ್ತುತ್ತಿದ್ದ ಹಾಗೆ ಗಾಳಿಯ ಸೋಕಿನಿಂದ ಮೇಲೆಮೇಲೆ ಮಾತ್ರ ಬೆಂಕಿಯಾರುತ್ತ ಬಂತು. ತಂಪಾಗುತ್ತ ಮೇಲ್ಮೈ ಗಟ್ಟಿಯಾಯಿತು. ಆ ತಂಪಿಗೆ ಆವಿಯು ಹನಿರೂಪತಾಳಿ ಭೂಮಿಯ ಮೇಲೆ ಮಳೆಗಾರಂಭವಾಯಿತು. ಮಳೆಯಿಂದ ಬಿದ್ದ ನೀರು ಸುಮ್ಮನಿರುವುದೆ? ಮೇಲಿನಿಂದ ಕೆಳಕ್ಕೆ ಹರಿಯುತ್ತ ಕಲ್ಲನ್ನು ಸವೆಯಿಸುತ್ತ ಹಳ್ಳ ಸಿಕ್ಕಿದೊಡನೆಯೆ ಅದನ್ನು ತುಂಬುವುದು. ಭೂಮಿಯಮೇಲೆ ಬಿದ್ದ ಮಳೆನೀರು ಕಾಲಕ್ರಮದಲ್ಲಿ ಪರ್ವತಗಳನ್ನೇ ಸವೆಯಿಸಿ ಕಲ್ಲುಗಳನ್ನುರುಳಿಸಿ ಉಜ್ಜಿ ಪುಡಿಮಾಡಿತು; ನದಿಯಾಗಿ ಆ ಪುಡಿಯನ್ನು ತಳ್ಳಿಕೊಂಡು ಬಂದು ಹರಡಿತು; ಕಡೆಗೆ ದೊಡ್ಡ ದೊಡ್ಡ ಹಳ್ಳಗಳಲ್ಲಿ ತುಂಬಿತು. ಸರೋವರಗಳು, ಸಮುದ್ರಗಳು, ಸಾಗರಗಳು, ಹೀಗೆ ತುಂಬಿದ ಹಳ್ಳಗಳು. ಆ ಹಳ್ಳಗಳಲ್ಲಿ ತುಂಬಿದ ಮಣ್ಣು ಮೇಲಿನ ಒತ್ತಡಕ್ಕೆ ಸಿಕ್ಕಿ ಕಾಲಕ್ರಮದಲ್ಲಿ ಪುನಃ ಕಲ್ಲಾಯಿತು. ಇಂತಹ ಅದ್ಭುತಗಳು ನಡೆಯಲು ಸಾವಿರವಲ್ಲ, ಲಕ್ಷಗಳಲ್ಲ, ಕೋಟ್ಯಂತರ ವರ್ಷಕಾಲ ಹಿಡಿಯಿತು. ಸೂರ್ಯ


ನಿಂದ ಬೇರೆಯಾದ ಮೇಲೆ ಸುಮಾರು ನೂರಮೂವತ್ತು ಕೋಟಿ ವರ್ಷಗಳಾಗುವ ವೇಳೆಗೆ ಪೃಥ್ವಿಯೆಂಬುದು ಈಗಿನ ರೂಪವನ್ನು ತಾಳಿತು.

ರೂಪವನ್ನು ಪಡೆದ ಬಳಿಕ, ಅಂದರೆ ಸುಮಾರು ೫೦ ಕೋಟಿ ವರ್ಷಗಳ ಹಿಂದೆ, ಭೂಮಿಯ ಮೇಲೆ ಜೀವವೆಂಬುದು ಮೊದಲಾಯಿತು. ೧ನೇ ಚಿತ್ರವನ್ನು ನೋಡಿ. ಮೊದಲು ಕಾಣಿಸಿಕೊಂಡುದು ಸಸ್ಯರಾಶಿ. ತರುವಾಯ ಕ್ರಿಮಿಗಳು, ಜಲಚರಗಳು ಭೂಚರಗಳು ಇತ್ಯಾದಿ. ಇವುಗಳೆಲ್ಲ ಸಚೇತನಗಳು. ಚಲನ, ಆಹಾರಸ್ವೀಕಾರ, ಸಂತಾನವೃದ್ಧಿ ಎಂಬೀ ಮೂರು ಸಚೇತನಗಳಿಗೆ ಲಕ್ಷಣಗಳು. ಆ ಲಕ್ಷಣಗಳುಳ್ಳ ಪ್ರಾಣಿಗಳು ಭೂಮಿಯ ಮೇಲೆ ಜೀವಿಸಲು ಮೊದಲಾಗಿ ೫೦ ಕೋಟಿ ವರ್ಷಗಳಾದುವು. ಆ ಪ್ರಾಣಿರಾಶಿಯಲ್ಲಿಯೂ ಒಂದು ಒಗೆಯ ಕ್ರಮವಿತ್ತು. ಜೀವಶಾಸ್ತ್ರದಲ್ಲಿ ಆ ವಿವರವನ್ನು ಹೇಳಿರುತ್ತಾರೆ. ನಾವು ನೆನಪಿಡತಕ್ಕುದು ಆ ಕ್ರಮದಲ್ಲಿ ಸಸ್ತನಿಗಳ ವರ್ಗ ಕಡೆಯದೆಂಬ ಅಂಶ. ಆ ವರ್ಗವು ತಲೆದೋರಿ ೫ ಕೋಟಿ ವರ್ಷಗಳಾದುವು. ಸಸ್ತನಿವರ್ಗದಲ್ಲಿ ಅತಿಶ್ರೇಷ್ಠ ಜಾತಿಯಾದ ಮಾನವವರ್ಗ ಕಾಣಸಿಕೊಂಡು ಸುಮಾರು ೮ ಲಕ್ಷ ವರ್ಷಗಳಾದುವು.

ಅಷ್ಟುಕಾಲದ ಹಿಂದೆ ಕಾಣಿಸಿಕೊಂಡ ಮಾನವನು ಈಗಿನ ಮಾನವನಂತಿರಲಿಲ್ಲ. ನಿಂತು ನಡೆಯುವುದಕ್ಕೂ ಕಲ್ಲುಕೊಂಬೆಗಳನ್ನು ಉಪಯೋಗಿಸುವುದಕ್ಕೂ ಮೊದಲಿಟ್ಟ ಕೇವಲ ಕಪಿಮಾತ್ರವಾಗಿದ್ದನು. ಆದ್ದರಿಂದ ಆತನನ್ನು ಕಪಿಮಾನವನೆಂದೇ ಕರೆಯಬೇಕು. ಆದರೆ ಯಾವಾಗ ತನ್ನ ಬುದ್ಧಿಯನ್ನು ಬೆಳೆಸಿ ಕಲ್ಲನ್ನು ಚೂಪುಮಾಡಿ ಆಯುಧವನ್ನಾಗಿ ಉಪಯೋಗಿಸಿದನೋ ಆಗಲೇ ಬುದ್ಧಿಶಕ್ತಿಯ ಪ್ರಕಾಶಕ್ಕೆ ಮೊದಲಾಯಿತು. ಅದನ್ನೇ ನಾವು **ಮಾನವಸಭ್ಯತೆಯ** ಅಥವಾ ನಾಗರಿಕತೆಯ **ಅಂಕುರವೆನ್ನ**ಬಹುದು. ನಾಗರಿಕತೆಯೆಂದು ನಾವು ಕರೆಯುವುದು ಅದನ್ನೇ ಅಲ್ಲವೆ? ಬುದ್ಧಿಶಕ್ತಿಯಿಂದ ಸುತ್ತಮುತ್ತಣ ಪದಾರ್ಥವನ್ನು ನಮ್ಮ ಉಪಯೋಗಕ್ಕಾಗಿ ಬಳಸಿಕೊಳ್ಳುವುದು; ಸುತ್ತಮುತ್ತಣ ನೀರು, ಗಾಳಿ, ಕಲ್ಲು, ಮಣ್ಣು ಮುಂತಾದುವನ್ನು ನಮ್ಮ ಸ್ವಾಧೀನಕ್ಕೆ ತಂದುಕೊಂಡು ನಮ್ಮ ಜೀವನದಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಂಡು ಮೇಲ್ಮೆಯನ್ನು ಸಾಧಿಸುವುದು. ಮಾನವ ಸಮುದಾಯಕ್ಕೆ ಮೊದಲಿಗರಾದ ಕಪಿಮಾನವರು ಉಪಯೋಗಿಸಿದ ಆಯುಧಗಳ ಗುರುತುಗಳು ಸಮುದ್ರತಲದ ಬಂಡೆಗಳ ಮಧ್ಯೆ ಕಾಣಿಸಿವೆ.

ಕಪಿಮಾನವರು ಜೀವಿಸುತ್ತಿದ್ದಾಗಲೇ ಉತ್ತರಧ್ರುವದಿಂದ ನುಗ್ಗಿಕೊಂಡು ಬಂದ ಹಿಮರಾಶಿಯು ಭೂಮಿಯೆಲ್ಲವನ್ನೂ ಆವರಿಸಿತು. ಕ್ರಿ.ಪೂ. ೫,೦೦,೦೦೦

ದಿಂದ ಕ್ರಿ.ಪೂ. ೫೦,೦೦೦ ವರ್ಷಗಳವರೆಗೆ ಹಿಮದ ಬಂಡೆಗಳು ನೆಲವನ್ನು ಮುಚ್ಚಿದುವು. ಮಹೋರಗಗಳು ಆ ಹಾವಳಿಯಲ್ಲಿ ನಾಶವಾದುವು. ಮಹಾ ಅರಣ್ಯಗಳು ಕೂಡ ಹೂತುಹೋಗಿ ಕಾಲಕ್ರಮದಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ ಮುಂತಾದ ಲೋಹಗಳಾದುವು. ಆ ಹಿಮಯುಗದಲ್ಲಿ ಅನೇಕ ಪ್ರಾಣಿಗಳು ನಾಶ ಹೊಂದಿದಾಗ್ಯೂ ಮಾನವನು ಮಾತ್ರ ಉಳಿದುಕೊಂಡನು; ಬುದ್ಧಿಶಕ್ತಿಯಿಂದ ತಾನು ಉಳಿಯುವ ಉಪಾಯಗಳನ್ನು ಕಂಡುಕೊಂಡನು; ಬೆಂಕಿಯ ಉಪಯೋಗವನ್ನು ತಿಳಿದನು; ಗುಹೆಗಳಲ್ಲಿ ವಾಸಮಾಡುತ್ತಿದ್ದನು. ತನಗೆ ಅಶನವಸನಗಳನ್ನೊದಗಿಸುತ್ತಿದ್ದ ಹಿಮಸಾರಂಗ, ಕರಡಿ ಮೊದಲಾದ ಮೃಗಗಳ ಚಿತ್ರಗಳನ್ನು ಗುಹೆಗಳೊಳಗೆ ಬರೆದನು. ಈ ಕಾಲವೇ ಮಾನವಸಭ್ಯತೆಯ ವೃತ್ತಾಂತದಲ್ಲಿ ಮೊದಲಿನದು. ಅದನ್ನು **ಪುರಾತನ ಶಿಲಾಯುಗವೆಂದು** ಕರೆಯುವ ವಾಡಿಕೆ.



ಶಿಲೆಯ ಆಯುಧಗಳು

ಮುಖ್ಯಪ್ರಶ್ನೆ ೨: ನೂತನ ಶಿಲಾಯುಗದ ಜನರ ರೀತಿ ಹೇಗಿತ್ತು?


ಹಾಗೆಯೇ ಕಾಲ ಕಳೆಯುತ್ತ ಕಳೆಯುತ್ತ ಮಾನವಜೀವಿಯು ತನ್ನ ಬುದ್ಧಿಯನ್ನು ಅನೇಕ ವಿಧವಾಗಿ ಉಪಯೋಗಿಸಿ ಜೀವನದಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಂಡನು. ನಾಯಿ ಕುದುರೆಗಳನ್ನು ಪಳಗಿಸಿಕೊಂಡು ಅವುಗಳ ಸಹಾಯದಿಂದ ಬೇಟೆಯಾಡಿದನು; ದನಕುರಿಗಳನ್ನು ಸಾಕಿ ಅವುಗಳ ಹಾಲನ್ನು ಕರೆದನು. ಆ ಪಶುಗಳ ಮೇವಿಗಾಗಿ ಹುಲ್ಲುಗಾವಲುಗಳ ಪ್ರದೇಶವೆಲ್ಲಿ ಕಂಡರೆ ಅಲ್ಲಿ ನಿಂತು ತನ್ನ ಬದುಕನ್ನು ಸಾಗಿಸಿದನು. ಮರದ ಕೊಂಬೆಗಳನ್ನು ಜೋಡಿಸಿ ತನ್ನ ವಾಸಕ್ಕೆ ಗುಡಿಸಲುಗಳನ್ನು ನಿರ್ಮಿಸಿಕೊಂಡನು. ಈಗಲೂ ಸ್ವಿಟ್ಜರ್ಲೆಂಡಿನ ಕೊಳಗಳ ತೀರದಲ್ಲಿ ಹೀಗೆಯೇ ಜೀವಿಸುವ ಜನರುಂಟು. ಈ ಕಾಲದಲ್ಲಿಯೇ ಮೀನನ್ನು ಹಿಡಿಯುವುದೂ ಬಂತು. ಬಿಲ್ಲುಬಾಣಗಳೂ ಹುಟ್ಟಿಕೊಂಡವು. ಜೊಂಡಿನಿಂದಲೋ ಮರದ ತೊಗಟೆಯಿಂದಲೋ ಹೊದಿಕೆ

ಯನ್ನು ಮಾಡಿಕೊಂಡು ಮಣ್ಣಿನ ಪಾತ್ರೆಗಳನ್ನೂ ಚೂಪಾದ ಕಲ್ಲುಗಳ ಆಯುಧಗಳನ್ನೂ ಇಟ್ಟುಕೊಂಡಿದ್ದು ನೆಲದಲ್ಲಿ ಆಹಾರಕೊಡುವ ಸಸ್ಯಾದಿಗಳನ್ನು ಬೆಳೆಯಿಸುವ ಉಪಾಯವನ್ನೂ ಮನುಷ್ಯನು ತಿಳಿದನು. ಸುಮಾರು ಕ್ರಿ.ಪೂ. ೧೦೦೦೦ ದಿಂದ ೫೦೦೦ ದವರೆಗೆ ಈ ಕಾಲವು ನಡೆಯಿತು. ಅದನ್ನು **ನೂತನ ಶಿಲಾಯುಗವೆಂದು** ಕರೆಯುವರು.

ಮುಖ್ಯಪ್ರಶ್ನೆ ೩ : ಕೃಷಿಜೀವಿಗಳ ನಾಡನ್ನು ಪಶುಪಾಲಕ ಗುಂಪಿನವರು ಬಾರಿಬಾರಿಗೂ ಆಕ್ರಮಿಸಿದುದೇಕೆ?

ನೂತನಶಿಲಾಯುಗದ ಕಡೆಕಡೆಗೆ ಮನುಷ್ಯನಿಗೆ ವ್ಯವಸಾಯ ತಿಳಿಯಿತಷ್ಟೆ. ಸೂರ್ಯರಶ್ಮಿಯೂ ಜಲಸಮೃದ್ಧಿಯೂ ಇದ್ದೆಡೆಗಳಲ್ಲಿ ನೆಲದ ಮೇಲೆ ಬೀಜ ಬಿದ್ದು ಸಸಿಯಾಗಿ ಬೆಳೆಯುವುದು ಕಣ್ಣಿಗೆ ಕಾಣಿಸುತ್ತಿತ್ತು. ಇದರಿಂದ ಬೀಜವನ್ನು ಬಿತ್ತಿದರೆ ಗಿಡವಾಗುವುದೆಂಬುದನ್ನು ತಿಳಿದ ಮನುಷ್ಯನು ಬೇಟೆಯ ಜೊತೆಗೆ ವ್ಯವಸಾಯವನ್ನೂ ಅವಲಂಬಿಸಿದನು. ಆದರೆ ಪೃಥ್ವಿಯ ಎಲ್ಲೆಡೆಗಳಲ್ಲಿಯೂ ಸೂರ್ಯರಶ್ಮಿಯಾಗಲಿ ಜಲಾಶ್ರಯವಾಗಲಿ ಏಕರೀತಿಯಲ್ಲಿಲ್ಲ. ಕೆಲವು ಪ್ರದೇಶಗಳಲ್ಲಿ ಕಷ್ಟವೇ ಇಲ್ಲದೆ ಗಿಡಮರಗಳು ಬೆಳೆಯುತ್ತವೆ; ಕೆಲವು ಪ್ರದೇಶಗಳಲ್ಲಿ ಕುಶಗಳು ಮಾತ್ರವೇ; ಇನ್ನೂ ಕೆಲವು ಪ್ರದೇಶಗಳಲ್ಲಿ ಯಾವ ಬೆಳೆಯೂ ಇಲ್ಲ. ಈ ಕಾರಣದಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಮಾನವನ ಬದುಕು ಬೇರೆ ಬೇರೆ ತೆರನಾಯಿತು. ಮಧ್ಯ ಏಷ್ಯವೆಲ್ಲ ಹುಲ್ಲುಗಾವಲಿನ ಪ್ರದೇಶ. ಅಲ್ಲಿದ್ದವರು ಪಶುಪಾಲನೆಯನ್ನೇ ನಂಬಿಕೊಂಡಿರಬೇಕು. ಅರಣ್ಯಗಳ ಒತ್ತಿನಲ್ಲಿದ್ದವರು ಬೇಟೆಯಿಂದಲೇ ಬದುಕಬೇಕು. ಫಲವತ್ತಾದ ಪ್ರದೇಶದಲ್ಲಿದ್ದವರು ಮಾತ್ರ ವ್ಯವಸಾಯವನ್ನು ಅಭಿವೃದ್ಧಿಮಾಡಿಕೊಂಡು ಗುಂಪು ಗುಂಪುಗಳಾಗಿ ಹಳ್ಳಿಗಳನ್ನು ಕಟ್ಟಿ ಸ್ಥಿರಜೀವನವನ್ನು ನಡೆಸಬಲ್ಲವರಾದರು.

ಕೆಲವೆಡೆಗಳಲ್ಲಿ ಬೇಟೆ ಪಶುಪಾಲನೆಗಳಿಂದ ಬದುಕು ನಡೆಸುತ್ತ ಬೇರೆ ಕೆಲವೆಡೆಗಳಲ್ಲಿ ಮನೆಮಂದಿರಗಳನ್ನು ಕಟ್ಟಿಕೊಂಡು ವ್ಯವಸಾಯದಿಂದ ಜೀವಿಸುತ್ತಿರುವಾಗ ಆ ಮಾನವರ ಗುಂಪುಗಳಲ್ಲಿ ಏನು ಸಂಭವಿಸಿರಬಹುದು? ಸುಲಭವಾಗಿ ಊಹಿಸಬಹುದು. ಬೇಟೆಯಾಡುತ್ತಾಡುತ್ತ ಮೃಗಗಳೆಲ್ಲವೂ ಮಾಯವಾಗುವುವು; ಆಗ ಆ ಪ್ರದೇಶಬಿಟ್ಟು ಬೇರೆ ಪ್ರದೇಶಕ್ಕೆ ಹೊರಡಬೇಕಾಗುವುದು. ಪಶುಪಾಲನೆಯನ್ನು ನಂಬಿದವರೂ ಕೂಡ ಒಂದು ಮೈದಾನದ ಮೇವು ತೀರಿದ ಕೂಡಲೇ ಮತ್ತೊಂದು ಮೈದಾನವನ್ನು ಹುಡುಕಿಕೊಂಡು ಹೊರಡುತ್ತಿರಬೇಕು. ಹೀಗೆ ಬೇಟೆಗಾರರೂ ಪಶುಪಾಲಕರೂ ಸ್ಥಳದಿಂದ



ಪಶುಪಾಲಕರ ಮತ್ತು ಕೃಷಿಜೀವಿಗಳ ನಾಡುಗಳು

ಸ್ಥಳಕ್ಕೆ ಹೊರಡುತ್ತಲೇ ಇರತಕ್ಕವರು; ಅವರಿಗೆ ಒಂದು ಸ್ಥಳವೆಂಬುದಿಲ್ಲ. ಕೃಷಿಜೀವಿಗಳಿಗಾದರೆ ಸ್ಥಿರವಾದ ಸ್ಥಳವುಂಟು, ಅನುಕೂಲ ಜೀವನವುಂಟು. ಆಗ ಮಾಡಬೇಕಾಗಿದ್ದುದೇನು? ಬೆಟ್ಟದ ಜನರೂ, ಬೇಟೆಗಾರಗುಂಪುಗಳವರೂ ಪಶುಪಾಲಕರೂ ವ್ಯವಸಾಯಗಾರರಿದ್ದ ಪ್ರದೇಶವನ್ನು ಆಕ್ರಮಿಸಿಕೊಳ್ಳಲು ಯತ್ನಿಸದಿರುವರೇ? ಹೀಗೆ ಪದೇಪದೇ ನಡೆದುವು ಚರಿತ್ರೆಯಲ್ಲಿ ಆಕ್ರಮಣಗಳೂ, ಮುತ್ತಿಗೆಗಳೂ. ಆರ್ಯಕುಲಗಳು, ಹೂಣರು, ಅಫ್‌ಘಾನರು, ಮಂಗೋಲರು ಮುಂತಾದವರು ಒಬ್ಬರಾದಮೇಲೊಬ್ಬರು ಹಿಂದುಸ್ತಾನದೊಳಕ್ಕೆ ನುಗ್ಗಿದರು. ಯೂರೋಪಿನಲ್ಲಿಯೂ ಅದೇ ರೀತಿ ಸಂಭವಿಸಿತು.

ಮುಖ್ಯಪ್ರಶ್ನೆ ೪ : ಮಾನವ ಸಮುದಾಯದ ಮುಖ್ಯರಾಶಿಗಳಾವುವು?

ಈ ಸಂದರ್ಭದಲ್ಲಿಯೇ ಒಂದಂಶವನ್ನು ನಾವು ನೆನಪಿನಲ್ಲಿಡಬಹುದು. ಬೇರೆ ಬೇರೆ ಮಾನವರ ಗುಂಪುಗಳು ಬೇರೆ ಬೇರೆ ವಾಯುಗುಣಗಳುಳ್ಳ ಪ್ರದೇಶಗಳಲ್ಲಿ ನೆಲೆಯಾಗಿ ಪ್ರತ್ಯೇಕವಾಗಿ ಜೀವಿಸುತ್ತ ಬೇರೆಬೇರೆ ಆಹಾರಪದ್ಧತಿಗಳನ್ನು ಅನುಸರಿಸಿದರು. ಕಾಲಕ್ರಮದಲ್ಲಿ ಒಂದೊಂದು ರಾಶಿಯೂ ವಿಲಕ್ಷಣವಾಯಿತು. ಮಾನವವರ್ಗಗಳು ಅನೇಕವಾದವು. ಆ ವರ್ಗಗಳನ್ನು ವಿಂಗಡಿಸಿಕೊಳ್ಳುವುದರಲ್ಲಿ ಬೇರೆ ಬೇರೆ ಶಾಸ್ತ್ರಜ್ಞರು ಬೇರೆ ಬೇರೆಯಾಗಿ ವಿಭಾಗಗಳನ್ನು ಮಾಡಿರುತ್ತಾರೆ. ಅವುಗಳಲ್ಲಿ ಸಾಮಾನ್ಯವಾಗಿ ಉಪಯೋಗದಲ್ಲಿರುವ ವಿಭಾಗಗಳು ನಾಲ್ಕು. (೧) ಬಿಳಿಯಜನರು ಅಥವಾ **ಕಕೇಷಿಯನ್** (Caucasian) ಗುಂಪು. ಯೂರೋಪ್, ಹಿಂದುಸ್ತಾನ್, ಫಾರ್ಸಿಸ್ತಾನ್, ಅರಬ್ಬಿಸ್ತಾನ್ ಮತ್ತು ಭೂಮಧ್ಯಸಮುದ್ರದ ಪ್ರದೇಶಗಳಲ್ಲಿ ಈ ಗುಂಪಿನ ಇರುವಿಕೆ. ಅವರಲ್ಲಿಯೂ ಎರಡು ವಿಭಾಗಗಳು; ಉತ್ತರದವರಲ್ಲಿ ಬಿಳುಪು ಹೆಚ್ಚು, ದಕ್ಷಿಣದವರಲ್ಲಿ ಕಡಿಮೆ. ಯೆಹುದಿ ಮತ್ತು ಅರಬ್ಬಿಜನರು ದಕ್ಷಿಣದವರು. (೨) ಹಳದಿ ಅಥವಾ **ಮಂಗೋಲಿಯನ್** ಗುಂಪು; ಏಷ್ಯ ಮತ್ತು ಅಮೆರಿಕಗಳಲ್ಲಿ ವಾಸ. (೩) ಕಪ್ಪು ಅಥವಾ **ನೀಗ್ರೊ** ಗುಂಪು; ಆಫ್ರಿಕದಲ್ಲಿ ವಾಸ (೪) ಕಪ್ಪುಜನರ ಗುಂಪಿನವರಾದರೂ ಬೇರೆಯಾದ **ಆಸ್ಟ್ರಲಾಯ್ಡ್** (Australoid) ಗುಂಪು; ಅವರಿಗೆ ಆಸ್ಟ್ರೇಲಿಯ, ನ್ಯೂಸೀಲಂಡ್‌ಗಳಲ್ಲಿ ವಾಸ.

ಮುಖ್ಯ ಪ್ರಶ್ನೆ ೫ : ಕೃಷಿಯಿಂದ ಬದುಕನ್ನು ನಡೆಸಿ ಭದ್ರವಾದ ಬಾಳನ್ನು ಮನುಷ್ಯನು ಮೊದಲು ಕಟ್ಟಿದ್ದೆಲ್ಲಿ? ಸಭ್ಯತೆಯ ತೊಟ್ಟಿಲುಗಳೆಂದರೇನು?

ಬೇಟೆಗಾರಗುಂಪಿಗೆ ಬೇಕಾದುದು ಮೃಗಗಳ ಹಿಂಡು. ಅಂತಹ ಹಿಂಡುಗಳಿರುವುದು ಅರಣ್ಯಗಳಲ್ಲಿ. ಆದ್ದರಿಂದ ಬೇಟೆಗಾರ ಗುಂಪಿನವರು ಅರಣ್ಯಗಳ ಒತ್ತಿನಲ್ಲಿದ್ದವರು. ಪಶುಪಾಲಕರ ಸಮೂಹಗಳಿಗೆ ಹುಲ್ಲುಗಾವಲು ಬೇಕು; ದೊಡ್ಡ ಮರಗಳಾಗಲಿ ಜೌಗಾಗಲಿ ಇರುವ ಪ್ರದೇಶವು ಬೇಡ. ವ್ಯವಸಾಯ ತಿಳಿದ ಕೂಡಲೇ ಜಲಸಮೃದ್ಧಿಯಿಂದ ಫಲವತ್ತಾದ ಪ್ರದೇಶ ಬೇಕು. ಅಂತಹ ಪ್ರದೇಶಗಳಾವುವು? ನದೀತೀರಪ್ರದೇಶಗಳಲ್ಲವೆ! ಈ ಕಾರಣದಿಂದ **ಚೀನ, ಹಿಂದುಸ್ತಾನ, ಮೆಸೊಪೊಟೇಮಿಯ** ಮತ್ತು ಮಿಶ್ರ ಅಥವಾ ಈಜಿಪ್ಟ್ ಎಂಬ ಪ್ರದೇಶಗಳಲ್ಲಿ ಮಾನವರ ಗುಂಪುಗಳ ಸ್ಥಿರನಿವಾಸವೂ ಅಭಿವೃದ್ಧಿಯೂ ಮೊದಲಾದವು. ಆ ಪ್ರದೇಶಗಳಲ್ಲಿಯೇ ಹುಟ್ಟುವುದು ಚರಿತ್ರೆಯೆಂಬುದು. ಆ ಪ್ರದೇಶಗಳನ್ನು ನಕ್ಷೆಯಲ್ಲಿ ನೋಡಿ. ನೈಲ್‌ನದಿ, ಯೂಫ್ರಟೀಸ್ ಟೈಗ್ರಿಸ್ ನದಿಗಳು, ಸಿಂಧು ಗಂಗಾ ನದಿಗಳು, ಹ್ವಾಂಗ್‌ಹೊ ಯಾಂಗ್‌ಚೀಕಿಯಾಂಗ್ ಎಂಬ ಮಹಾನದಿಗಳು ಹರಿಯುವ ದೇಶಗಳು ಅವು. ಈ ದೇಶಗಳಲ್ಲಿ ನೆಲೆಸಿದ ಬಳಿಕ ಕೇವಲ ಮೃಗದಂತೆ ತಿಂದು ನಿದ್ರಿಸುವುದರಿಂದ ತೃಪ್ತನಾಗದೆ ಮನುಷ್ಯನು ತನ್ನ ಬುದ್ಧಿಕೌಶಲವನ್ನು ಬೆಳೆಸಿದನು. ಶಾಂತಿಯಿಂದ ಬದುಕುತ್ತ ತನ್ನ ಮನಸ್ಸಿನಲ್ಲಿ ಯೋಚಿಸುವುದಕ್ಕೂ ತನ್ನ ಕೈಗಳಿಂದ ಬಗೆಬಗೆಯ ಕೆಲಸಮಾಡುವುದಕ್ಕೂ ತೊಡಗಿದನು. ತನ್ನ ಜೀವನದಲ್ಲಿ ಸಂತೋಷವನ್ನೂ ಅನುಕೂಲವನ್ನೂ ಕಾಣಲು ಉಪಾಯಗಳನ್ನೂ ಸಾಧನಗಳನ್ನೂ ರಚಿಸಿಕೊಂಡನು. ವ್ಯವಸಾಯ ಜೀವಿಯಾದ ಕಾರಣ ಅವನಿಗೆ ಸಾಕಾದಷ್ಟು ವಿರಾಮವಿತ್ತು.

ಪ್ರತಿಯೊಬ್ಬರಿಗೂ ಸಾಕಾದಷ್ಟು ವಿರಾಮವಿದ್ದು ಆ ವಿರಾಮಕಾಲವನ್ನು ನೂತನರಚನೆಗಾಗಿ ಉಪಯೋಗಿಸಿದರೆ ಅಭಿವೃದ್ಧಿಗೆ ದಾರಿಯಾಗುವುದು. ಪ್ರಗತಿಗೆ ಅದೇ ಮಾರ್ಗ.

ರಚನೆಯ ಕೆಲಸಗಳಿಗಾಗಿ ವಿರಾಮಪಡೆಯಲು ಮಾನವರ ಗುಂಪುಗಳು ಎಷ್ಟೋ ಕಷ್ಟಪಟ್ಟಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಮಾತ್ರ ನಾವು ಪರಿಶೀಲಿಸೋಣ.

ಸಾಕಾದಷ್ಟು ಆಹಾರಸಾಮಗ್ರಿಯನ್ನೊದಗಿಸಿಕೊಳ್ಳುವುದರಲ್ಲಿಯೇ ಸಾಮಾನ್ಯವಾಗಿ ಎಷ್ಟೋ ತೊಂದರೆ. ಅದನ್ನೇ ಮೊದಲಿನ ತೊಂದರೆಯೆಂದು ಭಾವಿಸಬಹುದು. ಆಹಾರವು ವರ್ಷೇವರ್ಷೇ ದೊರಕಬೇಕು; ಸಾಕಾದಷ್ಟು

ದೊರಕಬೇಕು. ಆಹಾರ ಸಾಮಗ್ರಿಯ ಅನುಕೂಲಕ್ಕಾಗಿಯೇ ಪಶುಪಾಲಕರ ಗುಂಪುಗಳಿಗೂ ಕೃಷಿಗಾರರ ಗುಂಪುಗಳಿಗೂ ಹಿಂದಿನ ಕಾಲದಲ್ಲಿ ಹಣಾಹಣಿಗಳು ನಡೆದುವು. ತಮಗೂ ತಮ್ಮ ಮಂದೆಗಳಿಗೂ ಹೆಚ್ಚು ಹೆಚ್ಚು ಮೇವು ಬೇಕೆಂದು ಸ್ಥಳದಿಂದ ಸ್ಥಳಕ್ಕೆ ಸಾಗಿಹೋಗುತ್ತಿದ್ದವರು ಪಶುಪಾಲಕರ ಗುಂಪಿನವರು. ನದೀ ಬಯಲುಗಳ ಫಲವತ್ತಾದ ಪ್ರದೇಶಗಳಲ್ಲಿ ಸೊಗಸಾದ ಹೊಲಗಳನ್ನೂ ಗದ್ದೆಗಳನ್ನೂ ಮಾಡಿಕೊಂಡು ಸಮೃದ್ಧಿಯಾದ ಆಹಾರದಿಂದ ಸುಖಿಸುತ್ತಿದ್ದ ಜನರನ್ನು ಕಂಡಕೂಡಲೆ ಆ ಪಶುಪಾಲಕರಿಗೆ ಆಸೆಹುಟ್ಟಿದ್ದು ಸಹಜ. ಹೀಗಾಗಿ ಬಾರಿಬಾರಿಗೂ ಕೃಷಿಗಾರಜನರ ನೆಲೆಯನ್ನು ಬೇಟೆಗಾರರ ಗುಂಪಿನವರೂ ಪಶುಪಾಲಕರ ಗುಂಪಿನವರೂ ಆಕ್ರಮಣ ಮಾಡಿದರು. ಚರಿತ್ರೆಯಲ್ಲಿ ಅಂತಹ ಆಕ್ರಮಣಗಳ ವಿವರವು ತುಂಬಿರುವುದು. ಅಟ್ಟಿಲ, ಮಿಹಿರಗುಲ ಮತ್ತು ತೈಮೂರರಂತೆ ಕೆಲವು ಬಾರಿ ಅವರು ದೇಶಗಳನ್ನು ಮುತ್ತಿ ಕೊಳ್ಳೆಹೊಡೆದು ಹಿಂತಿರುಗಿದರು. ಬೇರೆ ಸಂದರ್ಭಗಳಲ್ಲಿ ಮುತ್ತಿ ಬಂದವರು ಹಿಂತಿರುಗಿ ಹೋಗದೆ ಹೊಸನಾಡಿನಲ್ಲಿಯೇ ನಿಂತು ಹಳಬರೊಡನೆ ಕಲೆತರು. ಹಿಂದುಸ್ತಾನದಲ್ಲಿ ಮುತ್ತಿಬಂದು ಕಡೆಗೆ ನೆಲೆಸಿದ ಮೊಗಲರೇ ಅದಕ್ಕೆ ದೃಷ್ಟಾಂತ. ಇಂಗ್ಲೆಂಡ್ ದ್ವೀಪದಲ್ಲಿಯೂ ಹೀಗೆಯೇ ಮುತ್ತಿಬಂದವರು ನೆಲೆಮಾಡಿ ದೇಶದ ಜನರಲ್ಲಿ ಸೇರಿಹೋದರು. ಕಾರಣವೊಂದೇ ಆದರೂ ಪರಿಣಾಮಗಳು ಮಾತ್ರ ಬೇರೆಯಾದವು. ಇದನ್ನು ಜ್ಞಾಪಕದಲ್ಲಿಡಿ. ಮುಂದೆ ಮಾನವರಾಶಿಯ ಇತಿಹಾಸವನ್ನೋದುವಾಗ ಅಂತಹ ನಿದರ್ಶನಗಳು ಪುನಃಪುನಃ ನಿಮಗೆ ಕಾಣುವುವು.

ಅಭ್ಯಾಸಗಳು

೧. ಭೂಗ್ರಹವು ಪ್ರತ್ಯೇಕವಾದಂದಿನಿಂದ ಕಳೆದಕಾಲ ಸುಮಾರು ಇನ್ನೂರು ಕೋಟಿ ವರ್ಷಗಳು. ಆ ಕಾಲವನ್ನು ಸೂಚಿಸಲು ಗಿಲ್ಗಿತ್ತಿನಿಂದ ಕನ್ಯಾಕುಮಾರಿವರೆಗೆ ಸರಲರೇಖೆಯೊಂದನ್ನೆಳೆದಿಟ್ಟುಕೊಂಡು ಮೇಲಿನಿಂದ ಮೊದಲಿಟ್ಟು ಗುರುತಿಸುತ್ತಿದ್ದರೆ ಜೀವರಾಶಿಯ ಪ್ರಾರಂಭವನ್ನು ಎಲ್ಲಿ ಗುರುತಿಸಬೇಕು? ಅಲ್ಲಿರುವ ಸ್ಥಳವಾವುದು?

೨. ಸ್ಥಳಾಂತರಗಾಮಿ ಗುಂಪಿನ ಜೀವನ ಹೇಗಿರುತ್ತದೆ? ಈಗಲೂ ಪೃಥ್ವಿಯಲ್ಲಿ ಅಂತಹ ಜನರೆಲ್ಲೆಲ್ಲಿರುವರು?

೩. ಚೀನ, ಹಿಂದುಸ್ತಾನ್, ಮೆಸೊಪೊಟೇಮಿಯ, ಈಜಿಪ್ಟ್ ದೇಶಗಳ ನದೀಬಯಲುಗಳಲ್ಲಿಯೇ ಮಾನವಸಭ್ಯತೆ ಏಕೆ ಮೊದಲಾಯಿತು? ಕಾಂಗೋ, ಅಮಜ಼ಾನ್, ರ್ಹೈನ್ ಮತ್ತು ಸೈಬೀರಿಯ ನದೀ ಬಯಲುಗಳಲ್ಲಿ ಏಕೆ ಮೊದಲಾಗಲಿಲ್ಲ?

೪. ಸಲಕರಣೆಗಳನ್ನು ಸಾಧಿಸಿದುದೇ ಸಭ್ಯತೆಯ ಸಾಧನೆಯಲ್ಲಿ ದೊಡ್ಡ ಹೆಜ್ಜೆಯಾಯಿತೆನ್ನಲು ಕಾರಣಗಳನ್ನು ತಿಳಿಸಿ.

೫. ಸಭ್ಯತೆಯಲ್ಲಿ ಮುಂದುವರಿಯಲು ವಿರಾಮ ಹೇಗೆ ಅವಶ್ಯಕ? ಜನರಿಗೆ ಸಾಕಾದಷ್ಟು ವಿರಾಮ ದೊರಕದಿರಲು ಕಾರಣಗಳೇನು? ತಿಳಿಸಿ.

೬. ಮಾನವಸಮುದಾಯವನ್ನು ಎಷ್ಟು ರೀತಿಗಳಲ್ಲಿ ವಿಭಾಗಿಸಬಹುದು? ಭಾಷೆಗಳ ಪ್ರಕಾರ ಪಂಗಡಗಳನ್ನು ವಿಂಗಡಿಸಬಲ್ಲಿರಾ?

೨ನೇ ಅಧ್ಯಾಯ

ಸಭ್ಯತೆಯ ತೊಟ್ಟಿಲುಗಳು

ಮುಖ್ಯಪ್ರಶ್ನೆ ೬ : ಹಿಂದುಸ್ತಾನದಲ್ಲಿ ಅತಿಪ್ರಾಚೀನವಾದ ಸಭ್ಯತೆಯ ಚಿಹ್ನೆಗಳೆಲ್ಲಿ ಕಾಣಿಸಿವೆ? ಆ ಸಭ್ಯತೆಯನ್ನು ಕಟ್ಟಿದವರು ಯಾರು? ನಾಶಗೊಳಿಸಿದವರು ಯಾರು?

ಆರ್ಯರ ಗುಂಪಿಗಿಂತಲೂ ಹಳೆಯ ಗುಂಪುಗಳಿಗೆ ಸೇರಿದ ಜನರು ಹಿಂದುಸ್ತಾನದಲ್ಲಿ ಲಕ್ಷಗಟ್ಟಲೆಯಾಗಿ ಈಗಲೂ ಇರುವ ಸಂಗತಿ ನಿಮಗೆ ಪ್ರಾಯಶಃ ಗೊತ್ತಿದೆ. ಅದರಲ್ಲಿ ಅನೇಕರು ಬೆಟ್ಟಗುಡ್ಡಗಳಲ್ಲಿರತಕ್ಕವರು; ಕೆಲವರು ಸ್ಥಳದಿಂದ ಸ್ಥಳಕ್ಕೆ ತಿರುಗುತ್ತಲೇ ಇರತಕ್ಕವರು. ಅವರು ಮೇಕೆ, ದನ, ಕುರಿಗಳನ್ನು ಮುಂದೆ ಬಿಟ್ಟುಕೊಂಡು ಗುಡಾರಗಳನ್ನೂ ಮಡಕೆಗಳನ್ನೂ ಮೂಟೆಗಟ್ಟಿ ಸಣ್ಣತಟ್ಟುಗಳ ಮೇಲೆ ಹೇರಿಕೊಂಡು ಮಕ್ಕಳುಮರಿಗಳೊಡನೆ ಸಾಗುತ್ತಿರುವುದನ್ನು ಪ್ರಾಯಶಃ ನೀವು ಕಂಡಿರುತ್ತೀರಿ.

ದೇಶದ ಮಧ್ಯದಲ್ಲಿರುವ ಸಂತಾಲರೂ ಗೊಂಡರೂ ಈ ಆರ್ಯಪೂರ್ವ ರಾಶಿಗೆ ಸೇರಿದವರು. ಹದಿನೈದು-ಇಪ್ಪತ್ತು ಸಾವಿರ ವರ್ಷಗಳ ಹಿಂದೆ ನೂತನ ಶಿಲಾಯುಗ ನಡೆಯುತ್ತಿದ್ದಾಗ ಆ ರಾಶಿಯವರು ತೆಂಕಲಿಂದ ದೇಶದೊಳಕ್ಕೆ ಬಂದರು. ಅವರ ಸಭ್ಯತೆ ಉನ್ನತಿಗೇರಲೇ ಇಲ್ಲ. ಈಗಲೂ ಆ ರಾಶಿಯವರು ಬೇಟೆಗಾರರಾಗಿಯೋ ಕುರುಬರಾಗಿಯೋ ಇದ್ದಾರೆ.

ಆದರೆ ಆರ್ಯರಿಗೆ ಹಿಂದೆ ಉನ್ನತಿಯನ್ನು ಪಡೆದ ಇತರರಿದ್ದರು. ವಿಂಧ್ಯ ಪರ್ವತದ ತೆಂಕಲಿನಲ್ಲಿ ಈಗಲೂ ಹೆಚ್ಚಾಗಿರುವ ದ್ರಾವಿಡರ ಗುಂಪಿನವರು ಉನ್ನತಿಯನ್ನು ಸಾಧಿಸಿದ್ದರು. ಅವರನ್ನು ತೆಂಕಲಿಗೆ ಅಟ್ಟಿದ ಆರ್ಯರ ವಿವರವನ್ನು ತಿಳಿಯುವ ಮುನ್ನ ನಾವು ದ್ರಾವಿಡರ ವಿಷಯವಾಗಿ ಸ್ವಲ್ಪ ಮಾತ್ರ ತಿಳಿದುಕೊಳ್ಳಬೇಕು.

ನಮಗೆ ತಿಳಿದಮಟ್ಟಿಗೆ **ದ್ರಾವಿಡರು** ಹಿಂದುಸ್ತಾನವನ್ನು ಹೊಕ್ಕಿದ್ದು ವಾಯುವ್ಯದಿಂದ. ಆರ್ಯರಂತೆ ಖೈಬರ್ ಮುಂತಾದ ಹಿಮವಂತನ ಕಣಿವೆಗಳ ದಾರಿಯಿಂದಲ್ಲ; ಫಾರ್ಸಿಸ್ತಾನದ ದಕ್ಷಿಣಭಾಗದಿಂದ ಸಿಂಧುಪ್ರಾಂತಕ್ಕೆ ದ್ರಾವಿಡರು ಬಂದದ್ದು. ಅವರು ಆ ರೀತಿ ಬಂದುದು ಪ್ರಾಯಶಃ ಆರು ಸಾವಿರ ವರ್ಷಗಳಿಗೂ ಹಿಂದೆ. ಆಗ ಫಾರ್ಸಿಸ್ತಾನದಲ್ಲಿಯೂ ನಮ್ಮ ದೇಶದ

ವಾಯುವ್ಯದಲ್ಲಿಯೂ ವಾಯುಗುಣವು ಈಗಿನಂತಿರಲಿಲ್ಲ; ಬೇಕಾದಷ್ಟು ತೇವವಿತ್ತು. ಈಗ ಮರುಭೂಮಿಗಳಲ್ಲಿ ಲೆಕ್ಕವಾದ **ಸಿಂಧುಪ್ರಾಂತವು** ಆಗ ಫಲವತ್ತಾಗಿತ್ತು. ಹೊಸದಾಗಿ ಬಂದವರಿಗೆ ನೆಲೆಸಲು ಸೊಗಸಾಗಿತ್ತು. ಹೊಸದಾಗಿ ನೆಲೆಗೊಂಡ ಆ ಜನರೂ ಮೆಸೊಪೊಟೇಮಿಯ ಪ್ರದೇಶದಲ್ಲಿ ಮೊದಲು ನೆಲೆಸಿದ್ದ **ಸುಮೇರಿಯನ್ನ** (Sumerians) ರೆಂಬ ಜನರೂ ಪ್ರಾಯಶಃ ಒಂದೇ ಗುಂಪಿನವರು. ಸುಮೇರಿಯನ್ನರು ಕಟ್ಟಿದ **ಊರ್** (Ur) ಎಂಬ ಪಟ್ಟಣ ಭೂಮಿಯಲ್ಲಿ ಹೂತುಹೋಗಿದೆಯಷ್ಟೆ. ಅಲ್ಲಿ ಅಗೆದು ಹೊರಗೆ ತೆಗೆದ ವಸ್ತುಗಳ ರೀತಿಯನ್ನು ಹೋಲುವ ಆಭರಣಗಳು, ಪಾತ್ರೆಗಳು ಮುಂತಾದವು ಸಿಂಧು ನದಿಯ ಒತ್ತಿನಲ್ಲಿ ದೊರೆತಿವೆ. ಸಿಂಧುಪ್ರಾಂತದಲ್ಲಿ ಆರ್ಯರ ಕಾಲಕ್ಕೆ ಹಿಂದೆಯೆ ಉನ್ನತಿಗೇರಿದ್ದ ಸಭ್ಯತೆ ನೆಲೆಸಿತ್ತು. ಆ ಸಭ್ಯತೆಯೇ ತಿಳಿದ ಮಟ್ಟಿಗೆ ಹಿಂದುಸ್ತಾನದಲ್ಲಿ ಪ್ರಾಚೀನತಮವಾದುದು. ಪುಸ್ತಕಗಳಲ್ಲಿ ಅದನ್ನು **ಸೈಂಧವೀ ಸಭ್ಯತೆ**ಯೆಂದು ಸೂಚಿಸುವುದುಂಟು. (೧೭ನೆ ಪುಟದ ನಕ್ಷೆ ನೋಡಿ)



ಮೊಹೆಂಜೊದರೋ—ತಟಾಕ

ಸಿಂಧುಪ್ರಾಂತದ ಉತ್ತರಭಾಗದಲ್ಲಿ ನದಿಯ ಬಲಪಕ್ಕಕ್ಕೆ **ಮೊಹೆಂಜೊದರೋ** ಎಂಬ ಸ್ಥಳವಿದೆ. ಸಮುದ್ರತೀರದಿಂದ ಅಲ್ಲಿಗೆ ಸುಮಾರು ೨೦೦ ಮೈಲಿ ದೂರ. ಅಲ್ಲಿ ಕ್ರಿ.ಪೂ. ೩೫೦೦ ರಷ್ಟು ಪುರಾತನವಾದ ಪಟ್ಟಣದ ಗುರುತುಗಳಿವೆ.

ಅಷ್ಟು ಹಳೆಯದಾದರೂ ಆ ಪಟ್ಟಣದಲ್ಲಿ ಆಶ್ಚರ್ಯಕರವಾದ ಏರ್ಪಾಡುಗಳು ಕಾಣಿಸಿವೆ. ಈಗಿನ ಕಾಲದ ಎಷ್ಟೋ ಪಟ್ಟಣಗಳ ಜನರಿಗೆ ಶುಚಿಯಾಗಿರುವ ಅಭ್ಯಾಸವೇ ಇರುವುದಿಲ್ಲ; ಆದರೆ ಆ ಪಟ್ಟಣದ ಜನರು ತಮ್ಮ ಮನೆಗಳನ್ನೂ ಬೀದಿಗಳನ್ನೂ ಚೊಕ್ಕಟವಾಗಿಟ್ಟುಕೊಳ್ಳುವುದರಲ್ಲಿ ಅತಿಜಾಗರೂಕರಾಗಿದ್ದರು. ಭದ್ರವಾಗಿ ಕಟ್ಟಿದ ಚರಂಡಿಗಳೂ ತಟಾಕಗಳೂ ಇರುವುದಲ್ಲದೆ ಸೊಗಸಾದ ಬಾವಿಗಳೂ ಉಂಟು. ಕಲ್ಲುಕಟ್ಟಡದಿಂದ ಸುಂದರವಾದ ನೆಲವುಂಟು. ಮೊಹೆಂಜೊದರೋಗಿಂತಲೂ ದೊಡ್ಡದಾದ ಪಟ್ಟಣ ಇನ್ನೂ ಉತ್ತರಕ್ಕೆ ರಾವಿನದಿಯ ಪಕ್ಕದಲ್ಲಿ ಕಂಡಿದೆ. ಇಂತಹ ನಗರಗಳೆಷ್ಟೋ ನಮ್ಮ ದೇಶದ ವಾಯುವ್ಯಭಾಗದಲ್ಲಿ ಆ ಕಾಲದಲ್ಲಿದ್ದವು. ಸಿಂಧುನದಿಯ ಮುಖದಿಂದ ಹಿಡಿದು ಪಂಜಾಬ್‌ಪ್ರಾಂತದ ಮಧ್ಯಭಾಗ ಮತ್ತು ಹಿಮವತ್ಪರ್ವತದ ಸಾನುಗಳ ವರೆಗೂ ಅನೇಕ ನಗರಗಳಿದ್ದವು. ಯಮುನಾ ಗಂಗಾ ನದಿಗಳ ಬಯಲುಗಳಲ್ಲಿಯೂ ಇಂಥವು ಅನೇಕವಿದ್ದಿರಬಹುದು.

ಮುಖ್ಯಪ್ರಶ್ನೆ ೭ : ಆರ್ಯರು ಬಂದುದೆಲ್ಲಿಂದ ? ಎಂತಹಜನ ಅವರು ?


ಹಿಂದುಸ್ತಾನದಲ್ಲಿ ಮೊದಲು ನುಗ್ಗಿದಾಗ ಆರ್ಯರು ಅನಾಗರಿಕರಾಗಿರಲಿಲ್ಲ. ಆದರೆ ವ್ಯವಸಾಯಕ್ಕಿಂತ ಪಶುಪಾಲನೆಯಲ್ಲಿಯೇ ಹೆಚ್ಚಾಗಿ ತೊಡಗಿದ್ದವರು. ಅವರ ಮೂಲವಾಸಸ್ಥಾನವು ಯಾವುದೆಂದು ನಿಷ್ಕರ್ಷೆಯಾಗಿಲ್ಲ. ಕ್ಯಾಸ್ಪಿಯನ್ ಸಮುದ್ರದ ಪಕ್ಕದಲ್ಲಿ ಏಷ್ಯದ ಪಶ್ಚಿಮ ಮತ್ತು ಯೂರೋಪಿನ ಆಗ್ನೇಯಭಾಗಗಳಿಂದ ಹೊರಟುಬಂದರೆಂಬುದು ಕೆಲವು ವಿದ್ವಾಂಸರ ಮತ. ಆ ಭಾಗಗಳು ಆ ಕಾಲದಲ್ಲಿ ಬೆಂಗಾಡಿನಂತಿರಲಿಲ್ಲ; ದಟ್ಟವಾದ ವನಗಳಿಂದ ತುಂಬಿದ್ದವು. ಆ ಅರಣ್ಯಗಳ ತೆಂಕಲ ಪ್ರದೇಶದಲ್ಲಿ ತಮ್ಮ ದನಕರುಗಳ ಮೇವಿಗಾಗಿ ಆರ್ಯರು ಸ್ಥಳದಿಂದ ಸ್ಥಳಕ್ಕೆ ಚಲಿಸುತ್ತಲಿದ್ದರು. ಕ್ಯಾಸ್ಪಿಯನ್ ಸಮುದ್ರದ ಮೂಡಲಿಗೆ ಇರುವುದು ಮಂಗೋಲರ ನಾಡು. ಮಂಗೋಲರೂ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಿದ್ದವರಾದರೂ ಕುದುರೆಕುರಿಗಳನ್ನು ಸಾಕಿದ್ದರು. ಏಕೆಂದರೆ ಮೂಡಲಲ್ಲಿ ಅರಣ್ಯಗಳಿರಲಿಲ್ಲ. ಅರಣ್ಯಗಳ ಸಮೀಪದಲ್ಲಿದ್ದ ಆರ್ಯರು ಹಸುಗಳಿಂದ ಹಾಲನ್ನು ಕರೆದುಕೊಳ್ಳುವುದಲ್ಲದೆ ಎತ್ತುಗಳಿಂದ ನೆಲವನ್ನು ಉಳುತ್ತ ರಥಗಳನ್ನೆಳೆಸುತ್ತ ಇದ್ದರು. ಧನವೆಂದರೆ ಅವರಿಗೆ ಗೋಧನವೇ. ಎಷ್ಟು ಗೋವೆಂದು ಬೆಲೆಕಟ್ಟುತ್ತಿದ್ದರು. ಅವರ ಬಾಳಿನಲ್ಲಿ ಗೋವು ಬಲುಮುಖ್ಯವಾಗಿತ್ತು; ಆದರಿಂದಲೇ ಅವರು ಗೋವನ್ನು ಪವಿತ್ರವೆಂದು ಕಾಣುವವರಾದರು.

ವ್ಯವಸಾಯವನ್ನು ತಿಳಿದು ಧಾನ್ಯವನ್ನು ಬೆಳೆಸಬಲ್ಲವರಾದರೂ ಆರ್ಯರು ಸ್ಥಳದಿಂದ ಸ್ಥಳಕ್ಕೆ ಸಂಚರಿಸತಕ್ಕವರಾಗಿದ್ದರು. ಸುಗ್ಗಿ ಕಾಲವು ಮುಗಿದ ಕೂಡಲೇ ಬೇರೊಂದು ಪ್ರದೇಶಕ್ಕೆ ಹೊರಟು ಅಲ್ಲಿ ನೆಲೆಸುತ್ತಿದ್ದರು. ಆರ್ಯ ರಲ್ಲಿ ಅನೇಕ ಕುಲಗಳಿದ್ದವು. ಕುಲಕಲಹಗಳು ನಡೆಯುತಲೇ ಇದ್ದವು. ಆಗ ಪ್ರತಿ ಕುಲಕ್ಕೂ ನಾಯಕನೊಬ್ಬನಿದ್ದು ಹೋರಾಟದಲ್ಲಿ ಮುಂದಾಳಾಗುತ್ತಿದ್ದನು. ಕೆಲವೇಳೆ ಆ ನಾಯಕನೇ ಯಜ್ಞಗಳನ್ನೂ ನಡೆಸುತ್ತಿದ್ದನು. ತಮ್ಮಲ್ಲಿ ಹೆಸರಾದ ಶೂರರ ವೃತ್ತಾಂತಗಳನ್ನು ಪದ್ಯರೂಪದಲ್ಲಿ ಹಾಡಿಕೊಳ್ಳಲು ಆರ್ಯರಿಗೆ ಬಲು ಇಷ್ಟ. ಅಂತಹ ಗೀತೆಗಳನ್ನು ಕಟ್ಟಿದ ಕವಿಗಳನ್ನು ಕಂಡರೆ ಅವರಿಗೆ ಬಹಳ ಗೌರವ. ಪರ್ವಕಾಲಗಳಲ್ಲಿ ಆರ್ಯರು ಸಮುದಾಯವಾಗಿ ಸೇರಿ ಇಂದ್ರ, ವರುಣ, ಮರುತ್, ಸೂರ್ಯ ಮುಂತಾದ ದೇವರುಗಳನ್ನು ಸ್ತುತಿಸಿ ಹೋಮಮಾಡುತ್ತಿದ್ದರು. ಆ ಸಂದರ್ಭಗಳಲ್ಲಿ ಹೇಳಿದ ಋಕ್ಕುಗಳ ಸಂಗ್ರಹವನ್ನೇ 'ಋಕ್ಸಂಹಿತೆ' ಅಥವಾ 'ಋಗ್ವೇದ'ವೆಂದು ಕರೆಯುತ್ತೇವೆ.

ಕ್ರಿ.ಪೂ. ೨೫೦೦-೧೫೦೦ ವರೆಗಿನ ಕಾಲದಲ್ಲಿ ಆರ್ಯಸಮೂಹಗಳು ತೆಂಕಲಿಗೆ ಹೊರಟು ಮೆಸೊಪೊಟೇಮಿಯ ಮತ್ತು ಇರಾನ್ ಪ್ರದೇಶಗಳನ್ನು ಆಕ್ರಮಿಸಿದವು.[1] ಸುಮಾರು ಅದೇ ಕಾಲದಲ್ಲಿಯೇ ಆರ್ಯಸಮೂಹದವರು ಕಾಬೂಲ್ ನದಿ (ಕುಭಾ)ಯನ್ನನುಸರಿಸಿ ಹಿಂದುಸ್ತಾನವನ್ನು ಹೊಕ್ಕರು. ಈಗಿನ ಪಂಜಾಬ್ ಪ್ರಾಂತವನ್ನು ಪ್ರವೇಶಿಸಿ ಆ ಪ್ರದೇಶದಲ್ಲಿ ಹರಿಯುತ್ತಿದ್ದ ಏಳು ದೊಡ್ಡ ನದಿಗಳನ್ನು ಉತ್ಸಾಹದಿಂದ ಕಂಡು ಆ ಪ್ರದೇಶವನ್ನು '**ಸಪ್ತ ಸಿಂಧವಃ**' ಎಂದು ಕರೆದರು; ಅಲ್ಲಿಯ ಬೇರೆಬೇರೆ ಭಾಗಗಳಲ್ಲಿ ನೆಲೆಯಾದರು. ಹಿಂದಿನಿಂದಲೂ ಅಲ್ಲಿದ್ದ ಜನರನ್ನು 'ದಸ್ಯು'ಗಳೆಂದು ತಿರಸ್ಕರಿಸಿ ಅವರನ್ನು ಸೋಲಿಸಿದರು. ಪ್ರಾಯಶಃ ದ್ರಾವಿಡರ ಗುಂಪಿಗೆ ಸೇರಿದ ಆ ದಸ್ಯುಗಳು ಸೋತ ತರುವಾಯ ಮೂಡಲಿಗೂ ತೆಂಕಲಿಗೂ ಹೊರಟುಬಿಟ್ಟರು. ಕಾಲಕ್ರಮದಲ್ಲಿ ಆರ್ಯರು ಮುಂದು ಮುಂದಕ್ಕೆ ಸುಗ್ಗಿ ಯಮುನಾ ಗಂಗಾ ನದಿಗಳ ಬಯಲುಗಳನ್ನು ವಶಪಡಿಸಿಕೊಂಡಾಗ ದ್ರಾವಿಡರು ಇನ್ನೂ ದಕ್ಷಿಣಕ್ಕೆ ಹೊರಡಬೇಕಾಗಿ ಬಂತು. ಮಹಾರಣ್ಯಗಳಿಂದ ತುಂಬಿದ ವಿಂಧ್ಯಪರ್ವತ ಪ್ರಾಂತ ಆರ್ಯರಿಗೆ ಅಡ್ಡಿಯಾಯಿತು. ಬಹುಕಾಲ ಆ ಪ್ರಾಂತವನ್ನು ಅವರು ದಾಟಲಿಲ್ಲ. ಈ ಕಾರಣದಿಂದಲೇ ವಿಂಧ್ಯಪರ್ವತಕ್ಕೆ ತೆಂಕಲಲ್ಲಿ ದ್ರಾವಿಡರ ಗುಂಪಿನವರು ಹೆಚ್ಚಾಗಿರುತ್ತಾರೆ. ಆ ಪರ್ವತದ ಉತ್ತರದಲ್ಲಾದರೆ ಬೆಟ್ಟ

---

[1] ಇರಾನಿನಲ್ಲಿ ನೆಲೆಸಿದ ಆರ್ಯರ ಸಂತತಿಯವರು ಎಷ್ಟೋ ಕಾಲ ಕಳೆದ ಬಳಿಕ ಹಿಂದುಸ್ತಾನಕ್ಕೆ ಬಂದರು. ಈಗಿನ ಪಾರ್ಸಿ ಜನರು ಆ ಸಂತತಿಯವರು.



ಆರ್ಯರು ದ್ರಾವಿಡರೊಂದಿಗೆ ಹೊಡೆದಾಡುತ್ತಿರುವುದು

ಗುಡ್ಡಗಳ ಪ್ರದೇಶಗಳಲ್ಲಿ ಅಥವಾ ಕಾಡುಗಳ ಒತ್ತಿನಲ್ಲಿ ದ್ರಾವಿಡರಿಗೂ ಹಿಂದಿನವರಾಗಿದ್ದ ಗುಂಪುಗಳವರು ಅಲ್ಪಸಂಖ್ಯೆಯವರಾಗಿ ಇನ್ನೂ ಉಳಿದುಕೊಂಡಿರುತ್ತಾರೆ.

ಮುಖ್ಯಪ್ರಶ್ನೆ ೮ : ಜಾತಿಪದ್ಧತಿಗಳು ಮೊದಲಾದುದು ಹೇಗೆ?

ತಮ್ಮೆದುರಿಗೆ ಸೋತುಹೋದ ದಸ್ಯುಗಳಲ್ಲಿ ಆರ್ಯರಿಗೆ ತಿರಸ್ಕಾರವಿದ್ದಾಗ್ಯೂ ಮೊದಮೊದಲು ಅವರೊಂದಿಗೆ ವಿವಾಹಗಳನ್ನು ಮಾಡಿಕೊಂಡರು. ಯೂರೋಪ್ ಮುಂತಾದ ಇತರ ಪ್ರದೇಶಗಳಲ್ಲಿಯೂ ಹೀಗೆಯೇ ಜಯಶಾಲಿಗಳಾದವರು ಪರಾಜಿತರೊಡನೆ ಮದುವೆಗಳನ್ನು ನಡೆಸಿದರು. ಈ ಕಾರಣದಿಂದಲೇ ಈಗ ಯಾರನ್ನೂ ಶುದ್ಧವಾದ ಆರ್ಯಸಂತತಿಯವರೆಂದು ಹೇಳಲಾಗುವುದಿಲ್ಲ. ಪಂಜಾಬ್, ಕಾಶ್ಮೀರ, ವಾಯವ್ಯಸರಹದ್ದಿನ ಪ್ರಾಂತಗಳಲ್ಲಿರುವ ಜನರು ಇನ್ನೂ ಮೂಡಲಿಗೂ ತೆಂಕಲಿಗೂ ಇರುವ ಜನರಿಗಿಂತ ಶುದ್ಧರಾದವರೆಂದು ಮಾತ್ರ ನಿಸ್ಸಂಶಯವಾಗಿ ಹೇಳಬಹುದು.

ಹಿಂದುಸ್ಥಾನವನ್ನು ಪ್ರವೇಶಿಸಿದ ಕಾಲದಲ್ಲಿ ಆರ್ಯರು ಜಾತಿವಿಭಾಗ ಗಳನ್ನರಿಯರು. ಕಾಲ ಕಳೆಯುತ್ತ ಕಳೆಯುತ್ತ ಅವರು ಸ್ಥಿರಜೀವನವನ್ನು ಪಡೆದರು; ವೃತ್ತಿಗಳು ಬೇರ್ಪಟ್ಟವು. ವೃತ್ತಿಗಳಿಗನುಸಾರವಾಗಿ ಆರ್ಯರಲ್ಲಿ ಬೇರೆ ಬೇರೆ ಗುಂಪುಗಳಾದವು. ಯುದ್ಧಗಳು ನಡೆಯುತ್ತಲೇ ಇದ್ದುದರಿಂದ ಆ ಸಮರವೃತ್ತಿಯವರು ಹೋರಾಟಕ್ಕೆ ಹೊರಡುತ್ತಿದ್ದಾಗ ಹೊಲಗಳನ್ನೂ ದನಕರುಗಳನ್ನೂ ನೋಡಿಕೊಳ್ಳಲು ಇತರರು ಹಿಂದೆ ನಿಲ್ಲಬೇಕಾಗಿತ್ತು. ಹಿಂದೆ ನಿಂತ ಸಾಮಾನ್ಯಜನರಿಗೆ 'ವಿಶಃ' ಎಂಬ ಹೆಸರು ರೂಢಿಯಲ್ಲಿತ್ತು. ವ್ಯಾಪಾರ ಸಂಬಂಧವಾದ ಜೀವಿಕವನ್ನು ಹಿಡಿದ ವೈಶ್ಯರು ಅವರೇ. ಮೊದಮೊದಲು ಪುರೋಹಿತರೆಂದಾಗಲಿ ಬ್ರಾಹ್ಮಣರೆಂದಾಗಲಿ ಪ್ರತ್ಯೇಕವಾದ ಪಂಗಡವಿರಲಿಲ್ಲ. ಆರ್ಯನಾದ ಯಾರಾದರೂ ಸರಿಯೆ ಪುರೋಹಿತನಾಗಿ ಮಂತ್ರಗಳನ್ನುಚ್ಚರಿಸಿ ಹೋಮಾದಿಗಳನ್ನು ನಡೆಸಬಹುದಾಗಿತ್ತು. ಅನಾರ್ಯರಲ್ಲಿ ಪ್ರಾಜ್ಞರೂ ಜ್ಞಾನಿಗಳೂ ಆಗಿದ್ದವರನ್ನೂ ಪುರೋಹಿತರನ್ನಾಗಿ ಕಾಣುತ್ತಿದ್ದರು.[1] ಏಕೆಂದರೆ ವೇದಗಳಲ್ಲಿ ಗೌರವರ್ಣವನ್ನೂ ಸುವರ್ಣಕೇಶರಾಶಿಯನ್ನೂ ಪಡೆದ ಋಷಿ ಗಳಲ್ಲದೆ ಕೃಷ್ಣವರ್ಣವನ್ನೂ ಪಿಂಗಲಕೇಶರಾಶಿಯನ್ನೂ ಪಡೆದ ಋಷಿಗಳೂ ಕಾಣುತ್ತಾರೆ. ಪಡುವಲ ಭಾಗದಲ್ಲಿ ನೆಲೆಸಿದ್ದ ಯಾದವ ಕುಲದವರು ಈ ರೀತಿ ಆರ್ಯಪದವಿ ಪಡೆದ ಅನಾರ್ಯಕುಲದ ಮುಖ್ಯರಾಗಿದ್ದಿರಬಹುದು. ಶ್ರೀ ಕೃಷ್ಣನು ಆ ಯಾದವಕುಲದವನು.

ನೋತಬಳಿಕ ಆರ್ಯರ ಕ್ಷೇತ್ರಗಳಲ್ಲುಳಿದ ದ್ರಾವಿಡಸಮೂಹ ಕಾಲ ಕ್ರಮದಲ್ಲಿ ನಾಲ್ಕನೆಯ ವರ್ಗವಾಗಿ 'ಶೂದ್ರ'ರೆಂಬ ಹೆಸರನ್ನು ಪಡೆಯಿತು. ಆ ವರ್ಗದವರು ನಮ್ರತೆಯಿಂದ ಕೂಡಿ ದಾಸ್ಯವೃತ್ತಿಗಳಲ್ಲಿ ತೊಡಗಿದ್ದರು. ಆ ವೇಳೆಗೆ ಆರ್ಯಸಮುದಾಯದ ಮೂರು ಗುಂಪುಗಳಲ್ಲಿಯೂ ಅನಾರ್ಯ ರೊಂದಿಗೆ ಮದುವೆಯಾಗಬಾರದೆಂಬ ಪದ್ಧತಿ ಬೆಳೆದಿತ್ತು. ಇನ್ನೂ ಕಾಲ ಕಳೆದ ಮೇಲೆ ನಾಲ್ಕು ಗುಂಪುಗಳವರಲ್ಲಿ ಪರಸ್ಪರವಿವಾಹಗಳು ನಿಷಿದ್ಧವಾಗಿರ ತಕ್ಕುದೆಂದು ಪೌರೋಹಿತ್ಯವನ್ನವಲಂಬಿಸಿದ್ದವರು ವಿಧಿಸಿದರು. ಕಡೆಗೆ ಒಂದು ಜಾತಿಯವನು ಬೇರೊಂದು ಜಾತಿಯ ವೃತ್ತಿಯನ್ನವಲಂಬಿಸಲಾಗದಂತಾ ಯಿತು; ಜಾತಿಯನ್ನು ಬದಲಾಯಿಸುವುದು ಅಸಾಧ್ಯವಾಯಿತು. ಜಾತಿ ಪದ್ಧತಿಗಳು ಹುಟ್ಟಿ ರೂಢಿಯಾದುದು ಈ ರೀತಿ.

ಆರ್ಯಸಮೂಹದಲ್ಲಿ ಮೊದಲು ಒಗ್ಗಟ್ಟೆಂಬುದಿರಲಿಲ್ಲ. ಒಟ್ಟುಗೂಡಿದ ಸೈನ್ಯದಂತೆ ಅವರು ದೇಶವನ್ನು ಮುತ್ತಲಿಲ್ಲ. ಹಲಕೆಲವು ಕುಲಗಳೊಟ್ಟು

---

[1] ಈ ವಾಕ್ಯಗಳನ್ನು ಎಲ್ಲ ವಿದ್ವಾಂಸರೂ ಒಪ್ಪುವುದಿಲ್ಲ.

ಗೂಡಿ ಸಂಚರಿಸಿ ದೇಶವನ್ನು ಹೊಕ್ಕವು. ಪ್ರತಿಕುಲದವರೂ ತಮ್ಮ ನಾಯಕನನ್ನು ಮುಂದಿಟ್ಟುಕೊಂಡೇ ಕಾದಾಡಿದರು. ದೇಶದಲ್ಲಿ ನೆಲೆಗೊಂಡ ತರುವಾಯ ಆರ್ಯಕುಲಗಳವರು ಹಿಂದಿನ ನಿವಾಸಿಗಳೊಂದಿಗೆ ಮಾತ್ರವಲ್ಲದೆ ತಮ್ಮಲ್ಲಿಯೇ ಕುಲಕಲಹಗಳನ್ನೂ ಬೆಳೆಸಿ ಪರಾಕ್ರಮದಿಂದ ಹೋರಾಡಿದರು. ಭರತಕುಲಕ್ಕೆ ನಾಯಕನಾಗಿದ್ದ ಸುದಾಸನಲ್ಲಿದ್ದ ವಸಿಷ್ಠ ವಿಶ್ವಾಮಿತ್ರ ಋಷಿಗಳು ಮನಸ್ತಾಪಗೊಂಡಾಗ ತೋರಿದ ಕಾಳಗವು ಹೆಸರಾದುದು. ಋಗ್ವೇದದಲ್ಲಿ ಆ ಕಾಳಗದ ವರ್ಣನೆಯಿದೆ. ತಾನು ಕೊಟ್ಟ ಉಪದೇಶವನ್ನು ನಿರಾಕರಿಸಿ ಸುದಾಸನು ವಸಿಷ್ಠಋಷಿಯ ಹಿತೋಕ್ತಿಯನ್ನು ಸ್ವೀಕರಿಸಿದಾಗ ವಿಶ್ವಾಮಿತ್ರ ಋಷಿಯು ಸುದಾಸನ ಪಕ್ಷವನ್ನು ಬಿಟ್ಟು ಆತನ ಶತ್ರುಗಳನ್ನು ಸೇರಿ ಹತ್ತು ಕುಲಸ್ಥರನ್ನು ಒಟ್ಟುಗೂಡಿಸಿ ಎತ್ತಿಕಟ್ಟಿದನು. ಆದರೆ ವಸಿಷ್ಠಋಷಿಯ ಸಹಾಯದಿಂದ ಸುದಾಸರಾಜನು ಇರಾವತೀ ನದಿಯ (ರಾವಿ) ತಟದಲ್ಲಿ ಶತ್ರುಸಮೂಹವನ್ನು ಸದೆಬಡಿದನು.

ಭರತಕುಲಸ್ಥರು ಮತ್ತೊಂದು ಯುದ್ಧದಲ್ಲಿ ಕೀರ್ತಿಶಾಲಿಗಳಾದರು. ಅದೇ ಕುರುಕ್ಷೇತ್ರದಲ್ಲಿ ನಡೆದ ಹದಿನೆಂಟು ದಿನಗಳ ಯುದ್ಧ; ಮಹಾಭಾರತದಲ್ಲಿ ವರ್ಣಿತವಾಗಿರುವುದು. ಅದರಲ್ಲಿ ಅತಿಪ್ರಸಿದ್ಧವಾದುದು ಭಗವದ್ಗೀತೋಪದೇಶದ ಸಂದರ್ಭ. ಯಾದವಕುಲಮುಖ್ಯರಲ್ಲೊಬ್ಬನಾದ ಶ್ರೀ ಕೃಷ್ಣನು ಪಾಂಡವನಾದ ಅರ್ಜುನನಿಗೆ ಮಾಡಿದ ಉಪದೇಶ ಅದು. ಸ್ವಜನರ ಸಂಹಾರವಾದಾಗ್ಯೂ ಯುದ್ಧದಲ್ಲಿ ತನ್ನ ಕರ್ತವ್ಯವನ್ನು ಹಿಂಜರಿಯದೆ ನಡೆಸಬೇಕೆಂಬುದು ಅದರ ಸಾರಾಂಶ.

ಹಿಂದುಸ್ತಾನ್ ಫಾರ್ಸಿಸ್ತಾನ್ ಮೆಸೊಪೊಟೇಮಿಯ ಪ್ರದೇಶಗಳಲ್ಲಿ ಹೇಗೋ ಹಾಗೆಯೇ ಆರ್ಯರ ಶಾಖೆಗಳು ಗ್ರೀಸ್, ಇಟಲಿ, ಜರ್ಮನಿ, ಸ್ಕಾಂಡಿನೇವಿಯ, ಬ್ರಿಟನ್ ದೇಶಗಳಲ್ಲಿಯೂ ಅಲ್ಲಿಂದ ಇತರಪ್ರದೇಶಗಳಲ್ಲಿಯೂ ಪ್ರವೇಶಿಸಿ ಎಲ್ಲೆಲ್ಲಿಯೂ ತಮ್ಮ ಸ್ಮರಣೆಯುಳಿಯುವಂತೆ ಬಾಳಿದರು. ಅವರ ಸಾಧನೆಗಳಲ್ಲಿ ಯುದ್ಧಸಂಬಂಧವಾದುವು ಮುಖ್ಯವಲ್ಲ. ಯುದ್ಧದಲ್ಲಿ ಜಯದಿಂದ ಕೀರ್ತಿಬಂದಂತೆ ಕಂಡಾಗ್ಯೂ ಅದು ಸ್ಥಿರವಲ್ಲ. ವಿನಾಶಗೊಳಿಸಿ ಜಯಪಡೆಯುವುದರಲ್ಲಿ ಟಾರ್ಟರ, ಹೂಣ ಮುಂತಾದ ಮಂಗೋಲ ತಂಡಗಳು ಅತ್ಯಲ್ಪಕಾಲದಲ್ಲಿಯೇ ಇನ್ನೂ ಭಯಂಕರವಾಗಿ ವರ್ತಿಸಿ ಆರ್ಯರು ಉಂಟುಮಾಡಿದ ನಾಶಕ್ಕಿಂತ ಹೆಚ್ಚಾಗಿ ನಷ್ಟವನ್ನುಂಟುಮಾಡಿದುವು. ನಾಶನಗೊಳಿಸುವುದಕ್ಕಿಂತ ನಿರ್ಮಾಣಗೊಳಿಸುವುದು ಹಿರಿದು. ಆರ್ಯರನ್ನು ನಾವು ಸ್ಮರಿಸಬೇಕಾದುದು ಅವರ ನಿರ್ಮಾಣಸಾಮರ್ಥ್ಯಕ್ಕಾಗಿ. ಹಿಂದುಸ್ತಾನದಲ್ಲಿ



ಸಭ್ಯತೆಯ ತೊಟ್ಟಿಲುಗಳು

ಪ್ರಚುರವಾದ ಅಮೋಘತತ್ತ್ವಪೂರಿತಮಹಾಕಾವ್ಯಗಳೂ ಗ್ರೀಸ್ ದೇಶದಲ್ಲಿ ರಚಿತವಾದ ಅದ್ಭುತಕಲಾಕೃತಿಗಳೂ, ರೋಮಕರಾಷ್ಟ್ರದಲ್ಲಿ ರೂಪಗೊಂಡ ವ್ಯವಸ್ಥಾಬಲವೂ ನಶ್ವರವಾಗತಕ್ಕವಲ್ಲ; ಶಾಶ್ವತವಾಗಿರತಕ್ಕವು. ಯೂರೋಪಿನಿಂದ ಪಡುವಲಿಗಿರುವ ಭೂಭಾಗದಲ್ಲಿಯೂ ಕ್ರಿ.ಶ. ೧೫ನೆ ಶತಮಾನದಿಂದೀಚೆಗೆ ಶಾಸ್ತ್ರಸಾಧನೆಯ ಸಾಹಸಚಾತುರ್ಯಗಳಲ್ಲಿಯೂ ಆರ್ಯರ ರಚನಾತ್ಮಕಕೌಶಲವೇ ಪ್ರಕಾಶಕ್ಕೆ ಬಂತು.

[ಸೂಚನೆ: ಸೈಂಧವೀಸಂಸ್ಕೃತಿ ದ್ರಾವಿಡರದೆಂದು ಎಲ್ಲ ವಿದ್ವಾಂಸರೂ ಒಪ್ಪಿಲ್ಲ. ಆರ್ಯರ ಮೂಲನಿವಾಸದ ವಿಚಾರದಲ್ಲಿಯೂ ಯಾವಾಗ ಆರ್ಯರು ಹಿಂದುಸ್ತಾನದೊಳಕ್ಕೆ ಪ್ರವೇಶಿಸಿದರೆಂಬ ವಿಚಾರದಲ್ಲಿಯೂ ಭಿನ್ನಾಭಿಪ್ರಾಯಗಳುಂಟು. ತೆಂಕಲಿಗೆ ಆರ್ಯರು ಹೊರಟಾಗ ಸಿಂಧು ಗಂಗಾ ಬಯಲುಗಳಲ್ಲಿ ಪ್ರೌಢವಾದ ನಾಗರಿಕತೆಯನ್ನು ಕಟ್ಟಿದ್ದ ಜನರು ಮೊದಲೇ ನೆಲೆಯಾಗಿದ್ದರೆಂಬುದು ನಿಸ್ಸಂಶಯ. ಈಜಿಪ್ಟ್ ಮತ್ತು ಸುಮೇರಿಯಗಳಲ್ಲಿ ನಾಗರಿಕತೆಯನ್ನು ಪಡೆದಿದ್ದ ಜನರಿಗೂ ಇವರಿಗೂ ಸಂಬಂಧಗಳು ಪ್ರಾಯಶಃ ಇದ್ದುವು. ಸೈಂಧವೀಸಂಸ್ಕೃತಿ ಮಾಯವಾಗಲು ಆರ್ಯರ ಆಕ್ರಮಣವೇ ಕಡೆಯ ಕಾರಣವಾಯಿತು. ಇತರ ಭಾಗಗಳಲ್ಲಿಯೂ ಆರ್ಯರು ಹಿಂದಿನ ನಿವಾಸಿಗಳನ್ನು ದಕ್ಷಿಣಕ್ಕೆ ಅಟ್ಟಿದರು.]

ಮುಖ್ಯ ಪ್ರಶ್ನೆ ೯: ಈಜಿಪ್ಟ್‌ದೇಶದ ಹಳೆಯ ಸಭ್ಯತೆ ಎಂಥದು?

ಸಭ್ಯತೆಯ ತೊಟ್ಟಿಲುಗಳೆಂದು ನಾವು ಕರೆದ ಇತರ ಪ್ರದೇಶಗಳಲ್ಲಿ ನೈಲನದಿಯ ಬಯಲಾದ ಈಜಿಪ್ಟಿನಲ್ಲಿ (ಮಿಶ್ರದೇಶ) ಸಭ್ಯತೆಯು ಯಾವಾಗ ಮೊದಲಾಯಿತೆಂಬುದು ನಿಷ್ಕರ್ಷೆಯಾಗಿಲ್ಲ. ಆ ನದಿಯು ವರ್ಷೇವರ್ಷೇ ತುಂಬಿಹರಿದು ಹೊಸ ಮಣ್ಣನ್ನು ನೆಲದ ಮೇಲೆ ಹರಡುವುದರಿಂದ ಅಲ್ಲಿ ವರ್ಷಕ್ಕೆ ಮೂರು ಬೆಳೆಯಾಗುವಂತಿದೆ. ನದಿಯ ನೀರನ್ನು ಕಾಲುವೆಗಳಲ್ಲಿ ಹಾಯಿಸಿ ಹೆಚ್ಚು ಪ್ರದೇಶದಲ್ಲಿ ಸಾಗುವಳಿ ಮಾಡುವುದನ್ನು ಅಲ್ಲಿಯ ನಿವಾಸಿಗಳು ಅತಿಪೂರ್ವಕಾಲದಲ್ಲಿಯೇ ತಿಳಿದಿದ್ದರು. ಈಜಿಪ್ಟ್‌ದೇಶದ ಸುತ್ತ ಇರುವುದು ನಿರ್ಜನವಾದ ಮರುಭೂಮಿ; ಆದ್ದರಿಂದ ಇತರರ ಆಕ್ರಮಣವಿಲ್ಲದೆ ಬಹುಕಾಲ ಅಲ್ಲಿಯ ಜನರು ನಿರಾತಂಕವಾಗಿ ಬಾಳಿದರು; ಸೂರ್ಯಚಂದ್ರರನ್ನು ಪೂಜಿಸುತ್ತ ದೇವಾಲಯಗಳನ್ನು ಕಟ್ಟಿದರು; ಮೃತಪಟ್ಟವರ ದೇಹಗಳನ್ನು ಜೋಪಾನವಾಗಿ ಪರಿಮಳದ್ರವ್ಯಗಳಿಂದ ರಕ್ಷಿಸಿ ಅವುಗಳನ್ನಿಡಲು ಸಮಾಧಿಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಪ್ರಸಿದ್ಧವಾದ 'ಪಿರಮಿಡ್ಡು' ಗಳೆಂಬ ಕಟ್ಟಡಗಳು ಅಲ್ಲಿಯ ರಾಜರು ಕಟ್ಟಿಸಿಕೊಂಡ ಸಮಾಧಿಗಳು. ಚಿತ್ರಗಳ ಗುರುತುಗಳನ್ನಿಟ್ಟು ಲಿಪಿಯನ್ನೂ ಅಭ್ಯಾಸಮಾಡಿ ಒಂದುಬಗೆಯ ಜೊಂಡ

ಸ್ನೊಣಗಿಸಿಟ್ಟು ಅದರ ಮೇಲೆ ಬರೆಯುತ್ತಿದ್ದರು. ಈಜಿಪ್ಟ್ ದೇಶದಲ್ಲಿ ಪುರಾತನಕಾಲದಲ್ಲಿ ಆಳಿದ ರಾಜರಿಗೆ **ಫೇರೋ** (Pharoah) ಎಂಬ ಬಿರುದಿತ್ತು.

ಮತ್ತೊಂದು ಪ್ರದೇಶವು **ಮೆಸೊಪೊಟೇಮಿಯ;** ಇದು ಫರತ್ ಅಥವಾ ಯೂಫ್ರೆಟೀಸ್ ನದಿಗೂ ಟೈಗ್ರಿಸ್ ನದಿಗೂ ಮಧ್ಯೆ ಇರುವ ಭೂಭಾಗ. ಅಕ್ಕಪಕ್ಕದಲ್ಲಿರುವುದು ಬೇಟೆಗಾರರ ಅಥವಾ ಪಶುಪಾಲಕರ ಪ್ರದೇಶ. ಆದ್ದರಿಂದ ಈ ಪ್ರದೇಶದಲ್ಲಿ ಪದೇಪದೇ ಆಕ್ರಮಣಗಳು ಪುರಾತನ ಕಾಲದಲ್ಲಿ ಸಂಭವಿಸಿದವು. ಮೊದಲು ಸಭ್ಯತೆಪಡೆದ ಸುಮೇರಿಯನ್ ಜನರನ್ನು **ಸೆಮಿಟಿಕ್** ಗುಂಪಿನವರು ಸೋಲಿಸಿ **ಬಾಬಿಲನ್** (Babylon)ಪಟ್ಟಣವನ್ನು ಕಟ್ಟಿಕೊಂಡರು. **ಹಮ್ಮುರಬಿ** ಎಂಬ ಹೆಸರಿನ ದೊರೆ ಅವರ ಗುಂಪಿನವನು; ನ್ಯಾಯವಿಧಿಗಳನ್ನು ಬರೆಸಿಟ್ಟವನು. ಕೆಲಕಾಲ ಕಳೆದ ಮೇಲೆ **ಅಸ್ಸಿರಿಯನ್ನ**ರೆಂಬವರೂ, ಅವರ ತರುವಾಯ **ಚಾಲ್ಡಿಯನ**ರೆಂಬವರೂ ಆ ಪ್ರದೇಶವನ್ನು ವಶಪಡಿಸಿಕೊಂಡು ರಾಜ್ಯಗಳನ್ನು ಆಳಿದರು. ಜ್ಯೋತಿಷವನ್ನು ಕಲಿಯಲು ಚಾಲ್ಡಿಯನ್ನರು ಮೊದಲಿಟ್ಟು ಗ್ರಹಗಳನ್ನೂ ಸಂವತ್ಸರವನ್ನೂ ತಿಳಿದಿದ್ದರು.

ಮುಖ್ಯಪ್ರಶ್ನೆ ೧೦ : ಯೆಹುದೀ ಜನರ ವೃತ್ತಾಂತವೇನು?

ಮೆಸೊಪೊಟೇಮಿಯಕ್ಕೂ ಈಜಿಪ್ಟಿಗೂ ಮಧ್ಯೆ ಅರಬ್ಬಿಸ್ತಾನಕ್ಕುತ್ತರದಲ್ಲಿರುವುದು ಕ್ರೈಸ್ತರ ಪುಣ್ಯಭೂಮಿಯೆನಿಸಿದ **ಪ್ಯಾಲೆಸ್ಟೈನ್** ಅಥವಾ **ಜುಡೇಯ.** ಅಲ್ಲಿಯ ಪೂರ್ವನಿವಾಸಿಗಳು ಯೆಹುದಿ (Jews) ಗಳು; ಸೆಮಿಟಿಕ್ ಗುಂಪಿನವರು. ಬೈಬಲ್ ಗ್ರಂಥದ ಮೊದಲಭಾಗವೆಲ್ಲ ಆ ಜನರ ವೃತ್ತಾಂತವೇ. ಇಬ್ರಾಹೀಂ ಅಥವಾ **ಅಬ್ರಹಾಂ** ಎಂಬ ಮೂಲಪುರುಷನು ಅವರನ್ನು ಜುಡೇಯದಲ್ಲಿ ನೆಲೆಗೊಳಿಸಿದನಂತೆ. ಆತನ ಸಂತತಿಯವರಲ್ಲಿ ಭ್ರಾತೃಕಲಹ ತೋರಿದಾಗ ಯೂಸಫ್ ಅಥವಾ **ಜೋಸೆಫ್** ಎಂಬಾತನು ಈಜಿಪ್ಟಿನಲ್ಲಿ ಸಿಕ್ಕಿಕೊಂಡಿದ್ದನಂತೆ. ಕ್ರಮಕ್ರಮೇಣ ಯೆಹುದಿಗಳೂ ಅಲ್ಲಿಗೆ ಹೊರಟರಂತೆ. ನೈಲ್ ಪ್ರದೇಶದಲ್ಲಿದ್ದಾಗ ಯೆಹುದಿಗಳು ವ್ಯವಸಾಯವನ್ನು ಕಲಿತು ಸಮಾಜ ವ್ಯವಸ್ಥೆಯನ್ನೂ ಅರಿತರು; ಅದಕ್ಕೆ ಮೊದಲು ಕುರುಬರಾಗಿಯೇ ಇದ್ದವರು.

ಯೆಹುದಿಗಳಿಗೆ ಈಜಿಪ್ಟಿನಲ್ಲಿ ಕಷ್ಟಕಾಲ ಬಂತು. ಅಲ್ಲಿಯ ರಾಜರು ಅವರಿಗೆ ಹಿಂಸೆಕೊಟ್ಟರು. ಆ ಹಿಂಸೆಯನ್ನು ತಪ್ಪಿಸಿಕೊಳ್ಳಲು ಈಜಿಪ್ಟನ್ನು ಬಿಟ್ಟು ಹೊರಟರು. **ಮೂಸಾ** (Moses) ಎಂಬ ನಾಯಕನು ಅವರಿಗೆ ದೈವಬಲವನ್ನು ಕಾಣಿಸಿ ಅವರನ್ನು ಸ್ವದೇಶಕ್ಕೆ ಕರೆದುಕೊಂಡು ಹೊರಟನು. ಆತನೇ ಯೆಹುದಿಗಳಿಗೆ ಧರ್ಮದಾತ. ಸ್ವದೇಶವನ್ನು ಸೇರಿದ ತರುವಾಯ ತಮ್ಮ ರಾಜ್ಯ

ಕಟ್ಟಿಕೊಂಡಿದ್ದರು. ಸಾವಿರಾರು ವರ್ಷ ಕಳೆದಮೇಲೆ ಪುನಃ ಯೆಹುದಿಗಳು ಬಾಬಿಲನ್ ಪ್ರಭುಗಳಿಗೆ ಸೆರೆಯಾದರು. ಬಾಬಿಲನ್ ರಾಜ್ಯವನ್ನು ಆರ್ಯ ಅಥವಾ ಇರಾನೀ ಗುಂಪಿನವರು ಗೆದ್ದಾಗ ಯೆಹುದಿಗಳಿಗೆ ಬಿಡುಗಡೆಯಾಯಿತು.

ಯೆಹುದಿಜನರೂ ಅರಬ್ಬಿ ಜನರೂ ಒಂದೇ ಗುಂಪು. ಅವರ ಹೆಸರುಗಳು ಒಂದೇ ರೀತಿ. ಕ್ರೈಸ್ತರಿಟ್ಟುಕೊಳ್ಳುವ ಹೆಸರುಗಳು ಆ ಕಾರಣದಿಂದ ಅರಬ್ಬಿ ಹೆಸರುಗಳಂತಿರುತ್ತವೆ; ಉದಾಹರಣೆಗೆ ಡೇವಿಡ್—ದಾವೂದ್, ಜಾನ್—ಯೋಹಾನ್, ಜೋಸೆಫ್—ಯೂಸಫ್, ಜಾಕಬ್—ಯಾಕೂಬ್ ಇತ್ಯಾದಿ. ಯೆಹುದಿ ಜನರ ಭಾಷೆಗೆ ಇಬ್ರಾನೀ (Hebrew) ಎಂದು ಹೆಸರು; ಅರಬ್ಬಿಗೂ ಅದಕ್ಕೂ ವಿಶೇಷ ಹೋಲಿಕೆಯುಂಟು. ಆದರೆ ಅರಬ್ಬಿ ಜನರಿಗಿಂತ ಮೊದಲೇ ಯೆಹುದಿಗಳು ಸಭ್ಯತೆ ಪಡೆದರು; ಈಜಿಪ್ಟಿನಲ್ಲಿಯೂ ಬಾಬಿಲನ್ನಿನಲ್ಲಿಯೂ ಸೆರೆಯಲ್ಲಿದ್ದಾಗ ಅವರಿಗೆ ಆ ಸಭ್ಯತೆಯು ಲಭಿಸಿತ್ತು. ಯೆಹುದಿಗಳ ದೇಶವಾದ ಪ್ಯಾಲೆಸ್ಟೈನ್ ಮಾತ್ರ ಬಾರಿಬಾರಿಗೂ ಪರರ ಆಕ್ರಮಣಕ್ಕೆ ಸಿಕ್ಕಿತು. ಇರಾನೀ ಸಾಮ್ರಾಜ್ಯವಾದ ಮೇಲೆ ರೋಮಕ ಸಾಮ್ರಾಜ್ಯವಲ್ಲಿ, ಆ ತರುವಾಯ ಮುಸಲ್ಮಾನರ ಆಳಿಕೆಯಲ್ಲಿ ಅವರು ಇರಬೇಕಾಯಿತು. ೧೯೧೭ರಲ್ಲಿ ಬ್ರಿಟಿಷರು ಆ ನಾಡನ್ನು ಸ್ವಾಧೀನಪಡಿಸಿಕೊಂಡರು; ಯೆಹುದಿಗಳನ್ನು ನೆಲೆಗೊಳಿಸಲು ಯತ್ನಿಸಿದರು. ಆದರೆ ಅಲ್ಲಿ ನೆಲೆಸಿದ್ದ ಅರಬ್ಬಿ ಜನರಿಗೂ ಹೊಸದಾಗಿ ನೆಲೆಸಲು ಪ್ರಯತ್ನಿಸಿದ ಯೆಹುದಿಗಳಿಗೂ ಮನಸ್ತಾಪಗಳು ಬೆಳೆದಿವೆ. ಯೆಹುದಿಗಳು ಎಲ್ಲ ದೇಶಗಳಲ್ಲಿಯೂ ಇದ್ದಾರೆ. ಆದರೂ ತಮ್ಮ ಸ್ವದೇಶಾಭಿಮಾನವನ್ನು ಬಿಟ್ಟಿಲ್ಲ.

ಮುಖ್ಯಪ್ರಶ್ನೆ ೧೧: ಚೀನದಲ್ಲಿ ಎಂತಹ ನಾಗರಿಕತೆ ಬೆಳೆಯಿತು?

ಸಭ್ಯತೆಯ ತೊಟ್ಟಿಲುಗಳಲ್ಲಿ ಮುಖ್ಯವಾದುದಿನ್ನೊಂದು ಚೀನ ಅಥವಾ ಹ್ವಾಂಗೊ ಮತ್ತು ಯಾಂಗ್ಚಿಕಿಯಾಂಗ್ ಮೈದಾನ. ಚೀನೀ ಜನರು ನಮಗೆ ತಿಳಿದಾಗಿನಿಂದಲೂ ಕೃಷೀವಲರು; ಆದಿಯಲ್ಲಿ ಪಶುಪಾಲಕರಾಗಿದ್ದು ಯಾವ ಕಾಲದಲ್ಲಿಯೋ ಮೈದಾನದಲ್ಲಿ ನೆಲೆಸಿದರು. ಚರಿತ್ರೆಯ ಪ್ರಾರಂಭದಿಂದಲೂ ಸ್ಥಿರಜೀವನಪಡೆದ ಆ ಜನರಲ್ಲಿ ಅನೇಕ ಕುಲಗಳಿದ್ದವು. ಆ ತರುವಾಯ **ಫ್ಯೂಡಲ್** (feudal) ಎಂಬ ಹೆಸರುಪಡೆದ ವ್ಯವಸ್ಥೆಯುಂಟಾಯಿತು; ರಾಜ್ಯದ ಭೂಮಿಯೆಲ್ಲವೂ ರಾಜನದೆಂದು ಭಾವಿಸಿ ರಾಜದತ್ತವಾದ ವಿಭಾಗಗಳನ್ನು ಜಮೀನುಗಳನ್ನಾಗಿ ಕೆಲವರು ಪಡೆಯುವುದೂ, ಆ ಕೆಲವರ ಆಶ್ರಿತರಾಗಿ ಸಾಮಾನ್ಯಜನರು ಬದುಕುವುದೂ ಆ ವ್ಯವಸ್ಥೆಯ ಮುಖ್ಯಲಕ್ಷಣ.

ಆ ಬಗೆಯಲ್ಲಿಯೇ ಚೀನದಲ್ಲಿ ಚಕ್ರಾಧಿಪತ್ಯವೆಂಬುದು ರೂಪವೆತ್ತಿತು. ಕ್ರಿ.ಪೂ. ೨೧೦೦ಕ್ಕಿಂತ ಹಿಂದೆಯೇ ಚೀನದಲ್ಲಿ ಚಕ್ರವರ್ತಿಗಳಿದ್ದರು. ಕ್ರಿ.ಪೂ. ೧೧೨೨ರಿಂದ ಎಂಟು ನೂರು ವರ್ಷಕಾಲ ಆಳಿದ ಚೌ (Chow) ಸಂತತಿಯವರ ಆಧಿಪತ್ಯದಲ್ಲಿ ಸಾಹಿತ್ಯಾದಿ ಕಲೆಗಳು ಉತ್ತೇಜನಗೊಂಡವು. ಆದರೆ ಕಡೆಕಡೆಗೆ ಆಡಳಿತದ ಜಿಗಿಯು ತಪ್ಪಿ ಅನಾಯಕತೆಯು ತಲೆದೋರಿತು. ಆ ಅವ್ಯವಸ್ಥೆಯ ಕಾಲದಲ್ಲಿ ಅಂದರೆ ಸುಮಾರು ಕ್ರಿ.ಪೂ. ಆರನೆ ಮತ್ತು ಐದನೆ ಶತಮಾನಗಳ ಕಾಲದಲ್ಲಿ ಕುಂಗ್ ಫುತ್ಸು (Confucius) ಎಂಬಾತನ ಜೀವನಯಾತ್ರೆಯು ನಡೆಯಿತು. ಇಂದಿಗೂ ಆತನು ಚೀನೀಯರಿಗೆ ಪರಮಪೂಜ್ಯನಾದ ಗುರುವು.



ಕುಂಗ್ ಫುತ್ಸು

ಉತ್ತರ ವಿಭಾಗದ 'ಲೂ' ಎಂಬ ಸಂಸ್ಥಾನದಲ್ಲಿ ನೌಕರಿಯಲ್ಲಿದ್ದಾತನ ಮಗ ಕುಂಗ್ ಫುತ್ಸು. ಮೂರನೆ ವರ್ಷದಲ್ಲಿ ತಂದೆ ತೀರಿಕೊಂಡನು. ಬಾಲ್ಯ ಕೌಮಾರಗಳು ಬಡತನದಲ್ಲಿಯೇ ಕಳೆದುವು. ಚಿಕ್ಕವಯಸ್ಸಿನಲ್ಲಿಯೇ ಸಂಪಾದನೆಗೆ ತೊಡಗಬೇಕಾಗಿ ಬಂತು. ಆ ಸಂಸ್ಥಾನಿಕನ ಬಳಿ ಪಾರುಪತ್ಯಗಾರ

ನಾಗಿದ್ದನು; ಆಗಲೇ ಅಲ್ಲಿ ನಡೆಯುತ್ತಿದ್ದ ಮೋಸಗಳನ್ನೂ ಅನ್ಯಾಯಗಳನ್ನೂ ಕಂಡು ಜನರಿಗೆ ಸುಶಿಕ್ಷಣ ಕೊಡಬೇಕೆಂದು ಒಂದು ವಿದ್ಯಾಮಂದಿರವನ್ನು ತೆರೆದನು. ಸತ್ಯನಿಷ್ಠೆಗೂ ನ್ಯಾಯನಿಷ್ಠೆಗೂ ಆತನು ಆ ವೇಳೆಗೆ ಹೆಸರಾಗಿದ್ದನು. 'ಲೂ' ಸಂಸ್ಥಾನದಲ್ಲಿ ಅನೇಕ ತೊಂದರೆಗಳು ಸಂಭವಿಸಿದುದೂ ಆಗಲೇ. ಬಹುಕಾಲ ಕುಂಗ್‌ಫುತ್ಸು ಕಷ್ಟದಲ್ಲಿ ಕಾಲ ಕಳೆಯಬೇಕಾಗಿದ್ದರೂ ತನ್ನ ಸಂಕಲ್ಪವನ್ನು ಮುಂದುವರಿಸುತ್ತಲೇ ಇದ್ದನು. ಐವತ್ತೆರಡನೆ ವರ್ಷದಲ್ಲಿ ನ್ಯಾಯಾಧೀಶನಾಗಿ ಆ ತರುವಾಯ ಪ್ರಧಾನನಾಗಿ 'ಲೂ' ಸಂಸ್ಥಾನದಲ್ಲಿ ಅನೇಕ ಸಂಸ್ಕರಣಗಳನ್ನು ನಡೆಸಿದನು. ಆದರೆ ಪುನಃ ಪದವಿ ತಪ್ಪಿತು. ಹದಿಮೂರು ವರ್ಷಗಳ ಕಾಲ ಅಲೆದಾಡಿ ಹಿಂತಿರುಗಿ ಬಂದು ತನ್ನ ಎಪ್ಪತ್ತನಾಲ್ಕನೆ ವಯಸ್ಸಿನಲ್ಲಿ ತೀರಿಕೊಂಡನು.

ಕುಂಗ್‌ಫುತ್ಸು ಮತಸ್ಥಾಪಕನಲ್ಲ; ನೀತಿಬೋಧಕನು. ಆತನ ಬೋಧೆಯ ಪ್ರಭಾವದಿಂದಲೇ ಚೀನೀಜನರು ಇಂದಿಗೂ ಸಹನಶೀಲತೆಗೂ ವಿನಯಕ್ಕೂ



ಚೀನೀಯರ ಪಿತೃಪೂಜೆ

ಕರ್ತವ್ಯನಿಷ್ಠೆಗೂ ಪೃಥ್ವಿಗೆ ಅಗ್ರಗಣ್ಯರಾಗಿದ್ದಾರೆ. ಆ ಬೋಧೆಯು ಉತ್ತರ ಚೀನದಲ್ಲಿ ನಡೆದಾಗ ದಕ್ಷಿಣದಲ್ಲಿ ಲಾಉಟ್ಸೆ (Lao-tze) ಎಂಬ ಇನ್ನೊಬ್ಬ ಗುರು ನೀತಿಯನ್ನು ಪ್ರಚಾರಪಡಿಸಿದನು. ಎಷ್ಟೋಕಾಲ ಕಳೆದ ಬಳಿಕ ಅಲ್ಲಿ ಬೌದ್ಧಮತದ ಪ್ರಚಾರವೂ ನಡೆಯಿತು.

ಚೀನೀಜನರು ಅನೇಕ ಬಗೆಗಳಲ್ಲಿ ಮೆಚ್ಚುಗೆಗೆ ಯೋಗ್ಯರಾದವರು. ಅವರು ಶಾಂತಿಪ್ರಿಯರು, ವಿಧೇಯರು ಮತ್ತು ಸಹನಶೀಲರು. ಎಷ್ಟು ಕಷ್ಟಗಳನ್ನಾದರೂ ಸೈರಿಸಿಕೊಂಡಿರುವರು. ಪ್ರಾಯಶಃ ಈಗಿನ ಕಾಲದಲ್ಲಿ ಅವರು ಅತಿ ದರಿದ್ರಾವಸ್ಥೆಯಲ್ಲಿದ್ದಾರೆ. ಆದಾಗ್ಗೂ ಅವರೇ ನಿಜವಾದ ಸಂಸ್ಕೃತಿಯುಳ್ಳ ಜನರೆಂದು ಹೇಳಬೇಕಾಗುತ್ತದೆ. ಎಷ್ಟೋ ಬಾರಿ ಅವರ ದೇಶವನ್ನು ಅನ್ಯರು ಆಕ್ರಮಿಸಿ ದಾಂಧಲೆ ನಡೆಸಿದರು; ರಾಷ್ಟ್ರಪಲ್ಲಟಗಳೂ ಅಂತರ್ಯುದ್ಧಗಳೂ ರೇಗಿದವು. ಆದಾಗ್ಗೂ ಆ ಜನರು ಯುದ್ಧವನ್ನೂ ಪರಾಕ್ರಮಣವನ್ನೂ ಕೊಂಡಾಡತಕ್ಕವರಲ್ಲ; ಅವರ ಶಾಂತಸ್ವಭಾವಕ್ಕೆ ಕುಂದಿಲ್ಲ.

ಚೀನೀ ಜನರಲ್ಲಿ ಜಾತಿಪದ್ಧತಿಗಳೇನೋ ಇಲ್ಲ. ಆದರೆ ಅವರಿಗೆ ವಂಶಭಕ್ತಿಯು ದೊಡ್ಡದು. ತಮ್ಮ ಮನೆಯ ಕ್ಷೇಮಾಭಿವೃದ್ಧಿಗಾಗಿ ಚೀನೀ ಜನರು



ಅಲಂಕೃತ ಪುಷ್ಪಪಾತ್ರೆಗಳು—ಚೀನೀ

ಎಷ್ಟು ಕಷ್ಟವನ್ನಾದರೂ ಸಹಿಸುವರು. ಮನೆತನದ ಕಟ್ಟು ಅವರಿಗೆ ಬಲ. ಆ ಜನರಿಗೆ ದಯಾದಾಕ್ಷಿಣ್ಯಗಳು ಸಹಜವಾದುವು. ಅದರಿಂದ ಜಗತ್ತಿನಲ್ಲಿ ಚೀನೀಯರು ತಮ್ಮ ಗುಣದಿಂದ ಅಥವಾ ಸಂಸ್ಕೃತಿಯಿಂದ ಇಂದಿಗೂ ಹಿರಿಯರು. ದೇಶವೂ ಹಿರಿದು; ಆ ದೇಶಸ್ಥರ ಸಭ್ಯತೆಯೋಗ್ಯತೆಗಳೂ ಹಿರಿಯವು.

ಅಭ್ಯಾಸಗಳು

೧. ಸೈಂಧವೀಸಂಸ್ಕೃತಿಯ ವಿವರವುಳ್ಳ ಯಾವುದಾದರೂ ಪುಸ್ತಕವನ್ನು ತೆರೆದುನೋಡಿ ಹೆಚ್ಚಿನ ವಿಷಯವನ್ನು ಸಂಗ್ರಹಿಸಿ. ಆ ಸಂಸ್ಕೃತಿಯಲ್ಲಿ ಅಚ್ಚರಿಗೊಳಿಸುವ ಅಂಶಗಳನ್ನು ಬರೆದಿಡಿ.

೨. ಹಿಂದುಸ್ತಾನದ ಮೂಲನಿವಾಸಿಗಳ ವಿಚಾರವಾಗಿ ನಿಮಗೆ ತಿಳಿದಿರುವ ಸಂಗತಿಗಳನ್ನು ಬರೆಯಿರಿ. ಅವರಲ್ಲಿ ಯಾರನ್ನಾಗಲಿ ನೀವು ಸ್ವತಃ ಕಂಡಿದ್ದರೆ ವರ್ಣಿಸಿ.

೩. ಆರ್ಯರು ಯಾವ ಯಾವ ದೇಶಗಳಲ್ಲಿ ಹೊಕ್ಕು ನೆಲೆಸಿದರು? ಅವರು ಕಟ್ಟಿದ ನಾಗರಿಕತೆ ಎಲ್ಲೆಲ್ಲಿ ಕಾಣುತ್ತದೆ? ಮಾನವಸಮುದಾಯದ ಅಭ್ಯುದಯಕ್ಕೆ ಅವರಿಂದಾದ ಸಹಾಯವೇನು ತಿಳಿಸಿ.

೪. ಹಿಂದುಸ್ತಾನದಲ್ಲಿ ಈಗಿರುವ ಹಿಂದುಜನರಿಗೂ ಮೊದಲು ನೆಲೆಸಿದ್ದ ಆರ್ಯರಿಗೂ ಕಾಣುವ ಸಾಮ್ಯಗಳೂ ಭೇದಗಳೂ ಯಾವುವು? ಇಲ್ಲಿ ತೋರಿಬರುವ ಭೇದಗಳಿಗೆ ಕಾರಣಗಳನ್ನೊದಗಿಸಬಲ್ಲಿರಾ?

೫. ಯೆಹುದಿಜನರ ವೃತ್ತಾಂತದಲ್ಲಿ ನಿಮಗೆ ವಿಶೇಷವೆಂದು ತೋರುವ ಅಂಶಗಳಾವುವು?

೬. ಪೃಥ್ವಿಯಲ್ಲೆಲ್ಲ ಅತಿ ವಿಸ್ತಾರವಾದ ದೇಶವಾವುದು? ಬಹು ಜನಭರಿತವಾದ ದೇಶವಾವುದು? ಆ ದೇಶಸ್ಥರ ಹಿರಿಮೆಯೆಂಥದು?

೩ನೇ ಅಧ್ಯಾಯ

ಪುರಾತನ ಗ್ರೀಕರು

ಮುಖ್ಯಪ್ರಶ್ನೆ ೧೨: ಭೂಮಧ್ಯಸಮುದ್ರದ ಈಶಾನ್ಯದಲ್ಲಿ ತೋರಿದ ಸಭ್ಯತೆ ಎಂತಹುದು? ಗ್ರೀಕರಿಗೆ ಹಿಂದಿದ್ದವರು ಯಾರು?

ಮೊದಲು ೫೯ನೆ ಪುಟದಲ್ಲಿ ಕೊಟ್ಟಿರುವ ನಕ್ಷೆಯನ್ನು ನೋಡಿ. ಮಾನವ ಸಭ್ಯತೆಯು ಮೊದಲಾದ ನದೀ ಬಯಲು ಪ್ರದೇಶಗಳಿಗೆ ಕಪ್ಪು ಹಚ್ಚಿದೆ. ಭೂಮಧ್ಯ ಸಮುದ್ರದ ಉತ್ತರತೀರದ ನಾಡುಗಳು ಅದೇ ರಾಶಿಗೆ ಸೇರಿದವೆಂದು ನಕ್ಷೆಯಲ್ಲಿ ಕಾಣುತ್ತದೆ. ಆ ನಾಡುಗಳಲ್ಲಿ ಮೂಡಲಲ್ಲಿರುವ ಗ್ರೀಸ್ ಎಂಬ ದೇಶವು ಯೂರೋಪಿನಲ್ಲೆಲ್ಲ ಸುಪ್ರಸಿದ್ಧವಾದ ಪ್ರಾಚೀನ ದೇಶ. ಆರ್ಯರ ಶಾಖೆಯವರೇ ಆ ದೇಶದಲ್ಲಿಯೂ ನೆಲೆಸಿ ಸಭ್ಯತೆಯನ್ನು ಕಟ್ಟಿದವರು. ಅಲ್ಲಿರುವುದು ವಿಶಾಲವಾದ ನದೀ ಬಯಲುಗಳಲ್ಲ. ಯಥೇಚ್ಛವಾಗಿ ದ್ವೀಪಗಳಿವೆ; ತೀರದವರೆಗೂ ಹಬ್ಬಿರುವ ಬೆಟ್ಟದ ಸಾಲುಗಳಿವೆ. ಸಮುದ್ರವಾದರೋ ಎಲ್ಲೆಲ್ಲಿಯೂ ನುಗ್ಗಿ ಬೆರಳು ಚಾಚಿದಂತಿದೆ; ಕೊಲ್ಲಿಗಳಿಗೂ ಖಾರಿಗಳಿಗೂ ಕೊರತೆಯಿಲ್ಲ. ಇಂತಹ ಪ್ರದೇಶದಲ್ಲಿ ನೆಲೆಸಿದವರು ಅಂಬಿಗತನದಲ್ಲಿ ಜಾಣ



ಅಥೀನೀ ದೇವತೆಯ ಚಿತ್ರವುಳ್ಳ ಗ್ರೀಕರ ಪುಷ್ಪಪಾತ್ರೆ

ರಾದಾರೆಂದು ನೀವೇ ಹೇಳಬಲ್ಲಿರಿ. ವಾಸ್ತವವಾಗಿ ಅಲ್ಲಿ ಪ್ರಬಲಗೊಂಡ ಜನರು ಸಮುದ್ರಯಾನ ದೂರವ್ಯಾಪಾರಗಳಿಂದಲೇ ಅಭಿವೃದ್ಧಿ ಪಡೆದರು.

ಗ್ರೀಕರ ಕಥೆಗಳಲ್ಲಿ ಕೆಲವನ್ನಾದರೂ ನೀವು ಓದಿರುತ್ತೀರಿ. **ಥಿಸ್ಯೂಸ್** (Theseus) ಮತ್ತು **ಮೆನೆಲೆಯಸ್** (Menelaus) ಎಂಬಿಬ್ಬರ ವೃತ್ತಾಂತವನ್ನು ನೆನಪಿನಲ್ಲಿಡಬಹುದು. **ಕ್ರೀಟ್** ದ್ವೀಪದ ನಿವಾಸಿಗಳೊಂದಿಗೆ ಥಿಸ್ಯೂಸ್ ಹೋರಾಡಿದನು; **ಟ್ರಾಯ್** ಎಂಬ ರಾಜ್ಯದವರೊಂದಿಗೆ ಮೆನೆಲೆಯಸ್ ದೊಡ್ಡ ಜಗಳವನ್ನು ಬೆಳೆಸಿದನು. ಇವೆರಡು ವೃತ್ತಾಂತಗಳಲ್ಲಿ ಪೂರ್ವಚರಿತ್ರೆಯ ಅಂಶಗಳು ಅಡಗಿವೆ. ಟ್ರಾಯ್, ಕ್ರೀಟ್ ಪ್ರದೇಶಗಳಲ್ಲಿ ಗ್ರೀಕರಿಗೆ ಮೊದಲೇ ಬೇರೆ ಜನರು ನೆಲೆಸಿ ಸಮುದ್ರಯಾನದಲ್ಲಿಯೂ ಸಾಹಸದಿಂದ ವ್ಯಾಪಾರ ನಡೆಸುವುದರಲ್ಲಿಯೂ ಸಮರ್ಥರಾಗಿದ್ದರು. ಕ್ರೀಟ್ ದ್ವೀಪದ **ನಾಸ್ಸಾಸ್** (Cnossos) ಎಂಬೆಡೆಯಲ್ಲಿ ಆ ಜನರು ಕಟ್ಟಿದ ಅರಮನೆಯ ಗುರುತುಗಳಿವೆ. ಆ ಜನರನ್ನು ಆರ್ಯಶಾಖೆಯವರಾದ ಗ್ರೀಕರು ಆಕ್ರಮಿಸಿ ಗೆದ್ದರು. ಆದರೆ ಜಯಶಾಲಿಗಳಾದ ಗ್ರೀಕರು ಕ್ರೀಟನ್ ಜನರಿಂದ ಅನೇಕಾಂಶಗಳನ್ನು ಕಲಿತರು.

ಮುಖ್ಯಪ್ರಶ್ನೆ ೧೩: ಗ್ರೀಕರ ನಗರರಾಷ್ಟ್ರಗಳಲ್ಲಿ ಅಭಿವೃದ್ಧಿ ಪಡೆದ ಆಡಳಿತದ ರೂಪವಾವುದು?

ಗ್ರೀಕರನ್ನು ನಮ್ಮವರು ಬಹುಕಾಲ '**ಯವನ**'ರೆಂದು ಕರೆಯುತ್ತಿದ್ದರು; ಸ್ವಂತವಾಗಿ ಅವರೇ ಇಟ್ಟುಕೊಂಡಿದ್ದ ಹೆಸರು '**ಹೆಲ್ಲೆನ**'ರೆಂದು (Hellenes). ಅವರು ನೆಲೆಸಿದ ಗ್ರೀಸ್ ದೇಶದಲ್ಲಿ ಸಮುದ್ರದ ಭಾಗಗಳು ಚಾಚಿಕೊಂಡಿರುವುದಲ್ಲದೆ ಬೆಟ್ಟದ ಸಾಲುಗಳೂ ಹಬ್ಬಿಕೊಂಡಿರುವುವು. ಒಂದು ಮೈದಾನದಂತಹ ಪ್ರದೇಶವಲ್ಲ ಅದು; ಬೆಟ್ಟದ ಸಾಲುಗಳ ಮಧ್ಯೆ ಅಡಗಿದಂತಿರುವ ಸಣ್ಣಪುಟ್ಟ ಪ್ರದೇಶಗಳು. ಒಂದು ಪ್ರದೇಶದಿಂದ ಮತ್ತೊಂದಕ್ಕೆ ಸಂಚಾರ ಸುಲಭವಲ್ಲ. ನದೀ ಬಯಲುಗಳಂತಲ್ಲ. ಈ ಕಾರಣದಿಂದ ಗ್ರೀಸ್ ದೇಶದಲ್ಲಿ ಅನೇಕ ಸಣ್ಣ ರಾಷ್ಟ್ರಗಳು ತೋರಿಕೊಂಡು ಪ್ರತ್ಯೇಕವಾಗಿಯೇ ಬೆಳೆದು ಪ್ರಾಬಲ್ಯಕ್ಕಾಗಿ ಹೆಣಗಿದವು. ಕಣಿವೆಗೊಂದರಂತೆ ರೂಪಗೊಂಡ ರಾಷ್ಟ್ರಗಳು ನಗರರಾಷ್ಟ್ರಗಳೇ; ಅಕ್ಕಪಕ್ಕದ ರಾಷ್ಟ್ರಗಳೊಟ್ಟುಗೂಡಿ ವಿಶಾಲವಾದ ರಾಜ್ಯವಾಗಿ ಪರಿಣಮಿಸಲು ಸುಲಭಸಂಚಾರವಿರಲಿಲ್ಲ. ಆ ನಗರರಾಷ್ಟ್ರಗಳಲ್ಲಿ **ಅಥೆನ್ಸ್** ಎಂಬುದೇ ಅತಿದೊಡ್ಡದಾಗಿದ್ದುದು; ಅಲ್ಲಿಯೂ ಒಂದೆರಡು ಲಕ್ಷಗಳಿಗಿಂತ ಹೆಚ್ಚು ಜನಸಂಖ್ಯೆಯಿರಲಿಲ್ಲ.

ಈ ಪುಟ್ಟ ಪಟ್ಟಣರಾಷ್ಟ್ರಗಳಲ್ಲಿ ಹೊಸದಾದ ಆಡಳಿತಕ್ರಮವೊಂದು ಹುಟ್ಟಿತು. ಅದನ್ನು ಇಂಗ್ಲಿಷ್ ಭಾಷೆಯಲ್ಲಿ **ಡೆಮೊಕ್ರೆಸಿ** (democracy) ಎಂದು ಕರೆಯುತ್ತೇವೆ. ಆ ಶಬ್ದ ಗ್ರೀಕರದು. ಡೆಮೋಸ್ (Demos) ಎಂದರೆ ಜನ; ಕ್ರಸಿಯೊ (cracio) ಎಂದರೆ ಆಡಳಿತ. ಒಟ್ಟಿನಲ್ಲಿ ಅರ್ಥ ಜನರ ಆಡಳಿತ ಅಥವಾ ಜನರ ಒಡೆತನ, **ಜನಸ್ವಾಮ್ಯ.** ಸಮಸ್ತ ಪೌರರೂ ಸೇರಿ ನಡೆಸುವ ಆಡಳಿತ. ಆದರೆ ಗ್ರೀಕರ ನಗರಗಳಲ್ಲಿ ಪೌರರೆನಿಸಿಕೊಂಡವರು ಕೆಲವರು ಮಾತ್ರ. ನಗರನಿವಾಸಿಗಳಲ್ಲಿ ಅರ್ಧಪಾಲಿನವರಾದರೂ ಕೇವಲ ಗುಲಾಮರಾಗಿದ್ದರು. ತಮ್ಮಿಂದ ಪರಾಜಿತರಾದ ಜನರನ್ನು ಗ್ರೀಕರು ಗುಲಾಮರನ್ನಾಗಿಟ್ಟುಕೊಂಡು ಅವರನ್ನು ಕೊಳ್ಳುತ್ತ ಮಾರುತ್ತಲಿದ್ದರು. ಗ್ರೀಕ ಜಾತಿಯವರು ಮಾತ್ರ ಪೌರ ಪದವಿಗೆ ಅರ್ಹರು. ಎಲ್ಲ ಗ್ರೀಕರು ಕೂಡ ಪೌರರಾಗುತ್ತಿರಲಿಲ್ಲ. ಪಟ್ಟಣದಲ್ಲಿ ಹುಟ್ಟಿದ್ದ ಗ್ರೀಕಜಾತಿಯವನಾಗಿದ್ದಾಗ್ಯೂ ಅವನ ತಂದೆಯು ಹೊರಗಿನಿಂದ ಬಂದು ನೆಲೆಸಿದ್ದ ಪಕ್ಷದಲ್ಲಿ ಅವನಿಗೆ ಪೌರತ್ವವು ದೊರಕುತ್ತಿರಲಿಲ್ಲ. ಆದ್ದರಿಂದ ಪೌರರೆಂಬವರು ಜನದ ಸ್ವಲ್ಪ ಭಾಗ ಮಾತ್ರವಾಗಿದ್ದರು. ಆದ್ದರಿಂದ ಪೌರರೆಲ್ಲರೂ ಒಂದೆಡೆಯಲ್ಲಿ ಸಭೆಗೂಡಬಹುದಾಗಿತ್ತು. ಚರ್ಚೆಗೂ ಆಲೋಚನೆಗೂ ತಕ್ಕ ವಿಚಾರವು ತೋರಿದಾಗ ಪೌರರೆಲ್ಲರೂ ಪಟ್ಟಣದ ಚೌಕದಲ್ಲಿ ಸಭೆಸೇರಿ ಪ್ರತಿಯೊಬ್ಬರ ಅಭಿಮತವನ್ನೂ ವ್ಯಕ್ತಪಡಿಸಿ ವಿಷಯವನ್ನು ಇತ್ಯರ್ಥಮಾಡುತ್ತಿದ್ದರು. ಈಗಿನ ಕಾಲದ ವಿಸ್ತಾರ ರಾಷ್ಟ್ರಗಳಲ್ಲಿ ಲಕ್ಷಗಟ್ಟಲೆಯಾಗಿರುವ ಜನರು ಅದೇ ರೀತಿಯಲ್ಲಿ ಒಟ್ಟುಗೂಡಿ ಸಭೆ ನಡೆಸಲಾರರು. ಒಂದೊಂದು ಸ್ಥಲದವರೂ ತಮ್ಮ ಪ್ರತಿನಿಧಿಯನ್ನು ಗೊತ್ತುಮಾಡುವರು; ಪ್ರತಿನಿಧಿಗಳೆಲ್ಲರೂ ಒಂದೆಡೆಯಲ್ಲಿ ಸಭೆಸೇರಿ ಚರ್ಚೆಗಳನ್ನು ನಡೆಸುವರು. ವಿಶಾಲವಾದ ರಾಷ್ಟ್ರದಲ್ಲಿ ಲಕ್ಷಾಂತರವಿರುವ ಜನಸಮೂಹಕ್ಕೆ ಪ್ರಾತಿನಿಧ್ಯದ ರೀತಿಯು ಅನಿವಾರ್ಯ. ಒಂದೊಂದು ಸ್ಥಳವೂ ಒಂದೊಂದು ರಾಷ್ಟ್ರವೆನಿಸಿ ಒಂದೆರಡು ಸಾವಿರದಷ್ಟು ಮಾತ್ರ ಪೌರರಿದ್ದಾಗ **ಪ್ರತ್ಯಕ್ಷ ಜನಸ್ವಾಮ್ಯಕ್ಕೆ** ಅವಕಾಶವುಂಟು. ಇಲ್ಲದಿದ್ದರೆ ಪರೋಕ್ಷ ಜನಸ್ವಾಮ್ಯ ಅಥವಾ ಪ್ರಾತಿನಿಧ್ಯವೇ ಉಪಾಯ.

ಗ್ರೀಕರ ಪಟ್ಟಣಗಳಲ್ಲಿ ಪ್ರತ್ಯಕ್ಷ ಜನಸ್ವಾಮ್ಯ ನೆಲೆಸಿದ್ದುದೇ ವಿಶೇಷ. ಹಿಂದುಸ್ತಾನದಲ್ಲಿಯೂ ಬುದ್ಧದೇವನ ಕಾಲದಲ್ಲಿ ಕ್ಷತ್ರಿಯ ಕುಲಸ್ಥರು ಕಟ್ಟಿದ ರಾಷ್ಟ್ರಗಳಲ್ಲಿ ಪ್ರಾಯಿಕವಾಗಿ ಅದೇ ರೀತಿಯ ಪದ್ಧತಿ ನೆಲೆಸಿತ್ತು.

ಮುಖ್ಯಪ್ರಶ್ನೆ ೧೪: ಆತ್ಮರಕ್ಷಣೆಸಲುವಾಗಿ ಗ್ರೀಕರಾಷ್ಟ್ರಗಳನ್ನು ಒಟ್ಟುಗೂಡಿಸಿದ ವಿಪತ್ತು ಯಾವುದು?

ಕ್ರಿ.ಪೂ. ೫ನೇ ಶತಮಾನದಲ್ಲಿ ಗ್ರೀಕರಾಷ್ಟ್ರಗಳಿಗೆ ಭಾರಿ ಆಪತ್ತು ಸಂಭವಿಸಿತು. ಸರಿಸುಮಾರಾಗಿ ನಮ್ಮ ದೇಶದಲ್ಲಿ ಬುದ್ಧದೇವನೂ ಚೀನದಲ್ಲಿ ಕುಂಗ್‌ಫುತ್ಸು ಅಥವಾ ಕಾನ್‌ಫ್ಯುಸಿಯಸ್ (K'ung-fu-tzu, Confucius) ಎಂಬ ನೀತಿಗುರುವೂ ಇದ್ದ ಕಾಲ. ಆಗ ಗ್ರೀಕರ ದೇಶವನ್ನು ಮುತ್ತಲು ಇರಾನಿನ ಆರ್ಯಶಾಖೆಯವರು ಹವಣಿಸಿಕೊಂಡರು. ಒಟ್ಟು ದೇಶಕ್ಕೆ ತೋರಿದ ವಿಪತ್ತನ್ನು ತಿಳಿದು ಗ್ರೀಕರು ತಮ್ಮ ಅಂತಃಕಲಹಗಳನ್ನು ಮರೆತು ಆತ್ಮರಕ್ಷಣೆಗಾಗಿ ಒಟ್ಟುಗೂಡಿ ಹೋರಾಟಕ್ಕೆ ಸನ್ನಾಹಮಾಡಿಕೊಂಡರು.

ಈಗಿನ ಫಾರ್ಸಿಸ್ತಾನ ಅಥವಾ ಇರಾನಿನಲ್ಲಿ ಆರ್ಯರ ಶಾಖೆಯವರು ನೆಲೆಸಿದ್ದರಷ್ಟೆ. ವೈದಿಕಕಾಲದ ಆರ್ಯರಿಗೂ ಇರಾನೀ ಆರ್ಯರಿಗೂ ಎಷ್ಟೋ ಹೋಲಿಕೆಗಳಿದ್ದುವು. ಇರಾನಿನಲ್ಲಿ ನೆಲೆಸಿದ್ದಾಗ ಈ ಶಾಖೆಯವರಲ್ಲಿ ಜರದುಷ್ಟ್ರ (Zaradushtra-Zoroaster) ಎಂಬ ಧರ್ಮಗುರುವು ಜನ್ಮವೆತ್ತಿದನು. ಅಂದಿನಿಂದ ಅವರ ಮತಕ್ಕೆ ಜರದುಷ್ಟ್ರನ ಮತವೆಂಬುದು ರೂಢಿ. ಈ ಮತಸ್ಥರು ಸುಮಾರು ಕ್ರಿ.ಪೂ. ೫೦೦ರವೇಳೆಗೆ ಮೆಸೊಪೊಟೇಮಿಯ ಕಡೆಗೆ ನುಗ್ಗಿ ಅಲ್ಲಿದ್ದ ಬಾಬಿಲನ್ ಸಾಮ್ರಾಜ್ಯವನ್ನು ಗೆದ್ದರು. ಇನ್ನೂ ಪಶ್ಚಿಮಕ್ಕೆ ಹೊರಟು ನೈಲನದೀ ಪ್ರದೇಶವಾದ ಈಜಿಪ್ಟನ್ನೂ ವಶಪಡಿಸಿಕೊಂಡರು. ಇರಾನೀ ಸಮ್ರಾಟನಾದ **ಹಿರೇದಾರಾ** (ದಾರಯೂಸ್, Darius) ಅತಿ ವಿಸ್ತಾರವಾದ ಭೂಭಾಗಕ್ಕೆ ಪ್ರಭುವೆನಿಸಿದನು. ಈಜಿಪ್ಟ್, ಸಿರಿಯ, ಏಷ್ಯ ಮೈನರ್, ಮೆಸೊಪೊಟೇಮಿಯ, ಇರಾನ್ ಪ್ರದೇಶಗಳನ್ನೊಳಗೊಂಡ ಆತನ ಸಾಮ್ರಾಜ್ಯಕ್ಕೆ ಪ್ರಾಯಶಃ ಸಿಂಧುನದಿಯೇ ಮೂಡಲ ಮೇರೆಯಾಗಿತ್ತು. ವಿಸ್ತಾರವೆಷ್ಟೆಂದು ನಕ್ಷೆಯಲ್ಲಿ ನೋಡಿ. ಇಷ್ಟನ್ನೂ ಆಳುತ್ತಿದ್ದ ದಾರಾ ಯೂರೋಪನ್ನು ಗೆದ್ದುಕೊಳ್ಳುವುದಕ್ಕೂ ಹವಣಿಸಿದನು. ಬಾಸ್ಪೊರಸ್ ಜಲಸಂಧಿಯನ್ನು ಅಪಾರಸೇನೆಯೊಡನೆ ದಾಟಿ ಡಾನ್ಯೂಬ್ ನದಿಯ ಬಳಿಗೆ ಬಂದು ಅದನ್ನು ದಾಟಿದನು. ಆದರೆ ಅಲ್ಲಿದ್ದ ಸಿಥಿಯನರೆಂಬ ಪಶುಪಾಲಕ ಸಮೂಹವನ್ನು ವಶಪಡಿಸಿಕೊಳ್ಳಲಾರದೆ ಪ್ರಯಾಸದಿಂದ ಹಿಂತಿರುಗಿದನು. ಆದರೆ ಪ್ರಯತ್ನವನ್ನು ಬಿಡಲಿಲ್ಲ. ಮತ್ತೆ ಹೊರಟು ಅಲ್ಲಿಂದ ತೆಂಕಲಿಗೆ ತಿರುಗಿ ಗ್ರೀಸನ್ನು ಮುತ್ತಲು ಸಿದ್ಧನಾದನು. ನೌಕೆಗಳ ಸಹಾಯವನ್ನು ಪಡೆದು ಆತನ ಸೇನೆಯು ಅಥೆನ್ಸ್ ಪಟ್ಟಣದ ಬಳಿ **ಮ್ಯಾರಥಾನ್** (Marathon)

ಎಂಬೆಡೆಯಲ್ಲಿ ಯುದ್ಧಕ್ಕೆ ಸಿದ್ಧವಾಯಿತು. ಹೀಗೆ ಪ್ರಾಪ್ತವಾದ ವಿಪತ್ತನ್ನು ತಿಳಿದಕೂಡಲೆ ಗ್ರೀಕರ ನಗರರಾಷ್ಟ್ರಗಳವರು ಒಟ್ಟುಗೂಡಿ ತಮ್ಮ ದೇಶವನ್ನು ರಕ್ಷಿಸಿಕೊಳ್ಳಲು ಕಾಳಗಕ್ಕೆ ನಿಂತು ಆ ಕದನದಲ್ಲಿ ಇರಾನೀ ಸೇನೆಯನ್ನು ಸೋಲಿಸಿದರು. ಹಾಗೆ ಒಟ್ಟುಗೂಡದಿದ್ದ ಪಕ್ಷದಲ್ಲಿ ಯೂರೋಪಿನಲ್ಲಿ ಇರಾನೀ ಸಾಮ್ರಾಜ್ಯವು ಹಬ್ಬಿಕೊಳ್ಳುತ್ತಿತ್ತು. ಐಕಮತ್ಯದಿಂದ ಗ್ರೀಕರು ಹೊಸ ಬಲವನ್ನು ಸಂಪಾದಿಸಿ ಅಂತಹ ಪರಿಣಾಮಕ್ಕೆ ಆಸ್ಪದ ಕೊಡದಾದರು. ಕದನದಲ್ಲಿ ಗ್ರೀಕರು ಜಯಪಡೆದ ಸ್ವಲ್ಪಕಾಲದಲ್ಲಿಯೇ ಹಿರೇದಾರಾ ಸಮ್ರಾಟನು ತೀರಿಕೊಂಡನು.


ಆದರೆ ಗ್ರೀಕರಿಗೆ ವಿಪತ್ತು ಇನ್ನೂ ತೊಲಗಲಿಲ್ಲ. ಏಕಂದರೆ ದಾರಾ ಸಮ್ರಾಟನ ಮಗ **ಕ್ಷಯಾರ್ಷ** ಅಥವಾ **ಷೇರ್** (Kshayarsha or Xerxes) ಎಂಬಾತನು ಚಕ್ರವರ್ತಿಯಾದ ಕೂಡಲೇ ಗ್ರೀಸನ್ನು ಮುತ್ತುವ ಸನ್ನಾಹ ನಡೆಸಿದನು. ಆದರೆ ಆತನ ಪ್ರಯತ್ನವು ಮುರಿಯಿತು. **ಸ್ಯಾಲಮಿಸ್** (Salamis) ಬಳಿ ನಡೆದ ಜಲಯುದ್ಧದಲ್ಲಿಯೂ **ಪ್ಲಟೀಯ** (Plataea) ಎಂಬೆಡೆಯಲ್ಲಿ ನಡೆದ ಸ್ಥಳರಣದಲ್ಲಿಯೂ ಆತನ ಬಲವು ಸೋತಿತು. ಆ ತರುವಾಯ ಷೇರನು ಪ್ರಯತ್ನಮಾಡಲಿಲ್ಲ. ಇದರಿಂದ ಗ್ರೀಸ್ ಯೂರೋಪುಗಳಲ್ಲಿ ಇರಾನೀ ಪ್ರಭುತ್ವವು ನೆಲೆಸದಂತಾಯಿತು.

ಪ್ಲಟೀಯ ಕದನದ ತರುವಾಯ ಐವತ್ತು ವರ್ಷಕಾಲ ಗ್ರೀಕರ ಚರಿತ್ರೆಯಲ್ಲಿ ತೇಜಸ್ಸಿನ ಕಾಲ. ಅದರಲ್ಲಿಯೂ **ಅಥೆನ್ಸ್** ಪಟ್ಟಣಿಗರ ಚರಿತ್ರೆ ಸ್ಮರಣೀಯವಾದುದು. **ಪೆರಿಕ್ಲೀಸ್** (Pericles) ಎಂಬ ಮಹಾನಾಯಕನ ಹಿಂದಿದ್ದುಕೊಂಡು ಆ ಸಣ್ಣ ನಗರದವರು ಅರ್ಧಶತಮಾನ ಮಾತ್ರದಲ್ಲಿ ಜಗತ್ತನ್ನು ಬೆರಗುಗೊಳಿಸುವಂತಹ ಚಾತುರ್ಯವನ್ನು ಕಲೆಗಳಲ್ಲಿ ಸಾಧಿಸಿದರು. ಪೆರಿಕ್ಲೀಸ್ ಮೃತನಾದ ಬಳಿಕ ಅಥೆನ್ಸ್ ನಗರವು ಒಳಜಗಳಗಳಲ್ಲಿ ಸಿಲುಕಿ ಹಾಳಾಯಿತು. ಆದರೆ ಆತನ ಕಾಲದ ಅಥೆನ್ಸ್ ಜನರ ಸಾಧನೆಯ ಪ್ರಭಾವವು ಇನ್ನೂ ಜಗತ್ತಿನಲ್ಲಿ ಕಾಣುತ್ತಿದೆ.

ಮುಖ್ಯಪ್ರಶ್ನೆ ೧೫ : ಅಥೆನ್ಸ್ ನಗರದಲ್ಲಿ ಪೆರಿಕ್ಲೀಸ್ ನೆರವೇರಿಸಿದ್ದೇನು? ಆತನಿಗೆ ಅಧಿಕಾರ ತಪ್ಪಿದ್ದು ಹೇಗೆ?

ಪೆರಿಕ್ಲೀಸನ ಜನನವು ಕ್ರಿ.ಪೂ. ೪೯೦ರಲ್ಲಿ; ಸತ್ಕುಲಜಾತನಾದ ಆತನು ಪಟ್ಟಣಿಗರ ವ್ಯವಹಾರವನ್ನೆಲ್ಲ ತಿಳಿದುಕೊಂಡು ಅನುಭವವನ್ನು ಸಂಪಾದಿಸಿ ನಾಯಕನಾಗುವ ಯೋಗ್ಯತೆಯನ್ನು ಪಡೆದನು. ತನ್ನ ೩೫ನೆ ವಯಸ್ಸಿನಲ್ಲಿ

ರಾಷ್ಟ್ರದ ಮುಖ್ಯಾಧಿಕಾರಿಯಾಗಿ ಮೂವತ್ತು ವರ್ಷಕಾಲ ಆ ನಗರವನ್ನು ಆಳಿದನು. ಕಠೋರತನದಿಂದಲ್ಲ; ತಾಳ್ಮೆಯನ್ನೂ ವಿವೇಕವನ್ನೂ ತೋರಿಸಿ ಜನರ ಒಪ್ಪಿಗೆಯಿಂದ ಸತ್ಕಾರ್ಯಗಳನ್ನು ನಡೆಸುತ್ತ ಜನರ ವಿಶ್ವಾಸಬಲದಿಂದಲೇ ಅಧಿಕಾರ ನಡೆಸಿದನು.




ಪೆರಿಕ್ಲೀಸ್

ಪೆರಿಕ್ಲೀಸನು ಪ್ರತಿಭಾವಂತರನ್ನು ತನ್ನ ಬಳಿಯಲ್ಲಿಟ್ಟುಕೊಂಡನು. ವಾಸ್ತುಶಿಲ್ಪ ವಿದ್ಯೆಗಳಲ್ಲಿ ಅತಿ ನಿಪುಣನಾದ **ಫೈಡಿಯಾಸ್** (Phidias) ಎಂಬಾತನು ಅವರಲ್ಲಿ ಸುಪ್ರಸಿದ್ಧನು. ಇರಾನೀ ದಂಡಯಾತ್ರೆಗಳ ಕಾಲದಲ್ಲಿ ಅಥೆನ್ಸ್ ನಗರವು ಅಗ್ನಿಗೆ ತುತ್ತಾಗಿತ್ತು. ಪಟ್ಟಣವನ್ನು ಪುನಃ ಕಟ್ಟಿ ಅಲಂಕಾರಗೊಳಿಸುವ ಕೆಲಸವನ್ನು ಪೆರಿಕ್ಲೀಸನೊಪ್ಪಿಸಿದ್ದು ಈತನಿಗೆ. ಅಥೆನ್ಸ್ ನಗರದ ಉನ್ನತ ಭಾಗದಲ್ಲಿ **ಪಾರ್ಥಿನಾನ್** (Parthenon) ಎಂಬ ಹೆಸರಿನಿಂದ ಪ್ರಸಿದ್ಧವಾದ ಮಂದಿರವಿದೆ. ಅದನ್ನು ಕಟ್ಟಿ ಆ ಬಳಿಯಲ್ಲಿ **ಅಥೀನೀ** (Athene) ದೇವತೆಯ ಭವ್ಯಮೂರ್ತಿಯನ್ನು ಫೈಡಿಯಾಸ್ ನಿಲ್ಲಿಸಿದನು. ನಮ್ಮ ಸರಸ್ವತೀ ದೇವತೆಯನ್ನು ಹೋಲುತ್ತ ಜ್ಞಾನಕ್ಕೆ ಅಧಿದೇವತೆಯಾದ ಆಕೆಯ ವಿಗ್ರಹವು ಲೋಕವಿಖ್ಯಾತಿಯನ್ನು ಪಡೆಯಿತು. ಇವೆರಡಲ್ಲದೆ ಫೈಡಿಯಾಸ್ ರಚಿಸಿದ ಮಂದಿರಗಳೂ ಮೂರ್ತಿಗಳೂ ಅಸಂಖ್ಯಾಕ. ಅವುಗಳಲ್ಲಿ ಎಷ್ಟೋ ನಷ್ಟವಾದಾಗ್ಯೂ ಫೈಡಿಯಾಸನ ಕೀರ್ತಿಯು ಶಾಶ್ವತವಾಗಿ ನಿಂತಿತು. ಪೆರಿಕ್ಲೀಸನು ಅಧಿಕಾರವಹಿಸಿದ ಬಳಿಕ ನಗರದ ಉದ್ಧಾರ ಮತ್ತು ಅಲಂಕಾರಗಳಿಂದ ಮಾತ್ರವೇ ತೃಪ್ತನಾಗಲಿಲ್ಲ. ಅಥೆನ್ಸ್ ನಗರವೇ ವಿದ್ಯೆಗೂ ಕಲೆಗೂ ತೌರೂರೆನಿಸುವಂತೆ ವಿದ್ವಾಂಸರನ್ನೂ ಕಲಾಕೋವಿದರನ್ನೂ ಅಲ್ಲಿ ಸೇರಿಸಿ ಪ್ರೋತ್ಸಾಹಿಸಿದನು. ಕಾವ್ಯ, ನಾಟಕ, ವಕ್ತೃತ್ವ, ತತ್ವಶಾಸ್ತ್ರ ಸಾಧನೆಗಳಲ್ಲೂ ವಾಸ್ತುಶಿಲ್ಪಕಲೆಗಳ ಉನ್ನತಿಯಲ್ಲಿಯೂ ಆತನ ಕಾಲವು ಗ್ರೀಕರ ಬಾಳಿನಲ್ಲಿ ಸುವರ್ಣಕಾಲವೆನಿಸಿತು.

ಅಥೆನ್ಸ್ ನಗರದ ಜನಸಾಮಾನ್ಯಕ್ಕೂ ಪೆರಿಕ್ಲೀಸನ ಜತೆಗಾರರಿಗೂ ಬುದ್ಧಿಕೌಶಲದಲ್ಲಿ ಬಹಳ ಅಂತರವಿತ್ತು. ಆದ್ದರಿಂದ ಸಾಮಾನ್ಯರು ಅವರಲ್ಲಿ ಬೇಸರ



ಅಥೆನ್ಸ್ ನಗರಭಾಗ—ಪಾರ್ಥಿನಾನ್



ಬಯಲಿನ ನಾಟಕಶಾಲೆ—ಗ್ರೀಕರದು

ಗೊಂಡರು. ಸೋಕ್ರಟೀಸನ ಮೇಲೆ ಹೊರಿಸಿದಂತೆಯೇ ಫೈಡಿಯಾಸನ ಮೇಲೆಯೂ ಧರ್ಮಭ್ರಷ್ಟನೆಂಬ ಆಪಾದನೆಯನ್ನು ಹೊರಿಸಿದರು. ಕಡೆಗೆ ಫೈಡಿಯಾಸನು ಪ್ರಾಣಬಿಟ್ಟುದು ಸೆರೆಮನೆಯಲ್ಲಿ. ಪೆರಿಕ್ಲೀಸನ ಆಪ್ತೇಷ್ಟ ರೆಲ್ಲರಿಗೂ ಬಂತು ಕಷ್ಟಕಾಲ. ಆ ವೇಳೆಗೆ ಇರಾನೀ ಶತ್ರುಗಳ ಭಯವೆಲ್ಲವೂ ಮಾಯವಾಗಿತ್ತು; ಹಿಂದೆ ವಿಪತ್ಕಾಲದಲ್ಲಿ ಏರ್ಪಡಿಸಿದ್ದ ಐಕಮತ್ಯ ನಾಶವಾಗಿ ಗ್ರೀಕರ ನಗರರಾಷ್ಟ್ರಗಳು ಪರಸ್ಪರಕಲಹಗಳಲ್ಲಿ ಪುನಃ ತೊಡಗಿದ್ದವು. ಅಥೆನ್ಸಿಗೂ ಸ್ಪಾರ್ಟ (Sparta) ವೆಂಬ ನಗರದವರಿಗೂ ದೊಡ್ಡ ಜಗಳವು ಪ್ರಾಪ್ತವಾಯಿತು. ಇಷ್ಟಮಿತ್ರರನ್ನು ಕಳೆದುಕೊಂಡು ಖಿನ್ನನಾಗಿದ್ದ ಪೆರಿಕ್ಲೀಸ್ ಆ ಜಗಳದಲ್ಲಿ ಜೇಗನೆ ಜಯವನ್ನು ಪಡೆಯದಾದನು. ಆಗ ಹಿತ ಶತ್ರುಗಳೆಲ್ಲರೂ ತಮ್ಮ ದ್ವೇಷಾಸೂಯೆಗಳನ್ನು ಕಾರಿದರು. ಇದರಿಂದ ಅವನಿಗೆ ಅಧಿಕಾರ ತಪ್ಪಿತು. ಅಪರಾಧಿಯೆಂದು ನಿಶ್ಚಯವಾಗಿ ದಂಡ ತೆರುವ ಅವ ಮಾನಕ್ಕೂ ಸಿಕ್ಕಬೇಕಾಯಿತು. ಅದೇ ವೇಳೆಗೆ ಅಥೆನ್ಸ್ ಪಟ್ಟಣದಲ್ಲಿ ಪ್ಲೇಗ್ ವ್ಯಾಧಿಯು ವ್ಯಾಪಿಸಿಕೊಂಡಿತು. ಆ ವ್ಯಾಧಿ ತಗಲಿ ಪೆರಿಕ್ಲೀಸನ ಸೋದರಿ ಯಲ್ಲದೆ ಸ್ವಂತ ಮಕ್ಕಳೂ ಅದಕ್ಕೆ ತುತ್ತಾಗಿಹೋದರು. ಪೆರಿಕ್ಲೀಸನ ಕೊನೆಯೂ ಸಮೀಪದಲ್ಲಿಯೇ ಇತ್ತು. ರೋಗಕ್ಕೆ ಸಿಕ್ಕಿ ನರಳಿ ಪೆರಿಕ್ಲೀಸನು ಕ್ರಿ.ಪೂ. ೪೨೯ರಲ್ಲಿ ಕಾಲವಾದನು.

ಪೆರಿಕ್ಲೀಸನು ಮೃತನಾದರೂ ಆತನ ಪ್ರೋತ್ಸಾಹದಿಂದ ತೋರಿದ ತೇಜಸ್ಸು ಮಂಕಾಗಿ ಹೋಗಲಿಲ್ಲ. ತರುವಾಯ ಕೆರಳಿದ ಯಾದವೀಕಲಹ ಕಾಲದಲ್ಲಿಯೂ ತೇಜಸ್ವಿಗಳಾಗಿ ಮೂವರು ಬಾಳಿದರು. ಅವರಲ್ಲಿ ಸೋಕ್ರಟೀಸೆಂಬಾತನಿಗೆ ಪೆರಿಕ್ಲೀಸನ ಮೃತಿಕಾಲದಲ್ಲಿ ಮಧ್ಯವಯಸ್ಸು. ಎರಡನೆಯಾತ ಪ್ಲೇಟೊ (Plato, ಹಿಂದಿ-ಅಫ್ಲಾತೂನ್) ಸೋಕ್ರಟೀಸನ ಶಿಷ್ಯ. ಪ್ಲೇಟೊವಿನ ಶಿಷ್ಯನಾಗಿದ್ದು ತರುವಾಯ ಸಿಕಂದರ್ (Alexander) ಎಂಬ ವಿಖ್ಯಾತ ವೀರನಿಗೆ ಗುರುವಾಗಿದ್ದ ಅರಿಸ್ಟಾಟಲ್ (Aristotle-ಹಿಂದಿ-ಅರಸ್ತೂ) ಮೂರ ನೆಯಾತ.

ಮುಖ್ಯಪ್ರಶ್ನೆ ೧೬ : ಸೋಕ್ರಟೀಸ್, ಪ್ಲೇಟೊ ಮತ್ತು ಅರಿಸ್ಟಾಟಲ್ ಎಂಬವರು ಮಾಡಿದ ಮಹತ್ಕಾರ್ಯವೇನು?


ಸೋಕ್ರಾತ್ ಅಥವಾ **ಸೋಕ್ರಟೀಸ್** ಮೇಲೆ ಮೇಲೆ ಪ್ರಶ್ನೆ ಹಾಕುತ್ತಲಿರು ವವನು. ಪ್ರಾಜ್ಞನಾದಾಗ್ಯೂ ಅಜ್ಞಾನಿಯಂತೆ ಸರಳರೀತಿಯ ಪ್ರಶ್ನೆಗಳನ್ನು ಕೇಳುತ್ತ ಬಂದ ಉತ್ತರಗಳನ್ನು ಪ್ರಶ್ನೆಗಳಿಂದಲೇ ವಿಮರ್ಶೆಮಾಡತಕ್ಕವನು.

ಆತನೊಡನೆ ವಾದಕ್ಕೋ ಚರ್ಚೆಗೋ ತೊಡಗಿದವರು ಆ ಪ್ರಶ್ನೆಗಳಿಗೆ ಉತ್ತರ ಕೊಡುವುದರಲ್ಲಿ ದಿಗ್ಭ್ರಾಂತರಾಗಿ ಬಿಡುತ್ತಿದ್ದರು. ಒಂದುಸಲ ಹೇಳಿದ್ದನ್ನು ಮತ್ತೊಂದುಸಲ ತಾವೇ ಖಂಡಿಸುತ್ತ ತಮ್ಮ ತಪ್ಪುಗಳಲ್ಲಿ ತಾವೇ ಸಿಕ್ಕಿಕೊಳ್ಳುತ್ತಿದ್ದರು. ಬುದ್ಧಿಗೊಪ್ಪದ ಅಂಶವನ್ನು ಸೋಕ್ರಟೀಸನು ಎಂದಿಗೂ ಅಂಗೀಕಾರಮಾಡಲಾರನು. ಆದ್ದರಿಂದ ಬುದ್ಧಿಯೇ ಪ್ರಮಾಣವೆನಿಸಿದನು. ಪೂರ್ವಾಚಾರನಿಷ್ಠರಿಗೂ ಸಂಪ್ರದಾಯಶರಣರಿಗೂ ಆತನ ಪ್ರಶ್ನೆಗಳಿಗೆ ಸಮಾಧಾನಹೇಳಲಾಗಲಿಲ್ಲ. ಕಡೆಗೆ ಅವರೆಲ್ಲರೂ ಸೇರಿ ಆತನನ್ನು ಅಪವಾದನೆಗೆ ಗುರಿಮಾಡಿದರು. ತರುಣರ ಭಕ್ತಿಭಾವವನ್ನು ಕೆಡಿಸುತ್ತಾನೆಂಬ ಆರೋಪಣೆಯಾಯಿತು. ಕಡೆಗೆ ಆತನಿಗೆ ವಿಷಪಾನಮಾಡಿಸಿ ಕೊಂದರು.



ಸೋಕ್ರಟೀಸ್


ಸೋಕ್ರಟೀಸನ ಶಿಷ್ಯರಲ್ಲೆಲ್ಲ ಅತಿಸಮರ್ಥನಾದಾತನು **ಪ್ಲೇಟೊ.** ಪೆರಿಕ್ಲೀಸ್ ತೀರಿಕೊಂಡ ಎರಡು ವರ್ಷಗಳ ತರುವಾಯ ಹುಟ್ಟಿದ ಆತನು ಜೀವನ ನಡೆಸಿದ್ದು ರಾಷ್ಟ್ರದಲ್ಲಿ ಅಂತಃಕಲಹಗಳು ರೇಗುತ್ತಿದ್ದಾಗ. ಆತನು ಮಹಾತತ್ತ್ವಜ್ಞ. ಬ್ರಹ್ಮಾಂಡ ಸಂಬಂಧವಾದ ಅಮೋಘ ವಿಚಾರಗಳನ್ನಲ್ಲದೆ ಸುತ್ತಮುತ್ತಲಿನ ಸಮಾಜಪರಿಸ್ಥಿತಿಯನ್ನೂ ಕುರಿತು ಆಲೋಚಿಸಿ ಮಾನವಸಮಾಜ ಸಂಬಂಧವಾದ ಶಾಸ್ತ್ರವನ್ನು ಆತನು ವಿಸ್ತರಿಸಿ ಬರೆದನು. ಆತನು ಬರೆದ ಒಂದು ಪುಸ್ತಕದಲ್ಲಿ ಆದರ್ಶರಾಷ್ಟ್ರವೊಂದರ ವರ್ಣನೆಯಿದೆ. ಆಡಳಿತವೂ ಜನಸಂಘಗಳೂ ಯಾವ ರೀತಿಯಲ್ಲಿದ್ದರೆ ಅತ್ಯುತ್ತಮವೆಂದು ಆತನು ಆಲೋಚಿಸಿ ಅದರಲ್ಲಿ ಬರೆದಿದ್ದಾನೆ. ಇದರಿಂದ ಆದ ಪರಿಣಾಮವೇನು? ಗ್ರೀಸ್ ಮುಂತಾದ ಪಾಶ್ಚಾತ್ಯ ದೇಶಗಳಲ್ಲಿ ಜನರು ಹಿಂದಿನಿಂದಲೂ ನಡೆದುಬಂದ ಏರ್ಪಾಡುಗಳೇ ಸರ್ವಶ್ರೇಷ್ಠವೆಂದು ನಂಬದೆ ಪ್ರತ್ಯಂಶವನ್ನೂ ತಮ್ಮ ಬುದ್ಧಿಬಲದಿಂದ ಪರೀಕ್ಷಿಸುವುದಕ್ಕೆ ತೊಡಗಿದರು. ತಮ್ಮ ವಿಚಾರದೃಷ್ಟಿಗೊಪ್ಪುವ ಏರ್ಪಾಡುಗಳನ್ನು ಸಮಾಜದಲ್ಲಿಯೂ



ಪ್ಲೇಟೊ

ರಾಷ್ಟ್ರದಲ್ಲಿಯೂ ತಾವೇ ಬುದ್ಧಿಪೂರ್ವಕವಾಗಿ ನಿರ್ಮಿಸಬೇಕೆಂದು ಭಾವಿಸಿದರು. ಇದು ಪ್ಲೇಟೋ ಮಹಿಮೆ. ಪ್ಲೇಟೊ ನಡೆಸುತ್ತಿದ್ದ ಶಾಲೆಗೆ **ಅಕ್ಯಾಡೆಮಿ** (Academy) ಎಂದು ಹೆಸರು. ವಿದ್ಯಾಮಂದಿರಕ್ಕೆ ಸಂಬಂಧಿಸಿದ ಇತರ ಶಬ್ದಗಳು ಆ ಶಬ್ದದಿಂದ ಪಾಶ್ಚಾತ್ಯ ಭಾಷೆಗಳಲ್ಲಿ ಹುಟ್ಟಿ ರೂಢಿಯಾಗಿವೆ.

ಅಕ್ಯಾಡೆಮಿಯಲ್ಲಿದ್ದ ಶಿಷ್ಯರಲ್ಲಿ **ಅರಿಸ್ಟಾಟಲ್** ಒಬ್ಬ. ಆತನು ಅಥೆನ್ಸ್ ಪಟ್ಟಣದವನಲ್ಲ. ಗ್ರೀಸಿಗೆ ಉತ್ತರದಲ್ಲಿರುವ ಮ್ಯಾಸಿಡೋನಿಯ ಎಂಬ ಪ್ರದೇಶದವನು. ಪ್ಲೇಟೋ ಶಿಷ್ಯನಾಗಿ ತನ್ನ ಗುರುವನ್ನು ಮೀರಿಸಿದವನು. ಗುರುವು ಹೇಳಿದ್ದೆಲ್ಲವನ್ನೂ ಅರಿಸ್ಟಾಟಲ್ ಒಪ್ಪಲಿಲ್ಲ; ತನ್ನದೇ ಮಾರ್ಗವನ್ನು ಹುಡುಕಿದನು. ಗುರುವು ತೀರಿಕೊಂಡ ಬಳಿಕ ಅರಿಸ್ಟಾಟಲ್ ಪ್ರತ್ಯೇಕವಾಗಿ **'ಲಿಸಿಯಂ'** (Lyceum) ಎಂಬ ಶಾಲೆಯನ್ನು ಅಥೆನ್ಸ್ ಪಟ್ಟಣದಲ್ಲಿಯೇ ಸ್ಥಾಪಿಸಿದನು. ಪದಾರ್ಥವಿಜ್ಞಾನ ಶಾಸ್ತ್ರಗಳೆಲ್ಲಕ್ಕೂ ಆತನೇ



ಅರಿಸ್ಟಾಟಲ್

ಮೂಲಸ್ಥಾಪಕನು. ಸುತ್ತಮುತ್ತಲಿರುವ ವಸ್ತುಗಳ ಸ್ವಭಾವವನ್ನು ಪರೀಕ್ಷಿಸಿ ತಿಳಿಯಲು ಪದಾರ್ಥಗಳ ವರ್ಗೀಕರಣವನ್ನು ಆತನೇ ಮೊದಲಿಟ್ಟವನು. ಪದಾರ್ಥಗಳನ್ನು ಸಂಗ್ರಹಿಸಿ ವರ್ಗಗಳಾಗಿ ವಿಂಗಡಿಸುವುದರಲ್ಲಿ ಆತನಿಗೆ ನೂರಾರು ಮಂದಿ ಸಹಾಯಕರಿದ್ದರು. ಪದಾರ್ಥವಿಜ್ಞಾನವನ್ನಲ್ಲದೆ ರಾಷ್ಟ್ರ ಶಾಸ್ತ್ರವನ್ನೂ ಅರಿಸ್ಟಾಟಲ್ ವಿಸ್ತರಿಸಬಲ್ಲವನಾದನು. ಮ್ಯಾಸಿಡನ್ ದೊರೆಯಾದ ಸಿಕಂದರನಿಗೆ ಅರಿಸ್ಟಾಟಲ್ ಗುರುವಾಗಿದ್ದ ಕಾರಣ ಆತನಿಗೆ ಬೇಕಾದಷ್ಟು ಸಹಾಯದೊರಕಿತು. ಅರಿಸ್ಟಾಟಲ್ ಶಿಷ್ಯನಾದ ಸಿಕಂದರ್ ದೊರೆ ಆ ಕಾಲದಲ್ಲಿ ಪರಿಚಿತವಾದ ಪೃಥ್ವಿಯ ಅರ್ಧಭಾಗದಲ್ಲೆಲ್ಲ ಗ್ರೀಕರ ಪ್ರಭಾವ ನೆಲೆಗೊಳ್ಳುವಂತೆ ಪ್ರಚಾರಮಾಡಿದನು.

ಅಭ್ಯಾಸಗಳು

೧. ಈಜಿಪ್ಟ ದೇಶಕ್ಕೂ ಭೂಮಧ್ಯಸಮುದ್ರದ ಈಶಾನ್ಯತೀರದ ಒತ್ತಿನಲ್ಲಿರುವ ಪ್ರದೇಶಗಳಿಗೂ ಕಾಣುವ ಪ್ರಾಕೃತಿಕ ಭೇದಗಳೇನು? ಆ ಭೇದಗಳ ಪರಿಣಾಮ ಅಲ್ಲಿಯ ಜನಜೀವನದಲ್ಲಿ ಹೇಗೆ ತೋರಿತು?

೨. ಥಿಸ್ಯೂಸ್ ವೀರನ ಕಥೆಯನ್ನೂ ಟ್ರಾಯ್ ದಹನದ ಕಥೆಯನ್ನೂ ಹೇಳಿ.

೩. ಈಗಿನ ಕಾಲದಲ್ಲಿ ಜನಸ್ವಾಮ್ಯತತ್ತ್ವಕ್ಕನುಸಾರವಾಗಿ ನೆಲೆಸಿರುವ ರಾಷ್ಟ್ರ ಪದ್ಧತಿಗಳಿಗೂ ಪುರಾತನ ಗ್ರೀಕರ ಪದ್ಧತಿಗಳಿಗೂ ಇರುವ ವ್ಯತ್ಯಾಸಗಳೇನು?

೪. 'ಯೂರೋಪಿನಲ್ಲಿ ಇರಾನೀ ಸಾಮ್ರಾಜ್ಯವು ನೆಲೆಸಬಹುದಾಗಿತ್ತು'—ಇದಕ್ಕೆ ಅಡ್ಡಿಯಾದುದೇನು?

೫. ೨೫ ನೇ ಪುಟದಲ್ಲಿ ಕೊಟ್ಟಿರುವ ಅಥೀನೀದೇವತೆಯ ಚಿತ್ರವನ್ನು ಸರಸ್ವತಿ ಅಥವಾ ವಿನಾಯಕ ಅಥವಾ ಕಾಳಿಕಾದೇವಿಯ ವಿಗ್ರಹದೊಂದಿಗೆ ಹೋಲಿಸಿದಾಗ ಕಾಣುವ ವ್ಯತ್ಯಾಸಗಳೇನು? ಪಾರ್ಥಿನಾನ್ ಮಂದಿರಕ್ಕೂ ಹಿಂದುದೇವಾಲಯಕ್ಕೂ ಅಥವಾ ಮುಸಲ್ಮಾನರ ಮಸೀದಿಗೂ ಕಾಣುವ ಭೇದಗಳಾವುವು?

೬. ಸಣ್ಣ ರಾಷ್ಟ್ರವಾದಾಗ್ಯೂ ಅಥೆನ್ಸಿನಲ್ಲಿ ಅಲ್ಪಕಾಲಾವಧಿಯಲ್ಲಿ ಅನೇಕ ಮಹಾಪುರುಷರು ತಲೆದೋರಿದುದಕ್ಕೂ ಅವರ ಕೆಲಸ ಅಷ್ಟು ಶಾಶ್ವತವಾಗಿ ನಿಲ್ಲುವುದಕ್ಕೂ ಕಾರಣಗಳೇನೆಂದು ಯೋಚಿಸಿ ಬರೆದಿಡಿ.

೪ನೇ ಅಧ್ಯಾಯ

ವಿಶ್ವದೃಷ್ಟಿಯ ಸಿಕಂದರ್

ಮುಖ್ಯಪ್ರಶ್ನೆ ೧೭ : ಮ್ಯಾಸಿಡನ್ ದೊರೆಯಾದ ಫಿಲಿಪ್ಪನು ತನ್ನ ಮಗ ಸಿಕಂದರನಿಗೆ ಮಾರ್ಗವನ್ನು ಸಿದ್ಧಗೊಳಿಸಿದ ಬಗೆ ಹೇಗೆ?

ಐವತ್ತು ವರ್ಷಕಾಲ ಮಾತ್ರ ವೈಭವದಿಂದ ಮೆರೆದು ಅಥೆನ್ಸ್ ನಗರವು ಕ್ಷೀಣವಾಯಿತು. ಗ್ರೀಕರಲ್ಲಿ ಬಲಿತ ಅನೈಕಮತ್ಯವೇ ಅದಕ್ಕೆ ಕಾರಣ. ತಮ್ಮಲ್ಲಿಯೇ ಜಗಳವಾಡುತ್ತಲಿದ್ದ ಗ್ರೀಕರನ್ನು ತನ್ನ ಸ್ವಂತ ಬಲದಿಂದ ವಶ ಪಡಿಸಿಕೊಂಡ ಶೂರನೊಬ್ಬನು ಆಗ ಕಾಣಿಸಿಕೊಂಡನು. ಆತನ ಸಾಮರ್ಥ್ಯದ ಪರಿಣಾಮ ಹಿರಿದಾಯಿತು. ಆಗ ತಿಳಿದಿದ್ದ ಜಗತ್ತಿನಲ್ಲೆಲ್ಲ ಗ್ರೀಕರ ಮಹಿಮೆ ಹರಡುವಂತಾಯಿತು. ಹಿಂದುಸ್ತಾನದಲ್ಲಿಯೂ ಕಾಣಿಸಿಕೊಂಡಿತು.

ಬಾಲ್ಕನ್ ಪರ್ಯಾಯದ್ವೀಪದ ಉತ್ತರಭಾಗದಲ್ಲಿ **ಮ್ಯಾಸಿಡೋನಿಯ** ಎಂಬ ಸಣ್ಣ ರಾಜ್ಯವೊಂದಿತ್ತು. (ನಕ್ಷೆ ನೋಡಿ.) ಗ್ರೀಕರಂತೆಯೇ ಅಲ್ಲಿಯ ಜನರೂ ಆರ್ಯರಾಶಿಯವರಾಗಿದ್ದಾಗ್ಯೂ ಗ್ರೀಕರಷ್ಟು ನಾಗರಿಕರಾಗಿರಲಿಲ್ಲ. ಮ್ಯಾಸಿಡನ್ ರಾಜಕುಮಾರನೊಬ್ಬನು ಗ್ರೀಕರ ಥೀಬ್ಸ್ (Thebes) ಪಟ್ಟಣ ದಲ್ಲಿ ಮೂರುವರ್ಷಕಾಲವಿದ್ದು ಸುಶಿಕ್ಷಿತನಾದನು. ಅಥೆನ್ಸ್ ನಗರಕ್ಕೆ ಪ್ರತಿಸ್ಪರ್ಧಿಯಂತಿದ್ದ ಥೀಬ್ಸ್ ನಗರದಲ್ಲಿ ಶಿಕ್ಷಿತನಾದ ತರುವಾಯ ಕ್ರಿ. ಪೂ. ೩೫೯ರಲ್ಲಿ ಮ್ಯಾಸಿಡನ್ ರಾಜ್ಯದ ಗದ್ದುಗೆಯನ್ನೇರಿದನು. ಆತನೇ **ಫಿಲಿಪ್**; ಲೋಕೈಕವೀರನೆನಿಸಿದ ಸಿಕಂದರನ ತಂದೆ. ರಾಜನಾದ ಸ್ವಲ್ಪ ಕಾಲದಲ್ಲಿಯೇ ಫಿಲಿಪ್ ತಾನು ಪಡೆದಿದ್ದ ಶಿಕ್ಷಣದ ಮಹಿಮೆಯನ್ನು ಪ್ರಕಾಶಪಡಿಸಿದನು.

ಥೀಬ್ಸ್ ಪಟ್ಟಣದಲ್ಲಿ ಶಿಕ್ಷೆಪಡೆದ ಫಿಲಿಪ್ಪನು ಮೂರಂಶಗಳನ್ನು ನಿರ್ಧರಿಸಿ ಕೊಂಡಿದ್ದನು. ಒಂದನೆಯದಾಗಿ ಸಂಕಲ್ಪಬಲವನ್ನೂ ಐಕಮತ್ಯವನ್ನೂ ಪಡೆದರೆ ಯಾವ ಜನರಾದರೂ ಒಟ್ಟು ಜಗತ್ತನ್ನೇ ಗೆಲ್ಲಬಹುದು; ಎರಡನೆಯ ದಾಗಿ ಸೇನಾಬಲವೆಂಬುದು ಧೈರ್ಯವನ್ನೂ ಕಷ್ಟಸಹಿಷ್ಣುತೆಯನ್ನೂ ಪಡೆದಿರು ವುದಲ್ಲದೆ ಶೀಘ್ರಗಾಮಿಯಾಗಿಯೂ ಇರಬೇಕು; ಮೂರನೆಯದಾಗಿ ಸುಶಿಕ್ಷಿತ ನಾಗಿರುವುದು ಲೇಸಾದುದರಿಂದ ತನ್ನ ಮಗನಿಗೆ ಒಳ್ಳೆ ಶಿಕ್ಷಣ ಕೊಡಿಸ ತಕ್ಕದ್ದು ಯುಕ್ತ. ಮೊದಲನೆ ಅಂಶದಿಂದ ಫಿಲಿಪ್ಪನಿಗೆ ಗ್ರೀಸೆಲ್ಲವನ್ನೂ ಒಟ್ಟುಗೂಡಿಸಿ ಇರಾನೀ ಸಾಮ್ರಾಜ್ಯವನ್ನು ಮುತ್ತುವ ಆಸೆ ಹುಟ್ಟಿತು.

ಎರಡನೆ ಅಂಶವನ್ನನುಸರಿಸಿ ತನ್ನ ಸೈನ್ಯಗಳನ್ನು ಹೊಸ ರೀತಿಯಲ್ಲಿ ಸನ್ನಾಹ ಗೊಳಿಸಿದನು. ಅದರಿಂದ ವೈರಿಗಳಿಗೆ ದಿಗ್ಭ್ರಾಂತಿಯೇ ಗತಿಯಾಯಿತು. ಮೂರನೆಯ ಅಂಶದ ಪರಿಣಾಮವಾಗಿ ಸಿಕಂದರನಿಗೆ ಅರಿಸ್ಟಾಟಲ್ ಗುರು ವಾದನು.

ಮೊದಲನೆ ಉದ್ದೇಶವನ್ನು ಮಾತ್ರ ಫಿಲಿಪ್ ಸಾಧಿಸಿಕೊಂಡನು. ಗ್ರೀಕರ ನಗರರಾಷ್ಟ್ರಗಳೆಲ್ಲ ಆತನೆದುರಿನಲ್ಲಿ ಸೋತು ವಶವಾದವು. ಭೂಮಧ್ಯ ಸಮುದ್ರದಿಂದ ಹಿಂದುಸಾಗರದವರೆಗೂ ಇದ್ದ ಇರಾನೀ ಸಾಮ್ರಾಜ್ಯವನ್ನು ಮುತ್ತುವುದು ಮುಂದಿನ ಕೆಲಸವಾಗಿತ್ತು. ಗ್ರೀಕರೆಲ್ಲರನ್ನೂ ತನ್ನ ಸ್ವಾಧೀನ ದಲ್ಲಿಟ್ಟುಕೊಂಡು ದಂಡಯಾತ್ರೆಯನ್ನು ಹೇಗೆ ನಡೆಯಬೇಕೆಂದು ಗೊತ್ತು ಮಾಡಿ ಹೊರಡುವುದರಲ್ಲಿದ್ದನು. ಆ ಸಮಯಕ್ಕೆ ಸರಿಯಾಗಿ ಫಿಲಿಪ್ ದುರ್ಮರಣಕ್ಕೆ ಸಿಕ್ಕಿದನು. ಆದರೇನು! ತಂದೆಯ ಉದ್ದೇಶವನ್ನು ಸಾಧಿಸಲು ಮಗನು ಆತುರನಾಗಿದ್ದನು. ಇನ್ನೂ ಇಪ್ಪತ್ತು ವರ್ಷದವನಾದರೂ ಸಿಕಂದ ರನು ರಾಜ್ಯವನ್ನು ತನ್ನ ಅಧೀನಕ್ಕೆ ತಂದುಕೊಂಡು ಸಿದ್ಧನಾದನು.

ಮುಖ್ಯಪ್ರಶ್ನೆ ೧೮: ಪೃಥ್ವಿಯ ಎಷ್ಟು ಭಾಗವನ್ನು ಸಿಕಂದರನು ಗೆದ್ದುದು? ಕಡೆಗೆ ಆತನ ಪ್ರಯತ್ನವು ಏಕೆ ನಿಂತಿತು?

ಮೊದಲು ಗ್ರೀಕರೇ ಅಸಮಾಧಾನಪಟ್ಟು ಸಿಕಂದರನ ಒಡೆತನವನ್ನು ಒಪ್ಪದಾದರು. ಆಗ ಸಿಕಂದರನು ಕ್ರೌರ್ಯದಿಂದ ಅವರನ್ನು ದಂಡಿಸ ಬೇಕಾಯಿತು. ದಂಗೆಯೆದ್ದ ಥೀಬ್ಸ್ ಪಟ್ಟಣಿಗರನ್ನು ದಂಡಿಸಲು ಆ ಪಟ್ಟಣ ವನ್ನೇ ನೆಲಸಮಮಾಡಿದನು. ಗ್ರೀಕರು ಶರಣುಶರಣೆಂದರು. ತರುವಾಯ ಸಿಕಂದರ್ ಸೈನ್ಯವನ್ನು ನಡೆಸಿಕೊಂಡು **ಏಷ್ಯಮೈನರ್** ಪ್ರದೇಶದೊಳಕ್ಕೆ ನುಗ್ಗಿದನು. ಇರಾನೀ ಪ್ರಭುಗಳು ಸಮುದ್ರತೀರದಲ್ಲಿ ಬಲಿಷ್ಠರಾಗಿದ್ದುದರಿಂದ ಸಿಕಂದರನು ಭೂಮಧ್ಯಸಮುದ್ರದ ತೀರದಲ್ಲಿದ್ದ ಇರಾನೀ ಬಂದರುಗಳನ್ನು ಆಕ್ರಮಿಸಬೇಕಾಗಿತ್ತು. ಸಮುದ್ರತೀರವನ್ನು ವಶಪಡಿಸಿಕೊಂಡ ಬಳಿಕ ಸಿಕಂದರ್ ಪರ್ವತಪ್ರಾಂತವನ್ನು ದಾಟಿ **ಸಿರಿಯ** ಪ್ರಾಂತವನ್ನು ಪ್ರವೇಶಿಸಿ ದನು. ಇರಾನೀ ಸಮ್ರಾಟನಾಗಿದ್ದ ಮುಮ್ಮಡಿ ದಾರಾ ತನ್ನ ದೊಡ್ಡ ಸೈನ್ಯ ವನ್ನು ನಡೆಸಿಕೊಂಡು ಬಂದು ಎದುರಾದನು. **ಇಸ್ಸಸ್** (Issus) ಎಂಬೆಡೆಯಲ್ಲಿ (ಕ್ರಿ.ಪೂ. ೩೩೩ರಲ್ಲಿ) ಕದನವಾಯಿತು. ಫಿಲಿಪ್ಪನಿಂದ ಶಿಕ್ಷಿತವಾದ ಸಿಕಂದರನ ಸೈನ್ಯವು ಜಯವನ್ನು ಸಾಧಿಸಿತು. ದಾರಾ ಸಮ್ರಾಟನು ಯುದ್ಧಭೂಮಿಯಿಂದ ಪಲಾಯನಮಾಡಿದನು. ಈ ಜಯದ ಪರಿಣಾಮವಾಗಿ ಸಿಕಂದರನು ಸಿರಿಯ

ಪ್ಯಾಲೆಸ್ಟೈನ್‌ಗಳನ್ನು ಗೆದ್ದು **ಈಜಿಪ್ಟನ್ನು** ಪ್ರವೇಶಿಸಿದನು. ಇರಾನೀ ಪ್ರಭುತ್ವದಲ್ಲಿ ಅತೃಪ್ತಿಗೊಂಡಿದ್ದ ಈಜಿಪ್ಟ್ ಜನರು ವಿರೋಧವನ್ನು ತೋರಲೇ ಇಲ್ಲ. ಸಿಕಂದರನ ಹೆಸರನ್ನು ಸ್ಮರಣೆಗೆ ತರುವ **ಅಲೆಕ್ಸಾಂಡ್ರಿಯ** (Alexandria) ಪಟ್ಟಣ (ಇಸ್ಕಂದರಿಯ) ಸ್ಥಾಪಿತವಾದುದು ಈ ಸಂದರ್ಭದಲ್ಲಿಯೇ.

ಆ ಬಳಿಕ ಇರಾನೀ ಸಾಮ್ರಾಜ್ಯದ ಹೃದಯವನ್ನೇ ಆಕ್ರಮಿಸಲು ಸಿಕಂದರನು ಸಿದ್ಧನಾದನು. ತನ್ನ ಸೈನ್ಯವನ್ನು ಈಜಿಪ್ಟಿನಿಂದ ಹೊರಡಿಸಿ ಮರುಭೂಮಿಯನ್ನು ಹಾಯ್ದು ಯೂಫ್ರಟೀಸ್ ಟೈಗ್ರಿಸ್ ನದಿಗಳ ಬಳಿಗೆ ಬಂದನು. ದಾರಾ ಸಮ್ರಾಟನು ಮತ್ತೊಂದು ಸೈನ್ಯವನ್ನು ಸಜ್ಜುಗೊಳಿಸಿ **ಅರ್ಬೆಲ** (Arbela) ಎಂಬೆಡೆಯಲ್ಲಿ ಕಾಳಗಕ್ಕೆ ನಿಂತನು. ಪುನಃ ಸೋಲೇ ಸಂಭವಿಸಿತು. ಸಮ್ರಾಟನು ಪ್ರಾಣವನ್ನುಳಿಸಿಕೊಳ್ಳಲು ಮತ್ತೊಮ್ಮೆ ಪಲಾಯನ ಪರನಾಗಬೇಕಾಯಿತು. ಜಯಶಾಲಿಯಾದ ಸಿಕಂದರನು ಕೂಡಲೇ **ಬಾಬಿಲನ್** ಪಟ್ಟಣಕ್ಕೂ ಅಲ್ಲಿಂದ ರಾಜಧಾನಿಯಾಗಿದ್ದ **ಸೂಸ** (Susa) ನಗರಕ್ಕೂ ಹೊರಟು ಅವುಗಳನ್ನು ಸುಲಭವಾಗಿ ವಶಪಡಿಸಿಕೊಂಡನು. ಇರಾನೀ ಚಕ್ರವರ್ತಿಯ ಅರಮನೆಗಳೂ ಅಷ್ಟೈಶ್ವರ್ಯವೂ ಅವನ ಅಧೀನವಾಯಿತು. ಇನ್ನು ಮುಂದೆ ಸಿಕಂದರನು ಏನು ಮಾಡಬೇಕು?

ಮೊದಲು ಇರಾನೀ ಸಾಮ್ರಾಜ್ಯದ ಪ್ರತಿಭಾಗವನ್ನೂ ವಶಪಡಿಸಿಕೊಳ್ಳುವ ಸಂಕಲ್ಪವನ್ನು ಸಿಕಂದರ್ ಕೈಕೊಂಡನು. ತನ್ನ ಸೈನ್ಯವನ್ನು ಸಾಮ್ರಾಜ್ಯದ



ಪರ್ಸೆಪಾಲಿಸ್ ನಗರದ ಗುರುತುಗಳು

ಸಮಸ್ತಭಾಗಗಳಲ್ಲಿಯೂ ನಡೆಸಲು ಸಿದ್ಧನಾಗಿದ್ದನು. **ಪರ್ಸೆಪಾಲಿಸ್** (Persepolis) ಎಂಬ ನಗರದಲ್ಲಿ ಅದ್ಭುತವಾದ ಅರಮನೆ ಕಟ್ಟಿಕೊಂಡಿದ್ದನು ದಾರಾ ಚಕ್ರವರ್ತಿ. ಈಗಲೂ ಅದರ ಗುರುತುಗಳು ಕಾಣುತ್ತವೆ. ಸಿಕಂದರನು ಅಲ್ಲಿಗೆ ಹೊರಟು ಅದನ್ನು ಸುಟಿಸಿಬಿಟ್ಟನು. ತರುವಾಯ ದಾರಾ ಸಮ್ರಾಟನನ್ನು ಅಟ್ಟಿಸಿಕೊಂಡು ಹೊರಟನು. ಆ ಹತಭಾಗ್ಯ ಸಮ್ರಾಟನನ್ನು ಆತನ ಅಧಿಕಾರಿಗಳಲ್ಲಿ ಕೆಲವರೇ ದ್ರೋಹಿಗಳಾಗಿ ಕೊಂದುಬಿಟ್ಟರು. ಸಿಕಂದರನು ಬರುವ ವೇಳೆಗೆ ಹತ್ಯವಾಗಿಹೋಗಿತ್ತು. ಇನ್ನು ಮುಂದೆ ಎಲ್ಲಿಗೆ?

ಕ್ಯಾಸ್ಪಿಯನ್ ಸಮುದ್ರದ ಮೂಡಲಿಗೆ ಇರಾನೀ ಚಕ್ರಾಧಿಪತ್ಯದ ಪ್ರಾಂತಗಳಿದ್ದುವು. ಈಗ ನಾವು ತುರ್ಕಸ್ತಾನ್ ಆಫ್‌ಘಾನಸ್ತಾನ್ ಎಂದು ಕರೆಯುವ ಭಾಗಗಳಲ್ಲಿ ಇರಾನೀ ಸಾಮ್ರಾಜ್ಯವು ಹಬ್ಬಿತ್ತು. ಒಂದೊಂದನ್ನಾಗಿ ಆ ಭಾಗಗಳನ್ನೂ ಸಿಕಂದರ್ ಗೆದ್ದುಕೊಂಡನು. ಕಾಬೂಲ್ ಪ್ರಾಂತದಲ್ಲಿದ್ದಾಗ ಹಿಂದುಸ್ತಾನವೇ ಮುಂದಿನ ಹೆಜ್ಜೆಗೆ ಸಿಕ್ಕುವಂತಿತ್ತು. ಮುಂದಕ್ಕೆ ಹೊರಟನು ಸಿಕಂದರ್.

ಖೈಬರ್ ಕಣಿವೆಯ ಮಾರ್ಗವಾಗಿ ಬಂದು ಸಿಂಧುನದಿಯನ್ನು ದಾಟಿದ ತರುವಾಯ ಸಿಕಂದರನಿಗೆ ವಿರೋಧ ತೋರಿತು. ಭಾರತೀಯರಾಜನಾದ ಪೂರುವು ಸೈನ್ಯವನ್ನು ನಿಲ್ಲಿಸಿ **ವಿತಸ್ತಾತೀರದಲ್ಲಿ** (ಜೀಲಂ) ಯುದ್ಧವನ್ನೊಡ್ಡಿದನು. ಗ್ರೀಕರು ಆನೆಗಳೊಡನೆ ಯುದ್ಧವನ್ನು ಮಾಡಿರಲಿಲ್ಲ. ಆದರೂ ಅವರೇ ಜಯಶಾಲಿಗಳಾದರು. ಪೂರು ಮಹಾರಾಜನು ಒಪ್ಪಂದಕ್ಕೆ ನಿಂತು ಗೌರವ ಪಡೆದನು. ಆದರೆ ಸಿಕಂದರನು ಯಮುನಾಗಂಗಾ ನದಿಗಳ ಬಳಿಗೆ ಹೊರಡಲಾಗಲಿಲ್ಲ. ಅಷ್ಟು ದೂರ ಬಂದಿದ್ದವನಿಗೇನು ತಡೆಯಾಯಿತು?

ಗಂಗಾನದಿಯ ಬಯಲನ್ನು ಸಿಕಂದರನು ಗೆದ್ದಿದ್ದರೆ ಹಿಂದುಸ್ತಾನದಲ್ಲಿ ಗ್ರೀಕರ ಸಾಮ್ರಾಜ್ಯವು ನೆಲೆಸಬಹುದಾಗಿತ್ತು. ಮ್ಯಾರಥಾನ್ ಕದನದಲ್ಲಿ ಗ್ರೀಕರು ಸೋತುಹೋಗಿದ್ದರೆ ಯೂರೋಪ್ ಖಂಡವು ಇರಾನೀ ಪ್ರಭುತ್ವಕ್ಕೊಳಗಾಗಬಹುದಾಗಿತ್ತು. ಅತ್ತ ಮ್ಯಾರಥಾನ್ ಕದನದಲ್ಲಿ ಗ್ರೀಕರು ಗೆದ್ದುಕೊಂಡರು. ಇತ್ತ **ವೇಪಸೀ** (Beas) ತೀರದಲ್ಲಿ ಸಿಕಂದರನ ಸೈನಿಕರು ಮುಂದೆ ಹೊರಡುವುದಿಲ್ಲವೆಂದು ಮುಷ್ಕರಹಿಡಿದರು. ಸಿಕಂದರನೇನು ಮಾಡಿದಾಗ್ಯೂ ಅವರು ತಮ್ಮ ಹಟವನ್ನು ಬಿಡದಾದರು. ಆಗ ಸಿಕಂದರನು ದೋಣಿಗಳನ್ನು ಸಂಗ್ರಹಿಸಿ ಸಿಂಧುನದಿಯ ಮೇಲೆ ಯಾನನಡೆಸಿ ಪಶ್ಚಿಮಕ್ಕೆ ಹಿಂತಿರುಗಬೇಕಾಯಿತು. ಹಿಂತಿರುಗಿ ಬರುತ್ತ ಬಲೂಚಿಸ್ತಾನ ದಕ್ಷಿಣ ಫಾರ್ಸಿಸ್ತಾನಗಳ ಮರಳುಕಾಡುಗಳಲ್ಲಿ ಅತಿಪ್ರಯಾಸವಾಗಿ ಸೈನ್ಯದ ಅರ್ಧಭಾಗ ನಷ್ಟ

ವಾಗಿ ಹೋಯಿತು. ಗಂಗಾನದಿಯ ಕಡೆ ಹೊರಟಿದ್ದರೆ ಪ್ರಾಯಶಃ ಮೋಸಾಗಿರುತ್ತಿತ್ತು.

ಸಿಕಂದರನು ಕ್ರಿ.ಪೂ. ೩೨೪ರಲ್ಲಿ ಸೂಸನಗರಕ್ಕೆ ಹಿಂತಿರುಗಿದನು. ಮೂಡಲ ದೇಶವಿದೇಶಗಳಲ್ಲಿ ಸಂಚರಿಸುತ್ತ ಆರು ವರ್ಷಗಳು ಕಳೆದಿದ್ದವು. ಯೂರೋಪನ್ನು ಬಿಟ್ಟು ಹತ್ತು ವರ್ಷಗಳಾಗಿದ್ದವು. ಆಗ ಸಿಕಂದರನಿಗೆ ಇನ್ನೂ ಮೂವತ್ತೆರಡೇ ವರ್ಷ. ಮುಂದೇನು?



ಸಿಕಂದರ್ ಮಹಾಶಯ

ಇರಾಸೀ ಸಾಮ್ರಾಜ್ಯವನ್ನು ಗೆದ್ದ ವೇಳೆಯಲ್ಲಿ ಸಿಕಂದರನು ಆ ಸಾಮ್ರಾಜ್ಯದ ಬೇರೆ ಬೇರೆ ಪ್ರಾಂತಗಳನ್ನು ಸತ್ರಪರ ಅಧಿಕಾರದಲ್ಲಿಟ್ಟಿದ್ದನು. ಹಿಂತಿರುಗಿ ಬಂದ ವೇಳೆಗೆ ಆ ಪ್ರಾಂತಾಧಿಪತಿಗಳಲ್ಲಿ ಅನೇಕರು ಸ್ವತಂತ್ರ ರಾಜರಾಗಲು ಯತ್ನಿಸಿದ್ದುದು ತಿಳಿಯಿತು. ಆಗ ಸಿಕಂದರನು ತಾನು ಗೆದ್ದು ಸಂಪಾದಿಸಿದ್ದ ವಿಸ್ತಾರ ಸಾಮ್ರಾಜ್ಯದ ಆಡಳಿತವನ್ನು ವ್ಯವಸ್ಥೆಗೊಳಿಸಲು ತೊಡಗಿದನು. ಆ ಕೆಲಸವನ್ನು ಮೊದಲಿಟ್ಟ ಕಾಲಕ್ಕೆ ಸರಿಯಾಗಿ ಜ್ವರಪೀಡಿತನಾಗಿ ಸಿಕಂದರನು ಕಾಲವಶನಾದನು.

ಮುಖ್ಯಪ್ರಶ್ನೆ ೧೯ : ಸಿಕಂದರನ ಮರಣದ ತರುವಾಯ ಆತನ ಸಾಮ್ರಾಜ್ಯವೇನಾಯಿತು?

ತಂದೆಗಿದ್ದಷ್ಟು ವಿವೇಕ ಕೆಲವಂಶಗಳಲ್ಲಿ ಸಿಕಂದರನಿಗಿರಲಿಲ್ಲ. ತನ್ನ ತರುವಾಯ ಪಟ್ಟ ಯಾರಿಗಾಗಬೇಕೆಂಬ ಯೋಚನೆಮಾಡಿ ತಕ್ಕ ಏರ್ಪಾಡನ್ನು ಮಾಡಿರಲಿಲ್ಲ. ತಾನೇ ಪೂರ್ಣವಯಸ್ಕನಾಗಿದ್ದುದರಿಂದ ಇನ್ನೂ ಮುಂದೆ ಚಿರಕಾಲ ತನ್ನ ಆಳಿಕೆ ನಡೆದೀತೆಂಬ ಧೈರ್ಯವು ಆತನಲ್ಲಿತ್ತು ಪ್ರಾಯಶಃ. ಸಂಭವಿಸಿದ್ದಾದರೋ ಅನರ್ಥವೇ. ಸಿಕಂದರನು ಸತ್ತಸುದ್ದಿಯು ತಿಳಿದ


ಸಿಕಂದರನ ಸಾಮ್ರಾಜ್ಯ
ಮೈಲಿಗಳು
೦ ೨೦೦ ೪೦೦ ೬೦೦
ಡ್ಯಾನ್ಯೂಬ್ ನದಿ
ಮಾಸಿಡೋನಿಯ
ಕಪ್ಪು ಸಮುದ್ರ
ಕ್ಯಾಸ್ಪಿಯನ್ ಸಮುದ್ರ
ಜಕ್ಸಾರ್ಟಿಸ್ ನದಿ
ಆಕ್ಸಸ್ ನದಿ
ಥೀಬ್ಸ್
ಅಥೆನ್ಸ್
ಕ್ರೀಟ್
ಭೂಮಧ್ಯ ಸಮುದ್ರ
ಕೈಪ್ರಸ್
ಆಂಟಿಯಾಖ್
ಸಿರಿಯ
ಸಿಡನ್
ಟೈರ್
ಅಲೆಕ್ಸಾಂಡ್ರಿಯ
ಜೆರುಸಲೆಂ
ಬಾಬಿಲನ್
ಯೂಫ್ರೆಟಿಸ್ ನದಿ
ಟೈಗ್ರಿಸ್ ನದಿ
ಎಕ್ಬಟಾನ
ಸೂಸ
ಪರ್ಸೆಪಾಲಿಸ್
ಪಾರ್ಥಿಯ
ಅರಬ್ಬಿ
ಪಾರ್ಸಿ ಖಾರಿ
ಸಿಂಧೂ ನದಿ
ಹಿಂದು ಸಾಗರ

ಕೂಡಲೇ ಪ್ರಾಂತಾಧಿಪತಿಗಳಾಗಿದ್ದ ದಳಪತಿಗಳು ಸ್ವತಂತ್ರರಾದರು. ಸಾಮ್ರಾಜ್ಯವು ಛಿದ್ರಛಿದ್ರವಾಯಿತು. ಪಿತೂರಿಗಳೂ ಕೊಲೆಗಳೂ ಮಿತಿಮೀರಿದವು. ಇದರಿಂದ ಸಿಕಂದರನಿಗೆ ಉತ್ತರಾಧಿಕಾರಿಯೇ ಇಲ್ಲದಂತಾಯಿತು.

ಸಿಕಂದರನು ವಾಸ್ತವವಾಗಿ ಮಹಾಪುರುಷನೇ ಅಥವಾ ದುರಾಸೆಹೆಮ್ಮೆಗಳನ್ನು ಗಂಟುಕಟ್ಟಿಕೊಂಡಿದ್ದ ವ್ಯಕ್ತಿಯೇ ಎಂದು ಚರಿತ್ರಕಾರರಲ್ಲಿ ವಾದವಿವಾದಗಳುಂಟು. ಒಂದಂಶ ಮಾತ್ರ ಸ್ಪಷ್ಟ. ಆತನು ಕೇವಲ ಬಲಪ್ರಯೋಗದಿಂದ ಸಾಮ್ರಾಜ್ಯವನ್ನು ಕಟ್ಟಿದವನಲ್ಲ. ಹಿಂದಿನ ಯಾವ ದೊರೆಗೂ ತೋರದಿದ್ದ ಯೋಜನೆ ಸಿಕಂದರನಲ್ಲಿತ್ತು. ಪರಸ್ಪರ ವಿವಾಹಗಳನ್ನು ಪ್ರೋತ್ಸಾಹಿಸಿ ಪೌರಸ್ತ್ಯರನ್ನೂ ಪಾಶ್ಚಾತ್ಯರನ್ನೂ ಒಟ್ಟುಗೂಡಿಸುವ ಉದ್ದೇಶ ಆತನದು. ಮೂಡಲು ಪಡುವಲುಗಳೆರಡಕ್ಕೂ ಸಾಮಾನ್ಯವಾದ ಸಂಸ್ಕೃತಿ ರೂಪುಗೊಳ್ಳಬೇಕೆಂಬುದು ಆತನು ಪಟ್ಟ ಇಷ್ಟ. ಆತನು ಇರಾನೀ ಮುಂತಾದ ಮೂಡಲ ರಾಜಪುತ್ರಿಯರನ್ನು ಮದುವೆಯಾಗಿದ್ದನು. ಮುಸಲ್ಮಾನರಲ್ಲದ ಸ್ತ್ರೀಯರನ್ನು ಅಕ್ಬರನು ಮದುವೆಯಾದಾಗ ನಡೆದ ರಾಜನೀತಿಯ ಉಪಾಯದಂತೆಯೇ ಸಿಕಂದರನೂ ನಡೆಸಿರಬಹುದು. ಆದಾಗ್ಗೂ ಅದು ವಿವೇಕದ ಉಪಾಯ. ಅಕ್ಬರನಂತೆ ಆಸ್ಥಾನಿಕರು ಆಚರಿಸಲಿಲ್ಲ; ಆದರೆ ಸಿಕಂದರನಂತೆ ಆತನ ಅಧಿಕಾರಿಗಳು ಹತ್ತುಸಾವಿರ ಮಂದಿ ಆಚರಿಸಿದರು. ಈ ವಿವಾಹಗಳ ಪರಿಣಾಮವಾಗಿ ಗೆದ್ದವರಿಗೂ ಸೋತವರಿಗೂ ಒಳ್ಳೆ ಸೌಹಾರ್ದವು ನೆಲೆಸಿದ್ದಿರಬೇಕು.

ಈ ನೀತಿಯ ಪರಿಣಾಮವು ನಿದಾನವಾಗಿ ತೋರಿತು. ಸಿಕಂದರನು ತೀರಿಹೋಗಿ ಆತನ ಸಾಮ್ರಾಜ್ಯವೊಡೆದ ಬಳಿಕ ಆ ಪರಿಣಾಮ ಚನ್ನಾಗಿ ಕಾಣಿಸಿತು. ಇರಾನೀ ಸಾಮ್ರಾಜ್ಯ ಹಾಳಾದ ಮೇಲೆ ಕ್ಷಣಿಕವಾಗಿ ತೋರಿದ ಸಿಕಂದರನ ಚಕ್ರಾಧಿಪತ್ಯ ಛಿದ್ರಛಿದ್ರವಾದ ಬಳಿಕ ಒಂದೊಂದು ಪ್ರಾಂತದಲ್ಲಿಯೂ ಗ್ರೀಕರ ರಾಜ್ಯ ಸ್ಥಾಪಿತವಾಯಿತು. ಆ ಸಣ್ಣ ಗ್ರೀಕ ರಾಜ್ಯಗಳ ಮೂಲಕ ಪೌರಸ್ತ್ಯ ಪಾಶ್ಚಾತ್ಯರ ಸೌಹಾರ್ದ ಬೆಳೆಯಿತು. ಸಿಕಂದರನ ದಳಪತಿಗಳಲ್ಲೊಬ್ಬನಾಗಿದ್ದ **ಸೆಲ್ಯೂಕಸ್** ಎಂಬಾತನು ಕಟ್ಟಿದ ರಾಜ್ಯ ಅವುಗಳಲ್ಲೆಲ್ಲ ಮುಖ್ಯ. ಆತನು ಏಷ್ಯಮೈನರ್ ಮೆಸೊಪೊಟೇಮಿಯ ಫಾರ್ಸಿಸ್ತಾನಗಳನ್ನಲ್ಲದೆ ಸಿಂಧುನದಿಯ ಪಡುವಣ ಪ್ರದೇಶವನ್ನೂ ತನ್ನದೆಂದನು. ಹಿಂದುಸ್ತಾನವನ್ನು ಮುತ್ತಲು ಯತ್ನಿಸಿ ಮೌರ್ಯಚಕ್ರವರ್ತಿಯಾದ ಚಂದ್ರಗುಪ್ತನೆದುರಿನಲ್ಲಿ ಸೋತುಹೋದನು. ಸೆಲ್ಯೂಕಸ್ ಕಟ್ಟಿದ ರಾಜ್ಯವು ಅನೇಕ ಶತಮಾನಗಳ ಕಾಲ ಬಾಳಿತು. ಹಿಂದುಸ್ತಾನದ ವಾಯುವ್ಯ ಮೂಲೆಯಲ್ಲಿ ಆ ರಾಜ್ಯದ ಮುರುಕುಗಳಾಗಿಯೇ ಹಲಕೆಲವು ಗ್ರೀಕ ರಾಜ್ಯ

ಗಳಿದ್ದುವು. ಅವುಗಳನ್ನಾಳುತ್ತಿದ್ದ ಗ್ರೀಕರಾಜರು ಅಶೋಕನ ಕಾಲದಲ್ಲಿ ಬೌದ್ಧಮತವನ್ನಾರಿಸಿಕೊಂಡರು. ಅವರ ಪ್ರಭಾವವು ಗಾಂಧಾರ ಪ್ರಾಂತದ ಬೌದ್ಧವಿಗ್ರಹಗಳಲ್ಲಿ ಕಾಣುವುದು.

ಇಲ್ಲಿ ಕೊಟ್ಟಿರುವ ಬೌದ್ಧವಿಗ್ರಹ ನೋಡಿ. ತಕ್ಷಶಿಲೆಯಲ್ಲಿದ್ದು ಬೌದ್ಧರಾದ ಗ್ರೀಕರು ಕಡೆದ ಮೂರ್ತಿ ಅದು. ಬೇರೆಡೆಯಲ್ಲಿ (೪೮ನೆ ಪುಟ) ಕೊಟ್ಟಿರುವ ಬುದ್ಧದೇವನ ಮೂರ್ತಿಯೊಂದಿಗೆ ಇದನ್ನು ಹೋಲಿಸಿದರೆ ವ್ಯತ್ಯಾಸ ಕಾಣುವುದಿಲ್ಲವೆ? ಅಥೆನ್ಸ್ ವೃತ್ತಾಂತದ ಸಂಬಂಧವಾಗಿ ಕೊಟ್ಟಿರುವ ಶಿಲಾಮೂರ್ತಿಗಳೊಂದಿಗೆ ಹೋಲಿಸಿದಾಗ? ಶಿಲ್ಪದಲ್ಲಿ ಹೋಲಿಕೆ ಹೆಚ್ಚಾಗಿಲ್ಲವೆ?



ಗ್ರೀಕರು ರಚಿಸಿದ ಬುದ್ಧವಿಗ್ರಹ

ಮುಖ್ಯಪ್ರಶ್ನೆ ೨೦ : ಸಿಕಂದರನು ನಿರ್ಮಿಸಿದ ಅಲೆಕ್ಸಾಂಡ್ರಿಯ ನಗರದಲ್ಲಿ ನಡೆದ ಮುಖ್ಯ ಕಾರ್ಯವೇನು?

ಸಿಕಂದರನ ದಳಪತಿಗಳಲ್ಲಿ ಮತ್ತೊಬ್ಬಾತನು ಈಜಿಪ್ಟ್ ದೇಶಕ್ಕೆ ಪ್ರಭುವಾದನು. ಆತನ ಹೆಸರು **ಟೋಲೆಮಿ** (Ptolemy). ಆತನ ಪ್ರಭುತ್ವದಲ್ಲಿ ಸತ್ಪರಿಣಾಮಗಳು ತೋರಿದವು. ಪ್ಲೇಟೊ, ಅರಿಸ್ಟಾಟಲ್ ಮುಂತಾದವರಿಂದ ಗ್ರೀಕರಿಗೆ ಲಭಿಸಿದ್ದ ಜ್ಞಾನರಾಶಿಯ ವಿಷಯದಲ್ಲಿ ಸಿಕಂದರನಿಗಿಂತಲೂ ಟೋಲೆಮಿಗೆ ಹೆಚ್ಚು ಉತ್ಸಾಹ. ಆದ್ದರಿಂದ ಟೋಲೆಮಿ ಅಲೆಕ್ಸಾಂಡ್ರಿಯ ನಗರದಲ್ಲಿ ಒಂದು ಸರ್ವವಿದ್ಯಾಶಾಲೆಯನ್ನು ಸ್ಥಾಪಿಸಿ ಅದಕ್ಕೆ '**ಮ್ಯೂಸಿಯಂ**' ಎಂಬ ಹೆಸರನ್ನಿಟ್ಟನು. ಸಾಹಿತ್ಯ, ಗಾನ, ಶಿಲ್ಪ, ಚಿತ್ರ ಮುಂತಾದ ಕಲಾಧಿದೇವತೆಗಳನ್ನು ಗ್ರೀಕರು ಮ್ಯೂಸಸ್ (Muses) ಎಂದು ಕರೆಯುತ್ತಿದ್ದರು. ಮ್ಯೂಸಿಯಂ ಎಂಬುದು ಆ ಕಲಾಭಿಮಾನಿ ದೇವತೆಗಳ ಮಂದಿರ. ಇತ್ತೀಚೆಗೆ ಮ್ಯೂಸಿಯಂ ಎಂದರೆ ವಿವಿಧ ವಸ್ತುಪ್ರದರ್ಶನಶಾಲೆ

ಎಂಬರ್ಥ. ಆ ಶಬ್ದಾರ್ಥ ಹಾಗಿರಲಿ. ಅಲೆಕ್ಸಾಂಡ್ರಿಯ ನಗರದಲ್ಲಿ ಟೋಲೆಮಿ ರಾಜನು ಸ್ಥಾಪಿಸಿದ ವಿದ್ಯಾಮಂದಿರವು ಪಾಶ್ಚಾತ್ಯ ದೇಶಗಳಲ್ಲೆಲ್ಲ ಮೊದಲನೆಯ ವಿಶ್ವವಿದ್ಯಾನಿಲಯ. ವಿಖ್ಯಾತಿಗೇರಿದುದು. ಆ ರಾಜನು ಇದರೊಂದಿಗೆ ಒಂದು **ಪುಸ್ತಕಭಂಡಾರವನ್ನೂ** ಸ್ಥಾಪಿಸಿದನು. ಆ ಕಾಲದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಜನರಿಗೆ ಕಾಗದ ತಿಳಿದಿರಲಿಲ್ಲ; ಮುದ್ರಣವೆಂಬುದಂತೂ ಇರಲೇ ಇಲ್ಲ. ನೈಲ್‌ನದಿಯ ಬಳಿ ಬೆಳೆಯುವ ಒಂದು ಬಗೆಯ ಜೊಂಡನ್ನು ಒಣಗಿಸಿ ಜೋಡಿಸಿ ಬರೆಯುವುದಕ್ಕೆ ಉಪಯೋಗಿಸುತ್ತಿದ್ದರು. ಈಜಿಪ್ಟ್ ದೇಶದೊಳಕ್ಕೆ ಬಂದ ಯಾರಾದರೂ ಸರಿಯೆ ಹೊಸ ಪುಸ್ತಕವೇನನ್ನಾದರೂ ತಂದಿದ್ದರೆ ಅದನ್ನು ಬೇರೆ ಪ್ರತಿಯೆತ್ತಿಸಿ ಅಲೆಕ್ಸಾಂಡ್ರಿಯದ ಭಂಡಾರಕ್ಕೆ ಅರ್ಪಿಸಬೇಕೆಂದು ಟೋಲೆಮಿ ನಿಬಂಧನೆ ಮಾಡಿಟ್ಟನು.

ಈ ಪ್ರೋತ್ಸಾಹದ ಪರಿಣಾಮವಾಗಿ ಅಲೆಕ್ಸಾಂಡ್ರಿಯವು ಗ್ರೀಕರ ವಿದ್ಯಾಸಂಸ್ಕೃತಿಗಳಿಗೆ ಖನಿಯಂತಾಯಿತು. ಟೋಲೆಮಿರಾಜನೂ ಆತನ ರಾಜ್ಯವೂ ಕೊನೆಗಂಡ ಮೇಲೂ ಶತಮಾನಗಳಷ್ಟು ಕಾಲ ಆ ವಿದ್ಯಾಕ್ಷೇತ್ರವು ಪ್ರಸಿದ್ಧವಾಗಿತ್ತು. ಅಲ್ಲಿದ್ದುಕೊಂಡು ಜ್ಞಾನಾರ್ಜನೆಯಲ್ಲಿ ಸಾಹಸವನ್ನು ತೋರಿದ ವಿದ್ವಾಂಸರನೇಕರು ಇಂದಿಗೂ ಸ್ಮರಣೀಯರಾಗಿದ್ದಾರೆ. ಜ್ಯಾಮಿತಿ ಶಾಸ್ತ್ರವನ್ನು ಸ್ಥಾಪಿಸಿದ **ಯೂಕ್ಲಿಡ್** (Euclid) ಅಲೆಕ್ಸಾಂಡ್ರಿಯದಲ್ಲಿಯೇ ತನ್ನ ಸಾಧನೆಯನ್ನು ಆರಂಭಿಸಿದ್ದು. ಪೃಥ್ವೀಗೋಳದ ಸುತ್ತಳತೆಯನ್ನು ಗಣಿಸಿದ **ಎರಟೊಸ್ಥೀನೀಸ್** (Eratosthenes) ಎಂಬ ಭೂವಿವರಣಕಾರನು ಅಲ್ಲಿಯವನು. ಹಬೆಯಂತ್ರವನ್ನು ಮೊಟ್ಟಮೊದಲು ಕಂಡ **ಹೆರನ್** (Heron), ಯಂತ್ರಯೋಜನೆಯಲ್ಲಿ ಯಶಸ್ವಿಯಾದ **ಆರ್ಕಿಮೆಡೀಸ್** (Archimedes), ಮಾನವನ ದೇಹರಚನೆಯಲ್ಲಿ ಅನೇಕಾಂಶಗಳನ್ನು ಗುರುತುಹಿಡಿದ ಶಸ್ತ್ರ ಚಿಕಿತ್ಸಾನಿಪುಣ **ಹೆರೊಫೈಲಸ್** (Herophilus) ಎಂಬುವವರೆಲ್ಲರೂ ಅಲ್ಲಿಯವರೇ. ಅಂಧಕಾರಯುಗವೆನಿಸಿರುವ (Dark Ages) ಕಾಲದಲ್ಲಿ ಯೂರೋಪನ್ನು ಮುತ್ತಿದ ರೂಕ್ಷಜನಸಮೂಹಗಳ ದಾಂಧಲೆಯಲ್ಲಿ ಈ ಜ್ಞಾನರಾಶಿಯೆಲ್ಲ ಎಲ್ಲಿಯೋ ಮಾಯವಾಯಿತು; ಪ್ರಯಾಸದಿಂದ ಪುನಃ ಹೊಸದಾಗಿ ತಿಳಿದುಕೊಳ್ಳಬೇಕಾಯಿತು. ಕೇವಲ ಆಧುನಿಕಕಾಲದವರ ಸಾಧನೆಯೆಂದು ನಾವು ಹೇಳಿಕೊಳ್ಳುವ ಎಷ್ಟೋ ಅಂಶಗಳು ಹಿಂದಿನಕಾಲದ ಗ್ರೀಕ್, ಹಿಂದು ಮತ್ತು ಚೀನೀ ಶಾಸ್ತ್ರಜ್ಞರಿಗೆ ತಿಳಿದೇ ಇದ್ದುವು. ಭೇದವಿಷ್ಟೆ. ಈಗಿನ ಕಾಲದವರು ತಾವು ಸಾಧಿಸಿದ ಜ್ಞಾನವನ್ನು ನಿತ್ಯಜೀವನದ ಪ್ರಯೋಜನಕ್ಕೆ ಉಪಯೋಗಿಸಿಕೊಳ್ಳುತ್ತಾರೆ. ಪ್ರಾಚೀನರು ಆ ರೀತಿ ಮಾಡಲಿಲ್ಲ.

ಅಲೆಕ್ಸಾಂಡ್ರಿಯ ನಗರದ ವಿಶ್ವವಿದ್ಯಾಮಂದಿರಕ್ಕೂ ನಮ್ಮ ಕಾಲದ ವಿಶ್ವವಿದ್ಯಾನಿಲಯಗಳಿಗೂ ಮತ್ತೊಂದು ವ್ಯತ್ಯಾಸವುಂಟು. ಆಗಿನಕಾಲದಲ್ಲಿ ವಿದ್ಯೆಯ ಸಂಪಾದನೆಗಾಗಿ ಶ್ರಮಪಟ್ಟವರು ಹಲಕೆಲವರು ಮಾತ್ರ. ಅಲ್ಲಿಯ ಮ್ಯೂಸಿಯಂ ಮತ್ತು ಭಂಡಾರಗಳೆರಡೂ ರಾಜನು ಕೊಟ್ಟ ಹಣದಿಂದ ಮಾತ್ರವೇ ನಡೆಯಬೇಕಾಗಿತ್ತು. ವಿದ್ವಾಂಸರ ವೇತನಗಳಿಗೂ ಪುಸ್ತಕ ಲೇಖನಕ್ಕೂ ಪ್ರಭುವಿನ ಔದಾರ್ಯವೇ ಆಶ್ರಯ. ಟೋಲೆಮಿ ತರುವಾಯ ಆಳಿದ ರಾಜರಿಗೆ ಅಷ್ಟು ವಿದ್ಯಾಭಿಮಾನವಿರಲಿಲ್ಲ. ಆದುದರಿಂದ ಮ್ಯೂಸಿಯಮ್ಮಿಗೆ ಪೋಷಣೆ ಕಡಿಮೆಯಾಯಿತು.

ಅಭ್ಯಾಸಗಳು

೧. ದಿಗ್ವಿಜಯದಲ್ಲಿ ಸಿಕಂದರನು ಜಯಶೀಲನಾಗಲು ಕೆಲವು ಕಾರಣಗಳನ್ನು ತಿಳಿಸಿ. ಆತನ ಮರಣಾನಂತರ ಸಾಮ್ರಾಜ್ಯವು ಬೇಗನೆ ಒಡೆದುಹೋಗಲು ಕಾರಣಗಳೇನು?

೨. ಸಿಕಂದರನ ಜಯಗಳಿಂದ ಪೃಥ್ವಿಯ ಬೇರೆ ಬೇರೆ ಭಾಗಗಳಲ್ಲಿ ವಿದ್ಯಾಸಂಸ್ಕೃತಿಗಳು ಹರಡಿದುದು ಹೇಗೆ?

೩. ಯೂಕ್ಲಿಡ್, ಹೆರನ್, ಆರ್ಕಿಮೆಡೀಸ್, ಹೆರೊಫೈಲಸ್ ಮತ್ತು ಎರಟೊಸ್ಥನೀಸ್ ಎಂಬುವವರ ವಿಷಯವಾಗಿ ಇನ್ನಷ್ಟು ಸಂಗತಿಗಳನ್ನು ಶೇಖರಿಸಿ ಟಿಪ್ಪಣಿಗಳನ್ನು ಬರೆದಿಡಿ.

೫ನೇ ಅಧ್ಯಾಯ

ಧರ್ಮಾಶೋಕ ಚಕ್ರವರ್ತಿ

ಮುಖ್ಯಪ್ರಶ್ನೆ ೨೧: ಕ್ರಿ.ಪೂ. ೬ನೇ ಶತಮಾನವನ್ನು ಚರಿತ್ರೆಯಲ್ಲಿ ಕಾಲವಿಭಾಗಸ್ಥಾನವೆಂದು ಕರೆಯುವುದೇಕೆ?

ಒಬ್ಬಾನೊಬ್ಬ ಪರಾಕ್ರಮಿಯ ರಾಜ್ಯದಾಸೆಯ ಪರಿಣಾಮವಾಗಿ ಗ್ರೀಕರ ಸಂಸ್ಕೃತಿಯು ಮೂಡಲಲ್ಲಿ ಹಬ್ಬಿಕೊಂಡು ಹಿಂದುಸ್ತಾನವನ್ನು ತಲಪಿದ ಸಂಗತಿಯನ್ನು ಕಂಡೆವು. ಇನ್ನುಮುಂದೆ ಮತ್ತೊಬ್ಬ ಪ್ರಭುವಿನ ಧಾರ್ಮಿಕ ಶ್ರದ್ಧೋತ್ಸಾಹಗಳಿಂದ ಭಾರತೀಯ ಸಂಸ್ಕೃತಿಯು ಪಡುವಲು ಮೂಡಲುಗಳೆರಡು ಕಡೆಗಳಲ್ಲಿಯೂ ಹರಡಿದ ಸಂಗತಿಯನ್ನು ಕಾಣುವೆವು.

ಆಧುನಿಕ ಕಾಲದ ಲಕ್ಷಣಗಳನ್ನು ಮೊದಲಿಟ್ಟ ಘಟನಾವಳಿಗಳು ಕ್ರಿ.ಪೂ. ೫೦೦ ರಿಂದ ಮುಂದೆ ಸಂಭವಿಸತೊಡಗಿದವು. ಅದಕ್ಕಾಗಿ ಕ್ರಿ.ಪೂ. ಆರನೆ ಶತಮಾನವನ್ನು ವಿಭಾಜಕಸ್ಥಾನವೆಂದು ಕರೆಯುವುದು ಸಾಮಾನ್ಯ. ಮಾನವ ಸಮೂಹಗಳ ಯಾಜಮಾನ್ಯವನ್ನು ಆರ್ಯಜಾತಿಗಳವರು ವಹಿಸಿಕೊಂಡುದು ಅಂದಿನಿಂದ. **ಕುರುಷ್** (Cyrus-ಕೈರಸ್) ಎಂಬ ರಾಜನ ಅನುಯಾಯಿಗಳಾಗಿ ಇರಾನೀ ಆರ್ಯರು ಬಾಬಿಲೋನಿಯ ಮತ್ತು ಅಸ್ಸಿರಿಯ ರಾಜ್ಯಗಳ ಪ್ರಭುಗಳನ್ನು ಗೆದ್ದು ಮಧ್ಯಪ್ರಾಚ್ಯದಲ್ಲಿ ತಮ್ಮ ಸಾಮ್ರಾಜ್ಯವನ್ನು ಕಟ್ಟಿದರು. ಭೂಮಧ್ಯಸಮುದ್ರದ ಪೂರ್ವೋತ್ತರ ಪ್ರದೇಶಗಳಲ್ಲಿದ್ದ ಕ್ರೀಟನ್ ಗುಂಪಿನವರನ್ನು ಅಡಗಿಸಿ ಗ್ರೀಕಗುಂಪಿನ ಆರ್ಯರು ಪ್ರಬಲರಾದರು. ಇನ್ನೂ ಪಶ್ಚಿಮದಲ್ಲಿ **ರೋಮಕಪಟ್ಟಣ** ಸ್ಥಾಪನೆಯಾಯಿತು; ರೋಮಕಗುಂಪಿನ ಆರ್ಯರು ಇಟಲಿಯಲ್ಲಿ ಪ್ರಾಬಲ್ಯಕ್ಕೇರುತ್ತ ಆ ಪ್ರದೇಶದಲ್ಲಿ ಹಿಂದಿನಿಂದಲೂ ಆಳಿಕೊಂಡಿದ್ದ **ಎಟ್ರಸ್ಕನ್** (Etruscan) ಮುಂತಾದ ಜನರನ್ನು ವಶಪಡಿಸಿಕೊಂಡರು. ಇಷ್ಟಲ್ಲದೆ ಕ್ರಿ.ಪೂ. ಆರನೇ ಶತಮಾನವು ಧರ್ಮೋದ್ಧಾರಕರೂ ತತ್ತ್ವಬೋಧಕರೂ ತಲೆದೋರಿದ ಕಾಲ; ಚೀನದಲ್ಲಿ ಕಾನ್‌ಫೂಸಿಯಸ್ ಮತ್ತು ಲಾಉಟ್ಸೆ (Lao-tze); ಹಿಂದುಸ್ತಾನದಲ್ಲಿ ಮಹಾವೀರ, ಗೌತಮಬುದ್ಧ; ಗ್ರೀಸಿನಲ್ಲಿ ಪೈಥಾಗೊರಾಸ್ (Pythagoras), ಸೋಕ್ರಟೀಸ್ ಮತ್ತು ಪ್ಲೇಟೊ. ಸಣ್ಣಪುಟ್ಟ ರಾಷ್ಟ್ರಗಳು ತಮ್ಮ ಪ್ರತ್ಯೇಕತೆಯನ್ನು ನೀಗಿ ದೊಡ್ಡ ಸಾಮ್ರಾಜ್ಯಗಳಲ್ಲಿ ಸೇರಿಹೋದುದೂ ಆ ಕಾಲದಲ್ಲಿಯೇ. ಅಂತಹ ಸಾಮ್ರಾಜ್ಯ

ಗಳಲ್ಲಿ ಮೊದಲನೆಯದಾದ ಗ್ರೀಕರ ಸಾಮ್ರಾಜ್ಯದ ವೃತ್ತಾಂತವನ್ನು ತಿಳಿದುಕೊಂಡುದಾಯಿತು. ಮುಂದೆ ಧರ್ಮಾಶೋಕನ ಸಾಮ್ರಾಜ್ಯವನ್ನು ಎರಡನೆಯದಾಗಿಯೂ ರೋಮಕಸಾಮ್ರಾಜ್ಯವನ್ನು ಮೂರನೆಯದಾಗಿಯೂ ನಾವು ಕಾಣಬಹುದು. ಜನರಿಗೆ ಸಣ್ಣ ಸಂಸ್ಥಾನಗಳಿಂದ ತೃಪ್ತಿಯಾಗಲಿಲ್ಲ; ಸಾಮ್ರಾಜ್ಯ ಕಟ್ಟುವ ಯೋಚನೆ ಹುಟ್ಟಿತ್ತು. ಭೂಮಂಡಲವನ್ನೇ ಆಳುವ ಆಸೆ ರಾಜರಿಗೆ ತೋರಿತ್ತು. ಧರ್ಮಸ್ಥಾಪಕರಿಗೂ ಮತಪ್ರಚಾರಕರಿಗೂ ಅಂತೆಯೇ ಜಗತ್ತಿನ ಜನರೆಲ್ಲರನ್ನೂ ಒಟ್ಟುಗೂಡಿಸುವ ಯೋಚನೆ ಹಿಡಿಯಿತು.

ಮುಖ್ಯಪ್ರಶ್ನೆ ೨೨: ಗೌತಮನ ಮನಸ್ಸಿಗೆದುರಾದ ಸಮಸ್ಯೆ ಯಾವುದು? ಅದನ್ನು ಆತನು ಪರಿಹರಿಸಿದುದು ಹೇಗೆ?

ಕ್ರಿ.ಪೂ. ಸುಮಾರು ಆರನೆ ಶತಮಾನದ ಮಧ್ಯಕಾಲದಲ್ಲಿ ಗೌತಮನು ಜನಿಸಿದ್ದು. ಹಿಮವಂತನ ಅಡಿಯಲ್ಲಿದ್ದ ಒಂದು ಸಣ್ಣ ರಾಷ್ಟ್ರವನ್ನು ಆತನ ತಂದೆಯು ಆಳುತ್ತಿದ್ದನು. ದೊಡ್ಡವನಾದ ಮೇಲೆ ಸಿದ್ಧಾರ್ಥನು ಜನಜೀವನದ ದುಃಖವನ್ನು ಕಂಡು ಪರಿತಾಪಪಟ್ಟು ತನ್ನ ಭೋಗಭಾಗ್ಯಗಳನ್ನು ತ್ಯಾಗ ಮಾಡಿ ವಿರಕ್ತನಾಗಿ ಸಂಚರಿಸುತ್ತ ಜೀವನದಲ್ಲಿ ಸಂಕಟವನ್ನೂ ದುಃಖವನ್ನೂ ಪರಿಹರಿಸಿಕೊಳ್ಳುವುದು ಹೇಗೆಂದು ಚಿಂತಿಸಿದನು. ಮುಕ್ತಿಸಾಧನೆಗಾಗಿ ಹಿಂದಿನ ಕಾಲದ ಆರ್ಯರು ಹೇಳಿದ್ದ ದಾರಿಯಲ್ಲಿ ನಡೆದು ತಪಸ್ಸನ್ನಾಚರಿಸಿದನು, ಯೋಗಾಭ್ಯಾಸಮಾಡಿದನು. ಕಡೆಗೆ ಗಯೆಯ ಬಳಿ ಒಂದು ವಟವೃಕ್ಷದ ಕೆಳಗೆ ಸಮಾಧಿಯಲ್ಲಿದ್ದಾಗ ಸಮಸ್ಯೆಗೆ ಪರಿಹಾರವೇನೆಂಬುದು ಸ್ಫುರಿಸಿತು. ಆ ತರುವಾಯ ಆತನನ್ನು ಬುದ್ಧನೆಂಬ ಬಿರುದಿನಿಂದಲೇ ಆತನ ಅನುಯಾಯಿಗಳು ಕರೆದರು.

ಬುದ್ಧದೇವನ ಉಪದೇಶದ ಸಾರಾಂಶವೇನೆಂದು ನಾವು ಸಂಕ್ಷೇಪವಾಗಿ ವಿಮರ್ಶಿಸಬಹುದು. ಮಾನವರು ಲೋಕದಲ್ಲಿ ಅನುಭವಿಸುವ ದುಃಖಗಳಿಗೆಲ್ಲ ಸ್ವಾರ್ಥದಿಂದ ಹುಟ್ಟುವ ಆಸೆ ಅಥವಾ ಕಾಮವೇ ಮೂಲ. ಕಾಮವೆಂಬುದು ಮೂರುಬಗೆ; ಇಂದ್ರಿಯ ಸುಖಾಪೇಕ್ಷೆ, ಮೋಕ್ಷಸಾದನೆಯ ಆಸೆ ಮತ್ತು ವೈಭವ ಕೀರ್ತಿಗಳಲ್ಲಿ ಆಕಾಂಕ್ಷೆ. ಈ ಆಸೆಗಳನ್ನು ಗೆದ್ದು ಸ್ವಂತ ಅಥವಾ ಸ್ವಾರ್ಥವೆಂಬುದನ್ನು ವಶಪಡಿಸಿಕೊಳ್ಳಬಲ್ಲವನಾದರೆ ಯಾರಾದರೂ ಲೋಕದಲ್ಲಿ ದುಃಖರಹಿತನಾಗಿ ಬಾಳಬಹುದು. ಏಕೆಂದರೆ ಅಂಥವನು ಪ್ರಬುದ್ಧನಾಗಿ ಶಾಂತಿಭರಿತವಾದ ಚಿತ್ತದಿಂದಿರುತ್ತಾನೆ. ಆ ಸ್ಥಿತಿಯನ್ನೇ ಬುದ್ಧನು 'ನಿರ್ವಾಣ' ವೆಂದು ಕರೆದುದು. ಆ ಸ್ಥಿತಿಯನ್ನು ತಾನು ಪಡೆದಂತೆ ಇತರರೂ ಪಡೆಯ

ಬಹುದೆಂದು ವಿವರಿಸುತ್ತ ಬುದ್ಧದೇವನು ಅದಕ್ಕಾಗಿ ಅಷ್ಟಾಂಶಗಳುಳ್ಳ ಧರ್ಮದ ಆಚರಣೆಯನ್ನು ಬೋಧಿಸಿದನು. ಅಷ್ಟಾಂಗಮಾರ್ಗವೆಂದೂ ಅದನ್ನು ಕರೆಯಬಹುದು. ಅವುಗಳಲ್ಲಿ ಮೊದಲನೆಯದು ಸಮ್ಯಗ್ದೃಷ್ಟಿ. ಎಂತಾದರೂ ಹೇಗಾದರೂ ಎಷ್ಟು ಕಷ್ಟವಾದರೂ ಸತ್ಯವನ್ನೇ ಅರಸುತ್ತಿದ್ದು ಸುವಿಚಾರದೃಷ್ಟಿ.



ಬುದ್ಧದೇವ

ಯಿಂದ ಆಚಾರಸಂಪ್ರದಾಯಗಳನ್ನು ಪರೀಕ್ಷಿಸಿಕೊಳ್ಳಬೇಕು. ಎರಡನೆಯ ದಾಗಿ ಸ್ವಾರ್ಥವನ್ನು ಬಿಟ್ಟು ಪರೋಪಕಾರ, ನ್ಯಾಯಸ್ಥಾಪನೆ ಮುಂತಾದ ಸದುದ್ದೇಶಗಳನ್ನು ಬೆಳೆಸುತ್ತ ಸಮ್ಯಕ್ಸಂಕಲ್ಪವನ್ನು ತಾಳಬೇಕು. ಲೋಕ ಜೀವನದಲ್ಲಿ ಇತರರೊಡನೆ ವ್ಯವಹರಿಸುವುದೆಲ್ಲವನ್ನೂ ಒಳಗೊಳ್ಳುವ ಅಂಶ ಗಳಾದ ಸಮ್ಯಗ್ವಾಕ್, ಸಮ್ಯಕ್ಕರ್ಮಾಂತ, ಸಮ್ಯಗ್‌ಜೀವಗಳು ಮೂರನೆ, ನಾಲ್ಕನೆ ಮತ್ತು ಐದನೆಯ ಅಂಶಗಳು. ಎಷ್ಟು ತೊಂದರೆಗಳು ತೋರಿದಾಗ್ಯೂ ತನ್ನ ನೀತಿನಿಯಮಗಳನ್ನು ಬಿಡದಂತೆ ಸದಾ ಯತ್ನಶೀಲನಾಗಿರುವುದು (ಸಮ್ಯಗ್ವ್ಯಾಯಾಮ) ಆರನೆ ಅಂಶ; ಸತ್ಪ್ರಯತ್ನ. ಸ್ವಾರ್ಥವಾಗಲಿ ಆಸೆ ಯಾಗಲಿ ತನ್ನ ಬಳಿ ಸುಳಿಯದಂತೆ ಸದಾ ಜಾಗೃತಿಯಿಂದಿರತಕ್ಕುದು ಏಳನೆ ಅಂಶ; ಸಮ್ಯಕ್‌ಸ್ಮೃತಿ. ಕಡೆಯಂಶ ಸಮ್ಯಕ್ಸಮಾಧಿ; ಎಲ್ಲರಿಗೂ ಕಲ್ಯಾಣ ವಾಗಲೆಂಬ ಬಯಕೆಯಿಂದ ಯಾರಿಗೂ ನೋವುಕೊಡದ ವರ್ತನೆಯಲ್ಲಿ ಸಂತೋಷಪಡುತ್ತಲಿರುವುದು.

ಕಾನ್‌ಫೂಸಿಯಸ್ ಸೋಕ್ರಟೀಸರಂತೆಯೇ ಬುದ್ಧದೇವನು ಉಪದೇಶ ಮಾಡಿದ ಧರ್ಮದಲ್ಲಿ ಕೂಡ ನೀತಿಭಾಗವು ಹೆಚ್ಚು. ಯಾವ ದೇವತೆಯ ಪೂಜೆಯೂ ಅವರ ಬೋಧೆಯಲ್ಲಿಲ್ಲ. ಪರಲೋಕವನ್ನಾಗಲಿ ಮರಣಾನಂತರ ನಡೆಯುವ ಸ್ಥಿತಿಯನ್ನಾಗಲಿ ಭಗವಂತನನ್ನಾಗಲಿ ಬುದ್ಧದೇವನು ಪ್ರಮಾಣ ರೀತಿಯಲ್ಲಿ ಚರ್ಚಿಸಲಿಲ್ಲ. ಮೂವರು ಬೋಧಕರಲ್ಲಿಯೂ ಆ ಹೋಲಿಕೆಯು ಕಾಣುವುದು. ಬುದ್ಧದೇವನು ಚಿಂತಿಸಿದ್ದು ಇಹಲೋಕಸಂಬಂಧವಾಗಿ, ಪರಲೋಕಸಂಬಂಧವಾಗಿ ಅಲ್ಲ; ಪ್ರಕೃತಕಾಲವನ್ನು ಕುರಿತು, ಭವಿಷ್ಯತ್ಕಾಲ ವನ್ನು ಕುರಿತಲ್ಲ. ಬುದ್ಧಿಶಕ್ತಿಗೆ ಮಾತ್ರ ಗೋಚರವಾಗಬಹುದಾದ ಪಾರ ಲೌಕಿಕವಿಚಾರಗಳಲ್ಲಿ ವಾದವಿವಾದಗಳನ್ನು ಬೆಳೆಸಿದಾಗ ಮೇಲಿಗಿಂತ ಕೇಡೇ ಸಂಭವಿಸೀತೆಂದು ಆತನ ನಂಬಿಕೆ. ಅಂತಹ ಚರ್ಚೆಗಳಲ್ಲಿ ಗಮನವಿಟ್ಟವರು ಐಹಿಕಜೀವನದ ಕರ್ತವ್ಯಗಳನ್ನು ಮರೆತಾರೆಂದು ಶಂಕೆ. ಆದರೆ ಲೋಕೋ ತ್ತರವೆನ್ನಬಹುದಾದ ಬುದ್ಧದೇವನ ಆದರ್ಶಗಳನ್ನು ಆತನ ಅನುಯಾಯಿಗಳು ಪಾಲಿಸಲಾರದೆ ಹೋದರು. ಲೋಕೋದ್ಧಾರಕರಾದ ಧರ್ಮಸಂಸ್ಥಾಪಕ ರೆಲ್ಲರ ಶಿಷ್ಯರಿಗೂ ಅದೇ ದೌರ್ಬಲ್ಯ.

ಮುಖ್ಯಪ್ರಶ್ನೆ ೨೩: ಅಶೋಕನು ಸಾಧಿಸಿದ ಮಹತ್ಕಾರ್ಯ ಯಾವುದು?


ಬುದ್ಧದೇವನು ಎಂಭತ್ತನೆ ವಯಸ್ಸಿನಲ್ಲಿ ಕಾಲವಾದುದು; ಆದಾಗ್ಯೂ ಆತನು ಜೀವಂತನಾಗಿದ್ದ ಕಾಲದಲ್ಲಿ ಆತನ ಉಪದೇಶಗಳು ವಿಸ್ತಾರವಾಗಿ

ಪ್ರಚಾರವಾಗಲಿಲ್ಲ. ಪೂರ್ವಾಚಾರನಿಷ್ಠರಾದವರು ಆ ಪ್ರಚಾರಕ್ಕೆ ವಿರೋಧ ವನ್ನೊಡ್ಡಿದರು. ಮುನ್ನೂರು ವರ್ಷಗಳು ಕಳೆದ ಬಳಿಕ ಮೌರ್ಯ ಚಕ್ರವರ್ತಿ ಚಂದ್ರಗುಪ್ತನ ಸಿಂಹಾಸನವನ್ನು ಮಹಾತ್ಮನಾದ ಆತನ ಮೊಮ್ಮಗ ನೇರಿದಾಗ ಬುದ್ಧನ ಉಪದೇಶವು ಧಾರಾಳವಾಗಿ ಹರಡಿಕೊಂಡಿತು. ಆತನೇ ಧರ್ಮಾಶೋಕ; ಜಗತ್ತಿನಲ್ಲಿ ಪ್ರಭುತ್ವನಡೆಸಿದವರಲ್ಲೆಲ್ಲ ಮಹಾಮಹಿಮ ನೆನಿಸಿದಾತ.

ಕ್ರಿ.ಪೂ. ೨೭೩ರಲ್ಲಿ ತಂದೆಯ ಸಿಂಹಾಸನವನ್ನು ಅಶೋಕನು ಏರಿದಾಗ ಸಾಮ್ರಾಜ್ಯವು ವಿಸ್ತಾರವಾಗಿಯೇ ಇತ್ತು. ಈಗ ಅಫ್ಘಾನಸ್ತಾನ ಬಲೂಚಿ ಸ್ತಾನಗಳಾಗಿರುವ ಗಾಂಧಾರ ಕಾಂಭೋಜಗಳಿಂದ ಕಾಮರೂಪದವರೆಗೂ ಹಿಮವತ್ಪರ್ವತದಿಂದ ಪಾಲಾರ್‌ನದಿಯುವರೆಗೂ ವಿಸ್ತೃತವಾಗಿತ್ತು. ಅಶೋ ಕನು ಮೊದಲು ಸಾಮ್ರಾಜ್ಯವಿಸ್ತಾರವನ್ನೇ ಧ್ಯೇಯವನ್ನಾಗಿಟ್ಟುಕೊಂಡು ಕಳಿಂಗಯುದ್ಧವನ್ನು ನಡೆಸಿದನು. ಈಗ ಒರಿಸ್ಸ ಅಥವಾ ಉತ್ಕಲವೆಂದು ಹೆಸರಾದ ಆ ಪ್ರಾಂತವನ್ನು ಗೆದ್ದನು. ಆದರೆ ಹೋರಾಟದಲ್ಲಿ ಅಲ್ಲಿಯ ಜನರು ಪಟ್ಟ ಕಷ್ಟನಷ್ಟಗಳನ್ನು ಕಂಡು ಮನದಲ್ಲಿ ಮರುಗಿದನು. ಜಯಪ್ರಾಪ್ತಿಯಾ ದಾಗ ಸಂತೋಷಗೊಂಡು ಹೆಮ್ಮೆಪಡದೆ ಅಂತರಂಗದಲ್ಲಿ ಮರುಗಿ ಬೇರಾವ ಜಯಶಾಲಿಪ್ರಭುವೂ ಯೋಚಿಸದ ಯೋಚನೆಯನ್ನು ಮಾಡಿದನು. ಅಶೋಕನ ಹಿಂದಾಗಲಿ ಮುಂದಾಗಲಿ ಯಾವ ಪ್ರಭುವೂ ಅಂತಹ ಧೀರೋದಾತ್ತನಾಗ ಲಿಲ್ಲ. ಆತನು ಯುದ್ಧವನ್ನೇ ತ್ಯಜಿಸಿಬಿಟ್ಟನು. ಇನ್ನು ಮುಂದೆ ಯುದ್ಧಮಾಡು ವುದಿಲ್ಲವೆಂದು ಪ್ರಮಾಣಮಾಡಿ ಪ್ರಕಟಿಸಿ ಬುದ್ಧದೇವನು ಉಪದೇಶಿಸಿದ್ದ ಧರ್ಮವನ್ನೊಪ್ಪಿಕೊಂಡನು. ಯುದ್ಧಸನ್ನಾಹದಿಂದ ಸಾಧಿಸಬಹುದಾಗಿದ್ದ ಗೆಲುವಿಗಿಂತ ಸಾವಿರಪಾಲು ಮೇಲಾದ ಗೆಲುವನ್ನು ಶಾಂತಿಯಿಂದ ಪಡೆಯ ಬಲ್ಲವನಾದನು. ಅತಿ ದೂರದೇಶಗಳಲ್ಲಿಯೂ ಆತನ ಯಶಸ್ಸು ಹಬ್ಬಿತು; ಆತನನ್ನು ಪುಣ್ಯಚರಿತನೆಂದು ದೂರದೇಶಗಳ ಜನರು ಸ್ಮರಿಸಿದರು. ಆ ಜನರು ಅವನ ಆಳಿಕೆಗೊಳಗಾದವರೂ ಅಲ್ಲ; ಅವನನ್ನು ಕಂಡವರೂ ಅಲ್ಲ; ಆದರೂ ಅವನನ್ನು ಕೊಂಡಾಡುವರು.

ಧರ್ಮಾಶೋಕ ಚಕ್ರವರ್ತಿಯು ಭರತಭೂಮಿಯ ಮುಕ್ಕಾಲು ಭಾಗ ದಷ್ಟನ್ನು ನಲವತ್ತು ವರ್ಷಕಾಲ ಆಳಿದನು. ಆಳಿಕೆಯ ಮೊದಲಿನಲ್ಲಿ ಪರಸ್ಪರ ಕಲಹಗಳೂ, ಮೌಢ್ಯವೂ, ಅನ್ಯಾಯಕತೆಯೂ ದೇಶದಲ್ಲಿ ತುಂಬಿತ್ತು; ಆಳಿಕೆಯ ಕೊನೆಯಲ್ಲಿ ಶಾಂತಿಸೌಭಾಗ್ಯಗಳಿಂದ ಕೂಡಿದ ಸುವ್ಯವಸ್ಥೆ ತುಂಬಿತ್ತು. ಅಶೋಕನು ರಸ್ತೆಗಳನ್ನು ಮಾಡಿಸಿ ಸಾಲುಮರಗಳನ್ನು ನೆಡಿಸಿ ಜನರ ಉಪ

ಯೋಗಕ್ಕಾಗಿ ಜಲಾಶಯಗಳನ್ನು ನಿರ್ಮಿಸಿದನು. ಉದ್ಯಾನವನಗಳಿಗಾಗಿ ಭೂಮಿಯನ್ನು ಬಿಡಿಸಿಕೊಟ್ಟು ರೋಗಹಾರಿಗಳಾದ ವನಸ್ಪತಿಗಳನ್ನು ಬೆಳೆಯಿಸಿದನು. ಮನುಷ್ಯಮಾತ್ರರಿಗಲ್ಲದೆ ಪಶುಪಕ್ಷಿಗಳಿಗೂ ಚಿಕಿತ್ಸಾಲಯಗಳನ್ನು ತನ್ನ




ಅಶೋಕನ ಸ್ತಂಭಗಳಲ್ಲೊಂದು

ರಾಜ್ಯದಲ್ಲೇ ಅಲ್ಲದೆ ನೆರೆಹೊರೆರಾಜ್ಯಗಳಲ್ಲಿಯೂ ಸ್ಥಾಪಿಸಿದನು. ಅನಾಗರಿಕರೆಂದು ತಿರಸ್ಕಾರಕ್ಕೊಳಗಾಗಿದ್ದ ಕಾಡುಜನರನ್ನೂ ಆದಿನಿವಾಸಿಗಳನ್ನೂ ಉದ್ಧಾರಮಾಡುವ ಸಂಕಲ್ಪದಿಂದ ಅವರಿಗಾಗಿಯೇ ಪ್ರತ್ಯೇಕವಾದ ಏರ್ಪಾಡುಗಳನ್ನಿಡಿಸಿದನು. ಸ್ತ್ರೀಯರ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುತ್ತಲಿದ್ದು ತಕ್ಕ ಸಹಾಯನೀಡಿದನು. ಬೌದ್ಧಸಂಘದವರಿಗೆ ವಿಶೇಷವಾಗಿ ದಾನಧರ್ಮಗಳನ್ನು ಮಾಡಿದನು. ಬೌದ್ಧಧರ್ಮಸಂಬಂಧವಾದ ಗ್ರಂಥಗಳನ್ನು ಹುಡುಕಿಸಿ ಜೀರ್ಣೋದ್ಧಾರಗೊಳಿಸಿ ಬೌದ್ಧಭಿಕ್ಷುಗಳಿಂದ ಅವುಗಳನ್ನು ಶುದ್ಧಿಗೊಳಿಸಿದನು. ಕಾಲಗತಿಯಲ್ಲಿ ಮಲಿನವಾಗಿದ್ದ ಬುದ್ಧನ ಉಪದೇಶದಲ್ಲಿ ಹಾಗೂ ಹೀಗೂ ಬೆಳೆದಿದ್ದ ಮೌಢ್ಯವು ಇದರಿಂದ ತೊಲಗಿತು. ಬೌದ್ಧಧರ್ಮವನ್ನು ಶುದ್ಧಿಗೊಳಿಸಿ ಉದ್ಧರಿಸಿದ ಅಶೋಕನೇ ಕಾಶ್ಮೀರ ಸಿಂಹಳ ಬರ್ಮಗಳಿಗೂ ಸಿರಿಯ, ಈಜಿಪ್ಟ್ ಮುಂತಾದ ಗ್ರೀಕರಾಜ್ಯಗಳಿಗೂ ಧರ್ಮಪ್ರಚಾರಕರನ್ನು ಕೊಟ್ಟು ಕಳುಹಿಸಿದನು.

ಆದರೆ ಸಾಮ್ರಾಜ್ಯ ಭದ್ರವಾಗದಾಯಿತು. ಅಶೋಕನು ತೀರಿಕೊಂಡ ಐವತ್ತು ವರ್ಷಗಳೊಳಗಾಗಿ ಆತನ ಸಾಮ್ರಾಜ್ಯ ಛಿದ್ರಛಿದ್ರವಾಯಿತು. ಸಿಕಂದರನ ಸಾಮ್ರಾಜ್ಯದಲ್ಲಿ ಸಂಭವಿಸಿದಂತೆಯೇ ಸಮರ್ಥರಾದ ಉತ್ತರಾಧಿಕಾರಿಗಳಿಲ್ಲದೆ ಪ್ರಾಂತಾಧಿಪತಿಗಳು ಸ್ವತಂತ್ರರಾದರು. ಬ್ರಾಹ್ಮಣಮತನಿಷ್ಠರಾದವರು ಪ್ರಾಬಲ್ಯಕ್ಕೇರಿ ಬೌದ್ಧಮತದ ಉನ್ನತಿಯನ್ನು ತಡೆದರು. ಅಶೋಕನ ಸಾಮ್ರಾಜ್ಯವನ್ನು ಜನರು ಮರೆತೇಹೋದರು. ಆತನ ಧರ್ಮಬೋಧೆಯನ್ನು ಹೊತ್ತ ಬಂಡೆಗಳು ಕಂಭಗಳು ಮಾತ್ರ ಉಳಿದುಕೊಂಡವು. ಆತನ ಶಾಸನಗಳನ್ನು ತೋರಿಸುವ ಕುರುಹುಗಳನ್ನು ಈಗಲೂ ನಮ್ಮ ದೇಶದ ವಾಯುವ್ಯಸರಹದ್ದಿನಿಂದ ಚಿತ್ರದುರ್ಗಜಿಲ್ಲೆಯವರೆಗೆ ಅಲ್ಲಲ್ಲಿ ಕಾಣಬಹುದು.

ಬೌದ್ಧಮತವೆಂಬುದು ತನ್ನ ಜನ್ಮಭೂಮಿಯಲ್ಲಿ ಪ್ರತ್ಯೇಕಜೀವನವನ್ನು ಕಳೆದುಕೊಂಡಾಗ್ಗೂ ನಮ್ಮ ದೇಶದ ಹೊರಗಡೆ ವಿಸ್ತಾರವಾದ ಪ್ರಚಾರ ಪಡೆಯಿತು. ಅಶೋಕನು ಭಿಕ್ಷುಗಳನ್ನು ಪ್ರಚಾರಕ್ಕಾಗಿ ಕಳುಹಿದನಷ್ಟೆ. ಆತನ ಸ್ವಂತಮಗನಾದ **ಮಹೇಂದ**ನ ಪ್ರಯತ್ನದಿಂದ ಸಿಂಹಳದಲ್ಲಿ ಬೌದ್ಧಮತವು ನೆಲೆಗೊಂಡಿತು. ಬರ್ಮದಲ್ಲಿಯೂ ಆತನ ಕಾಲದಲ್ಲಿಯೇ ಈ ಮತದ ಪ್ರಚಾರವು ನಡೆಯಿತು. ಅಶೋಕನ ತರುವಾಯ ಪ್ರಚಾರಕರು ಹಿಮಾಲಯದ ಶ್ರೇಣಿಗಳಿಗಾಚೆ ತಿಬ್ಬತ್ ದೇಶಕ್ಕೂ ಅಲ್ಲಿಂದ ಚೀನಕ್ಕೂ ಕಡೆಗೆ ಜಪಾನಿಗೂ ಹೊರಟರು. ಆಗ್ನೇಯದಲ್ಲಿ ಬರ್ಮದ ಮುಂದಕ್ಕೆ ಜವದ್ವೀಪದಲ್ಲಿಯೂ ಪ್ರಚಾರವಾಯಿತು. ಈಗಲೂ ವೋಲ್ಗಾನದಿ ಬಳಿ ನೆಲೆಸಿರುವ ಟಾರ್ಟರ್

ಜಾತಿಯವರಲ್ಲಿ ಅನೇಕರು ಬೌದ್ಧರಾಗಿಯೇ ಇರುವರು. ಈಗಿನ ಕಾಲದವರು ಅನುಸರಿಸುವ ಬೌದ್ಧಧರ್ಮಕ್ಕೂ ಬುದ್ಧದೇವನ ಉಪದೇಶಕ್ಕೂ ಎಷ್ಟೋ ಅಂತರವಿರಬಹುದು. ಆದರೆ ಬೌದ್ಧಧರ್ಮದ ಅನುಯಾಯಿಗಳಷ್ಟು ಬಹುಸಂಖ್ಯಾಕರು ಮತ್ತಾವ ಧರ್ಮದ ಅನುಯಾಯಿಗಳಲ್ಲಿಯೂ ಇಲ್ಲ.



ತಿಬ್ಬತ್—ಲ್ಹಾಸದಲ್ಲಿರುವ ದೊಡ್ಡ ಬೌದ್ಧವಿಹಾರ

ಹಿಂದುಸ್ತಾನದ ಒಟ್ಟು ಜನಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯವರು ಜಗತ್ತಿನಲ್ಲಿ ಬೌದ್ಧರಾಗಿದ್ದಾರೆ. ಹಿಂದುಸ್ತಾನದಲ್ಲಿರುವ ಬೌದ್ಧರು ಅಲ್ಪಸಂಖ್ಯೆಯವರಾಗಿದ್ದರೂ ಅನ್ಯದೇಶಗಳಲ್ಲಿನ ಬೌದ್ಧರು ಬಹುಸಂಖ್ಯಾಕರಾಗಿದ್ದಾರೆ. ಇದಿಷ್ಟೂ ಅಶೋಕನ ಪ್ರಭಾವದ ಫಲ. ಈ ಸಂಗತಿಯನ್ನು ಪರಿಶೀಲಿಸಿದರೆ ಸತ್ಕಾರ್ಯ ಸತ್ಪರಿಣಾಮಗಳಿಗೆ ಸಂಖ್ಯಾಬಲವೇ ಮುಖ್ಯವಲ್ಲವೆಂದು ತಿಳಿಯುವುದು. ಮುಖ್ಯವಾದುದು ಸಂಕಲ್ಪಬಲ; ಅದರೊಂದಿಗೆ ಉತ್ಸಾಹ, ಭಕ್ತಿ, ದಯಾದಾಕ್ಷಿಣ್ಯಗಳೆಂಬ ಗುಣಗಳು.

ಅಭ್ಯಾಸಗಳು

೧. ಕಾಲವಿಭಾಗಸ್ಥಾನವೆಂದರೇನು? ಕ್ರಿ.ಪೂ. ಆರನೆ ಶತಮಾನವನ್ನು ಹಾಗೆ ಕರೆಯುವು ದಾದರೆ ಅದರ ಹಿಂದೆಯೂ ಮುಂದೆಯೂ ತೋರಿಕೊಂಡ ಸಭ್ಯತೆಗಳಲ್ಲಿ ಕಾಣುವ ಮುಖ್ಯ ವ್ಯತ್ಯಾಸಗಳನ್ನು ವರ್ಣಿಸಿ.

೨. ಸನಾತನ ಆರ್ಯಧರ್ಮದವರು ಬುದ್ಧದೇವನ ಉಪದೇಶವನ್ನು ವಿರೋಧಿಸಿದ್ದೇಕೆ? ಬುದ್ಧನ ತರುವಾಯ ಬೌದ್ಧಮತವೇನಾಯಿತು?

೩. ಅಶೋಕನ ಪ್ರಯತ್ನಗಳಲ್ಲಿ ಎಷ್ಟುಮಾತ್ರ ಸಾರ್ಥಕವಾಯಿತು? ಎಷ್ಟುಮಾತ್ರ ವ್ಯರ್ಥವಾಯಿತು?

೪. ಸ್ವಾರ್ಥದಲ್ಲಿ ಮೂರು ಬಗೆಗಳನ್ನು ಬುದ್ಧದೇವನು ವಿಂಗಡಿಸಿದುದು ಹೇಗೆ? ಅವುಗಳನ್ನು ಹೇಗೆ ದಮನಗೊಳಿಸಬೇಕೆಂದು ಆತನು ಹೇಳಿದನು? ಆ ದಮನದ ಪರಿಣಾಮವೇನು?

೬ನೇ ಅಧ್ಯಾಯ

ಪುರಾತನ ರೋಮಕರು

ಮುಖ್ಯಪ್ರಶ್ನೆ ೨೪ : ರೋಮಕರ ರಾಷ್ಟ್ರಕ್ಕೂ ಗ್ರೀಕರ ನಗರರಾಷ್ಟ್ರಗಳಿಗೂ ಇದ್ದ ಭೇದವೇನು?

ಕ್ರಿ.ಪೂ. ಆರನೆ ಶತಮಾನವನ್ನು ಕಾಲವಿಭಾಗಸ್ಥಾನವೆಂದೆವಷ್ಟೆ. ಆ ಬಳಿಕ ಏಳಿಗೆಗೊಂಡ ಸಭ್ಯತೆಗಳಲ್ಲಿ ರೋಮಕರ ಸಭ್ಯತೆಯೊಂದು. ಸಿಕಂದರನ ಮತ್ತು ಅಶೋಕನ ಸಾಮ್ರಾಜ್ಯಗಳ ಕಾಲದಲ್ಲಿ ರೋಮಕಪಟ್ಟಣವೆಂಬುದು ಏರ್ಪಟ್ಟ ನಗರರಾಷ್ಟ್ರವಾಗಿ ಇಟಲಿ ದೇಶದಲ್ಲಿ ಪ್ರಬಲಗೊಳ್ಳುತ್ತಲೇ ಇತ್ತು.

ಬಾಲ್ಕನ್ ಪರ್ಯಾಯದ್ವೀಪದಲ್ಲಿ ಗ್ರೀಕರು ನೆಲೆಸಿದಂತೆಯೇ ಇಟಲಿಯ ಮಧ್ಯಭಾಗದಲ್ಲಿ ಲ್ಯಾಟಿನರೆಂಬ (Latins) ಗುಂಪಿನವರು ನೆಲೆಸಿದ್ದರು. ಅವರೂ ಗ್ರೀಕರಂತೆ ಆರ್ಯಶಾಖೆಯವರು. ಲ್ಯಾಟಿನರಿಗಿಂತ ಮೊದಲೇ ಅಲ್ಲಿದ್ದವರು **ಎಟ್ರುಸ್ಕನ್** (Etruscans) ಗುಂಪಿನವರು. ಗ್ರೀಕರೆದುರಿಗೆ ಸೋತ ಕ್ರೀಟನರೂ ಈ ಎಟ್ರುಸ್ಕನರೂ ಪ್ರಾಯಶಃ ಒಂದೇ ರಾಶಿಗೆ ಸೇರಿದವರು. ಲ್ಯಾಟಿನರು ಆಕ್ರಮಿಸಿದ ಪ್ರದೇಶಕ್ಕೂ ಎಟ್ರುಸ್ಕನರ ನೆಲೆಗೂ ನಡುವೆ ಇದ್ದುದು **ಟೈಬರ್** (Tiber) ನದಿ. ಆ ನದಿಯನ್ನು ಸುಲಭವಾಗಿ ದಾಟಬಹುದಾಗಿದ್ದ ರೇವಿನ ಬಳಿ ಏಳು ಗುಡ್ಡಗಳಿದ್ದವು. ಆ ಗುಡ್ಡಗಳ ಬಳಿ ನೆಲೆಸಿದ ಲ್ಯಾಟಿನರೆಲ್ಲರೂ ಒಟ್ಟುಗೂಡಿ ಒಂದು ಪಟ್ಟಣಕಟ್ಟಿದರು. ಅದೇ ರೋಮಕನಗರ (Rome). ಅಭಿಮಾನದಿಂದ ಅದನ್ನೇ **ಸಪ್ತಗಿರಿ ಪಟ್ಟಣ** (City of the Seven Hills) ವೆಂದೂ **ಶಾಶ್ವತನಗರಿ** (Eternal City) ಯೆಂದೂ ಐರೋಪ್ಯರು ಕರೆಯುತ್ತಿದ್ದುದು.

ಕಟ್ಟಿದ ಸ್ವಲ್ಪಕಾಲದಲ್ಲಿಯೇ ಪಟ್ಟಣವು ಎಟ್ರುಸ್ಕನ್ ಜನರ ವಶವಾಯಿತು. ಆಳಿದ ಎಟ್ರುಸ್ಕನ್ ದೊರೆಗಳು ಕ್ರೌರ್ಯದಿಂದ ವರ್ತಿಸಿದರು. ಆಗ ರೋಮಕರು ದಂಗೆಯೆದ್ದು ಅವರನ್ನು ಹೊಡೆದಟ್ಟಿ ತಮ್ಮ ನಗರದಲ್ಲಿ ಹೊಸದಾದ ರಾಷ್ಟ್ರವನ್ನು ನೆಲೆಗೊಳಿಸಿದರು. ಈ ಸಂಗತಿ ನಡೆದುದು ಕಾಲವಿಭಾಗಸ್ಥಾನವೆಂದು ನಾವು ಗುರುತಿಟ್ಟ ಕ್ರಿ.ಪೂ. ಆರನೆ ಶತಮಾನದಲ್ಲಿ. ಹೊಸ ರಾಷ್ಟ್ರನಿರ್ಮಾಣದಲ್ಲಿ ರೋಮಕರೂ ಗ್ರೀಕರಂತೆ ಜನಾಧಿಕಾರವನ್ನು ಸ್ಥಾಪಿಸಿದಾಗ್ಯೂ ಅದು ಅಥೆನ್ಸ್ ಮುಂತಾದ ಗ್ರೀಕನಗರಗಳಲ್ಲಿದ್ದ ಆಡಳಿತದ ಕ್ರಮ

ವನ್ನು ಅನುಕರಿಸಲಿಲ್ಲ. ರೋಮಕರು ಕಟ್ಟಿದ್ದು 'ರಿಪಬ್ಲಿಕ್' (republic) ಅಥವಾ ರಾಜರಹಿತರಾಷ್ಟ್ರ; ಗ್ರೀಕರದು 'ಡೆಮೊಕ್ರೆಸಿ' (democracy) ಅಥವಾ ಜನಸ್ವಾಮ್ಯ. ರೋಮಕರಲ್ಲಿ ಮುಖ್ಯಾಧಿಕಾರವೆಲ್ಲವೂ '**ಕಾನ್ಸಲ್**' (consuls) ಎಂಬಿಬ್ಬರಲ್ಲಿತ್ತು. ಪ್ರತಿವರ್ಷವೂ ಕಾನ್ಸಲುಗಳಿಬ್ಬರನ್ನು ನಗರ ನಿವಾಸಿಗಳಾದ ರೋಮಕರು ಚುನಾಯಿಸಿ ಗೊತ್ತುಮಾಡುತ್ತಿದ್ದರು. ಕಾನ್ಸಲುಗಳಾದವರು ತಮ್ಮ ಸಹಾಯಕ್ಕಾಗಿ **ಸೆನೆಟ್** (Senate) ಎಂಬ ಮಂತ್ರಾಲೋಚನಾಸಭೆಯನ್ನು ನೇಮಿಸಿಕೊಳ್ಳುತ್ತಿದ್ದರು.

ಗ್ರೀಕರ ನಗರರಾಷ್ಟ್ರಗಳಲ್ಲಿ ವೋಟಿನ ಅಧಿಕಾರ ಕೆಲವರು ನಿವಾಸಿಗಳಿಗೆ ಮಾತ್ರ ಇದ್ದಿತಷ್ಟೆ. ಹಾಗೆಯೇ ರೋಮಕರಲ್ಲಿಯೂ. ರೋಮಕನಿವಾಸಿಗಳಲ್ಲಿ ಉತ್ತಮಜಾತರೆನಿಸಿದ **ಪ್ಯಾಟ್ರಿಷಿಯನ್** (patricians) ಗುಂಪು ಬೇರೆ; ಸಾಮಾನ್ಯರೆನಿಸಿ ತಕ್ಕಮಟ್ಟಿಗೆ ಆಸ್ತಿಪಾಸ್ತಿ ಪಡೆದ **ಪ್ಲೆಬಿಯನ್** (plebeians) ಗುಂಪು ಬೇರೆ. ಶ್ರೀಮಂತರು-ಸಾಧಾರಣರು ಎಂದು ಹೇಳಬಹುದಾದ ಈ ಎರಡು ಗುಂಪಿನವರು ಮಾತ್ರರೇ ಸ್ವತಂತ್ರರಾಗಿದ್ದವರು. ಉಳಿದ ನಿವಾಸಿಗಳೆಲ್ಲರೂ ಗುಲಾಮರು. ಪ್ಲೆಬಿಯನ್ ಪ್ಯಾಟ್ರಿಷಿಯನ್ ಗುಂಪುಗಳಿಗಿದ್ದುದು ಎಷ್ಟೋ ಅಂತರ. ತಮ್ಮ ಜಾತಿ ಶ್ರೇಷ್ಠವಾದುದೆಂದು ಪ್ಯಾಟ್ರಿಷಿಯನರಿಗೆ ಹೆಮ್ಮೆ. ಪ್ಲೆಬಿಯನ್ನರು ಪ್ಯಾಟ್ರಿಷಿಯನರೊಡನೆ ಸಂಬಂಧ ನಡೆಸಕೂಡದು. ಪ್ಲೆಬಿಯನ್ ಗುಂಪಿನವರಾರೂ ಕಾನ್ಸಲ್ ಪದವಿಯನ್ನು ಪಡೆಯುವ ಹಾಗಿರಲಿಲ್ಲ; ಸೆನೆಟ್ ಸಭಿಕನಾಗುವುದಕ್ಕೂ ಅಧಿಕಾರಪದವಿಪಡೆಯುವುದಕ್ಕೂ ಆಸ್ಪದವಿರಲಿಲ್ಲ. ಹೀಗಿದ್ದುದರಿಂದ ಆಡಳಿತವೆಲ್ಲವೂ ಪ್ಯಾಟ್ರಿಷಿಯನರ ಸ್ವಾಧೀನದಲ್ಲಿತ್ತು. ಅಲ್ಪಸಂಖ್ಯಾಕರಾಗಿದ್ದರೂ ಶ್ರೇಷ್ಠಜಾತರೆಂಬ ದರ್ಪದಿಂದ ಕೂಡಿದ್ದ ಶ್ರೀಮಂತರ ಆಳಿಕೆಯೇ ಆಗಿತ್ತು. ಅದರಲ್ಲಿ ಜನಸ್ವಾಮ್ಯ ತತ್ತ್ವದ ಆಚರಣೆಯೆಲ್ಲಿತ್ತು? ಒಂದಂಶದಲ್ಲಿ ಮಾತ್ರವಿತ್ತು. ಕಾನ್ಸಲುಗಳ ಚುನಾವಣೆಯಲ್ಲಿ ಪ್ಲೆಬಿಯನರಿಗೆ ವೋಟಿನ ಅಧಿಕಾರವಿತ್ತು. ಅವರದೇ ಹೆಚ್ಚು ಸಂಖ್ಯೆ. ಆದ್ದರಿಂದ ಕಾನ್ಸಲ್‌ಪದವಿಗಾಸೆಪಟ್ಟವರು ಅವರ ವೋಟುಗಳನ್ನು ಸಂಪಾದಿಸಿಕೊಳ್ಳಬೇಕಾಗಿತ್ತು. ತಮಗೆ ಮೇಲನ್ನು ಮಾಡಬಹುದಾಗಿದ್ದವರಿಗೆ ಮಾತ್ರ ಪ್ಲೆಬಿಯನರು ವೋಟುಕೊಡುತ್ತಿದ್ದರು.

ಆದರೆ ಎಲ್ಲ ಕಾಲವೂ ಹೀಗೆ ನಡೆಯಲಿಲ್ಲ. ತಮ್ಮ ಸ್ಥಾನಮಾನಗಳನ್ನೂ ಅಧಿಕಾರವನ್ನೂ ಹೆಚ್ಚಿಸಿಕೊಳ್ಳಲು ಪ್ಲೆಬಿಯನರು ಪುನಃ ಪುನಃ ಯತ್ನಿಸಿದರು. ಪ್ಯಾಟ್ರಿಷಿಯನರು ಅದನ್ನು ವಿರೋಧಿಸುತ್ತಲೇ ಇದ್ದರು. ಈ ಎರಡು ಗುಂಪುಗಳ ಜಗಳ ಶತಮಾನಗಟ್ಟಲೆ ನಡೆಯಿತು. ಪ್ರಬಲವಾಗಿ ರೇಗಿದ ಈ ಅಂತಃ

ಕಲಹವು ಹೇಗೆ ಶಮನವಾಯಿತೆಂದು ಮುಂದೆ ಕಾಣುವೆವು. ಆದರೆ ಅದೇ ಕಾಲದಲ್ಲಿ ರೋಮಕನಗರವು ವಿಸ್ತಾರಗೊಂಡು ಇಟಲಿಯಲ್ಲೆಲ್ಲ ಪ್ರಬಲ ವಾಯಿತು. ರಾಷ್ಟ್ರವಿಸ್ತಾರವಾಗುತ್ತ ದೊಡ್ಡ ದೊಡ್ಡ ಯುದ್ಧಗಳು ಸಂಭ ವಿಸಿದವು. ಕಾರ್ಥೇಜ್ ನಿವಾಸಿಗಳೊಂದಿಗೆ ಭಾರಿ ಜಗಳವು ನಡೆಯಿತು.

ಮುಖ್ಯಪ್ರಶ್ನೆ ೨೫: ರೋಮಕರಿಗೂ ಕಾರ್ಥೇಜ್‌ನಿವಾಸಿಗಳಿಗೂ ನಡೆದ ಯುದ್ಧಗಳ ಕಾರಣಪರಿಣಾಮಗಳೇನು?

ಇಟಲಿದೇಶದಲ್ಲಿ ರೋಮಕರು ಇತರರೆಲ್ಲರನ್ನೂ ಸುಲಭವಾಗಿಯೇ ಗೆದ್ದರು. ಆ ಪರ್ಯಾಯದ್ವೀಪಕ್ಕೆ ದಕ್ಷಿಣದಲ್ಲಿರುವ ಸಿಸಿಲಿ ದ್ವೀಪವನ್ನು ಗೆಲ್ಲುವ ಸಮಯದಲ್ಲಿ ರೋಮಕರಿಗೆ ಬಲಿಷ್ಠ ಶತ್ರುಗಳು ಎದುರಾದರು. ಯೆಹುದೀ ಜನರ ಗುಂಪಿಗೆ ಸಂಬಂಧಿಗಳಾಗಿ ಹಡಗುಕಟ್ಟಿಕೊಂಡು ವ್ಯಾಪಾರಸಾಧನೆ ಯಿಂದ ಬಲಿಷ್ಠರಾಗಿದ್ದ **ಫೀನಿಷನ್** (Phœnicians) ಎಂಬ ಜನರು ಭೂಮಧ್ಯ ಸಮುದ್ರದ ದಕ್ಷಿಣತೀರಪ್ರದೇಶವೆಲ್ಲವನ್ನೂ ಆಕ್ರಮಿಸಿಕೊಂಡಿದ್ದರು. ಸ್ಪೈನ್ನಿನಿಂದ ಹಿಡಿದು ಉತ್ತರ ಆಫ್ರಿಕದ ತೀರ, ಸಾರ್ಡಿನಿಯ, ಸಿಸಿಲಿ ಮುಂತಾದ ಪ್ರದೇಶಗಳು ಅವರ ಸ್ವಾಧೀನದಲ್ಲಿದ್ದವು. ಅವರ ಮುಖ್ಯಪಟ್ಟಣ **ಕಾರ್ಥೇಜ್** (Carthage) ಎಂಬುದು ಸಿಸಿಲಿ ದ್ವೀಪಕ್ಕೆದುರಾಗಿ ಆಫ್ರಿಕದ ತೀರದಲ್ಲಿತ್ತು. ಸಮುದ್ರಯಾನದಲ್ಲಿ ನಿಸ್ಸೀಮರಾಗಿದ್ದ ಅಲ್ಲಿಯ ನಿವಾಸಿಗಳು ಹೇರಳವಾದ ಧನವನ್ನು ಕೂಡಿಟ್ಟಿದ್ದರು. ಆ ಪಟ್ಟಣವು ಆ ಕಾಲದಲ್ಲಿ ಐದು ಲಕ್ಷ ನಿವಾಸಿಗಳಿಂದ ಕೂಡಿ ಜನಭರಿತವಾಗಿತ್ತು.

ಸಿಸಿಲಿ ದ್ವೀಪಕ್ಕಾಗಿ ಮೊದಲಾಯಿತು ಕ್ರಿ.ಪೂ. ೨೬೪ರಲ್ಲಿ ಇಬ್ಬರಿಗೂ ಜಗಳ. ಅದೇ ವೇಳೆಯಲ್ಲೇ ಧರ್ಮಾಶೋಕನು ನಮ್ಮ ದೇಶದಲ್ಲಿ ಆಳುತ್ತಿದ್ದು ಯುದ್ಧತ್ಯಾಗಮಾಡಿದ್ದು. ಕಾರ್ಥೇಜ್ ನಿವಾಸಿಗಳು ಜಲಯುದ್ಧ ನಿಪುಣರು. ರೋಮಕರಿಗೆ ಜಲಯುದ್ಧದ ಅನುಭವ ಸಾಲದಿತ್ತು. ಆದರೆ ಜಾಣತನದಿಂದ ರೋಮಕರು ಹೊಸರೀತಿಯ ಹಡಗಿಗೆ ಮರದ ಸೇತುವೆಯೊಂದನ್ನು ಕಟ್ಟಿ ಕೊಂಡು ಹೊರಟು ನೀರಮೇಲಿನ ಯುದ್ಧದಲ್ಲಿಯೂ ಜಯಶಾಲಿಗಳಾದರು. ಆದರೆ ಜಗಳವು ಅಷ್ಟಕ್ಕೇ ನಿಲ್ಲಲಿಲ್ಲ. ಎರಡನೆಸಲ ಭಾರಿ ಯುದ್ಧರೇಗಿತು. ಕಾರ್ಥೇಜ್ ಸೈನ್ಯದ ದಳಪತಿಯಾಗಿದ್ದ ಅಸಮಸಾಹಸಿಯೊಬ್ಬಾತನು ಯುದ್ಧ ನಡೆಸಿದನು. ಆತನ ಹೆಸರು **ಹ್ಯಾನಿಬಾಲ್** (Hannibal). ಸ್ಪೈನ್ನಿನಿಂದ ದೊಡ್ಡ ಸೈನ್ಯವನ್ನೆತ್ತಿ ಹೊರಟ ಆತನು ಆಲ್‌ಪ್ಸ್ ಪರ್ವತಗಳ ಮಧ್ಯೆ ನುಗ್ಗಿ ಅವುಗಳನ್ನು ದಾಟಿಕೊಂಡು ಉತ್ತರದಿಂದ ಇಟಲಿಯನ್ನೇ ಆಕ್ರಮಿಸಿದನು.

ಆತನೊಡ್ಡಿದ ವಿಪತ್ತಿನಿಂದ ರೋಮಕರು ಪಾರಾಗಲು ಅತಿ ಪ್ರಯಾಸಪಟ್ಟರು. ಕ್ರಿ. ಪೂ. ೧೪೬ರಲ್ಲಿ ಮೂರನೆಸಲ ಮತ್ತೆ ಯುದ್ಧ ನಡೆಯಿತು. ರೋಮಕ ದಳಪತಿ **ಕಿರಿಯ ಸಿಪಿಯೊ** (Scipio the Younger) ಸೈನ್ಯವನ್ನು ನಡೆಸಿ ಕಾರ್ಥೇಜ್ ನಗರವನ್ನು ಸುತ್ತುಗಟ್ಟಿಕೊಂಡನು. ನಗರನಿವಾಸಿಗಳಿಗೆ ಆಹಾರ ಸಾಮಗ್ರಿಯಿಲ್ಲದಂತಾಯಿತು. ಯಾವ ಬಗೆಯ ಆಹಾರವೂ ಇಲ್ಲದೆ ಆರುದಿನ ಕಳೆದರು. ಕೊನೆಗೆ ಶರಣೆನ್ನಬೇಕಾಯಿತು. ಆ ಸಮಯದಲ್ಲಿ ಆಹಾರವಿಲ್ಲದೆ ನಾಲ್ಕುವರೆಲಕ್ಷ ಜನ ಪ್ರಾಣತೊರೆದರು. ಐದುಲಕ್ಷ ಜನರಿದ್ದ ಊರನ್ನು ರೋಮಕರು ಪ್ರವೇಶಿಸಿದಾಗ ಅರ್ಧಲಕ್ಷ ಮಟ್ಟಿಗೆ ನಿವಾಸಿಗಳು ಜೀವಂತ ರಾಗಿದ್ದರು. ಅವರೆಲ್ಲರನ್ನೂ ಬಂಧಿಸಿ ಗುಲಾಮರಂತೆ ಮಾರಿಬಿಟ್ಟು ರೋಮ ಕರು ರೋಷವನ್ನು ಕಾರಿ ಪಟ್ಟಣವನ್ನು ಸುಡಿಸಿ ಬೂದಿಮಾಡಿ, ಆ ತರು ವಾಯ ನೆಲವನ್ನುಳಿಸಿಬಿಟ್ಟರು. ಕಾರ್ಥೇಜ್ ನಗರವು ಸರ್ವನಾಶವಾಯಿತು. ನಭೂತೋ ನಭವಿಷ್ಯತಿ ಎಂಬಂತಹ ಜಯ ರೋಮಕರಿಗೆ ಲಭಿಸಿತು. ಆದರೆ ಪರಿಣಾಮದಲ್ಲಿ ಗೆದ್ದವರಿಗೇ ಬಂತು ನಾಶ! ಈ ಸೋಜಿಗ ಹೇಗೆ?

ನೂರಾರು ವರ್ಷಕಾಲ ನಡೆದ ಯುದ್ಧಕ್ಕಾಗಿ ರೋಮಕರು ಸೈನ್ಯಕಟ್ಟಲು ಇಟಲಿಯಲ್ಲಿ ಕೃಷಿಜೀವಿಗಳಾಗಿದ್ದವರನ್ನು ಸೇರಿಸಿಕೊಂಡಿದ್ದರು. ಯುದ್ಧದಲ್ಲಿ ಜಯಪಡೆದು ಹಿಂತಿರುಗಿದವರು ಮತ್ತೆ ಕೃಷಿಯನ್ನು ಅವಲಂಬಿಸಲೇ ಇಲ್ಲ. ಯುದ್ಧಕಾಲದಲ್ಲಿ ಯಥೇಷ್ಟವಾಗಿ ಸಂಪಾದನೆಯಾಗಿದ್ದುದರಿಂದ ಅವರಿಗೆ ಸಂಪಾದನೆ ಬೇಕಾಗಿರಲಿಲ್ಲ; ಭೋಗ ಬೇಕಾಗಿತ್ತು. ಹಿಂತಿರುಗಿ ಬಂದವರು ತಮ್ಮ ಹಳೆ ಭೂಮಿಗಳನ್ನು ಮಾರಿಬಿಟ್ಟು ಬಂದ ಹಣವನ್ನು ಕಟ್ಟಿಕೊಂಡು ಪಟ್ಟಣಗಳಲ್ಲಿ ನೆಲೆಸಿದರು. ಆ ಭೂಮಿಗಳನ್ನು ಕೊಂಡುಕೊಂಡ ಪ್ಯಾಟ್ರಿಷಿ ಯನ್ ಗುಂಪಿನವರು ಗುಲಾಮರನ್ನು ಕೊಂಡಿಟ್ಟು ಅವುಗಳ ಆರಂಬಮಾಡಿಸ ತೊಡಗಿದರು. ಗುಲಾಮರಿಗೆ ಕೊರತೆಯಿರಲಿಲ್ಲ; ಯುದ್ಧದಲ್ಲಿ ಬಂದಿಗಳಾದವರೆಲ್ಲ ಗುಲಾಮರೇ. ಹೀಗಾಗಿ ಉದ್ಯೋಗಿಗಳಾಗಿ ಕಷ್ಟಪಡುತ್ತಿದ್ದವರೆಲ್ಲ ಗುಲಾ ಮರೇ ಆದರು. ಸಿಪಾಹಿಗಳಾಗಿದ್ದವರೆಲ್ಲರೂ ನಗರಗಳಲ್ಲಿ ಸೇರಿಕೊಂಡು ಪರ್ವ ಕಾಲದ ವಿನೋದಗಳಲ್ಲಿ ಕಾಲ ಕಳೆಯಲಾರಂಭಿಸಿದರು. ವಿಧವಿಧವಾದ ಮೇಲಾಟಗಳೂ ಸ್ಪರ್ಧೆಗಳೂ ಮಲ್ಲಯುದ್ಧಗಳೂ ರೋಮಕನಗರದಲ್ಲಿ ಪ್ರಸಿದ್ಧ ವಾದವು. ಕೊನೆಗಾದುದೇನು? ತಮ್ಮಲ್ಲಿದ್ದ ಹಣ ವೆಚ್ಚವಾಗಿ ಹೋದಮೇಲೂ ಆ ಜನರಿಗೆ ವಿನೋದಗಳು ಬೇಕಾದುವು. ಆ ವಿನೋದಗಳನ್ನು ಸರ್ಕಾರದವರೇ ಒದಗಿಸಬೇಕಾಯಿತು. ಇಲ್ಲದಿದ್ದರೆ ಆ ಪುಂಡರ ತಂಡಗಳೆಲ್ಲ ಸೇರಿ ದಂಗೆ ದರೋಡೆಯೆಬ್ಬಿಸತಕ್ಕವರಾಗಿದ್ದರು. . ಆದ್ದರಿಂದ ಸೈನಿಕ ಪುಂಡರಿಗೆ ಹೆದರುತ್ತ



ರೋಮಕ ಪದಾತಿ

ಸರ್ಕಾರದವರು ಅವರಿಗೆ ಉಚಿತವಾಗಿ ಧಾನ್ಯಗಳನ್ನು ಕೊಡಿಸಿ ವಿನೋದಾವಳಿಯನ್ನು ಒದಗಿಸುತ್ತ ಇರಬೇಕಾದ ಸ್ಥಿತಿಯು ಬಂತು. ರಾಷ್ಟ್ರಕ್ಕೇ ಅಪಾಯ ತೋರಿತು. ಬರಬರುತ್ತ ಆ ಅಪಾಯ ಹೆಚ್ಚಿತು.

ಮುಖ್ಯಪ್ರಶ್ನೆ ೨೬ : ಜೂಲಿಯಸ್ ಸೀಸರ್ ಪ್ರಬಲನಾದುದು ಹೇಗೆ? ರೋಮಕರಿಗಾಗಿ ಆತನು ಮಾಡಿದುದೇನು?

ಅಂತಹ ಪರಿಸ್ಥಿತಿಯು ಶೂರರಿಗೂ ಪರಾಕ್ರಮಿಗಳಿಗೂ ಅನುಕೂಲವಾಗಿತ್ತು. ಸೈನಿಕರನ್ನು ದಳದಲ್ಲಿ ಸೇರಿಸಿ ಸಂಬಳಸಾರಿಗೆಗಳನ್ನು ಸಲ್ಲಿಸಬಲ್ಲವನಾಗಿದ್ದ ಶೂರನಿಗೆ ಅಧಿಕಾರಸೇರುವಂತಾಗಿ ಸೆನೆಟ್ ಸಭೆಯ ಅಧಿಕಾರ ಲುಪ್ತವಾಗುತ್ತ ಬಂತು. ಶೂರರಲ್ಲಿಯೇ ಪೋಟಾಪೋಟಿ ಮೊದಲಾಯಿತು. ಯಾವ ದಳಪತಿ ಸಮರ್ಥನಾಗಿದ್ದನೋ ಅವನ ವಶವಾಯಿತು ರೋಮಕರಾಷ್ಟ್ರ. ರೋಮಕನಗರವು ಕೈಚಂಡಿನಂತೆ ಒಬ್ಬ ಶೂರನ ಕೈಯಿಂದ ಮತ್ತೊಬ್ಬ ಶೂರನ ಕೈಸೇರುತ್ತಿತ್ತು. ಅಂತಹ ಸಮರ್ಥ ದಳಪತಿಗಳಲ್ಲೆಲ್ಲ ಅತಿಸಮರ್ಥನಾಗಿದ್ದಾತನು **ಜೂಲಿಯಸ್ ಸೀಸರ್.** ಕ್ರಿ.ಪೂ. ಮೊದಲನೆ ಶತಮಾನದಲ್ಲಿ ಪ್ರಸಿದ್ಧರಾದ ಶೂರದಳಪತಿಗಳಲ್ಲಿ ಆತನೇ ಕೊನೆಯಾತ ಮತ್ತು ಅತಿದಕ್ಷ.

ತಮ್ಮೊಂದಿಗೆ ಸ್ಪರ್ಧಿಸಿದವರನ್ನು ನಾಶಗೊಳಿಸಿ ಅವರ ಸಂಪತ್ತನ್ನು ವಶಪಡಿಸಿಕೊಂಡ ಬಳಿಕ ರೋಮಕದಳಪತಿಗಳು ಎತ್ತ ಐಶ್ವರ್ಯಕಂಡರೆ ಅತ್ತ ಧಾಳಿಯಿಟ್ಟು ಯಶಸ್ವಿಗಳಾಗಲು ಯತ್ನಿಸಿದರು. ಕೆಲವರು ಮೂಡಲಲ್ಲಿ ಮತ್ತೆಕೆಲವರು ಉತ್ತರ ಪಶ್ಚಿಮಗಳಲ್ಲಿ ಜಯಶಾಲಿಗಳಾದರು. ಬೇಕಾದಷ್ಟು ಭಟರು ಸೇರಿಕೊಳ್ಳಲು ಸಿದ್ಧರಾಗಿದ್ದರು; ಅವರಿಗೆ ಸಂಬಳಕೊಡಲು ಹಣಮಾತ್ರ ಬೇಕಾಗಿತ್ತು. ಕೊಳ್ಳೆಯ ಧನವಲ್ಲದೆ ಯುದ್ಧದಲ್ಲಿ ಸೆರೆ ಸಿಕ್ಕಿದವರನ್ನು ಗುಲಾಮರಂತೆ ಮಾರಿದ ಹಣವೂ ಯಥೇಷ್ಟವಾಗಿ ದೊರಕುತ್ತಿದ್ದ ಕಾಲ. ಸೀಸರನು ಸೈನ್ಯಕಟ್ಟಿ ಮೊದಲು **ಗಾಲ್** (Gaul) ಎಂಬ ಪ್ರದೇಶ (ಈಗಿನ ಫ್ರಾನ್ಸ್ ಮತ್ತು ಬೆಲ್ಜಿಯಂ) ವನ್ನು ಗೆದ್ದು ಹೆಸರುವಾಸಿಯಾದನು. ಆ ಸಮಯದಲ್ಲಿಯೇ ಬ್ರಿಟನ್ ದ್ವೀಪವನ್ನು ಮುತ್ತಿದನು; ಆದರೆ ಅಲ್ಲಿ ನಿಲ್ಲಲಿಲ್ಲ. ಆತನ ತರುವಾಯ ಆ ದ್ವೀಪವು ರೋಮಕರಿಗೆ ಸೇರಿತು.

ದೇಶಗಳನ್ನು ಗೆಲ್ಲುವ ದಳಪತಿ ಮಾತ್ರನಲ್ಲ ಜೂಲಿಯಸ್ ಸೀಸರ್. ಆತನು ಅಸಾಧಾರಣ ಪ್ರತಿಭಾವಂತನು. ಆಡಳಿತದಲ್ಲಿ ಜಾಣನಾಗಿದ್ದುದಲ್ಲದೆ ಒಳ್ಳೆ ಬರಹಗಾರನಾಗಿಯೂ ಇದ್ದವನು. ಗೆದ್ದ ಪ್ರದೇಶಗಳಲ್ಲಿ ಆತನು ಕ್ರಮ



ಶ್ರೀಮಂತ



ಬಡವ




ಶ್ರೀಮಂತನ ಹರ್ಮ್ಯ



ಬಡವನ ಕುಟೀರ

ವಾದ ಆಡಳಿತವನ್ನು ನೆಲೆಗೊಳಿಸಿದನು; ಕೊಳ್ಳೆಹೊಡೆಸಿ ನಾಶಪಡಿಸುವುದರಿಂದ ಮಾತ್ರ ತೃಪ್ತನಾಗಲಿಲ್ಲ.

ಸೀಸ್ಡರನ ಪ್ರಾಬಲ್ಯವನ್ನು ಕಂಡು ಇತರರು ಅಸೂಯೆಗೊಂಡರು. ಕಾಲ ಮೀರುವ ಮೊದಲೇ ಆತನ ಪ್ರಾಬಲ್ಯವನ್ನು ಅಡ್ಡಿಪಡಿಸಲು ಬಗೆದು ಸೆನೆಟ್ ಸಭೆಯವರು ಆತನನ್ನು ಹಿಂದಕ್ಕೆ ಕರೆಸುವಂತೆ ಸಂಧಾನ ನಡೆಸಿದರು. ಗಾಲ್ ಪ್ರದೇಶದಲ್ಲಿದ್ದಾತನು ಸೈನ್ಯವನ್ನಲ್ಲಿಯೇ ಬಿಟ್ಟು ರೋಮಕಪಟ್ಟಣಕ್ಕೆ ಹಿಂತಿರುಗಬೇಕಾಗಿತ್ತು. ಏಕೆಂದರೆ ತನಗೆ ನಿಶ್ಚಿತವಾದ ಪ್ರಾಂತದ ಹೊರಗೆ ತನ್ನ ಸೈನ್ಯವನ್ನು ಒಯ್ಯುವ ಅಧಿಕಾರವು ಯಾವ ದಳಪತಿಗೂ ಇರಲಿಲ್ಲ. ಸೀಸ್ಡರನಿದ್ದ ಪ್ರದೇಶಕ್ಕೂ ಇಟಲಿಗೂ ನಡುವೆ **ರೂಬಿಕಾನ್** (Rubicon) ಎಂಬ ನದಿಯಿತ್ತು. ಸೈನ್ಯಸಹಿತನಾಗಿ ಅದನ್ನು ದಾಟುವುದೆಂದರೆ ಸೆನೆಟ್ ಸಭೆಯನ್ನು ಅಸಡ್ಡೆಮಾಡಿದಂತೆಯೇ ಸರಿ. ಸೀಸ್ಡರನು ರೂಬಿಕಾನ್ ನದಿಯನ್ನು ತನ್ನ ದಳದೊಡನೆ ದಾಟಿಯೇ ದಾಟಿದನು. ತನ್ನ ವಿರೋಧಿಗಳನ್ನು ಸ್ವಲ್ಪ ಮಾತ್ರದಲ್ಲಿ ಸೋಲಿಸಿ ನಾಶಗೊಳಿಸಿದನು. ರೋಮಕನಗರ ಸಮಸ್ತವೂ ಆತನ ಅಂಗೈಯಲ್ಲಿ ನಿಂತಿತು. ಹೆಸರಿಗೆ ಮಾತ್ರ ಅಧಿಕಾರ ಪಡೆದಿದ್ದ ಸೆನೆಟ್ ಸಭೆ ಸೀಸ್ಡರನ ಇಷ್ಟದಂತೆ ವರ್ತಿಸತಕ್ಕದಾಯಿತು. ಇದು ನಡೆದುದು ಕ್ರಿ.ಪೂ. ೪೮ನೆ ವರ್ಷದಲ್ಲಿ.



ಜೂಲಿಯಸ್ ಸೀಸ್ಟರ್

ಸೆನೆಟ್ ಸಭೆಯವರು ಸೀಸ್ಡರನಿಗೆ ಆಜೀವವಾಗಿ **ಡಿಕ್ಟೇಟರ್** ಅಥವಾ ಸರ್ವಾಧಿಕಾರಪದವಿ (dictator) ಯನ್ನು ಕೊಟ್ಟುಬಿಟ್ಟರು. ಸೀಸ್ಡರನು ಕಿರೀಟಮಾತ್ರವಿಲ್ಲದ ಪ್ರಭುವಾದನು. ವಾಸ್ತವವಾಗಿ ಪ್ರಭುವಾಗಿದ್ದರೂ ಆ ಹೆಸರು ಬಿರುದುಗಳನ್ನು ಮಾತ್ರ ಸೀಸ್ಡರನು ವಹಿಸದಾದನು. ರಿಪಬ್ಲಿಕ್ ಭಕ್ತರೆಂದು ಹೆಮ್ಮೆಗೊಳ್ಳುತ್ತಿದ್ದ ರೋಮಕರಿಗೆ ರಾಜನೆಂದರೆ ಆಗದ ಸಂಗತಿಯನ್ನು ಆತನು ಚನ್ನಾಗಿ ಬಲ್ಲವನು. ಸರ್ವಾಧಿಕಾರವಹಿಸಿದ ಕೂಡಲೇ

ಆಡಳಿತದಲ್ಲಿ ತಿದ್ದುಪಾಡುಗಳನ್ನು ನಡೆಸಿ ಸುವ್ಯವಸ್ಥೆಗೊಳಿಸಲು ಮೊದಲಿಟ್ಟನು. ಆದರೆ ಅಧಿಕಾರ ನಡೆದುದು ನಾಲ್ಕೇ ವರ್ಷಗಳು. ಇಟ್ಟುಕೊಂಡ ಮಹತ್ಕಾರ್ಯವನ್ನು ಮೊದಲಿಟ್ಟು ಮುಂದೆ ಸಾಗಿಸುವಷ್ಟರಲ್ಲಿ ಪ್ರಸಿದ್ಧವಾದ ಒಂದು ಪಿತೂರಿ ನಡೆಯಿತು. ಅನೇಕ ಶತ್ರುಗಳಲ್ಲದೆ ಆಪ್ತಮಿತ್ರನೆನಿಸಿದ್ದ **ಬ್ರೂಟಸ್** (Brutus) ಎಂಬಾತನೂ ಸೇರಿ ಆ ಪಿತೂರಿಯನ್ನು ಕಟ್ಟಿದರು. ಸೀಸರನು ರಾಜನಾಗುವ ದುರಾಸೆ ಬೆಳೆಸಿದ್ದನೆಂದು ಬ್ರೂಟಸನಿಗೆ ಶಂಕೆ. ಪಿತೂರಿಗಾರರು ಸೇರಿ ಸೆನೆಟ್ ಸಭಾಭವನದಲ್ಲಿಯೇ ಸೀಸರನನ್ನು ಕೊಂದು ಹಾಕಿದರು.

ಮುಖ್ಯಪ್ರಶ್ನೆ ೨೭ : ಜೂಲಿಯಸ್ ಸೀಸರನ ತರುವಾಯ ಬಂದವನು ಯಾರು? ರೋಮಕರಿಗಾಗಿ ಅವನು ಮಾಡಿದ್ದೇನು?

ಜೂಲಿಯಸ್ ಸೀಸರನ ಸೋದರಿಯ ಮೊಮ್ಮಗನಾದ **ಆಕ್ಟೇವಿಯನ್** (Octavian) ಎಂಬಾತನು ಬಲುಜಾಣನಾಗಿ ಮೊದಲಿಟ್ಟು ಬ್ರೂಟಸ್ ಮುಂತಾದವರನ್ನು ಸೋಲಿಸಿ ರೋಮಕರೆಲ್ಲರಿಗೂ ನಾಯಕನಾದನು. ಜೂಲಿಯಸ್ಗಿಗಾದ ಗತಿಯನ್ನು ಸ್ಮರಿಸಿ ಆಕ್ಟೇವಿಯನ್ ಅಧಿಕಾರವನ್ನು ವಹಿಸಿದ್ದಾಗ್ಯೂ ಸೆನೆಟ್‌ಸಭೆಯ ಅಧಿಕಾರವನ್ನೇ ನಡೆಸುತ್ತಿರುವಂತೆ ನಟಿಸಿದನು. ರಿಪಬ್ಲಿಕ್ ರೂಪದ ಕೆಲವು ಲಕ್ಷಣಗಳನ್ನು ಪಾಲಿಸುತ್ತಲಿದ್ದು ತಾನೇ ಸಮಸ್ತಾಧಿಕಾರವನ್ನೂ ನಿರ್ವಹಿಸಿದನು. ರಾಜಶಬ್ದಸಂಬಂಧವಾದ ಆಡಂಬರದ ಬಿರುದುಗಳನ್ನೊಲ್ಲದೆ ತಾನು ಮೊದಲನೆ ಪೌರ ಅಥವಾ **ಪ್ರಿನ್ಸೆಪ್ಸ್** (Princeps) ಮತ್ತು ಸಮಸ್ತ ಸೈನ್ಯಾಧಿಪತಿ ಅಥವಾ **ಇಂಪೆರೇಟರ್** (Imperator) ಎಂಬ ಬಿರುದುಗಳನ್ನಿಟ್ಟುಕೊಂಡನು. ವೈಭವಶಾಲಿ ಎಂಬರ್ಥ ಕೊಡುವ **ಆಗಸ್ಟಸ್** (Augustus) ಎಂಬುದು ಸೆನೆಟ್ ಸಭಿಕರು ಆತನಿಗೆ ಕೊಟ್ಟ ಬಿರುದು. ಕಾಲಕ್ರಮದಲ್ಲಿ ಆಕ್ಟೇವಿಯನ್ ಎಂಬ ಹೆಸರಿಗೆ ಬದಲಾಗಿ ಆಗಸ್ಟಸ್ ಎಂಬುದೇ ರೂಢಿಯಾಯಿತು. **ಸೀಸರ್** ಎಂಬುದು ಅವನ ಮನೆತನದ ಹೆಸರು.[1] ಬರಬರುತ್ತ ಸೀಸರ್ ಎಂದರೆ ಪ್ರಭುವೆಂಬ ಅರ್ಥಬೆಳೆಯಿತು. ಆ ಮನೆತನದವರೇ ಐದುತಲೆಗಳವರೆಗೆ ಕ್ರಮವಾಗಿ ಸರ್ವಾಧಿಕಾರ ವಹಿಸಿ ಇಂಪೆರೇಟರ್ ಎನ್ನಿಸಿಕೊಂಡು ಒಂದು ಶತಮಾನಕಾಲ ರೋಮಕರನ್ನು ಆಳಿದರು. ರಾಜ ಅಥವಾ ಸಂರಾಟ್ ಎಂಬ ಹೆಸರೊಂದು ಮಾತ್ರ ಅವರಿಗಿರಲಿಲ್ಲ; ಎಲ್ಲ ಅಧಿ

[1] 'ಜುಲೈ' ಮತ್ತು 'ಆಗಸ್ಟ್' ಎಂಬ ತಿಂಗಳುಗಳ ಹೆಸರುಗಳು ಜೂಲಿಯಸ್ ಮತ್ತು ಆಗಸ್ಟಸ್ ಎಂಬಿಬ್ಬರ ಜ್ಞಾಪಕಾರ್ಥವಾಗಿ ಇಟ್ಟವುಗಳು.

ಕಾರವೂ ಇತ್ತು. ಆದ್ದರಿಂದ ಅವಸಾನಕಾಲದಲ್ಲಿ ತಮ್ಮ ಪದವಿಯನ್ನು ತಮ್ಮ ಮನೆಯಲ್ಲಿ ಹುಟ್ಟಿದವರಿಗೇ ಕೊಡಿಸಬಲ್ಲವರಾದರು. ವಿಸ್ತಾರವಾದ ಸಾಮ್ರಾಜ್ಯಕ್ಕೆ ಸರ್ವಾಧಿಪತಿಗಳಾಗಿದ್ದ ಈ ಸೀಸ್ಞರ ಮನೆತನದ ಹೆಸರು ಲೋಕವ್ಯಾಪ್ತವಾಗಿ ರಾಜಶಬ್ದಕ್ಕೆ ಸಮಾನವಾಯಿತು. ರಷ್ಯದ ಸ್ಞಾರ್ (Tsar), ಜರ್ಮನಿಯ ಕೈಸ್ಞರ್ (Kaiser) ಮುಂತಾದ ಬಿರುದುಗಳಲ್ಲಿ ಅದನ್ನು ಕಾಣಬಹುದು.

ಆಗಸ್ಟಸ್ ಆಳಿದ್ದು ನಲವತ್ತೊಂದು ವರ್ಷ. ಸಮರ್ಥನಾಗಿದ್ದುದರಿಂದ ಆತನು ಜೂಲಿಯಸ್ ಸೀಸ್ಞರನ ಕೆಲಸವನ್ನು ಪೂರೈಸಿದನು. ಎಲ್ಲೆಲ್ಲಿಯೂ ನಡೆಯುತ್ತಿದ್ದ ದರೋಡೆಗಳನ್ನೂ ನೀಚಕೃತ್ಯಗಳನ್ನೂ ನಿಲ್ಲಿಸಿ ಕ್ರಮಬದ್ಧವಾಗಿ ನಡೆಯಬಹುದಾದ ಆಡಳಿತವನ್ನು ನೆಲೆಗೊಳಿಸಿದನು. ಪ್ರಾಂತಗಳನ್ನೂ ಸುವ್ಯವಸ್ಥೆಗೆ ತಂದನು. ಇನ್ನು ಮುಂದೆ ಸಾಮ್ರಾಜ್ಯವನ್ನು ವಿಸ್ತರಿಸುವುದು ಬೇಡವೆಂದು ವಿವೇಕದಿಂದ ನಿಶ್ಚಯಿಸಿದನು. ಅಟ್ಲಾಂಟಿಕ್ ಸಾಗರದ ತೀರ, ರೈನ್ ಡಾನ್ಯೂಬ್ ನದಿಗಳು, ಕಪ್ಪುಸಮುದ್ರದ ತೀರ, ಯೂಫ್ರಟೀಸ್ ನದಿ ಮತ್ತು ಅರಬ್ಬಿಸಹರಾಮರುಭೂಮಿಗಳು ರೋಮಕಚಕ್ರಾಧಿಪತ್ಯದ ಮೇರೆ



ರೋಮಕ ಸಾಮ್ರಾಜ್ಯ

ಗಳಾಗಿರತಕ್ಕುದೆಂದು ನಿರ್ಧರಿಸಿದನು. ಅಷ್ಟು ವಿಶಾಲವಾದ ಪ್ರದೇಶದಲ್ಲಿ ಮೂರು ಶತಮಾನಕಾಲ ರೋಮಕರ ಆಡಳಿತವು ನಡೆಯುತ್ತಿದ್ದು ರೋಮಕ ರಿಂದ ಸ್ಥಾಪಿತವಾದ ಶಾಂತಿ ಅಥವಾ **ರೋಮಕ ಶಾಂತಿಯು** (Pax Romana) ನೆಲೆಸಿತ್ತು.

ಆಗಸ್ಟಸ್ ತರುವಾಯ ಆಳಿದ ಚಕ್ರವರ್ತಿಗಳು ಮೊದಮೊದಲು ದಕ್ಷ ರಾಗಿದ್ದರು. ಆ ಬಳಿಕ ಪಟ್ಟಭದ್ರರಾದವರು ಉನ್ಮತ್ತರು. ನೀರೋ (Nero) ಎಂಬ ಚಕ್ರವರ್ತಿಯಂತೂ ಅತ್ಯುನ್ಮತ್ತನೆಂದು ಹೆಸರಾದವನು. ಇದರ ಪರಿಣಾಮವಾಗಿ ಸೈನ್ಯದವರ ಪ್ರಾಬಲ್ಯವೇರಿ ಸೈನಿಕರು ಮೆಚ್ಚಿದಾತನೇ ಪ್ರಭುವಾಗಲಾರಂಭವಾಯಿತು. ಕ್ರಿ.ಶ. ೯೬ರ ತರುವಾಯ ಆಳಿದ **ನೆರ್ವ** (Nerva) **ಟ್ರಾಜನ್** (Trajan) ಮುಂತಾದವರು ದಕ್ಷರೆನಿಸಿದ್ದುದರಿಂದ 'ರೋಮಕ ಶಾಂತಿ'ಯೆಂಬುದು ಭದ್ರಗೊಂಡಿತು. ಆ ಕಾಲದ ಚಕ್ರವರ್ತಿಗಳಲ್ಲಿ ಸುಪ್ರಸಿದ್ಧನಾದಾತನು **ಮಾರ್ಕಸ್ ಔರೇಲಿಯಸ್** (Marcus Aurelius). ಆತನು ಒಳ್ಳೆ ದಳಪತಿಮಾತ್ರನಲ್ಲದೆ ತತ್ತ್ವಜ್ಞನೂ ಆಗಿದ್ದು ಸದಾ ಶ್ರಮಿಸುತ್ತ ಲಿದ್ದು ರಾಜ್ಯಪಾಲಕರಿಗೆ ಆದರ್ಶನೆನಿಸಿದನು. ಆತನನ್ನು ಪ್ರಜೆಗಳು ದೇವರೆಂದು ಸನ್ಮಾನಿಸುತ್ತಿದ್ದರು. ಆತನ ತರುವಾಯ ಚಕ್ರಾಧಿಪತ್ಯದ ಇಳಿಗಾಲ ಮೊದ ಲಾಯಿತು.

ಮುಖ್ಯಪ್ರಶ್ನೆ ೨೮ : ರೋಮಕರು ಸಾಧಿಸಿದ್ದೆಷ್ಟು ಮಾತ್ರ ? ಸಾಧಿಸಲಾರದ್ದೆಷ್ಟು ?

ರೋಮಕರ ಭಾಷೆ **ಲ್ಯಾಟಿನ್**; ಸಂಸ್ಕೃತದಂತೆ ಆರ್ಯಭಾಷೆ. ಇಟಲಿ ಯನ್ನು ಗೆದ್ದು ಅಲ್ಲಿಂದ ಪೂರ್ವಕ್ಕೂ ಪಶ್ಚಿಮಕ್ಕೂ ವ್ಯಾಪಿಸಿ ಮೂರು ಖಂಡಗಳಲ್ಲಿ ಭೂಭಾಗಗಳನ್ನು ಗೆದ್ದು ಸಾಮ್ರಾಜ್ಯ ಕಟ್ಟಿದ ರೋಮಕರಲ್ಲಿ ಯೋಧರಿಗಿರಬೇಕಾದ ಗುಣಗಳಿದ್ದುವು. ರೋಮಕಭಕ್ತಿಯಿಂದಲೇ ಅವರಿಗೆ ತೇಜಸ್ಸುಂಟಾದುದು. ದೂರ ಪ್ರದೇಶಗಳನ್ನು ಗೆದ್ದ ಬಳಿಕ ಅವುಗಳನ್ನು ವಶ ದಲ್ಲಿಟ್ಟುಕೊಳ್ಳಲು ಸಂಚಾರಮಾರ್ಗಗಳನ್ನು ನಿರ್ಮಿಸಿಕೊಂಡರು. ಯೂರೋಪಿ ನಲ್ಲೆಲ್ಲ ಅವರೇ ರಸ್ತೆಗಳೆಂಬುವನ್ನು ಮೊದಲು ರಚಿಸಿದವರು. ಆಡಳಿತ ಕಟ್ಟುವುದರಲ್ಲಿ ನ್ಯಾಯಸ್ಥಾಪನೆ ಮುಖ್ಯವಲ್ಲವೆ! ವಿಸ್ತಾರಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸುವುದರಲ್ಲಿ ರೋಮಕರು ಎಲ್ಲ ಭಾಗಗಳಲ್ಲಿಯೂ ಏಕರೀತಿಯಾದ ನ್ಯಾಯಸೂತ್ರಗಳನ್ನೂ ವಿಧಿಗಳನ್ನೂ ರೂಪಗೊಳಿಸಿದರು. ಅವುಗಳ ರಾಶಿಗೆ **ರೋಮಕ ವಿಧಿಕೋಶ** (Roman law) ವೆಂದು ಹೆಸರು.



ಕಾಲೊಸಿಯಂ

ಯೂರೋಪಿನ ಜನರಲ್ಲಿ ಇಂದಿಗೂ ಲ್ಯಾಟಿನ್ನಿನಿಂದ ಹುಟ್ಟಿದ ಭಾಷೆಗಳಲ್ಲದೆ ರೋಮಕ ನ್ಯಾಯಶಾಸ್ತ್ರವೂ ನೆಲೆಸಿದೆ.

ಕ್ರಮವಾದ ಆಡಳಿತವನ್ನೂ ಸಂಚಾರಮಾರ್ಗಗಳನ್ನೂ ರೋಮಕರು ಏರ್ಪಡಿಸಿದ ಬಳಿಕ ಒಳಗಿನ ವ್ಯಾಪಾರವೂ ಹೊರಗಿನ ವ್ಯಾಪಾರವೂ ಹೆಚ್ಚಿತು. ಹಿಂದುಸ್ತಾನದೊಂದಿಗೆ ನಡೆದ ವ್ಯಾಪಾರವು ಹೆಸರುವಾಸಿಯಾದುದು. ರೋಮಕರು ಚಿನ್ನ ಸುರಿದು ವಾಸನಾದ್ರವ್ಯಗಳನ್ನೂ ಬಟ್ಟೆಬರೆಗಳನ್ನೂ ರತ್ನಾಭರಣಗಳನ್ನೂ ಹಿಂದುಸ್ತಾನದವರಿಂದ ಕೊಂಡುಕೊಂಡು ಬರಬರುತ್ತ ಭೋಗಗಳಲ್ಲಿಯೇ ಮಗ್ನರಾದರು. ಅಂತು ಭೂಮಧ್ಯಸಮುದ್ರದ ದೇಶಗಳಿಗೂ ಮೂಡಣ ದೇಶಗಳಿಗೂ ಶತಮಾನಗಟ್ಟಲೆ ವ್ಯಾಪಾರವು ನಡೆದು ಪರಸ್ಪರವಾಗಿ ಪ್ರಯಾಣಗಳೂ ರಾಯಭಾರಗಳೂ ಹೆಚ್ಚಿದವು. ಈ ವ್ಯಾಪಾರದ ವಿವರವನ್ನು ನಾವು ಹಿಂದುಸ್ತಾನದ ಚರಿತ್ರೆಯಲ್ಲಿ ಕಾಣಬಹುದು. ಇದರಿಂದ ರೋಮಕರಿಗೆ ಧನನಷ್ಟವೂ ಆದರಿಂದ ಅನೇಕ ದುಷ್ಪರಿಣಾಮಗಳೂ ಉಂಟಾದುವು. 'ಸುಡುವ ವಸ್ತುಗಳಿಗಾಗಿ ರೋಮಕರು ತಮ್ಮ ಬಂಗಾರವನ್ನು ಹಾಳುಮಾಡುವರಲ್ಲ!' ಎಂದು ರೋಮಕ ಚರಿತ್ರಕಾರನು ಪರಿತಪಿಸಿದನು. ಅಂತು ಪೌರಸ್ತ್ಯ ಪಾಶ್ಚಾತ್ಯ ಭಾಗಗಳಿಗೆ ಪರಸ್ಪರ ಸಂಬಂಧಗಳುಂಟಾದುದು ರೋಮಕರಿಂದ.

ಗ್ರೀಸ್ ದೇಶವನ್ನು ಗೆದ್ದವರಲ್ಲವೆ ರೋಮಕರು! ಆದರೆ ಪರಿಣಾಮದಲ್ಲಿ ರೋಮಕರು ಗ್ರೀಕರಿಗೆ ಶಿಷ್ಯರಾದರು. ಗ್ರೀಕರ ದೇವತೆಗಳನ್ನು ಲ್ಯಾಟಿನ್ ಹೆಸರುಗಳಿಂದ ಕರೆದು ಗ್ರೀಕರಂತೆಯೇ ಪೂಜಿಸತೊಡಗಿದರು. ವಾಸ್ತುವಿದ್ಯೆಯಲ್ಲಿ ಮಾತ್ರ ರೋಮಕರು ಗ್ರೀಕರಿಗಿಂತ ಒಂದು ಹೆಜ್ಜೆ ಮುಂದಿಟ್ಟರು. ಭಾರಿಕಟ್ಟಡ ಕಟ್ಟುವಾಗ ಗ್ರೀಕರು ಕಂಭಗಳನ್ನು ಉಪಯೋಗಿಸಿದ್ದರು. ರೋಮಕರು ಅವುಗಳ ಮಧ್ಯೆ ಕಮಾನುಗಳನ್ನು ಕಟ್ಟಿ ಕಮಾನುಗಳ ಮೇಲೆ ಕಮಾನುಗಳು ಬರುವಂತೆ ಏರ್ಪಡಿಸಿಕೊಂಡು ಅಂತಸ್ತುಗಳನ್ನು ಕಟ್ಟಬಲ್ಲವರಾದರು. ಚಿತ್ರದಲ್ಲಿ ಕೊಟ್ಟಿರುವ ಕಾಲೊಸಿಯಂ (Colosseum) ಎಂಬ ನಾಟಕ ಮಂದಿರವನ್ನು ಕಂಡರೆ ಕಮಾನುಗಳ ರೀತಿ ತಿಳಿಯುವುದು. ಮತ್ತೊಂದು ಚಿತ್ರ ಒಂದು ಮಂದಿರದ್ದು. ಅದರಲ್ಲಿ ಮುಂಭಾಗ ಗ್ರೀಕರ ಕಟ್ಟಡದ ಬಗೆ; ಬಾಗಿಲಿನ ಮೇಲಿನ ಕಮಾನು ರೋಮಕರ ವಾಸ್ತುಕಲೆಯ ಶೈಲಿ.

ರೋಮಕರು ಆರಾಧಿಸುತ್ತಿದ್ದ ದೇವತೆಗಳೆಲ್ಲ ಗ್ರೀಕರ ದೇವತೆಗಳ ಅನುಕರಣ. ಜ್ಯೂಸ್ (Zeus—ದ್ಯೌಸ್ ರೂಪಾಂತರ)—**ಜೂಪಿಟರ್** (Jupiter) ಎನಿಸಿದನು. ಹಾಗೆಯೇ ಅಥೀನಿಯನ್ನು ಮಿನೆರ್ವ (Minerva) ಎಂದೂ



ರೋಮಕರ ಮಂದಿರವೊಂದು

ಅಫ್ರಾಡೈಟಿ (Aphrodite) ಯನ್ನು ವೀನಸ್ (Venus) ಎಂದೂ ರೋಮಕರು ಕರೆದು ಗುಂಪುಸೇರಿ ಪೂಜಿಸುತ್ತಿದ್ದರು. ತನ್ನಷ್ಟಕ್ಕೆ ತಾನು ದೇವರನ್ನು ಪೂಜಿಸುವ ಆಚಾರವಿರಲಿಲ್ಲ. ದೇವಮಂದಿರಕ್ಕೆ ಹೊರಟು ಗುಂಪಿನಲ್ಲಿ ಸೇರಿ ಯಾವುದೋ ನಿಮಿತ್ತಕ್ಕಾಗಿ ಆರಾಧನೆ ಮಾಡಬೇಕಾಗಿತ್ತು. ಮಾರ್ಕಸ್ ಔರೇಲಿಯಸ್ ಚಕ್ರವರ್ತಿಯನ್ನು ದೇವರೆಂದು ಭಾವಿಸಿದ ಸಂಗತಿಯನ್ನಾಗಲೇ ಕಂಡೆವು. ಕಾಲಕಳೆಯುತ್ತ ಚಕ್ರವರ್ತಿಯನ್ನು ದೇವರೆಂದು ಪೂಜಿಸುವ ಪದ್ಧತಿ ಬೆಳೆಯಿತು.

ರೋಮಕರು ಸಾಧಿಸದೆ ಹೋದ ಭಾಗವಾವುದು? ಅವರ ಆಡಳಿತದಲ್ಲಿ ಅಪಕೀರ್ತಿಯನ್ನು ತಂದಿಟ್ಟ ಅಂಶಗಳು ಯಾವುವು? ಗ್ರೀಕರಿಂದ ದೇವತೆಗಳ ಆರಾಧನೆಯನ್ನೂ, ತಕ್ಕಮಟ್ಟಿಗೆ ವಾಸ್ತುವಿದ್ಯೆಯನ್ನೂ ಕಲಿತ ರೋಮಕರು ಉಳಿದ ಮುಖ್ಯಾಂಶಗಳನ್ನು ಕಲಿಯದಾದರು. ಅಲೆಕ್ಸಾಂಡ್ರಿಯದಲ್ಲಿ ಗ್ರೀಕ ವಿದ್ವಾಂಸರು ತತ್ತ್ವಶಾಸ್ತ್ರಗಳಲ್ಲಿ ಎಷ್ಟೋ ಸಾಧನೆ ನಡೆಸಿದ್ದರಷ್ಟೆ! ರೋಮಕರು ಶಾಸ್ತ್ರವ್ಯಾಸಂಗವನ್ನು ಮುಂದುವರಿಸಲೇ ಇಲ್ಲ. ಗ್ರೀಕರಿಗಿದ್ದ ಕಲಾಸಕ್ತಿಯೂ ರೋಮಕರಲ್ಲಿರಲಿಲ್ಲ. ಭೋಗಾಸಕ್ತಿ ಮಾತ್ರ ಹೆಚ್ಚಿತ್ತು. ಹೋರಾಟ ನಡೆಸುವುದರಲ್ಲಿ ಎಷ್ಟು ಪ್ರವೀಣರಾಗಿದ್ದರೋ ರೋಮಕರು ಭೋಗಲೋಲುಪ್ತಿಯಲ್ಲಿಯೂ ಅಷ್ಟೇ ಪ್ರವೀಣರಾದರು. ಸೆರೆಸಿಕ್ಕಿದವರೆಲ್ಲ ಗುಲಾಮರಾಗುತ್ತಿದ್ದುದರಿಂದ ಗುಲಾಮರ ಸಂಖ್ಯೆ ಹೆಚ್ಚಿತ್ತು. ವ್ಯವಸಾಯ ನಡೆಸುತ್ತಿದ್ದವರು ಗುಲಾಮರು; ಹಡಗುಗಳನ್ನು ನಡೆಸುತ್ತಿದ್ದವರು ಗುಲಾಮರು; ಗಣಿಗಳಲ್ಲಿ ಕಷ್ಟಪಟ್ಟು ಕೆಲಸ ಮಾಡುತ್ತಿದ್ದವರು ಗುಲಾಮರು. ಕಷ್ಟವೆಲ್ಲ ಗುಲಾಮರಿಗೆ, ಸುಖವೆಲ್ಲ ರೋಮಕರಿಗೆ. ಹೀಗಿದ್ದು ರೋಮಕರಲ್ಲಿ ಸೋಮಾರಿತನ ಬೆಳೆಯಿತು. ಅದರೊಂದಿಗೆ ಹೆಮ್ಮೆ ಬಲಿಯಿತು. ಬುದ್ಧಿವಂತರಾದ ಗುಲಾಮರೇ ಕಡೆಗೆ ವಿದ್ವಾಂಸರಾಗಿ ಯಜಮಾನನ ಮಕ್ಕಳಿಗೆ ವಿದ್ಯಾಗುರುಗಳೂ ಆದರು. ತಾವು ಮಾಡಬೇಕಾದ ಯುದ್ಧಕ್ಕೂ ರೋಮಕರು ಗುಲಾಮರನ್ನು ಕೊಟ್ಟುಕಳುಹಿಸಲು ಮೊದಲಾಯಿತು. ಮಾರ್ಕಸ್ ಔರೇಲಿಯಸ್ಸನ ಕಾಲದವರೆಗೆ ಗುಲಾಮರ ತಂಡಗಳು ದನಕರುಗಳಂತೆಯೇ ಇರಬೇಕಾಗಿತ್ತು. ಅವರಲ್ಲಿ ರೋಮಕರು ತೋರಿದ ಕ್ರೌರ್ಯಕ್ಕೆ ಮೇರೆ ಇರಲಿಲ್ಲ; ಅಂತೆಯೇ ರೋಮಕರ ಒಣಹೆಮ್ಮೆಗೂ ಸೋಮಾರಿತನಕ್ಕೂ ಮೇರೆ ಇರಲಿಲ್ಲ. ಮೃಗಗಳಂತೆ ಪರಿಣಮಿಸಿದ ರೋಮಕರಿಗೆ ವಿದ್ಯೆಯಾಗಲಿ ಕಲೆಯಾಗಲಿ ಹೇಗೆ ರುಚಿಸಬೇಕು? ದೌಷ್ಟ್ಯವನ್ನೂ ನೀಚತ್ವವನ್ನೂ ಸಾಧಿಸಿದ ರೋಮಕರು ಬರಬರುತ್ತ ಹೇಡಿಗಳಾದರು.

ಮಾರ್ಕಸ್ ಔರೇಲಿಯಸ್ ಚಕ್ರವರ್ತಿಯ ಕಾಲ ಕ್ರಿ.ಶ. ಎರಡನೆ ಶತಮಾನದ ಕೊನೆ. ಆತನ ತರುವಾಯ ರೋಮಕ ಸಾಮ್ರಾಜ್ಯದ ಚರಿತ್ರೆಯಲ್ಲಿ ಮುಖ್ಯವಾದುದು ಕ್ರೈಸ್ತಮತದ ಪ್ರಚಾರ. ಆ ಮತಹುಟ್ಟಿ ಬೆಳೆದುದನ್ನು ಮುಂದೆ ತಿಳಿಯುವ.

ಅಭ್ಯಾಸಗಳು

೧. ರೋಮಕನಗರವೆಂಬುದು ಪ್ರಬಲವಾಗಿ ಬೆಳೆಯಲು ಸಹಾಯಮಾಡಿದ ಆ ನಿವೇಶನದ ಸ್ಥಾನಮಹಿಮೆಯೆಂಥದು? ಹಿಂದುಸ್ತಾನದಲ್ಲಿ ಹಾಗೆಯೇ ಸ್ಥಾನಮಹಿಮೆಯಿಂದ ಮುಖ್ಯವಾದ ನಗರವಾವುದು?

೨. ಪ್ಯಾಟ್ರಿಷಿಯನ್ ಪ್ಲೆಬಿಯನ್ ಗುಂಪುಗಳು ಯಾವುವು? ಅವುಗಳಲ್ಲಿ ಪರಸ್ಪರ ವೈಷಮ್ಯ ಬೆಳೆಯಲು ಕಾರಣವೇನು?

೩. ಫೀನಿಷನ್ ಜನರಾರು? ಅವರನ್ನು ನಾಶಗೊಳಿಸಲು ರೋಮಕರೇಕೆ ಹವಣಿಸಿದರು? ನಾಶಗೊಳಿಸಿದುದು ಹೇಗೆ?

೪. ಜೂಲಿಯಸ್ ಸೀಸ್ಟರ್ ಮತ್ತು ಆಗಸ್ಟಸ್ ಸೀಸ್ಟರ್ ನಡೆಸಿದ ಕರ್ತವ್ಯವೇನೆಂದು ಸಂಕ್ಷೇಪವಾಗಿ ಬರೆಯಿರಿ.

೫. 'ನ ಭೂತೋ ನ ಭವಿಷ್ಯತಿ ಎಂಬಂತಹ ಜಯಲಾಭವಾದಾಗ್ಯೂ ಗೆದ್ದವರಿಗೇ ಬಂತು ನಾಶ!' ಈ ವಾಕ್ಯವನ್ನು ವಿವರಿಸಿ. ಗೆದ್ದವರು ನಾಶವಾದುದು ಹೇಗೆಂದು ಸ್ಪಷ್ಟಪಡಿಸಿ.

೬. ರೋಮಕರ ಸಭ್ಯತೆ ಸಂಸ್ಕೃತಿಗಳಿಂದ ಜಗತ್ತಿಗೆ ಆದ ಪ್ರಯೋಜನಗಳೇನು?

ಕ್ರೈಸ್ತಮತದ ಏಳಿಗೆ

ಮುಖ್ಯಪ್ರಶ್ನೆ ೨೯ : ಏಸುವಿನ ಉಪದೇಶದಲ್ಲಿನ ಮುಖ್ಯಾಂಶಗಳಾವುವು? ಯೆಹುದಿಜನರಿಗೇಕೆ ಅದು ಒಪ್ಪಲಿಲ್ಲ?

ಇಸವಿಗಳನ್ನು ಎಣಿಸುವಾಗ ಕ್ರೈಸ್ತಶಕೆಯನ್ನನುಸರಿಸಿ ಕ್ರಿಸ್ತಪೂರ್ವವೆಂದೂ ಕ್ರಿಸ್ತಶಕವೆಂದೂ ಹೇಳಿಕೊಳ್ಳುವುದು ವಾಡಿಕೆ. ಆದರೆ ಕ್ರೈಸ್ಟ ಎಂಬ ಬಿರುದಿಗೆ ಪಾತ್ರನಾದ ಏಸು ಹುಟ್ಟಿದ ವರ್ಷವಾವುದೆಂದು ನಿಶ್ಚಿತವಾಗಿ ತಿಳಿಯದು. ಬಹುಶಃ ಆಗಸ್ಟಸ್ ಸೀಸರ್ ತೀರಿಕೊಳ್ಳುವುದಕ್ಕೆ ಹತ್ತು ವರ್ಷ ಮುಂಚಿತವೆಂದು ಹೇಳಬಹುದು.

ಏಸು ಯೆಹುದೀ. ಆತನ ತಂದೆತಾಯಿಗಳು ಯೆಹುದೀರಾಜ ದಾವೂದ್ ಅಥವಾ **ಡೇವಿಡ್** (David) ವಂಶಸ್ಥರೆಂದು ಹೇಳಿಕೆಯಿರುವುದಾದರೂ ಬಡತನದಲ್ಲಿದ್ದವರು. ತನ್ನ ಮೂವತ್ತನೆ ವಯಸ್ಸಿನಲ್ಲಿ ಏಸು ಧರ್ಮಬೋಧೆಗಾರಂಭಿಸಿದನು. ಆ ಬೋಧೆಗೆ ಸ್ವಲ್ಪಕಾಲದಲ್ಲಿಯೇ ಪ್ರಬಲವಿರೋಧ ತೋರಿತು. ಬೈಬಲ್ ಗ್ರಂಥದ ಎರಡನೆ ಭಾಗದಲ್ಲಿರುವ ಮೊದಲಮೂರು ಸಂದೇಶ (gospel) ಅಥವಾ ಸುವಾರ್ತೆಗಳಲ್ಲಿ ಆ ಬೋಧೆಯನ್ನು ಬರೆದಿಟ್ಟಿದೆ.

ಏಸುವಿನ ಧರ್ಮಬೋಧೆಯ ತಿರುಳು ಇಷ್ಟುಮಾತ್ರ. ಜೀವರಾಶಿಗೆಲ್ಲಕ್ಕೂ ದೇವರೇ ಒಲುಮೆಯ ತಂದೆ. ಆದುದರಿಂದ ಮಾನವರೆಲ್ಲರೂ ಸೋದರರು. ದೇವರ ಇಷ್ಟದಂತೆ ನಡೆದುಕೊಳ್ಳಲು ಮಾನವರು ಅನ್ಯೋನ್ಯತೆಯಿಂದ ವರ್ತಿಸಬೇಕು. ದೇವರನ್ನು ಏಸುವು ಒಬ್ಬ ರಾಜನೆಂಬುದಾಗಿಯೂ ಕರೆದನು; ಆದರೆ ಆತನ ರಾಜ್ಯವು ಐಹಿಕರಾಜ್ಯಗಳಂತಲ್ಲ. ನಿರ್ವಂಚನೆಯಿಂದ ದೇವರ ಚಿತ್ತದಂತೆ ನಡೆದುಕೊಳ್ಳುವವರೆಲ್ಲರೂ ಆ ರಾಜ್ಯದ ಪೌರರು. ದೇವರ ಚಿತ್ತವೆಂಬುದನ್ನು 'ಸುವರ್ಣನೀತಿ'ಯೆಂದೂ ಏಸು ಕರೆದನು. 'ಇತರರು ನಿನ್ನಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ನೀನು ಇಷ್ಟಪಡುತ್ತೀಯೋ ಅದರಂತೆಯೇ ನೀನು ಇತರರಲ್ಲಿ ವರ್ತಿಸುವವನಾಗು' ಎಂಬುದು ಆ ನಿಯಮದ ಸಾರ. ಇಷ್ಟರಿಂದ ತೃಪ್ತನಾಗದೆ ಏಸುವು ಇನ್ನೂ ಮುಂದೆ ಹೇಳಿದ್ದುಂಟು; 'ನೆರೆಯವನನ್ನು ಪ್ರೀತಿಸುತ್ತ ವೈರಿಯನ್ನು ದ್ವೇಷಿಸುತ್ತ ಇರತಕ್ಕುದೆಂಬ ಮಾತನ್ನು ನೀವು ಕೇಳಿರುವಿರಿ. ಆದರೆ ನಾನು ಹೇಳುವುದು—ವೈರಿಗಳನ್ನು ಪ್ರೀತಿಸಿ, ಬಯ್ಯುವ

ರನ್ನು ಹರಸಿ, ದ್ವೇಷಮಾಡಿದವರಿಗೆ ಉಪಕಾರಮಾಡಿ, ನಿಮ್ಮನ್ನು ತಿರಸ್ಕಾರದಿಂದ ಕಂಡು ಹಿಂಸೆಪಡಿಸುವವರ ಶ್ರೇಯಸ್ಸಿಗಾಗಿ ದೇವರಲ್ಲಿ ಪ್ರಾರ್ಥಿಸಿ. ಹಾಗೆ ಮಾಡಿದಲ್ಲಿ ನಿಜವಾಗಿಯೂ ನೀವು ಸ್ವರ್ಗದಲ್ಲಿರುವ ನಿಮ್ಮ ತಂದೆಗೆ ತಕ್ಕ ಮಕ್ಕಳಾಗುವಿರಿ. ಏಕೆಂದರೆ ಆತನು ನೇಮಿಸಿದ ಸೂರ್ಯನು ಒಳ್ಳೆಯದು ಕೆಟ್ಟದು ಎಂಬ ಭೇದವಿಲ್ಲದೆ ಎರಡರ ಮೇಲೂ ಸಮಾನವಾಗಿ ಬೆಳಗುತ್ತಾನೆ. ಆತನು ಕರೆಯುವ ಮಳೆಯು ನ್ಯಾಯಪರರ ಮೇಲೆಯೂ ಅನ್ಯಾಯಪರರ ಮೇಲೆಯೂ ಏಕರೀತಿಯಾಗಿ ಬೀಳುತ್ತದೆ.' ಈ ಬೋಧೆಯು ಯೆಹುದಿಗಳಿಗೆ ವಿಪರೀತವೆಂದು ಕಂಡಿತು. ಈಗಲೂ ಜಗತ್ತಿನ ಅನೇಕ ಜನರಾಶಿಗಳಿಗೂ ಕ್ರೈಸ್ತರೆಂದು ಹೇಳಿಕೊಳ್ಳುವವರಿಗೂ ಈ ನಿಯಮವು ಯೋಗ್ಯತೆಗೆ ಮೀರಿದ್ದಾಗಿಯೇ ಇದೆ. ನಿರ್ವಂಚಕನಾದ ಪ್ರತಿಯೊಬ್ಬನನ್ನೂ ಒಳಗೊಂಡ ದೇವರ ರಾಜ್ಯವೆಂಬ ಭಾವನೆ ಯೆಹುದಿಗಳಿಗೆ ಆಕ್ಷೇಪಣೀಯವಾಗಿತ್ತು. ಏಕಂದರೆ ತಾವು ಮಾತ್ರ ದೇವರಿಗೆ ಸಮೀಪರಾದವರೆಂದೂ ದೇವರಿಂದ ಆಯ್ಕೆಯಾದವರೆಂದೂ ನಂಬಿ ಯೆಹುದಿಗಳು ಅನ್ಯರನ್ನು ತಿರಸ್ಕಾರದಿಂದ ಕಾಣುತ್ತಿದ್ದರು. ಯೆಹುದಿಗಳಿಗೆ ಅನಿಷ್ಟವಾದ ಮತ್ತೊಂದಂಶವೂ ಏಸುವಿನ ಬೋಧೆಯಲ್ಲಿತ್ತು. ಎಲ್ಲರನ್ನೂ ಸೋದರರಂತೆ ಕಾಣುವುದು ನಿಜವಾದ ಧರ್ಮವೆಂದೂ ಪವಿತ್ರಗ್ರಂಥದಲ್ಲಿ ಹೇಳಿದ್ದ ಆಚಾರಗಳನ್ನೂ ನಿಯಮಗಳನ್ನೂ ಪರಿಪಾಲಿಸುವುದು ಮುಖ್ಯವಲ್ಲವೆಂದೂ ಏಸು ಹೇಳುತ್ತಿದ್ದನು. ಯೆಹುದಿಧರ್ಮವಿಧಿಗಳನ್ನು ಮೂಸಾ (Moses) ಹಿಂದೆಯೇ ನಿರ್ಧರಿಸಿದ್ದನು. ಕೆಲವೇಳೆ ಏಸುವು ಆ ವಿಧಿಗಳನ್ನು ಖಂಡಿಸುತ್ತಿದ್ದನು. ವಿದ್ವಾಂಸನಾಗಲಿ ಗುರುಪರಂಪರೆಯವನಾಗಲಿ ಆಗದಿದ್ದಾಗ್ಗೂ ಏಸು ತಮ್ಮ ಆಚಾರ ಸಂಪ್ರದಾಯಗಳನ್ನು ವಿರೋಧಿಸಿದುದು ಅವರಿಗೆ ಸಹಿಸಲಿಲ್ಲ. ಯೆಹುದಿಯಾಗಿ ಹುಟ್ಟಿ ಯೆಹುದಿಮತಸ್ಥಾಪಕನನ್ನು ಖಂಡಿಸುವುದು ಗುರುದ್ರೋಹವಾಯಿತೆಂದು ಯೆಹುದಿಗಳು ಹಾಹಾಕಾರಮಾಡಿದರು.

ಏಸುವಿನ ಅನುಚರರು ಆತನನ್ನು 'ಕ್ರೈಸ್ಟ್' ಎಂಬ ಬಿರುದಿನಿಂದ ಕರೆದರು. ಆ ಶಬ್ದಕ್ಕೆ ಜಗದುದ್ಧಾರಕ ಅಥವಾ ಧರ್ಮಸ್ಥಾಪಕನೆಂಬ ಅರ್ಥ. ಗ್ರೀಕ್ ಭಾಷೆಯ ಶಬ್ದ. ಯಾವುದೋ ಮಹತ್ಕಾರ್ಯಕ್ಕೆ ಉದ್ದಿಷ್ಟನಾಗಿ ಮೂರ್ಧಾಭಿಷೇಕವನ್ನು ಪಡೆಯತಕ್ಕವನಿಗೆ ಆ ಬಿರುದನ್ನು ಕೊಡತಕ್ಕುದಾಗಿತ್ತು. ಇಬರಾನಿ ಅಥವಾ ಹೀಬ್ರು (Hebrew) ಭಾಷೆಯ 'ಮೆಸ್ಸಯ' ಎಂಬ ಶಬ್ದಕ್ಕೂ ಅದೇ ಅರ್ಥ. ಅಂತಹ ಪುರುಷನೊಬ್ಬಾತನು ಜನಿಸಿ ಯೆಹುದಿಗಳಿಗೆ ದೊರೆಯಾಗಿ ಅವರನ್ನು ಪಾರತಂತ್ರ್ಯದಿಂದ ಬಿಡಿಸಿ ಉದ್ಧಾರಮಾಡುವನೆಂದು

ಯೆಹುದಿಕಾಲಜ್ಞಾನಿಗಳು ಹಿಂದೆ ಹೇಳಿದ್ದರು. ಆತನೇ ಏಸುವೆಂದು ಏಸು ಶಿಷ್ಯರು ಸ್ತುತಿಗೆಯ್ದಾಗ ನಿಷ್ಠರಾಗಿದ್ದ ಯೆಹುದಿಗಳೆಲ್ಲರಿಗೂ ರೇಗಿತು.

ಮುಖ್ಯಪ್ರಶ್ನೆ: ಏಸುವನ್ನು ಯೆಹುದಿಜನರು ಕೊನೆಗಾಣಿಸಿದುದು ಹೇಗೆ? ಮರಣಾನಂತರ ಏಸುವಿಗೆ ಸಂಭವಿಸಿದುದೇನು?

ಯೆಹುದಿಗಳಲ್ಲಿ ಪ್ರಬಲರಾಗಿದ್ದವರು ಏಸುವಿನಲ್ಲಿ ದ್ವೇಷಬೆಳೆಸಿ ಆತನನ್ನು ನಾಶಗೊಳಿಸಬೇಕೆಂದು ಇಷ್ಟಪಟ್ಟರು. ಮೊದಮೊದಲು ಏಸುಮಾಡುವುದಕ್ಕೂ ಆಗಲಿಲ್ಲ. ಏಕೆಂದರೆ ಏಸುವನ್ನು ನಂಬಿದ್ದವರು ಅನೇಕರು. ದೀನರೂ ಬಡವರೂ ಆತನ ಹಿಂದೆಯೇ ಇರುತ್ತಿದ್ದರು. ಸ್ವಲ್ಪಕಾಲದಲ್ಲಿಯೇ ದಾರಿ ಸಿಕ್ಕಿತು.

ಆ ಸಮಯದಲ್ಲಿ ಯೆಹುದಿಗಳ ನಾಡಾದ ಪ್ಯಾಲೆಸ್ಟೈನನ್ನು ರೋಮಕರು ಆಳುತ್ತಿದ್ದರು. ಸುಮಾರಾಗಿ ಭಾರತೀಯಸಂಸ್ಥಾನಗಳು ಬ್ರಿಟಿಷರ ಆಳಿಕೆಯಲ್ಲಿರುವಂತೆ ಯೆಹುದಿಗಳ ನಾಡು ಒಳಾಡಳಿತದಲ್ಲಿ ಸ್ವತಂತ್ರವಾಗಿದ್ದರೂ ರೋಮಕಾಧಿಕಾರಿಯೊಬ್ಬಾತನ ವಶದಲ್ಲಿತ್ತು. **ಪ್ರಾಕ್ಯುರೇಟರ್** (Procurator) ಎಂಬ ಬಿರುದನ್ನು ತಾಳಿದ್ದ ಆ ಅಧಿಕಾರಿಯು ಹಿಂದುಸ್ತಾನದ ದೇಶೀಯ ಸಂಸ್ಥಾನಗಳಲ್ಲಿರುವ ರೆಸಿಡೆಂಟರುಗಳಂತೆ; ದಂಗೆಗಳೇಳದಂತೆ ಎಚ್ಚರದಿಂದಿದ್ದು ರೋಮಕನಗರದಲ್ಲಿ ಆಳುತ್ತಿದ್ದ ಸೀಸರನಿಗೆ ಭೃತ್ಯನಂತಿದ್ದನು. ಆಗ ಯೆಹುದಿಗಳಿಗೊಂದು ಉಪಾಯ ತೋರಿತು. ರೋಮಕರಿಗೆ ಏಸುವಿನಲ್ಲಿ ಗುಮಾನಿ ಹುಟ್ಟುವಂತೆ ನೆರವೇರಿಸಲು ತೊಡಗಿ ಏಸುವು ರಾಜದ್ರೋಹಿಯೆಂದೂ ತಾನೇ ರಾಜನಾಗಲು ಯತ್ನಿಸುತ್ತಿದ್ದನೆಂದೂ ಆರೋಪಿಸಿದರು. ಏಸುವನ್ನು ಹಿಡಿದು **ಪೈಲೆಟಸ್** (Pilatus) ಎಂಬ ಹೆಸರಿನ ಆ ರೋಮಕಾಧಿಕಾರಿಯೆದುರಿನಲ್ಲಿ ವಿಚಾರಣೆಗೆ ತಂದು ನಿಲ್ಲಿಸಿದರು. ಆದರೆ ಆಪಾದನೆಗೆ ಆಧಾರ ಸಾಕಾದಷ್ಟು ಕಾಣಲಿಲ್ಲ. ದೇವರ ರಾಜ್ಯವನ್ನು ಸ್ಥಾಪಿಸಬೇಕೆಂದು ಏಸುವು ಹೇಳಿದ್ದುದು ನಿಜ. ಆದರೆ ಆ ರಾಜ್ಯವು ಮರ್ತ್ಯಲೋಕದಲ್ಲಿಲ್ಲವೆಂದು ಹೇಳಿಯೇ ಇದ್ದನು. ಕೆಲವರು ಶಿಷ್ಯರಿಗೆ ಆ ಮಾತು ಅರ್ಥವಾಗಿರಲಿಲ್ಲ; ಆ ರಾಜ್ಯವನ್ನು ಈ ಲೋಕದಲ್ಲಿಯೇ ಏಸು ಸ್ಥಾಪಿಸುವನೆಂದು ಅವರು ನಂಬಿದ್ದರು. ರಾಜದ್ರೋಹವನ್ನು ಹೊರಿಸಿ ದಂಡಿಸಲು ಸಾಕಾದಷ್ಟು ಆಧಾರ ಕಾಣದಿರಲು ಪೈಲೆಟಸ್ ತಟಸ್ಥನಾಗುವಂತೆ ಕಂಡಿತು. ಆಗ ಯೆಹುದಿಗಳು ಬೊಬ್ಬೆಯಿಡುತ್ತ ತಾವೇ ಏಸುವನ್ನು ದಂಡಿಸಲು ಅಧಿಕಾರಿಯ ಅನುಮತಿಯನ್ನು ಕೇಳಿದರು. ಯೆಹುದಿಗಳ ಗುಂಪನ್ನು ಸಂತೋಷಗೊಳಿಸುವ ನೆಪದಿಂದ ಅಧಿಕಾರಿ ಸಮ್ಮತಿ ಕೊಟ್ಟನು. ಆಗ ಏಸುವನ್ನೆಳೆದುಕೊಂಡು ಊರಹೊರಗಿನ ವಧ್ಯಸ್ಥಾನ

ಕ್ಕೊಯ್ದು ರೋಮಕಪದ್ಧತಿಯಂತೆ ಆತನನ್ನು ಶಿಲುಬೆಗೇರಿಸಿದರು. ಶಿಲುಬೆಗೆ ಕಟ್ಟಿ ಮೊಳೆ ಹೊಡೆದ ಬಳಿಕ ನೆತ್ತರುಕಾರಿ ಪ್ರಾಣಬಿಡಬೇಕಾಗಿ ಸಂಭವಿಸಿತು. ಈ ಘೋರ ಸಂಗತಿ ನಡೆದುದು ಕ್ರಿ.ಶ. ೩೦ರಲ್ಲಿ; **ಟೈಬೀರಿಯಸ್** (Tiberius) ಎಂಬಾತನು ಸೀಸರ್ ಎನಿಸಿದ್ದಾಗ. ಏಸುವಿನ ಮರಣ ಆತನ ಶಿಷ್ಯರಿಗೆ ದೊಡ್ಡ ಅನಾಹುತವಾಯಿತು. ಅನೇಕ ಅಮಾನುಷಕೃತ್ಯಗಳನ್ನು ನಡೆಸಿದವನಾದುದ ರಿಂದ ಆತನಿಗೆ ಮರಣವಿಲ್ಲವೆಂದು ಹೇಳಿಕೊಳ್ಳುತ್ತಿದ್ದ ಆ ಶಿಷ್ಯರು ದಿಕ್ಕುಗೆಟ್ಟರು. ಮರಣವನ್ನು ಆತನು ತಪ್ಪಿಸಿಕೊಳ್ಳಲಾಗಲಿಲ್ಲ.

ಆದರೆ ಬೇರೊಂದು ವಿಚಿತ್ರ ಸಂಗತಿಯು ನಡೆಯಿತೆಂದು ಏಸುವಿನ ಶಿಷ್ಯರು ನಂಬುತ್ತಾರೆ. ಸುವಾರ್ತೆಗಳೆಂಬ ಭಾಗಗಳಲ್ಲೆಲ್ಲ ಅದರ ವೃತ್ತಾಂತವುಂಟು. ಮರಣಾನಂತರ ಮೂರು ದಿನ ಕಳೆದಾಗ ಶಿಷ್ಯರು ಏಸುವಿನ ದೇಹವನ್ನು ಅದನ್ನಿಟ್ಟಿದ್ದ ಸಮಾಧಿಯಲ್ಲಿ ಕಾಣಲಿಲ್ಲವಂತೆ. ಮತ್ತೆ ಕೆಲವರಿಗೆ ಏಸು ತೇಜಶ್ಶರೀರಿಯಾಗಿ ಸ್ಪರ್ಶಿಸಲಾಗದ ರೂಪದಲ್ಲಿ ಕಾಣಿಸಿಕೊಂಡು ಧೈರ್ಯ ತುಂಬುವ ಮಾತುಗಳನ್ನಾಡಿ ತಾನು ಸದಾ ತನ್ನ ಶಿಷ್ಯರ ಬಳಿ ಅಶರೀರಿ ಯಾಗಿರುವುದಾಗಿ ಅಭಯಕೊಟ್ಟನಂತೆ. ಇದನ್ನು **ಪುನರುತ್ಥಾನ** ಅಥವಾ **ರಿಸರೆಕ್ಷನ್** (Resurrection) ಎನ್ನುತ್ತಾರೆ. ಕ್ರೈಸ್ತ ಮತದಲ್ಲಿ ಮುಖ್ಯವಾದ ಅಂಶಗಳಲ್ಲಿ ಇದೊಂದು. ಕ್ರೈಸ್ತ ಮತಸ್ಥರಾಗಿರುವವರಲ್ಲಿ ಬಹುಸಂಖ್ಯಾಕರು ಆ ಸಂಗತಿಯನ್ನು ನಿಜವೆಂದು ನಂಬಿರುವುದಲ್ಲದೆ ನಂಬಬೇಕೆಂದು ಹೇಳುತ್ತಾರೆ. ಏಸುವು ಶಿಲುಬೆಗೇರಿದ ಮೇಲೂ ಶಿಷ್ಯರಾಗಿದ್ದವರಿಗೆ ಈ ಪುನರುತ್ಥಾನದಿಂದ ಧೈರ್ಯೋತ್ಸಾಹಗಳು ಹೆಚ್ಚಿದವು. ಏಸುವಿನ ಉಪದೇಶವನ್ನು ಪ್ರಚಾರ ಪಡಿಸಲು ಅವರು ತೊಡಗಿದರು. ಕ್ರೈಸ್ತಧರ್ಮವು ಬೇಗನೆ ಹರಡಿತು.

ಮುಖ್ಯಪ್ರಶ್ನೆ ೩೧: ಪ್ಯಾಲೆಸ್ಟೈನ್ ಹೊರಗಡೆ ಏಸುವಿನ ಉಪದೇಶವು ಹರಡಲಾರಂಭವಾದುದು ಹೇಗೆ?

ಮೊದಮೊದಲು ಏಸುವನ್ನೊಪ್ಪಿಕೊಂಡವರೆಲ್ಲ ಬಡಯೆಹುದಿಗಳು. ಅಲ್ಪ ಸಂಖ್ಯಾಕರಾಗಿದ್ದ ಅವರೆಲ್ಲರೂ ಒಂದುಮನೆಯವರಂತೆ ಬಾಳುತ್ತಿದ್ದರು. ಪ್ರತಿ ಯೊಬ್ಬನೂ ತನ್ನ ಸಂಪಾದನೆಯನ್ನು ಗುಂಪಿಗೆ ಅಥವಾ ಸಂಘಕ್ಕೆ ಕೊಟ್ಟು ಬಿಡುತ್ತಿದ್ದನು. ಇದ್ದುದಕ್ಕೆ ಎಲ್ಲರೂ ಮಾಲೀಕರು, ಯಾರೊಬ್ಬರೂ ಅಲ್ಲ. ಸ್ವಂತವೆಂಬ ಆಸ್ತಿಪಾಸ್ತಿಗಳು ಅಪಾಯಕರವೆಂದು ಏಸುವೇ ಉಸುರಿ ಎಷ್ಟು ಸ್ವಲ್ಪ ಸಾಧ್ಯವೋ ಅಷ್ಟನ್ನು ಮಾತ್ರ ಇಟ್ಟುಕೊಳ್ಳಿರೆಂದು ಉಪದೇಶ ಮಾಡಿದ್ದನು.

ಹೀಗಿರಲು ಏಸುವಿನ ಬೋಧೆ ವಿಸ್ತಾರವಾಗಿ ಹರಡುವಂತೆ ಘಟಿಸಿತು. ಏಷ್ಯಾಮೈನರಿನಲ್ಲಿ **ಟಾರ್ಸಸ್** (Tarsus) ಎಂಬ ಪಟ್ಟಣದಿಂದ ಜೆರುಸಲೆಮ್ಮಿಗೆ ಬಂದಿದ್ದ ಯೆಹುದಿಯುವಕನೊಬ್ಬನಿದ್ದನು. ಆತನ ಹೆಸರು ಸಾಲ್ (Saul); ಲ್ಯಾಟಿನ್ ಭಾಷೆಯಲ್ಲಿ **ಪಾಲಸ್** (Paulus) ಅಥವಾ **ಪಾಲ್** (Paul). ಜಾತಿಯಲ್ಲಿ ಯೆಹುದಿಯಾದರೂ ರೋಮಕಪ್ರಜೆಯಾಗಿದ್ದನು; ಹಿಂದುಮತಸ್ಥ ಬ್ರಿಟಿಷ್ ಪ್ರಜೆಯಾಗಿರುವಂತೆ. ಜೆರುಸಲೆಮ್ಮಿನಲ್ಲಿದ್ದ ಪ್ರಸಿದ್ಧ ವಿದ್ವಾಂಸರ ಬಳಿ ಯೆಹುದಿ ಧರ್ಮಶಾಸ್ತ್ರಗಳ ವ್ಯಾಸಂಗಕ್ಕಾಗಿ ಬಂದಿದ್ದವನು. ಸುಶಿಕ್ಷಿತ; ಗ್ರೀಕ್ ಭಾಷೆ ಬಲ್ಲವನಾಗಿ ವಿದ್ಯಾಕೇಂದ್ರವೆನಿಸಿದ್ದ ಅಲೆಕ್ಸಾಂಡ್ರಿಯದ ತತ್ತ್ವಜ್ಞರ ಗ್ರಂಥಗಳನ್ನು ಓದಿದ್ದನು. ಅತ್ಯುತ್ಸಾಹದಿಂದ ಯೆಹುದಿಧರ್ಮಶಾಸ್ತ್ರಗಳನ್ನೋದುತ್ತಿದ್ದ ಆತನಿಗೆ ಯಾರೋ ಕೆಲವರು ಏಸುವೆಂಬಾತನ ಶಿಷ್ಯರೆನಿಸಿದವರು ಆ ಧರ್ಮಶಾಸ್ತ್ರಗಳನ್ನೊಪ್ಪಿಕೊಳ್ಳದೆ ಬೇರೊಂದು ಪಂಥವನ್ನು ಸಾಧಿಸುತ್ತಿದ್ದ ಸುದ್ದಿ ತಿಳಿದು ಆಗ್ರಹವುಂಟಾಯಿತು. ಏಸುವಿನ ಶಿಷ್ಯರನ್ನಡಗಿಸಲು ಕೂಡಲೆ ಸರ್ವಪ್ರಯತ್ನಗಳನ್ನೂ ಮಾಡಿದನು. ಜೆರುಸಲೆಮ್ಮಿನಲ್ಲಿ ಮಾತ್ರ ಅಡಗಿಸಿದರೆ ಸಾಲದೆಂದು ತಿಳಿದು ಅಲ್ಲಿಯ ಯೆಹುದಿಜನಮುಖ್ಯರ ಅನುಮತಿಪಡೆದು ಸಿರಿಯದ ಮುಖ್ಯಪಟ್ಟಣವಾಗಿದ್ದ ದಮಾಸ್ಕಸ್ಸಿನಲ್ಲಿ ಪ್ರಚಾರ ಮಾಡುತ್ತಿದ್ದ ಏಸುವಿನ ಶಿಷ್ಯರನ್ನು ಅಡಗಿಸಲು ಅಲ್ಲಿಗೆ ಹೊರಟನು.

ದಮಾಸ್ಕಸ್ಸಿಗೆ ಹೋಗುವ ದಾರಿಯಲ್ಲಿ ವಿಚಿತ್ರವಾದ ಘಟನೆಯೊಂದು ನಡೆಯಿತು. ಹಟಾತ್ತಾಗಿ ಯಾವುದೋ ತೇಜೋರಾಶಿಯು ಮಿಂಚಿನಂತೆ ಹೊಳೆದು ಪಾಲನ ಕಣ್ಣನ್ನು ಚುಚ್ಚಿದಂತಾಯಿತು. ಆಗ ನೆಲದಮೇಲೆ ಬಿದ್ದು ಕಣ್ಣು ಕಾಣಲಾರದಿದ್ದ ಅವನಿಗೆ 'ಸಾಲ್, ಸಾಲ್, ಏತಕ್ಕೆ ನನ್ನನ್ನು ಹಿಂಸೆಪಡಿಸುತ್ತೀಯೆ?' ಎಂಬ ಅಶರೀರವಾಣಿಯೊಂದು ಕೇಳಿಸಿತು. ನಡುಕದಿಂದ ಕೂಡಿದ್ದ ಸಾಲನು 'ಯಾರು ನೀನು, ಹೇ ಪ್ರಭು?' ಎಂದು ಕೇಳಲು 'ನಾನು ಏಸು, ನಿನ್ನ ಹಿಂಸೆಗೆ ಸಿಕ್ಕಿದವನು' ಎಂಬ ಪ್ರತ್ಯುತ್ತರ ಬಂತು. ಆ ಬಳಿಕ ತಾನೇನು ಮಾಡತಕ್ಕದೆಂದು ಸಾಲ್ ಯಾಚಿಸಲು ದಮಾಸ್ಕಸ್ಸಿಗೆ ಹೊರಡಬೇಕೆಂದೂ ಅಲ್ಲಿ ಮುಂದಿನ ಕರ್ತವ್ಯ ತಿಳಿಯುವುದೆಂದೂ ವಾಣಿಯಾಯಿತು. ಕುರುಡನಾಗಿಯೇ ಸಾಲ್ ದಮಾಸ್ಕಸ್ ಸೇರಿದನು. ಅದೇ ವೇಳೆಗೆ ಆ ಪಟ್ಟಣದಲ್ಲಿದ್ದ ಈಸಾಯಿಯೊಬ್ಬಾತನಿಗೆ ಸ್ವಪ್ನದಲ್ಲಿ ಆಜ್ಞೆಯಾಗಿದ್ದಿತು. ಆತನು ಸಾಲನನ್ನು ಹುಡುಕಿಕೊಂಡು ಬಂದು ಏಸುವಿನ ಸಂದೇಶವನ್ನು ಯೆಹುದಿಗಳಲ್ಲದ ಇತರರಿಗೊರೆಯಲು ಸಾಲನಿಗೆ ದೇವರ ಅನುಜ್ಞೆಯಾಗಿದೆಯೆಂದು ಹೇಳಿದನು. ನಡೆದುದೂ ಹಾಗೆಯೇ. ಸಾಲನು

ತನ್ನ ವಿರೋಧವನ್ನು ತ್ಯಜಿಸಿ ಏಸುವಿನ ಶಿಷ್ಯರಲ್ಲಿ ಸೇರಿ ಏಸುವಿನ ಮತವನ್ನು ಪ್ರಚಾರಮಾಡತೊಡಗಿದನು. ದಮಾಸ್ಕಸ್ಸಿನಲ್ಲಿದ್ದ ಯೆಹುದಿಗಳು ಅದನ್ನು ಸಹಿಸಲಾರದೆ ಕಡೆಗೆ ಸಾಲನ್ನು ಕೊಲ್ಲಿಸುವ ಒಳಸಂಚನ್ನು ಹೆಣೆದರು. ಆಗ ಸಾಲನ ಪ್ರಾಣವನ್ನುಳಿಸಿ ಆತನ ಗೆಳೆಯರು ಆತನನ್ನೊಂದು ಬುಟ್ಟಿಯಲ್ಲಿ ಕೂರಿಸಿ ಕೋಟೆಯ ಮೇಲಿಂದ ಬುಟ್ಟಿಯನ್ನಿಳಿಸಿಕೊಂಡು ಅವನನ್ನು ದೂರ ಕೊಂಡೊಯ್ದರು. ಬಳಿಕ ಸಾಲನು ಜೆರುಸಲೆಮ್ಮಿಗೆ ಹಿಂತಿರುಗಿ ಹೊರಟನು.

ಜೆರುಸಲೆಮ್ ಸೇರಿದ ಕೂಡಲೇ ಏಸುವಿನ ಶಿಷ್ಯರಾತನನ್ನು ಕಂಡು ಮೊದಮೊದಲು ಅಪನಂಬಿಕೆ ತೋರಿದರು. ತಮ್ಮ ವಿರೋಧಿಗಳಲ್ಲಿ ಪ್ರಬಲನಾಗಿದ್ದಾತನು ತಮ್ಮಲ್ಲಿ ಸೇರಿಕೊಂಡನೆಂಬುದನ್ನು ನಂಬಲು ಅವರಲ್ಲಿ ಸಿದ್ಧತೆಯಿರಲಿಲ್ಲ. ಕೆಲಕಾಲದಮೇಲೆ ಆತನ ನಿಸ್ಪೃಹತೆಯನ್ನು ತಿಳಿದು ಅವರೆಲ್ಲರೂ ಆತನನ್ನೊಪ್ಪಿದರು. ಒಳ್ಳೆ ವಿದ್ವಾಂಸನಾಗಿದ್ದುದರಿಂದ ಸಾಲನು ಪಂಡಿತರಾಗಿದ್ದ ವಿರೋಧಿಗಳನ್ನು ವಾದವಿವಾದಗಳಲ್ಲಿ ಗೆಲ್ಲಬಲ್ಲವನು. ಇತರ ಈಸಾಯಿಗಳು ವಿದ್ಯೆಯಿಲ್ಲದವರು. ಆದುದರಿಂದ ಸಾಲ್ ಬೇಗನೆ ನಾಯಕನಾದನು. ತನ್ನ ಕರ್ತವ್ಯಪಾಲನೆಗಾಗಿ ಇತರ ಸ್ಥಳಗಳಿಗೂ ಹೊರಡಲು ಸಿದ್ಧನಾಗಿ ಸ್ವಂತಪಟ್ಟಣವಾದ ಟಾರ್ಸಸಿಗೆ ತೆರಳಿದನು. ಏಷ್ಯಾಮೈನರ್ ಪ್ರದೇಶದ ಮುಖ್ಯಪಟ್ಟಣಗಳಲ್ಲೆಲ್ಲ ಮತಪ್ರಚಾರಮಾಡಿ ಗ್ರೀಸಿಗೆ ಹೊರಟನು. ಯೆಹುದಿ ಗುಂಪಿನವರಾದರೋ ತಮಗೆ ದ್ರೋಹಮಾಡಿದವನೆಂಬ ಆಗ್ರಹದಿಂದಿದ್ದು ಜೆರುಸಲೆಮ್ಮಿಗೆ ಆತನು ಹಿಂತಿರುಗಿದಾಗ ಆತನನ್ನು ಹಿಡಿಸಿ ಎರಡುವರ್ಷಕಾಲ ಬಂಧನದಲ್ಲಿಟ್ಟರು. ಆ ಸಂದರ್ಭದಲ್ಲಿ ತಾನು ರೋಮಕ ಪ್ರಜೆಯೆಂದು ಸ್ಥಾಪಿಸಿ ಸಾಲ್ ತನ್ನ ವಿಚಾರಣೆಯನ್ನು ರೋಮಕನಗರದಲ್ಲಿ ಸೀಸ್ಹರನೇ ಸ್ವಯಂ ನಡೆಸಬೇಕೆಂದು ವಾದಿಸಿದನು. ಆದರಂತೆ ಅವನನ್ನು ರೋಮಕನಗರಕ್ಕೊಯ್ದರು; ಅಲ್ಲಿಯೂ ಎರಡುವರ್ಷಕಾಲ ಬಂಧನದಲ್ಲಿಯೇ ಇರಬೇಕಾಯಿತು. ಆ ತರುವಾಯ ಆತನು ಸ್ಪೆಯ್ನ್ ದೇಶದಲ್ಲಿಯೂ ಮೂಡಲಲ್ಲಿಯೂ ಸಂಚಾರ ನಡೆಸಿದನೆಂಬ ಪ್ರತೀತಿಯುಂಟು. ಕಡೆಗೆ ರೋಮಕನಗರದಲ್ಲಿಯೇ ಕ್ರಿ.ಶ. ೬೭ನೆ ಇಸವಿಯಲ್ಲಿ ಆತ್ಮಾಹುತಿ ಮಾಡಿಕೊಂಡು 'ಶಾಹಿದ್' ಎನಿಸಿದನಂತೆ.

ಮುಖ್ಯಪ್ರಶ್ನೆ ೩೨ : ಪಾಲನ ಪ್ರಭಾವದಿಂದ ಕ್ರೈಸ್ತಮತದಲ್ಲಿ ತೋರಿದ ಬದಲಾವಣೆಗಳೇನು? ಕಾನ್‌ಸ್ಟೆಂಟೈನ್ ಚಕ್ರವರ್ತಿಯ ಪ್ರಭಾವದಿಂದ ನಡೆದುದೇನು?

ಇದುವರೆಗೂ ನಾವು 'ಕ್ರೈಸ್ತ'ನೆಂಬ ಶಬ್ದವನ್ನು ಪಯೋಗಿಸಿಲ್ಲ. ಏಸು ಗತಿಸಿದ ಮೇಲೆ ಹತ್ತು ವರ್ಷಗಳು ಕಳೆದ ತರುವಾಯವೇ ಆ ಶಬ್ದ ಬಳಕೆಗೆ ಬಂದದ್ದು. ಆ ಹೆಸರನ್ನಿಟ್ಟವನು ಪಾಲ್. ಹೆಸರು ಮಾತ್ರವಲ್ಲದೆ ಆತನು ಕ್ರೈಸ್ತಮತವನ್ನೂ ವ್ಯವಸ್ಥೆಗೊಳಿಸಿ ಉದ್ಧಾರಮಾಡಿದನು. ಆದ್ದರಿಂದ ಆತನನ್ನು ಆ ಮತದ ಎರಡನೆ ಸ್ಥಾಪಕನೆನ್ನುವರು. ಎಲ್ಲ ಜಾತಿಯವರನ್ನೂ ಉದ್ದೇಶಿಸಿ ಏಸು ಉಪದೇಶಮಾಡಿದ್ದಾಗ್ಯೂ ಯೆಹುದಿಗಳಾಗಿದ್ದ ಆತನ ಸ್ವಂತಶಿಷ್ಯರು ಆ ಉಪದೇಶಕ್ಕೆ ಅಪಾರ್ಥಮಾಡಿ ಕ್ರೈಸ್ತಮತವೆಂಬುದು ಯೆಹುದೀ ಪಂಥಗಳಲ್ಲೊಂದುಮಾತ್ರವೆನ್ನಿಸುವ ಸಂಭವವಿತ್ತು. ಅದನ್ನು ತಡೆದವನು ಪಾಲ್. ಆತನು ಕೊಟ್ಟ ವ್ಯಾಖ್ಯಾನವೇ ಬೇರೆಯಾಯಿತು. ಮೊದಮೊದಲು ಕ್ರೈಸ್ತಮತವೆಂಬುದು ಪಲ್ಲಟಕಾರಕವಾದರೂ ಅತಿಸರಳವಾದ ಭಾವನೆಗಳಿಂದ ಕೂಡಿತ್ತು. ಸುವಾರ್ತೆಗಳಲ್ಲಿ ವಿವರವಾಗಿರುವುದೂ ಅದೇ. ಆಚಾರಸಂಪ್ರದಾಯಗಳಿಗಿಂತಲೂ ನಿಯಮನಿಬಂಧನೆಗಳಿಗಿಂತಲೂ ಸೋದರ ಭಾವನೆಯೇ ಮುಖ್ಯವಾದುದೆಂದು ಏಸುವಿನ ಅಭಿಮತ. ತಾನು ಮನುಷ್ಯ ಮಾತ್ರನೋ ದೇವಾಂಶವುಳ್ಳವನೋ, ಧರ್ಮೋದ್ಧಾರಕನೋ ಮತಸಂಸ್ಕಾರ ಕನೋ ಯಾವುದನ್ನೂ ಬಿತ್ತರಿಸದಿದ್ದು ತನ್ನನ್ನು ಹೇಗೆ ಕಾಣಬೇಕೆಂಬ ಅಂಶದಲ್ಲಿ ಯಾವ ನಿರ್ಧಾರವನ್ನೂ ಒತ್ತಿ ಹೇಳಲಿಲ್ಲ. ಆದರೆ ನೆರೆಯಾತನನ್ನು ತನ್ನಂತೆಯೇ ಕಾಣುವುದಲ್ಲದೆ ವೈರಿಗಳನ್ನೂ ಪ್ರೀತಿಸುತ್ತಿದ್ದು ಹಿಂಸೆಯನ್ನೂ ಬಾಧೆಯನ್ನೂ ದೈನ್ಯದಿಂದ ತಾಳಿಕೊಳ್ಳಬೇಕೆಂದು ಒತ್ತಿ ಹೇಳಿದ್ದನು. ಸ್ವಂತ ವೆಂಬ ಆಸ್ತಿಪಾಸ್ತಿಗಳನ್ನು ಶೇಖರಿಸುವುದು ಬಾಧಕವೆಂದು ಹೇಳಿದ್ದನು. ತನ್ನ ಅನುಯಾಯಿಗಳು ತಮ್ಮಲ್ಲಿದ್ದ ಆಸ್ತಿಯನ್ನು ಒಟ್ಟಿಗೆ ಅನುಭವಿಸುತ್ತಿರ ಬೇಕೆಂದು ಬೋಧಿಸಿದ್ದನು. ಈ ಅಂಶಗಳನ್ನು ಅಕ್ಷರಶಃ ಪಾಲಿಸಿದುದು ಮೊದಮೊದಲಲ್ಲಿ ಮಾತ್ರ. ಮತಪ್ರಚಾರವಾಗಿ ಈಸಾಯಿಗಳ ಸಂಖ್ಯಾ ಪ್ರಾಬಲ್ಯಗಳು ಹೆಚ್ಚಿದಂತೆಲ್ಲ ಅವುಗಳ ಅವಲಂಬನೆ ಹೆಚ್ಚು ಹೆಚ್ಚು ಕಷ್ಟ ಕೊಟ್ಟಿತು. ಬುದ್ಧದೇವನ ಉಪದೇಶ ಹೇಗೆ ಕಾಲಾನಂತರದಲ್ಲಿ ಮಾರ್ಪಾಟಾ ಯಿತೋ ಹಾಗೆಯೇ ಏಸುವಿನ ಉಪದೇಶವೂ ರೂಪಾಂತರಗೊಂಡಿತು.

ಕ್ರೈಸ್ತನೆಂದು ಹೇಳಿಕೊಳ್ಳುವುದರಲ್ಲಿ ಮೊದಲಿದ್ದ ಅಪಾಯವು ಮಾಯ

ವಾದ ಕಾಲವು ತೋರಿದಾಗ ಕ್ರೈಸ್ತಮತವು ರೂಪಾಂತರಗೊಳ್ಳುವುದು ಅನಿವಾರ್ಯವಾಯಿತು. ಸೀಸರನನ್ನು ದೇವರಂತೆ ಪೂಜಿಸಲು ತಾವೊಪ್ಪಿಕೊಂಡಂತೆ ಒಪ್ಪದಿದ್ದ ಕ್ರೈಸ್ತರನ್ನು ರೋಮಕರು ವಿರೋಧಿಸಿ ಮುನ್ನೂರು ವರ್ಷಕಾಲ ಕ್ರೈಸ್ತಮತದ ಪ್ರಚಾರವನ್ನು ಅಡ್ಡಿಪಡಿಸಿದರು. ಸೀಸರನ ದೃಷ್ಟಿಯಲ್ಲಿ ಕ್ರೈಸ್ತಮತವೆಂಬುದು ರಾಜದ್ರೋಹವಾಗಿ ಕಂಡಿತು. ರಾಜಕೀಯ ಅಪರಾಧಿಗಳೆಂದೇ ಕ್ರೈಸ್ತರು ಪ್ರಾಣಗಳನ್ನರ್ಪಿಸಿದರು. ಕಡೆಗೆ ಕ್ರೈಸ್ತಮತಕ್ಕೇ ಗೆಲುವುಂಟಾಯಿತು. ರೋಮಕಸಮ್ರಾಟನೇ ಕ್ರೈಸ್ತರಲ್ಲಿ ಸೇರಿದನು. ಕಾನ್‌ಸ್ಟಾಂಟಿನೋಪಲ್ ನಗರವನ್ನು ಸ್ಥಾಪಿಸಿದವನಾದ **ಕಾನ್‌ಸ್ಟೆಂಟೈನ್** (Constantine) ಎಂಬ ಸಮ್ರಾಟನು ಕ್ರೈಸ್ತರ ಪರಮೋತ್ಸಾಹವನ್ನು ಕಂಡನು. ಆ ಉತ್ಸಾಹಬಲವನ್ನು ಸಾಮ್ರಾಜ್ಯದ ಭದ್ರತೆಗಾಗಿ ಉಪಯೋಗಿಸಿಕೊಳ್ಳಲು ಯೋಚಿಸಿದನು. ಅದು ಉತ್ತರ ಮೇರೆಯಲ್ಲಿ ರೂಕ್ಷ ಜನರ ತಂಡಗಳು ಮುತ್ತಿಕೊಂಡು ಬಂದು ದಾಂಧಲೆ ನಡೆಸುತ್ತಿದ್ದ ಕಾಲ. ಸೋಮಾರಿಗಳಂತಿದ್ದ ರೋಮಕರಿಗೆ ಕ್ರೈಸ್ತರ ಶ್ರದ್ಧಾಭಕ್ತಿಗಳೂ ಧೈರ್ಯೋತ್ಸಾಹಗಳೂ ಅಂಟಿಕೊಂಡರೆ ಆಗಬಹುದಾದ ಮೇಲಲ್ಲದೆ, ನಾಶಕೃತ್ಯಗಳನ್ನೇ ನಡೆಸುತ್ತಿದ್ದ ರೂಕ್ಷ ತಂಡಗಳೂ ಕ್ರೈಸ್ತಮತವನ್ನಪ್ಪಿಕೊಂಡು ಸಾಮ್ರಾಜ್ಯ ಭಕ್ತರಾಗಬಹುದೆಂದು ತೋರಿತು. ಆದ್ದರಿಂದ ಕ್ರೈಸ್ತಮತವೇ ರಾಷ್ಟ್ರದಲ್ಲಿ ಸ್ಥಾಪಿತವಾಯಿತು. ಕ್ರಿ.ಶ. ೩೩೭ ರಲ್ಲಿ ಕಾನ್‌ಸ್ಟೆಂಟೈನ್ ಚಕ್ರವರ್ತಿಯು ದೀಕ್ಷಾಸ್ನಾನ ಮಾಡಿಸಿಕೊಂಡನು. ರೋಮಕಸಾಮ್ರಾಜ್ಯವೆಂಬುದು ಪವಿತ್ರವೆನಿಸಿಕೊಳ್ಳಲು ಆಧಾರ ಹುಟ್ಟಿತು.

ಅಭ್ಯಾಸಗಳು

೧. ಸುವರ್ಣನಿಯಮವಾವುದು? ಯಾವ ರೀತಿಗಳಲ್ಲಿ ಅದನ್ನು ದಾಟಿ ವರ್ತಿಸಬೇಕೆಂದು ಏಸು ತನ್ನ ಅನುಚರರಿಗೆ ಬೋಧಿಸಿ ನಿಯಮಿಸಿದನು? ಆತನ ಉಪದೇಶಕ್ಕೆ ಯೆಹುದಿಗಳ ಆಕ್ಷೇಪವೇನು? ಆ ನಿಯಮದಂತೆ ನಡೆದುಕೊಳ್ಳುವವರಾರಾದರೂ ಈಗ ಇದ್ದಾರೆಯೆ?

೨. ಪೈಲೆಟಸ್ ಎದುರಿನಲ್ಲಿ ಯೆಹುದಿಗಳು ಏಸುವಿನ ಮೇಲೆ ಹೊರಿಸಿದ ಅಪರಾಧವೇನು? ಏಸುವಿನ ಕೊಲೆಗೆ ಪೈಲಟಸ್ ಆಸ್ಪದವನ್ನೇಕೆ ಕೊಟ್ಟನು?

೩. ಪಾಲನ ವೃತ್ತಾಂತವನ್ನು ಸಂಕ್ಷೇಪವಾಗಿ ಹೇಳಿ.

೪. 'ಬುದ್ಧದೇವನ ಉಪದೇಶಕ್ಕಾದ ಗತಿಯೇ ಏಸುವಿನ ಉಪದೇಶಕ್ಕೂ ಪ್ರಾಪ್ತಿಯಾಯಿತು.' ಯಾವುದು ಆ ಗತಿ? ಹಾಗೆ ಸಂಭವಿಸಲು ಕಾರಣಗಳೇನು?

೫. ಏಸುವಿನ ಪುನರುತ್ಥಾನವೆಂಬುದರ ಅರ್ಥವೇನು? ಬಹುಮಂದಿ ಕ್ರೈಸ್ತರಲ್ಲಿ ಆ ನಂಬಿಕೆಯೇಕೆ ಮುಖ್ಯವೆನಿಸಿದೆ?

೮ನೇ ಅಧ್ಯಾಯ

ಬೃಹತ್ತರ ಭಾರತ

ಮುಖ್ಯಪ್ರಶ್ನೆ ೩೩ : ರೂಕ್ಷಜನರ ತಂಡಗಳಿಂದ ಆದ ಭಂಗವೇನು?

ಕಾನ್‌ಸ್ಟೆಂಟೈನ್ ಚಕ್ರವರ್ತಿ ಕ್ರೈಸ್ತಮತವನ್ನು ಸ್ವೀಕರಿಸಿದ ವೇಳೆಗೆ ರೋಮಕ ಸಾಮ್ರಾಜ್ಯವು ದುರ್ಬಲವಾಗಿತ್ತು. ಆತನು ರಾಜಧಾನಿಯನ್ನು ಬೇರೆಡೆಯಲ್ಲಿಟ್ಟನು. ಬೈಸಾಂಟಿಯಂ (Byzantium) ಎಂಬ ಪಟ್ಟಣ ಆ ಕಾರಣದಿಂದ ಕಾನ್‌ಸ್ಟಾಂಟಿನೋಪಲ್ ಎನಿಸಿತು. ಆತನ ತರುವಾಯ ಆಳಿದ ಸಮ್ರಾಟೊಬ್ಬನು ಸಾಮ್ರಾಜ್ಯವನ್ನು ಪಡುವಲು ಮೂಡಲುಗಳೆಂಬ ಎರಡು ವಿಭಾಗಮಾಡಿಬಿಟ್ಟನು. ಒಬ್ಬನಿಗೆ ಬದಲಾಗಿ ಇಬ್ಬರು ಚಕ್ರವರ್ತಿಗಳಾದರು. ಇದರಿಂದ ರೋಮಕರಿಗೆ ಯಾವ ಪ್ರಯೋಜನವೂ ಆಗಲಿಲ್ಲ.

ಏಸುವಿನ ಕಾಲಕ್ಕೆ ಒಂದೆರಡು ಶತಮಾನಗಳ ಹಿಂದೆ ಮಧ್ಯಏಷ್ಯದಲ್ಲಿ ಕೆಲವು ಘಟನೆಗಳು ನಡೆದಿದ್ದವು. ಆ ಪ್ರದೇಶಗಳ ಪಶುಪಾಲಕ ತಂಡಗಳವರಿಗೆ ಚೀನವನ್ನು ಮುತ್ತುವುದು ಸ್ವಭಾವವಾಗಿತ್ತು. ಅಶೋಕನ ಕಾಲದಲ್ಲಿ ಚೀನದಲ್ಲಿ ಆಳುತ್ತಿದ್ದ ಶಿಹ್ವಾಂಗ್ತಿ (Shi-Hwang-ti) ಚಕ್ರವರ್ತಿಯು ಚೀನ ಸಾಮ್ರಾಜ್ಯವನ್ನು ಭದ್ರಪಡಿಸಿದನು. ಮಧ್ಯಏಷ್ಯದ ಕಡೆಯಿಂದ ಹೊರಟು ಹಾವಳಿಗೈಯುತ್ತಿದ್ದ ಮಂಗೋಲತಂಡಗಳನ್ನು ತಡೆಯಲು ಆತನು ತನ್ನ ದೇಶದ ಉತ್ತರದಲ್ಲಿ ದೊಡ್ಡಗೋಡೆಯನ್ನು ಸಾವಿರ ಮೈಲಿಯುದ್ದಕ್ಕೂ ಕಟ್ಟಿಸಿ ಮೇರೆಯನ್ನು ಕಾಪಾಡಿದನು. ಪಶುಪಾಲಕ ಸಮೂಹಗಳವರು ಬೇರೆ ದಿಕ್ಕನ್ನು ಕಾಣಬೇಕಾಯಿತು. ಪ್ರಾಯಶಃ ಅದೇಕಾಲಕ್ಕೆ ಮಧ್ಯಏಷ್ಯದಲ್ಲಿದ್ದ ಹುಲ್ಲುಗಾವಲ ನಾಡುಗಳು ಒಣಗಿಹೋಗಿ ಆ ಪ್ರದೇಶವೆಲ್ಲ ಬೆಂಗಾಡಾಯಿತು. ಕ್ರಿ.ಪೂ. ೨೧೪ರಲ್ಲಿ ಮೊದಲಾಯಿತು **ಮಹಾಕುಡ್ಯ** ನಿರ್ಮಾಣ. ಅಲ್ಲಿಂದಲೇ ಆ ತಂಡಗಳು ದಕ್ಷಿಣಕ್ಕೂ ಪಶ್ಚಿಮಕ್ಕೂ ಹೊರಡಲಾರಂಭ. **ಶಕ**ಕುಲದವರೂ, **ಕುಶೀ**ಕುಲದವರೂ ದಕ್ಷಿಣಕ್ಕೆ ನುಗ್ಗಿ ಕಡೆಗೆ ಹಿಂದುಸ್ತಾನವನ್ನು ಪ್ರವೇಶಿಸಿದರು. ಅವರ ಹಿಂದಿದ್ದ **ಹೂಣ**ರ ದೊಡ್ಡ ಸಮೂಹವೊಂದು ಪಡುವಲಿಗೆ ಹೊರಟು ಆರ್ಯಜಾತಿಯ **ಗಥ** (Goths)ರೆಂಬ ರೂಕ್ಷಜನರನ್ನು ರೈನ್ ಮತ್ತು ಡಾನ್ಯೂಬ್ ನದಿಗಳ ಬಳಿಗೆ ಅಟ್ಟಿದರು. ಅದೇ ರೋಮಕ ಸಾಮ್ರಾಜ್ಯದ ಮೇರೆ.

ಮೇರೆಗಳ ಬಳಿ ಗುಂಪುಗುಂಪುಗಳಾಗಿ ನುಗ್ಗಿಬರುತ್ತಿದ್ದ **ಗಥ**, **ಫರಂಕಿ** (Franks) ಮತ್ತು **ವಾಂಡಲ** (Vandals) ಜನರನ್ನು ರೋಮಕರು ಎದುರಿಸಲಾಗಲಿಲ್ಲ. ನುಗ್ಗಿಬಂದವರಿಗೆ ಕ್ಷೇತ್ರಗಳನ್ನು ಬಿಟ್ಟುಕೊಟ್ಟರು. ಹಾಗೆಮಾಡಿ ಅವರನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳುವ ಯೋಚನೆ ರೋಮಕರದು. ಆದರೇನು! ರೂಕ್ಷಜನರು ಅಸಂಖ್ಯಾಕರಾಗಿ ಒತ್ತಿಕೊಂಡು ಬರುತ್ತಲೇ ಇದ್ದರು. ಆಗ ಸಾಮ್ರಾಜ್ಯವನ್ನೆರಡುಭಾಗ ಮಾಡಲಾಯಿತು. ಎರಡು ರಾಜಧಾನಿಗಳು, ಇಬ್ಬರು ಚಕ್ರವರ್ತಿಗಳು. ಆದರೂ ಉಳಿಗಾಲವಿಲ್ಲ. ಕ್ರಿ.ಶ. ೪೧೦ರ ವೇಳೆಗೆ ಗಥರ ಮುಖಂಡನು ರೋಮಕನಗರವನ್ನು ಮುತ್ತಿ ಹಿಡಿದೇಬಿಟ್ಟನು. ಪಡುವಣಸಾಮ್ರಾಜ್ಯ ಗಥರಿಗೂ ಫರಂಕಿಗಳಿಗೂ ವಶವಾದಂತೆ ಕಂಡಿತು. ಆದರೆ ಅವರ ಹಿಂದೆಯೇ ಇದ್ದರು ಮಂಗೋಲಜಾತಿಯ ಹೂಣರು. ಐದನೆ ಶತಮಾನದಲ್ಲಿ ಪ್ರಚಂಡನಾಯಕನೊಬ್ಬನು ಹೂಣರಲ್ಲಿ ಹುಟ್ಟಿ ರೈನ್ ನದಿಯಿಂದ ಏರಲ್ ಸಮುದ್ರದವರೆಗೆ ರಾಜ್ಯಕಟ್ಟಿದನು. ಅವನ ಹೆಸರು **ಅಟ್ಟಿಲ** (Attila). ರೋಮಕರ ಪಾಪಕೃತ್ಯಗಳನ್ನೂ ಅನ್ಯಾಯಗಳನ್ನೂ ಸಹಿಸಲಾರದೆ ಭಗವಂತನು ಶಾಪಕೊಟ್ಟು ದಂಡಿಸಲು ಕೊಟ್ಟುಕಳುಹಿಸಿದ ದೈತ್ಯನೆಂದು ಆತನನ್ನು ವರ್ಣಿಸುವುದುಂಟು. ೪೫೧ರಲ್ಲಿ ಅಟ್ಟಿಲನು ಪಡುವಣ ಸಾಮ್ರಾಜ್ಯವನ್ನಾಕ್ರಮಿಸಿದನು. ಗಥರೂ ಫರಂಕಿಗಳೂ ಪ್ರಯಾಸಪಟ್ಟು ಆತನನ್ನೊಂದು ಕದನದಲ್ಲಿ ಸೋಲಿಸಿ ಹೂಣರ ದಾಳಿಯನ್ನು ತಡೆದರು. ೪೫೩ರಲ್ಲಿ ಅಟ್ಟಿಲನು ಕಾಲವಶನಾದನು. ಪಡುವಣಸಾಮ್ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಗಥರೂ ಫರಂಕಿಗಳೂ ರಾಜ್ಯಗಳನ್ನು ಅಲ್ಲಲ್ಲಿ ಕಟ್ಟಿಕೊಂಡರು. ಪಡುವಲಸಾಮ್ರಾಜ್ಯವೆಂಬುದು ನಾಶವಾದಂತೆಯೇ ಆಯಿತು.

ಕಾನ್‌ಸ್ಟಾಂಟಿನೋಪಲ್ ನಗರವು ರಾಜಧಾನಿಯಾಗಿದ್ದ ಮೂಡಲ ಸಾಮ್ರಾಜ್ಯಕ್ಕೆ ಇನ್ನೂ ಆಯುಸ್ಸಿತ್ತು. ಬಾಲ್ಕನ್ ಪರ್ಯಾಯದ್ವೀಪ, ಏಷ್ಯಮೈನರ್, ಸಿರಿಯ ಮತ್ತು ಈಜಿಪ್ಟ ಭಾಗಗಳನ್ನೊಳಗೊಂಡಿದ್ದ ಆ ಸಾಮ್ರಾಜ್ಯವನ್ನು ಗ್ರೀಕಸಾಮ್ರಾಜ್ಯವೆನ್ನುವುದು ರೂಢಿ. ಏಕಂದರೆ ಅಲ್ಲಿಯ ಭಾಷೆ ಗ್ರೀಕ್; ಲ್ಯಾಟಿನ್ನಲ್ಲ. ಕ್ರೈಸ್ತಮತವನ್ನೊಪ್ಪಿದ್ದರೂ ಆಚಾರಗಳು ಭಿನ್ನ.[1] ಹಾಗಿದ್ದರೂ ಅಲ್ಲಿಯ ಚಕ್ರವರ್ತಿಗಳು ಪಡುವಲಭಾಗವನ್ನು ರೂಕ್ಷ

---

[1] ಕ್ರೈಸ್ತಮತದ ಚರಿತ್ರೆಯಲ್ಲಿ ಈ ಕಾರಣದಿಂದ ದೊಡ್ಡ ವ್ಯತ್ಯಾಸ ತೋರಿತು. ಪಶ್ಚಿಮ ಅಥವಾ ಲ್ಯಾಟಿನ್ ಪಂಥವೊಂದು, ಪೂರ್ವ ಅಥವಾ ಗ್ರೀಕ್ ಪಂಥವಿನ್ನೊಂದು; ಪಶ್ಚಿಮಪಂಥಕ್ಕೆ ರೋಮಕನಗರ ಮುಖ್ಯಸ್ಥಾನವಾದರೆ ಪೂರ್ವಪಂಥಕ್ಕೆ ಕಾನ್‌ಸ್ಟಾಂಟಿನೋಪಲ್ ಮುಖ್ಯಸ್ಥಾನ.

ಜನರಿಂದ ಗೆದ್ದುಕೊಳ್ಳುವ ಆಸೆಯನ್ನು ಬೆಳೆಸಿದರು. ಆರನೆ ಶತಮಾನದಲ್ಲಿ ಆಳಿದ **ಜಸ್ಟಿನಿಯನ್** (Justinian) ಎಂಬ ಚಕ್ರವರ್ತಿ ಇಟಲಿಯನ್ನು ಗೆದ್ದುಕೊಂಡು ಪುನಃ ರೋಮಕಸಾಮ್ರಾಜ್ಯವನ್ನು ನೆಲೆಗೊಳಿಸುವ ಯತ್ನನಡೆಸಿದನು. ಆದರೆ ಮರಳಿನಲ್ಲಿ ಕಟ್ಟಿದ ಮನೆಯಂತೆ ಅದು ಈಗಲೋ ಆಗಲೋ ಕುಸಿದು ಬೀಳುವಂತಿತ್ತು. ಅಂತಹ ವೇಳೆಯಲ್ಲಿ ಪ್ಲೇಗ್ ವ್ಯಾಧಿಯು ಭಯಂಕರವಾಗಿ ಹರಡಿತು. ಆಗ ಇಟಲಿಯಲ್ಲಿ ದಿನಕ್ಕೆ ಹತ್ತುಸಾವಿರ ಮಂದಿ ಪ್ರಾಣಗಳನ್ನು ಬಿಟ್ಟರಂತೆ. ಜಸ್ಟಿನಿಯನ್ನನ ಪ್ರಯತ್ನ ವ್ಯರ್ಥವಾಯಿತು. ಆತನ ತರುವಾಯ ಆಳಿದವರು ತಮ್ಮ ಸ್ವಂತ ಸಾಮ್ರಾಜ್ಯವನ್ನು ಕಾಪಾಡಿಕೊಂಡರೆ ಸಾಕೆಂದು ಇರಬೇಕಾಯಿತು.

ಸಿರಿಯಕ್ಕೆ ಮೂಡಲಲ್ಲಿದ್ದುದು ಫಾರ್ಸಿಸ್ತಾನೆಂಬುದು. ಹಿಂದೆ ಅಲ್ಲಿ ಸೆಲ್ಯೂಕಸನ ವಂಶಸ್ಥರು ಆಳಿದ್ದರಷ್ಟೆ. ಅವರ ಆಳಿಕೆಯನ್ನು ಕೊನೆಗಾಣಿಸಿ ಕ್ರಿ.ಪೂ. ೨೪೮ರಲ್ಲಿ ಹರ್ಷಕ ಅಥವಾ **ಆರ್ಸಕೀಸ್** (Arsakes) ಎಂಬಾತನು ಹೊಸ ರಾಷ್ಟ್ರವನ್ನು ಸ್ಥಾಪಿಸಿದ್ದನು. ಆತನ ವಂಶಸ್ಥರು ರೋಮಕರೊಡನೆ ಹೆಣಗಾಡುತ್ತಲಿದ್ದುದಲ್ಲದೆ ತಮ್ಮ ಪೂರ್ವಮತವಾದ ಅಗ್ನ್ಯಾರಾಧನೆಯನ್ನು ಉದ್ಧರಿಸಿಕೊಂಡರು. ಅವರಿಗೆ **ಪಾರ್ಥಿಯನ** (Parthians) ರೆಂದು ಹೆಸರು. ರೋಮಕ ಸಾಮ್ರಾಜ್ಯ ದುರ್ಬಲಗೊಂಡವೇಳೆಗೆ ಅಲ್ಲಿಗೂ ರೂಕ್ಷಜನರ ಹಾವಳಿ ತಟ್ಟಿತು. ಆದರೆ ಕ್ರಿ.ಶ. ೨೧೨ರಲ್ಲಿ ಅರ್ತಕ್ಷತ್ರ ಅಥವಾ **ಅರ್ದಷೇರ್** (Artaxerxes) ಎಂಬ ಶೂರನು ರಾಜ್ಯವನ್ನು ವಶಪಡಿಸಿಕೊಂಡು ಪ್ರಸಿದ್ಧ **ಸಾಸಾನೀ** (Sassanian) ಸಂತತಿಯ ಪ್ರಾಬಲ್ಯವನ್ನು ಸ್ಥಾಪಿಸಿದನು. ಅವರು ಕಟ್ಟಿ ವಿಸ್ತರಿಸಿ ಆಳಿದ ಸಾಮ್ರಾಜ್ಯ ಫಾರ್ಸಿಸ್ತಾನ್. ಜಸ್ಟಿನಿಯನ್ ತರುವಾಯ ಕಾನ್‌ಸ್ಟಾಂಟಿನೋಪಲಿನಲ್ಲಿ ಆಳಿದ ಪ್ರಭುಗಳಿಗೂ ಫಾರ್ಸಿ ಶಾಇನ್‌ಶಾಹರಿಗೂ ನಿರಂತರವಾದ ಜಗಳಕ್ಕಿಟ್ಟುಕೊಂಡಿತು.


ಮುಖ್ಯಪ್ರಶ್ನೆ ೩೪ : ಹಿಂದುಸ್ತಾನದ ಚರಿತ್ರೆಯಲ್ಲಿ ತೋರಿದ ಸುವರ್ಣ ಯುಗವಾವುದು? ಬೃಹತ್ತರಭಾರತವೆಂಬುದೇನು?

ಹೂಣಜನರಿಂದ ತಳ್ಳಿಸಿಕೊಂಡ ಗಥರು ಮುಂತಾದವರು ರೋಮಕ ಸಾಮ್ರಾಜ್ಯದ ಮೇಲೆ ಕವಿದಂತೆ ಶಕಕುಲಸ್ಥರೂ ಕುಶೀಕುಲಸ್ಥರೂ ಒಬ್ಬರ ಹಿಂದೊಬ್ಬರು ಹಿಂದುಸ್ತಾನವನ್ನು ಪ್ರವೇಶಿಸಿದರು. ಹಿಂದುಸ್ತಾನದಲ್ಲಿ ಏಕ ರಾಜ್ಯವಿರಲಿಲ್ಲ. ಅಶೋಕನ ತರುವಾಯ ಒಡೆದ ಮೌರ್ಯಸಾಮ್ರಾಜ್ಯದ ಪ್ರತಿಭಾಗದಲ್ಲಿಯೂ ಪ್ರತ್ಯೇಕ ರಾಜ್ಯಗಳು ಹುಟ್ಟಿಕೊಂಡಿದ್ದವು. ಸುಗ್ಗಿಬಂದ

ಶಕರು ಕೆಲಕಾಲಮಾತ್ರ ಪ್ರತ್ಯೇಕರಾಗಿದ್ದು ರಾಜ್ಯಕಟ್ಟಿದರು. ಸ್ವಲ್ಪಕಾಲದಲ್ಲಿಯೇ ಅವರು **ಶಾತವಾಹನ ಪ್ರಭು**ಗಳಿಗೆ ಸೋತು ಹಿಂದುಧರ್ಮವನ್ನೊಪ್ಪಿಕೊಂಡು ಭಾರತೀಯರಲ್ಲಿ ಸೇರಿಹೋದರು. ಕುಶೀಕುಲಸ್ಥರೂ ಹಾಗೆಯೇ. ಅವರಲ್ಲಿ ಅತಿಸಮರ್ಥನಾಗಿದ್ದ ಕನಿಷ್ಕನು ಬೌದ್ಧನಾದುದನ್ನು ನೀವು ಕೇಳಿರುತ್ತೀರಿ. ಸ್ವಲ್ಪಕಾಲ ಮಾತ್ರ ಪ್ರತ್ಯೇಕರಾಗಿದ್ದು ಕಡೆಗೆ ಹಿಂದುಸ್ತಾನದ ಜನರಲ್ಲಿ ಅವರು ಏಕೀಭವಿಸಿಬಿಟ್ಟರು. ಆ ರೀತಿ ಸೇರಿಕೊಳ್ಳಲು ದೇಶದಲ್ಲಿ ರೂಢಿಯಾಗಿದ್ದ ಚಾತುರ್ವರ್ಣ್ಯದಲ್ಲಿ ಆಸ್ಪದವೂ ಅನುಕೂಲವೂ ಇತ್ತು. ಹಿಂದುಸ್ತಾನವನ್ನು ಮುತ್ತಲು ಬಂದವರು ಮೊದಮೊದಲು ಹಾವಳಿ ನಡೆಸಿದ್ದೆಷ್ಟೋ ಅಷ್ಟೆ.

ಕನಿಷ್ಕನ ವಂಶಸ್ಥರ ರಾಜ್ಯ ಚಿರಕಾಲ ನಡೆಯಲಿಲ್ಲ. ವಾಯುವ್ಯಭಾಗದಲ್ಲಿ ಮಾತ್ರ ಅವರ ಆಳಿಕೆ. ಉಳಿದ ಭಾಗಗಳಲ್ಲಿ ಸನಾತನಧರ್ಮವನ್ನೊಪ್ಪಿಕೊಂಡ ರಾಜವಂಶಗಳಿದ್ದುವು. ಕ್ರಿ.ಶ. ಮೂರನೆ ನಾಲ್ಕನೆ ಶತಮಾನಗಳಲ್ಲಿ ಹಿಂದುಸ್ತಾನದಲ್ಲಿ **ವಾಕಾಟಕ** ವಂಶಸ್ಥರೂ **ಗುಪ್ತ** ವಂಶಜರೂ ಕಟ್ಟಿದ ಸಾಮ್ರಾಜ್ಯ ಪ್ರಬಲವಾಯಿತು. ಆ ವೇಳೆಗೆ ಬೌದ್ಧಮತವೂ ರೂಪಾಂತರ ಹೊಂದಿತ್ತು. ಎಲ್ಲ ಜನರಿಗೂ ಹಿತಕರವಾದ ವರ್ಣಾಶ್ರಮಧರ್ಮವೆಂಬುದು ಬೆಳೆದು 'ಮಹಾಯಾನ'ವೆಂಬ ಹೆಸರಿನ ಬೌದ್ಧಮತದ ರೂಪವನ್ನು ಸೆಳೆದು ಕೊಂಡಿತ್ತು. ಬ್ರಾಹ್ಮಣ ಬೌದ್ಧಮತಗಳಿಗೆ ಪರಸ್ಪರವಿರೋಧವಿಲ್ಲದಂತಾಯಿತು. ಆಗ ಪ್ರಾಚೀನಾರ್ಯರ ಭಾಷೆಯನ್ನು ಎಲ್ಲರೂ ಮೆಚ್ಚಿ ಆ ಭಾಷೆಯ ಗ್ರಂಥಗಳನ್ನು ಶುದ್ಧಿಗೊಳಿಸಿದ್ದಲ್ಲದೆ ವಿಸ್ತರಿಸಿದರು. ಲೋಕೋತ್ತರವೆನಿಸಿದ ರಾಮಾಯಣ ಮಹಾಭಾರತಗಳಲ್ಲದೆ ಸಂಸ್ಕೃತ ಕಾವ್ಯಗಳೂ ಉತ್ಕೃಷ್ಟ ರೀತಿಯಲ್ಲಿ ರಂಜಿಸಿದವು. **ಭಾಸ ಕಾಳಿದಾಸಾದಿ** ಕವಿಗಳಿದ್ದುದು ಈ ಕಾಲದಲ್ಲಿ. ಶಬ್ದಕೋಶವನ್ನು ಪಾಠಕ್ಕಾಗಿ ಬರೆದ **ಅಮರಸಿಂಹ**, ಚೀನದಲ್ಲಿ ನೆಲೆಸಿ ಚೀನೀ ಭಾಷೆಯಲ್ಲಿ ಗ್ರಂಥರಚನೆಮಾಡಿದ **ಕುಮಾರಜೀವ**, ವೈದ್ಯಶಾಸ್ತ್ರ ಗ್ರಂಥವನ್ನು ಬರೆದಿಟ್ಟ **ವಾಗ್ಭಟ**, ಜ್ಯೋತಿಷಗಣಿತಗಳನ್ನು ಸಾಧಿಸಿದ **ಆರ್ಯಭಟ ಬ್ರಹ್ಮಗುಪ್ತ ವರಾಹಮಿಹಿರಾದಿ**ಗಳು ಸರಿಸುಮಾರು ಈ ಕಾಲದವರು. ವಾಸ್ತು, ಶಿಲ್ಪ, ಚಿತ್ರ, ಗಾನ ಕಲೆಗಳಲ್ಲಿಯೂ ಅದ್ಭುತಕೃತಿಗಳಾದವು. ಸುಪ್ರಸಿದ್ಧನಾದ **ಕಾಳಿದಾಸನ ಕಾಲ**ವೆಂದು ಕರೆಯಬಹುದಾದ ಈ ಕಾಲವನ್ನು ಚರಿತ್ರೆಯಲ್ಲಿ 'ಸುವರ್ಣಯುಗ'ವೆಂದು ಕರೆಯುತ್ತಾರೆ.

ಆ ಕಾಲಸ್ಥಿತಿಯನ್ನು ಚೀನೀಯಾತ್ರಿಕನಾಗಿ ಬಂದ **ಫಾಹಿಯನ್** ಸ್ವಲ್ಪವಾಗಿ ವರ್ಣಿಸಿರುತ್ತಾನೆ. ಗುಪ್ತ ಸಾರ್ವಭೌಮರ ಆಡಳಿತ ಸಮರ್ಥ



ಬೃಹತ್ತರ ಭಾರತ

ವಾಗಿಯೂ ಯಶಸ್ವಿಯಾಗಿಯೂ ಇತ್ತು. ತೆರಿಗೆಗಳು ನ್ಯಾಯಸಮ್ಮತವಾಗಿಯೂ ಹಗುರವಾಗಿಯೂ ಇದ್ದುವು. ದುಷ್ಟರು ಅಲ್ಪಸಂಖ್ಯಾಕರಾಗಿದ್ದರು. ದಂಡನೆಯು ಕೃಪಾಪೂರಿತವಾಗಿತ್ತು. ಭಿನ್ನಭಿನ್ನ ಮತಸ್ಥರು ಪರಸ್ಪರ ಮೈತ್ರಿ ಗೌರವಗಳಿಂದಿರುತ್ತಿದ್ದರು. ಚೀನಾಯಾತ್ರಿಕನು ಆ ಸ್ಥಿತಿಯನ್ನು ನೋಡಿ ಅಚ್ಚರಿಗೊಂಡನು. ಫಾಹಿಯನ್ ಭೂಮಾರ್ಗವಾಗಿ ಬಂದು ಸಮುದ್ರ ಮಾರ್ಗವಾಗಿ ಹಿಂತಿರುಗಿದನು. ಆ ವೇಳೆಗೆ ಹಿಂದುಸ್ತಾನದ ನಿವಾಸಿಗಳು ಆಗ್ನೇಯದಿಕ್ಕಿನಲ್ಲಿ ಹೊರಟು ಜವ, ಬಲಿ, ಭೋಜ, ಸುಮಾತ್ರ ಮುಂತಾದ ದೇಶಾಂತರಗಳಲ್ಲಿ ನೆಲೆಸಿ ಅಲ್ಲಿ ತಮ್ಮ ಸಂಸ್ಕೃತಿಯನ್ನು ಹರಡಿದ್ದರು. ಬರ್ಮದ ಮುಂದಕ್ಕಿರುವ ಭಾಗಕ್ಕೆ ಇಂದಿಗೂ **ಫರ್ದರಿಂಡಿಯ** (Further India) ಅಥವಾ **ಇಂಡೊನೇಸಿಯ** (Indonesia) ಎಂಬ ಹೆಸರು ಆ ಕಾರಣದಿಂದ ಬಳಕೆಯಲ್ಲಿರುವುದು. ಗುಪ್ತ ಸಾರ್ವಭೌಮರ ಕಾಲವು ಕಳೆದ ಬಳಿಕ ಶ್ಯಾಮ (Siam) ಮತ್ತು ಕಾಂಬುಜ (Cambodia) ದೇಶಗಳಲ್ಲಿಯೂ ಹಿಂದು ಜನರ ರಾಜ್ಯಗಳಿದ್ದವು. ಮಧ್ಯಏಷ್ಯದಿಂದ ಫಿಲಿಪೈನ್ ದ್ವೀಪಗಳವರೆಗೂ ಭಾರತೀಯ ಸಂಸ್ಕೃತಿಯು ಒಂದು ಕಾಲದಲ್ಲಿಲ್ಲದಿದ್ದರೆ ಇನ್ನೊಂದು ಕಾಲದಲ್ಲಿ ಹರಡಿಕೊಂಡಿತು. ಅದನ್ನು ಚರಿತ್ರಕಾರರು **ಬೃಹತ್ತರಭಾರತ** (Greater India) ವೆಂದು ಕರೆಯುತ್ತಾರೆ.

ಭಾರತವರ್ಷವೆನ್ನುವುದು ಒಂಭತ್ತು ಪ್ರಕಾರವೆಂದು ಗುಪ್ತರ ಕಾಲದಲ್ಲಿ ಬರೆದಿಟ್ಟ ಪುರಾಣಗಳಲ್ಲಿ ಭಾರತೀಯರು ಹೇಳಿಕೊಂಡರು. ಹಿಂದುಸ್ತಾನವೆಂಬುದು ಪ್ರಧಾನಭಾರತವರ್ಷವಾದರೆ ಉಳಿದವು ಉಪಭಾರತ ವರ್ಷಗಳು. ಭಾರತೀಯರ ಸಂಸ್ಕೃತಿಯು ಇಷ್ಟು ಪ್ರಭಾವದಿಂದ ಕೂಡಿದ್ದಾಗಲೇ ವಿಶ್ವಕವಿಯೆನಿಸಿದ **ಕಾಳಿದಾಸನಿದ್ದುದು**. ಆತನ ಕಾಲವಾವುದೆಂದಾಗಲಿ ಆತನ ಜೀವನಚರಿತ್ರೆಯೇನೆಂದಾಗಲಿ ನಿಶ್ಚಿತವಾಗಿಲ್ಲ. ಆದರೆ ಭಾರತೀಯರ ಮನೋಧರ್ಮವನ್ನೂ ಆಶಯಗಳನ್ನೂ ಬಿಚ್ಚಿ ಮನರಂಜಕವಾದ ರೀತಿಯಲ್ಲಿ ಆತನು ತನ್ನ ಕಾವ್ಯಗಳಲ್ಲಿ ವರ್ಣಿಸಿರುವನು. ಲೋಕಪ್ರಸಿದ್ಧವಾದ ಶಾಕುಂತಲ ನಾಟಕದಲ್ಲಿ ಋಷ್ಯಾಶ್ರಮವಾಸಿಗಳ ಮಾತುಕತೆಗಳನ್ನು ಉದಾಹರಣೆಗಾಗಿ ತೆಗೆದುಕೊಳ್ಳಿ. ಕಾಳಿದಾಸನ ಕಾವ್ಯಗಳಂತೆ ರಾಮಾಯಣ ಮಹಾಭಾರತಗಳೂ ಭಾರತೀಯರ ಅಮೂಲ್ಯ ಸಂಪತ್ತು. ಗುಪ್ತರ ಕಾಲದಲ್ಲಿ ಅವೂ ಪರಿಷ್ಕೃತವಾಗಿ ಹಿಂದುಸ್ತಾನದ ಊರೂರಿನಲ್ಲಿಯೂ ಪ್ರಚಾರವಾದವು. ಆ ಗ್ರಂಥಗಳಿಂದ ಹಿಂದುಸ್ತಾನನಿವಾಸಿಗಳಿಗೆಷ್ಟು ಉಪಕಾರವಾಯಿತೆಂದು ಸುಲಭವಾಗಿ ಹೇಳಲು ಸಾಧ್ಯವಿಲ್ಲ.

ಐದನೆ ಶತಮಾನದ ಅಂತ್ಯದಲ್ಲಿ **ಹೂಣರ** ತಂಡಗಳು ಹಿಂದುಸ್ತಾನಕ್ಕೂ ನುಗ್ಗಿದವು. ಮೊದಮೊದಲು ಅವರನ್ನು ತಡೆದ ಗುಪ್ತ ಚಕ್ರವರ್ತಿಯು ಕಡೆಗೆ ತಡೆಯಲಾರದೆ ಹೋದನು. ವಾಯುವ್ಯಭಾಗಗಳಲ್ಲಿ ಹೂಣರು ತಮ್ಮ ರಾಜ್ಯವನ್ನೇ ಕಟ್ಟಿದರು. ಆದರೆ ಆರನೆ ಶತಮಾನದಲ್ಲಿ (ಕ್ರಿ.ಶ. ೫೨೮) ಹಿಂದುಸ್ತಾನದ ರಾಜರು ಹೂಣರ ಅಧಿಪತಿಯಾದ **ಮಿಹಿರಗುಲನ** ಆಡಳಿತವನ್ನು ಕೊನೆಗಾಣಿಸಿಬಿಟ್ಟರು. ಆ ಬಳಿಕ ಹೂಣರು ದೇಶೀಯರೊಡನೆ ಕಲೆತರು. ಯೂರೋಪಿನಲ್ಲಿ ಹೂಣರಿಂದ ನಡೆದಷ್ಟು ಧ್ವಂಸವು ಹಿಂದುಸ್ತಾನದಲ್ಲಿ ನಡೆಯಲಿಲ್ಲ. ವಾಸ್ತವವಾಗಿ ರೋಮಕಸಾಮ್ರಾಜ್ಯವು ದುರ್ಬಲಗೊಂಡ ಕಾಲದಿಂದ ಹಿಡಿದು ಸುಮಾರು ೮೦೦ ರವರೆಗೆ ಯೂರೋಪಿನಲ್ಲಿ ಅತಿ ದುಃಸ್ಥಿತಿ. ಅದಕ್ಕೆ **ಅಂಧಕಾರಯುಗವೆಂಬುದು** (Dark Ages) ಚರಿತ್ರಕಾರರಿಟ್ಟ ಹೆಸರು. ಅದೇ ಕಾಲದಲ್ಲಿ ಹಿಂದುಸ್ತಾನ ಮುಂತಾದ ಮೂಡಲದೇಶಗಳಲ್ಲಿ ಉತ್ತಮವೆನಿಸಿದ ಸ್ಥಿತಿ. ರೋಮಕಸಾಮ್ರಾಜ್ಯವು ನಾಶಗೊಂಡ ತರುವಾಯ ಪಡುವಲಲ್ಲಿ ಕಾನ್‌ಸ್ಟಾಂಟಿನೋಪಲ್ ನಗರವನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ ಪ್ರಭುತ್ವವೊಂದು, ಫಾರ್ಸಿಸ್ತಾನದ ಪ್ರಭುತ್ವವೊಂದು ಎರಡೇ ನಡೆಯುತ್ತಿದ್ದವು. ಆ ಇಬ್ಬರು ಪ್ರಭುಗಳೂ ರಾಜ್ಯಕ್ಕಲ್ಲದೆ ಭಿನ್ನ ಧರ್ಮಗಳಿಗಾಗಿಯೂ ಹೋರಾಡುತ್ತ ಏಷ್ಯಮೈನರ್ ಪ್ರದೇಶವನ್ನು ಕೊಳ್ಳೆ ಹೊಡೆಸುತ್ತಿದ್ದರು. ಅಲ್ಲಿದ್ದ ಪಟ್ಟಣಗಳು ಹಾಳಾದವು; ಭೂಮಿಗಳು ಪಾಳುಬಿದ್ದವು; ನೆಮ್ಮದಿಯೆಂಬುದು ಶೂನ್ಯವಾಯಿತು. ಈ ರೀತಿ ಹೆಣಗಾಡುತ್ತಿದ್ದ ಇಬ್ಬರು ಪ್ರಭುಗಳ ಬಳಿಗೂ ೬೨೮ ರಲ್ಲಿ ಮತ್ತೊಬ್ಬ ಪ್ರಭುವಿನ ಸಂದೇಶ ಬಂತು. 'ದೇವರೊಬ್ಬನೇ, ಮುಹಮ್ಮದ್ ಪೈಗಂಬರರು ಅದನ್ನು ಪ್ರಸಾರಗೊಳಿಸತಕ್ಕವರು' ಎಂಬ ಆ ಸಂದೇಶವನ್ನು ಇಬ್ಬರೂ ಅಲಕ್ಷ್ಯದಿಂದ ಕಂಡರು. ತಿರಸ್ಕಾರಾರ್ಹವೆಂದು ಕಂಡ ದೆಸೆಯಿಂದಲೇ ಆ ಪ್ರಭುಗಳಿಬ್ಬರೂ ಪರಾಜಿತರಾಗುವ ಸ್ಥಿತಿ ಬೇಗನೆ ಒದಗಿತು.

ಅಭ್ಯಾಸಗಳು

೧. ರೋಮಕ ಸಾಮ್ರಾಜ್ಯ ಎರಡು ವಿಭಾಗಗಳಾದುದೇಕೆ? ಆ ವಿಭಜನೆಯಿಂದ ನಡೆದ ಪರಿಣಾಮಗಳೇನು?

೨. ರೂಕ್ಷ ಜನಸಮೂಹಗಳ ದೆಸೆಯಿಂದ ಚೀನ ಮತ್ತು ಹಿಂದುಸ್ತಾನಗಳಲ್ಲಿ ಉಂಟಾದ ಪರಿಣಾಮಗಳಿಗೂ ಯೂರೋಪಿನಲ್ಲಿ ಸಂಭವಿಸಿದ ಪರಿಣಾಮಗಳಿಗೂ ಇದ್ದ ವ್ಯತ್ಯಾಸಗಳೇನು ತಿಳಿಸಿ.

೩. ಕಾಳಿದಾಸನ ವೃತ್ತಾಂತದಲ್ಲಿ ನಿಮಗೆ ದೊರಕಿದಷ್ಟನ್ನು ಸಂಗ್ರಹಿಸಿ. ಆತನು ಬರೆದ ಕಾವ್ಯಗಳಾವುವು? ಅವುಗಳಲ್ಲಿ ಅತಿ ಪ್ರಸಿದ್ಧವಾದುದಾವುದು?

೪. ನವಭಾರತವರ್ಷಗಳೆಂದರೇನು? ಉಪಭಾರತವರ್ಷಗಳಾಗಿದ್ದ ದೇಶಗಳು ಈ ಕಾಲದಲ್ಲಿ ಹೇಗಿವೆಯೆಂದು ಸೂಚಿಸಿ.

೫. ಪೈಗಂಬರ್ ಮುಹಮ್ಮದರ ಕಾಲದಲ್ಲಿ ಏಷ್ಯದ ಪಶ್ಚಿಮದಲ್ಲಿ ನಡೆಯುತ್ತಿದ್ದ ಪ್ರಭುತ್ವಗಳಾವುವು? ಅವುಗಳ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಿ.

೯ ನೇ ಅಧ್ಯಾಯ

ಪೈಗಂಬರರ ಧರ್ಮಸ್ಥಾಪನೆ

ಮುಖ್ಯಪ್ರಶ್ನೆ ೩೫ : ಮುಹಮ್ಮದ್ ಪೈಗಂಬರರ ಪ್ರಭಾವದ ಮೂಲವಾವುದು ?

ಕಾನ್‌ಸ್ಟಾಂಟಿನೋಪಲ್ಲಿನ ಮೂಡಣಸಾಮ್ರಾಜ್ಯವೂ ಫಾರ್ಸಿಸ್ತಾನ್ ಸಾಮ್ರಾಜ್ಯವೂ ಪರಸ್ಪರವಾಗಿ ಹೆಣಗುತ್ತ ಇಬ್ಬರ ನಡುವೆ ಸಂಪದ್ಯುಕ್ತವಾಗಿದ್ದ ಏಷ್ಯಮೈನರ್ ಪ್ರದೇಶವನ್ನು ಹಾಳುಮಾಡುತ್ತ ತಾವೂ ಕ್ಷಯಿಸುತ್ತಿದ್ದ ವೇಳೆಯಲ್ಲಿ ಸುತ್ತಮುತ್ತ ಹೊಸರಾಷ್ಟ್ರಗಳು ತಲೆದೋರುತ್ತಿದ್ದವು. ಕಡೆಗೆ ಆ ಎರಡು ಸಾಮ್ರಾಜ್ಯಗಳೂ ನಾಶವಾಗಿ ಹೋದುವು.

ಹೂಣರ ತಂಡಗಳು ಪಡುವಲಿಗೆ ಹೊರಟು ಪಡುವಣ ರೋಮಕ ಸಾಮ್ರಾಜ್ಯದ ನಾಶವನ್ನು ಪೂರ್ತಿಗೊಳಿಸಿದ್ದಲ್ಲದೆ ಫಾರ್ಸಿಸ್ತಾನ್ ಹಿಂದುಸ್ತಾನಗಳಲ್ಲಿ ಹಾವಳಿ ನಡೆಸಿದ್ದನ್ನೂ ಆಗಲೇ ತಿಳಿದೆವು. ಅದೇ ರೀತಿಯಲ್ಲಿಯೇ ಅರಬ್ಬಿ ಪಶುಪಾಲಕ ಸಮೂಹಗಳು ಸಂಚಾರಹೊರಟು ಮೂಡಲ ರೋಮಕ ಸಾಮ್ರಾಜ್ಯ ಫಾರ್ಸಿಸ್ತಾನಗಳನ್ನಲ್ಲದೆ ಮಧ್ಯ ಏಷ್ಯಪ್ರದೇಶವನ್ನೂ ಹಿಂದುಸ್ತಾನದ ಭಾಗಗಳನ್ನೂ ಆಕ್ರಮಿಸಿಕೊಂಡು ಹಿಂದಿನ ರಾಷ್ಟ್ರಗಳನ್ನು ಧ್ವಂಸಮಾಡಿದ ವೃತ್ತಾಂತವನ್ನು ಈಗ ತಿಳಿಯುವೆವು.

ಆದರೆ ಎರಡು ಸಮೂಹಗಳಲ್ಲಿ ದೊಡ್ಡದಾದ ಒಂದು ಭೇದ. ಮಂಗೋಲ ಮತ್ತು ಆರ್ಯರಾಶಿಗಳ ಪಶುಪಾಲಕರನ್ನು (ಹೂಣರು, ಗಥರು, ವಾಂಡಲರು) ಒಟ್ಟುಗೂಡಿಸಿದ್ದು ಒಂದೇ ಆಸೆ; ಲೂಟಿ ಹೊಡೆಯುವ ಆಸೆ. ಕೊಳ್ಳೆ ತೀರಿದ ಕೂಡಲೆ ಅವರು ಅಲ್ಲಲ್ಲಿಯೇ ನೆಲೆಸತಕ್ಕವರಾಗಿದ್ದರು. ಜಯಶಾಲಿಗಳಾದುದರಿಂದ ಸೋತವರ ರಾಷ್ಟ್ರಗಳನ್ನು ಆಕ್ರಮಿಸಿಕೊಂಡರು. ಆದರೆ ಸೋತ ಜನರ ಮತವನ್ನೂ ಆಚಾರಪದ್ಧತಿಗಳನ್ನೂ ಅವಲಂಬಿಸತಕ್ಕವರಾದರು. ಮಂಗೋಲರಾಶಿಗೆ ಸೇರಿದ ಕುಶೀಕುಲಸ್ಥರು ಹಿಂದುಸ್ತಾನದಲ್ಲಿ ಪ್ರವೇಶಿಸಿ ರಾಜ್ಯಕಟ್ಟಿದ ತರುವಾಯ ಬೌದ್ಧರಾದುದು ಈ ಪರಿಯಲ್ಲಿ. ಕನಿಷ್ಕನೆಂಬ ಕುಶೀಕುಲಸ್ಥನು ಚಕ್ರವರ್ತಿಯಾದ ಮೇಲೆ ಅಶೋಕನಂತೆ ಬೌದ್ಧನಾಗಿ ಯಶಸ್ವಿಯಾಗಲು ಯತ್ನಿಸಿದುದು ಒಂದು ದೃಷ್ಟಾಂತ. ಯೂರೋಪಿನಲ್ಲಿಯೂ ಅದೇ ಪ್ರಕಾರ ಗಥರೆಂಬ ರಾಶಿಯವರು ಕಾಲಕ್ರಮದಲ್ಲಿ ಕ್ರೈಸ್ತಮತಕ್ಕೆ ಸೇರಿಕೊಂಡು ರೋಮಕರ ಪದ್ಧತಿಗಳನ್ನು ಅನುಸರಿಸಿದರು.

ಅರಬ್ಬಿಯವರ ವೃತ್ತಾಂತವೇ ಬೇರೆತೆರ. ಅದಕ್ಕೆ ಕಾರಣ—ಪೈಗಂಬರ್ ಮುಹಮ್ಮದ್.

ಮುಹಮ್ಮದ್ ಹುಟ್ಟಿದುದು ಕ್ರಿ.ಶ. ೫೭೦ರಲ್ಲಿ. ಪ್ರಸಿದ್ಧ ಜಸ್ಟಿನಿಯನ್ ಚಕ್ರವರ್ತಿ ಸತ್ತ ಐದು ವರ್ಷಗಳ ತರುವಾಯ. ನಲವತ್ತನೆ ವಯಸ್ಸಿನವರೆಗೆ ಮುಹಮ್ಮದರು ಅಷ್ಟು ಪ್ರಸಿದ್ಧಿಯನ್ನು ಪಡೆದಿರಲಿಲ್ಲ. ತಾರುಣ್ಯದಲ್ಲಿ ಅವರು ವ್ಯಾಪಾರದಲ್ಲಿ ನಿರತರಾಗಿ ಅರಬ್ಬಿಸ್ತಾನದ ಎಲ್ಲ ಕಡೆಗಳಲ್ಲಿಯೂ ಸಂಚರಿಸಿದ್ದಲ್ಲದೆ ಸಿರಿಯದಲ್ಲಿಯೂ ಪ್ರಯಾಣಮಾಡಿ ಅಲ್ಲಿದ್ದ ಯೆಹುದಿಗಳನ್ನೂ ಕ್ರೈಸ್ತರನ್ನೂ ಕಂಡಿದ್ದರು. ಆ ಜನರೊಂದಿಗೆ ಧರ್ಮಸಂಬಂಧವಾದ ವಿಚಾರಗಳನ್ನು ಚರ್ಚಿಸಿದಾಗ ಭಗವಂತನ ವಿಷಯದಲ್ಲಿ ಮುಹಮ್ಮದರಿಗೆ ಗಾಢವಾದ ಆಲೋಚನೆ ಹುಟ್ಟಿತು. ಆಗ ತಮ್ಮ ಸ್ವದೇಶ ನಿವಾಸಿಗಳಾದ ಅರಬ್ಬಿಜನರಲ್ಲಿ ನಾನಾಬಗೆಯ ಮತಗಳು ಲೆಕ್ಕವಿಲ್ಲದಂತೆ ಹಬ್ಬಿ ಅನೈಕಮತ್ಯವನ್ನು ನೆಲೆಗೊಳಿಸಿದ್ದುದೇ ಅವರ ದೌರ್ಬಲ್ಯಕ್ಕೂ ದುರವಸ್ಥೆಗೂ ಮೂಲಕಾರಣವೆಂದು ಸ್ಪಷ್ಟವಾಯಿತು. **ಮಕ್ಕಾ** ಪಟ್ಟಣದ **ಕಾಬ** ಎಂಬ ಪವಿತ್ರಮಂದಿರದಲ್ಲಿ ಪೂಜೆ ಸಲ್ಲಿಸಲು ಅರಬ್ಬಿ ಜನರೆಲ್ಲರೂ ವರ್ಷಕ್ಕೊಮ್ಮೆ ನೆರೆದಾಗ್ಗೂ ಒಂದೊಂದು ಮತದವರೂ ಒಂದೊಂದು ಕುಲದೇವತೆಯನ್ನು ಪೂಜಿಸುತ್ತಿದ್ದರು.

ಧ್ಯಾನಾವಿಷ್ಟರಾಗಿದ್ದ ಮುಹಮ್ಮದರಿಗೆ ಭಗವಂತನೇ ಕಳುಹಿಸಿಕೊಟ್ಟ ದೇವದೂತನ ಪ್ರೇರಣೆಯಾದಂತೆ ನಂಬುಗೆ ಹುಟ್ಟಿತು. ಮೊದಲು ತಮ್ಮ ಪತ್ನಿಗೂ ಆ ತರುವಾಯ ಆಪ್ತಸ್ನೇಹಿತರುಹಲವರಿಗೂ ಮುಹಮ್ಮದರು ಸಂಕೇತವಾಗಿಯೇ ಬೋಧೆಮಾಡಿದರು. 'ಸರ್ವಜ್ಞನೂ ಸರ್ವಶಕ್ತನೂ ಅದೃಶ್ಯನೂ ಆದ ಜಗದೀಶ್ವರನು ಒಬ್ಬನೇ' ಎಂಬುದು ಆ ಬೋಧೆಯ ಮುಖ್ಯಾಂಶ. ಇಬ್ರಾಹೀಂ (Abraham), ಮೂಸಾ, ಕ್ರೈಸ್ಟ್ ಮತ್ತು ಮುಹಮ್ಮದ್ ಮುಂತಾದ ಪೈಗಂಬರರ ಮೂಲಕ ಜಗದೀಶ್ವರನು ತನ್ನ ಸಂಕಲ್ಪವನ್ನು ಮಾನವರಿಗೆ ತಿಳಿಸುವನು. ತಾವಿತ್ತ ಸಂದೇಶವನ್ನು ವಿಶ್ವಾಸದಿಂದೊಪ್ಪಿ ತಮ್ಮ ವಚನಗಳಲ್ಲಿ ವ್ಯಕ್ತವಾದ ಭಗವಂತನ ಸಂಕಲ್ಪಕ್ಕೆ ವಿಧೇಯರಾಗಿ ವರ್ತಿಸತಕ್ಕವರೆಲ್ಲರೂ ಮರಣಾನಂತರ ಸ್ವರ್ಗವಾಸಿಗಳಾಗಿ ಶಾಶ್ವತಸುಖವನ್ನು ಪಡೆಯುವರೆಂದೂ ವಿಶ್ವಾಸಹೀನರಾದ ಇತರರು ನರಕಕ್ಕೆ ಬೀಳುವರೆಂದೂ ಮುಹಮ್ಮದರ ಉಕ್ತಿ. ಮುಹಮ್ಮದರ ವಚನಗಳಲ್ಲಿ ನಿತ್ಯಜೀವನಸಂಬಂಧವಾದ ಸುನೀತಿ ಯಾವುದೆಂಬ ವಿವರವೂ ಭಗವಂತನ ಪ್ರೇರಣೆಯಿಂದಲೇ ಪ್ರಾಪ್ತವಾಯಿತು. ಆ ವಚನಗಳನ್ನು ಒಳಗೊಂಡ ಗ್ರಂಥವೇ ಪವಿತ್ರವೆನಿಸಿದ **ಕೊರಾನ್**. ಮುಸಲ್ಮಾನರಲ್ಲಿ ಒಬ್ಬರು ಮತ್ತೊಬ್ಬರನ್ನು ಸೋದರರಂತೆ

ಕಾಣಬೇಕೆಂಬುದೂ ಸಹಧರ್ಮಿಗಳಾದವರಲ್ಲಿ ಬಡವರು ಭಾಗ್ಯವಂತರೆಂಬ ಭೇದವನ್ನೆಣಿಸದೆ ದಯಾದಾಕ್ಷಿಣ್ಯಗಳಿಂದ ವರ್ತಿಸಬೇಕೆಂಬುದೂ ಆ ಪವಿತ್ರ ನಿಯಮಗಳಲ್ಲೊಂದು. ಈ ನಿಯಮದ ಪ್ರಭಾವವೇ ಇಸ್ಲಾಂಮತದ ಬಲ. ನಿರ್ವಂಚನೆಯಿಂದ ಮುಸಲ್ಮಾನ್ ಮತವನ್ನು ಪಾಲಿಸಿದವರು ಆ ನಿಯಮವನ್ನು ಯಥಾರ್ಥವಾಗಿ ಆಚರಿಸುತ್ತಿದ್ದುದನ್ನು ಕಂಡಾಗ ಕಷ್ಟನಷ್ಟಗಳಲ್ಲಿ ತೊಳಲಿ ಭೂಮಿಗೆ ಬಿದ್ದಂತಿದ್ದ ಲಕ್ಷಾಂತರ ಜನರು ಆಗಲೂ ಆ ತರುವಾಯವೂ ಮೆಚ್ಚಿ ಇಸ್ಲಾಂ ಮತವನ್ನೊಪ್ಪಿಕೊಂಡರು. ದುಷ್ಟರಾಜರಿಂದಲೋ ದುರಾಶಾಗ್ರಸ್ತ ಪುರೋಹಿತರಿಂದಲೋ ಹಿಂಸೆಪಟ್ಟು ತೆವಳುತ್ತಲಿದ್ದವರು ಈ ನೂತನ ಮತವನ್ನು ಸ್ವೀಕರಿಸಿ ದುರವಸ್ಥೆಯಿಂದ ಪಾರಾದರು. ಹಿಂದೆ ಕನಸಿನಲ್ಲಿಯೂ ಕಾಣಲಾಗದಿದ್ದ ಆತ್ಮಗೌರವವನ್ನು ಆಚರಣೆಗೆ ತಂದುಕೊಳ್ಳಲು ಅವರಿಗೆ ಇಸ್ಲಾಂ ಮತವು ದಾರಿತೋರಿತು.

ಮುಖ್ಯಪ್ರಶ್ನೆ ೩೬: ಪೈಗಂಬರರೂ ಅನುಚರರೂ ತಮ್ಮ ಪ್ರಾಬಲ್ಯಪ್ರಭುತ್ವಗಳನ್ನು ಯಾವ ಕಾರಣದಿಂದ ವೇಗವಾಗಿ ವಿಸ್ತರಿಸಬಲ್ಲವರಾದರು?

ಮಕ್ಕಾ ನಿವಾಸಿಗಳಾಗಿದ್ದ ಸ್ವಜನರೇ ಮುಹಮ್ಮದರನ್ನು ಮೊದಲು ಪ್ರಬಲವಾಗಿ ಪ್ರತಿಭಟಿಸಿದರು. ಪೈಗಂಬರರ ಬೋಧೆಯು ವ್ಯಾಪ್ತಿಪಡೆದರೆ ಮಕ್ಕಾ ಯಾತ್ರಿಕರಿಂದ ತಮಗಾಗುತ್ತಿದ್ದ ಲಾಭವೇ ಮೊದಲು ನಷ್ಟವಾದೀತೆಂದು ಅವರಿಗೆ ಸ್ಪಷ್ಟವಾಯಿತು. ಆದರೆ ಮದೀನ ಎಂಬ ಮತ್ತೊಂದು ಪಟ್ಟಣವಿತ್ತು. ಮಕ್ಕಾ ಪಟ್ಟಣದಲ್ಲಿ ಪ್ರಾಣಾಪಾಯ ತೋರಿದಾಗ ಮುಹಮ್ಮದರು ಮದೀನ ಪಟ್ಟಣಕ್ಕೆ ಹೊರಟರು. ಅದನ್ನೇ '**ಹೆಜಿರಾ**' ಎಂದು ಕರೆಯುವುದು. ಕ್ರಿ.ಶ. ೬೨೨ ರಲ್ಲಿ ನಡೆಯಿತು ಹೆಜಿರಾ. ಅಲ್ಲಿಂದಲೇ ಮುಸಲ್ಮಾನರು ಎಣಿಸುವ ಶಕೆಯ ಪ್ರಾರಂಭ. ಇನ್ನುಳಿದ ಹತ್ತುವರ್ಷಕಾಲದಲ್ಲಿ ಪೈಗಂಬರರು ಭದ್ರಗೊಂಡರು. ಅವರ ಅವಸಾನಕಾಲಕ್ಕೆ ಸಮಸ್ತ ಅರಬ್ಬಿಸ್ತಾನದಲ್ಲಿ ಇಸ್ಲಾಂ ನೆಲೆಸುವಂತಾಯಿತು.

ಅರ್ಧಪಾಲು ಮರುಭೂಮಿಯಿಂದ ಕೂಡಿದ ದೇಶ ಅರಬ್ಬಿಸ್ತಾನ್. ಅಲ್ಲಲ್ಲಿ ಚೆದರಿ ಸಣ್ಣಸಣ್ಣ ಗುಂಪುಗಳಾಗಿ ಪಶುಪಾಲನೆಯಿಂದ ಜೀವಿಸುತ್ತ ಮೂಢಾಚಾರಗಳಲ್ಲಿ ಮನಸೋತ ಜನ. ಅಂತಹ ಜನರಲ್ಲಿ ಧರ್ಮಶ್ರದ್ಧೆಯನ್ನು ತುಂಬಿಸಿ ಅವರನ್ನು ಒಟ್ಟುಗೂಡಿಸಿದ ಸಂಗತಿ ಆಶ್ಚರ್ಯಕರವಾದುದು. ಮುಂದೆ ಸಂಭವಿಸಿದ್ದು ಮತ್ತೂ ಆಶ್ಚರ್ಯಕರ. ಪೈಗಂಬರರ ತರುವಾಯ ಖಲೀಫರೆನಿಸಿ ಒಡೆತನ ವಹಿಸಿದ **ಅಬೂಬೆಕರ್** ಮತ್ತು ಹಿರೇ **ಉಮರ್**



ಇಸ್ಲಾಮಿಾ ದಿಗ್ವಿಜಯ
೬೩೦-೮೦೦

ಎಂಬುವವರನ್ನು ಮುಂದಿಟ್ಟುಕೊಂಡು ಹೊರಟ ಮುಸಲ್ಮಾನ ಅರಬ್ಬಿಗಳು ಬೈಸ್ಲಾಂಟಿಯಂ (Byzantium) ಅಥವಾ ಕಾನ್‌ಸ್ಟಾಂಟಿನೋಪಲಿನಲ್ಲಿ ಆಳುತ್ತಿದ್ದ ಮೂಡಣಚಕ್ರವರ್ತಿಯ ಸೈನ್ಯಗಳನ್ನು ಯುದ್ಧದಲ್ಲಿ ಸೋಲಿಸಿದರು. ಫಾರ್ಸಿಸ್ತಾನದ ಶಾಇನ್‌ಶಾಹನ ಬಲವನ್ನು ಮುರಿದರು. ಪೈಗಂಬರರು ತೀರಿಕೊಂಡ ೨೫ ವರ್ಷಗಳೊಳಗಾಗಿ ಮೂರನೆ ಖಲೀಫನ ಆಳಿಕೆಗೆ ಸೇರಿದ್ದುದು ಅಖಿಲ ಅರಬ್ಬಿಸ್ತಾನ್ ಜೊತೆಗೆ ಈಜಿಪ್ಟ್, ಸಿರಿಯ, ಮೆಸೊಪೊಟೇಮಿಯ, ಆರ್ಮಿನಿಯ ಮತ್ತು ಫಾರ್ಸಿಸ್ತಾನ್ ಎಂಬ ದೇಶಗಳ ವಿಸ್ತಾರ ಭೂಭಾಗ. ಇನ್ನು ನೂರು ವರ್ಷ ಕಳೆಯುವ ವೇಳೆಗೆ ಆಫ್ರಿಕದ ಉತ್ತರ ತೀರವೆಲ್ಲವೂ ವಶವಾಗಿ ಸ್ಪೇಯ್ನ್ ದೇಶದಲ್ಲಿ ಮುಸಲ್ಮಾನರು ಜಯ ಪಡೆದರು; ಇತ್ತ ಆಕ್ಸಸ್ ನದಿ ದಾಟಿ ತುರ್ಕಸ್ತಾನದಲ್ಲಿಯೂ ಸಿಂಧುನದಿ ದಾಟಿ ಹಿಂದುಸ್ತಾನದಲ್ಲಿಯೂ ಪ್ರವೇಶಿಸಿದರು.

ಇಸ್ಲಾಂ ಮತವ್ಯಾಪ್ತಿ ಇಷ್ಟು ಪ್ರಚಂಡವೇಗದಿಂದ ನಡೆಯಲು ಮೂಲ ಬಲವಾವುದು? ಬಾರಿಬಾರಿಗೂ ಆಕ್ರಾಂತರಾದ ಬಳಿಕ ರಾಜನ್ಯರ ಸ್ವಾರ್ಥದ ಯುದ್ಧಗಳಿಗೂ ದುಂದುಗಾರಿಕೆಗೂ ಅಟ್ಟಹಾಸವೈಭವಗಳಿಗೂ ಅರ್ಚಕರ ಆಡಂಬರಕ್ಕೂ ಹೊರಲಾರದಷ್ಟು ತೆರಿಗೆಯನ್ನು ತೆತ್ತು ತೆತ್ತು ದಳಿತರಾಗಿದ್ದ ಜನರಿಗೆ ಆ ಮತವು ಆಪನ್ನಿವಾರಕವಾಗಿ ಪರಿಣಮಿಸಿದ ಅಂಶವನ್ನು ಆಗಲೇ ಕಂಡೆವು. ಅದೇ ಮುಖ್ಯಬಲ. ತಮ್ಮ ಪ್ರಭುಗಳು ನಡೆಸಿದ ಯುದ್ಧಗಳಲ್ಲಿ ಪ್ರಾಣಾಪಾಯವನ್ನೂ ಶಾಂತಿಕಾಲದಲ್ಲಿ ತೆರಿಗೆ ಪೊಗದಿಗಳ ಹೊರೆಯನ್ನೂ ಅನುಭವಿಸಿದ್ದ ಜನರಿಗೆ ಇಸ್ಲಾಂ ಮತವು ಆಕರ್ಷಕವಾಯಿತು. ಮುಸಲ್ಮಾನರಾದ ಪಕ್ಷದಲ್ಲಿ ಎಷ್ಟೋ ಅನುಕೂಲವನ್ನು ಪಡೆಯಬಹುದಾಗಿ ಕಂಡಿತು. 'ಪ್ರತಿಯೊಬ್ಬ ಮುಸಲ್ಮಾನನೂ ಇತರ ಮುಸಲ್ಮಾನರಿಗೆ ಸೋದರನೆಂದು ತಿಳಿಯಿರಿ. ನೀವೆಲ್ಲರೂ ಸರಿಸಮಾನರಾದವರು' ಎಂಬುದು ಕೊರಾನ್ ಗ್ರಂಥದ ಘೋಷಣೆ. ಎಷ್ಟುಕಾಲ ಮುಸಲ್ಮಾನರು ಈ ನಿಯಮವನ್ನು ಪಾಲಿಸಿದರೋ ಅಷ್ಟುಕಾಲವೂ ಇಸ್ಲಾಂ ಮತವೆಂಬುದು ಹೊಸದಾಗಿ ಸೇರಿಕೊಂಡವರಿಗೆ ನಿಕ್ಷೇಪದಂತಾಯಿತು. ಆ ಕಾಲದಲ್ಲಿ ಮತ್ತಾವ ಮತವೂ ಅಷ್ಟು ಪ್ರಯೋಜನಕಾರಿಯಾಗಿರಲಿಲ್ಲ. ದೇವರು ಎಲ್ಲರಿಗೂ ತಂದೆಯೆಂದೂ ಸಮಸ್ತಮಾನವರೂ ಸೋದರರೆಂದೂ ಇಸ್ಲಾಂಮತದಂತೆಯೇ ಪ್ರಾರಂಭವಾದ ಕ್ರೈಸ್ತಮತವು ಆಚಾರಸಂಪ್ರದಾಯಗಳನ್ನು ಮಹದರಣ್ಯದಂತೆ ಬೆಳೆಸಿಕೊಂಡಿತ್ತು. ಅದಕ್ಕೂ ಹಿಂದೆ ಹುಟ್ಟಿದ್ದ ಹಿಂದು ಮತ್ತು ಬೌದ್ಧಮತಗಳೂ

ಹಾಗೆಯೇ. ಯೆಹುದಿಮತವಾದರೋ ಯೆಹುದಿಗಳನ್ನು ಮಾತ್ರ ಉದ್ಧಾರ ಮಾಡತಕ್ಕದಾಗಿತ್ತು ; ಅನ್ಯರನ್ನು ಗಣಿಸಲೇ ಇಲ್ಲ.

ಮುಖ್ಯಪ್ರಶ್ನೆ ೩೭ : ಇನ್ನೂ ಮುಂದಕ್ಕೆ 'ಇಸ್ಲಾಂ' ಹರಡಿಕೊಳ್ಳಲು ಅಡ್ಡಿಯಾದುದೇನು? ಆ ಮತ ಹರಡಿದ ದೇಶಗಳಲ್ಲಿ ಅದರಿಂದಾದ ಮೇಲು ಯಾವುದು?

ಮರುಭೂಮಿಗಳ ನಿವಾಸಿಗಳಿಗೆ ಸಹಜವಾದ ಕಷ್ಟಸಹಿಷ್ಣುತೆಯನ್ನೂ ಸಾಹಸವನ್ನೂ ಬೆಳೆಸಿ ಇಸ್ಲಾಂಮತಪ್ರಮುಖರು ಸರಳಜೀವನವನ್ನು ಕಾಪಾಡಿಕೊಂಡಿದ್ದ ಕಾಲದಲ್ಲಿ ಅವರಿಗೆ ಸೋಲೆಂಬುದೇ ಇರಲಿಲ್ಲ. ಆದರೆ ಚಿರಕಾಲ ಹಾಗೆ ನಡೆಯದಾಯಿತು. ತಮ್ಮಿಂದ ಪರಾಜಿತರಾದ ರಾಜನ್ಯರ ಭೋಗವೈಭವಗಳನ್ನು ಖಲೀಫರೂ ಕಲಿತರು. ಪಟ್ಟಕ್ಕಾಗಿ ಜಗಳಗಳೂ ಹುಟ್ಟಿಕೊಂಡು ಬಲವಾದುವು! ನಿಯಮನಿಷ್ಠೆಗಳ ವಿಚಾರದಲ್ಲಿಯೂ ಕಕ್ಷಿ ಪ್ರತಿಕಕ್ಷಿಗಳು ತೋರಿ ಹೆಣಗಾಡಿದವು. ಹೀಗಿದ್ದುದರಿಂದ ಬೈಸಾಂಟೈನ್ (Byzantine) ಸಾಮ್ರಾಜ್ಯದ ಅತಿದುರ್ಬಲಪ್ರಭುತ್ವದವರು ಇಸ್ಲಾಂ ವ್ಯಾಪ್ತಿಯನ್ನು ಏಷ್ಯಮೈನರ್ ಪ್ರದೇಶದ ಅಂಚಿನಲ್ಲಿಯೇ ಶತಮಾನಗಳ ಕಾಲ ತಡೆಯಬಲ್ಲವರಾದರು. ವಾಸ್ತವವಾಗಿ ಯೂರೋಪಿನಲ್ಲಿ ಇಸ್ಲಾಂ ಮೊದಲು ಪ್ರವೇಶಿಸಿದುದು ಸ್ಪೆಯ್ನ್ ಮೂಲಕ. ಸ್ಪೆಯ್ನಿನಲ್ಲಿ ಮುಸಲ್ಮಾನರ ರಾಜ್ಯವು ಬೆಳೆಯಿತು. ಮುಸಲ್ಮಾನರು ಅಲ್ಲಿಂದ ಮುಂದಕ್ಕೂ ಪಿರನೀಸ್ ಶ್ರೇಣಿಯನ್ನು ದಾಟಿ ನುಗ್ಗಿದರು. ಆದರೆ ಫ್ರಾನ್ಸಿನಲ್ಲಿ ದೊರೆತನಮಾಡುತ್ತಿದ್ದ **ಚಾರ್ಲ್ಸ್ ಮಾರ್ಟೆಲ್** (Charles Martel) ಎಂಬಾತನು **ಟೂರ್ಸ್** (Tours) ಬಳಿ ಮುಸಲ್ಮಾನರೊಂದಿಗೆ ಕಾದಾಡಿದನು. ಪೈಗಂಬರರ ಅವಸಾನವಾಗಿ ಒಂದುನೂರು ವರ್ಷ ಕಳೆದಿತ್ತು. ಕ್ರಿ.ಶ. ೭೩೨ರಲ್ಲಿ ನಡೆದ ಆ ಕದನದಲ್ಲಿ ಮುಸಲ್ಮಾನರು ಪೂರ್ತಿಯಾಗಿ ಸೋತರು.

ಆ ಸೋಲಿನಿಂದ ಇಸ್ಲಾಂ ಮತವ್ಯಾಪ್ತಿಗೆ ಅಡ್ಡಿಯಾಯಿತು. ಆ ಕಾಲದಲ್ಲಿ ತಿಳಿದಿದ್ದಷ್ಟು ಜಗತ್ತೆಲ್ಲವನ್ನೂ ಇಸ್ಲಾಂ ವ್ಯಾಪಿಸಿಕೊಳ್ಳುವ ಸಂಭವವು ದೂರವಾಯಿತು. ಆದರೆ ಆ ವೇಳೆಗೆ ಅಟ್ಲಾಂಟಿಕ್ ತೀರದಿಂದ ಹಿಡಿದು ಗಾಂಧಾರದವರೆಗಿದ್ದ ಭೂಭಾಗದ ನಿವಾಸಿಗಳು ಧಾರ್ಮಿಕವಾದ ಐಕಮತ್ಯವನ್ನು ಪಡೆದಿದ್ದುದು ಸಾಮಾನ್ಯವಲ್ಲ. ಗ್ರೀಕರ ಸಭ್ಯತೆ ಸಂಸ್ಕೃತಿಗಳು ರೂಢಿಗೊಂಡಿದ್ದ ದೇಶಗಳು ಸ್ವಾಧೀನವಾದಾಗ ಅರಬ್ಬೀಜನರಿಗೆ ಗ್ರೀಕರ ಭಾಷೆಯಲ್ಲಿ ಬರೆದಿಟ್ಟಿದ್ದ ಶಾಸ್ತ್ರಗಳು ದೊರೆತವು. ಹಿಂದುಸ್ತಾನದ ಸಂಪರ್ಕದಿಂದಲೂ ಅದೇ

ಬಗೆಯ ಲಾಭವಾಯಿತು. ತತ್ತ್ವ, ರಸಾಯನ, ಜ್ಯೋತಿಷ, ಭೂವಿವರಣೆ, ವೈದ್ಯ, ಗಣಿತಶಾಸ್ತ್ರಗಳಲ್ಲಿ ಗ್ರೀಕರ ಮತ್ತು ಹಿಂದುಗಳ ಸಾಧನೆಯನ್ನು ಅರಬ್ಬಿಜನರು ತಿಳಿದರು. ಜ್ಞಾನಪ್ರಚಾರಕ್ಕೆ ಅತಿಮುಖ್ಯವಾದ ಕಾಗದದ ತಯಾರಿಯನ್ನು ಚೀನೀ ಜನರಿಂದ ಕಲಿತರು. ಧರ್ಮಬೋಧೆಗಾಗಿ ಮೊದ ಮೊದಲು ಮಸೀದಿಗಳ ಭಾಗದಂತೆ ನಡೆಯುತ್ತಿದ್ದ ಶಾಲೆಗಳು ಕಾಲಕ್ರಮದಲ್ಲಿ ವಿಸ್ತಾರಗೊಂಡವು. ಬಗದಾದ್, ಕಯ್ರೋ ಮತ್ತು ಕಾರ್ಡೋಬ (ಸ್ಪೈನ್ನಲ್ಲಿ) ಗಳಲ್ಲಿ ವಿಶ್ವವಿದ್ಯಾಲಯಗಳು ಅಭಿವೃದ್ಧಿ ಪಡೆದುವು. ಆ ವಿದ್ಯಾಕ್ಷೇತ್ರಗಳಲ್ಲಿದ್ದ ಮುಸಲ್ಮಾನ್ ವಿದ್ವಾಂಸರಿಂದ ಗಣಿತಶಾಸ್ತ್ರದ[1] ಭಾಗಗಳು ವಿಸ್ತಾರಗೊಂಡುವು. ರಸಾಯನಶಾಸ್ತ್ರದಲ್ಲಿಯೂ ವೈದ್ಯದಲ್ಲಿಯೂ ಹೊಸ ಹೊಸ ಸಾಧನೆಗಳು ನಡೆದವು. ಶಸ್ತ್ರಚಿಕಿತ್ಸೆಯಲ್ಲಿಯೂ ನೈಪುಣ್ಯ ಬೆಳೆಯಿತು. ಶಸ್ತ್ರಪ್ರಯೋಗ ವೇಳೆಯಲ್ಲಿ ನೋವು ತಿಳಿಯದಂತೆ ರೋಗಿಯ ಎಚ್ಚರವನ್ನು ಮರೆಯಿಸುವ ಉಪಾಯಗಳನ್ನು ಅಲ್ಲಿ ಸಾಧಿಸಿದ್ದರು. ಈಗಿನ ಕಾಲದಲ್ಲಿಯೂ ಪ್ರಯಾಸ ದಿಂದಲೇ ಸಾಧ್ಯವೆಂಬ ಶಸ್ತ್ರಪ್ರಯೋಗಗಳನ್ನು ನಡೆಸುತ್ತಿದ್ದರು.

ಅಭ್ಯಾಸಗಳು

೧. ಹೂಣ, ಫರಂಕಿ (Frank) ಮತ್ತು ಗಥಸಮೂಹಗಳವರು ನಡೆಸಿದ ಆಕ್ರಮಣಗಳಿಗೂ ಅರಬ್ಬಿಜನರು ನಡೆಸಿದ ಆಕ್ರಮಣಗಳಿಗೂ ಮುಖ್ಯಭೇದಗಳೇನು ?

೨. ಮುಸಲ್ಮಾನರಿಂದ ಆಕ್ರಾಂತವಾದ ದೇಶಗಳ ನಿವಾಸಿಗಳ ಮನಸ್ಸನ್ನು ಸೆಳೆದ 'ಇಸ್ಲಾಂ' ಮತದ ಅಂಶಗಳಾವುವು ?

೩. ಮುಸಲ್ಮಾನರ ದಂಡಯಾತ್ರೆಗಳಿಂದ ಲೋಕಕ್ಕೆ ಆದ ಪ್ರಯೋಜನಗಳಾವುವು ? ಅವುಗಳಿಂದ ಏನಾದರೂ ಅನಾನುಕೂಲಗಳು ತೋರಿದುವೇ ?

೪. ಯಾವ ಮತದ ಚರಿತ್ರೆಯನ್ನು ನಾವು ಪರಿಶೀಲಿಸಿದಾಗ್ಗೂ ಸ್ಥಾಪಕನ ತರುವಾಯ ನೂರುವರ್ಷ ಕಳೆಯುವಷ್ಟರಲ್ಲಿಯೇ ಅದರಿಂದ ನಡೆದ ಉಪಕಾರಗಳು ಕಡಿಮೆಯಾಗುವುವು. ಇದಕ್ಕೆ ಉದಾಹರಣೆಗಳನ್ನು ಕೊಟ್ಟು ಕಾರಣಗಳೇನೆಂದು ವಿವರಿಸಿ.

---

[1] ಆಲ್ಜಿಬ್ರ, ಆಲ್ಕಿಮಿಯ, ಸೀರೊ ಮುಂತಾದ ಶಬ್ದಗಳು ಅರಬ್ಬಿ. ಆ ಮಾತುಗಳ ಚರಿತ್ರೆಯೇ ಮೋಹಕರ.

೧೦ನೇ ಅಧ್ಯಾಯ

ಇಸ್ಲಾಮಿೀ ವ್ಯಾಪ್ತಿಕ್ರಸೇಡುಗಳು

ಮುಖ್ಯಪ್ರಶ್ನೆ ೩೮ : ಇಸ್ಲಾಂ ಮತವ್ಯಾಪ್ತಿಯಲ್ಲಿ ಮುಖ್ಯರಾಜಕೀಯ ಸಂಗತಿಗಳಾವುವು ?

ಪೈಗಂಬರ್ ಮುಹಮ್ಮದರು ತಮ್ಮ ಹೊಸ ಮತವನ್ನು ಪ್ರಚಾರಮಾಡು ತ್ತಿದ್ದಾಗ ಫಾರ್ಸಿಸ್ತಾನದಲ್ಲಿ **ಇಮ್ಮಡಿ ಖುಸ್ರು** ಎಂಬ ಶಾಇನ್‌ಶಾಹ ಆಳು ತ್ತಿದ್ದನು. ಆತನಿಗೂ ಕಾನ್‌ಸ್ಟಾಂಟಿನೋಪಲಿನಲ್ಲಿ ಆಳುತ್ತಿದ್ದ **ಹಿರಾಕ್ಲಿಯಸ್** (Heraclius) ಎಂಬ ಸಮ್ರಾಟನಿಗೂ ಹಣಾಹಣಿ ಜಗಳ. ಫಾರ್ಸಿ ಪ್ರಭುವು ಒಂದುವೇಳೆ ಜೆರುಸಲೆಂ ಪಟ್ಟಣವನ್ನು ಹಿಡಿದು ಕಾನ್‌ಸ್ಟಾಂಟಿನೋಪಲ್ ನಗರಕ್ಕೂ ಮುತ್ತಿಗೆಯಿಟ್ಟನು. ಇಬ್ಬರ ಬಳಿಗೂ ಪೈಗಂಬರರ ಸಂದೇಶ ಬಂದು ತಿರಸ್ಕೃತವಾಯಿತು. ಅದರ ಪರಿಣಾಮವಾಗಿ ಅರಬ್ಬಿಯವರು ಅತ್ಯು ತ್ಸಾಹದಿಂದ ಸಿರಿಯವನ್ನು ಮುತ್ತಿ ದಮಾಸ್ಕಸ್ ನಗರವನ್ನು ಹಿಡಿದರು. **ಅಬೂಬೆಕರ್, ಉಮರ್** ಮತ್ತು **ಉಸ್ಮಾನ**ರೆಂಬ ಖಲೀಫರು ಅದನ್ನೇ ರಾಜ ಧಾನಿಯನ್ನಾಗಿ ಮಾಡಿಕೊಂಡರು. ಆ ತರುವಾಯ ಅರಬ್ಬಿಜನರು ಇರಾಕ್ ಪ್ರದೇಶವನ್ನು ಗೆದ್ದರು. **ಬಗದಾದ್‌ನಗರ**ವನ್ನು ಫಾರ್ಸಿ ಪ್ರಭುವಿನಿಂದ ಹಿಡಿದು ಅಲ್ಲಿಯೇ ರಾಜಧಾನಿಯನ್ನು ಸ್ಥಾಪಿಸಿದರು. ಅಲ್ಲಿ ವಿಖ್ಯಾತಿಯಿಂದ ಆಳಿದ ವಂಶಕ್ಕೆ **ಅಬ್ಬಾಸೀ** (Abbasid) ಸಂತತಿಯೆಂದು ಹೆಸರು.

ಅಬ್ಬಾಸೀ ಖಲೀಫರ ಆಳಿಕೆ ನೆಲೆಗೊಳ್ಳುವುದಕ್ಕೆ ಮೊದಲು ಮುಸಲ್ಮಾನರಲ್ಲಿ ಎರಡು ಪಂಗಡಗಳು ಏರ್ಪಟ್ಟು ಐಕ್ಯತೆಗೆ ಲೋಪವನ್ನು ತಂದುವು. ಉಸ್ಮಾನ್ ತರುವಾಯ ಆಲಿ ಎಂಬಾತನ ಪಕ್ಷದವರಿಗೂ ಇತರರಿಗೂ ಜಗಳ ಗಳೂ ಯುದ್ಧಗಳೂ ಆದುವು. ಆ ಕಾಲದಲ್ಲಿ ಹುಟ್ಟಿದ ಭೇದವೇ ಇಂದಿಗೂ ಮುಸಲ್ಮಾನರಲ್ಲಿ ನಡೆದುಬಂದಿರುವುದು. ಆಲಿ ಪಕ್ಷದವರಿಗೆ '**ಷಿಯ**'ಗಳೆಂದು ಹೆಸರು ; ಪ್ರತಿಪಕ್ಷದವರು '**ಸುನ್ನಿ**'ಗಳು. ಇವರ ಹಗೆತನವು ಪೂರ್ತಿಯಾಗಿ ಶಮನವಾಗಲೇ ಇಲ್ಲ. ಆದರೆ ಅಂತಃಕಲಹವಿದ್ದಾಗ್ಯೂ ತಮ್ಮ ಮತದಲ್ಲಿ ಭಕ್ತಿ ಯಾಗಲಿ ಅದನ್ನು ಪ್ರಚಾರಗೊಳಿಸುವ ಉತ್ಸಾಹವಾಗಲಿ ಕುಗ್ಗಲಿಲ್ಲ. ಫಾರ್ಸಿ ಸ್ತಾನವೆಂಬುದು ವಶವಾದಂತೆಯೇ ಈಜಿಪ್ಟ್ ವಶವಾಯಿತು. ಅಲ್ಲಿಂದ ಮುಂದಕ್ಕೆ ಆಫ್ರಿಕದ ತೀರಪ್ರದೇಶವನ್ನು ಗೆದ್ದ ಮುಸಲ್ಮಾನರು ಮೊರಾಕೊ

ಪ್ರದೇಶದಿಂದ ಸ್ಪೆಯ್ನ್ ದೇಶದೊಳಕ್ಕೆ ನುಗ್ಗಿದರು. ಜಿಬ್ರಾಲ್ಟರ್ (ಜಬ್ಲುತ್ ತರೀಕ್) ಎಂಬ ಹೆಸರು ಬಂದುದು ಆ ಕಾಲದಲ್ಲಿ. **ತರೀಕ್** (Tarik) ಎಂಬ ಶೂರನೇ ಆ ಸ್ಥಳವನ್ನು ಹಿಡಿದವನು. ಸ್ಪೆಯ್ನನ್ನು ವಶಪಡಿಸಿಕೊಂಡ ತರುವಾಯ ಫರಂಕಿಜನರ ನೆಲೆಯಾಗಿದ್ದ ಫರಂಕಿಸ್ಥಾನ ಅಥವಾ ಫ್ರಾನ್ಸ್ ದೇಶದಲ್ಲಿ ಮುಸಲ್ಮಾನರು ನುಗ್ಗಿದ ಅಂಶವನ್ನು ಕಂಡೆವು. ಟೂರ್ಸ್ ಕದನದಲ್ಲಿ ಮುಸಲ್ಮಾನರು ಗೆದ್ದಿದ್ದ ಪಕ್ಷದಲ್ಲಿ ಯೂರೋಪಿನ ಮಧ್ಯ ಮತ್ತು ಉತ್ತರ ಭಾಗಗಳಲ್ಲಿಯೂ ಇಸ್ಲಾಂಮತವು ಹರಡಿಕೊಳ್ಳಬಹುದಾಗಿತ್ತು.

ಕ್ರಿ. ಶ. ೭೬೩ರಿಂದ ೧೦೫೫ರವರೆಗೆ ಬಗದಾದ್ ಪಟ್ಟಣದಲ್ಲಿ ಅಬ್ಬಾಸೀ ಖಲೀಫರು ಕೀರ್ತಿಯಿಂದ ಆಳಿದರು. ಅವರಲ್ಲೆಲ್ಲ ಅತಿ ಪ್ರಸಿದ್ಧನಾದಾತನು **ಹಾರೂನ್ ಅಲ್‌ರಷೀದ್.** ಆತನ ಹೆಸರನ್ನು ಅರಬ್ಬಿ ರಾತ್ರಿಗಳ ಕಥೆಗಳಲ್ಲಿ (*Arabian Nights' Entertainments*) ಅಥವಾ ಯವನಯಾಮಿನೀ ವಿನೋದಗಳೆಂಬ ಕಥೆಗಳಲ್ಲಿ ಓದಿದವರೆಲ್ಲರೂ ಕಾಣಬಲ್ಲರು. **ಆತನ ಆಸ್ಥಾನವು ಪ್ರಸಿದ್ಧ.** ಯೂರೋಪಿನಲ್ಲಿ ಚಕ್ರವರ್ತಿಯೆನಿಸಿದ್ದ **ಚಾರ್ಲಮೇನ್** (Charlemagne) ಎಂಬಾತನೊಂದಿಗೆ ರಾಯಭಾರವನ್ನು ನಡೆಸಿ ಇತರ ರಾಜರೊಂದಿಗೆ ಸ್ನೇಹಸಂಧಾನಗಳನ್ನು ನೆಲೆಗೊಳಿಸಲು ಯತ್ನಿಸಿದ ಆತನು ಶಾಸ್ತ್ರಾಭ್ಯಾಸಕ್ಕೂ ವಿದ್ಯಾಪ್ರಚಾರಕ್ಕೂ ಪ್ರೋತ್ಸಾಹಕೊಟ್ಟನು. ಹಿಂದುಸ್ಥಾನದ ಪಂಡಿತರು ಆತನ ಆಸ್ಥಾನದಲ್ಲಿದ್ದುಕೊಂಡು ಗಣಿತ, ವೈದ್ಯ, ರಸಾಯನ ಶಾಸ್ತ್ರಗಳನ್ನು ಅರಬ್ಬಿಗೆ ಪರಿವರ್ತಿಸುವುದರಲ್ಲಿ ಸಹಾಯಕರಾದರು. ಆತನ ಕಾಲವನ್ನೇ ಅರಬ್ಬಿಮುಸಲ್ಮಾನರ ಚರಿತ್ರೆಯಲ್ಲಿ ಪರಮೋನ್ನತಿಯ ಕಾಲವೆಂದು ಭಾವಿಸುವರು. ಆದರೆ ವಾಸ್ತವವಾಗಿ ದೌರ್ಬಲ್ಯವು ಮೊದಲಾಗಿತ್ತು. ಫಾರ್ಸಿಸ್ಥಾನದೊಂದಿಗೆ ಸಂಪರ್ಕಬೆಳೆದ ಬಳಿಕ ಅರಬ್ಬಿಯರಲ್ಲಿ ಭೋಗಾಸಕ್ತಿಯು ಬೆಳೆದಿತ್ತು. ತುರುಷ್ಕಸ್ಥಾನದಿಂದ ಹಿಡಿದುತಂದಿದ್ದ ಗುಲಾಮರ ತಂಡವು ಹೆಚ್ಚಿತ್ತು. ರೋಮಕರಲ್ಲಿ ಲೋಲುಪ್ತಿಯಿಂದ ಪರಿಣಮಿಸಿದ ದೌರ್ಬಲ್ಯವು ಅರಬ್ಬಿಯವರಲ್ಲಿಯೂ ಕಾಣಿಸಿತು. ತುರುಷ್ಕಜಾತಿಯ ಗುಲಾಮರು ಕಾಲಕ್ರಮದಲ್ಲಿ ಬಲಿಷ್ಠರಾದರು; ಪ್ರತ್ಯೇಕ ರಾಜ್ಯಗಳನ್ನು ಕಟ್ಟಿದರು. ಖೊರಾಸಾನ್ ಘಜ್ನಿ ರಾಜ್ಯಗಳು ಹಾಗೆ ಹುಟ್ಟಿದವು. ಆ ರಾಜ್ಯಗಳೆಲ್ಲವನ್ನೂ ಹತ್ತನೆ ಶತಮಾನದ ತರುವಾಯ **ಸೆಲ್ಜುಕಿ** (Seljuk) ಗುಂಪಿನ ತುರುಷ್ಕರು ಸುಲಭವಾಗಿ ವಶಪಡಿಸಿಕೊಂಡರು. ೧೦೫೫ರಲ್ಲಿ ಅವರ ನಾಯಕನಾದ **ತುಘ್ರಿಲ್ ಬೇಗನು** (Tughril Beg) ಬಗದಾದನ್ನು ಹಿಡಿದುಕೊಂಡನು.

ಮುಖ್ಯಪ್ರಶ್ನೆ ೩೯ : ಅರಬ್ಬಿ ಮುಸಲ್ಮಾನರು ಮೂರು ಖಂಡಗಳಲ್ಲಿಯೂ ನುಗ್ಗಿದಾಗ ಪೃಥ್ವಿಯ ಇತರ ಭಾಗಗಳಲ್ಲಿದ್ದ ರಾಜ್ಯಗಳಾವುವು? ಅವುಗಳ ಸ್ಥಿತಿಯೇನು?

ಪೈಗಂಬರರ ಸಂದೇಶವನ್ನು ಹಿರಾಕ್ಲಿಯಸ್ ಮತ್ತು ಖುಸ್ರುಗಳ ಬಳಿಗೊಯ್ದಂತೆ ಚೀನಕ್ಕೂ ಒಯ್ದರು. ಅಲ್ಲಿ ಆಳುತ್ತಿದ್ದ **ತೈತ್ಸಂಗ್** (Tai-tsung) ಎಂಬ ಪ್ರಭುವು ಆ ದೂತನನ್ನು ಆದರದಿಂದ ಸತ್ಕರಿಸಿ ಸಾವಧಾನದಿಂದ ಆತನ ಸಂದೇಶವನ್ನು ಲಾಲಿಸಿದನು. **ಕ್ಯಾಂಟನ್** ಪಟ್ಟಣದಲ್ಲಿ ವ್ಯಾಪಾರಕ್ಕಾಗಿ ಬಂದು ನೆಲೆಸಿದ್ದ ಅರಬ್ಬಿಜನರಿಗಾಗಿ ಒಂದು ಮಸೀದಿಯನ್ನೂ ಕಟ್ಟಿಸಿಕೊಟ್ಟನು. ಈಗಲೂ ಅಲ್ಲಿ ಆ ಪುರಾತನ ಮಸೀದಿ ಕಾಣುತ್ತದೆ. ಮುಸಲ್ಮಾನ್ ಮತಸ್ಥರನ್ನು ಮಾತ್ರವಲ್ಲ; ಕ್ರೈಸ್ತರನ್ನೂ ಆ ಚಕ್ರವರ್ತಿಯು ಗೌರವದಿಂದ ಕಂಡನು. ಬಂದ ಕ್ರೈಸ್ತಪಾದ್ರಿಗಳನ್ನು ಪುರಸ್ಕರಿಸಿ ಅವರಿಗಾಗಿ ಒಂದು 'ಚರ್ಚ'ನ್ನು ಕಟ್ಟಿಸಿಕೊಟ್ಟನು. ಚೀನಚಕ್ರವರ್ತಿಯ ನಡತೆಗೂ ಫಾರ್ಸಿ ಮತ್ತು ಕ್ರೈಸ್ತ ಪ್ರಭುಗಳ ನಡತೆಗೂ ಎಷ್ಟು ಭೇದ!

ತೈತ್ಸಂಗ್ ಚಕ್ರವರ್ತಿಯು **ಟಂಗ್** (Tang) ವಂಶಸ್ಥರಲ್ಲೆಲ್ಲ ಅತಿ ಪ್ರಸಿದ್ಧನಾದವನು. ಆ ವಂಶಸ್ಥರಾಳಿದ ಕಾಲವು ಚೀನದ ಚರಿತ್ರೆಯಲ್ಲಿ ಹಿರಿದು. ಆ ವೇಳೆಗೆ ಬೌದ್ಧಮತವು ಅಲ್ಲಿ ವ್ಯಾಪಿಸಿತ್ತು. ಚೀನೀಯರಲ್ಲಿ ಪರಧರ್ಮಸಹಿಷ್ಣುತೆಯೆಂಬುದು ಸಹಜಲಕ್ಷಣವೆನಿಸಿತ್ತು. ಪಿಂಗಾಣಿ ಪಾತ್ರೆಗಳನ್ನು ರಚಿಸುವುದರಲ್ಲಿಯೂ ಚಿತ್ರಲೇಖನದಲ್ಲಿಯೂ ಟಂಗ್ ಪ್ರಭುಗಳ ಕಾಲದ ಚೀನೀಯರು ಅತಿಪ್ರವೀಣರಾಗಿ ಆಶ್ಚರ್ಯಕರವಾದ ಕೆಲಸಗಳನ್ನು ಮಾಡಿದ್ದರು; ಮದ್ದನ್ನು ಕಂಡುಹಿಡಿದಿದ್ದರು; ಜಲಶಕ್ತಿಯನ್ನು ಉಪಯೋಗಿಸಿಕೊಳ್ಳುವ ಉಪಾಯಗಳನ್ನಲ್ಲದೆ ಕಲ್ಲಿದ್ದಲನ್ನೂ ಅನಿಲರೂಪವಾದ ಇಂಧನವನ್ನೂ ತಿಳಿದಿದ್ದರು; ಕಾಗದವನ್ನು ಸಿದ್ಧಗೊಳಿಸಿ ಮರದ ಅಚ್ಚುಗಳಿಂದ ಮುದ್ರಿಸುವುದನ್ನು ಅರಿತಿದ್ದರು; ಟೀಯನ್ನೂ ಬಳಕೆಯಲ್ಲಿ ತಂದುಕೊಂಡಿದ್ದರು. ಹಿಂದುಸ್ಥಾನದಿಂದ ಅನೇಕ ಬೌದ್ಧ ಪಂಡಿತರನ್ನು ಚೀನೀಯರು ಬರಮಾಡಿಕೊಳ್ಳುತ್ತಿದ್ದುದು ಈ ಚಿತ್ತಾಕರ್ಷಕ ಕಾಲದಲ್ಲಿಯೇ. ಪ್ರಸಿದ್ಧರಾದ ಬೌದ್ಧಪಂಡಿತರೆಲ್ಲರೂ ಭಾರತವರ್ಷದಿಂದ ಚೀನಕ್ಕೆ ಹೊರಟಂತೆ ಚೀನದಿಂದ ಬೌದ್ಧಯಾತ್ರಿಕರೂ ಭರತಭೂಮಿಯಲ್ಲಿ ಪ್ರವಾಸಮಾಡುತ್ತಿದ್ದರು. ಅಂತಹ ಯಾತ್ರಿಕರಲ್ಲೆಲ್ಲ ಪ್ರಸಿದ್ಧನಾದವನು **ಯುವನ್ಚಂಗ್** (Yuan Chwang).

ಯುವನ್ ತ್ಸಾಂಗನು ಹಿಂದುಸ್ತಾನದಲ್ಲಿ ಸಂಚಾರವನ್ನು ಪ್ರಾರಂಭಿಸಿದಾಗ ಉತ್ತರಭಾಗದಲ್ಲಿ ವರ್ಧನವಂಶದವರು ಪ್ರಭುತ್ವ ಕಟ್ಟಿದ್ದರು. ಪ್ರಸಿದ್ಧ ಹರ್ಷವರ್ಧನನು ಉತ್ತರದಲ್ಲಿಯೂ ಇಮ್ಮಡಿ ಪುಲಿಕೇಶಿಯು ದಕ್ಷಿಣದಲ್ಲಿಯೂ ಆಳುತ್ತಿದ್ದರು. ಹದಿನಾಲ್ಕು ವರ್ಷಗಳನ್ನು ಹಿಂದುಸ್ತಾನದಲ್ಲಿಯೇ ಕಳೆದ ಆ ಯಾತ್ರಿಕನು ದೇಶದ ಅನೇಕ ಭಾಗಗಳನ್ನು ಕಣ್ಣಾರೆ ಕಂಡನು. ನಾಲಂದಾ ವಿಶ್ವವಿದ್ಯಾಪೀಠದಲ್ಲಿ ವ್ಯಾಸಂಗನಡೆಸಿ ಪ್ರಸಿದ್ಧ ಬೌದ್ಧ ವಿಹಾರಗಳನ್ನೆಲ್ಲ ನೋಡಿದನು. ಅವುಗಳಲ್ಲೆಲ್ಲ ಅಜಂತಾ ವಿಹಾರಗಳು ಲೋಕಪ್ರಸಿದ್ಧವಾದವುಗಳು. ಅವುಗಳಲ್ಲಿ ಕಾಣುವ ವಾಸ್ತುಶಿಲ್ಪ ಚಿತ್ರಕಲೆಗಳು ಜಗತ್ತನ್ನೆ ಬೆರಗುಗೊಳಿಸತಕ್ಕವು. ಅನ್ಯಮತದ್ವೇಷವೆಂಬುದನ್ನು ದೇಶದಲ್ಲಿ ಯುವನ್ ತ್ಸಾಂಗನು ಕಾಣಲಿಲ್ಲ. ಕಾಲಸ್ಥಿತಿಯನ್ನು ವರ್ಣಿಸುತ್ತ 'ಆಡಳಿತದಲ್ಲಿ ನ್ಯಾಯವು ನೆಲೆಸಿದೆ. ಜನರಿಗೆ ಬೇಕಾದ ಪ್ರಯೋಜನಗಳನ್ನು ಕಲ್ಪಿಸಿಕೊಡುತ್ತಾರೆ. ತೆರಿಗೆ ಹಗುರ. ಜನರೂ ಗುಣಶಾಲಿಗಳು, ಮರ್ಯಾದೆ ತಿಳಿದವರು, ಮೋಸವಿಲ್ಲದವರು' ಎಂದು ಬರೆದಿಟ್ಟನು.

ಚೀನ ಹಿಂದುಸ್ತಾನಗಳಲ್ಲದೆ ಉಪಭಾರತವರ್ಷಗಳೆನಿಸಿದ್ದ ಕ್ಷೇತ್ರಗಳೂ ಶಾಂತಿಸಮಾಧಾನಗಳಿಂದ ಕೂಡಿ ವಿದ್ಯಾಪ್ರಚಾರದಲ್ಲಿಯೂ ಶಾಸ್ತ್ರಶೋಧನೆಯಲ್ಲಿಯೂ ಸಾಹಿತ್ಯಮುಂತಾದ ಕಲೆಗಳಲ್ಲಿಯೂ ಮುಂದುವರಿದಿದ್ದುವು.



ಬೊರಬುದೂರ್ ಮಂದಿರ—ಜವದ್ವೀಪ

ಜವದ್ವೀಪದ **ಬಾರಬುದೂರೆಂಬ**ಲ್ಲಿ ಅದ್ಭುತವಾದ ಒಂದು ದೇವಾಲಯವು ನಿರ್ಮಾಣವಾದುದೂ ಇನ್ನೂ ಮುಂದೆ **ಪ್ರಂಬಾನಂ** (Prambanam) ಮತ್ತು **ಅಂಕೊರ್ವಾಟ್** (Angkor Vat) ಎಂಬೆಡೆಗಳಲ್ಲಿ ಈಗ ಶಿಥಿಲವಾದರೂ ಆಶ್ಚರ್ಯಗೊಳಿಸುವ ದೇವಾಲಯಗಳು ರಚಿತವಾದುದೂ ಈ ಕಾಲದಲ್ಲಿಯೇ.

ಏಷ್ಯಖಂಡದ ಮೂಡಣಭಾಗವೆಲ್ಲ ಸೆಮ್ಮೃದ್ಧಿಯಿಂದಲೂ ತೇಜಸ್ಸಿನಿಂದಲೂ ಕೂಡಿದ್ದಿತು ಈ ಕಾಲದಲ್ಲಿ (೬೦೦–೮೦೦). ಪಡುವಲನಾಡುಗಳಲ್ಲಿ ರೂಕ್ಷ ಜನರ ಹಾವಳಿಯು ಹಬ್ಬಿ ಅನಾಯಕತೆಯೂ ಅಶಾಂತಿಯೂ ತುಂಬಿದ್ದವು.

ಹಾರೂನ್ ಅಲ್‌ರಷೀದ್ ಖಲೀಫನೊಡನೆ ರಾಯಭಾರ ನಡೆಸಿದ ಚಾರ್ಲ ಮೇನ್ ಚಕ್ರವರ್ತಿಯ ಹೆಸರನ್ನು ಹಿಂದೆಯೇ ಹೇಳಿದ್ದೆವು. ಅಟ್ಟಿಲನು ೪೫೧ ರಲ್ಲಿ ಸೋತುಹೋದ ವೇಳೆಗೆ ರೋಮಕರೊಂದಿಗೆ ಫರಂಕೀಕುಲಸ್ಥರು ಸೇರಿಕೊಂಡಿದ್ದರು; ಹಿಂದಿನ ಗಾಲ್ (Gaul) ಪ್ರಾಂತವನ್ನು ಆಕ್ರಮಿಸಿ ಕೊಂಡಿದ್ದರು; ಜಯಶಾಲಿಗಳಾದ ತರುವಾಯ ಅವರು ತಮ್ಮ ರಾಜ್ಯವನ್ನು ಕಟ್ಟಿ ಹಾಗೂ ಹೀಗೂ ಆಡಳಿತವನ್ನು ನಡೆಸುತ್ತಿದ್ದರು. ಟೂರ್ಸ್ ಕದನ ದಲ್ಲಿ ಜಯಪಡೆದ ಚಾರ್ಲ್ಸ್ ಮಾರ್ಟೆಲ್ ಎಂಬಾತನು ಆ ಕುಲಸ್ಥ. ಆತನ ಮೊಮ್ಮಗನೇ ಚಾರ್ಲಮೇನ್ (Charlemagne). ಪರಾಕ್ರಮಿಯಾಗಿದ್ದ ಆತನು ಈಗಣ ಫ್ರಾನ್ಸ್, ಜರ್ಮನಿ, ಸ್ವಿಟ್ಸರ್ಲಂಡ್ ಪ್ರದೇಶಗಳನ್ನು ಬೇಗನೆ ತನ್ನ ವಶಕ್ಕೆ ತಂದುಕೊಂಡನು. (೧೦೮ ನೇ ಪುಟದ ನಕ್ಷೆ ನೋಡಿ). ಇಟಲಿಯ ಉತ್ತರಭಾಗವನ್ನೂ ಆಕ್ರಮಿಸಿದ ವೇಳೆಗೆ ಆತನಿಗೆ ರೋಮಕನಗರದಲ್ಲಿ ಪ್ರಬಲ ನಾಗಿದ್ದ ಕ್ರೈಸ್ತಮತಾಧಿಪತಿಯ ಸಹಾಯ ದೊರಕಿತು. ಕಾನ್‌ಸ್ಟಾಂಟಿ ನೋಪಲ್ ಪ್ರಭುವಿನ ಹಂಗನ್ನು ತಪ್ಪಿಸಿಕೊಳ್ಳಬೇಕೆಂಬ ಆಸೆ ಕ್ರೈಸ್ತಮತಾಧಿ ಪತಿಗೆ. ಆತನಿಗೆ **ಪೋಪ್** (Pope) ಎಂಬ ಬಿರುದು ರೂಢಿ. ಲ್ಯಾಟಿನ್ ಚರ್ಚ್ ಮತ್ತು ಗ್ರೀಕ್ ಚರ್ಚ್ ಎಂಬ ವಿಭಾಗಗಳನ್ನು ಕಂಡೆವಷ್ಟೆ; ಲ್ಯಾಟಿನ್ ಚರ್ಚಿಗೆ ಪೋಪನೇ ಮುಖ್ಯ ಗುರುವಾಗಿದ್ದನು. ಚಾರ್ಲಮೇನ್ ಚಕ್ರವರ್ತಿ ಯನ್ನು ರೋಮಕನಗರಕ್ಕೆ ಬರಮಾಡಿ ಕ್ರೈಸ್ತಮತಕ್ಕೆ ಸೇರಿಸಿ ಅಲ್ಲಿಯೇ ಪೋಪನು ಸ್ವಹಸ್ತದಿಂದ ಆತನಿಗೆ ಕಿರೀಟಧಾರಣೆಮಾಡಿದನು. ಪುನಃ ರೋಮಕ ಸಾಮ್ರಾಜ್ಯ ಹುಟ್ಟಿತೆಂದು ಜನರಾಡಿಕೊಂಡರು; ಅದಕ್ಕೆ **ಪವಿತ್ರ ರೋಮಕ ಸಾಮ್ರಾಜ್ಯ** (Holy Roman Empire) ವೆಂಬ ಹೆಸರಾಯಿತು. ಈ ಸಂಗತಿಯು ೮೦೦ ನೆ ಇಸವಿಯಲ್ಲಿ ನಡೆಯಿತು.

ಆದರೆ ರೂಕ್ಷಜನ ಸಮೂಹಗಳ ಹಾವಳಿಯು ಇನ್ನೂ ನಿಲ್ಲಲಿಲ್ಲ. ಹೂಣ ರೇನೋ ಅಡಗಿದ್ದರು. ಇತರ ಸಮೂಹಗಳವರು ಇನ್ನೂ ಮಾನವಮೃಗ

ಗಳಂತಿದ್ದರು. ಉತ್ತರ ರಷ್ಯ ಮತ್ತು ಸ್ಕಾಂಡಿನೇವಿಯ ಕಡೆಗಳಿಂದ **ನಾರ್ತ್‌ಮೆನ್** (Northmen) ಎಂಬುವರು ಆಗಾಗ್ಗೆ ನುಗ್ಗಿ ಬಂದು ಕೊಳ್ಳೆ ಹೊಡೆಯುತ್ತಲೇ ಇದ್ದರು. ನೆಮ್ಮದಿ ಶಾಂತಿಗಳು ಇರಲಿಲ್ಲ. ಪೋಪರ ಪ್ರಯತ್ನದಿಂದ ಗಥರು ಮುಂತಾದ ಹಿಂದಿನ ರೂಕ್ಷ ಜನರು ಕ್ರೈಸ್ತಮತವನ್ನೊಪ್ಪಿಕೊಂಡ ಬಳಿಕ ಅನಾಯಕತೆಯು ಸ್ವಲ್ಪಮಾತ್ರ ತಗ್ಗಿತ್ತು. ನಾರ್ತ್‌ಮೆನ್ ಗುಂಪಿನವರು ಸಮುದ್ರದ ಮೇಲೆ ಹೊರಟು ನಾಶಗೊಳಿಸತಕ್ಕವರು. ಐಸ್ಲಂಡ್ ಗ್ರೀನ್ಲಂಡ್ ದ್ವೀಪಗಳಲ್ಲದೆ ಬ್ರಿಟನ್ ಫ್ರಾನ್ಸ್ ದೇಶಗಳೂ ಭೂಮಧ್ಯ ಸಮುದ್ರದ ಪ್ರದೇಶಗಳೂ ಅವರ ದಾಂಧಲೆಗೆ ಸಿಕ್ಕಿದ್ದವು. ಕೊಳ್ಳೆ ಹೊಡೆಯುವುದನ್ನು ಬಿಟ್ಟು ಅವರು ದೇಶದಲ್ಲಿ ನೆಲೆಸಿ ಕ್ರೈಸ್ತಧರ್ಮವನ್ನೊಪ್ಪಿಕೊಂಡು ಸಭ್ಯರಾಗಲು ನೂರಾರು ವರ್ಷ ಕಳೆಯಬೇಕಾಯಿತು.

ನಾಯಕನಿಲ್ಲದೆ ನೆಮ್ಮದಿಗಾಣದ ಆ ಕಾಲದಲ್ಲಿ ಸಾಮಾನ್ಯಜನರು ಯಾರಾದರೊಬ್ಬ ಶೂರನನ್ನು ನಂಬಿಕೊಂಡಿರಬೇಕಾಗಿತ್ತು. ಆ ಶೂರರು ಯಥಾಶಕ್ತಿ ಪಾಳೆಯಗಾರರಾಗಿದ್ದರು. ರಾಜರೆನಿಸಿಕೊಂಡವರಿಗೆ ಪಾಳೆಯಗಾರರ ಸಹಾಯವಿಲ್ಲದೆ ಕೆಲಸಗಳು ನಡೆಯುತ್ತಲೇ ಇರಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಯೂರೋಪಿನ ಪಡುವಲ ದೇಶಗಳಲ್ಲಿ **'ಫ್ಯೂಡಲ್'** (feudal) **ಪದ್ಧತಿ** ಯೆಂಬುದು ಬೆಳೆದು ರೂಢಿಯಾಯಿತು. ರಾಜನು ದೇಶಕ್ಕೆಲ್ಲ ಯಜಮಾನನೆನಿಸಿ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಆಪ್ತೇಷ್ಟರಿಗೆ ಕೊಡುತ್ತ ಅವರಿಂದ ಯುದ್ಧಕಾಲದಲ್ಲಿ ಸಹಾಯವನ್ನು ನಿರೀಕ್ಷಿಸುತ್ತಿದ್ದನು. ಆ ಸಾಮಂತರು ತಮ್ಮ ಭಾಗಗಳನ್ನು ಪುನಃ ಸಣ್ಣವುಟ್ಟ ಸಾಮಂತರಿಗೆ ಅಥವಾ ಜಮೀನ್ದಾರರಿಗೆ ಹಂಚಿಕೊಡುತ್ತಿದ್ದರು. ಭೂಮಿಯೊಂದೇ ಆಗಿನ ಐಶ್ವರ್ಯ. ವ್ಯಾಪಾರೋದ್ಯೋಗಗಳಾಗಲಿ ಕೈಗಾರಿಕೆಗಳಾಗಲಿ ಇಲ್ಲದಿದ್ದ ಕಾಲ. ವಿದ್ಯಾಪ್ರಚಾರವೆಂಬುದೂ ಕಲಾಸಕ್ತಿಯೆಂಬುದೂ ಕನಸಿನ ಸರಕು ಕೂಡಾ ಅಲ್ಲ. ರಾಜರೂ ಸಾಮಂತರೂ ನಿರಕ್ಷರಕುಕ್ಷಿಗಳು. ಅಂತಹ ಪರಿಸ್ಥಿತಿಯ ಯೂರೋಪಿನಲ್ಲಿ ಒಂಭತ್ತನೆ ಶತಮಾನದಿಂದ ಫ್ಯೂಡಲ್ ಶಿಸ್ತೆಂಬುದು ನೆಲೆಗೊಂಡಿತು. ಅಲ್ಲಲ್ಲಿ ನೆಲೆಸಿದ್ದವರೆಲ್ಲರೂ ಲ್ಯಾಟಿನ್ ಚರ್ಚಿನ ಪಾದ್ರಿಗಳ ಬೋಧೆಯನ್ನೊಪ್ಪಿಕೊಂಡು ಕ್ರೈಸ್ತಮತಕ್ಕೆ ಸೇರಿಕೊಂಡರು. ಧರ್ಮವನ್ನುಪದೇಶಮಾಡುತ್ತ ಕಾಪಾಡಿದವರು ಆ ಮತಗುರುಗಳು.

ಅಂಧಕಾರಯುಗವೆಂಬುದು ಕಳೆದಾಗ್ಯೂ ಐರೋಪ್ಯದೇಶಗಳಲ್ಲಿ ಜನರ ಸ್ಥಿತಿ ಮೇಲಾಗಲಿಲ್ಲ. ರಾಜರು ದುಷ್ಟರಾಗುವುದಕ್ಕೂ ಸಾಮಂತರು ರಾಜರೊಡನೆ ನಿರಂತರಕಲಹಗಳನ್ನು ಬೆಳೆಸುವುದಕ್ಕೂ ಆರಂಭವಾಗಿ ಆ ಇಬ್ಬರ ಮಧ್ಯೆ

ಜನಸಾಮಾನ್ಯರು ಬೀಸುವ ಕಲ್ಲುಗಳ ಮಧ್ಯೆ ಸಿಕ್ಕಿದಂತೆ ಕಷ್ಟಪಡುವ ಕಾಲ ಪ್ರಾಪ್ತಿಯಾಯಿತು. ರಾಜರೂ ಶ್ರೀಮಂತಸಾಮಂತರೂ ಕೋಟೆಕೊತ್ತಳಗಳನ್ನು ಕಟ್ಟಿಕೊಂಡು ಕೆಲವೇಳೆ ಹುಚ್ಚು ಹುಲಿಗಳಂತಾದರು. ಕೋಟೆಗಳಂತಹ ಭವನಗಳಲ್ಲಿ ಆ ಸಾಮಂತರು ಪುಂಡರನ್ನೂ ತುಂಟರನ್ನೂ ಪೋಷಿಸುತ್ತ ಸಾಮಾನ್ಯಜನರ ಕಷ್ಟದ ಫಲವನ್ನು ದಕ್ಕಿಸಿಕೊಳ್ಳುತ್ತ ಇರುತ್ತಿದ್ದರು. ಸಾಧಾರಣವಾಗಿ ಎಲ್ಲರಲ್ಲಿಯೂ ಅಜ್ಞಾನ ತುಂಬಿತ್ತು. ಕ್ರೈಸ್ತಧರ್ಮಗ್ರಂಥವೊಂದೇ ಪರಿಚಿತವಾದ ಪುಸ್ತಕ—'ಬೈಬಲ್'. ಅದನ್ನು ಓದಬಲ್ಲವರು ವಿದ್ವಾಂಸರು ಮಾತ್ರವೇ. ಚರ್ಚಿನವರಿಗೆ ಮಾತ್ರ ಓದುಬರಹ. ಆದ್ದರಿಂದ ಅಂಧಕಾರಯುಗದ ತರುವಾಯ ಯೂರೋಪಿನಲ್ಲಿ ನಡೆದ ಮಧ್ಯಮಯುಗ (Middle Ages) ದಲ್ಲಿ ಚರ್ಚಿನವರು ಮಾತ್ರ ಜನರಿಗೆ ನೀತಿಯನ್ನು ಬೋಧಿಸಿ ಧರ್ಮವನ್ನು ರಕ್ಷಿಸಬೇಕಾಗಿತ್ತು.

ರೋಮಕಪಟ್ಟಣದ ಕ್ರೈಸ್ತಗುರುವು ಪೋಪೆನಿಸಿದ ತರುವಾಯ ಲ್ಯಾಟಿನ್ ಚರ್ಚೆಂಬುದು ಪ್ರತ್ಯೇಕಗೊಂಡಿತಷ್ಟೆ. ಚಕ್ರವರ್ತಿಪದವಿಯಲ್ಲಿದ್ದಾತನೂ ಇತರ ರಾಜರೂ ಆ ಚರ್ಚಿನ ಅಂಕೆಯಲ್ಲಿಯೇ ಇದ್ದವರು. ಎಲ್ಲರಿಗೂ ಪೋಪನು ಶ್ರೇಷ್ಠನಾದವನು. ಆತನ ಕೈಕೆಳಗೆ ಕ್ರಮವಾಗಿ ಕಾರ್ಡಿನಲ್, ಬಿಷಪ್, ಪಾದ್ರಿಗಳೆಂಬ ವರ್ಗದವರಿದ್ದರು. ಅವರ ಪ್ರಯತ್ನದಿಂದಲೂ ಶ್ರೀಮಂತರ ದಾನಧರ್ಮದಿಂದಲೂ ದೇವಮಂದಿರಗಳು ಊರೂರಿನಲ್ಲಿಯೂ ನಿರ್ಮಾಣವಾದುವು. ಎತ್ತರವಾದ ಗೋಪುರಗಳನ್ನೂ ಮೂಲೆಯ ಕಮಾನುಗಳನ್ನೂ ಪಡೆದ **ಗಾಥಿಕ್** (Gothic) ಶೈಲಿಯ ಚರ್ಚುಗಳು ಮುಖ್ಯಪಟ್ಟಣಗಳಲ್ಲಿ ರಚಿತವಾದವು. ಒಟ್ಟು ಚರ್ಚುಗಳ ವ್ಯವಸ್ಥೆಯೆಲ್ಲವೂ ಪೋಪನ ಅಧಿಕಾರಕ್ಕೊಳಗಾಯಿತು. ಪೋಪನ ಪಂಥಕ್ಕೆ 'ರೋಮನ್ ಕ್ಯಾಥಲಿಕ್' ಎಂಬ ಹೆಸರಾಯಿತು. ಪಡುವಣ ಯೂರೋಪಿನ ದೇಶಗಳಲ್ಲಿ ರಾಜರೂ ಸಾಮಂತರಾಜರೂ ಎಷ್ಟುಮಂದಿಯಿದ್ದಾಗ್ಯೂ ಅವರೆಲ್ಲರೂ ಪೋಪನಿಗೆ ಹೆದರಿಕೊಂಡಿರಬೇಕಾಗಿತ್ತು.

ಚರ್ಚುಗಳೂ ಅವುಗಳಲ್ಲಿ ಉದ್ಯೋಗಸ್ಥರಾಗಿ ಪೋಪನ ಆಜ್ಞಾಧಾರಕರಾಗಿದ್ದ ಪುರೋಹಿತವರ್ಗದವರೂ ಅಲ್ಲದೆ ಮಠಗಳೂ ಮಧ್ಯಮಯುಗದಲ್ಲಿ ಪ್ರಬಲಿಸಿದುವು. ದೈವಭಕ್ತಿಯಿಂದ ಪ್ರೇರಿತರಾಗಿ ವಿರಾಗಿಗಳಾದವರೂ ಶೋಕಪೀಡಿತರೂ ಆ ಮಠಗಳಲ್ಲಿ ಸೇರಿಕೊಳ್ಳುತ್ತಿದ್ದರು. ಕ್ಯಾಥಲಿಕ್ ಪುರೋಹಿತವರ್ಗದವರಿಗೆ ಕಠಿಣವಾದ ನಿಯಮಗಳಿದ್ದುವು. ಅವರು ಅವಿವಾಹಿತರಾಗಿಯೇ ಇರುತ್ತಿದ್ದರು. ಮಠಗಳಲ್ಲಿದ್ದವರು ಇನ್ನೂ ಕಠಿಣ ವ್ರತಗಳನ್ನು ಕೈಕೊಂಡವರು.

ಅವರಲ್ಲಿ ಅನೇಕ ಮತಗಳು; ಮತಗಳಂತೆ ಗುಂಪುಗಳು. ಈ ವರ್ಗದವರಾದ ಫ್ರಾನ್ಸಿಸ್ಕನ್ (Franciscan), ಬೆನೆಡಿಕ್ಟೈನ್ (Benedictine), ಸಿಸ್ಟರ್ಶಿಯನ್ (Cistercian) ಮುಂತಾದ ಹೆಸರುಗಳನ್ನು ಆ ಕಾಲದ ಕಥೆಗಳಲ್ಲಿ ಕಾಣುವಿರಿ.

ಮುಖ್ಯಪ್ರಶ್ನೆ ೪೦: ಅರಬ್ಬಿ ಮುಸಲ್ಮಾನರಿಗೂ ತುರುಷ್ಕ ಮುಸಲ್ಮಾನರಿಗೂ ಇದ್ದ ವ್ಯತ್ಯಾಸವೇನು?

ಫ್ರಾನ್ಸಿಸ್ಕನ್ ಗುಂಪಿನ ವಿರಕ್ತರ ಮತವು ಬೆಳೆದುದು ಫ್ರಾನ್ಸಿಸ್ ಎಂಬ ಯತಿಯ ಪ್ರಭಾವದಿಂದ. ಆತನು ಏಸುವಿನ ಉಪದೇಶವನ್ನು ಅಕ್ಷರಶಃ ಪಾಲಿಸಬೇಕೆಂಬ ಶ್ರದ್ಧಾಬದ್ಧನು. ಕಡುಬಡತನವನ್ನು ಒಪ್ಪಿಕೊಂಡು ದರಿದ್ರರನ್ನೂ ದೀನರನ್ನೂ ಸಂತೈಸುತ್ತಲಿರುವುದು ಆತನ ವೃತ್ತಿ. ಕುಷ್ಠರೋಗಿಗಳನ್ನು ಉಪಚರಿಸುವುದರಲ್ಲಿ ಆತನಿಗೆ ಪರಮಾದರ. ಮೃಗಪಕ್ಷಿಗಳನ್ನು ಕೂಡ ಆತನು ಪ್ರೀತಿಯಿಂದ ಕಾಣುತ್ತಿದ್ದನು. ಕ್ರೈಸ್ತಮತದಲ್ಲಿ ಅತಿಶಯ ಭಕ್ತಿಯುಳ್ಳಾತನು. ಆತನು ೧೨೧೨ ರಲ್ಲಿಯೂ ೧೨೧೯ ರಲ್ಲಿಯೂ ಮೂಡಲಿಗೆ ಹೊರಟು ಮುಸಲ್ಮಾನ ರಾಜ್ಯಗಳಲ್ಲಿ ಸಂಚರಿಸಿದನು. ಎರಡನೆಬಾರಿ ಹೊರಟಾಗ ಕ್ರೈಸ್ತರಿಗೂ ಮುಸಲ್ಮಾನರಿಗೂ ಯುದ್ಧವು ನಡೆಯುತ್ತಿತ್ತು. ಆಗ ಮುಸಲ್ಮಾನರು ಆತನನ್ನು ಸೆರೆಹಿಡಿದು ಈಜಿಪ್ಟ್ ಸುಲ್ತಾನನೆದುರಿಗೊಯ್ದರು. ಆ ಸುಲ್ತಾನನು ಆದರದಿಂದ ಯತಿಯ ಮಾತುಗಳನ್ನು ಕೇಳಿ ಗೌರವದಿಂದ ಕೊಟ್ಟುಕಳುಹಿಸಿದನು; ಯಾವ ಬಗೆಯ ಹಿಂಸೆಯನ್ನೂ ಅಗೌರವವನ್ನೂ ತೋರಿಸಲಿಲ್ಲ.

ಈ ಒಂದು ಸಂಗತಿಯಿಂದ ಯೂರೋಪಿನ ಕ್ರೈಸ್ತ ಮತಸ್ಥರಿಗೂ ಮಧ್ಯಪ್ರಾಚ್ಯದ ಮುಸಲ್ಮಾನರಿಗೂ ಸಂಪರ್ಕವು ಮೊದಲಾಗಿದ್ದುದು ಸೂಚಿತವಾಗುವುದು. ಖಿಲಾಫತ್ ಸ್ಥಾಪನೆಯಾದಾಗ ಅರಬ್ಬಿ ಮುಸಲ್ಮಾನರು ಫಾರ್ಸಿಸ್ತಾನವನ್ನು ಗೆದ್ದು ಮೂಡಲಸಾಮ್ರಾಜ್ಯವೆಂಬುದರಲ್ಲಿ ಭಾಗಪಡೆದು ಆ ತರುವಾಯ ಆಫ್ರಿಕ ಸ್ಪೈಯ್ನ್‌ಗಳನ್ನೂ ತುರ್ಕಸ್ತಾನ ಸಿಂಧು ಪ್ರಾಂತಗಳನ್ನೂ ಗೆದ್ದುಕೊಂಡುದನ್ನು ಹಿಂದೆಯೇ ಗ್ರಹಿಸಿದೆವು. ಗ್ರೀಸ್ ಮತ್ತು ಅಲೆಕ್ಸಾಂಡ್ರಿಯಗಳಿಂದಲೂ ಫಾರ್ಸಿಸ್ತಾನ ಹಿಂದುಸ್ತಾನಗಳಿಂದಲೂ ಅರಬ್ಬಿ ಜನರು ಜ್ಞಾನಲಾಭಮಾಡಿಕೊಂಡರು. ತಮ್ಮ ವಿಶ್ವವಿದ್ಯಾಮಂದಿರಗಳನ್ನು ಪೋಷಿಸಿ ಅವುಗಳಲ್ಲಿ ಎಲ್ಲ ದೇಶಸ್ಥರಿಗೂ ಆಸ್ಪದಕೊಟ್ಟರು. ಹಾರೂನ್ ಅಲ್ ರಷೀದನ ಅನಂತರ ಸಂಭವಿಸಿದ ಅವನತಿಯನ್ನು ನಾವು ಆಗಲೇ ಗುರುತಿಸಿದೆವು. ಮುಸಲ್ಮಾನಮತವನ್ನು ಒಪ್ಪಿಕೊಂಡಿದ್ದ ಮಧ್ಯಏಷ್ಯದ

ತುರುಷ್ಕರು ತಂಡ ತಂಡಗಳಾಗಿ ನುಗ್ಗಿ ಪ್ರಬಲರಾದರು. ಏಷ್ಯದ ಪಡುವಲ ಭಾಗದಲ್ಲಿ ಸೆಲ್ಜುಕೀ ತುರುಷ್ಕರ ಸಾಮ್ರಾಜ್ಯವೊಂದು ಏರ್ಪಟ್ಟಿತು.

ಅರಬ್ಬಿಗಳಿಗೂ ತುರುಷ್ಕರಿಗೂ ಒಂದು ವ್ಯತ್ಯಾಸ ಕಂಡಿತು. ಯೂರೋಪಿನ ಕ್ರೈಸ್ತರಿಗೆ ಮುಖ್ಯವೆನಿಸಿ ಪರಿಣಾಮಕಾರಿಯಾದ ವ್ಯತ್ಯಾಸ. ಅರಬ್ಬಿ ಜನರಿಗೆ ಕ್ರೈಸ್ತರಲ್ಲಿ ಸಹನೆಯಿತ್ತು; ಹಾರೂನ್ ಅಲ್ ರಷೀದ್ ಚಾರ್ಲಮೇನ್ ಚಕ್ರವರ್ತಿಗಳಿಬ್ಬರೂ ಪರಸ್ಪರಸ್ನೇಹದಿಂದ ಪತ್ರವ್ಯವಹಾರವನ್ನು ಬೆಳೆಸಿದ್ದರು; ವಿಶ್ವವಿದ್ಯಾಕ್ಷೇತ್ರಗಳಲ್ಲಿ ಅರಬ್ಬಿ ಕ್ರೈಸ್ತ ವಿದ್ವಾಂಸರೂ ವಿದ್ಯಾರ್ಥಿಗಳೂ ಅನ್ಯೋನ್ಯತೆಯಿಂದ ವ್ಯಾಸಂಗದಲ್ಲಿ ನಿರತರಾಗಿದ್ದರು; ಅರಬ್ಬಿ ರಾಜ್ಯದಲ್ಲಿದ್ದ ಜೆರುಸಲೆಂ ಪಟ್ಟಣಕ್ಕೆ ಯಾತ್ರಾರ್ಥಿಗಳಾಗಿ ಹೊರಟ ಕ್ರೈಸ್ತ ಮತಸ್ಥರಿಗೆ ತೊಂದರೆ ಕಾಣಲಿಲ್ಲ; ಅರಬ್ಬಿಜನರ ಮಧ್ಯವರ್ತನೆಯಿಂದ ಯೂರೋಪಿಗೂ ದೂರಪ್ರಾಚ್ಯಕ್ಕೂ ರೇಷ್ಮೆ ರತ್ನಾಭರಣ ಸುಗಂಧದ್ರವ್ಯಗಳಲ್ಲಿ ವ್ಯಾಪಾರ ಸುಸೂತ್ರವಾಗಿ ನಡೆಯುತ್ತಿತ್ತು. ತುರುಷ್ಕಪ್ರಭುತ್ವ ನೆಲೆಸಿದಾಗ ಇಷ್ಟೆಲ್ಲ ವ್ಯತ್ಯಸ್ತವಾಗಿ ಹೋಯಿತು. ಕ್ರೈಸ್ತ ವ್ಯಾಪಾರಿಗಳಿಗೂ ಯಾತ್ರಿಕರಿಗೂ ತುರುಷ್ಕರಿಂದ ಅಡ್ಡಿ ತೋರಿತು. ವ್ಯಾಪಾರ ಮಾರ್ಗಗಳನ್ನು ಕ್ರೈಸ್ತರಿಗೆ ಮುಚ್ಚಿಬಿಟ್ಟು ಅವರ ಯಾತ್ರೆಗಳಿಗೆ ಆಸ್ಪದವನ್ನು ಕೊಡದಾದರು ತುರುಷ್ಕರು. ಮತ್ತು ತಮ್ಮ ರಾಜ್ಯದೆದುರಿಗೆ ಇನ್ನೂ ಜೀವಂತವಾಗಿದ್ದ ಕಾನ್‌ಸ್ಟಾಂಟಿನೋಪಲಿನ ಕ್ರೈಸ್ತ ರಾಜ್ಯವನ್ನು ಗೆಲ್ಲಲು ಸಂಕಲ್ಪಮಾಡಿ ಪರಾಕ್ರಮದಿಂದ ಮುತ್ತಿದರು.

ತುರುಷ್ಕರೆದುರಿನಲ್ಲಿ ಆ ಮೂಡಣ ಕ್ರೈಸ್ತ ಪ್ರಭುವು ದಿಕ್ಕುಕಾಣದೆ ೧೦೯೪ ರಲ್ಲಿ ರೋಮಕನಗರದಲ್ಲಿದ್ದ ಪೋಪನಿಗೂ ಇತರರಿಗೂ ಹೇಳಿಕಳುಹಿಸಿ ಸಹಾಯಬೇಡಿದನು. ಇದರಿಂದ ಮೊದಲಾಯಿತು ಇನ್ನೂರು ವರ್ಷಗಳ ಹೆಣಗಾಟ; ತಮ್ಮ ಪವಿತ್ರಭೂಮಿ ಪ್ಯಾಲೆಸ್ಟೈನನ್ನು ಬಿಡಿಸಿಕೊಳ್ಳಲು ಕ್ರೈಸ್ತರ ವ್ಯರ್ಥಪ್ರಯತ್ನ.

ಮುಖ್ಯಪ್ರಶ್ನೆ ೪೧: ಕ್ರುಸೇಡುಗಳಿಗೇನು ಕಾರಣ? ಅವುಗಳಿಂದಾದ ಪರಿಣಾಮಗಳಾವುವು?

ರೋಮಕನಗರದಲ್ಲಿ ಪೋಪನಿಗೆ ಆ ಬೇಡಿಕೆಯು ತಲಪಿದ ಕೂಡಲೇ ಹುಟ್ಟಿತು ಆಸೆ—ಪಡುವಲ ಕ್ರೈಸ್ತರಿಗೆ ಮಾತ್ರ ಜಗದ್ಗುರುವೆನಿಸಿರುವುದಲ್ಲದೆ ಮೂಡಲ ಕ್ರೈಸ್ತರಿಗೂ ಜಗದ್ಗುರುವಾಗುವ ಆಸೆ. 'ಪವಿತ್ರರೋಮಕ ಸಾಮ್ರಾಜ್ಯ'ವೆಂಬುದಕ್ಕೆ ಒಡೆಯನಾದವನಿಗೆ ಹುಟ್ಟಿದ್ದು ಮತ್ತೊಂದಾಸೆ.

ಕಾನ್‌ಸ್ಟಾಂಟಿನೋಪಲ್ ರಾಜಧಾನಿಯಾಗಿದ್ದ ಸಾಮ್ರಾಜ್ಯವು ತನ್ನದಾದೀತೆಂಬಾಸೆ. ೧೦೯೫ರಲ್ಲಿ ಪೋಪನು ಕ್ರೈಸ್ತ ರಾಜರಿಗೂ ಉಪರಾಜರಿಗೂ ಶ್ರೀಮುಖ (bull)ಗಳನ್ನು ಕಳುಹಿಸಿ, ಎಲ್ಲರೂ ತಮ್ಮ ಸೈನ್ಯಗಳನ್ನೊಟ್ಟುಗೂಡಿಸಿ ತುರುಷ್ಕರೊಡನೆ ಯುದ್ಧಕ್ಕೆ ಹೊರಡಬೇಕೆಂದು ಪ್ರೇರಿಸಿದನು. ಇಹಲೋಕದಲ್ಲಿ ಬಾಳಿ ಏಸು ಬೋಧೆಗೈದಿದ್ದ ಪುಣ್ಯಕ್ಷೇತ್ರವನ್ನು ಜಡಿಸಿಕೊಳ್ಳುವುದಕ್ಕಾಗಿ ಹೋರಾಡಿದರೆ ಮಾಡಿದ ಪಾಪವೆಲ್ಲ ಮಾಯವಾದೀತೆಂದು ನಂಬಿ ಅನೇಕರು ಆಯುಧಪಾಣಿಗಳಾಗಿ ಹೊರಟರು. ರಾಜ್ಯದಾಸೆಯಿಂದ ಕೆಲವರು ಸೇರಿಕೊಂಡರು. ದಳಿತರಾಗಿದ್ದ ಅನೇಕರು ದಾಸ್ಯದಿಂದ ಮುಕ್ತಿಯನ್ನು ಪಡೆಯುವ ಸಮಯವೆಂದು ಜೊತೆಗೂಡಿದರು. ಹೀಗೆ **ಕ್ರಾಸ್** (cross) ಅಥವಾ ಕ್ರೈಸ್ತಮತಲಾಂಛನವಾದ ಶಿಲುಬೆಯನ್ನು ಧರಿಸಿ ಕ್ರೈಸ್ತರು ಧರ್ಮಯುದ್ಧವೆಂದು ನಡೆಸಿದ ಯುದ್ಧಗಳು ಮೊದಲಾದವು. ಅವುಗಳಿಗೆ **ಕ್ರುಸೇಡು**ಗಳೆಂದು (Crusades) ಹೆಸರು.

ಆದರೆ ಐರೋಪ್ಯರ ಸಮೂಹದಲ್ಲಿ ಐಕಮತ್ಯವಾಗಲಿ ಯುದ್ಧಕಾಲದಲ್ಲಿ ಅತ್ಯವಶ್ಯಕವಾದ ಏಕನಾಯಕತ್ವವಾಗಲಿ ಹೇಗೊದಗಬೇಕು! ಪರಸ್ಪರ ದ್ವೇಷವನ್ನು ಕಾರುತ್ತಿದ್ದ ರಾಜರೂ, ಜಗಳಗಂಟಿಗಳಾದ ಸಾಮಂತರೂ, ಬೇರೆ ಬೇರೆ ಉದ್ದೇಶಗಳಿಂದ ಸೇರಿಕೊಂಡಿದ್ದ ಯೋಧರೂ ಒಟ್ಟುಗೂಡಿರಲು ಸಾಧ್ಯವೆ? ೧೦೯೯ರಲ್ಲಿ ಜೆರುಸಲೆಂ ಪಟ್ಟಣವನ್ನೇನೋ ಗೆಲ್ಲಲಾಯಿತು. ಆದರೆ ೧೧೮೭ರಲ್ಲಿ ಅದು ಕೈತಪ್ಪಿಹೋಯಿತು. ಮುಸಲ್ಮಾನರ ಸುಲ್ತಾನನೆನಿಸಿ ಅತಿಚತುರನೂ ಸಮರ್ಥನೂ ಆಗಿದ್ದ **ಸಲಾವುದ್ದೀನನು** (Saladin) ಸುಲಭವಾಗಿ ಕ್ರೈಸ್ತರ ವ್ಯೂಹವನ್ನು ಪರಾಭವಿಸಿ ಜೆರುಸಲೆಂ ಮಾತ್ರವಲ್ಲದೆ ಇತರ ಸ್ಥಳಗಳನ್ನೂ ಸಾಧಿಸಿಕೊಂಡನು. ಇನ್ನೂರು ವರ್ಷಕಾಲದಲ್ಲಿ ಎಂಟುಬಾರಿ ಕ್ರೈಸ್ತ ಪ್ರಭುಗಳು ನಡೆಸಿದ ಮಹದುದ್ಯಮವೆಲ್ಲ ನಿರರ್ಥಕವಾಯಿತು. ಪುಣ್ಯಭೂಮಿಯಲ್ಲಿ ಗೋಪ್ಪಾದದಷ್ಟು ನೆಲವೂ ಲಭಿಸಲಿಲ್ಲ.

ರಾಜ್ಯಲಾಭವಾಗಲಿಲ್ಲ. ಆದರೆ ಪಾಶ್ಚಾತ್ಯ ಸಭ್ಯತೆ ಸಂಸ್ಕೃತಿಗಳಿಗೆ ಕ್ರುಸೇಡುಗಳಿಂದ ಅಪಾರಲಾಭವಾಯಿತು. ಪರಿಣಾಮಗಳನ್ನು ಎಣಿಸಿಕೊಳ್ಳುವುದರಲ್ಲಿ ಮೊದಲು ಗಮನಿಸಬೇಕಾದ ಅಂಶ ತುರುಷ್ಕರಿಗೆ ತೋರಿದ ಅಡ್ಡಿ. ಕ್ಷಯಪೀಡಿತವಾಗಿದ್ದ ಮೂಡಣ ಸಾಮ್ರಾಜ್ಯಕ್ಕೆ ನಾನ್ನೂರು ವರ್ಷದ ಆಯುಸ್ಸು ಬಂತು. ಹನ್ನೊಂದನೆ ಶತಮಾನದಲ್ಲಿ ಅದೃಶ್ಯವಾಗಬೇಕಾಗಿದ್ದುದು ಹಾಗೂ ಹೀಗೂ ಹದಿನೈದನೆ ಶತಮಾನದ ಮಧ್ಯಕಾಲದವರೆಗೂ ಇತ್ತು. ಎರಡನೆಯಂಶ ಮೂಡಲ ದೇಶಗಳಿಗೂ ಪಡುವಲ ದೇಶಗಳಿಗೂ ವ್ಯಾಪಾರ

ಸಂಬಂಧಗಳು ಮತ್ತೆ ಬೆಳೆದುದು. ಆ ವ್ಯಾಪಾರದಿಂದ ಧನಲಾಭವಲ್ಲದೆ ಸಂಸ್ಕೃತಿ ಲಾಭವಾದುದೂ ಗಮನಾರ್ಹ. ಕ್ರುಸೇಡಿಗೆಂದು ಹೊರಟು ಹಿಂತಿರುಗಿ ಬಂದವರು ತುರುಷ್ಕ ದೇಶಗಳಲ್ಲಿ ತಾವು ಕಂಡಿದ್ದ ಭೋಗಭಾಗ್ಯಗಳನ್ನೂ ಬದುಕಿನ ಅಂತಸ್ತನ್ನೂ ಅನುಕರಿಸತೊಡಗಿದರು. ಅರಬ್ಬಿ ಜನರು ಸಾಧಿಸಿದ್ದ ಕೈಗಾರಿಕೆಗಳಲ್ಲದೆ ಶಾಸ್ತ್ರಗಳೂ ಐರೋಪ್ಯರಿಗೆ ತಿಳಿಯಲಾರಂಭವಾಯಿತು. ಮೂರನೆಯ ಅಂಶವೂ ಮಹತ್ವದ್ದು. ದೂರದೇಶಗಳಲ್ಲಿ ಅಲೆದಾಡುವುದರಲ್ಲಿಯೂ ಸೈನಿಕರನ್ನು ಸೇರಿಸಿಕೊಂಡಿರುವುದರಲ್ಲಿಯೂ ಪಾಳೆಯಗಾರರಂತಿದ್ದ ಸಾಮಂತರೂ ಉಪರಾಜರೂ ತಮ್ಮಲ್ಲಿದ್ದ ಧನವನ್ನು ವೆಚ್ಚಗೊಳಿಸಿಕೊಂಡಿದ್ದರು. ರೆಕ್ಕೆಮುರಿದಂತಾದ ಆ ಸಾಮಂತರನ್ನು ವಶಪಡಿಸಿಕೊಳ್ಳಲು ರಾಜರೆನಿಸಿದ್ದವರಿಗೆ ಅನುಕೂಲವೊದಗಿತು. ರಾಜರು ಪ್ರಬಲಗೊಂಡು ಪ್ರತ್ಯೇಕ ರಾಜ್ಯಗಳು ಭದ್ರಗೊಂಡವು. ಪ್ರತಿರಾಜ್ಯವೂ ಪ್ರತ್ಯೇಕಗೊಂಡಾಗ ತಾನು ಆ ರಾಜ್ಯದವನು, ಈ ರಾಜ್ಯದವನೆಂದು ಪ್ರಜೆಗಳು ಹೇಳಿಕೊಂಡು ತಮ್ಮ ರಾಜ್ಯಭಕ್ತಿಯನ್ನು ಬೆಳೆಸಿಕೊಳ್ಳಲು ಮೊದಲಾಯಿತು. ಕಡೆಯ ಅಂಶ ರೋಮನ್ ಕ್ಯಾಥಲಿಕ್ ಚರ್ಚಿನ ಸಂಬಂಧವಾದುದು. ಧನಸಂಗ್ರಹಮಾಡಿ ಸೈನ್ಯಗಳನ್ನು ಪೋಷಿಸಿ ಯುದ್ಧಗಳಲ್ಲಿಯೂ ಜಗಳಗಳಲ್ಲಿಯೂ ತೊಡಗಿದ್ದ ಪುರೋಹಿತ ವರ್ಗದವರು ಧರ್ಮವೆಂದು ಕ್ರೂರಕೃತ್ಯಗಳನ್ನು ನಡೆಸಿದ್ದರು. ದುರಾಸೆಯೆಂಬುದು ಅವರನ್ನು ಹಿಡಿದಿತ್ತು. ಅದರಿಂದ ಜನಸಾಮಾನ್ಯಕ್ಕೆ ಅವರಲ್ಲಿ ಗೌರವಭಕ್ತಿಗಳು ತಗ್ಗಿದುವು. ದುರಾಸೆಗೊಳಗಾಗಿ ಕ್ರೌರ್ಯಕ್ಕೆ ಹಿಂಜರಿಯದೆ ಭೋಗಭಾಗ್ಯಗಳನ್ನನುಭವಿಸುತ್ತಿದ್ದ ಪಾದರಿಗಳಿಗೂ ದಟ್ಟದಾರಿದ್ರ್ಯವನ್ನು ಕಟ್ಟಿಕೊಂಡು ಕ್ಲೇಶಪಟ್ಟವರನ್ನು ಪಚರಿಸುತ್ತ ಪುಣ್ಯಶಾಲಿಯೆನಿಸಿದ್ದ ಫ್ರಾನ್ಸಿಸ್ ಯತಿಗೂ ಎಷ್ಟು ಅಂತರ! ರೋಮನ್ ಕ್ಯಾಥಲಿಕ್ ಚರ್ಚಿನವರಲ್ಲಿ ಕ್ರುಸೇಡುಗಳಿಂದಾದ ಪರಿಣಾಮ ಅದು.

ಅಭ್ಯಾಸಗಳು

೧. ಚಾರ್ಲಮೇನನ ಸಾಮ್ರಾಜ್ಯಕ್ಕೆ ಪವಿತ್ರರೋಮಕಸಾಮ್ರಾಜ್ಯವೆಂಬ ಹೆಸರು ಬಂದುದೇಕೆ?

೨. ಟಂಗ್ ಸಂತತಿಯವರ ಕಾಲದಲ್ಲಿ ಚೀನೀಯರು ನಡೆಸಿದ ಸಾಧನೆಗಳಾವುವು? ಅವುಗಳಲ್ಲಿ ಕಾಲಾನಂತರ ಜಗದ್ವ್ಯಾಪ್ತಿ ಪಡೆದ ಅಂಶಗಳಾವುವು?

೩. ಯುವನ್‌ಚಂಗನ ವೃತ್ತಾಂತವನ್ನು ವಿವರಿಸಿ.

೪. ಕ್ರೈಸ್ತ ಮಠಗಳಿಗೂ ಚರ್ಚುಗಳಿಗೂ ಭೇದವೇನು?

೫. ಕಾನ್‌ಸ್ಟಾಂಟಿನೋಪಲಿನ ಪ್ರಭು ಪೋಪನಲ್ಲಿ ಸಹಾಯ ಭಿಕ್ಷೆಯೇಕೆಮಾಡಿದನು? ಅದರ ಪರಿಣಾಮವೇನು?

೬. ಕ್ರುಸೇಡುಗಳ ಪರಿಣಾಮಗಳನ್ನು ವಿವರಿಸಿ. ಅವುಗಳಲ್ಲಿ ಒಳ್ಳೆಯದನ್ನೂ ಕೆಟ್ಟುದನ್ನೂ ವಿಂಗಡಿಸಿ.

೧೧ನೇ ಅಧ್ಯಾಯ

ಮಂಗೋಲರ ಸಾಮ್ರಾಜ್ಯ

ಮುಖ್ಯಪ್ರಶ್ನೆ ೪೨: ಕ್ರುಸೇಡುಗಳ ಕಾಲದಲ್ಲಿ ಚೀನ ಹೇಗಿತ್ತು? ಬಡಾಖಾನರ ಸಾಮ್ರಾಜ್ಯವಾವುದು?

ಇದುವರೆಗೂ ನಾವು ಕಂಡುದರಲ್ಲಿ ಯುರೋಪಿಗಿಂತ ಏಷ್ಯಖಂಡದ ದೇಶಗಳು ಹೆಚ್ಚಿನ ಸಭ್ಯತೆ ಸಂಸ್ಕೃತಿಗಳನ್ನು ಪಡೆದಿದ್ದ ಅಂಶ ವಿಶದವಾಯಿತು. ಪೈಗಂಬರರ ಸಂದೇಶವನ್ನು ತಿರಸ್ಕರಿಸಿದ ಪಾಶ್ಚಾತ್ಯ ಪ್ರಭುವಿಗೂ ಪುರಸ್ಕರಿಸಿದ ಚೀನ ಚಕ್ರವರ್ತಿಗೂ ಕಾಣುವ ವ್ಯತ್ಯಾಸ ಆ ಅಂಶವನ್ನು ಸೂಚಿಸುವುದು.

ಪ್ರಸಿದ್ಧವಾದ **ಟಂಗ್ ವಂಶಸ್ಥರು** ಚೀನವನ್ನು ಕ್ರಿ.ಶ. ೬೧೮ರಿಂದ ಸುಮಾರು ೯೦೦ರ ವರೆಗೆ ಆಳಿದರು. ಕ್ಯಾಸ್ಪಿಯನ್ ಸಮುದ್ರದ ಅಂಚಿನಿಂದ ಕೊರೆಯದವರೆಗೂ ಅವರ ಸಾಮ್ರಾಜ್ಯ ಹರಡಿತ್ತು. ಪರದೇಶಗಳಿಂದ ಬಂದ ಪ್ರಯಾಣಿಕರನ್ನೂ ವ್ಯಾಪಾರಿಗಳನ್ನೂ ಚೀನೀಯರು ಆದರಿಸುತ್ತಿದ್ದರು; ಅನ್ಯಮತಸ್ಥರನ್ನು ಗೌರವಿಸುತ್ತಿದ್ದರು; ಶಾಂತಿಯೇ ಪರಮಲಕ್ಷ್ಯವೆಂದು ನಂಬಿದ್ದರು; ಕಾಗದ ಮುದ್ರಣಗಳನ್ನಲ್ಲದೆ ಬೌದ್ಧ ಮಠಗಳನ್ನೂ ಪುಸ್ತಕ ಭಂಡಾರಗಳನ್ನೂ ಪೋಷಿಸಿ ಸಂಸ್ಕೃತರಾಗಿದ್ದರು. ಟಂಗ್ ವಂಶಸ್ಥರಾಳಿದ ಕಾಲ ಚೀನದ ಚರಿತ್ರೆಯಲ್ಲಿ ಉನ್ನತಿಯ ಕಾಲ. ಆದರೆ ಇತರ ರಾಜವಂಶಗಳಿಗಾದ ಗತಿಯೇ ಆ ವಂಶಸ್ಥರಿಗೂ ಸಂಭವಿಸಿತು. ಕಡೆಕಡೆಗೆ ಅಸಮರ್ಥರಾದ ಪ್ರಭುಗಳು, ಅವರ ಲೋಲುಪ್ತಿಗಾಗಿ ಹೆಚ್ಚು ವೆಚ್ಚ, ಅದಕ್ಕಾಗಿ ಹೆಚ್ಚಿದ ತೆರಿಗೆ, ಅದರಿಂದ ದೇಶದಲ್ಲಿ ಅತೃಪ್ತಿ, ತನ್ಮೂಲಕ ದಂಗೆಗಳು. ಟಂಗ್ ವಂಶಸ್ಥರ ಆಳಿಕೆ ಆ ರೀತಿಯಲ್ಲಿ ಮುಕ್ತಾಯವಾಯಿತು.

೯೬೦ರ ತರುವಾಯ **ಸುಂಗ್ ವಂಶದವರ** ಕಾಲ. ಆ ಕಾಲದಲ್ಲಿ ಮಂತ್ರಿಯಾಗಿದ್ದ **ವಂಗ್ ಅನ್ ಚಿ** (Wang An Shi) ಎಂಬಾತನು ಸಮಾಧಾನವನ್ನು ನೆಲೆಗೊಳಿಸಲು ಆಡಳಿತದಲ್ಲಿ ಆಶ್ಚರ್ಯಕರವಾದ ಏರ್ಪಾಡುಗಳನ್ನು ಮಾಡಿದನು. ವ್ಯವಸಾಯವನ್ನು ಅಭಿವೃದ್ಧಿಗೊಳಿಸಲು ರೈತರಿಗೆ ಸಾಲ ಕೊಡಿಸಿದ್ದಲ್ಲದೆ ಅವರು ಬೆಳೆದ ಧಾನ್ಯಕ್ಕೆ ನ್ಯಾಯವಾದ ಬೆಲೆ ಸಿಕ್ಕುವಂತೆ ಮಾಡಬೇಕಾದ ವ್ಯವಸ್ಥೆಯನ್ನು ಕೈಕೊಂಡನು. ತೆರಿಗೆಗಳನ್ನು ವಿಧಿಸುವುದರಲ್ಲಿ ಬಡವರಿಗೂ ಭಾಗ್ಯವಂತರಿಗೂ ಮಧ್ಯೆ ನ್ಯಾಯಮಾಡುತ್ತ ಭಾಗ್ಯವಂತರಿಂದ ವರಮಾನದ

ತೆರಿಗೆಯನ್ನು ಎತ್ತುತ್ತಿದ್ದನು. ಆದರೆ ಸುಂಗ್ ವಂಶಜರ ಕಾಲದಲ್ಲಿ ಮಂಗೋಲ ಕುಲದವರ ಹಾವಳಿಯು ಉತ್ತರಭಾಗದಲ್ಲಿ ಮೊದಲಾಯಿತು. ದೇಶದಲ್ಲಿ ನುಗ್ಗಿಬಂದ ಒಂದು ಕುಲದವರನ್ನು ಅಡಗಿಸಲು ಮತ್ತೊಂದು ಕುಲದವರ ಸಹಾಯವನ್ನು ಆಗಿನ ರಾಜರು ಬೇಡಿದರು. ಸಹಾಯಮಾಡಲು ಬಂದವರು ತಾವೇ ದೇಶವನ್ನು ಆಕ್ರಮಿಸಿಬಿಟ್ಟರು. ಸುಂಗ್ ಪ್ರಭುಗಳು ಈ ರೀತಿಯಾಗಿ ದೇಶದ ಉತ್ತರಾರ್ಧವನ್ನು ಕಳೆದುಕೊಂಡು ದಕ್ಷಿಣಾರ್ಧದಲ್ಲಿ ಮಾತ್ರ ಆಳುತ್ತಿದ್ದರು.

ಹನ್ನೆರಡನೆ ಶತಮಾನ ಹುಟ್ಟಿ ಮುಂದೆ ಸಾಗಿತು. ಆಗ ಮಧ್ಯ ಏಷ್ಯದಲ್ಲಿ ಗುಂಪುಗುಂಪುಗಳಾಗಿ ಗುಡಾರಗಳಲ್ಲಿ ವಾಸಮಾಡುತ್ತಿದ್ದ ಮಂಗೋಲ ಕುಲಗಳೆಲ್ಲ ಒಬ್ಬಾತನ ನಾಯಕತ್ವದಲ್ಲಿ ಒಟ್ಟುಗೂಡಿದವು. ೧೧೫೫ರಲ್ಲಿ ಹುಟ್ಟಿದ ಆತನು ತನ್ನ ಐವತ್ತೊಂದನೆ ವರ್ಷದಲ್ಲಿ ಎಲ್ಲ ಕುಲಸ್ಥರ ಸಮ್ಮತಿಯಿಂದ ನಾಯಕನಾಗಿ **ಜೆಂಘೀಸ್ ಖಾನ**ನೆಂದು ಪ್ರಸಿದ್ಧನಾದನು.

ಬೈಕಲ್ ಸರೋವರಕ್ಕೆ ಪಡುವಲಲ್ಲಿ ಇದ್ದುದು ಮಂಗೋಲಕುಲಗಳ ನಾಡು. ಜೆಂಘೀಸ್ ಖಾನನು ನಾಯಕನಾದ ಕೂಡಲೇ ಆತನು ಅಲ್ಟಾಯ್ ಪರ್ವತಶ್ರೇಣಿಯನ್ನು ದಾಟಿ ಟಾರ್ಟರ್ ಗುಂಪಿನವರ ಸ್ನೇಹಮಾಡಿದನು. ತರುವಾಯ ಚೀನವನ್ನು ಮುತ್ತಿ ೧೨೧೪ರಲ್ಲಿ ಪೆಕಿನ್ ಪಟ್ಟಣವನ್ನು ಹಿಡಿದನು. ಮಧ್ಯ ಏಷ್ಯದಲ್ಲಿ ತುರುಷ್ಕರ ರಾಜ್ಯವನ್ನಾಳುತ್ತಿದ್ದ ಪ್ರಭುವು ಜೆಂಘೀಸ್ಖನ ದೂತರನ್ನು ತಿರಸ್ಕಾರದಿಂದ ಕಂಡನು. ಆಗ ಜೆಂಘೀಸ್ಖನು ತುರ್ಕಸ್ತಾನದ ಕಡೆ ಹೊರಟು ಬೊಖಾರ ಮತ್ತು ಸಮರ್ಕಂದ್ ಪಟ್ಟಣಗಳನ್ನು ನಾಶಗೊಳಿಸಿ ಆ ನಿರ್ಭಾಗ್ಯಪ್ರಭುವನ್ನು ಅಟ್ಟಿಸಿಕೊಂಡು ಸಿಂಧುನದಿಯವರೆಗೂ ಬಂದನು. ಆದರೆ ಹಿಂದುಸ್ತಾನವನ್ನು ಪ್ರವೇಶಿಸಲಿಲ್ಲ. ಆಫ್ಘಾನಸ್ತಾನ ಫಾರ್ಸಿಸ್ತಾನಗಳನ್ನು ಗೆದ್ದುಕೊಂಡನು. ಅನಂತರ ಯೂರೋಪಿನ ಮೂಡಲ ಭಾಗದಲ್ಲಿ ನುಗ್ಗಿ ಈಗಿನ ರಷ್ಯದ ದಕ್ಷಿಣಾರ್ಧವನ್ನೆಲ್ಲ ಸ್ವಾಧೀನಪಡಿಸಿಕೊಂಡನು. ನೀಪರ್ ನದಿಯಿಂದ ಪಸಿಫಿಕ್ ಸಾಗರದವರೆಗೆ ಹರಡಿತ್ತು ಆತನ ಸಾಮ್ರಾಜ್ಯ.

ಶತ್ರುಗಳನ್ನು ಧ್ವಂಸಗೊಳಿಸುವುದರಲ್ಲಿ ನಿಷ್ಕರುಣಿಯಾಗಿದ್ದರೂ ಜೆಂಘೀಸ್ಖನು ಸ್ವಭಾವತಃ ಕ್ರೂರಿಯಲ್ಲ. ಸಿಕಂದರ್ ಸೀಸ‌ರುಗಳನ್ನು ವಿಾರಿಸಿದ ಆತನು ಸೈನ್ಯ ಕಟ್ಟುವುದರಲ್ಲಿ ಅತಿಜಾಣನಾಗಿದ್ದನು. ಸಮರ್ಥರಾದ ಅಧಿಕಾರಿಗಳನ್ನು ಗೊತ್ತುಮಾಡುವ ಚತುರನೂ ಆಗಿದ್ದನು. ಜನತೆಯು ಆಡಿಕೊಂಡಂತೆ ಜೆಂಘೀಸ್ ಖಾನನು ರಾಕ್ಷಸನಲ್ಲ. ಆತನಿಗೂ ಆತನ


ಮಾರ್ಕೊ ಪೋಲೊ ಮಾರ್ಗ
ಬ ರಾ ಖಾ ನ ರ ಸಾ ಮ್ರಾ ಜ್ಯ
ಕರಾಕೊರಂ
ಚಾರ್ಲ್‌ಮೇನ್ ಸಾಮ್ರಾಜ್ಯ
ವೆನಿಸ್
ಕಾನ್‌ಸ್ಟಾಂಟಿನೋಪಲ್
ತುರುಷ್ಕರು
ತಬ್ರೀಸ್
ಬಗದಾದ್
ಸಮರ್ಕಂದ್
ಕಾಷ್‌ಘರ್
ಖೋತಾನ್
ಬಾಖ್
ಪೆಕಿನ್
ಆರ್ಮಜ್
ಖಿಲ್ಜಿ ಸುಲ್ತಾನೀ
ಖಿಲಾಫತ್
ವಿಜಯನಗರ
ಸುಮಾತ್ರ

ವಂಶಸ್ಥರಿಗೂ **ಖಾಕನ್** ಅಥವಾ **ಬಡಾಖಾನ್** ಎಂಬ ಬಿರುದಿದ್ದರೂ ಅವರು ಮುಸಲ್ಮಾನರಲ್ಲ. ಆಕಾಶವನ್ನು ದೇವರೆಂದು ತಿಳಿಯುವ ಷಮಾನಮತದವರು ಅವರು. ಅನ್ಯಮತದ್ವೇಷವು ಅವರಲ್ಲಿರಲಿಲ್ಲ. ಸಾಮ್ರಾಜ್ಯದ ಆಡಳಿತಕ್ಕೆ ತಕ್ಕ ಏರ್ಪಾಡನ್ನು ನಡೆಸಿದ ಬಳಿಕ ತನ್ನ ಎಪ್ಪತ್ತೆರಡನೆ ವಯಸ್ಸಿನಲ್ಲಿ (೧೨೨೭) ಜೆಂಘೀಸ್ಖನು ತೀರಿಕೊಂಡನು. ತರುವಾಯ ನಾಯಕತನವನ್ನು ವಹಿಸಿದ ಆತನ ಮಗ **ಉಗದಾಯಿಖಾನನು** (Ogdai Khan) ಸಾಮ್ರಾಜ್ಯವನ್ನು ಇನ್ನೂ ವಿಸ್ತರಿಸಿದ್ದಲ್ಲದೆ ತಾಳ್ಮೆಯಿಂದಲೂ ವಿವೇಕದಿಂದಲೂ ಆಳಿದನು. ಉಗದಾಯಿಖಾನನ ತರುವಾಯ ಖ್ಯಾತಿಪಡೆದವನು **ಮಂಗೂಖಾನ್.** ೧೨೫೯ ರವರೆಗೆ ಆಳಿದ ಮಂಗೂಖಾನನ ಕಾಲದಲ್ಲಿ ತಿಬ್ಬತ್ ಪ್ರದೇಶವು ಸಾಮ್ರಾಜ್ಯದಲ್ಲಿ ಸೇರಿತು. ಆಗ ಫಾರ್ಸಿಸ್ತಾನದಲ್ಲಿ ಆಳುತ್ತಿದ್ದ **ಹುಲಗು ಖಾನನು** ಬಗದಾದಿನ ಖಲೀಫನನ್ನು ಕೊನೆಗಾಣಿಸಿಬಿಟ್ಟನು.

ಮಂಗೋಲರ ಸಾಮ್ರಾಜ್ಯವೆಂಬುದು ಎಷ್ಟು ವಿಸ್ತಾರವಾಯಿತು! ಏಷ್ಯ ಮತ್ತು ಯೂರೋಪ್ ಖಂಡಗಳೆರಡರಲ್ಲಿಯೂ ಅಖಂಡವಾಗಿ ಹಬ್ಬಿತ್ತು. ಹಿಂದೆಂದೂ ಇಂತಹ ಸಾಮ್ರಾಜ್ಯವಿರಲಿಲ್ಲ. ಭೂಮಂಡಲವನ್ನೇ ಮಂಗೋಲರು ಆಕ್ರಮಿಸಿಕೊಂಡಂತಿತ್ತು. ಈ ಸಾಮ್ರಾಜ್ಯದ ಅರಿವೇ ಐರೋಪ್ಯರಿಗೆ ಇರಲಿಲ್ಲ. ನಾಲ್ಕೈದು ಸಣ್ಣ ರಾಜ್ಯಗಳ ಜನರಿಗೆ ಮತಗುರುವಾಗಿದ್ದ ಪೋಪನು ಮಂಗೂಖಾನನ ಬಳಿಗೆ ದೂತನನ್ನು ಕಳುಹಿಸಿ ಯೂರೋಪನ್ನು ಪುನಃ ಮುತ್ತದಿರಬೇಕೆಂದು ಬೆದರಿಸುವ ಯೋಚನೆಮಾಡಿದ್ದನು. ಕ್ರುಸೇಡಿಗೆಂದು ಹೊರಟು ತುರುಷ್ಕರ ಕೈಸೆರೆಯಾಗಿದ್ದ ಫ್ರಾನ್ಸ್ ರಾಜನೊಬ್ಬಾತನು ತಾನೂ ಖಾನನೂ ಸರಿಸಮಾನರಾಗಿ ಸೇರಿ ಮುಸಲ್ಮಾನರನ್ನು ಸೋಲಿಸುವ ಯೋಚನೆ ಮಾಡಿ ಮಂಗೂಖಾನನ ಬಳಿ ರಾಯಭಾರ ನಡೆಸಿದನಂತೆ. ಖಾನನೆದುರಿಗೆ ಫ್ರಾನ್ಸ್ ರಾಜನೊಬ್ಬ ಸಣ್ಣ ಪಾಳೆಯಗಾರನಿಗೆ ಸಮಾನ. ಆದರೆ ಮತ ವೈಷಮ್ಯವನ್ನು ಕಟ್ಟಿಕೊಂಡು ಯುದ್ಧಗಳನ್ನು ಬೆಳೆಸುವ ಇಷ್ಟ ಖಾನನಿಗಿರಲಿಲ್ಲ.

ಮಂಗೂಖಾನನ ತರುವಾಯ **ಕುಬ್ಲಾಯಿ ಖಾನನು** ವಿಖ್ಯಾತನಾದನು. ಚೀನಕ್ಕೆ ಅಧಿಪತಿಯಾಗಿದ್ದುದರಿಂದ ಕುಬ್ಲಾಯಿಯು ಚೀನೀ ಸಂಸ್ಕೃತಿ ಯನ್ನು ಕಂಡು ಮೆಚ್ಚಿದ್ದನು. **ಕರಾಕೊರಂ** ಎಂಬ ಪುರಾತನ ರಾಜಧಾನಿಯನ್ನು ಬಿಟ್ಟು ಕುಬ್ಲಾಯಿಖಾನನು **ಪೆಕಿನ್** ನಗರವನ್ನು ರಾಜಧಾನಿಯಾಗಿ ಮಾಡಿ ಕೊಂಡನು. ೧೨೯೪ ರವರೆಗೆ ಆಳಿದ ಆತನು ಆನಾಂ ಬರ್ಮಗಳನ್ನು ಗೆದ್ದನು. ಜಪಾನೀಯರನ್ನೂ ಗೆಲ್ಲಲು ಇಷ್ಟಪಟ್ಟು ನೌಕಾಬಲವಿಲ್ಲದೆ ಸುಮ್ಮನಾದನು.

ಸಾಮ್ರಾಜ್ಯವಿಸ್ತಾರವಿದ್ದಂತೆ ಆತನ ಮನೋಧರ್ಮವೂ ವಿಶಾಲವಾಗಿದ್ದ ಸಂಗತಿ ಬಹಳ ಆಶ್ಚರ್ಯಕರ. ಸ್ವಮಾಮತದವನಾದರೂ ಇತರ ಮತಸ್ಥರಲ್ಲಿ ಆತನಿಗೆ ಪರಮಾದರ; ದೂರದೇಶಗಳ ಜನರ ಪರಿಸ್ಥಿತಿಯನ್ನು ತಿಳಿಯಲು ಬಹು ಕುತೂಹಲ. ಅಕ್ಬರ್ ಪಾದಷಹನಲ್ಲಿದ್ದ ಮನಸ್ಸಿನ ಔದಾರ್ಯ ಕುಬ್ಲಾಯಿಖಾನನಲ್ಲಿತ್ತು.

ಮುಖ್ಯಪ್ರಶ್ನೆ ೪೩ : ಮಾರ್ಕೊಪೋಲೊ ವೃತ್ತಾಂತವೇನು ?

ಕುಬ್ಲಾಯಿಖಾನನ ಕಾಲದಲ್ಲಿ ಕಪ್ಪುಸಮುದ್ರದ ಬಳಿಗೆ ವ್ಯಾಪಾರಕ್ಕೆಂದು ಹೊರಟಿದ್ದ ಇಬ್ಬರು ಐರೋಪ್ಯ ಸೋದರರು ರಷ್ಯದ ದಕ್ಷಿಣಭಾಗದಲ್ಲಿ ಸಂಚರಿಸುತ್ತಿದ್ದರು. ಅವರನ್ನು ಖಾನನ ಕಡೆಯವರು ಕಂಡು ಆದರಿಸಿ ಚೀನಕ್ಕೆ ಕರೆದುಕೊಂಡು ಹೋದರು. ವೆನಿಸ್ ನಗರದವರು ಅವರಿಬ್ಬರು. ಕುಬ್ಲಾಯಿ ಖಾನನು ಅವರನ್ನು ವಿಶ್ವಾಸದಿಂದ ಕಂಡು ಐರೋಪ್ಯರ ಸ್ಥಿತಿಗತಿಗಳನ್ನು ವಿಚಾರಿಸಿ ಅವರ ಮತವನ್ನು ತಿಳಿಯುವ ಉದ್ದೇಶದಿಂದ ಪೋಪನ ಬಳಿಗೊಂದು ಸಂದೇಶವನ್ನು ಅವರಿಬ್ಬರ ಮೂಲಕ ಕಳುಹಿಸಿಕೊಟ್ಟನು. ಕ್ರೈಸ್ತ ಧರ್ಮವನ್ನು ತಿಳಿಯಪಡಿಸಲು ಒಂದುನೂರುಮಂದಿ ಮತಗುರುಗಳನ್ನೂ ವಿದ್ವಾಂಸರನ್ನೂ ಕೊಟ್ಟುಕಳುಹಿಸಬೇಕೆಂಬುದು ಆ ಸಂದೇಶದ ಸಾರಾಂಶ. ಆ ಸಂದೇಶವನ್ನು ಪೋಪನು ಗೌರವಿಸಲಾಗಲಿಲ್ಲ. ಎರಡು ವರ್ಷಗಳ ಪ್ರಯತ್ನಮಾಡಿದ ಬಳಿಕ ಆತನು ಇಬ್ಬರು ವಿರಕ್ತರನ್ನು ಗೊತ್ತುಮಾಡಿದನು. ಆ ಇಬ್ಬರೂ ದೂರ ಪ್ರಯಾಣವೆಂದು ಭಯಭ್ರಾಂತಿಗಳಿಂದ ದಿಕ್ಕೆಟ್ಟು ತಪ್ಪಿಸಿಕೊಂಡುಬಿಟ್ಟರು. ಏಷ್ಯದ ಪ್ರಭು ಪ್ರಕಟಿಸಿದ ಮೈತ್ರಿಯನ್ನು ಐರೋಪ್ಯರು ಬೆಳೆಸಿಕೊಳ್ಳುವ ಯೋಗ್ಯತೆಯನ್ನು ಪಡೆದಿರಲಿಲ್ಲ. ಯೂರೋಪ್ ಅಷ್ಟು ದುರವಸ್ಥೆಯಲ್ಲಿತ್ತು.

ಆದರೆ ಆ ಸೋದರರಿಬ್ಬರೂ **ಮಾರ್ಕೊ ಪೋಲೊ** (Marco Polo) ಎಂಬ ತಮ್ಮನನ್ನು ಕರೆದುಕೊಂಡು ಪುನಃ ಹೊರಟರು. ಪ್ಯಾಲೆಸ್ಟೈನ್, ಆರ್ಮಿನಿಯ, ಫಾರ್ಸಿಸ್ತಾನ್ ಮೂಲಕ ತುರ್ಕಸ್ತಾನಕ್ಕೂ ಅಲ್ಲಿಂದ ಪೆಕಿನ್ ನಗರಕ್ಕೂ ಪ್ರಯಾಣಮಾಡಿದರು. ಖಾನನು ಎಂದಿನಂತೆ ಅವರನ್ನು ಆದರಿಸಿ ಮಾರ್ಕೊವಿಗೆ ಒಂದು ಹುದ್ದೆಯನ್ನು ಕೊಡಿಸಿದನು. ಮಾರ್ಕೊ ಚೀನ ಜಪಾನ್ ಬರ್ಮ ಗಳಲ್ಲಿ ಸಂಚರಿಸಿ ಆ ದೇಶಗಳ ಪರಿಚಯ ಪಡೆದನು. ಸ್ವದೇಶಕ್ಕೆ ಆ ಸೋದರರು ಹಿಂತಿರುಗಿ ಹೊರಟಾಗ ಕುಬ್ಲಾಯಿಖಾನನು ಅವರನ್ನು ಫಾರ್ಸಿಸ್ತಾನದಲ್ಲಿದ್ದ ತನ್ನ ಸೋದರನ ಬಳಿಗೆ ಕಳುಹಿಸಿದನು. ಸಮುದ್ರಮಾರ್ಗವಾಗಿ ಹೊರಟು ಸುಮಾತ್ರ ಮತ್ತು ಹಿಂದುಸ್ತಾನಗಳನ್ನು ಕಂಡು ಪೋಲೊಸೋದರರು

ಫಾರ್ಸಿಸ್ತಾನವನ್ನು ತಲಪಿದರು. ಅಲ್ಲಿಂದ ಮುಂದೆ ಕಾನ್‌ಸ್ಟಾಂಟಿ ನೋಪಲ್ ಮಾರ್ಗವಾಗಿ ವೆನಿಸ್‌ನಗರವನ್ನು ಸೇರಿದರು.

ಹಿಂತಿರುಗಿದಾಗ ಅವರನ್ನು ಸ್ವಜನರೇ ಗುರುತುಹಿಡಿಯದಾದರು. ಅವರು ವಿವರಿಸಿದ ದೇಶಕೋಶಗಳ ಸುದ್ದಿಗಳನ್ನು ನಂಬದಾದರು. ನಂಬಿಕೆ ಹುಟ್ಟಿಸು ವುದು ಕಷ್ಟವಾಯಿತು. ಐರೋಪ್ಯರು ಅಷ್ಟು ಅಜ್ಞಾನದಲ್ಲಿದ್ದರು. ಕಡೆಗೆ ಸೋದರರು ಒಂದು ಔತಣ ಕೊಟ್ಟರು. ಆ ಸಮಯದಲ್ಲಿ ಇಷ್ಟಮಿತ್ರರೆಲ್ಲರೂ ಸೇರಿದ್ದರು. ಆಗ ತಮ್ಮ ಪ್ರಯಾಣದಲ್ಲಿ ಉಪಯೋಗಿಸಿದ್ದ ಬೊಂತೆಗಳಂತಹ ನಿಲುವಂಗಿಗಳನ್ನು ಕತ್ತರಿಸಿ' ಅವುಗಳಲ್ಲಿ ಬಚ್ಚಿಟ್ಟಿದ್ದ ರತ್ನಗಳನ್ನು ಚೆಲ್ಲಿದರು. ಕೆಂಪುಗಳು, ಪಚ್ಚೆಗಳು, ಮಾಣಿಕ್ಯಗಳು, ವಜ್ರಗಳು ಗುಡ್ಡೆಗುಡ್ಡೆಗಳಾಗಿ ಉರು ಳಿದುವು. ಅವುಗಳನ್ನು ಕಂಡ ಇತರರು ಪರಮಾಶ್ಚರ್ಯಗೊಂಡರು. ಆದಾಗ್ಯೂ ಜನರು ಪೋಲೊ ಸೋದರರ ವೃತ್ತಾಂತವನ್ನು ನಂಬಲೇ ಇಲ್ಲ. ಮಾರ್ಕೊ ಪೋಲೊ ನಡೆಸಿದ ಪ್ರಯಾಣದ ವಿವರವು ಕಡೆಗೊಂದು ಪುಸ್ತಕರೂಪ ಪಡೆ ಯಿತು. ಅದನ್ನು ಕೃತ್ರಿಮವೆಂದೇ ಬಹುಕಾಲ ಐರೋಪ್ಯರು ಭಾವಿಸಿದ್ದರು.

ಮುಖ್ಯಪ್ರಶ್ನೆ ೪೪ : ಉಸ್ಮಾನ್ಲಿ ತುರುಷ್ಕರಿಂದ ಯೂರೋಪಿಗೆ ಸಂಭವಿಸಿದ ಆಪತ್ತು ಯಾವುದು?

ಕುಬ್ಲಾಯಿಖಾನನ ವಂಶ ಚೀನಸಾಮ್ರಾಜ್ಯದಲ್ಲಿ ಸ್ಥಾಪಿತವಾಯಿತು ಆತನ ವಂಶಸ್ಥರ ಕಾಲದಲ್ಲಿ ಮಂಗೋಲಸಾಮ್ರಾಜ್ಯದ ಇತರ ಭಾಗಗಳು ಬೇರೆಯಾದವು. ೧೩೬೯ ರಲ್ಲಿ ಮಧ್ಯ ಏಷ್ಯದಲ್ಲಿ **ತೈಮೂರ್‌ಲಂಗ್** ಎಂಬ ಶೂರನು ರಾಜ್ಯಕಟ್ಟಿದನು. ಆತನ ವೇಳೆಗೆ ಅಲ್ಲಿ 'ಇಸ್ಲಾಂ' ಪ್ರಚಾರವಾಗಿತ್ತು. ಸಾಹಸಪರಾಕ್ರಮಗಳನ್ನು ಪಡೆದಿದ್ದಾಗ್ಯೂ ತೈಮೂರನು ಹಿಂದಿನ ಜೆಂಘೀಸ್, ಮಂಗೂ, ಕುಬ್ಲಾಯಿಖಾನರಂತೆ ವಿಶಾಲ ಹೃದಯನಾಗಿರಲಿಲ್ಲ. ದಿಲ್ಲಿಯಿಂದ ಏಷ್ಯ ಮೈನರ್‌ವರೆಗೆ ತನ್ನ ಸೈನ್ಯಗಳನ್ನೋಡಾಡಿಸಿ ಎಲ್ಲೆಲ್ಲಿಯೂ ಜಯ ಪಡೆದಾಗ್ಯೂ ತೈಮೂರನಿಗೆ ಕೊಳ್ಳೆ ಹೊಡೆಯುವುದರಲ್ಲಿಯೂ ನಾಶಗೊಳಿಸು ವುದರಲ್ಲಿಯೂ ಇದ್ದಷ್ಟು ಆಸೆ ಬೇರಾವುದರಲ್ಲಿಯೂ ಇರಲಿಲ್ಲ. ತಾನು ಮುಸ ಲ್ಮಾನನೆನಿಸಿದ್ದರೂ ಇತರ ಮುಸಲ್ಮಾನರಾಜ್ಯಗಳನ್ನು ಆಕ್ರಮಿಸಿ ಕಠೋರ ರೀತಿಯಲ್ಲಿ ನರಹತ್ಯಗಳನ್ನು ನಡೆಸಿದನು. ತೈಮೂರನ ವಂಶದಲ್ಲಿ ಹುಟ್ಟಿದ ಬಾಬರನ ವೃತ್ತಾಂತವನ್ನು ಮುಂದೆ ತಿಳಿಯುವೆವು. ಆತನೇ ೧೫೨೬ ರಲ್ಲಿ ದಿಲ್ಲಿಯನ್ನು ಗೆದ್ದು ಮುಘಲ್‌ಬಾದಶಾಹಿಯನ್ನು ಸ್ಥಾಪಿಸಿದವನು.

ಮತ್ತೊಂದು ಸಂಗತಿಯನ್ನು ನಾವು ತಿಳಿಯಬೇಕು. ಜೆಂಘೀಸ್‌ಖಾನನು ದೇಶಗಳನ್ನು ಆಕ್ರಮಿಸುತ್ತಿದ್ದ ಸಮಯದಲ್ಲಿ ತುರುಷ್ಕರಿಗೆ ವಿಪತ್ಕಾಲವೊದಗಿ ದಂತಿತ್ತಷ್ಟೆ. ಏರಲ್ ಸಮುದ್ರದ ಒತ್ತಿನಲ್ಲಿದ್ದ ತುರುಷ್ಕರ ಗುಂಪೊಂದು ಅಲ್ಲಿಂದ ಓಡಿಹೋಗಿ ಏಷ್ಯ ಮೈನರ್ ಪ್ರದೇಶದಲ್ಲಿ ನೆಲೆಸಿತ್ತು. ಕೆಲಕಾಲ ವಾದ ಮೇಲೆ ಅವರೊಂದು ಸಣ್ಣ ರಾಜ್ಯವನ್ನು ಕಟ್ಟಿಕೊಂಡರು. ಬರಬರುತ್ತ ಆ ರಾಜ್ಯವನ್ನು ವಿಸ್ತರಿಸಿಕೊಂಡು ಉಸ್ಮಾನ್ಲಿ (Ottoman) ತುರುಷ್ಕರೆಂದು ಪ್ರಖ್ಯಾತರಾದರು. ಏಷ್ಯ ಮೈನರ್ ಪ್ರದೇಶವನ್ನಲ್ಲದೆ ಯೂರೋಪಿನ ತೀರದ ಭಾಗಗಳನ್ನೂ ಆಕ್ರಮಿಸಿಕೊಂಡ ತರುವಾಯ ಅವರು ೧೪೦೦ರ ವೇಳೆಗೆ ಕಾನ್‌ಸ್ಟಾಂಟಿನೋಪಲ್ ನಗರವನ್ನು ಗೆಲ್ಲಲು ಸಿದ್ಧರಾದರು. ಅಲ್ಲಿ ಇನ್ನೂ ಮೂಡಲ ಸಮ್ರಾಟನೆನಿಸಿದವನಿದ್ದನು. ಗ್ರೀಕ್ ವಿದ್ವಾಂಸರಿಗೆ ಆ ಪಟ್ಟಣ ಆಶ್ರಯವಾಗಿತ್ತು. ಪಟ್ಟಣವನ್ನುಳಿಸಿಕೊಳ್ಳಲು ಆ ನಿರ್ಭಾಗ್ಯ ಪ್ರಭುವು ನಡೆಸಿದ ಪ್ರಯತ್ನಗಳು ಕಡೆಗೆ ವ್ಯರ್ಥವಾದವು. ಆ ಪಟ್ಟಣದಲ್ಲಿ ನೆಮ್ಮದಿ ಗಾಣದ ವಿದ್ವಾಂಸರು ಇಟಲಿಗೆ ಹೊರಡಲು ಅನುವಾದರು. ಇದರಿಂದ ಮುಂದೆ ಮಹತ್ಪರಿಣಾಮ ನಡೆಯುವಂತಾಯಿತು.

ಒಟ್ಟಿನಲ್ಲಿ ಮಧ್ಯಮಯುಗವೆಂದು ಐರೋಪ್ಯರ ಚರಿತ್ರೆಯಲ್ಲಿ ಗೊತ್ತಾದ ಕಾಲದಲ್ಲಿ ಏಷ್ಯಖಂಡವು ಸಂಸ್ಕೃತಿ ಸಂಪನ್ನವಾಗಿಯೂ ಪ್ರಸನ್ನವಾಗಿಯೂ ಇತ್ತು. ಯೂರೋಪ್‌ಖಂಡದ ದೇಶಗಳಲ್ಲಿ ಅಜ್ಞಾನವೂ ಮತದ್ವೇಷವೂ ತುಂಬಿದ್ದುವು. ಮಂಗೋಲರು ಸಾಮ್ರಾಜ್ಯ ಕಟ್ಟಿದ ಕಾಲದಲ್ಲಿ ಪರಸ್ಪರ ಸಂಬಂಧಗಳು ಬೆಳೆಯಬಹುದಾಗಿತ್ತು; ಆದರೆ ಹಾಗಾಗಲಿಲ್ಲ. ಆ ಸಂದರ್ಭದಲ್ಲಿ ಐರೋಪ್ಯರಿಗೆ ಪರಿಚಯವಾದ ಎರಡು ವಸ್ತುಗಳು ಕಾಲಕ್ರಮದಲ್ಲಿ ಯೂರೋಪನ್ನು ರೂಪಾಂತರಗೊಳಿಸಿದವು. ನಾವಿಕರ ದಿಕ್ಸೂಚಿ (compass) ಯೊಂದು, ಕಾಗದ ಮುದ್ರಣಗಳೆಂಬುದಿನ್ನೊಂದು. ಅವುಗಳ ಉಪಯೋಗದಿಂದ ಐರೋಪ್ಯರ ಭಾಗ್ಯೋದಯವೇ ಆಯಿತು.

ಅಭ್ಯಾಸಗಳು

೧. ಜೆಂಘೀಸ್‌ಖಾನನ ಸಾಮ್ರಾಜ್ಯವೆಷ್ಟು ವಿಸ್ತಾರವಾಗಿದ್ದಿತೆಂದು ಸೂಚಿಸಿ.

೨. ಮಾರ್ಕೊ ಪೋಲೊ ವೃತ್ತಾಂತವನ್ನು ಬರೆಯಿರಿ.

೩. ಏಷ್ಯಕ್ಕೂ ಯೂರೋಪಿಗೂ ಮಧ್ಯಮಯುಗದಲ್ಲಿ ಎಂತಹ ಸಂಬಂಧಗಳು ನಡೆದವು? ನಡೆಯದೆಹೋದ ಸಂಬಂಧಗಳು ಯಾವುವು?

೧೨ನೇ ಅಧ್ಯಾಯ

ಪ್ರಾಟೆಸ್ಟೆಂಟರ ಉದ್ಯಮ

ಮುಖ್ಯಪ್ರಶ್ನೆ ೪೫: ವಿಕ್ಲಿಫ್ ಮತ್ತು ಸರ್ ಟಾಮಸ್‌ಮೋರ್ ಎಂಬಿಬ್ಬರ ಮನೋಧರ್ಮವೆಂಥದು?

ಮಧ್ಯಮಯುಗದಲ್ಲಿ ಪಡುವಲ ಐರೋಪ್ಯರು ಅಜ್ಞಾನದಲ್ಲಿದ್ದು, ತಮ್ಮ ಮತದಲ್ಲಿ ಅಂಧಶ್ರದ್ಧೆಯನ್ನು ಬೆಳೆಸಿ, ಇತರ ಮತಗಳನ್ನು ಸಹಿಸಲಾರದೆ ಇದ್ದರಷ್ಟೆ! ರೋಮನ್ ಕ್ಯಾಥಲಿಕ್ ಚರ್ಚೆಂಬುದು ಅತಿಪ್ರಬಲವಾಗಿದ್ದ ಕಾಲ ಅದು. ಜನಸಾಮಾನ್ಯರು ಆ ಚರ್ಚುಗಳ ಪಾದರಿಗಳಲ್ಲಿ ಭಯಭಕ್ತಿಗಳಿಂದಿದ್ದರು. ಬೈಬಲಿದ್ದುದೂ ಪ್ರಾರ್ಥನೆ ನಡೆಯುತ್ತಿದ್ದುದೂ ಲ್ಯಾಟಿನ್ ಭಾಷೆಯಲ್ಲಿ. ಓದುಬರೆಹ ಕಲಿತಿದ್ದವರು ಪುರೋಹಿತವರ್ಗದವರು ಮಾತ್ರ. ಆದುದರಿಂದ ಪುರೋಹಿತರು ಹೇಳಿದುದು ಪರಮಪ್ರಮಾಣವೆನ್ನಿಸಿತ್ತು. ಧರ್ಮ ವಿಚಾರಗಳನ್ನು ತಿಳಿಯಹೇಳಲು ಪುರೋಹಿತವರ್ಗದವರಿಗೆ ಮಾತ್ರವೇ ಅಧಿಕಾರವೆಂಬ ನಂಬಿಕೆ ಆ ಪರಿಸ್ಥಿತಿಯಲ್ಲಿ ಹುಟ್ಟಿ ಭದ್ರಗೊಂಡಿತು. ಪುರೋಹಿತ ವರ್ಗದವರಲ್ಲಿ ಅಗೌರವ ತೋರುವುದು ದೈವದೂಷಣೆಯಷ್ಟು ಪಾತಕವೆನ್ನಿಸಿತ್ತು. ಪುರೋಹಿತಗುಂಪಿನವರಿಗೆ ಧರ್ಮವಿಚಾರದಲ್ಲಿ ಸರ್ವಾಧಿಕಾರವಿದ್ದಿತು.

ಪುರೋಹಿತರ ಬೋಧೆಗೆ ಪ್ರತಿಯಾಗಿ ಹೇಳಿದವರಿಗೆ ಆ ಕಾಲದಲ್ಲಿ ಕ್ರೂರವಾದ ದಂಡನೆಯೇ ಗತಿಯಾಗಿತ್ತು. ಶಾಸ್ತ್ರಜ್ಞಾನ ಪಡೆಯಲು ಸಾಹಸಪಟ್ಟವರು ಹಲವರು ಅಂತಹ ಹಿಂಸೆಗೊಳಗಾದರು. ಬೈಬಲ್ಲಿನಲ್ಲಿ ಹೇಳಿರುವಂತೆ ಸೃಷ್ಟಿಕ್ರಿಯೆಗೆ ಸ್ವಲ್ಪ ವ್ಯತ್ಯಾಸವಾದ ಅಂಶವನ್ನು ಯಾರಾದರೂ ಎತ್ತಿದರೆ ಧರ್ಮಾಧಿಕಾರಿಗಳಾಗಿದ್ದ ಪುರೋಹಿತರು ಕೋಪಗೊಳ್ಳುತ್ತಿದ್ದರು. ಶಾಸ್ತ್ರಜ್ಞಾನಸಾಧನೆಗೆ ಆ ಕಾಲದಲ್ಲೆಲ್ಲ ಪ್ರಸಿದ್ಧನಾದ "**ರಾಜರ್ ಬೇಕನ್**" (Roger Bacon) ಎಂಬಾತನ ವೃತ್ತಾಂತವನ್ನು ಮುಂದೆ ಕಾಣುವೆವು. ಧರ್ಮಾಧರ್ಮ ವಿಚಾರಮಾಡುತ್ತ ರೋಮನ್ ಕ್ಯಾಥಲಿಕ್ ಮತಗುರುಗಳನ್ನು ವಿರೋಧಿಸಿದವರಲ್ಲಿ ಮೊದಲಿಗನು "**ಜಾನ್ ವಿಕ್ಲಿಫ್**" (John Wycliffe) ಎಂಬ ಇಂಗ್ಲೀಷರವನು.

ಹದಿನಾಲ್ಕನೆ ಶತಮಾನದಲ್ಲಿದ್ದವನು ವಿಕ್ಲಿಫ್. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ; ನಿಷ್ಕಲ್ಮಷಚಿತ್ತನು. ಧರ್ಮದ ಹೆಸರಿನಲ್ಲಿ ನಡೆಯು

ತ್ತಿದ್ದ ಕೆಲವು ಅನ್ಯಾಯಗಳನ್ನು ಆತನು ಸಹಿಸದವನಾದನು. ಅವುಗಳನ್ನು ಆಕ್ಷೇಪಿಸಲು ಮೊದಲಿಟ್ಟು ಚರ್ಚಿನ ಪುರೋಹಿತರು ಹೇಳುತ್ತಿದ್ದುದಕ್ಕೆ ವಿರೋಧಿಯಾದನು. ಚರ್ಚಿನವರು ಅನುಸರಿಸುತ್ತಿದ್ದ ಕೆಲವು ಆಚಾರಗಳನ್ನೂ ಬೋಧಿಸುತ್ತಿದ್ದ ಕೆಲವು ಅಂಶಗಳನ್ನೂ ಖಂಡಿಸಿ ತನ್ನ ಪಕ್ಷವೇ ಸತ್ಯವೆಂದು ಕಾಣಿಸಿಕೊಡಲು ಕ್ರೈಸ್ತನ ಉಪದೇಶವನ್ನೊಳಗೊಂಡ ಬೈಬಲ್ ಭಾಗಗಳನ್ನು ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿದನು. ಗುರುಗಳ ಉಪದೇಶಕ್ಕೆ ಕ್ರೈಸ್ತನ ವಾಕ್ಯಗಳು ಪ್ರಮಾಣವಾಗಿರಬೇಕೆಂದು ಸೂಚಿಸಿ ಆ ವಾಕ್ಯಗಳ ಅರ್ಥವನ್ನು ತಾನೇ ವಿವರಿಸಿದನು. ತಾವು ಹೇಳಿದ ಅರ್ಥವೇ ಪ್ರಮಾಣವಾಗಿರತಕ್ಕುದೆಂದೂ ಇತರರು ವಿಚಾರಮಾಡದೆ ಅದನ್ನು ಅಂಗೀಕರಿಸಬೇಕೆಂದೂ ಪುರೋಹಿತವರ್ಗದವರ ವಾದ. ಅಂತಹ ಸರ್ವಾಧಿಕಾರವು ಅವರಿಗೆ ಸಲ್ಲದೆಂದು ವಿಕ್ಲಿಫ್ ಸ್ಪಷ್ಟಗೊಳಿಸಿ ಯಾರುಬೇಕಾದರೂ ಬೈಬಲ್ ಪುಸ್ತಕವನ್ನೋದಿಕೊಂಡು ಅದರಂತೆ ನಡೆಯತಕ್ಕುದೆಂದು ಪ್ರತಿವಾದ ನಡೆಸಿದನು. ಆ ಸಂದರ್ಭದಲ್ಲಿ ವಿಕ್ಲಿಫ್ ದಂಡನೆಗೆ ಗುರಿಯಾಗಿ ಸೆರೆಯನ್ನನುಭವಿಸಬೇಕಾಯಿತು. ಆದರೆ ವಿಕ್ಲಿಫ್ ಆರಂಭಿಸಿದ ಕೆಲಸ ನಿಂತುಹೋಗಲಿಲ್ಲ.

ಬೊಹೀಮಿಯ (Bohemia) ಎಂಬ ಸಣ್ಣ ದೇಶದಲ್ಲಿರುವ ಜನರಿಗೆ ಜೆಕ್ (Czech) ಗುಂಪಿನವರೆಂದು ಹೆಸರು. ಆ ಜನರು ಪರಾಕ್ರಾಂತರಾಗಿ ಪರಾಧೀನರಾಗಿಯೇ ಇರಬೇಕಾಗಿತ್ತು. ಅವರಲ್ಲಿ **ಜಾನ್ ಹಸ್** (John Huss) ಎಂಬಾತನು **ಪ್ರಾಗ್** (Prague) ಪಟ್ಟಣದ ವಿದ್ಯಾನಿಲಯದಲ್ಲಿ ಪಂಡಿತನಾಗಿದ್ದನು. ಆತನು ವಿಕ್ಲಿಫ್ ಶಿಷ್ಯ. ಆತನೂ ರೋಮನ್ ಕ್ಯಾಥಲಿಕ್ ಮತಾಧಿಕಾರಿಗಳಿಗೆ ವಿರೋಧಿಯಾದನು. ಎಷ್ಟು ಬಲವಂತ ಮಾಡಿದರೂ ಆತನು ತನ್ನ ಅಭಿಪ್ರಾಯಗಳನ್ನು ಬಿಡದಾದನು. ಅಧಿಕಾರದಲ್ಲಿದ್ದವರು ಕಡೆಗೆ ಆತನನ್ನು ಕಂಬಕ್ಕೆ ಕಟ್ಟಿ ಜೀವಂತನಾಗಿದ್ದಾಗಲೇ ಸುಡಿಸಿದರು. ಪರಂಪರಾಗತವಾಗಿದ್ದ ತಮ್ಮ ಸರ್ವಾಧಿಕಾರಕ್ಕೆ ವಿರೋಧಿಗಳಾದವರನ್ನು ಧರ್ಮಭ್ರಷ್ಟರೆಂದು ನಿರ್ಧರಿಸಿ ಕ್ರೂರಶಿಕ್ಷೆಗಳಿಗೆ ಗುರಿಪಡಿಸಿದರು. ತಮ್ಮಲ್ಲಿ ಅವಿಶ್ವಾಸವನ್ನೂ ವಿರೋಧವನ್ನೂ ತೋರಿದವರ ಬೋಧೆಯನ್ನಡಗಿಸಬೇಕೆಂದು ರೋಮನ್ ಕ್ಯಾಥಲಿಕ್ ಧರ್ಮಾಧಿಕಾರಿಗಳು ಸಂಕಲ್ಪಮಾಡಿದರು. ಅಂತಹವರನ್ನು **ಹೆರೆಟಿಕ್ಸ್** (heretics) ಅಥವಾ ಪಾಷಂಡರೆಂದು ಕರೆದು ಅವರನ್ನು ವಿಚಾರಿಸಿ ದಂಡಿಸಲು ವಿಚಾರಣೆಯಸ್ಥಾನಗಳನ್ನು ಗೊತ್ತುಮಾಡಿಕೊಂಡರು.


ಎಲ್ಲ ಕ್ಯಾಥಲಿಕ್ಕರೂ ಆ ಬಗೆಯ ಕ್ರೌರ್ಯವನ್ನೊಪ್ಪಲಿಲ್ಲ. ಸಂಕುಚಿತ ಚಿತ್ತವೃತ್ತಿಯನ್ನೂ ಒಪ್ಪಲಿಲ್ಲ. ಕ್ಯಾಥಲಿಕ್ಕರಲ್ಲಿ ಅನೇಕರು ತಮ್ಮ ಮತದಲ್ಲಿ

ನಿಶ್ಚಲಭಕ್ತಿಯನ್ನಿಟ್ಟು ಲೋಪಗಳನ್ನೂ ದೋಷಗಳನ್ನೂ ತಿಳಿದು ಅವುಗಳನ್ನು ತೊಲಗಿಸಲು ಆದಷ್ಟುಮಟ್ಟಿಗೆ ಪ್ರಯತ್ನಿಸಿದರು. ಅಂತಹವರಲ್ಲಿ **ಇರಾಸ್ಮಸ್** (Erasmus) ಎಂಬ ಡಚ್ಚರವನೂ **ಸರ್ ಟಾಮಸ್ ಮೋರ್** (Sir Thomas More) ಎಂಬ ಇಂಗ್ಲೀಷರವನೂ ಸುಪ್ರಸಿದ್ಧರು. ಇರಾಸ್ಮಸ್ ಪ್ರಸಿದ್ಧ ವಿದ್ವಾಂಸ. ಮೋರ್ ಇಂಗ್ಲಂಡಿನ ಲಾರ್ಡ್ ಚಾನ್ಸೆಲರ್ ಪದವಿಯಲ್ಲಿ ಕೆಲಕಾಲವಿದ್ದವನು. ಶ್ರೀಮಂತಸಭೆ ಅಥವಾ ಲಾರ್ಡ್ಸ್ ಸಭೆಗೆ ಅಧ್ಯಕ್ಷನಾಗಿ ಸರ್ವಶ್ರೇಷ್ಠ ನ್ಯಾಯಾಧೀಶನಾದವನಿಗೆ ಇಂಗ್ಲಂಡಿನಲ್ಲಿ ಆ ಬಿರುದು. ಇರಾಸ್ಮಸ್ ಮೋರರಿಬ್ಬರೂ ಆಪ್ತಮಿತ್ರರಂತಿದ್ದರು. ಇಂಗ್ಲಂಡಿಗೆ ಬಂದು ಇರಾಸ್ಮಸ್ ಮೋರನ ಮನೆಯಲ್ಲಿ ಅನೇಕಬಾರಿ ಇರುತ್ತಿದ್ದನು.

ಪುರೋಹಿತವರ್ಗದಲ್ಲಿ ಸೇರಿಕೊಳ್ಳಲು ಶಿಕ್ಷಿತನಾಗಿದ್ದವನು ಇರಾಸ್ಮಸ್. ಆ ಶಿಕ್ಷಣವನ್ನು ಪಡೆದಿದ್ದುದರಿಂದ ಆತನಿಗೆ ಆ ವರ್ಗದವರಲ್ಲಿ ನೆಲೆಸಿದ್ದ ದೋಷಗಳೆಲ್ಲವೂ ಸ್ಪಷ್ಟವಾದವು. ಆ ದೋಷಗಳನ್ನು ಕುರಿತು ಪುಸ್ತಕಗಳನ್ನು ಬರೆದನು. ಅವುಗಳನ್ನು ವಿವರಿಸಿ ಸುಧಾರಣೆಯಾಗಬೇಕೆಂದು ಸ್ಪಷ್ಟಗೊಳಿಸಿದನು. ಇರಾಸ್ಮಸಿನಂತೆ ಮೋರನೂ ಅಂತಃಕರಣಪೂರ್ವಕವಾಗಿ ಕ್ಯಾಥಲಿಕ್ ಮತಭಕ್ತನಾಗಿದ್ದವನು. **ಇಂಡಲ್ಜೆನ್ಸಸ್** (Indulgences) ಎಂಬ ಪತ್ರಗಳ ಮಾರಾಟವೇ ಮುಂತಾದ ದುಷ್ಕೃತ್ಯಗಳನ್ನು ನಿಲ್ಲಿಸಬೇಕೆಂದು ಇರಾಸ್ಮಸಿನಂತೆಯೇ ಅಭಿಪ್ರಾಯಪಡುತ್ತಿದ್ದವನು. ಮಾಡಿದ ಪಾಪಕೃತ್ಯಗಳನ್ನು ಕ್ಷಮಿಸಿಕೊಡುವ ಅಧಿಕಾರವು ರೋಮನ್ ಕ್ಯಾಥಲಿಕ್ಕರಲ್ಲಿ ಮತಗುರುಗಳಿಗಿತ್ತು. ಆ ಅಧಿಕಾರವನ್ನು ಪಯೋಗಿಸಿಕೊಂಡು ಪೋಪನು ಕ್ಷಮಾಪತ್ರಗಳನ್ನು ಮಾರಿಸುತ್ತಿದ್ದನು. ಇದರಿಂದ ಧನವಂತರಾದವರು ತಾವು ಮಾಡಿದ ಪಾಪಗಳ ನಿವಾರಣೆಗಾಗಿ ಕ್ಷಮಾಪತ್ರಕೊಂಡುಕೊಳ್ಳಲು ಅನುಕೂಲವಾಯಿತು. ಧನವಿದ್ದವರಿಗೆ ಪಾಪವಿಲ್ಲವೆಂಬಂತೆ ಕಂಡಿತು. ಇಂತಹ ದುಷ್ಟಾಚಾರಗಳನ್ನು ನಿವಾರಿಸಿ ಸಂಸ್ಕರಣಗೊಳಿಸುವ ಇಷ್ಟ ಮೋರನಲ್ಲಿಯೂ ಇತ್ತು. ಮೋರನು **ಯುಟೋಪಿಯ** (Utopia) ಎಂಬ ಹೆಸರಿನ ಪುಸ್ತಕವನ್ನು ಬರೆದು ಅದರಲ್ಲಿ ಆದರ್ಶರಾಷ್ಟ್ರವೊಂದನ್ನು ವರ್ಣಿಸಿದನು. ಇದ್ದ ಪರಿಸ್ಥಿತಿಗೂ ಇರಬೇಕಾದ ಪರಿಸ್ಥಿತಿಗೂ ವ್ಯತ್ಯಾಸವನ್ನು ಆ ಪುಸ್ತಕದಲ್ಲಿ ತೋರಿಸಿಕೊಟ್ಟನು. ಕಡೆಗೆ ಮೋರನಿಗೆ ದುರ್ಗತಿಯೊದಗಿತು. ಆಗ ಇಂಗ್ಲಂಡಿನ ರಾಜನಾಗಿದ್ದ ಎಂಟನೆ ಹೆನ್ರಿ ನಡೆಸಿದ ಕೆಲವು ಕೃತ್ಯಗಳನ್ನು ಮೋರನೊಪ್ಪಲಿಲ್ಲ. ಆದಕ್ಕಾಗಿ ಮೋರನನ್ನು ಸೆರೆಯಲ್ಲಿಟ್ಟು ಒಂದು ವರ್ಷದ ತರುವಾಯ ಶಿರಚ್ಛೇದನಕ್ಕೆ ಗುರಿಮಾಡಿದರು. ಮುಂದಿನ ವರ್ಷ ಇರಾಸ್ಮಸನೂ ತೀರಿಕೊಂಡನು.

ಮುಖ್ಯಪ್ರಶ್ನೆ : ೪೬ ಮಾರ್ಟಿನ್ ಲ್ಯೂಥರನು ಮಾಡಿದುದೇನು? ಅದರ ಪರಿಣಾಮವಾಗಿ ನಡೆದುದೇನು?

ಹಿಂದೆ ಚಾರ್ಲಮೇನ್ ಚಕ್ರವರ್ತಿ ಕಟ್ಟಿದ್ದ ಪವಿತ್ರರೋಮಕಸಾಮ್ರಾಜ್ಯದಲ್ಲಿ ಜರ್ಮನಿಯೆಂಬುದೊಂದು ಭಾಗವಾಗಿತ್ತು. ಹದಿನೈದನೆ ಹದಿನಾರನೆ ಶತಮಾನಗಳಲ್ಲಿಯೂ ಜರ್ಮನಿಪ್ರದೇಶವು ಆ ಸಾಮ್ರಾಜ್ಯಕ್ಕೊಡೆಯನಾದಾತನ ಅಂಕೆಯಲ್ಲಿಯೇ ಇತ್ತು. ಹದಿನಾರನೆ ಶತಮಾನದ ಆರಂಭದಲ್ಲಿ ಜರ್ಮನಿಯಲ್ಲಿ ರೋಮನ್ ಕ್ಯಾಥಲಿಕ್ ಮತದ ಸನ್ಯಾಸಿಯೊಬ್ಬಾತನು ಪ್ರಚಂಡವಾಗಿ ಒಂದು ಆಕ್ಷೇಪವನ್ನು ಮೊದಲಿಟ್ಟನು. ಆತನೇ **ಮಾರ್ಟಿನ್ ಲ್ಯೂಥರ್** (Martin Luther). ಕ್ಷಮಾಪತ್ರಗಳನ್ನು ಮಾತ್ರವೇ ಅಲ್ಲ ಆತನು ಖಂಡಿಸಿದುದು. ಕ್ಯಾಥಲಿಕ್ ಮತಾಚಾರಗಳಲ್ಲಿ ಇನ್ನೂ ಅನೇಕಾಂಶಗಳನ್ನೂ ಸಂಪ್ರದಾಯಗಳನ್ನೂ ಖಂಡಿಸಿ ವ್ಯಾಖ್ಯಾನಕ್ಕೂ ಲೇಖನಕ್ಕೂ ಮೊದಲಿಟ್ಟನು. ಜಗದ್ಗುರು ಪೋಪನು ಆತನ ಮೇಲೆ ಬಹಿಷ್ಕಾರಾಜ್ಞೆಯನ್ನು ಸಾರಿದನು. ಪೋಪನ ಅಧಿಕಾರವನ್ನೇ ಖಂಡಿಸುತ್ತಿದ್ದ ಲ್ಯೂಥರ್ ಆ ಆಜ್ಞಾಪತ್ರವನ್ನು ಎಲ್ಲರೆದುರಿಗೆ ಬಹಿರಂಗವಾಗಿ ಸುಟ್ಟುಬಿಟ್ಟನು. ಆಗ ಪೋಪನು ಜರ್ಮನಿಯ ಪ್ರಭುವಿಗೆ ಲ್ಯೂಥರನನ್ನು ಪಾಷಂಡನೆಂದು ನಿಶ್ಚಯಿಸಿ ದಂಡಿಸಬೇಕೆಂದು ಆಜ್ಞೆಕೊಟ್ಟನು. ಆತನ ಉಪದೇಶವು ಭ್ರಷ್ಟವಾದುದೆಂದೂ ಮರಣದಂಡನೆಗಾದರೂ ಆತನನ್ನು ಗುರಿಪಡಿಸಬೇಕೆಂದೂ ತೀರ್ಮಾನವಾಯಿತು. ಆದರೆ ಲ್ಯೂಥರನನ್ನು ಮೆಚ್ಚಿದವರು ಹೇರಳವಾಗಿದ್ದರು. ಅವರನ್ನೂ ಅಡಗಿಸಿ ಲ್ಯೂಥರನನ್ನು ದಂಡಿಸಲು ಆಗಲಿಲ್ಲ. ಲ್ಯೂಥರನ ಶಿಷ್ಯರು ದಿನೇದಿನೇ ಹೆಚ್ಚಿದರು. ಆಕ್ಷೇಪಕರೆಂಬ ಗುಂಪುಕಟ್ಟಿದರು. ಕ್ಯಾಥಲಿಕ್ ಮತಕ್ಕೆ ವಿರುದ್ಧವಾದ **ಪ್ರಾಟೆಸ್ಟೆಂಟ್** (Protestant) ಉದ್ಯಮವು ಬಲಗೊಂಡಿತು.



ಲ್ಯೂಥರ್

ಪ್ರಾಟೆಸ್ಟೆಂಟರ ಉದ್ಯಮವೆಂಬುದು ಒಂದು ಭಾರಿ ದಂಗೆಯಂತೆ ತೋರಿತು. ಅದರ ಪ್ರಭಾವದಿಂದ ಕ್ಯಾಥಲಿಕ್ ಮತಸ್ಥರಲ್ಲಿಯೂ ಅನೇಕರಿಗೆ

ದುರಾಚಾರಗಳನ್ನು ದೂರಮಾಡುವ ಅಕ್ಕರೆಯುಂಟಾಯಿತು. ಕ್ಯಾಥಲಿಕ್ ಮತಸ್ಥರು ಆಲೋಚನೆ ನಡೆಸಿದರು. ಪ್ರಾಟೆಸ್ಟೆಂಟ್ ಪ್ರಚಾರವನ್ನು ತಡೆಯುವುದಕ್ಕೂ ಪ್ರಾಟೆಸ್ಟೆಂಟರಾದವರನ್ನು ಮತ್ತೆ ತಮ್ಮ ಮತಕ್ಕೆ ಸೇರಿಸಿಕೊಳ್ಳುವುದಕ್ಕೂ ಸಂಕಲ್ಪಮಾಡಿಕೊಂಡರು. ಪ್ರಾಟೆಸ್ಟೆಂಟರಿಗೆ ವಿರೋಧವಾಗಿ ರೋಮನ್‌ಕ್ಯಾಥಲಿಕ್ಕರು ಒಂದು ಉದ್ಯಮವನ್ನು ಕೈಕೊಂಡರು. ಅದಕ್ಕೆ **ಕೌಂಟರ್ ರೆಫರ್ಮೇಷನ್** (Counter-reformation) ಅಥವಾ ಪ್ರತ್ಯುದ್ಯಮವೆಂದು ಹೆಸರು. ಪಾಷಂಡರೆಂದು ತೋರಿದವರನ್ನು ವಿಚಾರಿಸಿ ದಂಡಿಸಲು ನಿರ್ಮಿತವಾದ **ಇನ್ಕ್ವಿಸಿಷನ್** (Inquisition) ಎಂಬ ವಿಚಾರಣೆಯ ಸ್ಥಾನವು ಆ ಉದ್ಯಮದ ಅಂಗ. ಕ್ಯಾಥಲಿಕ್ ಪ್ರಚಾರವನ್ನು ನಡೆಸಲು ಸಿದ್ಧವಾದ **ಸೊಸೈಟಿ ಆಫ್ ಜೀಸಸ್** (Society of Jesus) ಅಥವಾ ಏಸುಸಂಘವೆಂಬುದೂ ಅದರ ಅಂಗ. ಆ ಸಂಘದವರಿಗೆ ಜೆಸುಯಿತರೆಂಬ ಹೆಸರು ರೂಢಿ. ಅದನ್ನು **ಇಗ್ನೇಷಿಯಸ್ ಲಾಯೊಲ** (Ignatius Loyoala) ಎಂಬ ಯತಿಯು ಸ್ಥಾಪಿಸಿದನು. ಜೆಸುಯಿತರೆಲ್ಲರೂ ಕಠಿಣವ್ರತಗಳನ್ನು ಪಾಲಿಸುತ್ತ ಪ್ರಾಟೆಸ್ಟೆಂಟರ ಪ್ರಚಾರವನ್ನು ಮುರಿಯುತ್ತಲೂ ತಮ್ಮ ಪ್ರಚಾರವನ್ನು ಮುಂದುವರಿಸುತ್ತಲೂ ಇದ್ದರು.

ಹೀಗೆ ಮತಾಚಾರವಿಚಾರಗಳಲ್ಲಿ ಪ್ರಾಟೆಸ್ಟೆಂಟ್ ಪಕ್ಷವೆಂಬುದು ಮೊದಲಾಯಿತು. ಆದರೆ ಸ್ವಲ್ಪಕಾಲದಲ್ಲಿ ರಾಜಕೀಯವಾಗಿ ಪರಿಣಮಿಸಿತು. ಕ್ಯಾಥಲಿಕ್ಕರಾಗಿದ್ದವರು ಪೋಪನ ಆಜ್ಞಾಧಾರಕರಾಗಿರಬೇಕಾಗಿತ್ತು; ರಾಜ್ಯದ ಹಣವನ್ನು ಸಲ್ಲಿಸಬೇಕಾಗಿತ್ತು. ಪ್ರಾಟೆಸ್ಟೆಂಟರಾದವರು ಸ್ವತಂತ್ರರಾದರು. ಲ್ಯೂಥರನ ಶಿಷ್ಯರು ನಡೆಸಿದ ಪ್ರಚಾರವೂ ಅದಕ್ಕೆ ಪ್ರತಿಯಾಗಿ ಏಸುಸಂಘದವರು ಮಾಡಿದ ಪ್ರಚಾರವೂ ಏಕಕಾಲದಲ್ಲಿ ನಡೆಯುತ್ತಿದ್ದಾಗ ಪ್ರಾಟೆಸ್ಟೆಂಟ್ ಮತ್ತು ಕ್ಯಾಥಲಿಕ್ ಗುಂಪುಗಳ ಪರಸ್ಪರ ವಿರೋಧವು ಪ್ರಬಲಿಸಿತು. ಎರಡು ಗುಂಪುಗಳಿಗೂ ಭಯಂಕರ ಯುದ್ಧಗಳು ನಡೆದವು. ಕ್ಯಾಥಲಿಕ್ ರಾಜ್ಯಗಳಲ್ಲಿ ಸ್ಪೆಯಿನ್ ಪ್ರಬಲವಾಗಿತ್ತು; ಈಗ ಹಾಲಂಡ್, ಬೆಲ್ಜಿಯಂ ಎನಿಸಿರುವ ಪ್ರದೇಶವಾದ ನೆದರ್ಲಂಡ್ಸ್ ಎಂಬುದು ಸ್ಪೆಯಿನ್ ರಾಜನ ಆಳಿಕೆಯಲ್ಲಿತ್ತು. ಹಾಲಂಡ್ ಪ್ರದೇಶದವರು ಪ್ರಾಟೆಸ್ಟೆಂಟ್ ಮತವನ್ನೊಪ್ಪಿಕೊಂಡರು. ಆ ರಾಜನು ಬಲಪ್ರಯೋಗದಿಂದ ಅವರನ್ನು ಪುನಃ ಕ್ಯಾಥಲಿಕ್ಕರನ್ನಾಗಿ ಮಾಡಲು ಯತ್ನಿಸಿದನು. ಡಚ್ಚರೆಂದು ಹೆಸರಾದ ಆ ಜನರು ದಂಗೆಯೆದ್ದರು; ಆರೆಂಜ್ ಸಂಸ್ಥಾನದ ವಿಲಿಯಂ (William of Orange) ಎಂಬಾತನನ್ನು ನಾಯಕನನ್ನಾಗಿ ಆರಿಸಿಟ್ಟುಕೊಂಡರು. ಪದೇ

ಪದೇ ಸೋಲನ್ನು ಕಂಡರೂ ಎದೆಗೆಡದೆ ಉದ್ಯಮನಡೆಸಬಲ್ಲ ಧೀರ ಆತನು. ಹೆಚ್ಚು ಮಾತನ್ನೇ ಆಡುತ್ತಿರಲಿಲ್ಲ. ಆದ್ದರಿಂದ "**ಮೌನಿವಿಲಿಯಂ**" ಅಥವಾ "**ವಿಲಿಯಂ ದಿ ಸೈಲೆಂಟ್**" (William the Silent) ಎಂಬ ಬಿರುದು ಆತನಿಗೆ. ವರ್ಣಿಸಲಾಗದ ಕಷ್ಟಸಂಕಟಗಳನ್ನು ಡಚ್ಚರು ಧೈರ್ಯದಿಂದ ಅನುಭವಿಸಿದರು. ನಲವತ್ತು ವರ್ಷಕಾಲ ಹೆಣಗಾಡಿ ಕಡೆಗೆ ಸ್ವತಂತ್ರರಾದರು. "**ಹಾಲಂಡ್**" ಎಂಬುದು ಸ್ವತಂತ್ರರಾಷ್ಟ್ರವಾಗಿ ಪರಿಣಮಿಸಿದುದು ಪ್ರಾಟೆಸ್ಟೆಂಟ್ ಪ್ರಚಾರದಿಂದ. ಈಗ ಅಲ್ಲಿಗೆ ರಾಣಿಯಾದ ವಿಲ್ಹೆಲ್ಮಿನ (Wilhelmina) ಆ ವಿಲಿಯಂ ಸಂತತಿಯಾಕೆ.

ಜರ್ಮನಿಯಾದರೋ ಲ್ಯೂಥರ್ ಸ್ವತಃ ಇದ್ದ ಪ್ರದೇಶ. ಉತ್ತರ ವಿಭಾಗದವರು ಸರಿಸುಮಾರಾಗಿ ಪ್ರಾಟೆಸ್ಟೆಂಟರಾದರು; ದಕ್ಷಿಣದವರು ಕ್ಯಾಥಲಿಕ್ಕರೇ ಆಗಿ ಉಳಿದರು. ಪ್ರಾಟೆಸ್ಟೆಂಟರನ್ನು ಅಡಗಿಸಲು ಕ್ಯಾಥಲಿಕ್ ಮತಸ್ಥನಾದ ಚಕ್ರವರ್ತಿ ಯುದ್ಧಕ್ಕಣಿಮಾಡಿದನು. ಡೆನ್ಮಾರ್ಕ್ ಸ್ವೀಡೆನ್ ದೊರೆಗಳು ಪ್ರಾಟೆಸ್ಟೆಂಟರ ಸಹಾಯಕ್ಕೆ ನಿಂತರು. "**ಮೂವತ್ತು ವರ್ಷಕಾಲ**" ೧೬೧೮ರಿಂದ ೧೬೪೮ರವರೆಗೆ ನಿರಂತರ "**ಘೋರಯುದ್ಧಗಳು**" ಜರ್ಮನಿಯಲ್ಲೆಲ್ಲ ರೇಗಿದವು. ದೇಶವು ಹಾಳಾಯಿತು. ಪಕ್ಷವಿಪಕ್ಷಗಳಿಂದ ಐಕ್ಯತೆಯು ಕಾಣದಾಯಿತು. ಅದರಿಂದ ಜರ್ಮನಿಯೆಂಬುದು ಒಂದೇ ರಾಜ್ಯವಾಗಲು ವಿಳಂಬವಾಯಿತು.

ಮತಗ್ರಂಥಗಳ ಅರ್ಥವನ್ನು ತಿಳಿಯಹೇಳುವುದರಲ್ಲಿ ಪುರೋಹಿತವರ್ಗದವರಿಗೆ ಸರ್ವಾಧಿಕಾರವಿಲ್ಲವೆಂದಲ್ಲವೆ ಪ್ರಾಟೆಸ್ಟೆಂಟರು ಪ್ರಾರಂಭಿಸಿದುದು? ಕಾಲಕಳೆಯುತ್ತ ಪ್ರಾಟೆಸ್ಟೆಂಟರ ಸಮೂಹದಲ್ಲಿ ಆ ಚಿತ್ತವೃತ್ತಿ ಬೆಳೆದು ಇನ್ನೂ ಉಗ್ರರೂಪವನ್ನು ತಾಳಿತು. ತನ್ನ ಮತಗ್ರಂಥದ ಅರ್ಥವೇನೆಂಬುದನ್ನು ಮತ್ತೊಬ್ಬರು ಹೇಳಿದಂತೆ ಒಪ್ಪಬಾರದೆಂದೂ ತಾನೇ ನಿರ್ಣಯಿಸಿಕೊಳ್ಳಬೇಕೆಂದೂ ಪ್ರಾಟೆಸ್ಟೆಂಟರಲ್ಲಿ ಉಗ್ರರಾದವರು ಅಭಿಪ್ರಾಯಪಟ್ಟರು. ತಮ್ಮ ಬುದ್ಧಿಗೆ ತೋರಿದ ಅರ್ಥವನ್ನು ಪ್ರತಿಯೊಬ್ಬರೂ ಕಟ್ಟಬಹುದೆಂದಾಗ ಪಂಗಡಗಳು ಹುಟ್ಟದಿರುತ್ತದೆಯೇ? ಪ್ರಾಟೆಸ್ಟೆಂಟರಲ್ಲಿ ಎಷ್ಟೋ ಪಂಗಡಗಳು ಹುಟ್ಟಿಕೊಂಡವು. "**ಇಂಡಿಪೆಂಡೆಂಟ್**" (Independent) ಅಥವಾ "**ನಾನ್ ಕನ್ಫಾರ್ಮಿಸ್ಟ್**" (Non-conformist) ಎಂಬ ಹೆಸರುಳ್ಳವರ ರೀತಿ ಈ ಬಗೆಯ ಉಗ್ರಸ್ವಾತಂತ್ರ್ಯವಾಯಿತು.

ಪ್ರಾಟೆಸ್ಟೆಂಟರಲ್ಲಿ ಪಂಗಡಗಳೇನೋ ಹುಟ್ಟಿದವು. ಆದರೆ ಪ್ರತಿಪಂಗಡದವರಿಗೂ ತಮ್ಮ ಪಂಥಮಾತ್ರವೇ ಸರಿ, ಇತರ ಪಂಥಗಳು ಸರಿಯಲ್ಲವೆಂಬ

ವಿಶ್ವಾಸವು ಹಟವಾಗಿ ಪರಿಣಮಿಸಿತು. ಪ್ರತಿ ಪಂಥದವರೂ ಇತರ ಪಂಥದವರನ್ನು ದ್ವೇಷಿಸಿದರು. ಪ್ರಾಟೆಸ್ಟೆಂಟ್ ಪಂಥಗಳಲ್ಲಿ ಪರಸ್ಪರ ಹಗೆತನಗಳೂ ಹಿಂಸೆಗಳೂ ಕೆರಳಿದವು.

ರೋಮನ್ ಕ್ಯಾಥಲಿಕ್ ಚರ್ಚಿನವರು ಎಷ್ಟು ಕ್ರೌರ್ಯವನ್ನು ತೋರಿಸಿದರೋ ಅಷ್ಟೇ ಕ್ರೌರ್ಯವನ್ನು ಪ್ರಾಟೆಸ್ಟೆಂಟರು ತಮ್ಮ ಸ್ವಯೂಥಕಲಹಗಳಲ್ಲಿ ತೋರಿಸಿದರು. ಧರ್ಮದ ಹೆಸರಿನಲ್ಲಿ ದ್ವೇಷಗಳೂ ಹತ್ಯೆಗಳೂ ಯೂರೋಪಿನಲ್ಲಿ ನೂರಾರು ವರ್ಷ ನಡೆದುವು. ಪರಧರ್ಮಸಹಿಷ್ಣುತೆಯೆಂಬುದನ್ನು ಕಲಿಯಲು ಐರೋಪ್ಯರಿಗೆ ಶತಮಾನಗಟ್ಟಲೆ ಕಾಲ ಬೇಕಾಯಿತು. ವಿಚಾರಶಕ್ತಿಯನ್ನೇ ಪ್ರಮಾಣವೆಂದು ಸ್ಥಾಪಿಸಿಕೊಟ್ಟ ಶಾಸ್ತ್ರಗಳಿಂದ ಮನಶ್ಶುದ್ಧಿಯಾದವರೆಗೂ ಪರಧರ್ಮಸಹಿಷ್ಣುತೆಯೆಂಬುದು ಕಾಣದಾಯಿತು.

ಅಭ್ಯಾಸಗಳು

೧. ವಿಕ್ಲಿಫ್ ನಡೆಸಿದ ಉದ್ಯಮವೇನು ? ಆತನಿಗೆ ಸಂಭವಿಸಿದ ವಿಪತ್ತಿಗೆ ಕಾರಣವೇನು ?

೨. ಪ್ರಾಟೆಸ್ಟೆಂಟ್ ಮತವೆಂಬುದೇನು ? ಆ ಮತವು ಹುಟ್ಟಿದ ತರುವಾಯ ನಡೆದುದೇನು ?

೩. ಪ್ರಬಲವಿರೋಧವಿದ್ದಾಗ್ಯೂ ಲ್ಯೂಥರ್ ಮತ್ತು ಮೌನಿವಿಲಿಯಂ ತಮ್ಮ ಉದ್ಯಮಗಳನ್ನು ಹೇಗೆ ಸಾಧಿಸಿದರು ?

೧೩ನೇ ಅಧ್ಯಾಯ

ರಿನೇಸಾನ್ಸ್ ಕಾಲ

✓ಮುಖ್ಯಪ್ರಶ್ನೆ ೪೭ : ರಾಜರ್ ಬೇಕನ್ ನಡೆಸಿದ ಮುಖ್ಯಕಾರ್ಯವೇನು?

ಹಳೆರೀತಿಯ ಚರಿತ್ರೆಪುಸ್ತಕಗಳ ತುಂಬ ಇರುವುದು ರಾಜರ ವರ್ಣನೆ; ಅವರ ಜಗಳಗಳ, ಯುದ್ಧಗಳ ವಿವರ. ಆದರೆ ಅವೆಲ್ಲವೂ ಜನಜೀವನದ ಒಂದಂಶ ಮಾತ್ರ. ವಾಸ್ತವವಾಗಿ ಜನರು ಒಂದು ರೀತಿಯಲ್ಲಿ ವರ್ತಿಸುವುದು ಹೇಗೆ? 'ಹೀಗೆ ಮಾಡಿದರು', 'ಹಾಗೆ ಮಾಡಲಿಲ್ಲ' ಎಂದು ಹೇಳಿಕೊಳ್ಳುವಾಗ ಆ ಪ್ರವರ್ತನೆಗೆ ಕಾರಣವೇನೆಂದು ಹೇಳೋಣ? ಜನರಾಡುವುದೂ ಮಾಡುವುದೂ ಎಲ್ಲ ಕಾಲಗಳಲ್ಲಿಯೂ ತಮ್ಮ ಆಲೋಚನೆಗಳಿಗೆ ಅನುಸಾರವಾಗಿ. ಆ ಆಲೋಚನೆಗಳು ಆ ಸಮಯದಲ್ಲಿ ಜನರ ಮನಸ್ಸಿನ ಭಾವಗಳು ಹೇಗೋ ಹಾಗೆ. ಆದ್ದರಿಂದ ಜನರ ಮನಸ್ಸನ್ನೂ ಹೃದಯಗಳನ್ನೂ ಕಲಕಿ ಪರಿವರ್ತನಗೊಳಿಸಿದವರು ಜನರ ನಡತೆಗೆ ಕಾರಣಕರ್ತರು. ಮನಸ್ಸುಗಳಲ್ಲಿಯೂ ಹೃದಯಗಳಲ್ಲಿಯೂ ತಮ್ಮ ಪ್ರಭಾವವನ್ನು ಬೀರಿದಂತಹ ಮಹಾಪುರುಷರಿಂದ ಲೋಕದ ಅಭಿವೃದ್ಧಿ ನಡೆಯುತ್ತದೆ. ಎಷ್ಟು ಜಯಶಾಲಿಯೆನಿಸಿದ್ದರೂ, ಎಷ್ಟು ವೈಭವಶಾಲಿಯೆನಿಸಿದ್ದರೂ ರಾಜ್ಯಗಳ ಮೇರೆಗಳನ್ನು ಬದಲಾಯಿಸಿದ ರಾಜನಿಂದ ಅಂತಹ ಪರಿಣಾಮ ನಡೆಯುವುದಿಲ್ಲ. ಆದ್ದರಿಂದ ಈ ನಮ್ಮ ಪುಸ್ತಕದಲ್ಲಿ ಯಾರ ವೃತ್ತಾಂತವನ್ನು ಹಿರಿದೆಂದು ಕಾಣಬೇಕು? ಧರ್ಮದಲ್ಲಿಯೋ ತತ್ತ್ವಸಂಗ್ರಹದಲ್ಲಿಯೋ ಶಾಸ್ತ್ರಗಳಲ್ಲಿಯೋ ಕಲೆಗಳಲ್ಲಿಯೋ ಪರಿಣಾಮಕಾರಕವಾದ ಅಂಶಗಳನ್ನು ತೋರಿ ಲೋಕಕ್ಕೆ ಅವುಗಳನ್ನು ಕೊಟ್ಟಂಥವರ ವೃತ್ತಾಂತ ಹಿರಿದಲ್ಲವೆ? ದೊಡ್ಡದೊಡ್ಡ ಅರಮನೆಗಳನ್ನು ಕಟ್ಟಿಕೊಂಡೋ ಸಾವಿರಾರು ಜನರನ್ನು ಕೊಂದೋ ಹೆಸರು ಪಡೆದವರ ವೃತ್ತಾಂತ ಹಿರಿದಲ್ಲ.

ಐರೋಪ್ಯದೇಶಗಳ ಚರಿತ್ರೆಯಲ್ಲಿ ಮಧ್ಯಮಯುಗದ ಪರಿಸ್ಥಿತಿಯನ್ನು ವಿವರಿಸಿದಾಗ ಚರ್ಚಿನವರು ಮಾತ್ರ ಅಕ್ಷರಸ್ಥರಾಗಿರುತ್ತಿದ್ದರೆಂದೆವು. ಚರ್ಚುಗಳೂ ಅಲ್ಲಿಯ ಉದ್ಯೋಗಸ್ಥರೂ ಅಲ್ಲದೆ ಮಠಗಳೂ ಅಲ್ಲಿಯ ವಿರಕ್ತರೂ ಆ ಕಾಲದಲ್ಲಿ ಇದ್ದರಷ್ಟೆ. ಮಠಗಳಲ್ಲಿದ್ದವರಿಗೆ ಶಾಂತಿಯೂ ವಿರಾಮವೂ ದೊರಕುತ್ತಿತ್ತು. ಅವುಗಳ ನಿವಾಸಿಗಳು ಜ್ಞಾನಾರ್ಜನೆಯಲ್ಲಿ ಆಸಕ್ತರಾಗಬಹುದಾಗಿತ್ತು. ಮಧ್ಯಮಯುಗದಲ್ಲೆಲ್ಲ ಆ ಕಾರಣದಿಂದ ಮಠಗಳೇ ವಾಸ್ತವ

ವಾಗಿ ವಿದ್ಯಾಕ್ಷೇತ್ರಗಳು. ಮಠನಿವಾಸಿಗಳಾಗಿ ಜ್ಞಾನಾರ್ಜನೆಗೆ ಮನಸ್ಸು ಕೊಟ್ಟವರಲ್ಲಿ **ರಾಜರ್ ಬೇಕನ್** (Roger Bacon) ಎಂಬಾತನು ಹೆಸರುವಾಸಿ.

ಫ್ರಾನ್ಸಿಸ್ ಯತಿಯ ಹೆಸರಿನಲ್ಲಿದ್ದ ಪರಿವ್ರಾಜಕ ಮಠಕ್ಕೆ ಸೇರಿದವನು ರಾಜರ್ ಬೇಕನ್. ಸರಿಸುಮಾರಾಗಿ ಜೆಂಘೀಸ್‌ಖಾನನ ಕಾಲದಲ್ಲಿ ಆಕ್ಸ್‌ಫರ್ಡ್ ಪಟ್ಟಣದ ಮಠದಲ್ಲಿದ್ದನು. ರಾಜರ್ ಬೇಕನ್ ಆ ಮಠಕ್ಕೆ ಸೇರಿದ್ದರೂ ಫ್ರಾನ್ಸಿಸ್ ಯತಿಯಂತಿರಲಿಲ್ಲ. ಆತನು ಶಾಸ್ತ್ರಸಾಧನೆಯಲ್ಲಿಯೂ ವಿದ್ಯಾರ್ಜನೆ



ರಾಜರ್ ಬೇಕನ್

ಯಲ್ಲಿಯೂ ಆಸಕ್ತನಾಗಿದ್ದವನು. ಆತನ ಸಾಧನೆ ಹೊಸರೀತಿ. ವ್ಯಾಸಂಗದಲ್ಲಿಯೂ ಪರೀಕ್ಷೆಯಲ್ಲಿಯೂ ಸದಾ ನಿರತನಾಗಿ ಆಗಾಗ್ಗೆ ಗ್ರಂಥಗಳನ್ನು ಬರೆದಿಡುತ್ತಿದ್ದ ಆತನು ಮಠದಲ್ಲಿದ್ದರೆ ಶಾಂತಿವಿರಾಮಗಳು ದೊರಕುತ್ತವೆಂದು ಅಲ್ಲಿದ್ದನು. ಯಾವ ಅಂಶವನ್ನಾದರೂ ಪ್ರತ್ಯಕ್ಷ ಪರೀಕ್ಷೆ ಮಾಡಿದ ಹೊರತು ಆತನೊಪ್ಪುತ್ತಿರಲಿಲ್ಲ. ಇತರರಾದರೆ ಬೈಬಲ್ ಪ್ರಮಾಣವೆಂದು ನಂಬಿ ವಿಚಾರ ಮಾಡದೆ ಅದರಲ್ಲಿದ್ದುದನ್ನು ಒಪ್ಪಿಕೊಳ್ಳುತ್ತಿದ್ದರು. ಆ ಪುಸ್ತಕದಲ್ಲಿರುವುದು ಸರಿಯೇ ತಪ್ಪೇ ಎಂದು ಕೇಳುವುದೇ ಅವರಿಗೆ ಅಚಿಂತ್ಯವಾಗಿತ್ತು. ಆ ಪುಸ್ತಕದಲ್ಲಿಲ್ಲದ ಅಂಶವಾವುದೂ ಪ್ರಮಾಣವಲ್ಲವೆಂದು ಭಾವಿಸುತ್ತಿದ್ದರು. ರಾಜರ್

ಬೇಕನ್ನನಾದರೋ ಪ್ರತ್ಯಂಶವನ್ನೂ ಸ್ವತಃ ಪರೀಕ್ಷೆಮಾಡಿ ನೋಡತಕ್ಕವನು. ಅಧಿಕಾರವುಳ್ಳವರೆಂದು ಹೇಳಿಕೊಳ್ಳುತ್ತಿದ್ದ ಮತಗುರುಗಳು ಹೇಳಿದುದರಲ್ಲಿ ಆತನಿಗೆ ನಂಬುಗೆ ಇರಲಿಲ್ಲ. ಆದ್ದರಿಂದ ಚರ್ಚಿನ ಅಧಿಕಾರಸ್ಥರು ಆತನನ್ನು ವರ್ಷಗಟ್ಟಲೆ ನಿರ್ಬಂಧದಲ್ಲಿಟ್ಟರು. ವಸ್ತುಪರೀಕ್ಷೆಯನ್ನು ನಡೆಸಿ ಪ್ರತ್ಯಕ್ಷ ಪ್ರಮಾಣಬೇಕೆಂದು ರಾಜರ್ ಹೇಳಿಕೊಡುತ್ತಿದ್ದರೆ ಜನರಿಗೆ ತಮ್ಮಲ್ಲಿ ನಂಬಿಕೆ ಕೆಟ್ಟೀತೆಂದು ಆ ಅಧಿಕಾರಸ್ಥರಿಗೆ ಶಂಕೆ. ವಿಚಾರಮಾಡಿದ ತರುವಾಯ ಒಪ್ಪಿಕೊಳ್ಳತಕ್ಕದ್ದೇ ವಿನಾ ಅಧಿಕಾರಸ್ಥರು ಹೇಳಿದಮಾತ್ರಕ್ಕೆ ಒಪ್ಪತಕ್ಕುದಲ್ಲವೆಂದು ಹಿಂದೆ ಅರಿಸ್ಟಾಟಲ್ ಹೇಳಿದಂತೆ ಈತನೂ ಹೇಳುತ್ತಿದ್ದನು. ರಸಾಯನಶಾಸ್ತ್ರದಲ್ಲಿ ಕುತೂಹಲಿಯಾಗಿದ್ದ ರಾಜರನು ಒಂದು ಸಲ ಏನೇನೋ ಬೆರಸಿ ಮದ್ದನ್ನು ಮಾಡಿಕೊಳ್ಳುತ್ತಿದ್ದಾಗ ಆತನ ಜೊತೆಗಾರರಾಗಿದ್ದ ಇತರ ವಿರಕ್ತರಿಗೆ ಭಯಭ್ರಾಂತಿಗಳು ತೋರಿದವು. ಸೈತಾನನ ಸಹಾಯಪಡೆದು ರಾಜರ್ ಏನೇನೋ ಮಾಡುತ್ತಿದ್ದಾನೆಂದು ಹೇಳಿಕೊಂಡರು. ಅದು ಮತದ್ರೋಹವೆಂದು ಅವನನ್ನು ಸೆರೆಯಲ್ಲಿಟ್ಟರು. ರಾಜರ್ ಆಗ ಜಗದ್ಗುರು ಪೋಪನಿಗೊಂದು ಪತ್ರಬರೆದು ತನ್ನ ಸಾಧನೆಯನ್ನು ವಿವರಿಸಿದನು. ಪೋಪನು ಜವಾಬುಕೊಟ್ಟು ಇನ್ನೂ ವಿಸ್ತಾರವಾಗಿ ತಿಳಿಸೆಂದನು. ಪೋಪನೇ ಸಹಾಯ ಮಾಡಿದರೆ ಎಷ್ಟು ಮೇಲಾದೀತೆಂದು ಯೋಚಿಸಿ ರಾಜರ್ ಮೂರು ಸಂಪುಟಗಳ ಗ್ರಂಥವನ್ನು ಬರೆದು ಕಳುಹಿಸಿದನು. ಅದನ್ನು ಪೋಪನು ಪ್ರಾಯಶಃ ಓದಲೇ ಇಲ್ಲ. ಅಂತೂ ಬೇಕನ್ನನಿಗೆ ಸೆರೆ ತಪ್ಪಲಿಲ್ಲ.

ಎಷ್ಟುದೂರ ರಾಜರ್‌ಬೇಕನ್ ಆಲೋಚನೆ ನಡೆಸಿದ್ದನೆಂಬುದಕ್ಕೆ ಸಾಕ್ಷಿಯಾಗಿ ಆತನು ಬರೆದ ಹಲವು ವಾಕ್ಯಗಳನ್ನು ಕಾಣಬಹುದು. "ಸಮುದ್ರಯಾನಕ್ಕೆ ಯಂತ್ರಗಳ ಉಪಯೋಗ ಸಾಧ್ಯ. ನದಿಯ ಮೇಲಾಗಲಿ ಸಾಗರದ ಮೇಲಾಗಲಿ ದೊಡ್ಡ ಹಡಗನ್ನು ಒಬ್ಬನೇ ವೇಗವಾಗಿ ನಡೆಸಬಹುದು. ಹಾಗೆಯೇ ಯಾವ ಪಶುವನ್ನೂ ಕಟ್ಟದೆ ಅತಿವೇಗದಿಂದೋಡುವ ವಾಹನಗಳನ್ನೂ ನಿರ್ಮಿಸಬಹುದು. ಗಾಳಿಯನ್ನು ಬಡಿಯಲು ಕೃತಕವಾದ ರೆಕ್ಕೆಗಳನ್ನು ಒಂದು ಯಂತ್ರಕ್ಕೆ ಕಟ್ಟಿ ಆ ರೆಕ್ಕೆಗಳನ್ನು ತಕ್ಕ ಉಪಕರಣದಿಂದ ಆಡಿಸಲು ಯಂತ್ರಮಧ್ಯದಲ್ಲಿ ಒಬ್ಬ ಕುಳಿತು ಆಕಾಶದಲ್ಲಿ ಪಕ್ಷಿಗಳಂತೆ ಹಾರಾಡಬಹುದು." ಜಹಜು, ಮೋಟಾರ್‌ಕಾರ್, ಏರೊಪ್ಲೇನ್‌ಗಳನ್ನು ಈ ರೀತಿ ಆರುನೂರು ವರ್ಷಗಳ ಹಿಂದೆಯೇ ರಾಜರ್ ಬೇಕನ್ನನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದುದು ಆಶ್ಚರ್ಯ. ಅಂಥವನನ್ನು ಆ ಕಾಲದವರು ಮಾಟಗಾರನೆಂದು ಹೇಳಿಕೊಂಡುದೂ ಸಹಜ.

ಸೂರ್ಯೋದಯಕ್ಕೆ ಮೊದಲು ಕಾಣುವ ಮುಂಬೆಳಗಿನಂತೆ ರಾಜರ್ ಬೇಕನ್. ಆತನ ತರುವಾಯ ಐರೋಪ್ಯ ದೇಶಗಳಲ್ಲಿ ಜ್ಞಾನೋದಯವು ಸಂಭವಿಸಿತು. ವಿದ್ಯೆಯ ಪುನರುಜ್ಜೀವನವೆಂಬರ್ಥಕೊಡುವ **ರಿನೇಸ್ಸಾನ್ಸ್** (Renaissance) ಎಂಬ ಹೆಸರಿನಿಂದ ಅದನ್ನು ಕರೆಯುತ್ತಾರೆ. ಹದಿನೈದನೇ ಶತಮಾನದ ಮಧ್ಯಭಾಗದಲ್ಲಿ ಉಸ್ಮಾನ್ಲಿ ತುರುಷ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ಮುತ್ತಿ ಹಿಡಿದರು. ಅಲ್ಲಿಂದ ಗ್ರೀಕ್ ವಿದ್ವಾಂಸರ ಪಲಾಯನ ಇನ್ನೂ ವೇಗವಾಯಿತು. ಅವರ ಪ್ರಭಾವದಿಂದ ಇಟಲಿ ಮುಂತಾದ ಇತರ ದೇಶಗಳಲ್ಲಿ ಪುರಾತನ ಗ್ರೀಕರು ಸಾಧಿಸಿದ್ದ ಜ್ಞಾನರಾಶಿಯು ಜನರಿಗೆ ಗೋಚರವಾಯಿತು. ಅದೇ ವೇಳೆಗೆ ಮುದ್ರಣ ವಿಧಾನವೂ ತಿಳಿಯಬಂದಿತ್ತು; ಮೂಡಲಲ್ಲಿಯೂ ಪಡುವಲಲ್ಲಿಯೂ ಯಾನಸಾಹಸಿಗಳು ಹೊರಟು ಸಮುದ್ರ ಮಾರ್ಗಗಳನ್ನು ಗೊತ್ತುಮಾಡಿಕೊಳ್ಳುತ್ತಿದ್ದರು. ಇವುಗಳಲ್ಲಿ ಪ್ರತ್ಯಂಶವೂ ಪ್ರಭಾವವುಳ್ಳುದು; ಮಹತ್ಪರಿಣಾಮಕಾರಕವಾದುದು. ೧೪೦೦ರಿಂದ ೧೬೦೦ ರವರೆಗಿನ ಕಾಲದಲ್ಲಿ ಇಷ್ಟೆಲ್ಲ ನಡೆದಾಗ್ಯೂ ಕಾನ್‌ಸ್ಟಾಂಟಿನೋಪಲ್ ನಗರ ನಷ್ಟವಾದ ಇಸವಿಯನ್ನು ಅವುಗಳ ಸೂಚನೆಯ ಹೆಗ್ಗುರುತೆಂದು ಭಾವಿಸುವರು. **ಎರಡನೆ ಮುಹಮ್ಮದ್** ಎಂಬ ತುರುಷ್ಕಸುಲ್ತಾನನು ೧೪೫೩ರಲ್ಲಿ ಆ ನಗರವನ್ನು ಗೆದ್ದುಕೊಂಡ ಅಂಶವನ್ನು ಜ್ಞಾಪಕದಲ್ಲಿಡಿ.

ಮುಖ್ಯಪ್ರಶ್ನೆ ೪೮ : ರಿನೇಸ್ಸಾನ್ಸ್ ಕಾಲದಲ್ಲಿ ಇಟಲಿಯಲ್ಲಿ ಅತಿಪ್ರಸಿದ್ಧನಾದವನು ಯಾರು? ಆ ಕಾಲ ಹೇಗಿತ್ತು?

ನಾಗರಿಕತೆಯನ್ನು ಪಡೆದ ಅಕ್ಕಪಕ್ಕದ ದೇಶಗಳಲ್ಲಿಯೇ ಇದರ ಪ್ರಭಾವವು ಸಹಜವಾಗಿ ಮೊದಲು ಕಾಣಿಸಿದ್ದು. ಮಧ್ಯಪ್ರಾಚ್ಯ ದೂರಪ್ರಾಚ್ಯದೇಶಗಳ ಸಂಪರ್ಕವನ್ನು ತಕ್ಕಮಟ್ಟಿಗೆ ಪಡೆದಿದ್ದ ಇಟಲಿ ದೇಶದಲ್ಲಿ ರಿನೇಸ್ಸಾನ್ಸ್ ಮೊದಲು ತಲೆದೋರಿತು. ಮಾರ್ಕೊಪೋಲೊ ಆ ದೇಶದವನು. ಆತನು ಹಿಂತಿರುಗಿದ ಕಾಲಕ್ಕೆ ಯೌವನದಲ್ಲಿದ್ದ **ಡಾಂಟೆ** (Dante) ಎಂಬಾತನು ಇಟಲಿ ದೇಶದ ಕವಿಶ್ರೇಷ್ಠ; ಸ್ವರ್ಗನರಕಗಳನ್ನು ಕಾವ್ಯದಲ್ಲಿ ವರ್ಣಿಸಿದವನು. ಡಾಂಟೆಗಿಂತ ಪ್ರಸಿದ್ಧನಾದವನು **ಲಿಯೊನಾರ್ಡೊ ಡ ವಿಂಚೀ** (Leonardo da Vinci). ಗ್ರೀಕಪಂಡಿತರು ಓಡಿಬಂದು ಇಟಲಿಯನ್ನು ಸೇರಿಕೊಳ್ಳುತ್ತಿದ್ದಾಗ ಲಿಯೊನಾರ್ಡೊ ಹುಟ್ಟಿದನು. ಇಪ್ಪತ್ತನೆ ವರ್ಷ ಮುಗಿಯುವ ವೇಳೆಗೆ ಲಿಯೊನಾರ್ಡೊ ಶಿಲ್ಪ ಮತ್ತು ಚಿತ್ರಕಲೆಗಳಲ್ಲಿ ಅದ್ವಿತೀಯನೆನಿಸಿದನು. ಆದರೆ ಅಷ್ಟು ಮಾತ್ರದಿಂದ ತೃಪ್ತನಾಗಲಿಲ್ಲ. ಯಂತ್ರನಿರ್ಮಾಣದಲ್ಲಿಯೂ ಆತನ

ಬುದ್ಧಿಯು ಓಡಿತು; ಕಾಲುವೆಗಳನ್ನೂ ಸೇತುವೆಗಳನ್ನೂ ನಿರ್ಮಿಸುವ, ಬಂದೂಕು ಮುಂತಾದ ಶಸ್ತ್ರಸಾಮಗ್ರಿಯನ್ನು ರಚಿಸುವ, ಪಟ್ಟಣಗಳನ್ನು ಆರೋಗ್ಯದಾಯಕವಾಗಿ ಮಾಡುವ, ಖೇಚರವಿಮಾನಗಳನ್ನು ಜೋಡಿಸುವ ಉಪಾಯಗಳು ಸ್ಫುರಿಸಿದುವು. ತನ್ನ ಉದ್ಯಮಗಳಿಗೆ ಪ್ರಭುಸಹಾಯ



ಚಿತ್ರ ಬರೆಯುತ್ತಲಿರುವ ಲಿಯೊನಾರ್ಡೊ

ಬೇಕೆಂದು ಲಿಯೊನಾರ್ಡೊ ಮಿಲನ್ (Milan) ಪಟ್ಟಣದ ಪ್ರಭುವಿನ ಆಶ್ರಿತನಾದನು. ಮಿಲನ್ ಪಟ್ಟಣವನ್ನು ಶೃಂಗಾರಗೊಳಿಸುವುದರಲ್ಲಿ ಲಿಯೊನಾರ್ಡೊ ಅದ್ಭುತವಾದ ಪ್ರತಿಭೆಯನ್ನು ಹೊರಪಡಿಸಿದನು. ಆದರೆ ೧೪೯೯ರಲ್ಲಿ ಆ ಸಣ್ಣ ರಾಜ್ಯಕ್ಕೆ ಶತ್ರುಗಳಿಂದ ಆಪತ್ತು ತೋರಿತು. ಲಿಯೊನಾರ್ಡೊ ವೆನಿಸ್ ನಗರಕ್ಕೆ ಹೊರಟನು. ಗಣಿತಶಾಸ್ತ್ರದಲ್ಲಿ ಆಲೋಚನೆ ನಡೆಸಿದನು. ಇಟಲಿಯ ಮಧ್ಯಭಾಗದಲ್ಲೆಲ್ಲ ಸಂಚರಿಸಿ ಜಲಾಶಯನಿರ್ಮಾಣದ ಯೋಚನೆ ನಡೆಸಿದನು. ಆತನು ಬರೆದ ಒಂದಾನೊಂದು ಚಿತ್ರವನ್ನು ಕಂಡು ಮನಸೋತ ಫ್ರಾನ್ಸ್ ದೊರೆ ಆತನನ್ನು ಆದರದಿಂದ ತನ್ನ ರಾಜ್ಯಕ್ಕೆ ಕರೆದುಕೊಂಡು ಹೋದನು. ಅಲ್ಲಿಯೂ ಅದ್ಭುತ ಕೆಲಸಗಳಲ್ಲಿ ತೊಡಗಿದ್ದ ಲಿಯೊನಾರ್ಡೊ ತನ್ನ ಅರವತ್ತಮೂರನೆ ವರ್ಷದಲ್ಲಿ (೧೫೧೯) ಕಾಲವಾದನು.

ಯಂತ್ರಯೋಜನೆಯಲ್ಲಿಯೂ ಶಿಲ್ಪಚಿತ್ರಕಲೆಗಳಲ್ಲಿಯೂ ಸೋಜಿಗವೆನಿಸುವ ಕೃತಿಗಳನ್ನು ರಚಿಸಿದ್ದಲ್ಲದೆ ಲಿಯೊನಾರ್ಡೊ ಅನೇಕಾನೇಕಾಂಶಗಳನ್ನು ಸ್ವಪ್ರಯತ್ನದಿಂದ ತಿಳಿದು ಬರೆದಿಟ್ಟನು. ಶರೀರರಚನಾಕ್ರಮ, ಪಕ್ಷಿಗಳ ಹಾರಾಟ, ಜಲಶಕ್ತಿ ಮುಂತಾದ ವಿಧವಿಧವಾದ ವಿಷಯಗಳಲ್ಲಿ ಆತನು ವಿದ್ಯಾ ಸಾಧಕನಾಗಿದ್ದನು. ಆತನ ಪ್ರತಿಭೆಯು ಅದ್ಭುತವಾದುದು. ಬುದ್ಧಿಶಕ್ತಿಯೆಷ್ಟು ಮಹತ್ತರವಾಗಿದ್ದಿತೋ ಆತನ ಸ್ವಭಾವವೂ ಹಾಗೆಯೇ ಆದರ್ಶರೂಪವಾಗಿತ್ತು. ಸ್ಫುರದ್ರೂಪಿಯಾಗಿ ಹುಟ್ಟಿದ್ದನು; ಆದರೆ ಬಲಶಾಲಿ. ಕುದುರೆ ಲಾಳವನ್ನು ಕೈಗಳಿಂದ ಬಗ್ಗಿಸಬಲ್ಲವನು. ಕುದುರೆ ಸವಾರಿಯಲ್ಲಿ ಇಷ್ಟವನ್ನೂ ನೈಪುಣ್ಯವನ್ನೂ ಪಡೆದಿದ್ದನು. ಹಕ್ಕಿಗಳನ್ನು ಕಂಡರೆ ಆಸೆ. ಬೀದಿಯಲ್ಲಿ ಹೋಗುತ್ತ ಪಂಜರದಲ್ಲಿ ಮಾರಾಟಕ್ಕೆಂದಿಟ್ಟಿದ್ದ ಪಕ್ಷಿಗಳನ್ನು ಕಂಡಕೂಡಲೆ ಅವುಗಳನ್ನು ಕೊಂಡುಕೊಂಡು ಬಿಟ್ಟುಬಿಡುತ್ತಿದ್ದನು. ಆಗಾಗ್ಗೆ ಏಕಾಂತದಲ್ಲಿದ್ದು ಗಾಢಾಲೋಚನೆಯಲ್ಲಿ ಮೈಮರೆಯುತಕ್ಕವನಾದಾಗ್ಯೂ ಜನರನ್ನು ಕಂಡರೆ ಇಷ್ಟ. ಜೊತೆಗಾರರೊಂದಿಗಿದ್ದು ವಿನೋದವಾಗಿ ಕಾಲ ಕಳೆಯುತಕ್ಕವನು. ಆತನಲ್ಲಿ ಅಸೂಯೆಗೊಂಡವರಿಲ್ಲ. ಶತ್ರುಗಳೇ ಇಲ್ಲ ಆತನಿಗೆ; ಎಲ್ಲರೂ ಹಿತಚಿಂತಕರೇ. ಅಹಂಕಾರವಿಲ್ಲದಿದ್ದ ಆತನನ್ನು ಎಲ್ಲರೂ ಬಯಸುವಂತಿತ್ತು.

ರಿನೇಸ್ಸಾನ್ಸ್ ಎಂಬ ಕಾಲದಲ್ಲಿದ್ದ ಐರೋಪ್ಯರಿಗೆ ಲಿಯೊನಾರ್ಡೊ ಆದರ್ಶಪ್ರಾಯನಾದವನು. ಜೀವನವನ್ನು ಉಪಯುಕ್ತವಾಗಿಯೂ ಸೊಗಸಾಗಿಯೂ ಕಳೆಯುವ ರೀತಿಯನ್ನು ಆತನು ತೋರಿಸಿಕೊಟ್ಟನೆಂದು ಹೇಳಬಹುದು.

ಇಟಲಿಯಲ್ಲಿ ಮೊದಲಾದ ಈ ಹೊಸಕಾಲವು ಇಂಗ್ಲಂಡಿನಲ್ಲಿ ವ್ಯಾಪಿಸುವುದಕ್ಕೆ ಬಹಳ ನಿದಾನವಾಯಿತು. ಕೊಲಂಬಸ್ ತನ್ನ ಸಾಹಸಕಾರ್ಯವನ್ನು ಸಾಧಿಸಿದ ಬಳಿಕ ನೂರು ವರ್ಷ ಕಳೆಯಬೇಕಾಯಿತು ಇಂಗ್ಲಿಷ್ ನಾವಿಕರು ಯಾನಸಾಹಸಿಗಳಾಗುವುದಕ್ಕೆ. ಇಂಗ್ಲಿಷ್ ಸಾಹಿತ್ಯದ ಚರಿತ್ರೆಯಲ್ಲಿಯೂ ಹೊಸಕಾಲದ ಪರಿಣಾಮ ತೋರಿದುದು ನಿದಾನವಾಗಿ. **ಫ್ರಾನ್ಸಿಸ್ ಬೇಕನ್** (Francis Bacon) ಹುಟ್ಟಿದುದು ೧೫೬೧ ರಲ್ಲಿ; **ವಿಲಿಯಂ ಷೇಕ್ಸ್‌ಪಿಯರ್** ಜನಿಸಿದುದು ೧೫೬೪ ರಲ್ಲಿ.

ಷೇಕ್ಸ್‌ಪಿಯರ್ ಬದುಕಿದ್ದ ಕಾಲ ಚಟುವಟಿಕೆಯ ಕಾಲ. ಡಚ್ ಜನರು ಮೌನಿ ವಿಲಿಯಂ ಎಂಬಾತನನ್ನು ಮುಖಂಡನನ್ನಾಗಿಟ್ಟುಕೊಂಡು ಸ್ವತಂತ್ರರಾಗಲು ಹೆಣಗಾಡುತ್ತಿದ್ದರು; ಎಲಿಸ್ಟಬೆತ್ ರಾಣಿಯನ್ನು ಮುಂದಿಟ್ಟುಕೊಂಡು ಇಂಗ್ಲಿಷ್‌ಜನರು ಡಚ್ಚರಶತ್ರುವಾದ ಸ್ಪೆಯ್ನ್ ದೊರೆ ಫಿಲಿಪ್ಪನನ್ನೇ

ಎದುರಿಸುತ್ತಿದ್ದರು. ಧೈರ್ಯಸಾಹಸಗಳು ತುಂಬಿದ ಸಂಗತಿಗಳು ಸಂಭವಿಸುತ್ತಿದ್ದವು. ಜಗತ್ತಿನ ಇತರ ಭಾಗಗಳಲ್ಲಿದ್ದ ದೇಶಗಳ ಸಮಾಚಾರದ ವಿವರಗಳು ತಿಳಿಯುತ್ತಲೇ ಇದ್ದುವು. ತೀರಪಟ್ಟಣಗಳಲ್ಲಿದ್ದ ಹುಡುಗರಿಗೆ ಆಶ್ಚರ್ಯದ ಮೇಲಾಶ್ಚರ್ಯವಾಗಿ ಹೊರಗೋಡಾಡಿ ಬಂದ ನಾವಿಕರ ಸಾಹಸಕೃತ್ಯಗಳು ನಿತ್ಯವೂ ಕೇಳಿಬರುತ್ತಿದ್ದವು. ಆ ಪ್ರಯಾಣಗಳೆಷ್ಟು ದೂರ, ಅವರು ದಾಟಿದ ಅಪಾಯಗಳೆಂತಹವು, ಆ ದೂರದೇಶಗಳ ನೋಟವೆಂತಹುದು, ಅವುಗಳ ಐಶ್ವರ್ಯವೆಷ್ಟು ಮುಂತಾದ ಮಾತುಕತೆಗಳು ಎಲ್ಲೆಲ್ಲಿಯೂ ತುಂಬಿದ್ದುವು. ಪೃಥ್ವಿಯಲ್ಲಿ ಎಷ್ಟು ಆಶ್ಚರ್ಯ ತುಂಬಿದೆ ಎಂಬ ಭಾವನೆಯು ಆಗಿನ ಹುಡುಗರ ಮನಸ್ಸಿನಲ್ಲಿ ಕುಣಿಯುತ್ತಿತ್ತು.

ಮಧ್ಯಮಯುಗದ ಏಕರೀತಿಯಾದ ಜನಜೀವನದಲ್ಲಿ ಪ್ರಯಾಸಮಾತ್ರವಲ್ಲದೆ ಬೇಸರಿಕೆಯೂ ತೋರಿತ್ತು. ಆಧುನಿಕಕಾಲದ ಪಟ್ಟಣಗಳಲ್ಲಿರುವವರಿಗೆ ಅದನ್ನು ತಿಳಿಯುವುದು ಸುಲಭವಲ್ಲ. ರೈಲಿಗೆ ದೂರವಾಗಿ ಟಪಾಲೆಂಬುದಿಲ್ಲದೆ ವೃತ್ತಾಂತ ಪತ್ರಿಕೆಗಳನ್ನು ಕಾಣದೆ ಹಿಂದುಸ್ಥಾನದ ಗ್ರಾಮಾಂತರಪ್ರದೇಶದಲ್ಲಿದ್ದವರಿಗೆ ತಕ್ಕಮಟ್ಟಿಗೆ ಗೋಚರವಾಗಬಹುದು. ರಿನೇಸಾನ್ಸ್ ಕಾಲದಿಂದ ಯೂರೋಪಿನಲ್ಲಿ ಆ ಪರಿಸ್ಥಿತಿಯು ವ್ಯತ್ಯಸ್ತಗೊಳ್ಳಲು ಮೊದಲಾಯಿತು. ಪಟ್ಟಣಗಳಲ್ಲಿಯೇ ಆ ವ್ಯತ್ಯಾಸ ಮೊದಲು ತೋರಿದ್ದು. ಸುತ್ತಮುತ್ತಲಲ್ಲಿಯೂ ಅನ್ಯದೇಶಗಳಲ್ಲಿಯೂ ಏನು ನಡೆಯುತ್ತಿದೆಯೋ ಎಂಬ ಕುತೂಹಲ ಜನರಿಗುಂಟಾಯಿತು. ಸುದ್ದಿ ಸಮಾಚಾರಗಳು ಬೇಕೆನಿಸಿದುವು; ಚಟುವಟಿಕೆ ತೋರಿತು, ವಿನೋದಗಳಲ್ಲಿ ಆಸಕ್ತಿ ಹೆಚ್ಚಿತು. ಈ ಬಗೆಯು ಆದರ ಜನರಲ್ಲಿ ಹೆಚ್ಚಿದಂತೆ ಕ್ರಮವಾಗಿ ಮೊದಲು ನಾಟಕಶಾಲೆ ಬಂತು; ತರುವಾಯ ನಾವೆಲುಗಳೆಂಬ ಹೊಸ ಕಥೆಗಳು; ಆ ಬಳಿಕ ಸಮಾಚಾರ ಪತ್ರಿಕೆಗಳು.

ಮುಖ್ಯಪ್ರಶ್ನೆ ೪೯: ಷೇಕ್ಸ್‌ಪಿಯರನ ಪ್ರತಿಭೆ ಯಾವ ಬಗೆಗಳಲ್ಲಿ ಕಾಣಿಸಿಕೊಂಡಿತು? ಈಗಲೂ ಸರ್ವತ್ರ ಆತನ ನಾಟಕಗಳಲ್ಲಿ ಜನರೇಕೆ ಅಭಿರುಚಿಯನ್ನು ತೋರಿಸುತ್ತಾರೆ?

ವಿಲಿಯಂ ಷೇಕ್ಸ್‌ಪಿಯರನ ಜೀವಿತದ ವಿಷಯವಾಗಿ ತಿಳಿದಿರುವುದು ಅತ್ಯಲ್ಪ; ಹುಡುಗತನದಲ್ಲಿ ತುಂಟನಾಗಿದ್ದುದು ನಿಶ್ಚಯ. ಇಪ್ಪತ್ತೊಂದನೆ ವಯಸ್ಸಿನೊಳಗಾಗಿ ಬೇಟೆಕದ್ದವರ ಜೊತೆ ಸೇರಿ ಆ ತೊಂದರೆಯಿಂದ ತಪ್ಪಿಸಿಕೊಳ್ಳಲು ಸ್ಟ್ರಾಟ್‌ಫರ್ಡ್ (Stratford) ಎಂಬ ತನ್ನೂರನ್ನೇ ಬಿಟ್ಟೋಡಿದನು. ಲಂಡನ್ ಸೇರಿ ಜೀವನೋಪಾಯ ಹುಡುಕಿದನು. ಆಗತಾನೇ

ಪ್ರಾರಂಭವಾಗಿದ್ದ ನಾಟಕದಾಟಗಳಲ್ಲಿ ನಟನಾಗಿ ಸೇರಲು ಮನಸ್ಸು ಮಾಡಿದನು. ಚಿಲ್ಲರೆಪಾತ್ರಗಳನ್ನು ಸಂಪಾದಿಸಿಕೊಂಡು ಸೈಯೆನಿಸಿಕೊಂಡನು. ಸ್ವಲ್ಪಕಾಲದಲ್ಲಿ ಉತ್ತಮವಾದ ನಾಟಕಗಳನ್ನು ತಾನೇಕೆ ಬರೆದು ಒದಗಿಸ ಬಾರದೆಂದು ತೋರಿತು.

ಆಗಿನ ನಾಟಕಗಳು ಒರಟಾಗಿಯೇ ಇದ್ದುವು. ನೋಡಬಂದ ಜನರೂ ಅಸಂಸ್ಕೃತರು. ಅವರಿಗೆ ಬೇಕಾದುದು ಒರಟು ನಕಲಿ ಅಥವಾ ರೋಮಾಂಚ ಗೊಳಿಸಬಲ್ಲ ಯುದ್ಧಗಳು ಅಥವಾ ಹತ್ಯಗಳು. ಷೇಕ್ಸ್‌ಪಿಯರ್ ಸಹಜವಾದ ಕವಿತಾಶಕ್ತಿಯನ್ನು ಪಡೆದಿದ್ದವನು. ರೋಮಕಸಾಹಿತ್ಯದ ಎರಡು ಕಥೆ ಗಳನ್ನು ಪದ್ಯರೂಪದಲ್ಲಿ ಆಗಲೇ ಬರೆದಿದ್ದನು. ಜನ್ಮತಃ ಚತುರನು, ಚಟುಲ ದೃಷ್ಟಿಯುಳ್ಳವನು. ಪಾಂಡಿತ್ಯವೋ ಪದ್ಯಕಾವ್ಯವೋ ತುಂಬಿದ ನಾಟಕ ಜನರಿಗೆ ರುಚಿಸಲಾರದೆಂದು ತಿಳಿದಿದ್ದನು. ಆಗ ಆಡುತ್ತಿದ್ದ ನಾಟಕಗಳು ಕಸಕ್ಕೆ ಸಮಾನವಾಗಿದ್ದವು. ಪಾಂಡಿತ್ಯದ ರಂಪಿಲ್ಲದೆ ಸೊಗಸನ್ನು ತೋರುವ ನಾಟಕ ಗಳನ್ನು ಬರೆಯಲು ಮನಮಾಡಿ ಷೇಕ್ಸ್‌ಪಿಯರ್ ತನಗೆ ಸಿಕ್ಕಿದ ಮನೋ ರಂಜಕ ಕಥೆಗಳನ್ನು ಎತ್ತಿಕೊಂಡನು. ಪುರಾಣವೋ ಇತಿಹಾಸವೋ ಚಿತ್ತಾ ಕರ್ಷಕವಾಗಿದ್ದರೆ ಸಾಕೆಂದನು. ಆ ಕಥೆಗಳನ್ನು ತಾನೇ ಪುನಃ ಕಟ್ಟಿ ಕೆಲವು ವೇಳೆ ರೂಪವನ್ನೇ ಬದಲಾಯಿಸಿಕೊಂಡನು. ಹೊಸ ನಾಟಕಗಳನ್ನು ಬರೆದು ಆ ಕಾಲದ ಜನರನ್ನು ಮೆಚ್ಚಿಸಿದನು. ಸೊಗಸು ಮಾತ್ರವಲ್ಲ ಆತನ ನಾಟಕ ಗಳಲ್ಲಿರುವುದು; ಕಾವ್ಯಸೌಂದರ್ಯವೂ ತತ್ತ್ವವೂ ತುಂಬಿವೆ. ಆದ್ದರಿಂದ ಅವು ವಿಶ್ವಸಾಹಿತ್ಯದಲ್ಲಿ ಗಣ್ಯ.

ಮೊದಲು ಪೂರಯಿಸಿದ ನಾಟಕ ಲವ್ಸ್ ಲೇಬರ್ಸ್ ಲಾಸ್ಟ್ (Love's Labour's Lost) ಎಂಬುದು. ಅದನ್ನು ಬರೆದಾಗ ಷೇಕ್ಸ್‌ಪಿಯರ್ ಇಪ್ಪತ್ತೇಳು ವರ್ಷದವನು. ಆ ತರುವಾಯ ನಾಟಕಗಳನ್ನು ಬರೆಯುತ್ತಲೇ ಇದ್ದನು. ಒಟ್ಟು ಮೂವತ್ತೈದು ನಾಟಕಗಳನ್ನೂ ಹಲವು ಸಣ್ಣ ಪದ್ಯಗಳನ್ನೂ ಬರೆದನು.

ಆ ಕಾಲದ ಜನಜೀವನವನ್ನು ಪ್ರತಿಬಿಂಬಿಸುವಂತಿದ್ದರೂ ಷೇಕ್ಸ್‌ಪಿಯರನ ನಾಟಕಗಳಲ್ಲಿ ಆಧುನಿಕಕಾಲದವರಿಗೂ ಆಸಕ್ತಿ ಮತ್ತು ಆದರಗಳನ್ನು ಹುಟ್ಟಿ ಸುವ ಅಂಶಗಳಿರುವುದು ನಿಜವಾಗಿಯೂ ಅಚ್ಚರಿ. ಅವುಗಳನ್ನು ಆತನ ದೇಶ ಸ್ಥರು ಮಾತ್ರವಲ್ಲದೆ ಭೂಮಂಡಲದಲ್ಲಿರುವ ಎಲ್ಲರೂ ಅಭಿಮಾನದಿಂದ ಓದು ವರು. ಪ್ರಾಯಶಃ ಎಲ್ಲ ಭಾಷೆಗಳಿಗೂ ಆ ನಾಟಕಗಳು ತರ್ಜುಮೆಯಾಗಿರು ವುದಲ್ಲದೆ ಈಗಲೂ ಅವುಗಳನ್ನಾಡಿ ಆನಂದಪಡುತ್ತಾರೆ. ಇದು ಹೇಗೆ?

ಎಂದರೆ ಆತನ ನಾಟಕಗಳಲ್ಲಿ ರುಚಿಕರವಾದ ಘಟನೆಗಳು, ಸೊಗಸಾದ ಮಾತುಗಳು, ಮನರಂಜಕವಾದ ಹಾಸ್ಯಗಳು ತುಂಬಿರುವುದು ಮಾತ್ರವಲ್ಲದೆ, ಸರ್ವಕಾಲಗಳಲ್ಲಿಯೂ ಸಮಸ್ತದೇಶಗಳಲ್ಲಿಯೂ ಇರುವ ಸ್ತ್ರೀಪುರುಷರ ಮನಸ್ಸಿನಲ್ಲಿ ತೋರುವ ಆಸೆಪ್ರತ್ಯಾಸೆಗಳೂ ಸುಖದುಃಖಗಳೂ ಸಂತೋಷಸಂಕಟಗಳೂ ಕನ್ನಡಿಯಲ್ಲಿ ಕಂಡಂತೆ ಕಾಣುತ್ತವೆ. ದೃಷ್ಟಾಂತಕ್ಕೆ ಜೂಲಿಯಸ್ ಸೀಸ್ಸರೆಂಬ ಘನವಿಷಾದಾಂತರೂಪಕದಲ್ಲಿ ಷೇಕ್ಸ್‌ಪಿಯರ್ ಹಲವು ಪಿತೂರಿಗಾರರಿಂದ ಒಬ್ಬ ವೀರನ ವಧೆಯಾದಷ್ಟು ಮಾತ್ರವನ್ನೇ ತೋರಿಸಿರುವುದಿಲ್ಲ. ಆ ಪಿತೂರಿಗೆ ಸೇರಿದ್ದ ಪ್ರತಿಯೊಬ್ಬರ ಮನಸ್ಸಿನ ಯೋಚನೆಗಳನ್ನೂ ಉದ್ದೇಶಗಳನ್ನೂ ಪ್ರತ್ಯೇಕವಾಗಿ ಚಿತ್ರಿಸಿರುತ್ತಾನೆ. ಪಿತೂರಿಗೆ ಸೇರಿಕೊಂಡಾಗ ಅಸೂಯೆಯಿಂದ ಪ್ರೇರಿತರಾದವರು ಬೇರೆ, ನಿಷ್ಕಾಮ್ಯವೈಪರೀತ್ಯದಿಂದ ಪ್ರೇರಿತರಾದವರು ಬೇರೆ. ಪಿತೂರಿಗಾರರಿಗೆ ಮುಖಂಡನಾಗಿದ್ದ ಬ್ರೂಟಸ್ಸನ ಮನಸ್ಸಿನಲ್ಲಿದ್ದ ಧರ್ಮಸಂಕಟವೆಷ್ಟು! ಸೀಸ್ಸರನ ಮೈತ್ರಿ ದೊಡ್ಡದೇ ರಾಷ್ಟ್ರಕ್ಕಾಗಿ ತನ್ನಿಂದಾಗಬೇಕಾದ ಕರ್ತವ್ಯ ದೊಡ್ಡದೇ ಎಂಬ ತಳಮಳದಲ್ಲಿ ಬ್ರೂಟಸ್ ಸಿಕ್ಕಿಕೊಂಡ ಸಂದರ್ಭ ಎಷ್ಟು ಹೃದಯಂಗಮವಾಗಿ ನಾಟಕದಲ್ಲಿ ನಿರೂಪಿತವಾಗಿದೆ! ಈ ಲೋಕಾನುಭವದ ಮಹತ್ವವಿರುವುದರಿಂದಲೇ ಆ ನಾಟಕಗಳಲ್ಲಿ ಎಲ್ಲರಿಗೂ ಅಭಿರುಚಿ.

ಈಗಿನ ಕಾಲದಲ್ಲಾದರೆ ರಂಗಮಂಟಪದಲ್ಲಿ ಬೇಕಾದ ದೃಶ್ಯಗಳನ್ನು ತೋರಿಸಲು ತಕ್ಕ ಪರದೆಗಳು ಪಟಗಳು ಮುಂತಾದ ಅನೇಕ ಸಲಕರಣೆಗಳಿರುವುವು. ಯಾವಕಾಲದ ಕಥೆಯೋ ಅದಕ್ಕೆ ತಕ್ಕ ಉಡುಪುಗಳನ್ನು ಧರಿಸಿಕೊಂಡು ನಟರು ನಟಿಸುವರು. ಷೇಕ್ಸ್‌ಪಿಯರನ ಕಾಲದಲ್ಲಿ ಅಂತಹದೊಂದಾದರೂ ಇರಲಿಲ್ಲ. ಚಿತ್ರಕೆಲಸಮಾಡಿದ ಪರದೆಯೇ ಇಲ್ಲ. ಒಂದು ಕಟ್ಟೆ, ಅದರ ಮೇಲೊಂದು ಚಾವಣಿ, ಹಿಂಭಾಗದಲ್ಲಿ ಚಂದ್ರಶಾಲೆಯಂತಹ ಮಹಡಿಯೆಷ್ಟೋ ಅಷ್ಟೇ ರಂಗಭೂಮಿ. ಪಕ್ಕಗಳಲ್ಲಿಯೂ ಹಿಂದುಗಡೆಯಲ್ಲಿಯೂ ವಸ್ತ್ರಗಳನ್ನು ಕಟ್ಟಿದರೆ ಅದೇ ನೇಪಥ್ಯ. ನಟರಿಗೆ ಅವರವರ ಉಡುಪೇ! ಹೀಗಿದ್ದುದರಿಂದ ಆಟದಲ್ಲಿ ಕಳೆಗಟ್ಟಲು ನಟರಾಡುವ ಮಾತುಗಳೂ, ತೋರುವ ಅಭಿನಯವೂ ಮುಖ್ಯವಾಗಿದ್ದುವು. ಅಂತಹ ಸನ್ನಿವೇಶದಲ್ಲಿ ಜನರನ್ನು ಆಕರ್ಷಿಸುವಂತಹ ನಾಟಕಗಳನ್ನು ಬರೆದ ಷೇಕ್ಸ್‌ಪಿಯರ್ ನಿಜವಾಗಿಯೂ ದೊಡ್ಡವನು. ಆತನ ನಾಟಕಗಳಲ್ಲಿ ಶೋಕಪೂರಿತವಾದ ದೃಶ್ಯಗಳೂ ಹಾಸ್ಯತುಂಬಿದ ದೃಶ್ಯಗಳೂ ಇರುವುದಲ್ಲದೆ ಮರೆಯಲಾಗದಂತಹ ಪದ್ಯರಚನೆಯಿದೆ. ಸಹೃದಯರೆನಿಸಿದವರೆಲ್ಲರೂ ಸರ್ವಕಾಲಗಳಲ್ಲಿಯೂ ಸರ್ವದೇಶಗಳಲ್ಲಿಯೂ ಅವುಗಳನ್ನು ಸ್ಮರಿಸುತ್ತಲಿರು

ವರು. ಆತನ ಕೃತಿಗಳು 'ಒಂದು ಕಾಲದಲ್ಲಿ ಮಾತ್ರವಲ್ಲ, ಸರ್ವಕಾಲಗಳಲ್ಲಿಯೂ ರಂಜಿಸುವ ನಿಧಿ'ಯೆಂಬ ಮಾತು ಯಥಾರ್ಥ. ಆತನ ಕಾಲದವರಿಗೆ ಪ್ರಾಯಶಃ



ಷೇಕ್ಸ್‌ಪಿಯರ್ ಕಾಲದ ರಂಗಮಂಟಪ

ಆತನು ದೊಡ್ಡವನೆಂದು ತೋರಲಿಲ್ಲ. ಕಣ್ಣೆದುರಿಗೋಡಾಡುತ್ತಿದ್ದ ಆಸ್ಥಾನಿಕನೋ ಹುದ್ದೇದಾರನೋ ಈ ಕವಿಗಿಂತಲೂ ಪ್ರಭಾವಶಾಲಿಯೆಂದು ಅವರೆಂದುಕೊಂಡಿರಬಹುದು. ಆದರೆ ಷೇಕ್ಸ್‌ಪಿಯರನು ಲೋಕಕ್ಕೆ ಮಾಡಿದಷ್ಟು ಉಪಕಾರವು ಮತ್ತಾರಿಂದಲೂ ಆಗಲಿಲ್ಲ. ತನ್ನ ಮನಸ್ಸಿನ ಭಾವನೆ

ಗಳನ್ನೂ ಆಸೆಗಳನ್ನೂ ಮಾನವಮಾತ್ರದವನು ತಿಳಿದುಕೊಳ್ಳುವಂತೆ ಮಾಡಿರುವುದರಲ್ಲಿ ಷೇಕ್ಸ್ಪಿಯರನ ಉಪಕಾರ ಅಮೋಘವಾಗಿದೆ. ಆದ್ದರಿಂದ ಆತನನ್ನು ಚಿರಂಜೀವಿಯಾದ ವಿಶ್ವಕವಿಯೆಂದು ಯಥಾರ್ಥವಾಗಿ ಕರೆಯಬಹುದು.

ಷೇಕ್ಸ್ಪಿಯರನ ಹೃದಯವನ್ನರಿಯಲು ಆತನ ನಾಟಕಗಳನ್ನು ಸ್ವಂತವಾಗಿ ಓದುವುದಕ್ಕಿಂತ ಮೇಲಾದ ಉಪಾಯವಿಲ್ಲ. ನೀವೇ ಓದಿನೋಡಿ. ನೀವು ಸ್ವಂತವಾಗಿ ಓದಲು ಮೊದಲಿಟ್ಟರೆ ಸಾರ್ಥಕವಾಗುವುದು.

ಮುಖ್ಯಪ್ರಶ್ನೆ ೫೦ : ಗಲಿಲಿಯೊ ಕಂಡು ಸ್ಥಾಪಿಸಿದ ಹೊಸ ಅಂಶಗಳು ಯಾವುವು? ಅವುಗಳ ಪರಿಣಾಮವೇನು?


ರಿನೇಸ್ಸಾನ್ಸ್ ಶಬ್ದಕ್ಕೆ ಅರ್ಥ ವಿದ್ಯೆಯ ಪುನರುಜ್ಜೀವನ. ಪೃಥ್ವಿಯಮೇಲೆ ಬದುಕಿದರೆ ಅಂತಹ ಕಾಲದಲ್ಲಿ ಬದುಕಬೇಕೆನ್ನಿಸುವಷ್ಟು ಆಶ್ಚರ್ಯಭರಿತವಾದ ಕಾಲ ಅದು. ಫ್ಯೂಡಲ್ ಸ್ಥಿತಿಗತಿಗಳು ನೆಲೆಸಿ ಕತ್ತಲೆ ಕವಿದಂತಹ ಕಾಲ ಕಳೆದಿತ್ತು. ಪಡುವಣ ಯೂರೋಪಿಗೆ ಹೊಸ ಹುಟ್ಟು ಬಂದಂತಿತ್ತು. ಅಪರಿಚಿತ ದೇಶಗಳ, ಅಜ್ಞಾತವಸ್ತುಗಳ ತಿಳಿವಲ್ಲದೆ ನೂತನ ಆಹಾರಪಾನೀಯಗಳೂ ನವೀನ ಯಂತ್ರೋಪಕರಣಗಳೂ ಹೊರಪಡುತ್ತಿದ್ದ ಕಾಲ. ಹಿಂದೆಂದೂ ಕಾಣದ ರೀತಿಯಲ್ಲಿ ಜನರು ಭಾವಿಸಿ ಯೋಚಿಸಿ ಹೊಸಬಗೆಯಲ್ಲಿ ಮಾತನಾಡುತ್ತಿದ್ದ ಕಾಲವಾಗಿತ್ತು. ಷೇಕ್ಸ್ಪಿಯರ್ ಬರೆದ ನಾಟಕಗಳಲ್ಲಿಯೇ ಇವುಗಳ ಸೂಚನೆ ತುಂಬಿದೆ.

ರಾಜರ್ ಬೇಕನ್ ಮತ್ತು ಲಿಯೊನಾರ್ಡೊ ಡ ವಿಂಚೀ ವೃತ್ತಾಂತದಿಂದ ಅಲ್ಪಸ್ವಲ್ಪವಾಗಿ ಈ ಹೊಸಕಾಲದ ಪ್ರಭಾವವು ನಮಗೆ ಗೋಚರವಾಯಿತು. ಆ ಪ್ರಭಾವ ಷೇಕ್ಸ್ಪಿಯರನ ಕಾಲದಲ್ಲಿ ಶಿಖರಕ್ಕೇರಿತ್ತು. ಅದೇ ಕಾಲದಲ್ಲಿ ಇತರ ಕ್ಷೇತ್ರಗಳಲ್ಲಿಯೂ ಕೃತಕೃತ್ಯರಾದವರ ವಿಚಾರವಾಗಿ ಸ್ವಲ್ಪ ತಿಳಿದುಕೊಳ್ಳುವುದು ನಮ್ಮ ಮುಂದಿನ ಕೆಲಸ.

ಗಲಿಲಿಯೋ ಗಣಿತ, ಸಿದ್ಧಾಂತ ಶಾಸ್ತ್ರಗಳಲ್ಲಿ ಪಾರಂಗತನಾದವನು. ಇಟಲಿ ಆತನ ದೇಶ. ಷೇಕ್ಸ್ಪಿಯರ್ ಬದುಕಿದ್ದ ಕಾಲದಲ್ಲಿಯೇ ಅಂದರೆ ನಮ್ಮ ದೇಶದಲ್ಲಿ ಅಕ್ಬರ್‌ಪಾದಶಾಹನು ವಿದ್ವಾಂಸರನ್ನು ಬರಮಾಡಿಕೊಳ್ಳುತ್ತಿದ್ದಾಗ ಗಲಿಲಿಯೊ ಪೀಸ (Pisa) ಎಂಬ ನಗರದ ವಿಶ್ವವಿದ್ಯಾಪೀಠದಲ್ಲಿ ಗಣಿತಶಾಸ್ತ್ರಬೋಧಕನಾಗಿದ್ದನು. ಆತನ ಕಾಲಕ್ಕೆ ಬಲು ಹಿಂದೆಯೇ ಗ್ರೀಕ ಶಾಸ್ತ್ರಜ್ಞರೂ ಭಾರತೀಯಸಿದ್ಧಾಂತಿಗಳೂ ಸೂರ್ಯನ ಸುತ್ತ ಭೂಮಿ ತಿರುಗುವ ಅಂಶವನ್ನು ತಿಳಿದಿದ್ದರು. ಆದರೆ ಗ್ರೀಸ್ ಮತ್ತು ರೋಮ್

ಧ್ವಂಸವಾದ ಅವಾಂತರದ ಅಂಧಕಾರಕಾಲದಲ್ಲಿ ಆ ಜ್ಞಾನವಲ್ಲದೆ ಇನ್ನೂ ಎಷ್ಟೋ ಜ್ಞಾನರಾಶಿ ನಷ್ಟವಾಗಿತ್ತು. ಷೇಕ್ಸ್‌ಪಿಯರನಿಗೆ ಸುಮಾರು ನೂರು ವರ್ಷಗಳಿಗೆ ಮುಂಚಿತವಾಗಿ ಪೋಲಂಡಿನ ಗಣಿತಶಾಸ್ತ್ರಜ್ಞ **ಕೋಪರ್ನಿಕಸ್** (Copernicus) ಎಂಬಾತನು ಪುನಃ ಆ ಅಂಶವನ್ನು ಸಾಧಿಸಿದ್ದನು. ಆದರೆ ಗಲಿಲಿಯೊ **ದೂರದರ್ಶಿನಿ** (telescope) ಯನ್ನು ರಚಿಸಿ ಆ ಮೂಲಕ ಆ ಅಂಶವನ್ನು ಸ್ಥಾಪಿಸಲು ಬಲವಾದ ಪ್ರಮಾಣಗಳನ್ನು ತೋರಬಲ್ಲವನಾದನು. ಚಂದ್ರಮಂಡಲವನ್ನೂ ಗ್ರಹಗಳನ್ನೂ ಅಲ್ಲದೆ ತನ್ನ ದೂರದರ್ಶಿನಿಯ ಸಹಾಯದಿಂದ ಗಲಿಲಿಯೊ ಸೂರ್ಯಬಿಂಬದ ಮಚ್ಚೆಗಳನ್ನೂ ಸೂಕ್ಷ್ಮವಾದ ನಕ್ಷತ್ರಗಳನ್ನೂ ಪರೀಕ್ಷಿಸುತ್ತಲಿದ್ದನು.

ದೂರದರ್ಶಿನಿಯನ್ನು ಸಿದ್ಧಗೊಳಿಸಿ ಯಂತ್ರಶಾಸ್ತ್ರವನ್ನು ವಿಸ್ತರಿಸುತ್ತ ಪತದ್ವಸ್ತುಗಳ ವೇಗೋತ್ಕರ್ಷ, ಪೆಂಡ್ಯುಲಂ ಮುಂತಾದ ಹೊಸಭಾಗಗಳನ್ನು ವಿವರಿಸಿದಾಗ ಗಲಿಲಿಯೊ ಪ್ರಸಿದ್ಧಿಪಡೆದನು. ಆದರೆ ರೋಮನ್ ಕ್ಯಾಥಲಿಕ್ ಮತಗುರುಗಳೂ ಅಧಿಕಾರಿಗಳೂ ಆತನ ವಿರೋಧಿಗಳಾದರು. ಭೂಮಂಡಲವೇ ಕೇಂದ್ರವೆಂದೂ ಸೂರ್ಯಚಂದ್ರನಕ್ಷತ್ರಾದಿಗಳು ಭೂಮಿಯ ಸುತ್ತಲೂ ತಿರುಗುತ್ತವೆಂದೂ ಅವರ ನಂಬಿಕೆ. ಅರವತ್ತಾರನೆ ವಯಸ್ಸಿನ ಗಲಿಲಿಯೊವನ್ನು ಇಂಕ್ವಿಸಿಷನ್ ವಿಚಾರಣಾಸ್ಥಾನಕ್ಕೆಳೆದು ನಿಲ್ಲಿಸಿದರು. ಮತವಿರುದ್ಧವಾದ ರೀತಿಯಲ್ಲಿ ಅಭಿಪ್ರಾಯವ್ಯಕ್ತಗೊಳಿಸಿದನೆಂಬ ಆಪಾದನೆಯಾಯಿತು. ಇನ್ನು



ಗಲಿಲಿಯೋ

ಮುಂದೆ ಅಂತಹ ಅಭಿಪ್ರಾಯಗಳನ್ನು ವರ್ಜಿಸುವುದಾಗಿ ಎಲ್ಲರೆದುರಿಗೆ ಹೇಳಬೇಕೆಂದು ಆತನನ್ನು ನಿರ್ಬಂಧಪಡಿಸಿದರು. ಒಪ್ಪದಿದ್ದಲ್ಲಿ ಚಿತ್ರಹಿಂಸೆಗೆ ಗುರಿಯಾಗಿ ಕಡೆಗೆ ಪ್ರಾಯಶಃ ದಹನಕ್ಕೊಳಗಾಗಬೇಕಾಗಿತ್ತು. ವೃದ್ಧಾಪ್ಯದಲ್ಲಿದ್ದ ಗಲಿಲಿಯೊ ಅದನ್ನು ತಪ್ಪಿಸಿಕೊಳ್ಳಲು ತಾನು ಅದುವರೆಗೂ ಹೇಳುತ್ತಿದ್ದುದು ತಪ್ಪೆಂದು ಪ್ರಕಟವಾಗಿ ಘೋಷಿಸಲೊಪ್ಪಿದನು. ಸೂರ್ಯನ ಸುತ್ತ ಭೂಮಿ ತಿರುಗುವ ಅಂಶವನ್ನು ತಾನು ಇನ್ನು ಮೇಲೆ ನಂಬುವುದಿಲ್ಲ

ವೆಂದು ಆ ಸಮಯದಲ್ಲಿ ಎಲ್ಲರಿಗೂ ಕೇಳುವಂತೆ ಹೇಳಿದವನು ಸಮೀಪದಲ್ಲಿದ್ದ ಮಿತ್ರನೊಬ್ಬಾತನ ಕಿವಿಯಲ್ಲಿ "ಆದರೇನು, ಭೂಮಿ ನಿಜವಾಗಿ ತಿರುಗುತ್ತಲೇ ಇರುತ್ತದೆ" ಎಂದು ಉಸುರಿದನಂತೆ. ಈ ವೃತ್ತಾಂತವೊಂದುವೇಳೆ ನಿಜವಲ್ಲ ದಿದ್ದರೂ ಗಲಿಲಿಯೋಕಾಲಕ್ಕೆ ಜನರು ಮೌಢ್ಯವನ್ನು ಬಿಡುತ್ತಿದ್ದರೆಂಬ ಸೂಚನೆ ಅದರಲ್ಲುಂಟು. ಪೂರ್ವಿಕರು ಹೇಳಿದ್ದೆಂದೋ ಪುರಾತನಗ್ರಂಥದಲ್ಲಿದೆ ಯೆಂದೋ ನಂಬದೆ ಜನರು ಶಾಸ್ತ್ರರೀತ್ಯಾ ಪರೀಕ್ಷೆಯಿಂದ ತಿಳಿದ ಅಂಶಗಳೇ ಪ್ರಮಾಣವೆಂದು ಭಾವಿಸತೊಡಗಿದರು.

ಮತ್ತೊಂದು ದೃಷ್ಟಾಂತವನ್ನು ಇನ್ನೊಬ್ಬ ಶಾಸ್ತ್ರಸಾಧಕನ ವೃತ್ತಾಂತ ದಲ್ಲಿ ಕಾಣಬಹುದು. ಷೇಕ್ಸ್‌ಪಿಯರ್ ಸಮಕಾಲಿಕನಾಗಿ ಇಂಗ್ಲಂಡಿನಲ್ಲಿಯೇ ಇದ್ದಾತನು. ಆತನ ಹೆಸರು '**ಸರ್ ಫ್ರಾನ್ಸಿಸ್ ಬೇಕನ್**' (Sir Francis Bacon). ರಾಜರ್‌ಬೇಕನ್ ಬೇರೆ, ಫ್ರಾನ್ಸಿಸ್ ಬೇಕನ್ ಬೇರೆ. ಶಾಸ್ತ್ರ ಸಾಧನೆಯ ವಿಧಾನವನ್ನು ಸ್ಥಾಪಿಸಿದ ಕಾರಣದಿಂದ ಫ್ರಾನ್ಸಿಸ್ ಬೇಕನ್ನನನ್ನು ಶಾಸ್ತ್ರರಾಶಿಗೆಲ್ಲ ಅಸ್ತಿಭಾರವಿಟ್ಟ ಮಹಾಪುರುಷನೆನ್ನಬಹುದು. ಯಾವುದೋ ಒಂದು ರಚನೆಯನ್ನು ಮನಸ್ಸಿನಲ್ಲಿ ಕಟ್ಟಿ ಆ ರಚನೆಗೆ ತಕ್ಕಂತೆ ಸಂಗತಿಗಳ ನ್ನಾರಿಸಿ ಹೊಂದಿಸಿಕೊಳ್ಳುವುದು ತಪ್ಪೆಂದೂ ಅನೇಕಾನೇಕ ಪರೀಕ್ಷೆಗಳನ್ನು ಸಾವಧಾನವಾಗಿ ನಡೆಸಿ ಬಂದ ಫಲಿತಾಂಶವನ್ನಂಗೀಕರಿಸಿಕೊಂಡು ತರು ವಾಯ ಹೇಳಬೇಕೆಂದೂ ಆತನ ಪ್ರತಿಪಾದನೆ. ಬಂದ ಫಲಿತಾಂಶವನ್ನು ಚೆನ್ನಾಗಿ ಪುನರ್ವಿಮರ್ಶೆಮಾಡಿದ ಬಳಿಕ ಅದರಿಂದ ಸೂಚಿತವಾದ ರಚನೆ ಯನ್ನು ಸಿದ್ಧಾಂತವೆನ್ನಬೇಕು. ಆ ತರುವಾಯವೂ ವ್ಯತಿರಿಕ್ತವಾದ ಅಥವಾ ಹೊಂದಿಕೆಕಾಣದ ಸಂಗತಿಗಳು ಕಂಡರೆ ಹಿಂದಿನ ಸಿದ್ಧಾಂತವನ್ನೋ ರಚನೆ ಯನ್ನೋ ಬಿಟ್ಟುಬಿಡುವ ಸಿದ್ಧತೆಯಿರಬೇಕು.

ಫ್ರಾನ್ಸಿಸ್‌ಬೇಕನ್ ಶಾಸ್ತ್ರಜ್ಞ ಮಾತ್ರನಲ್ಲ. ಉತ್ತಮಲೇಖಕನೂ ಆಗಿ ದ್ದನು. ಆತನು ಬರೆದ ಉಪನ್ಯಾಸ ಸಂಗ್ರಹವುಂಟು. ಹಲಕೆಲವು ಮಾತು ಗಳಲ್ಲಿ ತನ್ನ ಅನುಭವದ ಅಮೋಘರಾಶಿಯನ್ನೆಲ್ಲ ಅಡಗಿಸಿ ಬರೆದಿಟ್ಟಿರುತ್ತಾನೆ.

ರಿನೇಸ್ಸಾನ್ಸ್ ಕಾಲವೆಂಬುದು ಐರೋಪ್ಯದೇಶಗಳಲ್ಲಿ ಹೊಸದಾಗಿ ತೋರಿ ಬಂದ ಜ್ಞಾನರಾಶಿಗೆ ಮಾತ್ರವೇ ಹೆಸರಾದುದಲ್ಲ. ಆ ಪ್ರಾಪ್ತಿಯ ಪರಿಣಾಮ ವಾದ ನವಚೈತನ್ಯವು ಆ ಕಾಲದ ಪದ್ಯಗದ್ಯಲೇಖಕರ ಪುಸ್ತಕಗಳಲ್ಲಿ ಹೊರ ಹೊಮ್ಮುತ್ತದೆ. ಈ ಎರಡಂಶಗಳನ್ನು ನಾವು ತಿಳಿದಂತಾಯಿತು.

ಅಭ್ಯಾಸಗಳು

೧. ರಾಜರ್‌ಬೇಕನ್ನನ ಜೀವನಕ್ಕೂ ಲ್ಯೂಥರನ ಜೀವನಕ್ಕೂ ಕಾಣುವ ವ್ಯತ್ಯಾಸವೇನು?

೨. ಲಿಯೊನಾರ್ಡೊ ಡ ವಿಂಚೀಯನ್ನು ಆದರ್ಶಪುರುಷನೆಂದು ಹೇಳುವುದು ಹೇಗೆ? ಆತನ ಪ್ರತಿಭೆಯನ್ನು ಸರ್ವತೋಮುಖವೆಂದು ವಿವರಿಸಬಹುದೇ?

೩. ರಿನೇಸ್ಸಾನ್ಸ್ ಎಂಬುದೇನು? ಹೇಗೆ ಪ್ರಾರಂಭವಾಯಿತು? ನಡೆದ ಮುಖ್ಯ ಸಂಗತಿಗಳೇನು?

೪. ಷೇಕ್ಸ್‌ಪಿಯರನನ್ನು ವಿಶ್ವಕವಿಯೆಂದು ಕರೆಯುವುದಕ್ಕೆ ಕಾರಣಗಳೇನು? ವಿವರಿಸಿ.

೫. ಗಲಿಲಿಯೋ ನಡೆಸಿದ ಸಾಧನೆಯ ರೀತಿಯೆಂಥದು? ಆಧುನಿಕಶಾಸ್ತ್ರಗಳ ವಿಧಾನ ಅದರಲ್ಲೆಷ್ಟುಮಾತ್ರ ಕಾಣುವುದು?

೧೪ನೇ ಅಧ್ಯಾಯ

ಯಾನಸಾಹಸ ಪೃಥ್ವೀಪರಿಚಯಗಳು

ಮುಖ್ಯಪ್ರಶ್ನೆ ೫೧: ನೂತನಜ್ಞಾನರಾಶಿ ಯೂರೋಪಿಗೆ ಬಂದುದು ಹೇಗೆ? ಹರಡಿದುದು ಹೇಗೆ?

೧೪೫೩ರಲ್ಲಿ ಉಸ್ಮಾನ್ಲೀತುರುಷ್ಕರು ಕಾನ್‌ಸ್ಟಾಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ತುರುಷ್ಕರು ಮುತ್ತುವರೆಂಬ ಭಯ ತೋರಿದಾಗಲೆ ಅಲ್ಲಿಯ ಗ್ರೀಕವಿದ್ವಾಂಸರು ತಮ್ಮ ಗ್ರಂಥಗಳನ್ನೆತ್ತಿಕೊಂಡು ಇಟಲಿ ಮುಂತಾದ ಇತರ ಐರೋಪ್ಯದೇಶಗಳಿಗೆ ಪಲಾಯನಮಾಡಿದರಷ್ಟೆ. ಪಡುವಲ ದೇಶಗಳಲ್ಲಿಯೂ ಬಡಗಲ ದೇಶಗಳಲ್ಲಿಯೂ ಜನರು ಆ ವೇಳೆಗೆ ವಿಚಾರಪರರಾಗಿದ್ದರು. ತಮ್ಮ ದೇಶಗಳಿಗೋಡಿಬಂದ ಗ್ರೀಕಪಂಡಿತರನ್ನು ಜನರು ಆದರದಿಂದ ಬರಮಾಡಿಕೊಂಡು ಅವರಲ್ಲಿದ್ದ ಗ್ರಂಥಗಳ ಸಾರವನ್ನು ತಿಳಿಯಲಾರಂಭಿಸಿದರು. ವನಸ್ಪತಿಶಾಸ್ತ್ರ, ಭೂವಿವರಣೆ, ಸಿದ್ಧಾಂತ, ಗಣಿತ, ವೈದ್ಯ, ತತ್ತ್ವ ಮುಂತಾದ ಶಾಸ್ತ್ರಗಳ ಪರಿಚಯವು ಈ ರೀತಿಯಾಗಿ ಉಂಟಾಯಿತು. ಗ್ರೀಕ್ ಭಾಷೆಯನ್ನು ವ್ಯಾಸಂಗಮಾಡುವುದು ವಿದ್ಯಾರ್ಜನೆಯ ಗುರುತಾಯಿತು.

ಜ್ಞಾನಪ್ರಚಾರಕ್ಕೆ ತಕ್ಕ ವಿಧಾನವೂ ಅದೇ ವೇಳೆಗೆ ತಿಳಿದುಬಂದುದು ಐರೋಪ್ಯರ ಭಾಗ್ಯ. ಚೀನದಲ್ಲಿ ಕ್ರಿ.ಪೂ. ೨ನೆ ಶತಮಾನದಷ್ಟು ಹಿಂದೆಯೇ ಕಾಗದದ ತಯಾರಿ ತಿಳಿದಿತ್ತು. ತುರ್ಕಸ್ತಾನವನ್ನು ಮುತ್ತಿದ ವೇಳೆಯಲ್ಲಿ ಅರಬ್ಬಿಜನರು ಚೀನೀಜನರಿಂದ ಅದನ್ನು ಕಲಿತಿದ್ದರು. ಅರಬ್ಬಿ ಜನರಿಂದ ಕಾಗದದ ತಯಾರಿಯಲ್ಲದೆ ಇನ್ನೂ ಅನೇಕಾಂಶಗಳನ್ನು ಐರೋಪ್ಯರು ಕಲಿತುಕೊಂಡರು. ಮುದ್ರಣ ಕೂಡ ಚೀನೀಯರಿಗೆ ಬಲು ಹಿಂದಿನ ಕಾಲದಲ್ಲಿಯೇ ಗೊತ್ತಿತ್ತು. ಐರೋಪ್ಯರು ಪ್ರತ್ಯೇಕವಾಗಿಯೇ ಅದನ್ನು ಸಾಧಿಸಿಕೊಂಡಿರಬಹುದಾದಾಗ್ಯೂ ನಿದಾನವಾಯಿತು. ಯೂರೋಪಿನಲ್ಲಿ ಪುಸ್ತಕಮುದ್ರಣ ಯಾರಿಂದ ಮೊದಲಾಯಿತೋ ಸರಿಯಾಗಿ ತಿಳಿಯದು. ಹೇಗಾದರೂ ಸುಮಾರು ೧೪೪೦ರ ವೇಳೆಗೆ ಮೊದಲು ಹಾಲಂಡಿನಲ್ಲಿಯೂ ಆಮೇಲೆ ಜರ್ಮನಿಯಲ್ಲಿಯೂ ಅಚ್ಚಿನ ಮೊಳೆಗಳನ್ನು ಜೋಡಿಸಿ ಮುದ್ರಿಸುವುದು ಮೊದಲಾಯಿತು. ಪ್ರಾರಂಭದಲ್ಲಿ ಒಂದೊಂದು ಮಾತಿಗೊಂದೊಂದು ಅಚ್ಚನ್ನು

ಮಾಡಿಕೊಂಡಿದ್ದರು; ತರುವಾಯ ಅಕ್ಷರಕ್ಕೊಂದಚ್ಚನ್ನು ಇಟ್ಟುಕೊಳ್ಳುವ ಅನುಕೂಲವನ್ನು ಕಂಡುಹಿಡಿದರು. ಇಂಗ್ಲಂಡಿನಲ್ಲಿ ೧೪೭೭ರಲ್ಲಿ ಆರಂಭ; ಮೊದಲನೆ ಮುದ್ರಣ ನಡೆಸಿದವನು ವಿಲಿಯಂ ಕ್ಯಾಕ್ಸ್‌ಟನ್ (William Caxton).



ಹದಿನಾರನೇ ಶತಮಾನದ ಮುದ್ರಣಾಲಯ

ಕಾಗದವೊಂದುಕಡೆ ಮುದ್ರಣವೊಂದುಕಡೆ ಸಿದ್ಧವಾಗಿದ್ದಾಗ ಪುಸ್ತಕಗಳನ್ನಚ್ಚುಹೊಡೆದು ಹೊಸಜ್ಞಾನವನ್ನು ಹರಡುವುದು ಹಗುರವಾದ ಕೆಲಸವಾಯಿತು. ಹಿಂದೆ ಲೋಕದಲ್ಲಿ ನಡೆದ ಯಾವ ಜ್ಞಾನಪ್ರಚಾರಕ್ಕೂ ಈ ಅನುಕೂಲವಿರಲಿಲ್ಲ. ಅಲೆಕ್ಸಾಂಡ್ರಿಯದ ವಿದ್ಯಾಕ್ಷೇತ್ರದಲ್ಲಿದ್ದ ಘನವಿದ್ವಾಂಸರು ಎಷ್ಟು ಅಮೋಘವಾದ ಸಾಧನೆ ನಡೆಸಿದ್ದಾಗ್ಯೂ ಕೈಬರೆಹದಿಂದ ಪುಸ್ತಕಗಳನ್ನು ಬರೆಯುವ ಪ್ರಯಾಸದಿಂದ ಆ ಸಾಧನೆ ಪರಿಣಾಮಕಾರಿಯಾಗಿ ಪ್ರಸರಿಸದಾಯಿತು. ಆಗ ವಿದ್ಯಾಭ್ಯಾಸವೆಂಬುದು ಎಲ್ಲಿಯೋ ಹಲವರಿಗೆ ಮಾತ್ರ ಸಾಧ್ಯ; ಆಧುನಿಕ ಕಾಲದಲ್ಲಿದ್ದಂತೆ ವಿದ್ಯಾಭ್ಯಾಸ ನಡೆಯುವುದು ಆ ಕಾಲದಲ್ಲಿ ಅಸಾಧ್ಯ. ಮುದ್ರಣ ಬಂದಮೇಲೆ ಪುಸ್ತಕಗಳು ಸುಲಭವಾ

ಗಿಯೂ ವೇಗವಾಗಿಯೂ ಸಾಸಿರಗಟ್ಟಲೆಯಾಗಿ ದೊರಕಲಾರಂಭವಾಯಿತು. ಬೇಕಾದವರಿಗೆಲ್ಲ ಪುಸ್ತಕಪ್ರಾಪ್ತಿ ಸುಲಭವಾಯಿತು. ಪುರೋಹಿತವರ್ಗ ದವರ ವ್ಯಾಖ್ಯಾಸಗಳಿಗೆ ಮನಸೋಲದೆ ತಾವೇ ಸ್ವಂತವಾಗಿ ಬೈಬಲ್ ಗ್ರಂಥ ವನ್ನು ಓದಿಕೊಳ್ಳಬೇಕೆಂದು ವಿಕ್ಲಿಫ್ ಮುಂತಾದವರು ಹೇಳುತ್ತಿದ್ದುದನ್ನು ಅನುಸರಿಸಲು ಜನರಿಗೆ ಸುಲಭಸಾಧ್ಯವಾಯಿತು. ಪುಸ್ತಕಗಳಿಗಾಗಿ ಜನರು ಆಸೆಪಟ್ಟರು. ಅದರಲ್ಲಿಯೂ ಬೈಬಲ್ ಭಾಷಾಂತರಕ್ಕಾಗಿ ಆದರ ಹೆಚ್ಚು. ಆ ಕಾರಣದಿಂದ ಮೊದಲು ಹೆಚ್ಚಾಗಿ ಅಚ್ಚಾದುದು ಬೈಬಲ್. ಆ ಬಳಿಕ ಪ್ರಕಟ ವಾದುದು ಕಥೆ ಪುಸ್ತಕಗಳು, ಪ್ರಯಾಣ ವೃತ್ತಾಂತಗಳು, ಮಾರ್ಕೋಪೋಲೊ ವಿನಂತಹ ಪ್ರವಾಸಿಗಳ ವಿವರಗಳು, ಸಾಹಸಭರಿತವಾದ ಕಥಾನಕಗಳು.

ಉಸ್ಮಾನ್ಲೀತುರುಷ್ಕರು ಯೂರೋಪಿನ ಮೂಡಲಲ್ಲಿ ಪ್ರಬಲಿಸಿದ ಪರಿಣಾಮವಾಗಿ ಐರೋಪ್ಯರಲ್ಲಿ ಜ್ಞಾನಪ್ರಸಾರ ನಡೆದುದಲ್ಲದೆ ಮತ್ತೊಂದು ಸಂಭವವೂ ಉಂಟಾಯಿತು. ಪಾಶ್ಚಾತ್ಯರ ಸಂಸ್ಕೃತಿ ಅಭಿವೃದ್ಧಿಗೊಳ್ಳಲು ಆ ಎರಡನೆ ಸಂಗತಿಯೂ ಮುಖ್ಯವಾದುದು. ಅದೇನೆಂದು ನೋಡೋಣ.


ಮುಖ್ಯಪ್ರಶ್ನೆ ೫೨ : ಐರೋಪ್ಯವ್ಯಾಪಾರಿಗಳು ಪಶ್ಚಿಮಕ್ಕೇಕೆ ತಿರುಗಿದರು? ಅವರಿಗೆ ಸಹಾಯಕವಾಗಿ ನಡೆದ ಹೊಸಪತ್ತೆಗಳೇನು?

ಮಧ್ಯಪ್ರಾಚ್ಯದಲ್ಲಿ ಸೆಲ್ಜುಕೀ ತುರುಷ್ಕರು ನುಗ್ಗಿ ಆಕ್ರಮಿಸಿಕೊಂಡಾಗ ಮೂಡಲು ಪಡುವಲುಗಳಿಗಿದ್ದ ವ್ಯಾಪಾರಮಾರ್ಗಗಳಿಗೆ ಆತಂಕವುಂಟಾದು ದನ್ನು ಕಂಡೆವು. ಕ್ರುಸೇಡುಗಳಿಗೆ ಅದೊಂದು ಕಾರಣವಾದುದನ್ನೂ ತಿಳಿದೆವು. ಆ ಭೂಭಾಗವನ್ನು ಉಸ್ಮಾನ್ಲೀ ತುರುಷ್ಕರು ಆಕ್ರಮಿಸಿದಾಗ ಪುನಃ ಅದೇ ಆತಂಕ ತೋರಿತು. ಆ ಆತಂಕ ನಿವಾರಣೆಯಾದುದು ಕ್ರೈಸ್ತಮತಸ್ಥರು ಕಟ್ಟಿದ ಸೈನ್ಯಗಳಿಂದಲ್ಲ; ಕ್ರೈಸ್ತನಾವಿಕರ ಯಾನಸಾಹಸದಿಂದ. ಆ ಸಾಹ ಸಕ್ಕೆ ಮೊದಲು ತೊಡಗಿದವರಾರೆಂದರೆ ಆತಂಕದಿಂದ ಮೊದಲು ಕಷ್ಟಪಟ್ಟ ವರು ಎಂದು ಉತ್ತರ. ಜೆನೋವ ಪಟ್ಟಣಿಗರು, ಪೋರ್ಚುಗೀಸರು, ಸ್ಪಾನಿ ಷರು ಮೊದಲು; ತರುವಾಯ ಬಡಗಣ ಜಲಜೀವಿಗಳಾದ ಡಚ್ಚರು, ಇಂಗ್ಲಿ ಷರು. ಇವರು ಪಶ್ಚಿಮಕ್ಕೆ ಹೊರಟಾಗ ಉದ್ದೇಶವಾದರೂ ಏನು? ಅಜ್ಞಾತ ವಾಗಿದ್ದ ಭೂಭಾಗವನ್ನು ಕಂಡುಹಿಡಿಯುವುದಲ್ಲ, ದೂರಪ್ರಾಚ್ಯದ ದೇಶ ಗಳೊಡನೆ ವ್ಯಾಪಾರವನ್ನುದ್ಧರಿಸಿಕೊಳ್ಳುವುದು.

ಹಿಂದಿನ ನಾವಿಕರಿಗಿಲ್ಲದ ಎರಡಂಶಗಳು ಈ ಕಾಲದವರಿಗೆ ದೊರಕಿದ್ದುವು. ಮಂಗೋಲರ ಮೂಲಕ ಪರಿಚಿತವಾಗಿದ್ದ ನಾವಿಕದಿಕ್ಸೂಚಿ ಮೊದಲನೆ

ಯದು. ಪೃಥ್ವಿ ಗೋಳಾಕಾರವಾಗಿದೆಯೆಂಬ ಜ್ಞಾನ ಎರಡನೆಯದು. ಅಲೆಕ್ಸಾಂಡ್ರಿಯದಲ್ಲಿದ್ದ ಗ್ರೀಕವಿದ್ವಾಂಸ ಎರಟಾಸ್ಥೆನೀಸನ ಪುಸ್ತಕ ಮುದ್ರಣವಾಗಿ ಆ ಅಂಶ ತಿಳಿಯಿತು. ಆದರಿಂದ ಪಶ್ಚಿಮದಿಕ್ಕಿನಲ್ಲಿಯೇ ಯಾನಮಾಡುತ್ತ ದೂರಪ್ರಾಚ್ಯವನ್ನು ತಲಪಲಾಗುವುದೆಂದು ವ್ಯಕ್ತವಾಯಿತು. ದಿಕ್ಸೂಚಿಯಲ್ಲದೆ ಅಕ್ಷಾಂಶರೇಖಾಂಶಗಳನ್ನು ಸರಿಯಾಗಿ ಗಣಿಸಿಕೊಳ್ಳುವ ಜ್ಞಾನವೂ ಪ್ರಾಪ್ತವಾಗಿತ್ತು. ಆದ್ದರಿಂದ ತಿಂಗಳುಗಟ್ಟಲೆ ಭೂಮಿಯನ್ನು ಕಾಣದಿದ್ದರೂ ಶಂಕೆಗೊಳ್ಳದೆ ಮಹಾಸಾಗರಗಳ ಮೇಲೆ ಯಾನನಡೆಸುವ ಧೈರ್ಯಸಾಹಸಗಳು ತುಂಬಿದ್ದುವು ನಾವಿಕರ ಮನಸ್ಸುಗಳಲ್ಲಿ.

೧೪೪೫ರವೇಳೆಗೆ ಆಫ್ರಿಕದ ತೆಂಕಣಭಾಗವನ್ನು ಬಳಸಲು ಪೋರ್ಚುಗೀಸರು ಪ್ರಯತ್ನಶೀಲರಾಗಿದ್ದರು. ೧೪೮೬ರಲ್ಲಿ **ಬಾರ್ತೊಲೊಮ್ಯು ಡಯಸ್** (Bartholomew Diaz) ಎಂಬಾತನು ಗುಡ್‌ಹೋಪ್ ಭೂಶಿರವನ್ನು ತಲಪಿದನು. ಆ ವೇಳೆಗೆ **ಕ್ರಿಸ್ಟೊಫರ್ ಕೊಲಂಬಸ್** (Christopher Columbus) ಎಂಬ ಕಪ್ತಾನನು (Captain) ತನಗೆ ಬೇಕೆನಿಸಿದ ಸಹಾಯವನ್ನರಸುತ್ತಿದ್ದನು. ಕೊಲಂಬಸ್ ಜಿನೋವ ಪಟ್ಟಣದವನು. ಮಾರ್ಕೊಪೋಲೋ ವೃತ್ತಾಂತವನ್ನೋದಿ ಜಪಾನಿನ ಹೆಸರನ್ನು ಕೇಳಿದ್ದವನು. ಅಟ್ಲಾಂಟಿಕ್ ಸಾಗರವನ್ನು ದಾಟಿದರೆ ಜಪಾನ್ ಕಾಣುವುದೆಂದು ಆತನ ಊಹೆ. ತಾನು ಬಡವನಾದುದರಿಂದ ಸ್ವಂತವಾಗಿ ಹಡಗನ್ನು ಇಟ್ಟುಕೊಳ್ಳಲಾರದವನು. ಹಡಗನ್ನು ಕೊಡಿಸುವ ಪ್ರಭುವನ್ನು ಹುಡುಕುತ್ತ ಕೊಲಂಬಸ್ ಆಗಿನ ರಾಜರಲ್ಲಿ ಒಬ್ಬರ ತರುವಾಯ ಮತ್ತೊಬ್ಬರನ್ನು ಯಾಚಿಸಿದನು. ಪೋರ್ಚುಗಲ್ ದೊರೆಯನ್ನು ಕೇಳಿದ್ದಾದ ಮೇಲೆ ಸ್ಪೈಯ್ನ್ ದೊರೆಯನ್ನೂ ಆ ಮೇಲೆ ಇಂಗ್ಲಂಡಿನ ದೊರೆ ಏಳನೆ ಹೆನ್ರಿಯನ್ನೂ ಕಂಡನು. ಎಲ್ಲವೂ ವ್ಯರ್ಥವಾಯಿತು. ಕಟ್ಟಕಡೆಗೆ ಸ್ಪೈಯ್ನ್ ರಾಣಿ



ಕ್ರಿಸ್ಟೊಫರ್ ಕೊಲಂಬಸ್

ಯೊಪ್ಪಿದಳು. ಮೂರು ಹಡಗುಗಳು ದೊರೆತವು. ಅವುಗಳಲ್ಲಿ ಬಹಳ ದೊಡ್ಡದರ ಪರಿಮಾಣವು ನೂರು ಟನ್ನುಗಳು ಮಾತ್ರ. ೧೪೯೨ ರಲ್ಲಿ ಅವುಗಳೊಡನೆ ಸ್ಪೈಯ್ನ್ ತೀರಬಿಟ್ಟು ಹೊರಟನು ಕೊಲಂಬಸ್.

ಅಟ್ಲಾಂಟಿಕ್ ಸಾಗರದ ಮೇಲೆ ಯಾನ. ಒಂದು ತಿಂಗಳಾಯಿತು, ಎರಡು ತಿಂಗಳಾಯಿತು, ಆದರೂ ಭೂಮಿಯ ಚಿಹ್ನೆಯೇ ಕಾಣಲಿಲ್ಲ. ಕಡೆಗೆ ಕೆಲವು ಹಕ್ಕಿಗಳು ಕಾಣಿಸಿದವು; ಕೆತ್ತಿದ ಮರದ ತುಂಡೊಂದು ಸಿಕ್ಕಿತು. ಇನ್ನೂ ಸ್ವಲ್ಪದೂರ ಹೊರಡುವಷ್ಟರಲ್ಲಿ ತೇಲುತ್ತಿದ್ದ ಒಂದು ಮರದ ಕೊಂಬೆ ಕಾಣಿಸಿತು. ಸಮೀಪದಲ್ಲಿಯೇ ಭೂಮಿಯಿದೆಯೆಂದು ದೃಢವಾಯಿತು. ೧೪೯೨ ರ ಅಕ್ಟೋಬರ್ ಹನ್ನೊಂದನೇ ರಾತ್ರಿ ಹತ್ತುಗಂಟೆಯಾದಾಗ ಮುಂದೊಂದು ದೀಪದ ಬೆಳಕು ಗೋಚರವಾಯಿತು. ಆ ರಾತ್ರಿಯೆಷ್ಟು ಕುತೂಹಲ! ಹಗಲು ಹರಿದೀತೇ ಎಂದೆಷ್ಟು ಆತುರ! ಹಗಲಾದ ಕೂಡಲೇ ಮುಂದೆ ಕಂಡುದು ಭೂಮಿ. ಸ್ಪೈಯ್ನ್ ಧ್ವಜವನ್ನು ಹಿಡಿದು ಎಲ್ಲರೂ ಇಳಿದು ಹೊರಟರು. ಅಲ್ಲಿ ಕಂಡುಬಂದ ಜನರಾದರೋ ತಾಮ್ರವರ್ಣದವರು, ಜಪಾನಿಗಳಲ್ಲವೇ ಅಲ್ಲ. ಆಗ ಕೊಲಂಬಸನು ಯೋಚಿಸಿ ತಾನು ಸೇರಿದ ಭಾಗವು ಇಂಡಿಯ ಅಥವಾ ಹಿಂದುಸ್ತಾನ್, ಜಪಾನ್ ಅಲ್ಲವೆಂದು ನಿರ್ಧರಿಸಿಕೊಂಡನು. ಹೀಗಾದುದರಿಂದ ಆ ಸ್ಥಳಕ್ಕೆ '**ವೆಸ್ಟಿಂಡೀಸ್**' (West Indies) ಎಂದೂ ತಾಮ್ರವರ್ಣದ ಆ ಜನರಿಗೆ ಕೆಂಪು ಇಂಡಿಯನ (Red Indians) ರೆಂದೂ ಅನಂತರದಲ್ಲಿ ಹೆಸರಾಯಿತು. ಕೆಲವು ತಿಂಗಳಕಾಲ ಕಳೆದು ಕೊಲಂಬಸ್ ತನ್ನ ಧೀರನಾವಿಕರೊಡನೆ ಸ್ಪೈಯ್ನಿಗೆ ಹಿಂತಿರುಗಿದನು. ನಿಜವಾಗಿ ತನ್ನ ಗುರಿಯನ್ನು ತಲಪಿದುದಕ್ಕೆ ಸಾಕ್ಷಿಯಾಗಿರುವಂತೆ ಇಬ್ಬರು ತಾಮ್ರವರ್ಣದವರನ್ನೂ ಅಪೂರ್ವವಾದ ಹಲವು ಮೃಗಪಕ್ಷಿಗಳನ್ನೂ ಜೊತೆಯಲ್ಲಿ ಕರೆದುಕೊಂಡು ಹತ್ತಿಬಂಗಾರಗಳನ್ನೂ ಎತ್ತಿಟ್ಟುಕೊಂಡು ಯಾನಮಾಡಿದನು.

ಹಿಂತಿರುಗಿ ಬಂದಾಗ ಜನರು ಕೊಲಂಬಸ್ಸನನ್ನು ಅತಿಶಯವಾದ ಆದರ ಸಂತೋಷಗಳಿಂದ ಸತ್ಕರಿಸಿದರು. ಸ್ಪೈಯ್ನ್ ರಾಜನಿಗೆ ಆಸೆ ಹೆಚ್ಚಿತು. ಮತ್ತೊಮ್ಮೆ ಕೊಲಂಬಸ್ ಹೊರಡುವುದಕ್ಕಾಗಿ ಸಹಾಯನೀಡಲು ಆ ದೊರೆಗೆ ಆತುರ. ಆದೇವರ್ಷ ಹದಿನೇಳು ಹಡಗುಗಳನ್ನೂ ಸಾವಿರದೈನೂರು ನಾವಿಕರನ್ನೂ ಕರೆದುಕೊಂಡು ಕೊಲಂಬಸ್ ಹೊರಟನು. ಹೊಸದಾಗಿ ಕಂಡ ಪ್ರದೇಶಗಳನ್ನು ಸ್ಪೈಯ್ನ್ ರಾಜನ ಹೆಸರಿನಲ್ಲಿ ಆಕ್ರಮಿಸಿಕೊಳ್ಳತಕ್ಕುದೆಂದು ಆಜ್ಞೆಯಾಗಿತ್ತು. ಮೂರನೆಬಾರಿಯ ಯಾನವೂ ನಡೆಯಿತು. ಸ್ಪೈಯ್ನ್ ರಾಜ್ಯವು ಸೇರಿಸಿಕೊಂಡ ಪ್ರಾಂತಕ್ಕೆ ಕೊಲಂಬಸ್ ಮುಖ್ಯಾಧಿಕಾರಿ

ಯಾದನು. ಆದರೆ ಸ್ವಲ್ಪಕಾಲದಲ್ಲಿಯೇ ದೊರೆಯ ವಿಶ್ವಾಸವನ್ನು ಕಳೆದು ಕೊಂಡು ಪದಚ್ಯುತನಾದನು. ತನ್ನ ಧೈರ್ಯಸ್ಥೈರ್ಯಗಳಿಂದ ಉಪಕೃತ ರಾದವರಿಂದಲೇ ಬಂಧಿತನಾದನು. ಕಡೆಯವರಿಗೂ ತಾನು ನೋಡಿದ್ದುದು ಹೊಸದಾದ ಭೂಖಂಡವೆಂಬುದೇ ಆತನಿಗೆ ತಿಳಿಯಲಿಲ್ಲ. ಭೂಪ್ರದಕ್ಷಿಣೆ ಮಾಡಿ ಏಷ್ಯದ ಭಾಗವನ್ನು ತಲಪಿದೆನೆಂದೇ ದೃಢವಾಗಿ ನಂಬಿದ್ದನು.


ಕೊಲಂಬಸನ ಪತಾಕನೌಕೆ


ವಾಸ್ತವವಾಗಿ ಕೊಲಂಬಸ್ ಹೊಸ ಖಂಡವನ್ನು ತಲಪಲೇ ಇಲ್ಲ. ಆತನ ಯಾನಗಳೆಲ್ಲ ವೆಸ್ಟಿಂಡೀಸ್ ದ್ವೀಪಗಳಿಗೆ ಮಾತ್ರ ನಡೆದಿದ್ದುವು. ಖಂಡಕ್ಕೆ ತನ್ನ ಹೆಸರನ್ನು ಕೊಟ್ಟವನು ಇಟಲಿಯ ವರ್ತಕನೊಬ್ಬ; **ಅಮೆರಿಗೊ ವೆಸ್‌ಪುಚಿ** (Amerigo Vespucci) ಎಂಬಾತನು. ಕೊಲಂಬಸ್ಸನ ವೃತ್ತಾಂತವನ್ನು ಕೇಳಿದ ತರುವಾಯ ಆತನು ಆಸೆಪಟ್ಟು ಹೊಸ ದೇಶಗಳ ಪತ್ತೆಗೆಂದು ಯಾನ ಹೊರಟನು. ೧೪೯೯ರಲ್ಲಿ ಬ್ರಸಿಲ್ ತೀರವನ್ನು ತಲಪಿದ್ದನು.

ಮುಖ್ಯಪ್ರಶ್ನೆ ೫೩ : ಪೃಥ್ವಿಸುತ್ತಲೂ ಯಾನಮಾಡಿದವರಲ್ಲಿ ಯಾರು ಮೊದಲು ?

ಕೊಲಂಬಸ್ ನಡೆಸಿದ ಸಾಧನೆಯಿಂದ ಪಡುವಲ ಯೂರೋಪಿನಲ್ಲೆಲ್ಲ ಜನರ ಸಾಹಸವು ಉತ್ತೇಜಿತವಾಯಿತು. ಇನ್ನು ಮುಂದಿನ ನೂರು ವರ್ಷ ಕಾಲ ಹೊಸದೇಶಗಳ ಪತ್ತೆಗಾಗಿ ಸಾಹಸಿಗಳು ಹೊರಟದ್ದೂ ಹೊರಟದ್ದೇ. ದಕ್ಷಿಣ ಅಮೆರಿಕವನ್ನು ೧೪೯೭ರಲ್ಲಿ ಅಮೆರಿಗೊ ಕಾಣುವುದಕ್ಕೂ ಮುಂಚೆ **ವಾಸ್ಕೊಡಗಾಮ** (Vasco da Gama) ನೆಂಬ ಪೋರ್ಚುಗೀಸ್ ಕಪ್ತಾನನು ಗುಡ್‌ಹೋಪ್ ಭೂಶಿರವನ್ನು ಬಳಸಿಕೊಂಡು ಆಫ್ರಿಕದ ಮೂಡಲತೀರದಲ್ಲಿ ಜ಼ಾನ್‌ಜ಼ಿಬಾರ್ (Zanzibar) ಎಂಬ ಸ್ಥಳವನ್ನು ತಲಪಿದನು. ಅಲ್ಲೊಬ್ಬ ಅರಬ್ಬ ಮಾರ್ಗದರ್ಶಿ ನೆರವಾಗಲು ಮುಂದೆ ಹಿಂದುಸ್ತಾನದ ಕಡೆ ಹೊರಟು

ಮಲೆಯಾಳತೀರದಲ್ಲಿ ಕೋಳಿಕೋಡನ್ನು (Calicut) ಸೇರಿದನು. ಆ ಬಳಿಕ ಹಲಕೆಲವು ವರ್ಷಗಳಲ್ಲಿ ಇತರ ಪೋರ್ಚುಗೀಸ ನಾವಿಕರು ಈಸ್ಟಿಂಡೀಸ್ ಸಮುದಾಯದಲ್ಲಿ ಜವ ಮುಂತಾದ ದ್ವೀಪಗಳನ್ನು ಕಂಡುಕೊಂಡರು.

೧೫೧೯ ರಿಂದ ೧೫೨೨ ರವರೆಗೆ ನಡೆದುದು ಯಾನಗಳಲ್ಲೆಲ್ಲ ಅದ್ಭುತ. ಸ್ಪೈಯ್ನ್ ದೊರೆಯ ಊಳಿಗದಲ್ಲಿದ್ದ **ಮ್ಯಾಜೆಲ್ಲನ್** (Magellan) ಎಂಬ ಪೋರ್ಚುಗೀಸ್ ನಾವಿಕನು ದಕ್ಷಿಣ ಅಮೆರಿಕವನ್ನು ತಲಪಿ ತೀರದ ಬಳಿಯಲ್ಲಿಯೇ ಸಂಚರಿಸಿ ಆ ಖಂಡದ ದಕ್ಷಿಣಾಗ್ರದಲ್ಲಿ ಬೀಸುವ ಚಂಡಮಾರುತಗಳ ಕಾರಣದಿಂದ ಅಪಾಯಕಾರಕವಾದ ಜಲಸಂಧಿಯನ್ನು ದಾಟಿದನು. ಆ ಜಲಸಂಧಿಗೆ ಆತನ ಹೆಸರೇ ಇದೆ. ಪನಾಮ ಭೂಕಂಠದಲ್ಲಿ ಬೆಟ್ಟಗಳನ್ನು ಹತ್ತಿ ಪಡುವಲಿಗಿದ್ದ ಪಸಿಫಿಕ್ ಸಾಗರವನ್ನು ಸ್ಪೈಯ್ನ್ ದೇಶಸ್ಥರು ಹಿಂದೆ ಕಂಡಿದ್ದರು. ಆದರೆ ಆ ಸಾಗರದಲ್ಲಿ ಹಡಗನ್ನು ಸಾಹಸದಿಂದ ನಡೆಸಿಕೊಂಡು ಮೊದಲು ನುಗ್ಗಿದವನು ಮಾಜೆಲ್ಲನ್. ಅಲ್ಲಿಗೆ ಮುಕ್ತಾಯವಾಗಲಿಲ್ಲ ಆತನ ಸಾಹಸ. ಧೈರ್ಯಗೊಂಡು ಆ ಅಜ್ಞಾತ ಜಗತ್ತಿನಲ್ಲಿ ಮುಂದೆ ಹೊರಟನು. ತೊಂಭತ್ತೆಂಟು ದಿನಗಳು ಕಳೆಯುವವರೆಗೂ ಭೂಮಿಯೆಂಬುದೇ ಕಾಣಲಿಲ್ಲ. ಕಡೆಗೆ ೧೫೨೧ ರಲ್ಲಿ **ಲಡ್ರೋನ್ಸ್** (Ladrones) ಎಂದು ಹೆಸರಾದ ದ್ವೀಪಗಳನ್ನು ಆತನೂ ಆತನ ನಾವಿಕರೂ ಕಂಡರು. ಲಡ್ರೋನ್ಸ್ ಎಂದರೆ ದರೋಡೆಗಾರರ ದ್ವೀಪವೆಂಬರ್ಥ. ಪ್ರಾಯಶಃ ಅಲ್ಲಿಯ ನಿವಾಸಿಗಳು ಇವರಲ್ಲಿ ಕಂಡ ಆಕರ್ಷಕವಸ್ತುಗಳನ್ನು ಅಪಹರಿಸಲು ಯತ್ನಿಸಿರಬಹುದು. ಅಲ್ಲಿಂದ ಮುಂದೆ **ಫಿಲಿಪೈನ್ಸ್** (Philippines) ದ್ವೀಪಗಳನ್ನು ಕಂಡರು. ಸ್ಪೈಯ್ನ್ ದೊರೆ ಫಿಲಿಪ್ ಎಂಬಾತನ ಹೆಸರೇ ಆ ದ್ವೀಪಗಳಿಗೆ. ಅಲ್ಲಿಯ ನಿವಾಸಿಗಳೊಡನೆ ಕಲಹವೆದ್ದು ಹೊಡೆದಾಟಕ್ಕಿಟ್ಟುಕೊಂಡಿತು. ಆ ಸಂದರ್ಭದಲ್ಲಿ ಮ್ಯಾಜೆಲ್ಲನ್ ಮುಂತಾದ ಕಪ್ತಾನರನೇಕರು ಕೊಲೆಯಾಗಿ ಹೋದರು. ಉಳಿದವರು ಸ್ವದೇಶಕ್ಕೆ ಹಿಂತಿರುಗಿದರು. ಹಿಂದುಸಾಗರವೆಲ್ಲವನ್ನೂ ದಾಟಿ ಆಫ್ರಿಕದ ಪೂರ್ವತೀರದಿಂದ ಪಶ್ಚಿಮತೀರವನ್ನೂ ಅನುಸರಿಸಿ ಆ ತರುವಾಯ ಉತ್ತರಕ್ಕೆ ಹೊರಟು ಸ್ಪೈಯ್ನ್ ತಲಪಬೇಕಾಗಿತ್ತು. ಮೂರುವರ್ಷ ಕಾಲವಾಗಿತ್ತು ಹೊರಟು. ಹೊರಟಿದ್ದ ಐದು ಹಡಗುಗಳಲ್ಲಿ ಒಂದೇ ಒಂದು ಸ್ವದೇಶಕ್ಕೆ ಹಿಂತಿರುಗಿತು. ಹೊರಟಿದ್ದ ಎಂಭತ್ತು ಮಂದಿಯಲ್ಲಿ ಮೂವತ್ತೊಂದು ಮಂದಿ ಮಾತ್ರ ಪುನಃ ತಮ್ಮ ದೇಶವನ್ನು ಕಂಡರು. ಆ ಮೂವತ್ತೊಂದು ಮಂದಿಯೇ **ವಿಟ್ಟೋರಿಯ** (*Vittoria*—ವಿಜಯ) ವೆಂಬ ಹಡಗಿನಲ್ಲಿ ಮೊಥಲು ಪೃಥ್ವೀಪ್ರದಕ್ಷಿಣಯಾನ ನಡೆಸಿದವರು.



ಯಾನಸಾಹಸಿಗಳ ಮಾರ್ಗಗಳು

ಮುಖ್ಯಪ್ರಶ್ನೆ ೪೪: ಪೆರು ಮತ್ತು ಮೆಕ್ಸಿಕೊಗಳನ್ನು ಗೆದ್ದವರಾರು? ಆ ಗೆಲುವಿನ ಪರಿಣಾಮವೇನಾಯಿತು?

ಹೊಸ ದೇಶಗಳ ಪರಿಚಯಲಾಭದಿಂದಲೂ ಹಳೆ ದೇಶಗಳನ್ನು ತಲಪಲು ಹೊಸಮಾರ್ಗಗಳ ಸಾಧನೆಯಿಂದಲೂ ನಡೆದ ಪರಿಣಾಮಗಳಲ್ಲಿ ಕೆಲವನ್ನು ತಿಳಿದುಕೊಳ್ಳಬೇಕು ನಾವು. ಯಾನ ಹೊರಟ ನಾವಿಕಮುಖ್ಯರಿಗೆ ಸಾಹಸ ಪ್ರೀತಿಯೊಂದೇ ಪ್ರೇರಕವಾಗಿದ್ದಿರಬಹುದಾದರೂ ಅವರಿಗೆ ಹಡಗುಗಳನ್ನೊದಗಿಸಿ ಆಳುಗಳನ್ನೂ ಸರಕನ್ನೂ ಶೇಖರಿಸಿಕೊಟ್ಟ ಜನರಿಗೆ ಪ್ರೇರಕವಾದುದು ಬೇರೆ. ಅವರಿಗೆ ಬೇಕಾಗಿದ್ದುದು ವ್ಯಾಪಾರ. ಸುಲಭವಾಗಿ ಧನಲಾಭವಾದೀತೆಂಬ ಆಸೆ ಸ್ವಲ್ಪಕಾಲಾನಂತರದಲ್ಲಿ ಅವರೆಲ್ಲರನ್ನೂ ಚೋದಿಸಿತು. ಆಫ್ರಿಕವನ್ನು ಸುತ್ತಿ ದೂರಪ್ರಾಚ್ಯಕ್ಕೆ ಹೊರಟ ಪೋರ್ಚುಗೀಸರ ಉದ್ದೇಶ ವ್ಯಾಪಾರ ಸಾಧನೆಯೇ. ಅದೇ ದಿಕ್ಕಿಗೆ ಹೊರಟ ಡಚ್ಚರಿಗೂ, ಇಂಗ್ಲಿಷರಿಗೂ ಫ್ರೆಂಚರಿಗೂ ಅದೇ ಗುರಿ. ಮೊದಲು ಕಂಡ ಮಾರ್ಗಗಳು ಸ್ಪಾನಿಷ್ ಮತ್ತು ಪೋರ್ಚುಗೀಸ್ ಗುಂಪಿನವರಿಗೆ ವಶವಾದ ಬಳಿಕ ಡಚ್ಚರು, ಇಂಗ್ಲಿಷರು ಮತ್ತು ಫ್ರೆಂಚರು ವ್ಯಾಪಾರಲಾಭದ ಆಸೆಯಿಂದಲೇ ಬೇರೆ ಮಾರ್ಗಗಳನ್ನು ಸಾಧಿಸಲು ಯತ್ನಿಸಿದರು. ಈಶಾನ್ಯಕ್ಕೆ ಹೊರಟು ಏಷ್ಯದ ಉತ್ತರದಲ್ಲಿಯೂ ವಾಯುವ್ಯಕ್ಕೆ ಹೊರಟು ಅಮೆರಿಕದ ಉತ್ತರದಲ್ಲಿಯೂ ಮಾರ್ಗಸಾಧನೆಯ ಪ್ರಯತ್ನಗಳು ಅದಕ್ಕಾಗಿ ನಡೆದವು.

ಏತನ್ಮಧ್ಯೆ ಜಗದ್ಗುರು ಪೋಪನೊಂದು ಕೆಲಸಮಾಡಿದನು. ಸ್ಪೆಯ್ನ್ ಪೋರ್ಚುಗಲ್ ರಾಜರ ಮಧ್ಯೆ ನ್ಯಾಯತೀರ್ಮಾನ ಮಾಡುತ್ತ ಪಡುವಲಿಗಿದ್ದುದು ಸ್ಪೆಯ್ನಿಗೆ, ಮೂಡಲಿಗಿದ್ದುದು ಪೋರ್ಚುಗಲ್ಲಿಗೆ ಎಂದು ನಿರ್ಧರಿಸಿದನು. ನಕ್ಷೆಯಲ್ಲಿ ಪೋಪನು ಗೊತ್ತುಮಾಡಿದ ರೇಖೆಯನ್ನು ನೋಡಿ. ಆ ಜಗದ್ಗುರು ಪೃಥ್ವೀಮಂಡಲವನ್ನೇ ಈ ರೀತಿ ವಿಭಾಗಮಾಡಿಕೊಟ್ಟ ತರುವಾಯ ವಿಸ್ಮಯಕಾರಕವೂ ಭಯಂಕರವೂ ಆದ ಕೆಲಸಗಳು ನಡೆದುಹೋದುವು. ಮಧ್ಯ ಮತ್ತು ದಕ್ಷಿಣ ಅಮೆರಿಕಗಳಲ್ಲಿ ಹಿಂದಿನಿಂದಿದ್ದ ಜನರು ನಾಗರಿಕರಾಗಿ ಅಪರಿಮಿತವಾದ ಧನಸಂಪತ್ತನ್ನು ಪಡೆದು ರಾಜ್ಯಗಳನ್ನು ಕಟ್ಟಿಕೊಂಡಿದ್ದರು. ಅವರು ಕ್ರೈಸ್ತಮತಸ್ಥರೇನೋ ಅಲ್ಲ. ಆ ಪ್ರದೇಶಗಳಿಗೆ ಹೊರಟ ಸ್ಪೆಯ್ನ್ ದೇಶಸ್ಥರು ಆ ಜನರನ್ನು ಕಂಡರು. ಪೆರುದೇಶದಲ್ಲಿ '**ಇಂಕಾ**' (Incas) ಜನರೂ ಮೆಕ್ಸಿಕೋವಿನಲ್ಲಿ '**ಅಸ್‌ಟೆಕ್ಕರೂ**' (Aztecs) ಇದ್ದರು. ಅವರು ಕ್ರೈಸ್ತರಲ್ಲದಿದ್ದುದರಿಂದ ಪಾಷಂಡರೆಂದು ಈ ಐರೋಪ್ಯರು ಭಾವಿಸಿ ಅವ

ರನ್ನು ನಾಶಗೊಳಿಸುವುದು ನ್ಯಾಯವೆಂದುಕೊಂಡರು. ಆ ಜನರು ಮನ ಮೋಹಕವಾದ ದೇವಮಂದಿರಗಳನ್ನೂ ಅರಮನೆಗಳನ್ನೂ ಕಟ್ಟಿ ಅವುಗಳಲ್ಲಿ ಅಪಾರವಾದ ಕನಕರತ್ನರಾಶಿಗಳನ್ನು ಶೇಖರಿಸಿಟ್ಟಿದ್ದರು. ಐಶ್ವರ್ಯದಾಸೆ ಯಿಂದ ನುಗ್ಗಿದ ಸ್ಪಾನಿಷರ ಬಳಿ ಇದ್ದ ಫಿರಂಗಿ ಮದ್ದು ಆ ಜನರಲ್ಲಿರಲಿಲ್ಲ. ಸ್ವಲ್ಪ ಕಾಲದಲ್ಲಿ ಐರೋಪ್ಯರು ಆ ಜನರನ್ನು ಸರ್ವನಾಶಗೊಳಿಸಿ ಅವರ ನಾಗರಿ ಕತೆಯನ್ನು ನಿರ್ನಾಮಮಾಡಿಬಿಟ್ಟರು. ಅಲ್ಲಿಯ ಐಶ್ವರ್ಯವನ್ನು ಸ್ವದೇಶಕ್ಕೆ ಸಾಗಿಸಿದರು. ಹಡಗಿನ ಹಿಂದೆ ಹಡಗು ಚಿನ್ನವನ್ನು ಹೊತ್ತು ಸ್ಪೆಯಿನ್ನಿಗೆ ಬಂತು. ಆ ಐಶ್ವರ್ಯಬಲದಿಂದಲೇ ಹದಿನಾರನೇ ಶತಮಾನದಲ್ಲಿ ಸ್ಪೆಯಿನ್ ದೇಶ ಪ್ರಾಬಲ್ಯಕ್ಕೇರಿತು. ಆದರೆ ಅಷ್ಟು ಸುಲಭವಾಗಿ ಬಂಗಾರ ಸಿಗುವಂತಿ ದ್ದಾಗ ಅನ್ಯರು ಸುಮ್ಮನಿರುವರೇ! ಅಮೆರಿಕದಿಂದ ಚಿನ್ನವನ್ನು ಸಾಗಿಸುತ್ತಿದ್ದ ಸ್ಪಾನಿಷ್ ಹಡಗುಗಳನ್ನು ದಾರಿಯಲ್ಲಿಯೇ ಲೂಟಿಮಾಡಲು ಇಂಗ್ಲಿಷರು ಸಿದ್ಧ ರಾದರು. ಅಮೆರಿಕದಲ್ಲಿ ವ್ಯಾಪಾರನಡೆಸಿ ಲಾಭಸಂಪಾದಿಸಿಕೊಳ್ಳುವ ಆಸೆ ಅವರಲ್ಲಿಯೂ ಬೆಳೆಯಿತು. ಈ ಪೋಟಾಪೋಟಿ ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ ಭಾರಿ ಜಗಳವಾಗಿ ಪರಿಣಮಿಸಿತು. ಇಂಗ್ಲೆಂಡಿನ ರಾಣಿ ಎಲಿಸಬೆತ್ತಿಗೂ ಸ್ಪೆಯಿನ್ ರಾಜ ಫಿಲಿಪ್ಪನಿಗೂ ಯುದ್ಧ ನಡೆಯಿತು. ಅಲ್ಲಿಂದಲೇ ಮೊದಲಾಯಿತು ಇಂಗ್ಲಿಷ್ ಜನರ ಸಮುದ್ರಯಾನಸಾಹಸ ಮತ್ತು ವ್ಯಾಪಾರ ವರ್ತನೆ. ಇಂಗ್ಲಿಷರು ಪೋರ್ಚುಗೀಸರ ಮತ್ತು ಡಚ್ಚರ ವೈರವನ್ನು ಆ ಸಂದರ್ಭದಲ್ಲಿ ಕಟ್ಟಿಕೊಂಡರು. ಕಾಲಾನಂತರ ಮೂಡಲಲ್ಲಿ ಫ್ರೆಂಚರೊಡನೆ ಹಗೆತನ ಮಾಡಿದರು. ವ್ಯಾಪಾರಕ್ಕಾಗಿಯೂ ವ್ಯಾಪಾರ ಮಾರ್ಗಗಳ ಸ್ವಾಧೀನಕ್ಕಾಗಿಯೂ ಹದಿನೇಳನೆ ಮತ್ತು ಹದಿನೆಂಟನೆ ಶತಮಾನ ಗಳಲ್ಲಿ ಐರೋಪ್ಯಜನರ ಗುಂಪುಗಳಲ್ಲಿ ದೊಡ್ಡ ಯುದ್ಧಗಳು ನಡೆದುವು.

ಅಭ್ಯಾಸಗಳು

೧. ಪುರಾತನಗ್ರೀಕರು ಸಾಧಿಸಿದ ಜ್ಞಾನರಾಶಿಯಿಂದ ನಡೆದ ಪರಿಣಾಮಕ್ಕಿಂತ ರಿನೇಸ್ಸಾನ್ಸ್ ಕಾಲದಲ್ಲಿ ಐರೋಪ್ಯರಿಗೆ ದೊರೆತ ಜ್ಞಾನದ ರಾಶಿಯಿಂದ ಹೆಚ್ಚು ಪರಿಣಾಮ ವಾಗಲು ಕಾರಣವೇನು?

೨. ಪೃಥ್ವಿ ಗೋಳಾಕಾರವೆಂಬುದನ್ನು ಗ್ರೀಕರು ತಿಳಿದಿದ್ದಾಗ್ಯೂ ಅದನ್ನು ಪ್ರದಕ್ಷಿಣ ಮಾಡಲು ಅವರೇಕೆ ಪ್ರಯತ್ನಿಸಲಿಲ್ಲ? ಈ ಕಾಲದ ಐರೋಪ್ಯರು ಪ್ರಯತ್ನಿಸಿದ್ದೇಕೆ?

೩. ಕೊಲಂಬಸ್ ಮತ್ತು ಮ್ಯಾಜೆಲ್ಲನ್ನರ ಸಾಹಸಗಳನ್ನು ವರ್ಣಿಸಿ.

೪. ಪೆರು ಮತ್ತು ಮೆಕ್ಸಿಕೋ ಜನರನ್ನು ಸ್ಪಾನಿಷರೇಕೆ ಆಕ್ರಮಿಸಿದ್ದು? ಸುಲಭವಾಗಿ ಗೆಲುವಾದುದಕ್ಕೆ ಕಾರಣವೇನು? ಆ ಗೆಲುವಿನ ಪರಿಣಾಮವೇನು?

೧೫ನೇ ಅಧ್ಯಾಯ

ಐರೋಪ್ಯ ಜನಾಂಗಗಳು

ಮುಖ್ಯಪ್ರಶ್ನೆ ೫೫ : 'ದೇಶ' 'ರಾಷ್ಟ್ರ' 'ಜನಾಂಗ' ಎಂಬ ಶಬ್ದಗಳ ಅರ್ಥವೇನು? ರಾಷ್ಟ್ರ ಹುಟ್ಟುವುದು ಹೇಗೆ?

ಕಳೆದ ಮೂರು ಅಧ್ಯಾಯಗಳಲ್ಲಿ ಐರೋಪ್ಯರ ವೃತ್ತಾಂತವನ್ನೇ ಕಂಡೆವು. ಹದಿನೈದನೆ ಹದಿನಾರನೆ ಶತಮಾನಗಳಲ್ಲಿ ನಡೆದ ಘಟನಾಸಂಭವಗಳನ್ನು ಚಿತ್ರಿಸಿಕೊಂಡೆವು. ಅವುಗಳ ಪರಿಣಾಮವಾಗಿ ನಡೆದ ಮುಖ್ಯಾಂಶಗಳನ್ನು ಜ್ಞಾಪಕ ಮಾಡಿಕೊಳ್ಳೋಣ. ಫ್ಯೂಡಲ್ ಪರಿಸ್ಥಿತಿ ಮಾಯವಾಗಿ ರಾಜಾಧಿಕಾರ ಬಲಗೊಂಡು ರಾಜ್ಯಗಳು ಪ್ರತ್ಯೇಕಗೊಂಡುದೊಂದು. ಮೂಢಭಕ್ತಿ ತೊಲಗಿ ವಿಚಾರಪರತೆ ಹುಟ್ಟಿ ಶಾಸ್ತ್ರವ್ಯಾಸಂಗ ಮೊದಲಾದುದಿನ್ನೊಂದು. ರೋಮನ್ ಕ್ಯಾಥಲಿಕ್ ಚರ್ಚೆಂಬುದು ಒಡೆದು ಪಡುವಲ ಐರೋಪ್ಯರಲ್ಲಿ ಪ್ರಾಟೆಸ್ಟೆಂಟರಿಗೂ ಕ್ಯಾಥಲಿಕ್ಕರಿಗೂ ನಿತ್ಯದ್ವೇಷ ರೇಗಿದ್ದು ಮತ್ತೊಂದು. ಪೃಥ್ವೀಪರಿಚಯವಾದ ಬಳಿಕ ಸ್ಪೈಯ್ನ್ ಪೋರ್ಚುಗಲ್ ದೇಶಗಳ ಕ್ಯಾಥಲಿಕ್ ಜನರಿಗೆ ಅಮೆರಿಕದ ಬಂಗಾರದ ರಾಶಿಯೂ ಪೂರ್ವ ಪಶ್ಚಿಮ ವ್ಯಾಪಾರಗಳ ಲಾಭವೂ ದೊರಕಿದ್ದು ನಾಲ್ಕನೆಯ ಅಂಶ. ಇವುಗಳಲ್ಲಿ ಪ್ರತಿಯೊಂದೂ ಬಲುದೊಡ್ಡದು.

ಒಟ್ಟಿನಲ್ಲಿ ಐರೋಪ್ಯರ ಸ್ಥಿತಿಗತಿಗಳೆಲ್ಲವೂ ಬೇರೆಯಾದುವು. ಯೂರೋಪ್ ಎಂಬುದೇ ಬದಲಾಯಿತು. ಏಷ್ಯದ ಮೂಲೆಯೊಂದರಂತೆ ಹದಿನೈದನೆ ಶತಮಾನದ ಕಡೆತನಕ ಇದ್ದ ಯೂರೋಪಿನಲ್ಲಿ ನವಚೈತನ್ಯಸಾಹಸಗಳು ಹುಟ್ಟಿ ಮುಂದಿನ ಕಾಲದಲ್ಲಿ ಆ ಮೂಲೆಯ ಜನರಿಗೆ ಪೃಥ್ವಿಯೇ ವಶವಾಗುವಂತೆ ನಡೆದುಹೋಯಿತು. ಮುಂದೆ ಬರುವ ಆ ವೃತ್ತಾಂತವನ್ನು ತಿಳಿಯಲು ಹದಿನಾರನೆ ಶತಮಾನದಲ್ಲಿ ರೂಪಗೊಂಡ ಐರೋಪ್ಯರಾಜ್ಯಗಳನ್ನೂ ಜನಾಂಗಗಳನ್ನೂ ಗುರುತಿಸಿಟ್ಟುಕೊಳ್ಳಬೇಕು. ಜನಾಂಗವೆಂಬುದೇನು? ಹುಟ್ಟುವುದು ಹೇಗೆ? ಏನು ಅದರ ಲಕ್ಷಣ? ಈ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ನಾವೇ ಹೊಂದಿಸಿಕೊಳ್ಳಬೇಕು.

ಇಂಗ್ಲಿಷ್ ಶಬ್ದ ನೇಷನ್ (Nation) ಎಂಬುದಕ್ಕೆ ಜನಾಂಗವೆಂಬ ಶಬ್ದವನ್ನು ವಾಡಿಕೆಯಲ್ಲಿಟ್ಟುಕೊಂಡಿರುತ್ತೇವೆ. ಆದರೆ ಆ ಶಬ್ದಾರ್ಥವೆಲ್ಲವೂ ಜನಾಂಗವೆಂಬುದರಲ್ಲಿಲ್ಲ. ಗೊತ್ತಾದ ಒಂದು ರಾಷ್ಟ್ರಕ್ಕೆ ಸೇರಿ ಆ ರಾಷ್ಟ್ರ

ದಲ್ಲಿ ಭಕ್ತಿಯನ್ನು ಬೆಳೆಸಿಕೊಂಡು ಬಾಳುವ ಜನಸಮೂಹಕ್ಕೆ ನೇಷನ್ ಎನ್ನುವರು. ದೇಶವೆನ್ನಲಿಲ್ಲ, ರಾಷ್ಟ್ರವೆಂದೆವು. ಸುಲಭಸಂಚಾರಕ್ಕಡ್ಡಿಯಾಗುವ ಮೇರೆಗಳಿಂದ ಕೂಡಿದ ಭೂಭಾಗವನ್ನು ದೇಶವೆನ್ನಬೇಕು. ಒಂದೊಂದು ದೇಶವೂ ಒಂದೊಂದು ರಾಷ್ಟ್ರವಾಗಿರಬಹುದು; ಅಥವಾ ಕೆಲವು ದೇಶಗಳು ಸೇರಿ ಒಂದೇ ರಾಷ್ಟ್ರವಾಗಬಹುದು. ರಾಷ್ಟ್ರವೆಂದರೆ ಜನಸಮೂಹದ ಆಡಳಿತಕ್ಕಾಗಿ ಹುಟ್ಟುವ ವ್ಯವಸ್ಥೆ. ರಾಷ್ಟ್ರವೆಂಬುದು ರಾಜ್ಯವಾಗಿರಬಹುದು; ರಾಜನಿಲ್ಲದ ಗಣರೂಪವಾಗಿರಬಹುದು.

ರೋಮಕಸಾಮ್ರಾಜ್ಯವೆಂಬುದು ಅನೇಕದೇಶಗಳನ್ನೊಳಗೊಂಡ ಒಂದು ರಾಷ್ಟ್ರವಾಗಿತ್ತು. ಮಧ್ಯಕಾಲದ ಯೂರೋಪಿನಲ್ಲಿ ಏಕರಾಷ್ಟ್ರವಿರಬೇಕೆಂಬ ಮೋಹದಿಂದಲೇ ಪವಿತ್ರರೋಮಕಸಾಮ್ರಾಜ್ಯವೆಂಬುದರ ಸ್ಥಾಪನೆಯ ಪ್ರಯತ್ನ ನಡೆದಿತ್ತು. ಆದರೆ ಅದರಲ್ಲಿ ಎಷ್ಟೋ ದೇಶಗಳು, ಎಷ್ಟೋ ಭಾಷೆಗಳು, ಎಷ್ಟೋ ಜಾತಿಗಳು. ಕ್ರೈಸ್ತಮತ ವ್ಯಾಪ್ತಿಯಾದ ಮೇಲೆ ಕ್ರೈಸ್ತರೆಲ್ಲರದೂ ಒಂದು ಗುಂಪೆನಿಸಿತು. ಬೇರೆ ಬೇರೆ ಜಾತಿಯವರಾಗಿದ್ದಾಗ್ಯೂ ಬೇರೆ ಬೇರೆ ದೇಶಗಳಲ್ಲಿದ್ದಾಗ್ಯೂ ಕ್ರೈಸ್ತರೆಲ್ಲ ಕ್ರುಸೇಡುಗಳಲ್ಲಿ ಸೇರುತ್ತಿದ್ದರು. ಆಗಿನ ರಾಜರುಗಳು ನಡೆಸಿದ ಯುದ್ಧಗಳೆಲ್ಲವೂ ತುಂಟಸಾಮಂತರನ್ನು ಅಡಗಿಸುವುದಕ್ಕಾಗಿ ಅಥವಾ ರಾಜ್ಯವಿಸ್ತಾರಕ್ಕಾಗಿ. ಇಂಗ್ಲಂಡಿನ ರಾಜರು ಸ್ಕಾಟ್ಲಂಡಿಗಾಸೆಪಟ್ಟು ಅಲ್ಲಿ ಯುದ್ಧಗಳನ್ನು ನಡೆಸಿದರು; ಫ್ರಾನ್ಸಿಗಾಸೆಪಟ್ಟು ಅಲ್ಲಿಯೂ ಹೊಡೆದಾಟ ನಡೆಸಿದರು. ಇದು ಮಧ್ಯಮಯುಗದಲ್ಲಿ. ರಾಜರಾದವರು ಪರಸ್ಪರ ಜಗಳವಾಡುತ್ತಿದ್ದಾಗ್ಯೂ ತಾವೆಲ್ಲರೂ ಕ್ರೈಸ್ತರು, ಕ್ರೈಸ್ತರಲ್ಲದವರು ತಮ್ಮ ವೈರಿಗಳು ಎಂಬ ಭಾವನೆಯಿತ್ತು. ಪ್ರಾಟೆಸ್ಟೆಂಟರ ದಂಗೆ ನಡೆದ ಮೇಲೆ ಪ್ರಾಟೆಸ್ಟೆಂಟರಿಗೂ ಕ್ಯಾಥಲಿಕ್ಕರಿಗೂ ಪರಮದ್ವೇಷ ಬೆಳೆಯಿತು. ಆದರೆ ಕ್ರೈಸ್ತರಲ್ಲದವರು ತಮ್ಮ ವಿರೋಧಿಗಳೆಂಬ ನಂಬಿಕೆಯು ಮಾತ್ರ ಮಾಯವಾಗಲಿಲ್ಲ. ಪ್ರಾಟೆಸ್ಟೆಂಟರಿಗೂ ಕ್ಯಾಥಲಿಕ್ಕರಿಗೂ ಮುಸಲ್ಮಾನರಲ್ಲಿ ಅಸಹನವೇ. ಆದರೆ ಐರೋಪ್ಯರಲ್ಲಿ ಪ್ರಾಟೆಸ್ಟೆಂಟರು ಮತ್ತು ಕ್ಯಾಥಲಿಕ್ಕರು ಪರಸ್ಪರದ್ವೇಷವನ್ನು ಸಾಧಿಸಿದ ವೇಳೆಗೆ ಹೊಸವ್ಯಾಪಾರಮಾರ್ಗಗಳೂ ಹೊಸ ಭೂಭಾಗಗಳೂ ಗೋಚರವಾಗಿ ಸ್ವಾಧೀನಕ್ಕೆ ಬಂದವು. ಪ್ರಾಟೆಸ್ಟೆಂಟರನ್ನು ಚಿತ್ರಹಿಂಸೆಗಾದರೂ ಗುರಿಮಾಡುವುದು ತನ್ನ ಧರ್ಮವೆಂದು ಕ್ಯಾಥಲಿಕ್ ಮತಸ್ಥನು ನಂಬಿದ್ದನು. ಕ್ಯಾಥಲಿಕ್ ಮತಸ್ಥರನ್ನು ನಾಶಗೊಳಿಸುವುದು ನ್ಯಾಯವೆಂದು ಪ್ರಾಟೆಸ್ಟೆಂಟ್ ಮತದವನು ಭಾವಿಸಿದ್ದನು.

ಜನರು ಗುಂಪುಕೂಡಲು ಉದ್ದೇಶವಿರಬೇಕು. ಕ್ರೈಸ್ತಮತಭಕ್ತಿ ದೊಡ್ಡ ದೆನಿಸಿದ್ದಾಗ ಕ್ರುಸೇಡುಗಳನ್ನು ಐರೋಪ್ಯರು ಕಟ್ಟಿದರು. ತುರುಷ್ಕರು ಪ್ರಬಲ ರಾದರೆಂದು ಎಲ್ಲ ಐರೋಪ್ಯರೂ ಯುದ್ಧಸಿದ್ಧರಾದರು. ಎಲ್ಲರಿಗೂ ಬೇಕಾದ ಪ್ರಯೋಜನಕ್ಕೆ ಅಡ್ಡಿ ತೋರಿದಾಗ ಆ ಅಡ್ಡಿಯನ್ನು ನಿವಾರಿಸಲು ಎಲ್ಲರೂ ಜೊತೆಗೂಡುವುದು ಸ್ವಭಾವ. ಕ್ಯಾಥಲಿಕ್ಕರೆಲ್ಲರಿಗೂ ಪ್ರಾಟೆಸ್ಟೆಂಟರು ಹಗೆಗಳೆಂದು ಕಂಡಾಗ ಇಬ್ಬರದೂ ಎರಡು ಪಕ್ಷಗಳು, ಅವುಗಳ ಪರಿಣಾಮ ವಾಗಿ ಕಠೋರಯುದ್ಧಗಳು. ಮತಭಕ್ತನಿಗೆ ಪುಣ್ಯದ ಆಸೆ; ಕ್ಯಾಥಲಿಕ್ಕನನ್ನು ಲೂಟಿ ಹೊಡೆದರೆ ಪ್ರಾಟೆಸ್ಟೆಂಟನಿಗೆ ಪುಣ್ಯ ಮಾತ್ರವಲ್ಲದೆ ಐಶ್ವರ್ಯವೂ ದೊರಕುವ ಸನ್ನಿವೇಶವೊದಗಿದಾಗ ಎರಡೂ ಪ್ರೇರಕವಾದುವಲ್ಲವೆ! ಕ್ಯಾಥ ಲಿಕ್ ದೊರೆ ಫಿಲಿಪ್ ಹಾಲಂಡಿನ ಪ್ರಾಟೆಸ್ಟೆಂಟರನ್ನು ಅಡಗಿಸಲು ಯತ್ನಿಸಿ ದಾಗ ಆ ಪ್ರಾಟೆಸ್ಟೆಂಟರೆಲ್ಲರೂ ಬಂಧುಗಳಂತೆ ಆದರು. ಒಟ್ಟುಗೂಡಿ ಸಾಹಸ ಮಾಡಿದರು, ಪ್ರತ್ಯೇಕರಾಗಿ ಹೊಸ ರಾಷ್ಟ್ರ ಕಟ್ಟಿದರು. ಆಗ ಡಚ್ಚರೆಲ್ಲರೂ ರಾಷ್ಟ್ರಬಂಧುಗಳು. ರಾಷ್ಟ್ರವೇ ಅವರಿಗೆ ಸರ್ವಸ್ವವಾಯಿತು.

ಒಂದೆರಡು ಮಾತುಗಳಲ್ಲಿ ಹೇಳಿಕೊಂಡು ದೃಷ್ಟಾಂತಗಳನ್ನು ನೋಡೋಣ. ಸಾಮಾನ್ಯ ಪ್ರಯೋಜನಕ್ಕಾಗಿ ಗುಂಪು ಹುಟ್ಟುವುದು; ಸಾಮಾನ್ಯವಾಗಿ ತೋರಿದ ವಿಪತ್ತಿನೆದುರಿನಲ್ಲಿ ರಾಷ್ಟ್ರ ಹುಟ್ಟುವುದು.

ಮುಖ್ಯಪ್ರಶ್ನೆ ೫೬: ಹದಿನಾರನೆ ಶತಮಾನದಲ್ಲಿದ್ದ ಮುಖ್ಯ ಐರೋಪ್ಯ ರಾಷ್ಟ್ರಗಳಾವುವು?

ಹದಿನೈದನೆ ಶತಮಾನದಲ್ಲಿ ಇಂಗ್ಲಿಷ್ ದೊರೆಗಳು ರಾಜ್ಯದಾಸೆಯಿಂದ ಫ್ರಾನ್ಸನ್ನು ಮುತ್ತಿ ಫ್ರೆಂಚರಿಗೆ ಆಪತ್ತನ್ನೊಡ್ಡಿದರು. ಆಗ ದೇಶಭಕ್ತಿಯೇ ರೂಪವೆತ್ತಿ ಬಂದಂತೆ '**ಜೋನ್ ಅಫ್ ಆರ್ಕ್**' (Joan of Arc) ಎಂಬ ಕನ್ಯೆಯೊಬ್ಬಳು (೧೪೩೦) ಫ್ರೆಂಚರನ್ನೊಟ್ಟುಗೂಡಿಸಿ ಇಂಗ್ಲಿಷರನ್ನು ಪರಾ ಭವಿಸಿದಳು. ಆಕೆಯ ನೆನಪು ಫ್ರೆಂಚರ ಮನಸ್ಸಿನಲ್ಲಿ ನಾಟಿತು; ಫ್ರೆಂಚರೆಲ್ಲರೂ ಒಟ್ಟುಗೂಡಿದರು. ಸ್ಪೈನಿನಲ್ಲಿ ಮುಸಲ್ಮಾನರ ಆಡಳಿತವನ್ನು ತಪ್ಪಿಸಿಕೊಳ್ಳಲು ಅಲ್ಲಿಯ ಕ್ರೈಸ್ತರೆಲ್ಲರೂ ಒಟ್ಟುಗೂಡಿ '**ಫರ್ಡಿನೆಂಡ್**' (Ferdinand) ಎಂಬ ದೊರೆಯ ಕೈಕೆಳಗೆ ಹೋರಾಡಿ ೧೪೯೨ ರಲ್ಲಿ ದೇಶವನ್ನು ಬಿಡಿಸಿ ಕೊಂಡರು. ಆಸ್ಟ್ರಿಯ ಪ್ರಭುವಿನ ನಿಷ್ಠುರಶಾಸನಕ್ಕೆ ಸಿಕ್ಕಿ ತಪಿಸುತ್ತಿದ್ದ ಸ್ವಿಸ್ ಜನರು ಅಥವಾ ಸ್ವಿಟ್ಸರ್ಲಂಡ್ ನಿವಾಸಿಗಳು ಒಟ್ಟುಗೂಡಿ ದಂಗೆಯೆದ್ದು ಸ್ವತಂತ್ರವಾದ 'ರಿಪಬ್ಲಿಕ್' ರಾಷ್ಟ್ರವನ್ನು ೧೪೯೯ ರಲ್ಲಿ ಸ್ಥಾಪಿಸಿಕೊಂಡರು.

ಡಚ್ಚರು ಪ್ರಾಟೆಸ್ಟೆಂಟರಾದ ಸಂದರ್ಭದಲ್ಲಿ ಸ್ಪೈಯ್ನ್ ದೊರೆ ಫಿಲಿಪ್ಪನು ಅವರನ್ನು ಮತ್ತೆ ಕ್ಯಾಥಲಿಕ್ಕರನ್ನಾಗಿ ಪರಿವರ್ತಿಸಬೇಕೆಂದು ಕ್ರೂರಶಾಸನವನ್ನು ಹೊರಡಿಸಿದನು. ಆಗ ಡಚ್ಚರು ಒಗ್ಗಟ್ಟಾಗಿ ಸೇರಿ ಹೆಣಗಾಡಿ ೧೬೦೯ ರ ವೇಳೆಗೆ ತಾವು ಸ್ವತಂತ್ರರೆಂದು ಸ್ಪೈಯ್ನ್ ಪ್ರಭುವಿನಿಂದಲೇ ಗೌರವಪಡೆದರು. ಡಚ್ಚರದೊಂದು ಜನಾಂಗವಾಯಿತು.

ಸರಿಸುಮಾರಾಗಿ ಅದೇಕಾಲದಲ್ಲಿಯೇ ಇಂಗ್ಲಿಷರು ಸ್ಪೈಯ್ನ್ ದೊರೆಯ ವಿರೋಧವನ್ನು ಬೆಳೆಸಿದರು. ಪ್ರಾಟೆಸ್ಟೆಂಟರಾಗಿದ್ದುದಲ್ಲದೆ ಸ್ಪೈಯ್ನಿಗೆ ಅಮೆರಿಕದಿಂದ ಬರುತ್ತಿದ್ದ ಚಿನ್ನವನ್ನು ದಾರಿಯಲ್ಲಿಯೇ ಕೊಳ್ಳೆಹೊಡೆಯುತ್ತಿದ್ದುದರಿಂದ ಆ ದೊರೆಯು ಇಂಗ್ಲಂಡನ್ನು ಸೋಲಿಸಲು ಭಾರಿಪ್ರಯತ್ನ ನಡೆಸಿದನು. 'ಆರ್ಮೇಡ'ವೆಂದು ಹೆಸರಾದ ಆ ಪ್ರಯತ್ನ ಹಾಳಾಯಿತು. ಇಂಗ್ಲಿಷರು ಆ ವೇಳೆಯಿಂದ ಹೆಮ್ಮೆಪಡುತ್ತ ತಮ್ಮ ರಾಷ್ಟ್ರಭಕ್ತಿಯನ್ನು ಭದ್ರಪಡಿಸಿಕೊಂಡರು. ಎಲಿಸ್ಟಬೆತ್ ರಾಣಿಯ ಆಳಿಕೆ ಇಂಗ್ಲಿಷರನ್ನು ಒಟ್ಟುಗೂಡಿಸಿ ಅವರಲ್ಲಿ ಉತ್ಸಾಹವನ್ನು ತುಂಬಿತು.

ಹದಿನಾರನೆ ಶತಮಾನದಲ್ಲೆಲ್ಲ ಇಂಗ್ಲಂಡ್, ಫ್ರಾನ್ಸ್, ಸ್ಪೈಯ್ನ್ ದೇಶಗಳ ಪ್ರಭುಗಳು ತಮ್ಮಲ್ಲಿಯೇ ಸಂಧಾನಗಳನ್ನು ನಡೆಸಿಕೊಳ್ಳುತ್ತ ಇರುತ್ತಿದ್ದರು. ಆ ಶತಮಾನಾಂತ್ಯದಲ್ಲಿ '**ಬೋರ್ಬನ್**' (Bourbon) ವಂಶದವರು ಫ್ರಾನ್ಸಿನಲ್ಲಿ ಸ್ಥಾಪಿತರಾದರು. ಎಲಿಸ್ಟಬೆತ್ ಇಂಗ್ಲಂಡಿನಲ್ಲಿ ತನ್ನ ಆಳಿಕೆಯನ್ನು ಮುಗಿಸುತ್ತಿದ್ದಾಗ ಫ್ರಾನ್ಸಿಗೆ '**ನಾಲ್ಕನೆ ಹೆನ್ರಿ**' (Henry IV) ಯೆಂಬಾತನು ದೊರೆಯಾದನು. ಆತನೇ ಬೋರ್ಬನ್ ವಂಶಕ್ಕೆ ಮೊದಲಿಗನು.

ಮಧ್ಯಯೂರೋಪಿನಲ್ಲಿ ಪವಿತ್ರ ರೋಮಕ ಸಾಮ್ರಾಜ್ಯವೆಂಬುದು ಹೆಸರಿಗೆ ಮಾತ್ರವೇ. ಆ ಚಕ್ರವರ್ತಿ ಜರ್ಮನಿ, ಆಸ್ಟ್ರಿಯ ಹಂಗರಿ ಮತ್ತು ಇಟಲಿಗೆ ಪ್ರಭು. ಆದರೆ ನಾನಾ ಭಾಷೆಗಳು, ನಾನಾ ಆಚಾರಪದ್ಧತಿಗಳು, ನಾನಾಜಾತಿಜನರು ಇದ್ದ ಪ್ರದೇಶಗಳ ಸಮುದಾಯ ಅದು. ಜರ್ಮನಿಯ ಪ್ರಾಟೆಸ್ಟೆಂಟರು ಪ್ರತ್ಯೇಕರಾದ ವೇಳೆಯಲ್ಲಿ ಚಕ್ರವರ್ತಿ ಅವರ ಮೇಲೆ ಯುದ್ಧ ಕಟ್ಟಿದನು. ಅದೇ '**ಮೂವತ್ತು ವರ್ಷಗಳ ಯುದ್ಧ**' (೧೬೧೮-೧೬೪೮). ಆ ಯುದ್ಧದ ಹಾವಳಿಯಿಂದ ಜರ್ಮನಿ ಚೇತರಿಸಿಕೊಳ್ಳುವುದು ನಿಧಾನವಾಯಿತು. ಮತದ್ವೇಷ ತುಂಬಿದ ಕ್ಯಾಥಲಿಕ್ಕರೂ ಪ್ರಾಟೆಸ್ಟೆಂಟರೂ ಒಟ್ಟುಗೂಡುವ ಸಂಭವವೇ ತೋರಲಿಲ್ಲ. ಇಟಲಿಯಲ್ಲಿ ಪೋಪನಲ್ಲದೆ ಇತರ ಸಂಸ್ಥಾನಾಧಿಪತಿಗಳೂ ಪಟ್ಟಣಪ್ರಮುಖರೂ ಪ್ರಬಲರಾಗಿ ಬಹುಕಾಲ ಇಟಾಲಿಯನ್ ಜನರ ಐಕಮತ್ಯಕ್ಕೆ ಅಥವಾ ಏಕೀಕರಣಕ್ಕೆ ಅಡ್ಡಿಯಾಗಿದ್ದರು.

ರಷ್ಯ ಎಂಬುದು ಜೆಂಘೀಸ್, ಉಗದಾಯಿ, ಮಂಗೂಖಾನರ ಅಧೀನದಲ್ಲಿತ್ತು. ೧೪೮೦ ರವರೆಗೆ **ಮಾಸ್ಕೊ ಡ್ಯೂಕ್** (Duke of Moscow) ಎಂಬ ಸಣ್ಣ ಪ್ರಭು ಬರಾಖಾನರಿಗೆ ಸಾಮಂತನಾಗಿದ್ದನು. ಆ ವರ್ಷ **ಇವಾನ್** (Ivan the Terrible) ಎಂಬ ಆ ಸಾಮಂತನು ಸ್ವತಂತ್ರನಾಗಿ ಸ್ಟಾರ್ ಎಂಬ ಬಿರುದನ್ನು ಧರಿಸಿದನು.

ಯೂರೋಪಿನ ಆಗ್ನೇಯಭಾಗದಲ್ಲೆಲ್ಲ ಉಸ್ಮಾನ್ಲೀತುರುಷ್ಕರದೇ ಪ್ರಾಬಲ್ಯ. ಕಾನ್‌ಸ್ಟಾಂಟಿನೋಪಲ್ ನಗರವನ್ನು ಸಾಧಿಸಿದ ತರುವಾಯ ಸುಲ್ತಾನರು ಡಾನ್ಯೂಬ್ ನದಿಯ ಕೆಳಭಾಗವನ್ನು ಆಕ್ರಮಿಸಿಕೊಂಡರು.



[1]ಕಾನ್‌ಸ್ಟಾಂಟಿನೋಪಲ್—ಸೆಂಟ್ ಸೋಫಿಯ ಮಸೀದಿ

ಆಫ್ರಿಕದ ಉತ್ತರ ಭಾಗವೂ ಅವರಿಗೆ ಅಧೀನವಾಗಿತ್ತು. ೧೫೨೦ ರಲ್ಲಿ **ಮಹಾ ವೈಭವಶಾಲಿ** ಯೆನಿಸಿದ **ಸುಲೆಮಾನ್** (Sulaiman the Magnificent) ಎಂಬಾತನು ಸುಲ್ತಾನನಾದನು. ಮಧ್ಯಯೂರೋಪನ್ನು ಆಕ್ರಮಿಸಿದನು. ೧೫೨೯ ರಲ್ಲಿ ವಿಯೆನ್ನ ಪಟ್ಟಣವನ್ನು ಮುತ್ತಿದನು. ಆ ಮುತ್ತಿಗೆಯಲ್ಲಿ ತುರುಷ್ಕರು ಜಯಶಾಲಿಗಳಾಗಿದ್ದ ಪಕ್ಷದಲ್ಲಿ ಮೂಡಲ ಯೂರೋಪೆಲ್ಲ ತುರುಷ್ಕರ ಆಳಿಕೆಗೊಳಗಾಗಬಹುದಾಗಿತ್ತು. ಆದರೆ ಆ ಮುತ್ತಿಗೆ ಫಲದಾಯಕ

[1] ಜಸ್ಟಿನಿಯನ್ ಚಕ್ರವರ್ತಿ ಕಟ್ಟಿಸಿದ್ದ ಚರ್ಚ್; ತುರುಷ್ಕರ ಕಾಲದಲ್ಲಿ ಮಸೀದಿಯಾಯಿತು.

ವಾಗಲಿಲ್ಲ. ಯೂರೋಪಿನ ಉತ್ತರ ಮತ್ತು ಪಶ್ಚಿಮ ದೇಶಗಳು ತುರುಷ್ಕರ ಆಕ್ರಮಣಭಯವಿಲ್ಲದೆ ಉಳಿದುವು.

ಸುಮಾರು ಅದೇಕಾಲದಲ್ಲೇ ಹಿಂದುಸ್ಥಾನವನ್ನು ಬಾಬರನು ಗೆದ್ದನು. ಪ್ರಖ್ಯಾತ ಮುಘಲ್ ಬಾದಶಾಹಿ ಆತನಿಂದಲೇ ಮೊದಲು. ಆತನ ಮೊಮ್ಮಗ **ಅಕ್ಬರ್** ಮಹಾಪುರುಷರಲ್ಲಿ ಅಗ್ರಗಣ್ಯನಾದವನು. ಆತನ ವೃತ್ತಾಂತವನ್ನು ಮುಂದಿನ ಅಧ್ಯಾಯದಲ್ಲಿ ಹೇಳಿಕೊಳ್ಳೋಣ.

ಅಭ್ಯಾಸಗಳು

೧. ರಾಷ್ಟ್ರಭಕ್ತಿಗೂ ದೇಶಭಕ್ತಿಗೂ ವ್ಯತ್ಯಾಸವುಂಟೇ ? ರಾಷ್ಟ್ರಭಕ್ತಿಯೆಂಬುದು ಮೊದಲು ತೋರಿಕೊಂಡುದು ಯಾವ ಕಾರಣದಿಂದ ?

೨. ಹತ್ತೊಂಭತ್ತನೆ ಮತ್ತು ಇಪ್ಪತ್ತನೆ ಶತಮಾನಗಳಲ್ಲಿ ರಾಷ್ಟ್ರಭಕ್ತಿಯು ಉದ್ರೇಕಗೊಂಡ ರಾಷ್ಟ್ರಗಳು ಯಾವುವು ? ಹಾಗಾಗಲು ಕಾರಣವೇನು ?

೩. ಅಕ್ಬರ್ ಪಾದಶಾಹನ ಸಮಕಾಲಿಕರಾಗಿದ್ದ ಐರೋಪ್ಯಪ್ರಭುಗಳನ್ನೂ ಅವರ ರಾಜ್ಯಗಳನ್ನೂ ತಿಳಿಯಹೇಳಿ.

೧೬ನೇ ಅಧ್ಯಾಯ

ಅಕ್ಬರ್ ಮತ್ತು ಶಿವಾಜಿ

ಮುಖ್ಯಪ್ರಶ್ನೆ ೫೭ : ಅಕ್ಬರನ ಪೂರ್ವಿಕರಾರು? ಅವನ ತಂದೆ ತಾತಂದಿರ ವೃತ್ತಾಂತವೇನು?

ಪೈಗಂಬರ್ ಮುಹಮ್ಮದರು ದೈವಾಧೀನರಾದ ನೂರುವರ್ಷಗಳೊಳಗಾಗಿ ಸ್ಪೈಯ್ನ್ ದೇಶದಿಂದ ಸಿಂಧುಪ್ರಾಂತದವರೆಗೆ ವಿಸ್ತಾರಸಾಮ್ರಾಜ್ಯವನ್ನು ಮುಸಲ್ಮಾನರು ಕಟ್ಟಿದ ಸಂಗತಿಯನ್ನಾಗಲೇ ಕಂಡೆವು. ಹಾರೂನ್ ಅಲ್ ರಷೀದನ ತರುವಾಯ ಆ ಸಾಮ್ರಾಜ್ಯವೇನೋ ಒಡೆಯಿತು. ಆದರೆ ಪ್ರತ್ಯೇಕಗೊಂಡ ಭಾಗಗಳಲ್ಲಿ ಇಸ್ಲಾಂ ಮತವೇ ಭದ್ರವಾಗಿತ್ತು. ಈಗ ನಾವು ಅಫ್ಘಾನಸ್ತಾನವೆಂದು ಕರೆಯುವ ಪ್ರದೇಶ ಆ ಭಾಗಗಳಲ್ಲೊಂದಾಗಿತ್ತು. ಆ ಬೆಟ್ಟಗುಡ್ಡಗಳ ನಾಡಿನಿಂದ ಮುಸಲ್ಮಾನರು ಪುನಃ ಪುನಃ ಹೊರಟು ಫಲವತ್ತಾದ ಪಂಜಾಬನ್ನು ಆಕ್ರಮಿಸಿಕೊಳ್ಳಲು ಯತ್ನಿಸಿದರು. ಅವರನ್ನು ತಡೆದವರು ಮುಖ್ಯವಾಗಿ ರಾಜಪುತ್ರರು. ಎಷ್ಟು ಶೌರ್ಯಸಾಹಸಗಳಿಂದ ಕೂಡಿ ರಾಜಪುತ್ರರು ಕಾದಾಡಿದಾಗ್ಯೂ ಗಾಂಧಾರದಿಂದ ಕಾಶೀಕ್ಷೇತ್ರದವರೆಗಿನ ಸಿಂಧುಗಂಗಾಮೈದಾನಗಳು ಹನ್ನೆರಡನೆ ಶತಮಾನದಂತ್ಯದ ವೇಳೆಗೆ ಮುಸಲ್ಮಾನ ಪ್ರಭುಗಳಿಗೆ ವಶವಾದುವು. ಫಲವತ್ತಾದ ಪ್ರದೇಶಗಳನ್ನು ಬಿಟ್ಟುಕೊಟ್ಟು ರಾಜಪುತ್ರರು ಮರುಭೂಮಿಯ ಒತ್ತಿನಲ್ಲಿರುವ ರಾಜಪುತ್ರಸ್ಥಾನವನ್ನೂ ವಿಂಧ್ಯಾಚಲಕ್ಕುತ್ತರದಲ್ಲಿರುವ ಅರಣ್ಯದುರ್ಗಗಳನ್ನೂ ಸೇರಿಕೊಳ್ಳಬೇಕಾಯಿತು.

ಕಾಬೂಲ್ ಪ್ರಾಂತದಲ್ಲಿದ್ದ ಮುಸಲ್ಮಾನರೂ ಪರಕೀಯರ ದಂಡಯಾತ್ರೆಗೆ ಸಿಕ್ಕಿದರು. ಜೆಂಘೀಸ್ ಖಾನನ ಕುಲಸ್ಥರಾಗಿದ್ದ ಮಂಗೋಲರ ತಂಡಗಳನ್ನು ನಡೆಸಿಕೊಂಡು ಬಂದ **ತೈಮೂರ್‌ಲಂಗ್** ಎಂಬ ಪ್ರಸಿದ್ಧ ಶೂರನು ಕ್ರಿ.ಶ. ೧೩೯೮ರಲ್ಲಿ ಅವರನ್ನು ಆಕ್ರಮಿಸಿದನು. ಆಕ್ರಮಣದಲ್ಲಿ ನಾಶವೇ ಗುರಿ. ಮುತ್ತಿಗೆಗೊಳಗಾದ ದಿಲ್ಲಿಯ ನಿವಾಸಿಗಳು ರಾಶಿರಾಶಿಯಾಗಿ ಕೊಲೆಯಾದರು. ಮಂಗೋಲರು ಮಾತ್ರ ದೇಶದಲ್ಲಿ ನಿಲ್ಲಲಿಲ್ಲ. ಪುನಃ ಅವರ ಆಕ್ರಮಣವು ನಡೆದುದು ಬೇರೆ ರೀತಿಯಲ್ಲಿ. ಅದನ್ನು ನಡೆಸಿದವನು ತೈಮೂರನ ವಂಶಸ್ಥನಾಗಿದ್ದ ಬಾಬರ್. ಹನ್ನೊಂದನೆ ವಯಸ್ಸಿನಲ್ಲಿಯೇ **ಬಾಬರನು** ಫರ್ಘಾನ

ಸಂಸ್ಥಾನಕ್ಕೆ ಅಧಿಪತಿಯೆನಿಸಿದ್ದನು. ಆ ಬಳಿಕ ಹತ್ತು ವರ್ಷಗಳೊಳಗಾಗಿ ಕಾಬೂಲ್ ಪ್ರಾಂತವನ್ನು ವಶಪಡಿಸಿಕೊಂಡು ಅಲ್ಲಿಗೆ ಪ್ರಭುವಾದನು. ಆ ತರುವಾಯ ಇಪ್ಪತ್ತುವರ್ಷ ಕಳೆಯುವಷ್ಟರಲ್ಲಿ ಬಾಬರನು ಹಿಂದುಸ್ತಾನದ ಉತ್ತರಭಾಗವನ್ನು ಮುತ್ತಿದನು. ಹಿಂದುಸ್ತಾನವು ತೈಮೂರನ ಹಾವಳಿಯಿಂದ ಇನ್ನೂ ಚೇತರಿಸಿಕೊಳ್ಳದೆ ಅಸ್ತವ್ಯಸ್ತವಾಗಿಯೇ ಇತ್ತು. ದಿಲ್ಲಿಯಲ್ಲಿ ಆಳಿಕೆ ನಡೆಸುತ್ತಿದ್ದ ಮುಸಲ್ಮಾನಸುಲ್ತಾನನನ್ನು **ಪಾಣಿಪಟ್ ಕದನದಲ್ಲಿ** ೧೫೨೬ರಲ್ಲಿ ಬಾಬರನು ಸೋಲಿಸಿ ದಿಲ್ಲಿಗೊಡೆಯನಾದನು. ಮುಸಲ್ಮಾನ ಶತ್ರುಗಳನ್ನಡಗಿಸಿದ ಬಳಿಕ ರಾಜಪುತ್ರರನ್ನೆದುರಿಸಿ ಮುಂದಿನ ವರ್ಷ **ಖಾನುವ** ಕದನದಲ್ಲಿ ಗೆದ್ದನು. ನಾಲ್ಕು ವರ್ಷಗಳ ತರುವಾಯ ತೀರಿಕೊಂಡನು.

ಸಮರ್ಥನಾದ ದಳಪತಿಮಾತ್ರನಾದವನಲ್ಲ ಬಾಬರ್. ಸಂಸ್ಕೃತರಲ್ಲಿ ಗಣ್ಯನಾಗತಕ್ಕವನು. ಆತನು ಗತಿಸಿದ ಸಮಯದಲ್ಲಿ ಆತನ ಪ್ರಭುತ್ವ ಏರಲ್ ಸಮುದ್ರದಿಂದ ಬಂಗಾಳದ ಪಡುವಲ ಎಲ್ಲೆವರೆಗೆ ವ್ಯಾಪ್ತಿಪಡೆದಿತ್ತು. ಆದರೆ ಆತನ ವೈರಿಗಳು ಸರ್ವನಾಶ ಹೊಂದಿರಲಿಲ್ಲ, ಸಮಯವನ್ನು ಹೊಂಚಿಕೊಂಡಿದ್ದರು. ಹುಮಾಯೂನ್ ಪಟ್ಟಕ್ಕೆ ಬಂದೊಡನೆ ಎಲ್ಲ ಕಡೆಗಳಿಂದಲೂ ಶತ್ರುಗಳು ಮುತ್ತಿದರು. ಬಾಬರನೆದುರಿನಲ್ಲಿ ಸೋತಿದ್ದ ಅಫ್ಘಾನ ಮುಸಲ್ಮಾನರೇ ಅವರಲ್ಲಿ ಪ್ರಬಲರು. ಸೋತು ನಷ್ಟಪಟ್ಟು ರಾಜ್ಯಕಳೆದುಕೊಂಡುದಲ್ಲದೆ ಹುಮಾಯೂನ್ ಪ್ರಾಣವನ್ನುಳಿಸಿಕೊಳ್ಳಲು ರಾಜಸ್ಥಾನಸಿಂಧುಪ್ರಾಂತಗಳ ಮರಳುಕಾಡುಗಳಲ್ಲಿ ಅಲೆದಾಡುವ ಸ್ಥಿತಿ ಬಂತು. ಆ ಪಲಾಯನ ವೇಳೆಯಲ್ಲಿ **ಅಕ್ಬರ್** ಹುಟ್ಟಿದನು. ತನ್ನ ಆಯುಷ್ಯದ ಕೊನೆಕೊನೆಗೆ ಮಾತ್ರ ಹುಮಾಯೂನನು ಫಾರ್ಸಿಸ್ತಾನದ ಶಾಇನ್‌ಶಾಹನ ಸಹಾಯದಿಂದ ದಿಲ್ಲಿಯನ್ನು ಪುನಃ ಸಂಪಾದಿಸಿಕೊಂಡನು. ಆಗ ಅಕ್ಬರನಿಗೆ ಹದಿನಾಲ್ಕುವರ್ಷ. ಬಾಲ್ಯವನ್ನು ಕಳೆದುದು ಕಾಬೂಲ್ ಪ್ರಾಂತದಲ್ಲಿ. ತಂದೆ ತೀರಿಕೊಂಡಾಗ ಎಲ್ಲೆಲ್ಲಿಯೂ ಶತ್ರುಗಳು. ಇನ್ನೂ ತರುಣನಾಗಿದ್ದ ಅಕ್ಬರನು ಮುಂದೆ ಏಳುವರ್ಷ ಕಾಲವನ್ನು ಹೊಡೆದಾಟದಲ್ಲಿಯೇ ಕಳೆದನು. ಮೊದಲು ದಿಲ್ಲಿ ಆಗ್ರಾ ಪ್ರಾಂತವನ್ನು ಕ್ರಮಗೊಳಿಸಿ ಪಂಜಾಬನ್ನು ವಶಪಡಿಸಿಕೊಂಡನು. ತರುವಾಯ ರಾಜಪುತ್ರಸ್ಥಾನದಲ್ಲಿ ಹೋರಾಟ ನಡೆಸಿ ಅಸಾಧ್ಯವೆನಿಸಿದ್ದ ಚಿತ್ತೂರು ದುರ್ಗವನ್ನು ಹಿಡಿದನು. ಅನಂತರ ಗುಜರಾಥಬಂಗಾಳಗಳನ್ನು ಸ್ವಾಧೀನಕ್ಕೆ ತಂದುಕೊಂಡನು.

ಮುಖ್ಯಪ್ರಶ್ನೆ ೫೮ : ಹಿಂದುಗಳಾಗಿದ್ದ ತನ್ನ ಪ್ರಜೆಗಳ ವಿಶ್ವಾಸವನ್ನು ಅಕ್ಬರನು ಸಂಪಾದಿಸಿದುದು ಹೇಗೆ?

ಸೈನ್ಯಗಳನ್ನು ನಡೆಸಿ ಹಿಂದುಸ್ತಾನದ ಉತ್ತರಾರ್ಧವನ್ನು ಗೆದ್ದುಕೊಂಡ ದಕ್ಷತೆಯುಳ್ಳ ದಳಪತಿ ಅಕ್ಬರನು ಹೌದು. ಆದರೆ ಗೆದ್ದ ಸಾಮ್ರಾಜ್ಯವನ್ನು ಭದ್ರಪಡಿಸಿ ಕ್ರಮವಾದ ಆಡಳಿತವನ್ನು ಏರ್ಪಡಿಸಿದ ಹೆಚ್ಚಿನ ಸಾಮರ್ಥ್ಯವೂ ಆತನಲ್ಲಿತ್ತು. ತಂದೆಗೂ ತಾತನಿಗೂ ಲಭಿಸಿದ್ದ ಗ್ರಂಥವ್ಯಾಸಂಗವು ಅಕ್ಬರನಿಗೆ ಇರಲೇ ಇಲ್ಲ. ಅಕ್ಬರನ ತಾರುಣ್ಯ ಕಷ್ಟಾನುಭವದಲ್ಲಿಯೇ ಕಳೆದಿತ್ತು. ಈ ಹೊತ್ತಿನ ಸ್ಥಿತಿ ನಾಳೆ ಇರುತ್ತಿರಲಿಲ್ಲ. ಅಕ್ಷರಶಿಕ್ಷೆಯಿಲ್ಲದಿದ್ದಾಗ್ಯೂ ಅಕ್ಬರನಲ್ಲಿ ಸಹಜವಾದ ಸಾಮರ್ಥ್ಯವಿತ್ತು. ಹಿಂದೆ ಚೀನಸಾಮ್ರಾಜ್ಯವನ್ನಾಳಿದ್ದ ಕುಬ್ಲಾಯಿಖಾನನ ಮನಸ್ಸಿನಲ್ಲಿದ್ದಂತಹ ಮನೋವೈಶಾಲ್ಯವು ಅಕ್ಬರನಲ್ಲಿಯೂ ನೆಲೆಸಿತ್ತು. ಮಂಗೋಲರೇನೋ ಆ ವೇಳೆಗೆ ಇಸ್ಲಾಂ ಸ್ವೀಕರಿಸಿಕೊಂಡಿದ್ದರು. ಆದರೆ ಇತರ ಮತಗಳಲ್ಲಿ ಗುಣವೇ ಇಲ್ಲವೆಂದು ಸ್ಥಾಪಿಸುವ ಹಟವು ಅಕ್ಬರನ ಮನಸ್ಸಿಗೊಪ್ಪಲಿಲ್ಲ. ಈ ಬಗೆಯ ಮನಸ್ಸಿನ ಔದಾರ್ಯದಿಂದ ಆತನಲ್ಲಿ ನಿಷ್ಪಕ್ಷಪಾತಗುಣವು ಸ್ವಭಾವವಾಗಿ ಬೆಳೆಯಿತು. ತಾನೊಪ್ಪಿಸುವ ಕೆಲಸಕ್ಕೆ ತಕ್ಕ ಯೋಗ್ಯತೆಯುಳ್ಳವನನ್ನು ಆ ಮತಸ್ಥ, ಈ ಮತಸ್ಥನೆನ್ನದೆ ಆರಿಸಿಕೊಂಡು ಗೊತ್ತುಮಾಡುವ ಚಾತುರ್ಯವು ಅಕ್ಬರನಲ್ಲಿ ಕಾಣಿಸಿಕೊಂಡಿತು.

ರಾಜಪುತ್ರರಾಜರೊಂದಿಗೂ ಸಾಮಂತರೊಂದಿಗೂ ವರ್ತಿಸುವ ಸಂದರ್ಭದಲ್ಲಿಯೇ ಅಕ್ಬರನ ಉದಾರಗುಣಗಳು ಮೊದಲು ತೋರಿದ್ದು. ಯೂರೋಪಿನಲ್ಲಿ ರೂಢಿಗೊಂಡಂತೆ ಇಲ್ಲಿಯೂ ಜಹಗೀರಿ (ಫ್ಯೂಡಲ್) ಪದ್ಧತಿ ಒಂದು ರೀತಿಯಲ್ಲಿ ಬೆಳೆದಿತ್ತು. ಮುಘಲಗುಂಪಿನ ಸಾಮಂತರಲ್ಲಿ ಮಾತ್ರ ಪ್ರಸನ್ನನಾಗಿರದೆ ಅಕ್ಬರನು ಹಿಂದುಗಳನ್ನೂ ಮುಸಲ್ಮಾನರನ್ನೂ ಏಕರೀತಿಯಲ್ಲಿ ಸನ್ಮಾನಮಾಡಿದನು. ಯಾವ ಮತಸ್ಥನೆಂದಾಗಲಿ ಯಾವ ಕುಲಸ್ಥನೆಂದಾಗಲಿ ತಿಳಿದು ಪಕ್ಷಪಾತ ತೋರದೆ ಅರ್ಹರಾದವರಿಗೆ ಮಾತ್ರ ಅಧಿಕಾರ ಬಹುಮಾನ



ಅಕ್ಬರ್

ಗಳನ್ನು ಕೊಡಿಸಿದನು. ಅರ್ಹತೆಯುಳ್ಳವರಿಗೆ ಸನ್ಮಾನವೆಂಬ ನಿಯಮವು ಎಲ್ಲರಿಗೂ ನ್ಯಾಯವಾಗಿತ್ತು. ಆತನ ದಳಪತಿಗಳಲ್ಲಿ ಪ್ರಮುಖನೆನಿಸಿದ್ದಾತನು '**ಮಹಾರಾಜಾ ಮಾನಸಿಂಹ**'ನೆಂಬ ರಾಜಪುತ್ರ. ಆಯವ್ಯಯಸಚಿವರಲ್ಲಿ ಅಗ್ರಗಣ್ಯನಾದಾತನು '**ರಾಜಾ ತೋದರಮಲ್ಲ**'ನೆಂಬ ಮತ್ತೊಬ್ಬ ರಾಜಪುತ್ರ. ಇಂತಹ ಸಮರ್ಥಜನರ ವಿಶ್ವಾಸಬಲದಿಂದಲೇ ಅಕ್ಬರ್ ಪಾದಶಾಹನು ಕಾಬೂಲ್ ಕಂದಹಾರಗಳನ್ನೂ, ಸಿಂಧು ಕಾಶ್ಮೀರಗಳನ್ನೂ, ಬಿರಾರ ಉತ್ಕಲ ಬಂಗಾಳಗಳನ್ನೂ ತನ್ನ ಜೀವಮಾನದಲ್ಲಿ ಒಟ್ಟುಗೂಡಿಸಿ ಸಾಮ್ರಾಜ್ಯನಿರ್ಮಾಣಕನಾದನು.

ತನ್ನ ಪ್ರಜೆಗಳು ತೃಪ್ತಿಗೊಂಡಿರಬೇಕೆಂಬ ಅಂಶದಲ್ಲಿಯೂ ಅಕ್ಬರನಿಗಿತ್ತು ಎಚ್ಚರ. ಧಾರ್ಮಿಕ ಸಹನೆಯಿಂದಲೂ ನಿಷ್ಪಕ್ಷಪಾತವರ್ತನೆಯಿಂದಲೂ ಅಕ್ಬರನು ತನ್ನ ಪ್ರಜೆಗಳನ್ನು ಸಮಾಧಾನಸ್ಥಿತಿಯಲ್ಲಿಟ್ಟುಕೊಂಡಿದ್ದನು. ರಾಜಾ ತೋದರಮಲ್ಲನ ಸಹಾಯಸಲಹೆಗಳನ್ನನುಸರಿಸಿ ಜನರಿಗೆ ನ್ಯಾಯವೆಂದು ತೋರಿದ ಕಂದಾಯದ ಶಿಸ್ತನ್ನು ನೆಲೆಗೊಳಿಸಿದನು. ಭೂಮಿಗಳನ್ನು ಅಳೆದು ಫಲಾನುಸಾರವಾಗಿ ವಿಭಾಗಿಸಲಾಯಿತು. ಕೃಷೀವಲರು ತಾವು ಬೆಳೆದ ಒಟ್ಟು ಫಸಲಿನಲ್ಲಿ ಮೂರನೆಯದೊಂದು ಪಾಲನ್ನು ಧನರೂಪವಾಗಿಯೋ ಧಾನ್ಯರೂಪವಾಗಿಯೋ ಸಲ್ಲಿಸಬೇಕಾಯಿತು. ಕಂದಾಯದ ವಸೂಲಿಗೆ ಮಧ್ಯಸ್ಥಗಾರರು ಗೊತ್ತಾದರು. ಬಂದ ವಸೂಲಿಯಲ್ಲಿ ಗೊತ್ತಾದ ಅಂಶವನ್ನು ಆ ಮಧ್ಯಸ್ಥಗಾರರು ಅನುಭವಿಸಬಹುದಾಯಿತು. ಗ್ರಾಮಾಂತರಗಳಲ್ಲಿ ಕಂದಾಯವಸೂಲಿಯ ಅನ್ಯಾಯಗಳು ನಡೆಯದಂತೆ ನೋಡಿಕೊಳ್ಳಲು ದೊಡ್ಡ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ ದಂಡಧಾರಿಗಳು (Magistrates) ನಿಯಮಿತರಾದರು. ಮುಖ್ಯಪಟ್ಟಣಗಳಲ್ಲಿ ಪುನರ್ವಿಮರ್ಶೆ ಅಥವಾ ಅಪೀಲ್‌ಗಳಿಗಾಗಿ ನ್ಯಾಯಸ್ಥಾನಗಳು ಸ್ಥಾಪಿತವಾದುವು. ಪಾದಶಾಹನ ಆಸ್ಥಾನವೇ ಕಟ್ಟಕಡೆಯ ತೀರ್ಪುಹೊರಡುವ ಸ್ಥಾನ. ಅಕ್ಬರನ ಕಾಲದಲ್ಲಿ ಕಂದಾಯ ವಸೂಲಿಗಾಗಿ ಏರ್ಪಟ್ಟ ಮಧ್ಯಸ್ಥಗಾರಗುಂಪಿನವರೇ ಕಾಲಕ್ರಮದಲ್ಲಿ ಉತ್ತರಹಿಂದುಸ್ತಾನದ ಜಮೀನ್ದಾರರೂ ತಾಲ್ಲೂಕಾದಾರರೂ ಆದರು.

ವಿವಾಹಸಂಬಂಧಗಳಿಂದ ತನ್ನ ಜನರನ್ನೊಟ್ಟುಗೂಡಿಸುವ ಆಲೋಚನೆಯು ಸಿಕಂದರನಿಗಿದ್ದಂತೆಯೇ ಅಕ್ಬರನಿಗೂ ಇತ್ತು. ಸಾಮಂತರನೇಕರೊಂದಿಗೆ ತಾನೇ ಸಂಬಂಧ ಬೆಳೆಸಿದನು. ಮುಸಲ್ಮಾನರು ಮಾತ್ರವಲ್ಲದೆ ಹಿಂದುಮತಸ್ಥ ಸಾಮಂತರ ಬಾಂಧವ್ಯವನ್ನೂ ಕಟ್ಟಿದನು. ತನ್ನ ರಾಜಪುತ್ರ ದಂಡನಾಯಕರಲ್ಲೊಬ್ಬನಾದ ಜಯಪುರದ '**ರಾಜಾಭಾರಮಲ್ಲ**'ನ

ಪುತ್ರಿಯೇ ಅಕ್ಬರನ ಪ್ರೀತಿಪಾತ್ರಳಾದ ರಾಣಿ. ಆಕೆಗಾಗಿ ಕಟ್ಟಿದ ದೇವಾಲಯವನ್ನಲ್ಲದೆ ಭವ್ಯವಾದ ಅರಮನೆಯನ್ನು ಈಗಲೂ ಫತ್ತೇಪುರ ಸಿಕ್ರಿಯಲ್ಲಿ ಕಾಣಬಹುದು.

ಇನ್ನೂ ಮುಂದೆ ಹೆಜ್ಜೆಯಿಟ್ಟನು ಅಕ್ಬರ್. ಆತನಿಗೆ ಧರ್ಮವಿಚಾರದಲ್ಲಿ ನಿಶ್ಚಲವೂ ಗಾಢವೂ ಆದ ಆಸಕ್ತಿ. ಆ ಮತ, ಈ ಮತವೆಂಬ ಭೇದವನ್ನೆಣಿಸದೆ ಸತ್ಯವನ್ನರಸಲು ಆತನು ಸಾಧ್ಯವಾದಷ್ಟು ಪ್ರಯತ್ನಗಳನ್ನು ನಡೆಸಿದನು. ಆ ಉದ್ದೇಶದಿಂದ ತನ್ನ ಆಸ್ಥಾನಕ್ಕೆ ಮುಸಲ್ಮಾನ್ ಮೌಲ್ವಿಗಳನ್ನೂ ಹಿಂದು ಪಂಡಿತರನ್ನೂ ಜೈನಯತಿಗಳನ್ನೂ ಅಲ್ಲದೆ ಯೂರೋಪಿನಿಂದ ಬಂದಿದ್ದ ರೋಮನ್ ಕ್ಯಾಥಲಿಕ್ ಪಂಥದ ಜೆಸುಯಿತರೆಂಬ ಕ್ರೈಸ್ತ ಗುರುಗಳನ್ನೂ ಬರಮಾಡಿಕೊಂಡನು. ಮತಸಂಬಂಧವಾದ ವಿಷಯಗಳನ್ನು ಅಕ್ಬರನು ಚರ್ಚಿಸುತ್ತಲೇ ಇದ್ದು ತನ್ನ ಆಳಿಕೆಯ ಉತ್ತರಾರ್ಧದಲ್ಲಿ ತನ್ನ ಮಿತ್ರ '**ಅಬುಲ್ ಫಜಲ್**' ಎಂಬಾತನ ಸಹಾಯದಿಂದ '**ದೀನ್ ಇಲಾಹಿ**' ಎಂಬ ನೂತನ ಮತವನ್ನು ಮೊದಲಿಟ್ಟನು. ಘನವಿದ್ವಾಂಸನೂ ಇತಿಹಾಸಕಾರನೂ ಆಗಿದ್ದನು ಆ ಅಬುಲ್ ಫಜಲ್. ಇಬ್ಬರ ಪ್ರಯತ್ನದಿಂದ ಸ್ಥಾಪಿತವಾದ ಆ ಮತದ ಮುಖ್ಯೋದ್ದೇಶ ನಾನಾಮತಗಳನ್ನನುಸರಿಸುತ್ತ ಭಿನ್ನಭಿನ್ನರಾಗಿದ್ದ ಜನರನ್ನು ಜಗದೀಶ್ವರನೊಬ್ಬನ ಆರಾಧಕರಂತೆ ಒಟ್ಟುಗೂಡಿಸುವುದು. ಜಗದೀಶ್ವರನೊಬ್ಬನೇ, ಸೂರ್ಯನೇ ಆತನ ಪ್ರತ್ಯಕ್ಷರೂಪ, ಮರ್ತ್ಯಲೋಕದಲ್ಲಿ ರಾಜನೇ ಪ್ರತಿನಿಧಿ ಎಂಬ ಅಂಶಗಳು ಆ ಮತದ ಮುಖ್ಯಾಂಶಗಳು. ಆದರೆ ಇಷ್ಟು ದೂರಾಲೋಚನೆಯು ಆ ಕಾಲಕ್ಕೆ ಮೀರಿತ್ತು. ಹಲಕೆಲವರು ಮಾತ್ರ ಹೊಸ ಮತವನ್ನೊಪ್ಪಿದರು. ಅಕ್ಬರನ ತರುವಾಯ ಅದರ ಸುಳಿವೇ ಇಲ್ಲದಾಯಿತು. ಅರವತ್ತಮೂರನೇ ವಯಸ್ಸಿನಲ್ಲಿ ಅಕ್ಬರನು ೧೬೦೫ ರಲ್ಲಿ ಇಹಲೋಕವನ್ನು ಬಿಟ್ಟನು.

ಮುಖ್ಯಪ್ರಶ್ನೆ ೫೯: ಅಕ್ಬರನು ನೆರವೇರಿಸಿದ್ದ ಮಹತ್ಕಾರ್ಯವು ಕೆಟ್ಟುಹೋದುದು ಹೇಗೆ?

ಅಕ್ಬರನು ಹಿಡಿದ ನೀತಿಯನ್ನೇ ಆತನ ಉತ್ತರಾಧಿಕಾರಿಗಳೂ ಅವಲಂಬಿಸಿದ್ದ ಪಕ್ಷದಲ್ಲಿ ಹಿಂದುಸ್ತಾನದಲ್ಲಿ ಐಕಮತ್ಯ ಭದ್ರವಾಗಿ ನೆಲೆಸಿ ಇಂದಿಗೂ ಮುಘಲ್ ಬಾದಶಾಹಿ ನಡೆಯುತ್ತಿರಬಹುದಾಗಿತ್ತು. ಆದರೆ ಅಕ್ಬರನ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಬೇರೆ ದಾರಿಯನ್ನು ಹಿಡಿದು ನೂರು ವರ್ಷ ಕಳೆಯುವಷ್ಟರಲ್ಲಿ ಆತನ ಘನಕಾರ್ಯವನ್ನು ಕೆಡಿಸಿದರು.

ಅಕ್ಬರ್ ಕಷ್ಟದಲ್ಲಿ ಬೆಳೆದವನು. **ಜಹಾಂಗೀರ್** ಬಿರುದಿನಿಂದ ಪಟ್ಟವನ್ನೇರಿ ಕೊಂಡ ಆತನ ಮಗ ಸಲೀಮನಾದರೋ ಚಿಕ್ಕಂದಿನಿಂದಲೂ ಅರಮನೆಯ ಭೋಗಭಾಗ್ಯಗಳ ರುಚಿಯನ್ನು ಸವಿದು ಎಲ್ಲೆ ಕಾಣದ ಅಧಿಕಾರವನ್ನು ಅನುಭವಿ ಸುತ್ತ ಬೆಳೆದವನು. ಜಹಾಂಗೀರ್ ಆಳಿದ ೨೨ ವರ್ಷ ಕಾಲದಲ್ಲಿ ಸಾಮ್ರಾಜ್ಯ ಕ್ಷೀಣಿಸಲಿಲ್ಲ; ಆದರೆ ಜಹಾಂಗೀರನು ತನ್ನ ಲೋಲುಪ್ತಿ ತೊರೆದು ಘನ ಕಾರ್ಯವಾವುದನ್ನೂ ಕೈಗೊಳ್ಳದಾದನು. ಪ್ರಸಿದ್ಧ ಸಮ್ರಾಜ್ಞಿ **ನೂರ್‌ಜಹಾನ್** ಬೇಗಮಳೇ ವಾಸ್ತವವಾಗಿ ಆಡಳಿತವನ್ನು ನಡೆಸುತ್ತಿದ್ದವಳು. ಆಕೆ ತನ್ನ ಬಂಧುವರ್ಗದವರಿಗೆ ಭಾರಿ ಹುದ್ದೆಗಳನ್ನು ಕೊಡಿಸುತ್ತಿದ್ದಳು. ಆ ಆಳಿಕೆ ಯಲ್ಲಿಯೇ ೧೬೦೮ ಮತ್ತು ೧೬೧೫ ರಲ್ಲಿ ಎರಡುಸಲ ಇಂಗ್ಲಂಡ್ ದೊರೆಯ ಕಡೆಯಿಂದ ದೂತರು ಕಾಣಿಸಿಕೊಂಡು ಈಸ್ಟಿಂಡಿಯ ಕಂಪನಿಯ ವರ್ತಕರಿಗೆ ವ್ಯಾಪಾರನಡೆಸುವುದಕ್ಕೂ ತೀರಪ್ರದೇಶದಲ್ಲಿ ಮಳಿಗೆಗಳನ್ನು ಕಟ್ಟಿಕೊಳ್ಳು ವುದಕ್ಕೂ ಜಹಾಂಗೀರನ ಅನುಮತಿಯನ್ನು ಬೇಡಿದರು. ಇಂಗ್ಲಿಷ್ ರಾಯ ಭಾರಿ **ಸರ್ ಥಾಮಸ್ ರೋ** ಜಹಾಂಗೀರನನ್ನು ಆಜ್ಮೀರಿನಲ್ಲಿ ಕಂಡು ಪಾದ ಶಾಹನೊಂದಿಗೆ ಆಗ್ರಾಕ್ಕೂ ಪ್ರಯಾಣವಾಡಿ ಈ ದೇಶದಲ್ಲಿಯೇ ಕೆಲವು ವರ್ಷಗಳನ್ನು ಕಳೆದನು. ಬರಿಗೈಯಿಂದಲೇ ರೋ ಹಿಂತಿರುಗಬೇಕಾಯಿತು. ಏಕೆಂದರೆ ಜಹಾಂಗೀರನು ಇಂಗ್ಲಂಡಿನ ದೊರೆ ಹಿರೇಜೇಮ್ಸನ ಪ್ರಾರ್ಥನೆ ಗೊಪ್ಪಲಿಲ್ಲ. ಆದರೆ ಪೋರ್ಚುಗೀಸರು, ಇಂಗ್ಲಿಷರು, ಡಚ್ಚರು, ಫ್ರೆಂಚರು ಮುಂತಾದ ಐರೋಪ್ಯರು ವ್ಯಾಪಾರಕ್ಕಾಗಿ ಈ ದೇಶಕ್ಕೆ ಹೊರಡುವುದು ನಿಲ್ಲಲಿಲ್ಲ. ಅವರಿಗೆ ಬೇಕಾದಸಾಮಗ್ರಿ ವಾಸನಾದ್ರವ್ಯಗಳು, ಹಸನಾದ ರೇಷ್ಮೆ, ಹತ್ತಿಬಟ್ಟೆ, ಮುತ್ತುಗಳು. ಆ ಸಂದರ್ಭದಲ್ಲಿಯೇ ದಪ್ಪವಾದ ಹತ್ತಿಬಟ್ಟೆಗೆ **ಕ್ಯಾಲಿಕೊ** ಎಂಬ ಹೆಸರು ಕ್ಯಾಲಿಕಟ್ ಅಥವಾ ಕೋಳಿಕೋಡಿನಿಂದಲೂ, ಹಸನಾದ ಹತ್ತಿಬಟ್ಟೆಗೆ **ಮಸ್ಲಿನ್** ಎಂಬ ಹೆಸರು ಪ್ರಾಯಶಃ ಮಸೂಲಾ ಅಥವಾ ಮಚಲಿಪಟ್ಟಣದಿಂದಲೂ ಬಳಕೆಗೆ ಬಂದಿರಬಹುದು. ಕೇವಲ ವ್ಯಾಪಾರಕ್ಕಾಗಿ ಬಂದ ಆ ಜನರು ಕಾಲಕ್ರಮದಲ್ಲಿ ದೇಶವನ್ನು ತಮ್ಮ ಸ್ವಾಧೀನಕ್ಕೆ ಹೇಗೆ ತಂದುಕೊಂಡರೆಂಬುದನ್ನು ಮುಂದೆ ಕಾಣುವೆವು.

ಜಹಾಂಗೀರನ ಮಗ **ಶಾಹಜಹಾನ್.** ದಿಲ್ಲಿಯಲ್ಲಿ ಅಮೃತಶಿಲೆಯಿಂದ ದಿವ್ಯ ವಾದ ಅರಮನೆಗಳನ್ನೂ ತನ್ನ ಪ್ರಿಯಪತ್ನಿ ಮುಮ್ತಾಜ್‌ಮಹಲ್ ಬೇಗಮಳ ಸ್ಮಾರಕಕ್ಕಾಗಿ ಆಗ್ರಾ ನಗರದಲ್ಲಿ ಜಗನ್ಮೋಹಕವಾದ ತಾಜ್‌ಮಹಲ್ ಗೋರಿಯನ್ನೂ ಮುಘಲ ಶೈಲಿಯಲ್ಲಿ ಕಟ್ಟಿಸಿ ವಿಖ್ಯಾತನಾದವನು. ಆದರೆ ಆ ಪಾದಶಾಹನು ಸ್ವಂತಕ್ಕಾಗಿಯೂ ಆಸ್ಥಾನವೈಭವಕ್ಕಾಗಿಯೂ ನಡೆಸಿದ


ವೆಚ್ಚವು ಆಡಳಿತದಲ್ಲಿ ಭಾರವಾಗಿ ಪರಿಣಮಿಸಿತು. ಆತನು ಜೀವಂತನಾಗಿರುವಾಗಲೇ ಆತನ ಮಕ್ಕಳು ಪಟ್ಟಕ್ಕಾಗಿ ಒಬ್ಬರೊಡನೊಬ್ಬರು ಜಗಳವಾಡಿ ಯುದ್ಧಕ್ಕೆ ನಿಂತರು. ಮೂರನೆ ಮಗ ಔರಂಗಜೇಬನು ಜಯಶೀಲನಾಗಿ ೧೬೫೮ರಲ್ಲಿ ಪಾದಶಾಹಪದವಿಯನ್ನು ದಕ್ಕಿಸಿಕೊಂಡನು.

ಮುಖ್ಯಪ್ರಶ್ನೆ ೬೦ : ಹಿಂದುಗಳಲ್ಲಿ ಐಕಮತ್ಯವೇರ್ಪಡಿಸುವುದರಲ್ಲಿ ಶಿವಾಜಿ ಕೃತಕೃತ್ಯನಾದುದು ಹೇಗೆ?

ಕಠೋರಶಾಸನಕ್ಕೆ ಸಿಕ್ಕಿದ ಜನರು ಒಟ್ಟುಗೂಡಿ ತಮಗೆ ಅನಿಷ್ಟರಾದವರನ್ನು ಅಡಗಿಸುವ ಬಲವನ್ನು ಸಂಪಾದಿಸಿಕೊಂಡ ವಿವರವನ್ನಾಗಲೇ ನಾವು ಕಂಡೆವು. ದಬ್ಬಾಳಿಕೆಗೊಳಗಾದ ಜನರೊಟ್ಟುಗೂಡಿ ಉದ್ಯಮಿಸಲು ದಬ್ಬಾಳಿಕೆಯೇ ಕಾರಣ; ಐಕಮತ್ಯದ ಬಲವನ್ನು ಹೆಚ್ಚಿಸಿ ಪೋಷಿಸುವುದು ದಬ್ಬಾಳಿಕೆಯೇ. ಹಿಂದುಸ್ತಾನದಲ್ಲಿ ಅದೇ ನಡೆಯಿತು. ಆದರೆ ಹಿಂದುಸ್ತಾನವು ಅತಿ ವಿಶಾಲವಾದ ದೇಶ; ಆ ದೇಶದ ಬೇರೆ ಬೇರೆ ಭಾಗಗಳ ಜನರಲ್ಲಿ ಭೇದಗಳು ಸಹಜ. ಆದುದರಿಂದ ದೇಶದ ಜನರೆಲ್ಲರೂ ಒಂದುಗೂಡುವುದು ಸುಲಭವಾಗಿ ನೆರವೇರಲಿಲ್ಲ. ಬೇರೆ ಬೇರೆ ಪ್ರಾಂತಗಳಲ್ಲಿದ್ದ ಜನರು ಬೇರೆಯಾಗಿಯೇ ಒಟ್ಟುಗೂಡಿದರು. ಪಂಜಾಬ್ ಪ್ರಾಂತದಲ್ಲಿ 'ಸಿಖ್' ಮತವೆಂಬುದು ರೂಪಗೊಂಡಿತ್ತು. ಆ ಮತಸ್ಥರು ಮುಸಲ್ಮಾನರನ್ನು ವಿರೋಧಿಸಿ ಯುದ್ಧ ನಡೆಸುವುದಕ್ಕೂ ಸಿದ್ಧರಾದರು. ಆಗ ಪಡುವಲ ಬೆಟ್ಟಗುಡ್ಡಗಳ ಪ್ರಾಂತದ ಮರಾಟಿಯವರಲ್ಲಿ ರಾಷ್ಟ್ರೋದ್ಧಾರಕನಾದ ನಾಯಕನು ಜನಿಸಿದನು. ಆತನು ದಖನ್ನಿನ ಹಿಂದುಜನರು ಕೆಲಕಾಲ ಒಂದು ಜನಾಂಗವಾಗಿರುವಂತೆ ಮಾಡಿದನು. ಆ ನಾಯಕನೇ **ಶಿವಾಜಿ.**

೧೬೨೭ರಲ್ಲಿ ಶಿವಾಜಿ ಹುಟ್ಟಿದ್ದು. ತಂದೆ ಶಾಹಜಿ ಭೋನ್ಸ್ಲೆ ಬಿಜಾಪುರದ ಸುಲ್ತಾನನಲ್ಲಿ ದಳಪತಿಯಾಗಿದ್ದನು. ಜನರನ್ನು ತನ್ನ ಬಳಿಗೆ ಸೆಳೆದುಕೊಂಡು ಅವರ ಸಹಾಯದಿಂದ ಕರ್ತವ್ಯವನ್ನು ನಿರ್ವಹಿಸುವ ಯೋಗ್ಯತೆ ಶಿವಾಜಿಯಲ್ಲಿ ಅದ್ಭುತವಾಗಿತ್ತು. ಇಪ್ಪತ್ತೈದು ವರ್ಷ ತುಂಬುವಷ್ಟರಲ್ಲಿ ಅಮಿತವಾದ ಭಕ್ತಿಯಿಂದ ಆತನನ್ನು ಸೇರಿಕೊಂಡು ಎಷ್ಟು ಅಸಾಧ್ಯವಾದ ಕೆಲಸವನ್ನಾದರೂ ಆತನಿಗಾಗಿ ಕೈಕೊಂಡು ಸಾಹಸದಿಂದ ಸಾಧಿಸಬಲ್ಲ ತರುಣರ ತಂಡ ಸಿದ್ಧವಾಗಿತ್ತು. ಅವರ ಸಹಾಯದಿಂದ ಶಿವಾಜಿ ಪಶ್ಚಿಮಘಟ್ಟಗಳ ಪ್ರದೇಶದಲ್ಲಿ ಮುಸಲ್ಮಾನರ ವಶದಲ್ಲಿದ್ದ ಕೋಟೆಗಳನ್ನು ಹಿಡಿದನು. ಬಿಜಾಪುರದ ಸುಲ್ತಾನನು ಕೋಪಗೊಂಡು ಕಳುಹಿಸಿದ ಸೈನ್ಯವನ್ನು ೧೬೫೯ರಲ್ಲಿ

ಶಿವಾಜಿ ಸೋಲಿಸಿದನು. ಪುಣೆಯ ಸುತ್ತಮುತ್ತ ಮಹಾರಾಷ್ಟ್ರವೆಂದು ಹೆಸರಾಗಿರುವ ಪ್ರದೇಶವನ್ನು ಈ ರೀತಿಯಾಗಿ ವಶಪಡಿಸಿಕೊಂಡು ಶಿವಾಜಿ ಜನರ ವಿಶ್ವಾಸಕ್ಕೆ ಪಾತ್ರನಾಗಿ ದಿನೇ ದಿನೇ ಪ್ರಬಲನಾದನು. ಇದನ್ನು ಕೇಳಿದ ಔರಂಗಜ್ಹೇಬ್ ಪಾದಶಾಹನು ಯೋಚನೆಗೊಳಗಾಗಿ ೧೬೬೫ರಲ್ಲಿ ತನ್ನ ದಳಪತಿಗಳಲ್ಲಿ ಅತಿದಕ್ಷರೆನಿಸಿದವರನ್ನು ಶಿವಾಜಿಯನ್ನಡಗಿಸಲು ಕಳುಹಿಸಿದನು. ಆ ದಳಪತಿಗಳು ಶಿವಾಜಿಯ ಕೋಟೆಗಳನ್ನೊಂದೊಂದಾಗಿ ಹಿಡಿಯಲುಪಕ್ರಮಿಸಿದರು. ಅನುಭವಶಾಲಿಗಳಿಂದ ತುಂಬಿ ಅಪಾರವಾಗಿ ಕಾಣುತ್ತಿದ್ದ ಮುಘಲ ಸೈನ್ಯಗಳೆದುರಿಗೆ ಮಿತಸಂಖ್ಯೆಯವರೂ ಮಿತಾನುಭವಿಗಳೂ ಕೂಡಿದ್ದ ಮಹಾರಾಷ್ಟ್ರ ಸೈನ್ಯವೆಷ್ಟು ಮಾತ್ರ! ಆ ಸಮಯದಲ್ಲಿ ಶಿವಾಜಿ ಅಧೀನತೆಯನ್ನು ವಹಿಸಿಕೊಂಡು ವರ್ತಿಸುವುದೇ ಜಾಣ್ಮೆಯೆಂದು ನಿಶ್ಚಯಿಸಿದನು. ತನ್ನ ಕೋಟೆಗಳಲ್ಲಿ ಬಹುಭಾಗವನ್ನು ಬಿಟ್ಟುಕೊಟ್ಟು ಪಾದಶಾಹನ ಸಾಮಂತನಾಗಿ ಉಳಿದ ಕೋಟೆಗಳನ್ನಿಟ್ಟುಕೊಂಡಿರುವುದಾಗಿ ಗೊತ್ತುಮಾಡಿದನು. ೧೬೬೬ರಲ್ಲಿ ಆಗ್ರಾನಗರಕ್ಕೆ ಶಿವಾಜಿಯನ್ನು ಗೌರವದಿಂದ ಬರಮಾಡಿಕೊಂಡ ಔರಂಗಜ್ಹೇಬನು ಕಡೆಗೆ ಆತನನ್ನು ಸೆರೆಯಲ್ಲಿಟ್ಟನು. ಪಾದಶಾಹನ ಕೃತ್ರಿಮಕ್ಕೆ ಮೀರಿದ ಚಾತುರ್ಯವನ್ನು ತೋರಿಸಿ ಶಿವಾಜಿಯು ತನ್ನ ಹಿರೇಮಗನೊಡನೆ ಮಿಠಾಯಿ ಬುಟ್ಟಿಗಳಲ್ಲಿ ಕುಳಿತು ಬಂಧನದಿಂದ ತಪ್ಪಿಸಿಕೊಂಡನು. ತರುವಾಯ ತನ್ನ ಮಗನನ್ನು ಮಥುರಾಪಟ್ಟಣದಲ್ಲಿ ಆಪ್ತರ ಬಳಿಯಲ್ಲಿಟ್ಟು ತಾನು ಬೈರಾಗಿಯ ವೇಷಧರಿಸಿ ಕಾಶಿ, ಗಯಾ, ಜಗನ್ನಾಥಕ್ಷೇತ್ರಗಳ ಯಾತ್ರೆಮಾಡಿ ಕಡೆಗೆ ರಾಯಘಡಕ್ಕೆ ಹಿಂತಿರುಗಿದನು. ಕ್ಷೇಮದಿಂದ ಹಿಂತಿರುಗಿದ ತಮ್ಮ ಪ್ರಭುವನ್ನು ಕಂಡು ಅಲ್ಲಿಯ ಜನರು ಆನಂದದಲ್ಲಿ ಮೈಮರೆತರು. ಅನಂತರ ಪಟ್ಟಾಭಿಷಿಕ್ತನಾದ ಶಿವಾಜಿ ಅತಿ ಪ್ರಬಲನಾದನು. ದಖನ್ನಿನ ಪಶ್ಚಿಮಾರ್ಧವೆಲ್ಲವನ್ನೂ ವಶಪಡಿಸಿಕೊಂಡುದಲ್ಲದೆ ಗೋಲಕೊಂಡೆಯ ಸುಲ್ತಾನನ ಮೈತ್ರಿಕಟ್ಟಿ ಕಾವೇರಿನದಿಯ ಬಯಲನ್ನೂ ಆಕ್ರಮಿಸಬಲ್ಲವನಾದನು. ಗೋಬ್ರಾಹ್ಮಣ ರಕ್ಷಕನೆನಿಸಿದ ಆತನ ಪಟ್ಟಾಭಿಷೇಕವು ೧೬೭೪ರಲ್ಲಿ ರಾಜಧಾನಿ ರಾಯಘಡದಲ್ಲಿ ನಡೆಯಿತು. ಆರು ವರ್ಷ ತರುವಾಯ ೧೬೮೦ರಲ್ಲಿ ಶಿವಾಜಿ ಕೀರ್ತಿಶೇಷನಾದನು.


ಶಿವಾಜಿ

ಅಕ್ಬರನಲ್ಲಿದ್ದ ಗುಣಗಳು ಶಿವಾಜಿಯಲ್ಲಿಯೂ ಇದ್ದುವು. ಆ ಗುಣಗಳ ಮಹಿಮೆಯಿಂದಲೇ ಅವರಿಗೆ ಜಯಸಿದ್ಧಿಯಾದುದು. ಕೆಲಸಕ್ಕೆ ತಕ್ಕ ಯೋಗ್ಯತೆಯುಳ್ಳವರನ್ನು ಆರಿಸಿ ನಿಯೋಗಿಸುವ ಚಾತುರ್ಯವು ಇಬ್ಬರಲ್ಲಿಯೂ ಇತ್ತು. ತನ್ನ ಬಳಿಗೆ ಬಂದವರಲ್ಲಿ ಶ್ರದ್ಧಾಭಕ್ತಿಗಳನ್ನುಂಟುಮಾಡುವ ಆಕರ್ಷಕ ಸ್ವಭಾವವು ಶಿವಾಜಿಯದು. ಅನ್ಯಮತಸಹಿಷ್ಣುತೆಯೆಂಬುದು ಆತನಿಗೆ ಧರ್ಮವೆನಿಸಿತ್ತು. ಇಸ್ಲಾಂ ಮತವನ್ನು ಆತನು ವಿರೋಧಿಸಲೇ ಇಲ್ಲ. ರಾಜಕೀಯ ಕಾರಣದಿಂದಲೇ ಆತನು ಔರಂಗಜೇಬನನ್ನು ವಿರೋಧಿಸಿದ್ದು. ನಿರಂತರವಾಗಿ ನಡೆಸಿದ ಯುದ್ಧಗಳಲ್ಲಿ ಕೃಷೀವಲರಿಗೆ ತೊಂದರೆಯಾಗದಂತೆ ಎಚ್ಚರದಿಂದಿದ್ದು ಅವರಲ್ಲಿ ಕರುಣೆಯನ್ನು ತೋರುತ್ತಿದ್ದನು. ಪ್ರಭುಪದವಿಯು ದೊರೆತ ಬಳಿಕ ಆತನ ನ್ಯಾಯನಿಷ್ಠೆಯನ್ನೂ, ದಯಾದಾಕ್ಷಿಣ್ಯಗಳನ್ನೂ ನೋಡಿ ಜನರು ಆತನನ್ನು ವಿಶೇಷವಾಗಿ ಪ್ರೀತಿಸಿದರು. ಸೇನೆಯನ್ನು ನಿತ್ಯಾಡಳಿತದಿಂದ ಬೇರೆಯಾಗಿಯೇ ಇಟ್ಟನು. ಅಷ್ಟಪ್ರಧಾನರೆಂಬ ಮಂತ್ರಿಕೂಟವನ್ನು ಆಲೋಚನೆಗಾಗಿ ಸ್ಥಾಪಿಸಿಕೊಂಡಿದ್ದನು. ಆ ಎಂಟು ಜನರಲ್ಲಿ ಮುಖ್ಯನಾದಾತನು ಪೇಶ್ವೆ.

ಮುಖ್ಯಪ್ರಶ್ನೆ ೬೧ : ಔರಂಗಜೇಬನ ಘನತೆಯೇನು? ಆತನ ಸಾಮ್ರಾಜ್ಯವು ಛಿದ್ರಛಿದ್ರವೇಕಾಯಿತು?

ಶಿವಾಜಿ ತೀರಿಕೊಂಡ ಕೂಡಲೇ ಔರಂಗಜೇಬನು ಸಮಸ್ತಸೈನ್ಯವನ್ನೂ ಜಮಾಯಿಸಿಕೊಂಡು ಮಹಾರಾಷ್ಟ್ರವನ್ನು ಆಕ್ರಮಿಸಿದನು. ಶಿವಾಜಿಯ ಬಳಿಕ ಪಟ್ಟಭದ್ರನಾದ ಆತನ ಮಗ **ಶಂಭುಜಿಯು** ಸೆರೆಸಿಕ್ಕಿ ವಧೆಯಾದನು. ಬಿಜಾಪುರ ಗೋಲಕೊಂಡೆಗಳನ್ನೊಳಗೊಂಡ ಸಮಸ್ತ ಪ್ರದೇಶವೂ ಮುಘಲರ ವಶವಾಯಿತು. ೧೭೦೭ರಲ್ಲಿ ಔರಂಗಜೇಬನು ಮೃತಪಟ್ಟಾಗ ಉತ್ತರಹಿಂದುಸ್ಥಾನವಲ್ಲದೆ ದಖನ್ ಪ್ರಸ್ಥಭೂಮಿಯೂ ಆತನ ಅಧಿಕಾರಕ್ಕೊಳಗಾದಂತೆ ಕಂಡಿತು. ಆದರೆ ಮರಾಟೆಯವರೆಂದಿಗೂ ವಾಸ್ತವವಾಗಿ ಶರಣೆಂದಿರಲಿಲ್ಲ. ಸುವ್ಯವಸ್ಥಿತವಾದ ರೀತಿಯ ಯುದ್ಧವನ್ನು ನಡೆಸುವಷ್ಟು ಬಲವು ಅವರಲ್ಲಿರಲಿಲ್ಲ. ಆದರೆ ಅಪರಿಮಿತಬಲಶಾಲಿಯಾದ ಶತ್ರುವಿಗೆ ವಶರಾಗದೆ ಬೆಟ್ಟಗುಡ್ಡಗಳಲ್ಲಿಯೂ ಕಾಡುಮೇಡುಗಳಲ್ಲಿಯೂ ಅಡಗಿದ್ದು ತಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಶಕ್ತಿಯು ಅವರಲ್ಲಿತ್ತು. ನೂರು ವರ್ಷಗಳ ಹಿಂದೆ ಯೂರೋಪಿನಲ್ಲಿ ಡಚ್ಚರು ಜಲಮಧ್ಯಗ್ರಾಮಗಳಲ್ಲಿ ಅಡಗಿದ್ದು ಸ್ಪಾನಿಷರೆದುರಿನಲ್ಲಿ ಹೋರಾಡುತ್ತ ಇದೇ ರೀತಿಯಲ್ಲಿ ಸ್ಥೈರ್ಯಸಾಹಸಗಳಿಂದ ವರ್ತಿಸಿದ್ದರು.

ಡಚ್ಚರನ್ನು ಬಲವಂತದಿಂದ ತನ್ನ ಮತಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸಿದ ಸ್ಪೆಯ್ನ್ ದೊರೆ ಫಿಲಿಪ್ಪನಂತೆ ಔರಂಗಜ್ಞೇಬನೂ ತನ್ನ ಮತದಲ್ಲಿ ಅತಿನಿಷ್ಠೆಯುಳ್ಳವನು. ಆದರೆ ಫಿಲಿಪ್ಪನಿಗಿಂತ ಔರಂಗಜ್ಞೇಬ್ ಎಷ್ಟೋ ದೊಡ್ಡವನು. ಸುಖವನ್ನೂ ಭೋಗವನ್ನೂ ದೂರದಲ್ಲಿಟ್ಟ ಜೀವನ; ಸರ್ವಕಾಲವೂ ಆಡಳಿತದ ಕೆಲಸಕ್ಕಾಗಿ ವಿನಿಯುಕ್ತ; ಸಮರ್ಥನಾದ ದಳಪತಿ ಬೇರೆ. ಆದರೆ ಮಂತ್ರಿ ಸಾಮಾಜಿಕರ ವಿಶ್ವಾಸವನ್ನು ಔರಂಗಜ್ಞೇಬ್ ಸಂಪಾದಿಸಲಾರದವನು. ಅವರನ್ನು ತಾನು ನಂಬಿದ್ದರಲ್ಲವೆ ಅವರು ಪ್ರತಿಯಾಗಿ ನಂಬಬೇಕು! ವಿಶ್ವಾಸದಿಂದ ವಿಶ್ವಾಸವು ಬೆಳೆಯಬೇಕು. ಔರಂಗಜ್ಞೇಬನಲ್ಲಿ ವಿಶ್ವಾಸವಿರಲಿಲ್ಲ. ಆತನು ತೀರಿಕೊಂಡ ಐದುವರ್ಷ ಮಾತ್ರದಲ್ಲಿ ಮುಘಲ್ ಸಾಮ್ರಾಜ್ಯದ ಬಹುಭಾಗಗಳಲ್ಲಿ ದಂಗೆಗಳೆದ್ದವು. ಮರಾಟೆಯವರು ಬಲಿಷ್ಠರಾದರು. ಆದರೆ ಸಾಮಾನು ಸರಂಜಾಮುಗಳನ್ನು ಬೇಕಾದಂತೆ ಪಡೆದ ಭಾರಿಭಾರಿ ಮುಘಲಸೈನ್ಯಗಳೊಂದಿಗೆ ಸಂಕುಲಯುದ್ಧದಲ್ಲಿ ಸಿಕ್ಕಿ ಪರಾಭವಗೊಳ್ಳುವುದನ್ನು ಅವರು ವಿವೇಕದಿಂದ ತಪ್ಪಿಸಿಕೊಂಡರು. **ಸಿಂಧೆ, ಹೋಲ್ಕರ್, ಗಾಯಕವಾಡ, ಪವಾರ್, ಭೋನ್ಸ್ಲೆ**ಗಳೆಂಬ ಮಹಾರಾಷ್ಟ್ರನಾಯಕರು ಪ್ರತ್ಯೇಕರಾಗಿದ್ದು ಬೇರೆಬೇರೆ ಭಾಗಗಳಲ್ಲಿ ಮುಘಲರನ್ನು ಆಕ್ರಮಿಸಿದರು. ಪರಿಣಾಮವಾಗಿ ಮಹಾರಾಷ್ಟ್ರ ಗುಜರಾಥ ಮಾಳವಗಳಲ್ಲಿ ಈಗಲೂ ಇರುವ ಮರಾಟೆ ರಾಜ್ಯಗಳು ಹುಟ್ಟಿ ಬಲಗೊಂಡವು.

ಹಿಂದುಸ್ಥಾನದವರು ಒಗ್ಗಟ್ಟುಳ್ಳ ಜನಾಂಗವಾಗಲು ಅಕ್ಬರನ ಅಥವಾ ಶಿವಾಜಿಯ ನೀತಿಯೇ ಯುಕ್ತವೆನ್ನುವುದಕ್ಕೆ ಪ್ರಮಾಣವು ಬೇಕಾದರೆ ಔರಂಗಜ್ಞೇಬನ ವೃತ್ತಾಂತದಲ್ಲಿ ಕಾಣಬಹುದು. ಔರಂಗಜ್ಞೇಬ್ ಅನುಸರಿಸಿದ ನೀತಿಯ ಪರಿಣಾಮವಾಗಿ ಆತನು ಸತ್ತ ಐವತ್ತು ವರ್ಷಗಳೊಳಗಾಗಿಯೇ ಮುಘಲ್ ಬಾದಶಾಹಿಯೆಂಬ ವಿಸ್ತಾರಸಾಮ್ರಾಜ್ಯ ಮಾಯವಾಯಿತು. ದಿಲ್ಲಿಯ ಪ್ರಾಂತವು ಮಾತ್ರ ಆತನ ವಂಶಸ್ಥರಿಗೆ ಉಳಿಯಿತು. ಭೂಮಿಗಿಳಿದು ಹೋದಂತೆ ಒಂದು ಸಮಯದಲ್ಲಿ ಕಂಡ ಮರಾಟೆಯವರು ಪಡುವಲಲ್ಲಿಯೂ ಮಧ್ಯಭಾಗದಲ್ಲಿಯೂ ತಮ್ಮ ಬಲವನ್ನು ಪುನಃ ಸ್ಥಾಪಿಸಿಕೊಂಡರು. ಶಿವಾಜಿಯ ತರುವಾಯ ಆಳಿದವರಿಗೆ ಮುಖ್ಯಮಂತ್ರಿಯಾಗಿದ್ದ ಪೇಶ್ವೆಯನ್ನು ಮಹಾರಾಷ್ಟ್ರ ಪ್ರಮುಖರೆಲ್ಲರೂ ನಾಯಕನೆಂದು ಸ್ವೀಕರಿಸಿದರು. ಎರಡನೆ ಮೂರನೆ ಪೇಶ್ವೆಯರಾಗಿ ದೊಡ್ಡವರೆನಿಸಿದ **ಹಿರೇಬಾಜಿರಾವ್** ಮತ್ತು **ಬಾಲಾಜಿ ಬಾಜಿರಾವ್** ಎಂಬಿಬ್ಬರ ಆಶ್ರಯದಲ್ಲಿ ಮರಾಟೆಯವರೆಲ್ಲರೂ ಒಟ್ಟುಗೂಡಿದರು. ದೇಶವನ್ನು ಮುತ್ತಿ ಬಂದಿದ್ದ **ಅಹ್ಮದ್‌ಶಾಹ ಅಬ್ದಾಲಿ**ಯೊಡನೆ ನಡೆಸಿದ ಮೂರನೆ ಪಾಣಿಪಟದ ಕಾಳಗದಲ್ಲಿ ದಳಪತಿಯ ಅವಿವೇಕದಿಂದ ಮರಾಟೆ

ಯವರಿಗೆ ಸರ್ವನಾಶವಾದಂತಹ ಸೋಲು ಸಂಭವಿಸಿದಾಗ್ಗೂ ಅವರ ಧೈರ್ಯ ಸಾಹಸಗಳು ಕುಗ್ಗಲಿಲ್ಲ. ಬಾಲಾಜಿಬಾಜಿರಾಯನ ಮಗ **ಹಿರೇ ಮಾಧವರಾಯನ** ಆಳಿಕೆಯಲ್ಲಿ ದಿಲ್ಲಿಯಿಂದ ಹಿಡಿದು ಈಗಿನ ಮದರಾಸಾಧಿಪತ್ಯದ ಎಲ್ಲೆವರೆಗೆ ಹಿಂದುಸ್ತಾನದ ಉತ್ತರಮಧ್ಯಭಾಗಗಳು ಪುನಃ ಮರಾಟೆಯವರ ಆಡಳಿತ ಕ್ಕೊಳಗಾದವು. ತಾನಿಟ್ಟುಕೊಂಡ ಕೆಲಸವನ್ನು ಪೂರ್ತಿಗೊಳಿಸುವ ಮೊದಲೇ ಮಾಧವರಾಯನಿಗೆ ಮೃತ್ಯುವೊದಗಿತು. ಆತನಿಗೆ ಮಕ್ಕಳಿರಲಿಲ್ಲ. ಆದ್ದರಿಂದ ಪೇಶ್ವೆಯ ಪದವಿಗಾಗಿ ಕಕ್ಷಿ ಪ್ರತಿಕಕ್ಷಿಗಳು ಹುಟ್ಟಿಕೊಂಡವು. ಆ ವೇಳೆಗೆ ಫ್ರೆಂಚರನ್ನು ಸೋಲಿಸಿ ತಮ್ಮ ಬಲವನ್ನು ಹೆಚ್ಚಿಸಿಕೊಂಡಿದ್ದ ಬ್ರಿಟಿಷರು ಆ ಜಗಳಗಳಲ್ಲಿ ತಮ್ಮ ಅನುಕೂಲವನ್ನು ಕಂಡರು. ಒಂದು ಕಕ್ಷಿಯನ್ನು ಸೋಲಿಸಿ ಪ್ರತಿಕಕ್ಷಿಯವರಿಗೆ ಸಹಾಯ ಕೊಡಿಸಿಯೋ, ಬೇರೆ ಬೇರೆಯಾಗಿ ಪ್ರಮುಖರೊಂದಿಗೆ ಕರಾರುಗಳನ್ನು ನಡೆಸಿ ಅವರಿಗೂ ಅವರ ವಂಶಸ್ಥರಿಗೂ ಸ್ಥಿರವಾಗಿ ರಾಜ್ಯವನ್ನು ಉಳಿಸಿಕೊಡುವ ಆಸೆಯನ್ನು ಹುಟ್ಟಿಸಿಯೋ ತಮ್ಮ ಮೇಲ್ಮೆಯನ್ನು ಸಾಧಿಸಿಕೊಂಡರು. ಆ ಸಂದರ್ಭದಲ್ಲಿ ಭದ್ರಗೊಂಡ ಗವಾಲೇರ್, ಬರೋಡ, ಇಂದೂರು ಮುಂತಾದ ಮುಖ್ಯ ಮಹಾರಾಷ್ಟ್ರ ಸಂಸ್ಥಾನಗಳು ಇಂದಿಗೂ ಇವೆ. ಆ ಸಂಸ್ಥಾನಗಳಲ್ಲಿ ಹಿಂದುಗಳೂ ಮುಸಲ್ಮಾನರೂ ನೆರೆಹೊರೆಯವರಾಗಿ ಶಾಂತಿಸಮಾಧಾನಗಳಿಂದ ಬಾಳುತ್ತಲಿದ್ದಾರೆ.

ಅಕ್ಬರನ ನೀತಿಯನ್ನೇ ಆತನ ಉತ್ತರಾಧಿಕಾರಿಗಳು ಪಾಲಿಸಿದ್ದ ಪಕ್ಷದಲ್ಲಿ, ಅಥವಾ ಅಕ್ಬರನು ರಾಜಪುತ್ರರ ವಿಶ್ವಾಸವನ್ನು ಸಂಪಾದಿಸಿದಂತೆ ಶಿವಾಜಿಯ ಮೈತ್ರಿಯನ್ನು ಮುಘಲರು ಬೆಳೆಸಿದ್ದ ಪಕ್ಷದಲ್ಲಿ ಈ ದೇಶದ ಚರಿತ್ರೆ ಬೇರೆಯಾಗಬಹುದಾಗಿತ್ತು.

ಅಭ್ಯಾಸಗಳು

೧. ಹಿಂದುಸ್ತಾನವನ್ನು ಗೆಲ್ಲುವುದರಲ್ಲಿಯೂ ಆಳುವುದರಲ್ಲಿಯೂ ಅಕ್ಬರನು ಯಾವ ತೊಂದರೆಗಳನ್ನು ದಾಟಬೇಕಾಯಿತು? ಕಡೆಗೆ ಅಕ್ಬರ್ ಸಾಧಿಸಿದ್ದು ಹೇಗೆ?

೨. ತನ್ನ ಕಾಲಕ್ಕೆ ಮೀರಿದವನು ಅಕ್ಬರ್ ಎನ್ನಬಹುದಾದುದು ಯಾವ ಅಂಶಗಳಲ್ಲಿ? ಅದರ ಪರಿಣಾಮವೇನಾಯಿತು?

೩. ಜಹಾಂಗೀರ್ ಶಾಹಜಹಾನ್ ಪಾದಶಾಹರ ಕಾಲದಲ್ಲಿ ನಡೆದ ಮುಖ್ಯ ಸಂಗತಿಗಳಾವುವು? ಮುಂದೆ ನಡೆದ ಕಾಲದಲ್ಲಿ ಮುಖ್ಯವೆನಿಸಿದ ಸಂಗತಿಗಳಾವುವು?

೪. ಔರಂಗಜೇಬ್ ಮತ್ತು ಶಿವಾಜಿ ಪರಸ್ಪರ ನಡೆಸಿದ ಹೋರಾಟವನ್ನು ಸಂಕ್ಷೇಪವಾಗಿ ವಿವರಿಸಿ.

೧೭ ನೇ ಅಧ್ಯಾಯ

ದರ್ಪಿಷ್ಠ ದೊರೆಗಳು

ಮುಖ್ಯಪ್ರಶ್ನೆ ೬೨; ಫ್ರಾನ್ಸ್ ರಾಜ್ಯದಲ್ಲಿ ಮಹಾವೈಭವಶಾಲಿಯೆನಿಸಿದ ದೊರೆ ಸಾಧಿಸಿದುದೇನು?

ಪಾಳೆಯಗಾರರಂತಿದ್ದ ಸಾಮಂತರು ದುರ್ಬಲರಾದ ಸಂದರ್ಭದಲ್ಲಿ ಯೂರೋಪಿನ ದೇಶಗಳಲ್ಲಿ ಪ್ರತ್ಯೇಕವಾದ ರಾಜ್ಯಗಳು ಹುಟ್ಟಿದ ಸಂಗತಿಯನ್ನು ಹಿಂದೆಯೇ ಕಂಡೆವು. ಪ್ರತಿರಾಜ್ಯದಲ್ಲಿಯೂ ರಾಜನು ಸರ್ವಸ್ವಾಮ್ಯವನ್ನು ಸಂಪಾದಿಸಿಕೊಂಡ ತರುವಾಯ ಪಡುವಲ ರಾಜ್ಯಗಳ ದೊರೆಗಳು ಪರಸ್ಪರವಾಗಿ ಸ್ಪರ್ಧಿಸಿದರಷ್ಟೆ. ಸರ್ವಾಧಿಕಾರವನ್ನನುಭವಿಸುತ್ತಿದ್ದ ಆ ರಾಜರು ಕ್ರಮೇಣ ತಮ್ಮ ಅಧಿಕಾರವು ದೈವದತ್ತವಾದುದೆಂದೂ ಯಾವ ಅಡ್ಡಿಯೂ ಇಲ್ಲದೆ ತಾವು ಸ್ವಚ್ಛಂದಗಾಮಿಗಳಾಗಿರತಕ್ಕವರೆಂದೂ ಸಾಧಿಸಿದ ಅಂಶವನ್ನು ಮುಂದೆ ಕಾಣಬೇಕು. ರಾಜಪುರುಷರು ನಡೆಸಿದ ಆ ಪ್ರಯತ್ನದ ಫಲಿತಾಂಶವಾಗಿ ದೇಶಗಳಲ್ಲಿ ಹೊಸಬಗೆಯ ರಾಷ್ಟ್ರರೂಪಗಳು ಹುಟ್ಟಿಕೊಂಡವು.

ಫ್ರಾನ್ಸಿನ ದೊರೆಗಳಲ್ಲಿ ಮಹಾವೈಭವಶಾಲಿಯೆನಿಸಿಕೊಂಡ (Louis le Grand) ೧೪ ನೇ **ಲೂಯಿ** ನಾವು ಹಿಂದೆ ತಿಳಿದ ನಾಲ್ಕನೇ ಹೆನ್ರಿಯ ಮೊಮ್ಮಗ. ಲೂಯಿಯು ೧೬೪೩ ರಲ್ಲಿ ಪಟ್ಟಕ್ಕೆ ಬಂದು ೧೬೬೦ ರಲ್ಲಿ ಅಧಿಕಾರ ವಹಿಸಿ ೧೭೧೫ರವರೆಗೆ ಅತಿದೀರ್ಘಕಾಲ ಆಳಿಕೆ ನಡೆಸಿದನು. ಎಪ್ಪತ್ತೆರಡು ವರ್ಷ ಕಾಲದ ಆಡಳಿತ! ಔರಂಗಸ್ಟೇಬನ ಆಳಿಕೆಗಿಂತ ಆರು ವರ್ಷ ಹೆಚ್ಚು.

ಲೂಯಿ ನೀಚನಲ್ಲ, ಸಮರ್ಥ; ಹಿರಿದಾದ ಉದ್ದೇಶಗಳನ್ನು ಪಟ್ಟವನು. ಪೃಥ್ವಿಗೆಲ್ಲ ಫ್ರಾನ್ಸ್ ದೇಶವೇ ಪ್ರಬಲ ರಾಜ್ಯವೆನಿಸಬೇಕೆಂದೂ, ಫ್ರೆಂಚ್ ಜನಾಂಗವೆಂಬುದು ಎಲ್ಲರ ಶ್ಲಾಘನೆಗೂ ಪಾತ್ರವಾಗಬೇಕೆಂದೂ ಆತನ ಆಸೆ. ಆದರೆ ಫ್ರಾನ್ಸ್ ಎಂದರೆ ಆತನ ಮನಸ್ಸಿನ ಅರ್ಥ ತಾನೂ ತನ್ನ ಆಸ್ಥಾನಿಕರೂ ಎಷ್ಟೋ ಅಷ್ಟೆ. ಸಾಮಾನ್ಯ ಜನರಾಶಿಯ ಎಣಿಕೆಯೇ ಇರಲಿಲ್ಲ. ತಾನೇ ರಾಷ್ಟ್ರಸರ್ವಸ್ವವೆಂದು ಒಮ್ಮೆ ಹೇಳಿಕೊಂಡವನೆಂದು ಆತನು ಪ್ರಸಿದ್ಧ. ಫ್ರಾನ್ಸ್ ರಾಜ್ಯವನ್ನು ಇತರ ಐರೋಪ್ಯರೆಲ್ಲರೂ ಮೆಚ್ಚುವ ಹಾಗೆ ಮಾಡಿಯೇ ಮಾಡಿದನು. ರೈನ್ ನದಿಯಿಂದ ಪಿರನೀಸ್ ಪರ್ವತದವರೆಗೆ ಫ್ರಾನ್ಸ್

ರಾಜ್ಯವಿರಬೇಕೆಂಬುದು ಒಂದು ಉದ್ದೇಶ ಲೂಯಿಗೆ. ಅದ್ವಿತೀಯವಾದ ಐಶ್ವರ್ಯ ಅಟ್ಟಹಾಸಗಳಿಂದ ತನ್ನ ಆಸ್ಥಾನವು ರಂಜಿಸಬೇಕೆಂದು ಇನ್ನೊಂದು ಉದ್ದೇಶ. ಮೊದಲನೆಯ ಆಸೆಗೆ ಭಾರಿಸೈನ್ಯಬೇಕಾಗಿತ್ತು; ಎರಡನೆಯ ಆಸೆಗೆ ಮನಮೋಹಕವಾದ ಅರಮನೆಗಳೂ ಭೋಗಭಾಗ್ಯಗಳೂ ಬೇಕಾಗಿದ್ದುವು. ಎರಡಕ್ಕೂ ಅಪಾರವಾದ ಧನರಾಶಿಯವಶ್ಯಕ. ಅಷ್ಟು ಧನವೆಲ್ಲಿಂದ ಬರಬೇಕು? ಸಾಮಾನ್ಯಜನರ ಮೇಲಿನ ತೆರಿಗೆಯಿಂದ. ಕೃಷಿಗಾರರು ವ್ಯಾಪಾರಿಗಳು ಮುಂತಾದ ಜನಸಾಮಾನ್ಯರು ತನ್ನ ಆಸ್ಥಾನದ ವೆಚ್ಚವನ್ನೊದಗಿಸುತ್ತಲಿರುವುದು ನ್ಯಾಯವೆಂದು ಲೂಯಿಯ ಅಭಿಮತ. ಆದುದರಿಂದ ತೆರಿಗೆ ಸುಂಕಗಳು ಹೆಚ್ಚಿದವು; ಕಡೆಗೆ ಸಾಲವೂ ಏರಿತು.



೧೪ನೇ ಲೂಯಿ

ಲೂಯಿ ಪಟ್ಟಕ್ಕೆ ಬಂದಾಗ ರಾಜ್ಯದ ಶ್ರೀಮಂತರು ಪರಸ್ಪರ ಜಗಳ ಬೆಳೆಸಿಕೊಂಡು ಪಿತೂರಿಗಳನ್ನು ಕಟ್ಟಿ ಅಂತರ್ಯುದ್ಧದಲ್ಲಿ ತೊಡಗಿದ್ದರು. ಕಡೆಗೆ ಆ ಅಂತಃಕಲಹಗಳಲ್ಲಿಯೇ ಶ್ರೀಮಂತರೆಲ್ಲರೂ ದುರ್ಬಲರಾಗಿಹೋದರು. ರಾಜಾಧಿಕಾರಸ್ಥಾಪನೆಗೆ ಅದರಿಂದ ಅನುಕೂಲ. ತನ್ನ ಸ್ವಂತ ಅಧಿಕಾರಕ್ಕೆ ಯಾರ ಆತಂಕವೂ ಇಲ್ಲದಂತಾದ ಕೂಡಲೇ ಲೂಯಿ ತನ್ನ ರಾಜ್ಯದ ಉತ್ತರದಲ್ಲಿ ದಂಡಯಾತ್ರೆ ನಡೆಸಿ ಈಗ ಬೆಲ್ಜಿಯಂ ಎನಿಸಿರುವ ಪ್ರದೇಶವನ್ನು ಮುತ್ತಿದನು. ರ್ಹೈನ್ ನದಿ ತನ್ನ ರಾಜ್ಯಕ್ಕೆ ಎಲ್ಲೆಯಾಗಿರಬೇಕೆಂದು ಲೂಯಿ ಅನೇಕಾನೇಕ ಯುದ್ಧಗಳನ್ನು ನಡೆಸಬೇಕಾಯಿತು. ಏಕಂದರೆ ಹಾಲಂಡ್, ಇಂಗ್ಲಂಡ್, ಆಸ್ಟ್ರಿಯ ಮುಂತಾದ ರಾಷ್ಟ್ರಗಳವರು ಲೂಯಿ ಅತಿಪ್ರಬಲನಾದಾನೆಂದು ಚಿಂತೆಗೂ ಶಂಕೆಗೂ ಒಳಗಾಗಿ ಪುನಃ ಪುನಃ ಲೂಯಿಯನ್ನು ವಿರೋಧಿಸಿದರು. ನೆರೆಹೊರೆಯವರಾಗಿ ಅನೇಕ ರಾಜರಿರುವ ಸನ್ನಿವೇಶದಲ್ಲಿ ಯಾರೊಬ್ಬರೂ ಅತಿಪ್ರಬಲರಾಗದಂತೆ ನೆರವೇರಿಸಿ

ಕೊಳ್ಳುವ ಸಂಧಿವಿಗ್ರಹಲಕ್ಷ್ಯಕ್ಕೆ '**ಅತಿಪ್ರಾಬಲ್ಯ ನಿವಾರಣೆ**' (Balance of Power) ಎಂಬ ಹೆಸರು ಪ್ರಸಿದ್ಧ. ೧೯೧೪ರಲ್ಲಿ ಘಟಿಸಿದ ಘೋರಯುದ್ಧದ ವರೆಗೂ ಈ ಲಕ್ಷ್ಯವನ್ನಿಟ್ಟುಕೊಂಡು ಐರೋಪ್ಯ ರಾಷ್ಟ್ರಗಳು ಕೂಟ ಗಳನ್ನು ಕಟ್ಟಿಕೊಳ್ಳುತ್ತಲೇ ಇದ್ದುವು.

ಲೂಯಿ ಶೇಖರಿಸಿದ ಸೈನ್ಯ ಸುಶಿಕ್ಷಿತವಾಗಿತ್ತು; ಪೋಷಿಸಿದ ದಳಪತಿಗಳು ದಕ್ಷರೆನಿಸಿದ್ದರು. ಆದಾಗ್ಗೂ ಉದ್ದೇಶ ನೆರವೇರದಾಯಿತು. ಇಂಗ್ಲಿಷ್ ದಳಪತಿಯಾಗಿದ್ದ **ಮಾರ್ಲ್‌ಬರೊ ಶ್ರೀಮಂತ, ಜಾನ್ ಚರ್ಚಿಲ್** (John Churchill, Duke of Marlborough) ಅತಿ ಚತುರನಾಗಿದ್ದು ಪುನಃ ಪುನಃ ಫ್ರೆಂಚ್ ಸೈನ್ಯಗಳನ್ನು ಸೋಲಿಸಿದ್ದು ಅದಕ್ಕೆ ಮುಖ್ಯವಾದ ಕಾರಣ. ಅವಿ ರತವಾಗಿ ನಡೆದ ಯುದ್ಧದ ದೆಸೆಯಿಂದ ಅಪಾರವಾದ ವೆಚ್ಚವು ನಡೆದು ರಾಜ್ಯಕ್ಕೆ ಧನನಷ್ಟವಾಯಿತು.

ಆದರೆ ಎರಡನೆಯುದ್ದೇಶ ನೆರವೇರಿತು. ಲೂಯಿಯ ವೈಭವಮಯವಾದ ಆಸ್ಥಾನವು ಯೂರೋಪಿನ ಕಣ್ಣು ಕುಕ್ಕಿತು. ಕೋಟಿಗಟ್ಟಲೆ ಹಣವೆಚ್ಚ ಮಾಡಿ ಲೂಯಿ ಅರಮನೆಗಳನ್ನು ಕಟ್ಟಿಸಿದನು. ಅವುಗಳಲ್ಲೆಲ್ಲ ಪ್ಯಾರಿಸ್ ಬಳಿ **ವರ್ಸೈಯ್** (Versailles) ಎಂಬೆಡೆಯಲ್ಲಿರುವ ಭವ್ಯಪ್ರಾಸಾದವು ಸುಪ್ರಸಿದ್ಧ. ಈಗ ಫ್ರಾನ್ಸಿಗೆ ರಾಜನಿಲ್ಲ; ಆದ್ದರಿಂದ ಅದು ಅರಸನ ನಿವಾಸ ವಾಗಿಲ್ಲ. ದೊಡ್ಡ ಸಭೆಗಳಿಗೆ ಸ್ಥಾನ. ೧೯೧೪ರಿಂದ ೧೯೧೮ರವರೆಗೆ ನಡೆದ ಘೋರ ಯುದ್ಧವನ್ನು ಮುಗಿಸಿದ ಕರಾರುಗಳ ನಿಷ್ಕರ್ಷೆ ಅಲ್ಲಿಯೇ ಆದುದು. ಅದರಿಂದ ಅದಕ್ಕೆ ವರ್ಸೈಯ್ ಕರಾರೆಂದು ಹೆಸರು.

ಉಡಿಗೆತೊಡಿಗೆಗಳ ವಿನ್ಯಾಣದಲ್ಲಿಯೂ, ನಡತೆಯಲ್ಲಿಯೂ, ವಾಸ್ತು ಸಾಹಿತ್ಯ ಕಲೆಗಳಲ್ಲಿಯೂ ಫ್ರೆಂಚರ ರೀತಿ ಯೂರೋಪಿಗೆಲ್ಲ ಮಾದರಿಯಾಗಿ ಶೋಭಿಸಲು ಲೂಯಿಯ ಆಳಿಕೆಯಲ್ಲಿಯೇ ಪ್ರಾರಂಭ. ಸಾಹಿತಿಗಳಿಗೆ ಲೂಯಿಯ ಪ್ರೋತ್ಸಾಹವಿತ್ತು. ಮೃಗಪಕ್ಷಿಗಳ ಕಥೆಗಳನ್ನು ಕಲ್ಪಿಸಿ ಕುಶಲ ನೆನಿಸಿದ **ಲಾ ಫಾಂತೇನ್** (La Fontaine), ನಾಟಕರಚನೆಯಲ್ಲಿ ವಿಖ್ಯಾತ ರಾದ **ರಸೀನ್** (Racine) ಮತ್ತು **ಮೋಲಿಯೇರ್** (Molière) ಆ ಕಾಲದವರು.

ಮುಖ್ಯಪ್ರಶ್ನೆ ೬೩: ಮತವಿಚಾರದಲ್ಲಿ ಜನರನ್ನು ಬಲವಂತಪಡಿಸಿದ ಈ ಕಾಲದ ಪ್ರಭುಗಳಾರು? ಫಲಿತಾಂಶವೇನಾಯಿತು?

ದರ್ಪದಿಂದ ಆಳಲು ಪ್ರಯತ್ನಿಸಿದ ರಾಜರು ಇತರ ದೇಶಗಳಲ್ಲಿಯೂ ಅದೇ ಕಾಲದಲ್ಲಿದ್ದರು.

ಎಲಿಜಬೆತ್ ರಾಣಿಯ ತರುವಾಯ ಸ್ಕಾಟ್ಲಂಡಿನಲ್ಲಿ ರಾಜನಾಗಿದ್ದಾತನೇ ಇಂಗ್ಲಂಡಿನ ಪಟ್ಟಕ್ಕೆ ಹಕ್ಕುದಾರನೆನಿಸಿದನು. ಸ್ಕಾಟ್ಲಂಡ್ ಇಂಗ್ಲಂಡುಗಳು ಒಬ್ಬನೇ ರಾಜನನ್ನು ಪಡೆದವು. ಅದರಿಂದ ಇನ್ನುಮೇಲೆ ಈ ರಾಜ್ಯಗಳನ್ನು **ಗ್ರೇಟ್‌ಬ್ರಿಟನ್** ಎಂದುಕೊಳ್ಳಬೇಕು ನಾವು. ಆ ರೀತಿಯಲ್ಲಿ ಪ್ರಾರಂಭವಾದ ವಂಶ **ಸ್ಟೂಯರ್ಟ್** ಮನೆತನವೆಂದು ಪ್ರಸಿದ್ಧ. ತನ್ನದು ದೈವದತ್ತಾಧಿಕಾರ ವೆಂದು ರಾಜನು ತನ್ನಿಷ್ಟಬಂದಂತೆ ಯುದ್ಧಗಳನ್ನು ನಡೆಸುವುದಕ್ಕೂ ವೆಚ್ಚ ಮಾಡುವುದಕ್ಕೂ ಪ್ರಜೆಗಳಿಂದ ಹಣವನ್ನೆತ್ತಲು ಉದ್ಯಮಿಸಿದನು. ಆ ಉದ್ಯಮದ ಪರಿಣಾಮಗಳು ಬಲುದೂರ ವ್ಯಾಪಿಸಿದವು.

ಮತವಿಚಾರದಲ್ಲಿ ಸ್ಟೂಯರ್ಟ್ ದೊರೆಗಳು ಒಡ್ಡಿದ ನಿರ್ಬಂಧದಿಂದ ಹೊಸ ಜನಾಂಗವೊಂದು ಹುಟ್ಟಿತು. ಆ ವಂಶದ ಮೊದಲನೆ ದೊರೆ ಹಿರೇ ಜೇಮ್ಸ್ ಇಷ್ಟಪಟ್ಟ ಪಂಥವನ್ನೊಪ್ಪಲಾರದೆ **ಪ್ಯೂರಿಟನ್** (Puritan) ಶಾಖೆಯವರು ಕೆಲವರು ೧೬೨೦ರಲ್ಲಿ ಗುಂಪಾಗಿ '**ಮೇಫ್ಲವರ್**' (*Mayflower*) ಎಂಬ ಹಡಗಿನಲ್ಲಿ ಉತ್ತರ ಅಮೆರಿಕಕ್ಕೆ ಹೊರಟರು. ಅಲ್ಲಿ ಅವರು ನೆಲೆಸಿದ ಪ್ರದೇಶ ಗಳಿಗೆ **ನ್ಯೂ ಇಂಗ್ಲಂಡ್** ಅಥವಾ ಹೊಸ ಇಂಗ್ಲಂಡ್ ಕಾಲೊನಿಗಳೆಂದು ಹೆಸರಾಯಿತು. ಅಲ್ಲಿಯವರು ಸಂಯುಕ್ತ ಸಂಸ್ಥಾನಗಳ ಜನರಾಶಿಯಲ್ಲಿ ಇಂದಿಗೂ ಬೆನ್ನುಮೂಳೆಯಂತೆ. ಫ್ರಾನ್ಸ್ ರಾಜ್ಯದಲ್ಲಿ **ಹ್ಯೂಗಿನೊ** (Huguenots) ಎಂದು ಹೆಸರಾದ ಉಗ್ರಪ್ರಾಟೆಸ್ಟೆಂಟ್ ಪಂಥಿಗಳಿದ್ದರು. ಅವರನ್ನು ೧೪ನೆ ಲೂಯಿ ನಿರ್ಬಂಧಗೊಳಿಸಿದನು. ಆ ಜನರು ಅದಕ್ಕಾಗಿ ದೇಶಬಿಟ್ಟು ಹಾಲಂಡ್ ಇಂಗ್ಲಂಡ್‌ಗಳಿಗೂ ಅಮೆರಿಕಕ್ಕೂ ಹೊರಟು ಅಲ್ಲಿಯೇ ನೆಲೆಸಿಬಿಟ್ಟರು. ಉತ್ತಮಪ್ರಜಾರಾಶಿ ರಾಜ್ಯಕ್ಕಿಲ್ಲದಾಯಿತು.

ಹಣವನ್ನೆತ್ತಲು ಈ ದರ್ಪಿಷ್ಠ ದೊರೆಗಳು ಮಾಡಿದ ಬಲವಂತದ ಪರಿಣಾಮವು ಅನಿರೀಕ್ಷಿತವಾದ ರೂಪತಾಳಿತು. ಲೂಯಿ ಮಾಡಿದ ಬಲವಂತ ದಿಂದ ಆತನ ಪ್ರಜೆಗಳು ಅಲ್ಲಲ್ಲಿ ಅಸಮಾಧಾನದಿಂದ ಗೊಣಗುಟ್ಟಿದರು. ಆದರೆ ಗ್ರೇಟ್‌ಬ್ರಿಟನ್ನಿನಲ್ಲಿ ಎರಡನೆ ಸ್ಟೂಯರ್ಟ್ ದೊರೆ **ಹಿರೇ ಚಾರ್ಲ್ಸ್‌**ನ ಗತಿ ಬೇರೆಯಾಯಿತು. ತನಗೆ ನ್ಯಾಯವೆಂದು ತೋರಿದ ರೀತಿಯಲ್ಲಿ ತೆರಿಗೆ ಸುಂಕ

ಗಳನ್ನು ಬಲವಂತಪಡಿಸುವ ಅಧಿಕಾರ ತನಗಿದೆಯೆಂದು ಆ ದೊರೆ ತೆರಿಗೆಗಳನ್ನು ನಿರ್ಬಂಧದಿಂದ ಎತ್ತಿಸಿದನು. ಆದರೆ ಫ್ರಾನ್ಸಿನಲ್ಲಿದ್ದಂತೆ ಶ್ರೀಮಂತರು ಶ್ರಮ ಜೀವಿಗಳೆಂಬ ಎರಡೇ ವಿಭಾಗಗಳಲ್ಲ ಇಂಗ್ಲಿಷ್ ಜನರಾಶಿಯಲ್ಲಿದ್ದುದು. ಸಮ್ಮದಿ ವಂತರ ಗುಂಪೊಂದು ಈ ಎರಡರ ಮಧ್ಯೆ ಪ್ರಬಲಿಸಿತ್ತು. ವರ್ತಕರು, ಕಲಾ ಕುಶಲಿಗಳು, ನ್ಯಾಯವಾದಿಗಳು ಇತ್ಯಾದಿ ಜನರು ಸಮ್ಮದಿಯಿಂದಿದ್ದರು. ಅವರಿಂದ ರಾಜನು ತೆರಿಗೆಯನ್ನು ಬಯಸಿದಾಗ ಆ ಜನರು ಏತಕ್ಕಾಗಿ ಆ ಹಣ ಬೇಕೆಂದು ಕೇಳಿದರು. ಯಾವ ವೆಚ್ಚಕ್ಕಾಗಿ ಹಣವೆತ್ತಬೇಕಾಗಿದೆಯೋ ಅದನ್ನು ನಿರ್ಧರಿಸಬೇಕೆಂದು ಪಾರ್ಲಿಮೆಂಟ್ ಎಂಬ ಸಭೆಯಲ್ಲಿ ಹಟಹಿಡಿದರು. ಇಂಗ್ಲಂಡಿನಲ್ಲಿ ಬೆಳೆದ ಪಾರ್ಲಿಮೆಂಟ್ ಎಂಬುದು ಅನ್ಯದೇಶಗಳಿಗೆ ಮಾದರಿ ಯೆನಿಸಿದೆ. ಆ ಪಾರ್ಲಿಮೆಂಟ್ ವೃತ್ತಾಂತವೇನೆಂದು ತಿಳಿಯೋಣ.

ಮುಖ್ಯಪ್ರಶ್ನೆ ೬೪ : ಇಂಗ್ಲಂಡಿನಲ್ಲಿ ಪಾರ್ಲಿಮೆಂಟೆಂಬುದು ಪ್ರಾರಂಭವಾದುದು ಯಾವ ರೀತಿಯಲ್ಲಿ? ಕಾಮನ್ಸ್ ಸಭೆ ರಾಜನನ್ನು ಸ್ವಾಧೀನ ದಲ್ಲಿಟ್ಟುಕೊಂಡದ್ದು ಹೇಗೆ?

ಹದಿಮೂರನೆ ಶತಮಾನದಲ್ಲಿ ಇಂಗ್ಲಂಡಿಗೆ **ಜಾನ್** ಎಂಬ ನೀಚರಾಜನು ಪ್ರಭುವಾಗಿದ್ದನು. ಆತನು ತನ್ನ ಶ್ರೀಸ್ವಾಧಿಕಾರವನ್ನು ದುಷ್ಟರೀತಿಯಲ್ಲಿ ಪ್ರಯೋಗಿಸುತ್ತ ಸಾಮಂತಶ್ರೀಮಂತರಿಂದ ಹೆಚ್ಚು ಹೆಚ್ಚು ಹಣವನ್ನು ವಸೂಲಿಮಾಡುವ ಯತ್ನ ಮಾಡಿದನು. ಆಗಲಾ ಶ್ರೀಮಂತರು ಒಟ್ಟುಗೂಡಿ ದಂಗೆಯೆದ್ದು ರಾಜನನ್ನು ನಿರ್ಬಂಧಪಡಿಸಿ ಆತನಿಂದ ಒಂದು ಸನ್ನದನ್ನು ಬರೆಸಿ ಕೊಂಡರು. ಪ್ರಜೆಗಳಿಗಿರತಕ್ಕ ಮುಖ್ಯವಾದ ಹಕ್ಕುಗಳು ಕೆಲವು ಆ ಸನ್ನದಿ ನಲ್ಲಿ ದೃಢಪಟ್ಟವು. ಯಾವ ಪ್ರಜೆಯ ಆಸ್ತಿಯ ಅಂಶವನ್ನಾದರೂ ಆತನ ಸಮಾಸಸ್ಥರ ತೀರ್ಪಿಲ್ಲದೆ ತಾನು ಇನ್ನು ಮೇಲೆ ಗ್ರಹಿಸುವುದಿಲ್ಲವೆಂದು ರಾಜನು ಪ್ರಮಾಣಮಾಡಿದನು. ಅಂದರೆ ವಿಧಿಗೆ ಅನುಸಾರವಾಗಿ ತೆರಿಗೆಯ ನ್ನೆತ್ತತಕ್ಕುದೆಂಬ ಅರ್ಥವುಳ್ಳ ಗೊತ್ತುವಳಿ. ನ್ಯಾಯವಾದ ವಿಚಾರಣೆ ನಡೆಸದೆ ಯಾರನ್ನೂ ಸೆರೆಯಲ್ಲಿಡಿಸುವುದಿಲ್ಲವೆಂಬುದು ಆ ಸನ್ನದಿನ ಎರಡನೆ ಮುಖ್ಯಾಂಶ. ಒಪ್ಪಂದ ಅಥವಾ ಕರಾರಿನಂತೆ ೧೨೧೫ರಲ್ಲಿ ನಡೆದ ಈ ಸನ್ನದಿಗೆ **'ಮ್ಯಾಗ್ನ ಕಾರ್ಟ'** (Magna Carta) ಎಂಬ ಹೆಸರು ರೂಢಿ.

'ಮ್ಯಾಗ್ನ ಕಾರ್ಟ' ಬಹಳ ಮುಖ್ಯವಾದುದು. ಏಕೆಂದರೆ ಅದರಿಂದ ಎರಡಂಶಗಳು ಭದ್ರಗೊಂಡವು : (೧) ರಾಜನು ವಿಧಿಗನುಸಾರವಾಗಿ ಆಳಬೇಕೇ ವಿನಾ ಸ್ವೇಚ್ಛೆಯಿಂದಲ್ಲ. (೨) ಯಾರಿಗಾಗಿ ವಿಧಿಗಳು ರೂಪಗೊಳ್ಳತಕ್ಕುವೋ

ಅವರ ಸಮಾನಸ್ಥರಿಂದ, ಅಂದರೆ ಪ್ರಜೆಗಳ ಪ್ರತಿನಿಧಿಗಳಿಂದ, ಆ ವಿಧಿಗಳು ರಚಿತವಾಗಬೇಕು. ಜಾನ್ ತರುವಾಯ ಆಳಿದ ದೊರೆಯ ಕಾಲದಲ್ಲಿ ದೊರೆಗೆಷ್ಟು



೧೭೪೨ ರಲ್ಲಿ ಕಾಮನ್ಸ್ ಸಭೆ

ಮಾತ್ರ ಹಣವನ್ನೊದಗಿಸಬೇಕೆಂದು ನಿಶ್ಚಯಿಸುವುದಕ್ಕಾಗಿ ಸಾಮಾನ್ಯ ಜನರ ಪ್ರತಿನಿಧಿಗಳು ಸೇರಿದ ಪಾರ್ಲಿಮೆಂಟ್ ಸಭೆಯು ಏರ್ಪಟ್ಟಿತು. ಪಾರ್ಲಿಮೆಂಟ್ ಸಭಿಕರಲ್ಲಿ ಅನೇಕರು ಶ್ರೀಮಂತವರ್ಗದವರಾಗಿದ್ದಾಗ್ಗೂ ಜಿಲ್ಲೆಗೂ ಪಟ್ಟಣಕ್ಕೂ ಇಬ್ಬಿಬ್ಬರಂತೆ ಸಾಮಾನ್ಯಜನರ ಪ್ರತಿನಿಧಿಗಳೂ ಅದರಲ್ಲಿದ್ದರು. ಶ್ರೀಮಂತರ ವಾಂಛೆಗಳಿಗೂ ಸಾಮಾನ್ಯಜನರ ವಾಂಛೆಗಳಿಗೂ ಭೇದ ತೋರಿತು. ಆಗ ಸಾಮಾನ್ಯ ಸಭಿಕರು ಪ್ರತ್ಯೇಕವಾದ ಸಭೆಯನ್ನೇ ನಡೆಸಲಾರಂಭಿಸಿದರು. ಪಾರ್ಲಿಮೆಂಟಿನಲ್ಲಿರುವ **ಲಾರ್ಡ್ಸ್ ಸಭೆ** (House of Lords) ಮತ್ತು **ಕಾಮನ್ಸ್ ಸಭೆ** (House of Commons) ಗಳೆಂಬ ಎರಡು ಸಭೆಗಳು ಈ ಬಗೆಯಲ್ಲಿ ಪ್ರತ್ಯೇಕಗೊಂಡವು. ಕಾಮನ್ಸ್ ಸಭಿಕರೆಲ್ಲರೂ ಜನರಿಂದ ಪ್ರತಿನಿಧಿಗಳಾಗಿ ಚುನಾವಣೆಯಾದವರು; ಶ್ರೀಮಂತ ಸಭಿಕರು ಜನ್ಮದಿಂದಲೋ ರಾಜದತ್ತಸನ್ಮಾನದಿಂದಲೋ ಶ್ರೀಮಂತರೆನಿಸಿದವರು. ಚರ್ಚಿನ ಮುಖ್ಯಾಧಿಕಾರಿಗಳಾದ ಬಿಷಪ್ಪರೆಂಬವರು ಆಗ್ಗೂ ಈಗ್ಗೂ ಶ್ರೀಮಂತ ರಲ್ಲಿ ಗಣ್ಯರು.

ಕಾಲಕ್ರಮದಲ್ಲಿ ವ್ಯಾಪಾರ ಅಭಿವೃದ್ಧಿಗೊಂಡ ಕಾರಣದಿಂದ ಇಂಗ್ಲಂಡಿನಲ್ಲಿ ಸಮೃದ್ಧಿ ಹೆಚ್ಚಿದ ಸಂಗತಿಯನ್ನು ಕಂಡೆವು. ವರ್ತಕರು ಧನಾಢ್ಯರಾದ ತರುವಾಯ ರಾಜನಿಗೆ ಬೇಕಾದ ತೆರಿಗೆಗಳನ್ನು ಅವರಿಂದ ಎತ್ತಬೇಕಾಯಿತು. ರಾಜನಿಗೆ ಹಣಬೇಕಾದಾಗ ಅಮಾತ್ಯನಾಗಿದ್ದಾತನು ಕಾಮನ್ಸ್ ಸಭೆಯಲ್ಲಿ ಕಾಣಿಸಿಕೊಂಡು ಇಂತಿಂತಹ ತೆರಿಗೆಗಳನ್ನು ಎತ್ತಬೇಕಾಗಿದೆಯೆಂದೂ ಪ್ರತಿನಿಧಿಗಳೆಲ್ಲರೂ ಅವುಗಳಿಗೊಪ್ಪಬೇಕೆಂದೂ ವಿವರಿಸಿ ಹೇಳುವುದು ಪದ್ಧತಿಯಾಯಿತು. ಇದರಿಂದ ರಾಜನಿಗೆ ಬೇಕಾದ ಹಣ ಕಾಮನ್ಸ್ ಸಭೆಯ ಅಧೀನವೆಂದು ಅರ್ಥವಾಯಿತು. ಸ್ವಲ್ಪಕಾಲದಲ್ಲಿಯೇ ಆ ಸಭೆಯವರು ತಮಗೊಪ್ಪದ ಕೆಲಸವೇನಾದರೂ ರಾಜನಿಂದ ನಡೆದಿದ್ದ ಪಕ್ಷದಲ್ಲಿ ತಮ್ಮ ಕಷ್ಟ ನಿವಾರಣೆಯಾದ ತರುವಾಯವೇ ಹಣಕೊಡಿಸಲೊಪ್ಪುವುದಾಗಿ ಹೇಳಲಾರಂಭಿಸಿದರು. ಹೀಗಾಗಿ ಹಣ ಬೇಕಾದಾಗಲೆಲ್ಲ ರಾಜನು ಅಕ್ರಮಗಳನ್ನು ಮೊದಲು ಕ್ರಮಗೊಳಿಸಿ ಜನರನ್ನು ಒಲಿಸಿಕೊಳ್ಳಬೇಕಾಗಿ ಬಂತು. ಜನರ ಇಷ್ಟಾನಿಷ್ಟಗಳನ್ನನುಸರಿಸಿಕೊಂಡಿರಬೇಕಾದ ಇಂತಹ ವರ್ತನೆಯು ತಮ್ಮ ಅಧಿಕಾರ ದೈವದತ್ತವೆಂದು ನಂಬಿದ್ದ ರಾಜರಿಗೆ ಹೇಗೊಪ್ಪೀತು? ಫ್ರಾನ್ಸಿನಲ್ಲಿ ಹದಿನಾಲ್ಕನೆ ಲೂಯಿ ದೊರೆಯಾಗುವುದಕ್ಕೆ ಇಪ್ಪತ್ತು ವರ್ಷಗಳ ಮುನ್ನ ಇಂಗ್ಲಂಡಿಗೆ ದೊರೆಯಾದ ಹಿರೇ ಚಾರ್ಲ್ಸ್ ದೊರೆಯ ಆಳಿಕೆಯಲ್ಲಿ ಈ ಮನಸ್ತಾಪವು ಪ್ರಬಲಗೊಂಡಿತು.


ಮುಖ್ಯಪ್ರಶ್ನೆ ೬೫: ಹಿರೇ ಚಾರ್ಲ್ಸ್ ಪಾರ್ಲಿಮೆಂಟ್ ಸಭೆಯನ್ನು ಅಲಕ್ಷ್ಯ ಮಾಡಿದಾಗ ಏನು ನಡೆಯಿತು? ಕಿರೇ ಜೇಮ್ಸ್ ದೊರೆಯು ಉಪೇಕ್ಷಿಸಿದಾಗ ಆದುದೇನು?

ದರ್ಪದಿಂದ ಆಳಬೇಕೆಂಬುದು **ಹಿರೇ ಚಾರ್ಲ್ಸ್ ದೊರೆಯ** ಉದ್ದೇಶ. ಪಾರ್ಲಿಮೆಂಟಿನ ಪೂರ್ವಸಮ್ಮತಿಯನ್ನು ಪಡೆಯದೆಯೇ ತನ್ನ ಸ್ವಂತ ಅಧಿಕಾರದಿಂದ ತೆರಿಗೆಗಳನ್ನೆತ್ತಬಹುದೆನ್ನುತ್ತ ಆತನು ಯತ್ನಿಸಿದನು. ಕಾಮನ್ಸ್ ಸಭಿಕರು ಆಕ್ಷೇಪಿಸಿದರು. ಅವರ ಮುಖಂಡರನ್ನು ದೊರೆ ಹಿಡಿಸಿ ನಿರ್ಬಂಧದಲ್ಲಿಟ್ಟು ಸಭೆಯನ್ನು ಮುಕ್ತಾಯಗೊಳಿಸಿದನು. ಸಭೆಯನ್ನು ಕರೆಸದೆ ಸಭಾಸಮ್ಮತಿಯಿಲ್ಲದೆಯೇ ಆಳತೊಡಗಿದನು. ಹಾಗೆ ಮಾಡಲು ತನಗೆ ದೈವದತ್ತಾಧಿಕಾರವುಂಟೆಂದು ಸಾರಿದನು.

ಆದರೆ ಅದನ್ನೊಪ್ಪಲು ಪಾರ್ಲಿಮೆಂಟ್ ಬಲಹೀನವಾಗಿರಲಿಲ್ಲ. ರಾಜನಿಗೆ ವಿರುದ್ಧವಾಗಿ ಸೈನ್ಯವನ್ನೇ ಸಿದ್ಧಗೊಳಿಸಿ ಪಾರ್ಲಿಮೆಂಟಿನವರು ಅಂತರ್ಯುದ್ಧ ನಡೆಸಿದರು. ರಾಜನಿಗೂ ಪಾರ್ಲಿಮೆಂಟಿಗೂ ಯುದ್ಧ. ಶ್ರೀಮಂತರಲ್ಲಿ ಬಹುಮಂದಿ ರಾಜಪಕ್ಷದವರು; ಪಟ್ಟಣಿಗರಲ್ಲಿ ಬಹುಮಂದಿ ಪಾರ್ಲಿಮೆಂಟ್ ಪಕ್ಷದವರು. ಏಳು ವರ್ಷಗಳ ಕಾಲ ಹೋರಾಟ ನಡೆಯಿತು. ಕಡೆಗೆ ರಾಜನೇ ಸೋತನು. ಆಗ ರಾಜನನ್ನು ವಿಚಾರಣೆಗೆ ಗುರಿಮಾಡಿದರು. ಪ್ರಜೆಗಳು ರಾಜನನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಿ ವಿಚಾರಣೆ ನಡೆಸುವುದು ಎಷ್ಟು ಆಶ್ಚರ್ಯ! ಕಾನೂನಿನಂತೆ ಆಳಲೊಪ್ಪದೆ ತನ್ನಿಷ್ಟದಂತೆ ಆಳುವ ಅಧಿಕಾರವು ತನಗುಂಟೆಂದು ಹೇಳಿದ ಆ **ರಾಜನನ್ನು** ದ್ರೋಹಿಯೆಂದು ತೀರ್ಮಾನಿಸಿ **ಶಿರಚ್ಛೇದನಕ್ಕೆ** ಗುರಿಮಾಡಿದರು. ೧೬೪೯ ರಲ್ಲಿ ಬಹಿರಂಗವಾಗಿ ಆ ರಾಜನಿಗೆ ಶಿರಚ್ಛೇದನವಾಯಿತು. ದರ್ಪಿಷ್ಠರಾಜತ್ವಕ್ಕೆ ಈ ಸಂಗತಿ ಕುಠಾರಪ್ರಾಯವಾಯಿತು.

ಆ ತರುವಾಯ ನಡೆದ ಸಂಗತಿಗಳು ಗಮನಾರ್ಹ. ಹನ್ನೊಂದು ವರ್ಷಕಾಲ ರಾಜನೆಂಬುವನಿಲ್ಲದೆ ರಿಪಬ್ಲಿಕ್ ರೂಪದಿಂದಿರಲು ಯತ್ನ ನಡೆಯಿತು. ಪಾರ್ಲಿಮೆಂಟ್ ಪಕ್ಷಕ್ಕೆ ಜಯವನ್ನು ಸಾಧಿಸಿಕೊಟ್ಟಿದ್ದ **ಆಲಿವರ್ ಕ್ರಾಮ್ವೆಲ್** (Oliver Cromwell) ಎಂಬಾತನು **ಲಾರ್ಡ್ ಪ್ರೊಟೆಕ್ಟರ್** (Lord Protector) ಎಂಬ ಬಿರುದಿನಿಂದ ರಾಷ್ಟ್ರಾಧ್ಯಕ್ಷನಾದನು. ಆದರೆ ಆ ಪ್ರಯತ್ನವು ಸ್ಥಿರವಾಗಿ ನಿಲ್ಲದಾಯಿತು. ಕ್ರಾಮ್ವೆಲ್ಲನೇನೋ ಅತಿ ಬಲಾಢ್ಯ. ಆತನು ಬದುಕಿದ್ದವರೆಗೆ ವಿರೋಧಿಗಳಿಗೆ ಬಲವಿರಲಿಲ್ಲ. ಆದರೆ ಹಿಂದೆ ರಾಜಾಧಿಕಾರಿಗಳು ಎಷ್ಟು ಕಠೋರತನದಿಂದ ವರ್ತಿಸಿದ್ದರೋ ಅಷ್ಟೇ

ಕಠೋರತನವನ್ನು ಆತನ ಸಹಾಯಕರು ತೋರಿದರು. ರಾಜಪಕ್ಷದವರು ಒಂದು ಪಂಥದಲ್ಲಿ ಕಾಲಿಟ್ಟು ಛಲ ಹಿಡಿದವರಾದರೆ ಇವರು ಮತ್ತೊಂದು ಪಂಥದಲ್ಲಿ ಛಲ ಹಿಡಿದರು. ತಾವು ಅವಲಂಬಿಸಿದ್ದ ಉಗ್ರ ಪ್ರಾಟೆಸ್ಟೆಂಟ್ ನೀತಿಯನ್ನು ಇತರರೂ ಅವಲಂಬಿಸುವಂತೆ ನಿರ್ಬಂಧವನ್ನೊಡ್ಡಿದರು. ಆದ್ದರಿಂದ ಕ್ರಾಮ್ವೆಲ್ ತೀರಿಕೊಂಡ ಕೂಡಲೇ ರಾಜಪಕ್ಷದವರಿಗೆ ಅನುಕೂಲವಾಯಿತು. ರಾಜತ್ವವನ್ನು ಪುನಃ ಸ್ಥಾಪಿಸುವ ಉದ್ಯಮ ಸಾರ್ಥಕವಾಯಿತು. ಫ್ರಾನ್ಸಿನ ಲೂಯಿಯ ಆಶ್ರಯಸಂಪಾದನೆಯಲ್ಲಿದ್ದ ರಾಜಕುಮಾರ ಚಾರ್ಲ್ಸನನ್ನು ೧೬೬೦ ರಲ್ಲಿ ಕರೆತಂದರು. ಹಿರೇ ಚಾರ್ಲ್ಸ್ನ ಮಗ ಆತ; **ಕಿರಿಯ ಚಾರ್ಲ್ಸ್** ಎನಿಸಿಕೊಂಡು ದೊರೆಯಾದನು. ಪುನರಪಿ ಅಲೆದಾಟಬೇಡವೆನ್ನುತ್ತ ಆ ದೊರೆ ಪಾರ್ಲಿಮೆಂಟ್ ಸಭೆಯನ್ನು ರೇಗಿಸದಂತೆ ಜಾಣತನದಿಂದ ಆಳಿದನು. ಆತನು ಮೃತಿಪಟ್ಟ ಬಳಿಕ ರಾಜನಾದ **ಕಿರೇಜೇಮ್ಸ್** ಎಂಬ ಆತನ



ಆಲಿವರ್ ಕ್ರಾಮ್ವೆಲ್

ತಮ್ಮನಲ್ಲಿ ಆ ಬಗೆಯ ಜಾಣ್ಮೆ ಲೇಶವಾದರೂ ಇರಲಿಲ್ಲ. ತನ್ನ ತಂದೆಯು ವರ್ತಿಸಿದ್ದಂತೆ ಆಳಲು ಯತ್ನಿಸಿದನು. ಅದೂ ಅಲ್ಲದೆ ತನಗೆ ಪ್ರಿಯವೆನಿಸಿದ್ದ ಕ್ಯಾಥಲಿಕ್ ಮತವನ್ನು ಬಲವಂತಗೊಳಿಸಲು ಮೊದಲಿಟ್ಟನು. ಇಂಗ್ಲಂಡಿನ ಜನರಿಗೆ ಇದು ಅಸಹ್ಯವಾಯಿತು. ಪಾರ್ಲಿಮೆಂಟಿನವರೇ **ಆರೆಂಜ್ ಸಂಸ್ಥಾನಿಕ ವಿಲಿಯಂ** ಎಂಬಾತನನ್ನು ಕರೆಕಳುಹಿಸಿ ಆತನಿಗೆ ರಾಜ್ಯವನ್ನೊಪ್ಪಿಸಿಬಿಟ್ಟರು. ಹಿಂದೆ ಸ್ಪೆಯ್ನ್ ದೊರೆ ಫಿಲಿಪ್ಪನಿಗೆದುರಾಗಿ ಡಚ್ಚರ ನಾಯಕನಾಗಿದ್ದ ಮೌನಿ ವಿಲಿಯಂ ಎಂಬಾತನ ಮೊಮ್ಮಗನಾದ ಈ ವಿಲಿಯಂ ಕೂಡ ಡಚ್ಚರನ್ನು ಲೂಯಿಯ ಎದುರಿನಲ್ಲಿ ನಡೆಸುತ್ತಿದ್ದವನು. ಪ್ರಾಟೆಸ್ಟೆಂಟ್ ಮತಸ್ಥ. ಕಿರೇ ಜೇಮ್ಸ್ನ ಮಗಳಾದ ಮೇರಿಯೆಂಬಾಕೆಯನ್ನು ಮದುವೆಯಾಗಿದ್ದವನು. ಹಾಲಂಡಿನಿಂದ ಇಂಗ್ಲಂಡಿಗೆ ಆತನು ಬಂದಕೂಡಲೇ ಕಿರೇ ಜೇಮ್ಸ್ ರಾಜ್ಯ ಬಿಟ್ಟೋಡಿದನು. ದೂರಾಲೋಚನೆಯಿಂದ ವಿಲಿಯಂ ಆತನ ಪಲಾಯನಕ್ಕೆ ಅಡ್ಡಿಮಾಡಲಿಲ್ಲ. ಜೇಮ್ಸ್ ಫ್ರಾನ್ಸಿಗೋಡಿ ಲೂಯಿಯ ಆಶ್ರಯಪಡೆದನು.



ಇತ್ತೀಚಿನಕಾಲದ ಕಾಮನ್ಸ್ ಸಭೆಯ ದೃಶ್ಯ

ಈ ಘಟನೆಯನ್ನು ಇಂಗ್ಲಂಡಿನ ಚರಿತ್ರೆಯಲ್ಲಿ **ರಕ್ತಪಾತರಹಿತ ರಾಷ್ಟ್ರಪಲ್ಲಟ** (Bloodless Revolution) ವೆನ್ನುವರು. ಒಬ್ಬ ಅರಸನೋಡಿಹೋಗಿ ಮತ್ತೊಬ್ಬ ರಾಜನು ಬಂದಷ್ಟು ಮಾತ್ರವಲ್ಲ. ವಿಲಿಯಮಿಗೆ ರಾಜ್ಯಕೊಡಿಸಿದ ಪಾರ್ಲಿಮೆಂಟಿನವರು ಆ ಸಂದರ್ಭದಲ್ಲಿ ತಮ್ಮ ಅಧಿಕಾರಬಲವನ್ನು ಭದ್ರಪಡಿಸಿ ಕೊಳ್ಳುತ್ತ ಮುಂದಿನ ರಾಜಪುರುಷರು ಸಭಾನುಮತಿಯಿಂದ ಆಳುವಂತೆ ನಿರ್ಬಂಧಗೊಳಿಸುವ ಏರ್ಪಾಡುಗಳನ್ನು ಮಾಡಿದರು. ದೊರೆಯಾದ ತರುವಾಯ ವಿಲಿಯಂ ಪಾರ್ಲಿಮೆಂಟ್‌ಸಭೆಯನ್ನನುಸರಿಸಿಕೊಂಡು ಆಳಿಕೆ ನಡೆಸಿದನು. ೧೬೮೮ರಲ್ಲಿ ಈ ಬಗೆಯ ರಾಷ್ಟ್ರಪಲ್ಲಟವಾದ ತರುವಾಯ ಇಂಗ್ಲಂಡಿನಲ್ಲಿ ತಾವೇ ಸರ್ವಾಧಿಕಾರಿಗಳೆಂಬ ಹೆಮ್ಮೆಯಿಂದ ವರ್ತಿಸಿದ ರಾಜಪುರುಷರಿಲ್ಲವೆಂದು ಹೇಳಬಹುದು. ಸಾಂಕುಶಪ್ರಭುತ್ವವೆಂಬುದು ಸ್ಥಿರಗೊಂಡಿತು. ಪಾರ್ಲಿಮೆಂಟ್ ಸಭೆಯ ಇಷ್ಟಾನುಸಾರ ರಾಜ್ಯಭಾರನಡೆಯುವಂತಾಯಿತು.

ಮುಖ್ಯಪ್ರಶ್ನೆ ೬೬: ಬೇರಾವಾವ ರಾಷ್ಟ್ರಗಳಲ್ಲಿ ದರ್ಪಿಷ್ಠಪ್ರಭುಗಳಾಳಿದರು? ಅವರು ಸಾಧಿಸಿದುದೇನು?

ಸರಿಸುಮಾರಾಗಿ ಇದೇ ಕಾಲದಲ್ಲಿ ಇತರ ಐರೋಪ್ಯ ದೇಶಗಳಲ್ಲಿ ಆಳಿದ ದರ್ಪಿಷ್ಠ ಪ್ರಭುಗಳ ವೃತ್ತಾಂತವನ್ನು ಸಂಕ್ಷೇಪವಾಗಿ ನೋಡೋಣ.

ಫ್ರಾನ್ಸಿನಲ್ಲಿ ೧೪ನೇ ಲೂಯಿಯ ಆಳಿಕೆ ನಡೆಯುತ್ತಿದ್ದಾಗ ರಷ್ಯದಲ್ಲಿ '**ಮಹಾಶಯ**'ನೆನಿಸಿದ '**ಪೀಟರ್ ಪ್ರಭು**' ವಿನ (Peter the Great) ಆಳಿಕೆ ಮೊದಲಾಯಿತು. ಆತನಿಗೆ ತನ್ನ ದೇಶವು ಐರೋಪ್ಯ ದೇಶಗಳಂತಾಗಬೇಕೆಂಬುದೇ ಉತ್ಕಟವಾಂಛೆ. ಬಹುಕಾಲ ಮಂಗೋಲರ ಸಂಪರ್ಕ ನಡೆದಿದ್ದುದರಿಂದ ರಷ್ಯವೆಂಬುದು ಏಷ್ಯದ ಭಾಗದಂತೆಯೇ ಇದ್ದಿತು. ಮಾಸ್ಕೋ ರಾಜಧಾನಿಯಾಗಿತ್ತು. ಪೀಟರ್ ಹೊಸ ರಾಜಧಾನಿಯನ್ನು ಬಾಲ್ಟಿಕ್ ತೀರದಲ್ಲಿ, ಐರೋಪ್ಯ ದೇಶಗಳ ಸಾಮೀಪ್ಯದಲ್ಲಿ ಕಟ್ಟಿಸಿದನು. ಅದಕ್ಕೆ ಸೆಂಟ್ ಪೀಟರ್ಸ್‌ಬುರ್ಗ್ (St. Petersburg) ಎಂಬ ಹೆಸರಿತ್ತು; ಕಾಲಾನಂತರ ಪೆಟ್ರೊಗ್ರಾಡ್ (Petrograd) ಎನಿಸಿತ್ತು; ಇತ್ತೀಚೆಗೆ "**ಲೆನಿನ್‌ಗ್ರಾಡ್**" (Leningrad) ಎನಿಸಿದೆ. ಇತರ ಐರೋಪ್ಯ ದೇಶಗಳೊಂದಿಗೆ ವ್ಯಾಪಾರವನ್ನು ಹೆಚ್ಚಿಸಿಕೊಳ್ಳುವುದಕ್ಕೂ ಸರಿಸಮಾನರೀತಿಯಲ್ಲಿ ಸಂಧಿಸಂಬಂಧಗಳನ್ನು ನಡೆಸುವುದಕ್ಕೂ ಹೊಸರಾಜಧಾನಿಯಿಂದ ಅನುಕೂಲ. ಇಂಗ್ಲಂಡಿನಲ್ಲಿ ಪ್ರವಾಸಮಾಡಿ ಪೀಟರ್ ಹಡಗುಕಟ್ಟುವ ವಿದ್ಯೆ ಕಲಿತು ಸ್ವಂತದೇಶದಲ್ಲಿ ಹಡಗುಪಡೆಯನ್ನು ನಿರ್ಮಿಸಿದನು. ವರ್ಸೈಯ್ ಅರಮನೆಯಂತೆ ತಾನೂ

ರಾಜಧಾನಿಯ ಬಳಿ '**ಪೀಟರ್‌ಹೋಫ್**' ಎಂಬ (Peterhof) ಪ್ರಾಸಾದವನ್ನು ರಚಿಸಿಕೊಂಡನು. ಫ್ರಾನ್ಸ್ ದೇಶದ ವಾಸ್ತುನಿಪುಣರನ್ನು ಅದಕ್ಕಾಗಿ ಬರಮಾಡಿದ್ದನು. ಫ್ರೆಂಚರ ರೀತಿಯೇ ಯೂರೋಪಿಗೆಲ್ಲ ಆದರ್ಶವಾಗಿದ್ದ ಕಾಲ. ಪೀಟರ್ ಪ್ರಭುವು ಆ ರೀತಿಯನ್ನು ತನ್ನ ಆಸ್ಥಾನದಲ್ಲಿಯೂ ಅವಲಂಬಿಸಿದನು. ಆಸ್ಥಾನಿಕರೂ, ಸಾಮಂತರೂ ತಮ್ಮ ಗಡ್ಡಗಳನ್ನು ತೆಗೆಸಿ ಫ್ರೆಂಚರಂತೆ ವಸ್ತ್ರಭೂಷಣಗಳನ್ನು ಧರಿಸಬೇಕಾಯಿತು. ವೈಭವಾಟ್ಟಹಾಸಗಳಿಂದ ಆಳಿದ ಪೀಟರ್ ಪ್ರಭುವು ಇತರ ದರ್ಪಿಷ್ಠರಾಜರಂತೆ ತನ್ನ ವೆಚ್ಚಕ್ಕಾಗಿ ಪ್ರಜೆಗಳಿಂದ ಹಣವನ್ನೆತ್ತಿದನು. ರಷ್ಯದ ಪ್ರಜಾಸಮೂಹದಲ್ಲಿಯೂ ಅಸಮಾಧಾನಕ್ಕೆ ಮೊದಲಾಯಿತು. ಅಸಮಾಧಾನಗೊಂಡ ಪ್ರಜಾರಾಶಿಗೆ ದಂಗೆಯೇ ಗತಿಯಲ್ಲವೆ? ಕಡೆಗೆ ರಷ್ಯದಲ್ಲಿ ಪ್ರಳಯದಂತಹ ರಾಷ್ಟ್ರಪಲ್ಲಟ ನಡೆಯಿತು. ಅದನ್ನು ಮುಂದೆ ಕಾಣುವೆವು.

ಮತವೈಷಮ್ಯದಿಂದ ರೇಗಿದ ಜಗಳಗಳ ಕಾರಣದಿಂದ ಜರ್ಮನಿಯಲ್ಲಿ ಏಕರಾಷ್ಟ್ರ ಏರ್ಪಡಲು ಅಡ್ಡಿಯಾದುದನ್ನು ಹಿಂದೆಯೇ ಕಂಡೆವು. ಜರ್ಮನಿಯ ಉತ್ತರಭಾಗದಲ್ಲಿ ಪ್ರಷ್ಯವೆಂಬ ಒಂದು ರಾಜ್ಯ ಹುಟ್ಟಿ ಕಾಲಕ್ರಮದಲ್ಲಿ ಬಲಗೊಂಡಿತ್ತು. ೧೭೪೦ರಲ್ಲಿ ಅಲ್ಲಿಗೆ '**ಮಹಾಶಯ**'ನೆನಿಸಿದ '**ಫ್ರೆಡರಿಕ್**' (Frederic the Great) ಎಂಬಾತನು ದೊರೆಯಾದನು. ಆತನು ಬಲವಾದ ಸೈನ್ಯವನ್ನು ಕಟ್ಟಿ ಯುದ್ಧಗಳಲ್ಲಿ ತೊಡಗಿದ್ದಲ್ಲದೆ ರಮ್ಯವಾದ ಅರಮನೆ ಕಟ್ಟಿಸಿಕೊಂಡನು. ಫ್ರೆಂಚರ ರೀತಿಯನ್ನು ತನ್ನ ಆಸ್ಥಾನದಲ್ಲಿ ಅನುಸರಿಸಿದನು. ಆತನಿಗೆ ಪ್ರಬಲವೈರಿಯೆನಿಸಿದ ಆಸ್ಟ್ರಿಯದ ಚಕ್ರವರ್ತಿನಿ '**ಮರೀಯ ಥೆರೀಸ**' (Maria Theresa) ೧೭೪೦ರಲ್ಲಿ ಆಳಲು ಮೊದಲಿಟ್ಟಳು. ವಿಯೆನ್ನ ನಗರದಲ್ಲಿ ಈಕೆಯೂ ದೊಡ್ಡ ಅರಮನೆ ಕಟ್ಟಿಸಿ ಅಟ್ಟಹಾಸದಿಂದ ಇದ್ದವಳು. ಒಂದೇ ಕಾಲದಲ್ಲಿ ಪದವಿಪಡೆದ ಫ್ರೆಡರಿಕ್ ಮತ್ತು ಮರೀಯ ಥೆರೀಸ ಎಂಬವರು ಪ್ರಜೆಗಳಿಂದ ಹಣವನ್ನೆತ್ತಿ ತಮ್ಮ ಯುದ್ಧಗಳಿಗೂ ಭೋಗವೈಭವಗಳಿಗೂ ವೆಚ್ಚಗೊಳಿಸಿದರು. ಪರಿಣಾಮವೇನಾಯಿತೆಂದು ಮುಂದೆ ನೋಡೋಣ.

ಅಭ್ಯಾಸಗಳು

೧. ರಾಜಾಧಿಕಾರವು ದೈವದತ್ತವೆಂದರೇನು? ಅದನ್ನು ನಂಬಿದ್ದ ರಾಜರೇನು ನಡೆಸಿದರೆಂಬುದನ್ನು ಉದಾಹರಣೆ ಸಹಿತ ವಿವರಿಸಿ.

೨. ಈ ಕಾಲದಲ್ಲಿ ಯೂರೋಪಿಗೆಲ್ಲ ಫ್ರಾನ್ಸ್ ದೇಶವು ಯಾವ ಅಂಶಗಳಲ್ಲಿ ಆದರ್ಶಪ್ರಾಯವಾಯಿತು? ಆ ಕಾಲದ ಮಹಿಮೆಯನ್ನು ಈಗಲೂ ಎಲ್ಲಿ ಕಾಣಬಹುದು?

೩. ಅತಿಪ್ರಾಬಲ್ಯನಿವಾರಣೆ, ಪಿಲ್ಗ್ರಿಂಫಾದರ್ಸ್, ಮ್ಯಾಗ್ನಕಾರ್ಟ, ಸಾಂಕುಶಪ್ರಭುತ್ವಗಳನ್ನು ಕುರಿತು ಟಿಪ್ಪಣಿಗಳನ್ನು ಬರೆಯಿರಿ.

೧೮ನೆ ಅಧ್ಯಾಯ

ಇಂಗ್ಲಿಷರ ಅಭ್ಯುದಯ

ಮುಖ್ಯಪ್ರಶ್ನೆ ೬೭ : ಬ್ರಿಟಿಷ[1]ರೂ ಫ್ರೆಂಚರೂ ಅಮೆರಿಕದಲ್ಲಿ ಪರಸ್ಪರವಾಗಿ ಹೋರಾಡಿದುದೇಕೆ ?

ಎಲಿಸ್ಟಬೆತ್‌ರಾಣಿಯ ಕಾಲದಿಂದ ವ್ಯಾಪಾರಸಾಧನೆಯಲ್ಲಿ ಇಂಗ್ಲಿಷರು ಮುಂದಾದ ಸಂಗತಿಯನ್ನು ಗಮನಿಸಿದೆವು. ವ್ಯಾಪಾರಾಭಿವೃದ್ಧಿಯಿಂದ ಬಲಗೊಂಡ ನೆಮ್ಮದಿವಂತವರ್ಗದವರು ಶ್ರೀಮಂತವರ್ಗದವರಿಗೂ ಕೃಷೀವಲ ವರ್ಗದವರಿಗೂ ನಡುವೆ ಇದ್ದು ಹಿರೇ ಚಾರ್ಲ್ಸ್ ದೊರೆಗೂ ಪಾರ್ಲಿಮೆಂಟಿಗೂ ಕೆರಳಿದ ಜಗಳದಲ್ಲಿ ಸೇರಿಕೊಂಡರು. ಅವರು ಸೇರಿ ನಾಯಕತನ ವಹಿಸಿದ ಕಾರಣದಿಂದಲೇ ರಾಜನು ಸೋತು ಪದಚ್ಯುತನಾದುದು. ಅನಂತರ ಕಿರೇ ಜೇಮ್ಸ್ ದೊರೆ ಜನಬಾಹುಳ್ಯಕ್ಕೆ ಬೇಡದಮತವನ್ನು ಬಲವಂತಗೊಳಿಸುವ ಪ್ರಯತ್ನ ನಡೆಸಿ ಕಡೆಗೆ ತೆಪ್ಪನೆ ದೇಶಭ್ರಷ್ಟನಾದುದಕ್ಕೂ ಆ ವರ್ಗದವರ ಪ್ರಾಬಲ್ಯವೇ ಕಾರಣ. ಆ ಮೇಲೆ ಆಳಿದ ರಾಜರು ಪಾರ್ಲಿಮೆಂಟಿಗೆ ವಿಧೇಯರಾಗಿ ವರ್ತಿಸಿದರು. ಜನರನ್ನು ಬಲವಂತಗೊಳಿಸುವ ಯೋಚನೆ ಮಾಡಲಿಲ್ಲ. ಇಷ್ಟಬಂದ ಮತವನ್ನು ಅವಲಂಬಿಸುವುದಕ್ಕೂ, ಇಷ್ಟತೋರಿದ ರೀತಿಯಲ್ಲಿ ಧನಿಕರಾಗುವುದಕ್ಕೂ ಜನರಿಗೆ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟರು. ರಾಜನಿಗೆ ಅಧಿಕಾರ ನಷ್ಟವಾಯಿತು. ಪಾರ್ಲಿಮೆಂಟಿಗೆ ಅಧಿಕಾರ ಲಾಭವಾಯಿತು. ಪಾರ್ಲಿಮೆಂಟಿನಲ್ಲಿ ಶ್ರೀಮಂತರೂ ಸಾಮಾನ್ಯರೂ ಇದ್ದಾಗ್ಗೂ ನೆಮ್ಮದಿವಂತರಾದ ಮಧ್ಯಮವರ್ಗದ ಪ್ರತಿನಿಧಿಗಳೇ ಪ್ರಬಲರಾದರು.

ನೆಮ್ಮದಿಯಿಂದ ಬದುಕುತ್ತ ತಮ್ಮ ಭೋಗಭಾಗ್ಯಗಳನ್ನು ಅಭಿವೃದ್ಧಿ ಮಾಡಿಕೊಳ್ಳುತ್ತ ಇರುವಂತಹ ಜನರಿಗೆ ಯುದ್ಧಗಳೂ ರಾಷ್ಟ್ರಪಲ್ಲಟಗಳೂ ಅನಿಷ್ಟ. ಶಾಂತಿಯೇ ಅವರಿಗೆ ಬೇಕಾದುದು; ಇರುವ ಪರಿಸ್ಥಿತಿಯ ರಕ್ಷಣೆಯೇ ಇಷ್ಟವಾದುದು. ಆದರೆ ಅವರ ಸಂಪಾದನೆ ತರುತ್ತಿದ್ದ ವೃತ್ತಿಗೆ, ಅಂದರೆ ವ್ಯಾಪಾರಕ್ಕೋ ಕೈಗಾರಿಕೆಗೋ, ಆತಂಕ ತೋರಿದಾಗ ಅದನ್ನು ತೊಲಗಿಸಲು ಅವರು ಯುದ್ಧಸಿದ್ಧರಾಗುವರು. ಯೂರೋಪಿನಲ್ಲಿ ದರ್ಪಿಷ್ಠ ದೊರೆಗಳ ತರುವಾಯ ನಡೆದ ಶತಮಾನದಲ್ಲಿ ಸಂಭವಿಸಿದುದು ಅದೇ.


---

[1] ಸ್ಕಾಟ್ಲೆಂಡ್ ಇಂಗ್ಲೆಂಡ್ ರಾಜ್ಯಗಳೊಟ್ಟುಗೂಡಿದ ಬಳಿಕ ಬ್ರಿಟಿಷರೆಂಬುದೇ ಒಪ್ಪು.

ಬ್ರಿಟಿಷರ ವ್ಯಾಪಾರಕ್ಕೆ ಆತಂಕವೊಡ್ಡಿದವರು ಫ್ರೆಂಚರು. ಫ್ರೆಂಚರೆಂದರೆ ಫ್ರಾನ್ಸಿನ ಜನಸಾಮಾನ್ಯರಲ್ಲ. ಆ ಸಾಮಾನ್ಯಜನರಿಗೆ ಹದಿನಾಲ್ಕನೆ ಲೂಯಿಯ ವಿಜೃಂಭಣೆಯ ಪರಿಣಾಮವಾಗಿ ದಾರಿದ್ರ್ಯವಂಟಿತ್ತು. ಆ ದೇಶದ ಶ್ರೀಮಂತರೂ ಅಧಿಕಾರಿಗಳೂ ಸರದಾರರೂ ಅಮಿತವಾದ ದೇಶಭಕ್ತಿಯನ್ನು ಪೋಷಿಸಿಕೊಂಡಿದ್ದರು. ಲೂಯಿಯ ಆಳಿಕೆಯ ಪರಿಣಾಮವಾಗಿ ಅವರೆಲ್ಲರಿಗೂ ತಮ್ಮ ದೇಶದಲ್ಲಿ ಹೆಮ್ಮೆ ತುಂಬಿತ್ತು. ನೆರೆಯ ದ್ವೀಪರಾಜ್ಯದ ಸಣ್ಣ ಜನಾಂಗವು ಒಬ್ಬ ದೊರೆಯ ತಲೆಹೊಡೆಸಿ ಮತ್ತೊಬ್ಬ ದೊರೆಯನ್ನು ದೇಶದಿಂದೋಡಿಸಿದ ತರುವಾಯ ಪೃಥ್ವಿಯ ವ್ಯಾಪಾರವೆಲ್ಲವನ್ನೂ ಸಂಪಾದಿಸಿಕೊಳ್ಳುತ್ತಲೂ, ಅತಿದೂರ ಪ್ರದೇಶಗಳನ್ನು ತಮ್ಮ ಕಾಲೊನಿಗಳನ್ನಾಗಿ ಸ್ವಾಧೀನಪಡಿಸಿ ಕೊಳ್ಳುತ್ತಲೂ ಇದ್ದುದನ್ನು ಆ ಜನರು ಸಹಿಸದಾದರು. ಸ್ಪಾನಿಷ್ ಜನರಿಗೂ ಬ್ರಿಟಿಷರಲ್ಲಿ ಅಸಹನೆ ಬೆಳೆದಿತ್ತು. ಪೋಪನ ಶ್ರೀಮುಖದಂತೆ ಪಡುವಲ ಪ್ರದೇಶಗಳೆಲ್ಲವೂ ಸ್ಪಾನಿಷರದು; ಆದರೆ ಪ್ರಾಟೆಸ್ಟೆಂಟರಾದ ಬ್ರಿಟಿಷರು ಆ ಶ್ರೀಮುಖವನ್ನು ತೃಣಸಮಾನವೆಂದರು.

ಉತ್ತರ ಅಮೆರಿಕ ಮತ್ತು ಹಿಂದುಸ್ತಾನಗಳಲ್ಲಿ ಬ್ರಿಟಿಷರಿಗೂ ಫ್ರೆಂಚರಿಗೂ ಪೋಟಾಪೋಟಿ ಪ್ರಬಲವಾಗಿ ರೇಗಿತು.

ಉತ್ತರ ಅಮೆರಿಕದಲ್ಲಿ ಬ್ರಿಟಿಷರು ಕೆಲವುಕಾಲೊನಿಗಳನ್ನು ಸ್ಥಾಪಿಸಿ ಕೊಂಡಿದ್ದರು. ರಾಜರು ಮತವಿಚಾರದಲ್ಲಿ ನಿರ್ಬಂಧಗೊಳಿಸಿದಾಗ ತಮ್ಮ ಮತತ್ಯಾಗಮಾಡಲು ಇಷ್ಟವಿಲ್ಲದೆ ಕೆಲವರು ದೇಶಾಂತರ ಹೊರಟುದು ನಿಮಗೆ ಜ್ಞಾಪಕವಿದೆಯಷ್ಟೆ. ೧೬೨೦ರಲ್ಲಿ ಹೊರಟ ಪ್ಯೂರಿಟನ್ ಪಂಥಿಗಳು ಉತ್ತರ ಅಮೆರಿಕದ ಮೂಡಲತೀರದಲ್ಲಿ ನೆಲೆಸಿದ್ದರು. ಅವರೇ **ಪಿಲ್‌ಗ್ರಿಮ್ ಫಾದರ್ಸ್** (Pilgrim Fathers) ಅಥವಾ ಯಾತ್ರಾರ್ಥಿಪೂರ್ವಿಕರು. ಅವರ ಕಾಲ ಕಳೆದು ಒಂದು ಶತಮಾನವಾಗುವ ವೇಳೆಗೆ ಅವರ ನೆಲೆಗಳು ಇಂಗ್ಲಿಷರ ಕಾಲೊನಿಗಳೆನಿಸಿ ವಿಸ್ತಾರಗೊಂಡಿದ್ದವು. ಪೂರ್ವತೀರಪ್ರದೇಶದಲ್ಲಿಯೇ ಅವು ಅಭಿವೃದ್ಧಿಯಾದುದು. ಏಕೆಂದರೆ ಇಂಗ್ಲಂಡಿಗೆ ಆ ಪ್ರದೇಶವೇ ಸಮೀಪ; ಇಂಗ್ಲಂಡಿನಂತಹ ಹವವೇ ಅಲ್ಲಿಯೂ. ವಶದಲ್ಲಿಟ್ಟುಕೊಂಡ ಕಾಲೊನಿಗಳನ್ನಲ್ಲದೆ ಬ್ರಿಟಿಷರು ವ್ಯಾಪಾರಕ್ಕಾಗಿ ಬೇರೆ ಸ್ಥಳಗಳನ್ನೂ ಸಂಪಾದಿಸಿಕೊಂಡಿದ್ದರು. ದೃಷ್ಟಾಂತಕ್ಕೆ **ಹಡ್ಸನ್‌ಬೇ ಕಂಪನಿ** (Hudson Bay Company). ಆ ಕಂಪನಿಯವರು ಹಡ್ಸನ್ ಕೊಲ್ಲಿ ಬಳಿ ಮೃಗಗಳನ್ನು ಬೇಟೆಯಾಡಿಸಿ ಆ ಮೃಗಗಳ ಚರ್ಮ ಮಾರಿ ಲಾಭ ಪಡೆಯುತ್ತಿದ್ದರು. ಆ ಚರ್ಮಗಳಿಂದ ಉತ್ತಮವಾದ ಅಂಗಿಗಳನ್ನು ಮಾಡಿಸಿ ಧರಿಸಲು ಐರೋಪ್ಯರಿಗೆ ಚಳಿಗಾಲದಲ್ಲಿ ಆಸೆ. ಹಿಂದುಸ್ತಾನ, ಸಿಂಹಳ ಮತ್ತು



೧೭೫೦ರಲ್ಲಿ ಉತ್ತರ ಅಮೆರಿಕದ ರಾಜಕೀಯ ವಿಭಾಗ

ಈಸ್ಟಿಂಡೀಸ್ ದ್ವೀಪಗಳಲ್ಲಿಯೂ ಬ್ರಿಟಿಷರು ವ್ಯಾಪಾರಕ್ಕಾಗಿ ಮಾತ್ರ ಸ್ಥಳಗಳನ್ನಾಕ್ರಮಿಸಿಕೊಂಡಿದ್ದರು.

ಫ್ರೆಂಚರೂ ಪ್ರಾರಂಭಿಸಿದ್ದರು ವ್ಯಾಪಾರವನ್ನು ಅಮೆರಿಕ ಹಿಂದುಸ್ತಾನಗಳಲ್ಲಿ. ಅಮೆರಿಕದಲ್ಲಿ ಅವರ ರೀತಿ ವಿಶಿಷ್ಟವೆನ್ನುವಂತಿತ್ತು. ತೀರಪ್ರದೇಶವನ್ನು ಬಿಟ್ಟು ಅವರು ನದಿಗಳ ಪಕ್ಕದಲ್ಲಿದ್ದ ಸ್ಥಳಗಳನ್ನು ಸಂಪಾದಿಸಿದ್ದರು. ಸೆಂಟ್ ಲಾರೆನ್ಸ್, ಮಿಸಿಸಿಪ್ಪಿ ಮತ್ತು ಓಹಿಯೊ ನದಿಗಳ ಒತ್ತಿನಲ್ಲಿ, ಅಂದರೆ ಆ ಖಂಡದ ಮಧ್ಯ ಮತ್ತು ದಕ್ಷಿಣ ಭಾಗಗಳಲ್ಲಿ, ಅವರದು ಪ್ರಾಬಲ್ಯ. ನಕ್ಷೆಯಲ್ಲಿ ನೋಡಿ. ಆ ನದಿಗಳ ಪ್ರದೇಶವೆನ್ನುವುದು ಅಖಂಡವಾಗಿರುವ ಅಂಶವು ಸ್ಪಷ್ಟವಾಗುವುದು. ಅಷ್ಟು ಪ್ರದೇಶವನ್ನೂ ಫ್ರೆಂಚರು ಕ್ರಮವಾಗಿ ವಶಪಡಿಸಿಕೊಂಡರು. ಆಗ ತೀರಪ್ರದೇಶದಲ್ಲಿದ್ದ ಬ್ರಿಟಿಷರಿಗೆ ಖಂಡದ ಮಧ್ಯಭಾಗದಲ್ಲಿ ಸಂಪಾದನೆಗೂ ವಿಸ್ತರಣಕ್ಕೂ ಆಸ್ಪದವಿಲ್ಲದಾಯಿತು. ತೀರಪ್ರದೇಶದಲ್ಲಿ ಮಾತ್ರವೇ ಬ್ರಿಟಿಷರಿರುವಂತೆ ಮಾಡಲು ಫ್ರೆಂಚರು ಮತ್ತೊಂದು ಉಪಾಯವನ್ನೂ ಸಾಧಿಸಿದ್ದರು. ನದೀಪ್ರದೇಶಗಳಲ್ಲಿ ಹಿಂದಿನಿಂದಲೂ ಇದ್ದ ತಾಮ್ರವರ್ಣದ ಜನರಲ್ಲಿ ಮೈತ್ರಿ ಬೆಳೆಸಿದ್ದರು.

ಮುಖ್ಯಪ್ರಶ್ನೆ ೬೮ : ವ್ಯಾಪಾರಸ್ಪರ್ಧೆಯಿಂದ ಬ್ರಿಟಿಷರಿಗೂ ಫ್ರೆಂಚರಿಗೂ ಹಿಂದುಸ್ತಾನದಲ್ಲಿ ಯುದ್ಧಗಳಾದುದು ಹೇಗೆ?


ಹಿಂದುಸ್ತಾನದಲ್ಲಿಯೂ ಅಂತಹದೇ ವಿರೋಧ. ಅಕ್ಬರನಂತಹವನೋ ಶಿವಾಜಿಯಂತಹವನೋ ದಕ್ಷತೆಯಿಂದ ದೇಶವನ್ನೊಟ್ಟುಗೂಡಿಸಿ ಆಳುತ್ತಿದ್ದಿದ್ದರೆ ಗತಿಯೇ ಬೇರೆಯಾಗಬಹುದಾಗಿತ್ತು. ಆದರೆ ಔರಂಗಜೇಬ್ ತರುವಾಯ ಪಾದಶಾಹರೆನಿಸಿದವರು ದೂರಪ್ರಾಂತಗಳನ್ನು ವಶದಲ್ಲಿಟ್ಟುಕೊಳ್ಳಲಾರದೆ ಹೋದರು. ಶಿವಾಜಿಯ ತರುವಾಯ ಮರಾಟೆಯವರೂ ತಮ್ಮ ಐಕಮತ್ಯವನ್ನು ಉತ್ಕೃಷ್ಟರೀತಿಯಲ್ಲಿ ರಕ್ಷಿಸಿಕೊಳ್ಳಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಫಾರ್ಸಿಸ್ತಾನದ ಕಡೆಯಿಂದ **ನಾದಿರ್‌ಶಾಹನು** ಹಟಾತ್ತಾಗಿ ದಂಡೆತ್ತಿಬಂದು ಲೂಟಿ ಹೊಡೆಸಿದನು. ಆತನು ದೇಶದಲ್ಲಿ ಹೆಚ್ಚುಕಾಲವೇನೋ ಇರಲಿಲ್ಲ. ಆದರೆ ಶತಮಾನಗಟ್ಟಲೆಯಾಗಿ ನಡೆದ ಪ್ರಯತ್ನದ ಫಲವನ್ನು ನಾಶಗೊಳಿಸಿ ಮಯೂರಾಸನವೇ ಮುಂತಾದ ಅನರ್ಘ್ಯವಸ್ತುಗಳನ್ನೂ ಅಪಾರಧನವನ್ನೂ ಸಾಗಿಸಿಕೊಂಡು ಹೊರಟನು. ಆ ತರುವಾಯ ಇಪ್ಪತ್ತು ವರ್ಷಗಳವರೆಗೂ ಕೊಳ್ಳೆಗಾಗಿ ಆಫ್‌ಘಾನರು ಕಾಣಿಸಿಕೊಂಡು ತೊಂದರೆಪಡಿಸುತ್ತಲೇ ಇದ್ದರು.

ಐರೋಪ್ಯವ್ಯಾಪಾರಿಗಳಿಗೆ ಎಲ್ಲೆಲ್ಲಿಯೂ ಕಂಡುದು ಈ ಬಗೆಯ ಅನಾಯಕಸ್ಥಿತಿಯೇ. ಆ ವ್ಯಾಪಾರಿಗಳು ಸಹಜವಾಗಿ ತಮ್ಮ ವ್ಯಾಪಾರವನ್ನು ರಕ್ಷಿಸಿಕೊಳ್ಳಲು ತಮ್ಮ ಸ್ಥಳಗಳಲ್ಲಿ ಕೋಟೆಕಟ್ಟಿಕೊಂಡು ಸೈನ್ಯಗಳನ್ನು ಇಟ್ಟುಕೊಂಡರು. ತರುವಾಯ ದೇಶೀಯ ರಾಜರುಗಳ ಸಹಾಯಕರೆಸಿಸಿದರು. ದೇಶೀಯಸಿಪಾಹಿಗಳನ್ನು ಯುದ್ಧವಿದ್ಯೆಯಲ್ಲಿ ನಿಪುಣರನ್ನಾಗಿ ಮಾಡಲು ಐರೋಪ್ಯ ಸರದಾರರನ್ನು ಗೊತ್ತುಮಾಡಿದರು. ಸ್ವಲ್ಪಕಾಲಾನಂತರ ಐರೋಪ್ಯ ಸೈನ್ಯವನ್ನೂ ಇಟ್ಟರು. ಪಟ್ಟದ ಜಗಳಗಳಲ್ಲಿ ಪಕ್ಷ ಪ್ರತಿಪಕ್ಷಗಳನ್ನು ವಹಿಸಿದರು. ತಾವು ಹಿಡಿದ ಪಕ್ಷದ ಹಕ್ಕುದಾರನ ಬಲವನ್ನು ತಮ್ಮ ವೈರಿಗಳ ಮೇಲೆತ್ತಿಕಟ್ಟಿದರು ಇಂಗ್ಲಿಷರುಫ್ರೆಂಚರಿಬ್ಬರೂ. ಅಮೆರಿಕದಲ್ಲಿ ಪೋಟಾಪೋಟಿ ನಡೆದಂತೆ ಹಿಂದುಸ್ತಾನದಲ್ಲಿಯೂ ಇಂಗ್ಲಿಷರು ಮತ್ತು ಫ್ರೆಂಚರು ತಮ್ಮ ಸ್ವದೇಶಗಳ ಒಡೆಯರ ಅನುಮತಿಯಿಲ್ಲದೆ ತಾವೇ ಸ್ವತಂತ್ರಿಸಿ ಹೋರಾಟ ನಡೆಸಿದರು. ಕಡೆಗೆ ಎರಡು ದೇಶಗಳವರಿಗೂ ದೊಡ್ಡ ಯುದ್ಧ ಸಂಭವಿಸಿತು. ದೇಶೀಯ ರಾಜರಲ್ಲಿ ಕೆಲವರಪಕ್ಷವನ್ನು ಫ್ರೆಂಚರೂ ಮತ್ತೆಕೆಲವರಪಕ್ಷವನ್ನು ಇಂಗ್ಲಿಷರೂ ವಹಿಸಿಕೊಂಡು ಅವರ ರಾಜ್ಯಕೋಶಗಳ ಬಲವನ್ನು ಯುದ್ಧಗಳಲ್ಲಿ ಉಪಯೋಗಿಸಿಕೊಂಡರು. **ಸಪ್ತವಾರ್ಷಿಕಯುದ್ಧ**ವೆಂದು ಆ ಯುದ್ಧದ ಹೆಸರು. ಚರಿತ್ರೆಯಲ್ಲಿ ಅತಿಮುಖ್ಯವಾದವುಗಳಲ್ಲಿ ಲೆಕ್ಕವಾಗತಕ್ಕುದು. ಹಿಂದೆ ರೋಮಕರಿಗೂ ಕಾರ್ಥೇಜಿನವರಿಗೂ ನಡೆದ ಯುದ್ಧಕ್ಕೆ ಅದನ್ನು ಹೋಲಿಸಬಹುದು. ರೋಮಕರು ಜಯಶಾಲಿಗಳಾಗಿ ವಿಸ್ತಾರಸಾಮ್ರಾಜ್ಯ ಕಟ್ಟಿಕೊಂಡಂತೆ ಬ್ರಿಟಿಷರು ಜಯಶಾಲಿಗಳಾಗಿ ವಿಸ್ತಾರಸಾಮ್ರಾಜ್ಯ ಕಟ್ಟುವವರಾದರು. ಆದರೆ ರೋಮಕಸಾಮ್ರಾಜ್ಯಕ್ಕಿಂತ ಬ್ರಿಟಿಷ್ ಸಾಮ್ರಾಜ್ಯ ಎಷ್ಟೋ ವಿಸ್ತಾರ. ಅಂತಹ ಜಯ ಸಿದ್ಧಿಸಲು ಕಾರಣಭೂತನಾದವನು **ವಿಲಿಯಂ ಪಿಟ್** (William Pitt).

ಮುಖ್ಯಪ್ರಶ್ನೆ ೬೯ : ಪಿಟ್ಟನು ಹೂಡಿದ ಉಪಾಯ ಯಾವುದು? ಅದರಿಂದ ಜಯಸಿದ್ಧಿ ಹೇಗಾಯಿತು?

ವಿಲಿಯಂ ಪಿಟ್ ಎಂಬ ಹೆಸರಿನವರಿಬ್ಬರು; ತಂದೆ ಹಿರೇ ಪಿಟ್, ಮಗ ಕಿರೇ ಪಿಟ್. ಇಬ್ಬರೂ ಬ್ರಿಟಿಷರ ಚರಿತ್ರೆಯಲ್ಲಿ ವಿಖ್ಯಾತರು. ತಂದೆಗೆ ಚಾಥಮಿನ ಅರ್ಲ್ ಎಂಬ ಬಿರುದು ಬಂತು; ಆದ್ದರಿಂದ ಹಿರೇ ಪಿಟ್ಟನ್ನು ಚಾಥಂ ಶ್ರೀಮಂತನೆಂದು ಕರೆವುದೂ ಉಂಟು.

ಕಾಮನ್ಸ್ ಸಭಿಕನಾದಾಗ ಹಿರೇ ಪಿಟ್ಟನಿಗೆ ೨೭ ವರ್ಷ ವಯಸ್ಸು. ಸ್ವಲ್ಪ ಕಾಲದಲ್ಲಿಯೇ ಗಂಭೀರಭಾಷಣಗಳನ್ನು ಕೊಟ್ಟು ಹೆಸರುವಾಸಿಯಾದನು. ಬ್ರಿಟಿಷ್ ವ್ಯಾಪಾರದ ಅಭಿವೃದ್ಧಿಯಲ್ಲಿ ಆಗಿನ ಮಂತ್ರಿಗಳು ತಕ್ಕಷ್ಟು ಆಸಕ್ತಿ ವಹಿಸಲಿಲ್ಲವೆಂದು ಆಕ್ಷೇಪಿಸುತ್ತಿದ್ದನು. ತನ್ನ ಸಮಕಾಲಿಕರನೇಕರು ನೆನೆಸಿದ್ದುದಕ್ಕಿಂತ ಬ್ರಿಟಿಷರ ಪ್ರಾಬಲ್ಯಕ್ಕೆ ವರ್ತಕವ್ಯಾಪಾರಿಗಳು ಮುಖ್ಯರಾದವರೆಂದು ಪ್ರಕಟವಾಗಿ ಹೇಳುತ್ತಿದ್ದನು. ಆ ಮಾತು ಯಥಾರ್ಥವಾಯಿತು. ಕೆಲವುಕಾಲ ಪಿಟ್ಟನು ಮಂತ್ರಿ ಪದವಿಯನ್ನೂ ಪಡೆದಿದ್ದನು.



ಹಿರಿಯ ಪಿಟ್

ಯುದ್ಧ ಪ್ರಾರಂಭದಲ್ಲಿ ಬ್ರಿಟಿಷರ ಸನ್ನಾಹವು ಸಾಲದೆ ಪರಾಜಯಗಳು ಪ್ರಾಪ್ತಿಯಾದುವು. ಆಗ ಪಿಟ್ ಯುದ್ಧ ಸಚಿವನಾದನು. ಆ ಹುದ್ದೆಗೆ ತಕ್ಕವನು. ಬೇಕಾದುದೇನೆಂಬುದನ್ನು ನಿಷ್ಕೃಷ್ಟವಾಗಿ ತಿಳಿದಿದ್ದನು. ವೇಗದಿಂದಲೂ ನಿಶ್ಚಯಬಲದಿಂದಲೂ ಕರ್ತವ್ಯವೇನೆಂದು ನಿರ್ಧರಪಡಿಸಿಕೊಂಡನು. ಸ್ಥಲಬಲಕ್ಕೂ ಜಲಬಲಕ್ಕೂ ಯೋಗ್ಯರಾದ ದಳಪತಿಗಳನ್ನು ಆರಿಸಿಕೊಳ್ಳುವ ಜಾಣ್ಮೆ ಆತನಲ್ಲಿ ಅದ್ಭುತ. ಸ್ಥಿರಸಂಕಲ್ಪದಿಂದಲೂ ಉತ್ಸಾಹಬಲದಿಂದಲೂ ತಾನು ಕೂಡಿದ್ದುದರಿಂದ ಅವರನ್ನು ಪ್ರೋತ್ಸಾಹಿಸಿ ಯೋಗ್ಯತೆಗೆ ಮೀರಿ ಸಾಧಿಸುವಂತೆ ಪ್ರೇರಿಸಬಲ್ಲವನು. 'ಆತನೊಡನೆ ಮಾತನಾಡಿದ ಮೇಲೆ ಹೊಸ ಧೈರ್ಯತೇಜಸ್ಸುಗಳನ್ನು ಪಡೆಯದವರೊಬ್ಬರಾದರೂ ಇಲ್ಲ' ವೆಂದು ಜನರು ವರ್ಣಿಸಿದರು. ಕಾಮನ್ಸ್ ಸಭೆಗೆ ನಾಯಕನಾದ ಆತನನ್ನು 'ಗ್ರೇಟ್ ಕಾಮನರ್' (Great Commoner) ಅಥವಾ ಕಾಮನ್ಸ್ ಸಭಿಕರ ಮಹಾನಾಯಕನೆಂದು ಕರೆದರು. ತನ್ನ ಅನುಯಾಯಿಗಳು ಕಾರ್ಯಸಾಧನೆ ಮಾಡಬಲ್ಲರೆಂಬ ನಂಬಿಕೆಯನ್ನವರಲ್ಲಿಟ್ಟಿದ್ದುದರಿಂದ ಅವರು ಆತನನ್ನು ನಂಬಿದ್ದರು. ವಿಶ್ವಾಸಕೊಟ್ಟು ವಿಶ್ವಾಸ ಸಂಪಾದಿಸಿ ಆ ವಿಶ್ವಾಸ ಬಲದಿಂದಲೇ ಕಾರ್ಯಪಟುವಾದನು.

ಅಮೆರಿಕಹಿಂದುಸ್ಥಾನಗಳಿಂದ ಫ್ರೆಂಚರನ್ನು ಓಡಿಸುವುದು ಬ್ರಿಟಿಷರ ಅಭ್ಯುದಯಕ್ಕೆ ಮುಖ್ಯವೆಂಬ ಅಂಶವನ್ನು ಮಂತ್ರಿಯಾದ ತಕ್ಷಣ ಪಿಟ್ಟನು ಗ್ರಹಿಸಿದನು. ಅದನ್ನು ನೆರವೇರಿಸಲು ಫ್ರೆಂಚ್ ಸೈನ್ಯಬಲವೆಲ್ಲವೂ ಯೂರೋಪಿನಲ್ಲಿಯೇ ಇರುವಂತೆ ಮಾಡಬೇಕೆಂಬುದು ತಕ್ಕ ಉಪಾಯ. ಫ್ರೆಂಚ್ ಸೈನ್ಯಗಳು ಅಮೆರಿಕ ಹಿಂದುಸ್ಥಾನಗಳಿಗೆ ಹೊರಡದಂತೆಯೂ ಇಂಗ್ಲಂಡನ್ನು ಮುತ್ತದಂತೆಯೂ ನೆರವೇರಿಸುವ ತಂತ್ರ. 'ಎಲ್ಬ ನದೀ ತೀರದಲ್ಲಿ ಯುದ್ಧ ನಡೆಸಿ ಅಮೆರಿಕವನ್ನು ಗೆಲ್ಲುವೆ'ನೆಂದಾಗ ಆತನ ಅರ್ಥ ಅದು. ಏಕೆಂದರೆ ಆ ಕಾಲದ ಯೂರೋಪಿನಲ್ಲಿ ಜರ್ಮನಿಯೆಂಬುದು ಫ್ರಾನ್ಸಿಗೆ ಪ್ರಬಲವೈರಿಯಾಗಿತ್ತು. ಜರ್ಮನಿ ಅಥವಾ ಪ್ರಷ್ಯವನ್ನು ದರ್ಪಿಷ್ಠಪ್ರಭುಗಳಲ್ಲಿ ಗಣ್ಯನಾದ ಫ್ರೆಡರಿಕ್ ಆಗ ತಾನೆ ಆಳಲು ಮೊದಲಿಟ್ಟನು. ಆತನು ಸೇನೆಯನ್ನು ಉತ್ತಮವಾಗಿ ಶಿಕ್ಷಣಗೊಳಿಸಿ ನೆರೆ ರಾಜ್ಯಗಳನ್ನು ಆಕ್ರಮಿಸಿ ತನ್ನ ರಾಜ್ಯವನ್ನು ವಿಸ್ತರಿಸುವುದರಲ್ಲಿದ್ದನು. ಆತನಿಗೆ ಸಹಾಯ ಮಾಡಿದಲ್ಲಿ ಆತನೊಡನೆ ಹೋರಾಡಲು ಸಮಸ್ತ ಫ್ರೆಂಚ್ ಸೈನ್ಯಗಳೂ ಯೂರೋಪಿನಲ್ಲಿಯೇ ಉಳಿದುಕೊಳ್ಳಬೇಕಾಗಿ ಸಂಭವಿಸುವುದೆಂದು ಪಿಟ್ಟನಿಗೆ ಗೊತ್ತು. ಅಮೆರಿಕ ಹಿಂದುಸ್ಥಾನಗಳನ್ನು ಗೆದ್ದುಕೊಳ್ಳಲು ಬ್ರಿಟಿಷರಿಗೆ ಅದೇ ಸುಸಮಯ. ಫ್ರೆಂಚರ ಭಯವಿಲ್ಲದೆ ಬ್ರಿಟಿಷ್ ಸೈನ್ಯಗಳೆಲ್ಲವೂ ಅಮೆರಿಕಕ್ಕೂ ಹಿಂದುಸ್ಥಾನಕ್ಕೂ ಹೊರಡಬಹುದು. ಇಷ್ಟನ್ನೂ ಯೋಚಿಸಿ ಪಿಟ್ ಫ್ರೆಡರಿಕ್ಕಿಗೆ ಆದಷ್ಟು ಸಹಾಯವನ್ನು ನೀಡಿದನು. ಹೇರಳವಾದ ಹಣ ಕಳುಹಿಸಿದನು. ಆ ಹಣದಿಂದ ತನ್ನ ಸೈನ್ಯಗಳಿಗೆ ಸರಿಯಾಗಿ ಸಂಬಳಸಾರಿಗೆಗಳನ್ನು ಸಲ್ಲಿಸಿ ಸಾಕಾದಷ್ಟು ಯುದ್ಧಸಾಮಗ್ರಿಯನ್ನು ಫ್ರೆಡರಿಕ್ ಶೇಖರಿಸಬಲ್ಲವನಾದನು. ಇಂತು ಪಿಟ್ಟನ ಉಪಾಯ ಸಿದ್ಧಿಸಿತು. ಫ್ರೆಂಚರ ಕಡೆ ಅಮೆರಿಕದಲ್ಲಿ '**ಮಾಂಟ್ಕಾಂ**' (Montcalm) ಎಂಬಾತನೂ ಹಿಂದುಸ್ಥಾನದಲ್ಲಿ[1] **ಡುಪ್ಲೆ** (Dupleix) ಎಂಬಾತನೂ ಧೀರರು ಮತ್ತು ದಕ್ಷರು. ಆದರೆ ಯೂರೋಪಿನಲ್ಲಿಯೇ ತಮ್ಮ ಸರ್ವಶಕ್ತಿಯನ್ನು ಪ್ರಯೋಗಿಸಿದ ಫ್ರಾನ್ಸಿನ ಆಡಳಿತಗಾರರು ಆ ಧೀರರಿಗೆ ಸಾಕಾದಷ್ಟು ಸೈನ್ಯವನ್ನು ಕಳುಹಿಸಿಕೊಡಲಾರದಿದ್ದರು. ಬ್ರಿಟಿಷರ ನೌಕಾಬಲ ಬೇರೆ ಸಮುದ್ರಮಾರ್ಗಗಳಲ್ಲಿ ಹೊಂಚಿಕೊಂಡು ಫ್ರಾನ್ಸಿನಿಂದ ಅಮೆರಿಕಹಿಂದುಸ್ಥಾನಗಳಿಗೆ ಸಹಾಯ ಹೊರಡದಂತೆ ಅಡ್ಡಿ ಮಾಡಿತು. ಕನಡದಲ್ಲಿ ೧೭೫೯ರಲ್ಲಿ ಯುದ್ಧ ನಡೆಸಿ ಸೋತು ಮಾಂಟ್ಕಾಂ

[1] ಡುಪ್ಲೆಯನ್ನು ಸಪ್ತವಾರ್ಷಿಕ ಯುದ್ಧಕ್ಕೆ ಮೊದಲೆ ಫ್ರಾನ್ಸಿಗೆ ಕರೆಸಿಕೊಂಡಿದ್ದರು. ಆದಾಗ್ಯೂ ಹಿಂದುಸ್ಥಾನದಲ್ಲಿ ಫ್ರೆಂಚ್ ನಾಯಕರಲ್ಲಿ ಆತನು ಪ್ರಸಿದ್ಧ.

ಮೃತಪಟ್ಟನು. ಆತನನ್ನು ಗೆದ್ದ **ವುಲ್ಫ** (Wolfe) ಎಂಬ ಬ್ರಿಟಿಷ್ ದಳಪತಿಯನ್ನು ಪಿಟ್ಟನೇ ಆರಿಸಿ ಕಳುಹಿಸಿದ್ದನು. ಕ್ವೆಬೆಕ್ ಬಳಿ ನಡೆದ ಆ ಕದನದ ಪರಿಣಾಮವಾಗಿ ಕ್ವೆಬೆಕ್ ಬ್ರಿಟಿಷರ ಕೈಸೇರಿತು. ಕನಡ ಪ್ರಾಂತದಲ್ಲಿ ಫ್ರೆಂಚರ ಆಡಳಿತ ಕೊನೆಗಂಡಿತು. ಇತ್ತ ಹಿಂದುಸ್ತಾನದಲ್ಲಿ **ಪಲಾಸಿ** (Plassey) ಕದನ ೧೭೫೭ರಲ್ಲಿ ನಡೆದು **ಕ್ಲೈವ್** ಜಯಶಾಲಿಯಾಗಿದ್ದನು. ಬ್ರಿಟಿಷರದೇ ಮೇಲ್ಗೈಯಾಯಿತು.

೧೭೬೩ರಲ್ಲಿ **ಪ್ಯಾರಿಸ್ ಕರಾರಿನಿಂದ** ಯುದ್ಧ ಮುಕ್ತಾಯವಾಯಿತು. ಬ್ರಿಟಿಷರಿಗೆ ಅಮೆರಿಕ ಹಿಂದುಸ್ತಾನಗಳಲ್ಲಿ ಮಾತ್ರವಲ್ಲದೆ ಆಫ್ರಿಕದಲ್ಲಿಯೂ ವೆಸ್ಟಿಂಡೀಸ್ ದ್ವೀಪಗಳಲ್ಲಿಯೂ ಕ್ಷೇತ್ರಪ್ರಾಪ್ತಿ ನಿಶ್ಚಿತವಾಯಿತು. ತಾವು ಕಟ್ಟಿಕೊಂಡಿದ್ದ ಅನೇಕ ಕಾಲೊನಿಗಳನ್ನು ಫ್ರೆಂಚರು ಕಳೆದುಕೊಳ್ಳಬೇಕಾಯಿತು. ಪ್ರಷ್ಯದ ಫ್ರೆಡರಿಕ್ ತನ್ನ ರಾಜ್ಯವನ್ನು ವಿಸ್ತರಿಸಿಕೊಂಡು ಜರ್ಮನಿಯನ್ನು ಪ್ರಾಬಲ್ಯಕ್ಕೇರಿಸುವುದರಲ್ಲಿ ಹೆಜ್ಜೆಯಿಟ್ಟನು. ಹದಿನಾಲ್ಕನೆ ಲೂಯಿಯ ಕಾಲದಿಂದ ಬಡತನದಲ್ಲಿದ್ದ ಫ್ರಾನ್ಸ್ ಧನನಷ್ಟವನ್ನೂ ಕಾಲೊನಿಗಳ ನಷ್ಟವನ್ನೂ ಸಹಿಸಬೇಕಾಯಿತು.

ಮುಖ್ಯಪ್ರಶ್ನೆ ೭೦: ಪಿಟ್ಟನ ಉದ್ದೇಶಗಳಲ್ಲಿ ಅವುದು ಸಫಲವಾಗಲಿಲ್ಲ? ಏತಕ್ಕೆ?

ಬ್ರಿಟಿಷರಿಗೆ ಕ್ಷೇತ್ರಲಾಭವೇನೋ ಆಯಿತು. ಆದರೆ ಯುದ್ಧಗಳಲ್ಲಿ ಬಹಳ ವೆಚ್ಚವಾಗಿತ್ತು. ಈ ಅಂಶದಿಂದಲೇ ಮುಂದೆ ತೋರಿದ ತೊಂದರೆಯೆಲ್ಲ. ಅಮೆರಿಕದಲ್ಲಿ ನೆಲೆಸಿದ್ದ ಬ್ರಿಟಿಷರಿಗೆ ಫ್ರೆಂಚರು ಸೋತ ಕಾರಣದಿಂದ ಅನುಕೂಲವೇ ಆಯಿತು. ಆದ್ದರಿಂದ ಪ್ರಯೋಜನ ಪಡೆದ ಅಮೆರಿಕದವರೂ ವೆಚ್ಚದ ಪಾಲನ್ನು ವಹಿಸಿ ತೆರಿಗೆ ಕೊಡುವುದು ಯುಕ್ತವೆಂದು ಬ್ರಿಟಿಷ್ ಮಂತ್ರಿಗಳಲ್ಲಿ ಕೆಲವರು ಅಭಿಪ್ರಾಯಪಟ್ಟರು. ತೆರಿಗೆಯನ್ನು ಹೊರಿಸುವ ಮೊದಲು ಕಾಮನ್ಸ್ ಸಭಿಕರ ಒಪ್ಪಿಗೆಯನ್ನು ಪಡೆಯುವಂತೆಯೇ ಅಮೆರಿಕದ ನಿವಾಸಿಗಳ ಒಪ್ಪಿಗೆಯನ್ನೂ ಪಡೆದಿದ್ದರೆ ಪ್ರಾಯಶಃ ಅನರ್ಥವಾಗುತ್ತಿರಲಿಲ್ಲ. ಆದರೆ ಆ ವೇಳೆಯಲ್ಲಿ ಇಂಗ್ಲೆಂಡಿಗೆ ರಾಜನಾಗಿದ್ದಾತನಿಗೆ ದರ್ಪಿಷ್ಠಪ್ರಭುವಾಗಿರಬೇಕೆಂಬ ಆಸೆ. ಅಮೆರಿಕದವರ ಒಪ್ಪಿಗೆಯನ್ನೇತಕ್ಕೆ ಕೇಳಬೇಕೆಂದು ತಿಳಿಯಲಾರದವನು. ರಾಜಾಜ್ಞೆಯಾದ ಮೇಲೆ ಕೊಟ್ಟೇಕೊಡಬೇಕೆನ್ನುವುದು ಆತನ ಹಟವಾಯಿತು. ಆ ವೇಳೆಗೆ ವೃದ್ಧನಾಗಿದ್ದ ಪಿಟ್ಟನು ಅವಿವೇಕವಾದೀತೆಂದು ಕೊಟ್ಟ ಎಚ್ಚರದ ಮಾತುಗಳೆಲ್ಲ ವ್ಯರ್ಥವಾದುವು. ವೆಚ್ಚದ ಪಾಲನ್ನು ಅಮೆರಿಕದವರು

ವಹಿಸತಕ್ಕದು ನ್ಯಾಯವಾದಾಗ್ಯೂ ಅಧಿಕಾರಬಲದಿಂದ ತೆಂಗೆ ಹೊರಿಸಿದಲ್ಲಿ ವಿರೋಧವು ತೋರುವುದೆಂದು ಪಿಟ್ಟನು ವಿಶದಗೊಳಿಸಿದನು. ಆತನ ಕಟ್ಟ ಕಡೆಯ ಭಾಷಣವೆಲ್ಲ ಆ ಬಗೆಯ ಉದ್ಗಾರವೇ. ಮೂರ್ಖತನ ವಹಿಸಿದ್ದ ದೊರೆ ಪಿಟ್ಟನ ಹಿತವಾಕ್ಯಗಳನ್ನು ಲಕ್ಷ್ಯವಮಾಡಲಿಲ್ಲ. ಆ ಭಾಷಣ ಕೊಟ್ಟ ಸ್ವಲ್ಪ ಕಾಲದಲ್ಲಿಯೇ ಪಿಟ್ಟನು ತೀರಿಕೊಂಡನು.

ಆ ಅವಿವೇಕದ ಪರಿಣಾಮವನ್ನು ಮುಂದಿನ ಅಧ್ಯಾಯದಲ್ಲಿ ನೋಡೋಣ.

ಅಭ್ಯಾಸಗಳು

೧. ಪೃಥ್ವಿಯ ಯಾವ ಭಾಗಗಳಲ್ಲಿ ಬ್ರಿಟಿಷರೂ ಫ್ರೆಂಚರೂ ಕಾಲೊನಿಗಳನ್ನು ಸ್ಥಾಪಿಸಿದರು ? ಏಕೆ ?

೨. ಅತ್ಯಲ್ಪಾವಧಿಯಲ್ಲಿ ಬ್ರಿಟಿಷರೂ ಫ್ರೆಂಚರೂ ಹಿಂದುಸ್ಥಾನದಲ್ಲಿ ಅಷ್ಟು ಪ್ರಾಬಲ್ಯವನ್ನು ಪಡೆಯಬಲ್ಲರಾದುದು ಹೇಗೆ ? ಪರಿಣಾಮವೇನಾಯಿತು ?

೩. ಸಪ್ತವಾರ್ಷಿಕಯುದ್ಧದ ಮುಖ್ಯಸಂಗತಿಗಳನ್ನೂ ಪರಿಣಾಮಗಳನ್ನೂ ವಿವರಿಸಿ. (ಬೇರಾವುದಾದರೂ ಗ್ರಂಥದಿಂದ ಆ ಯುದ್ಧದ ವೃತ್ತಾಂತವನ್ನು ಇನ್ನೂ ವಿಸ್ತಾರವಾಗಿ ತಿಳಿಯಿರಿ.)

೪. ಮಹಾಪುರುಷನೆಂದೂ ರಾಷ್ಟ್ರನೀತಿಜ್ಞನೆಂದೂ ಪಿಟ್ಟನನ್ನು ಕರೆಯಬಹುದೇ ? ದೃಷ್ಟಾಂತಸಹಿತ ಸಮರ್ಥಿಸಿ.

೧೯ನೇ ಅಧ್ಯಾಯ

ಜಾರ್ಜ್ ವಾಷಿಂಗ್ಟನ್ ಮತ್ತು ಅಮೆರಿಕದ ಸ್ವಾತಂತ್ರ್ಯಸಾಧನೆ

ಮುಖ್ಯಪ್ರಶ್ನೆ ೭೧: ಮೂರನೆ ಜಾರ್ಜ್ ದೊರೆ ಅಮೆರಿಕದ ನೆಲಸುಗಾರರ ಮೇಲೆ ತೆರಿಗೆಯನ್ನು ಹೊರಿಸಲು ಇಷ್ಟಪಟ್ಟುದುದೇಕೆ? ಅವರು ಅದನ್ನು ವಿರೋಧಿಸಿದುದೇಕೆ?

ಅವಸಾನ ಕಾಲದಲ್ಲಿ ಹಿರೇ ಪಿಟ್ಟನು ಅಮೆರಿಕದ ನೆಲಸುಗಾರರ ಮೇಲೆ ತೆರಿಗೆ ಹೊರಿಸುವುದು ಅನ್ಯಾಯವೆಂದು ಘೋಷಿಸಿದ್ದನಷ್ಟೆ. ಆ ನಿವಾಸಿಗಳೇ ಈಗ ಅಮೆರಿಕದ ಸಂಯುಕ್ತಸಂಸ್ಥಾನಗಳೆಂಬ ವಿಶಾಲ ಸಮುದಾಯ ರಾಷ್ಟ್ರವನ್ನು ಕಟ್ಟಿಕೊಂಡು ಜಗತ್ತಿನಲ್ಲಿ ಅಗ್ರಗಣ್ಯರಾಗಿದ್ದಾರೆ. ಆ ಜನರ ವೃತ್ತಾಂತವನ್ನು ನಾವು ತಿಳಿದುಕೊಳ್ಳಬೇಕು.

ಆ ಕಾಲದಲ್ಲಿ ಕಾಲೊನಿಗಳನ್ನು ಕಟ್ಟಿಕೊಂಡಿದ್ದ ಎಲ್ಲ ರಾಷ್ಟ್ರಗಳವರ ಮನಸ್ಸಿನಲ್ಲಿಯೂ ತಮಗೆ ಹೆಚ್ಚಿನ ಸಂಪತ್ತನ್ನೊದಗಿಸುವುದಕ್ಕಾಗಿ ಕಾಲೊನಿಗಳಿರತಕ್ಕದ್ದೆಂಬ ಅಭಿಪ್ರಾಯವಿತ್ತು. ಕಾಲೊನಿಗಳಿರುವುದು ಮಾತೃದೇಶದ ಪ್ರಯೋಜನಕ್ಕಾಗಿ ಎಂಬ ನಂಬಿಕೆಯಿತ್ತು. ಮೆಕ್ಸಿಕೊ ದಕ್ಷಿಣ ಅಮೆರಿಕಗಳ ಗಣಿಗಳಿಂದ ಸ್ಪೈನ್ನಿಗೆ ಚಿನ್ನ ಬೆಳ್ಳಿ ಬರುತ್ತಿತ್ತು. ಪೋರ್ಚುಗೀಸರು ಡಚ್ಚರು ಮತ್ತು ಬ್ರಿಟಿಷರು ಕಟ್ಟಿದ ಕಾಲೊನಿಗಳಿಂದ ರೇಷ್ಮೆ, ಹತ್ತಿ, ಹೊಗೆಸೊಪ್ಪು ಮತ್ತು ಸಂಬಾರದದಿನಸುಗಳ ವ್ಯಾಪಾರ ವೃದ್ಧಿಯಾಗಿ ಮಾತೃದೇಶಗಳಿಗೆ ವ್ಯಾಪಾರದ ಲಾಭವು ದೊರಕುತ್ತಿತ್ತು. ರಾಜರಿಗೂ ಮಂತ್ರಿಸಾಮಾಜಿಕರಿಗೂ ಕಾಲೊನಿಗಳಿಂದ ಸ್ವದೇಶಕ್ಕೆ ಸಂಪಾದನೆಯಾಗತಕ್ಕುದೆಂಬ ಸೂತ್ರ ಬಲವಾಗಿ ಅಂಟಿತ್ತು. ದರ್ಪದಿಂದಾಳಬೇಕೆಂದು ಮೊದಲಿಟ್ಟ ಮೂರನೆ ಜಾರ್ಜ್ ದೊರೆಗೆ ಜಾಣ್ಮೆಗೆ ಬದಲು ಇದ್ದುದು ಮೂರ್ಖತ್ವ. ಫ್ರೆಂಚರಿಂದ ಕಾಲೊನಿಗಳನ್ನು ರಕ್ಷಿಸಲು ಫ್ರೆಂಚರೊಂದಿಗೆ ನಡೆಸಿದ ಯುದ್ಧದ ವೆಚ್ಚದಲ್ಲಿ ಕಾಲೊನಿಗಳವರು ಪಾಲನ್ನು ಹೊರಬೇಕಾದುದು ಆತನಿಗೆ ನ್ಯಾಯವಾಗಿ ಕಂಡಿತು. ಪಡೆದ ಪ್ರಯೋಜನಕ್ಕಾಗಿ ಹಣ ಸಲ್ಲಿಸಬೇಕಾಗಿದ್ದುದು ನ್ಯಾಯವೇ ಹೌದು. ಆದರೆ ಆತನು ತನ್ನ ಆಲೋಚನೆಯಲ್ಲಿ ನೆಲಸುಗಾರರನ್ನೂ ಸೇರಿಸಿಕೊಂಡು

ಅವರ ಮನಸ್ಸುಗಳನ್ನೊಪ್ಪಿಸಿ ಆ ತರುವಾಯ ತೆರಿಗೆ ಹೊರಿಸದೆ ಮೊದಲೇ ಬಲವಂತದಿಂದ ಅವರ ಮೇಲೆ ತೆರಿಗೆಗಳನ್ನು ಹೊರಿಸಿದನು. ಅವರಾದರೋ ಬಲಪ್ರದರ್ಶನಕ್ಕೆ ಅಂಜುವ ಸ್ವಭಾವದವರಾಗಿರಲಿಲ್ಲ. ರಾಜಪುರುಷರ ಹಂಗಿಲ್ಲದಂತೆ ತಮಗಿಷ್ಟವಾದ ಮತವನ್ನು ಅನುಸರಿಸಿಕೊಂಡಿರಲು ದೇಶಾಂತರ ಹೊರಟವರ ಸಂತತಿಯವರು. ಪ್ರಾಣಭಯವೆನ್ನದೆ ತಮ್ಮ ಹೆಂಡಿರುಮಕ್ಕಳೊಡನೆ ಸಣ್ಣ ಹಡಗುಗಳಲ್ಲಿ ಕುಳಿತು ಅಟ್ಲಾಂಟಿಕ್‌ಸಾಗರವನ್ನು ದಾಟಿ, ಅಜ್ಞಾತಪ್ರದೇಶದಲ್ಲಿ ನೆಲೆಸಿ, ಅರಣ್ಯಗಳನ್ನು ಕಡಿದು ನೆಲಸಮಮಾಡಿ ಉತ್ತು ಮನೆ ಮಂದಿರಗಳನ್ನು ಕಟ್ಟಿ ತಾಮ್ರ ವರ್ಣದವರೊಂದಿಗೆ ಹೆಣಗಾಡಿದ ಜನರ ವಂಶಜರು. ರಾಜನ ಅಧಿಕಾರಬಲಕ್ಕೆ ಯಾರು ಹೆದರಿದರೂ ಅವರು ಮಾತ್ರ ಹೆದರತಕ್ಕವರಲ್ಲ. ವಂಶಪರಂಪರೆಯಾಗಿ ಪ್ರಯಾಸಪಟ್ಟು ನೆಲಸುಗಳನ್ನು ಮಾಡಿಕೊಂಡ ತಾವು ಬ್ರಿಟಿಷ್‌ದೊರೆಯೆನಿಸಿದಾತನ ಆಜ್ಞೆಯಂತೆ ಏಕೆ ವರ್ತಿಸಬೇಕೆಂದು ಕೇಳಿದರು. ಬ್ರಿಟಿಷ್ ದ್ವೀಪ ನಿವಾಸಿಗಳಲ್ಲಿ ಅವರಿಗೆ ಬಾಂಧವ್ಯಮೈತ್ರಿಗಳಿರಬಹುದಾದರೂ ಅಲ್ಲಿಗೆ ರಾಜನೆನಿಸಿದಾತನಲ್ಲಿ ಯಾವ ವಿಶ್ವಾಸವೂ ಇರಲಿಲ್ಲ.

ಇಂತಹ ಜನರ ಮನಸ್ಸನ್ನು ಕಂಡುಹಿಡಿಯುವ ಯೋಗ್ಯತೆ ಆ ಜಾರ್ಜ್ ದೊರೆಯಲ್ಲಿರಲಿಲ್ಲ. ತಾನು ಯೋಚಿಸಿದ ಕರ್ತವ್ಯ ನ್ಯಾಯವಾದುದೆಂದು ಕಾಲೊನಿಗಳವರಿಗೆ ವಿವರಿಸಿಕೊಟ್ಟು ಅವರ ಸಮ್ಮತಿಪಡೆದ ತರುವಾಯ ತೆರಿಗೆಯೆತ್ತಿದ್ದರೆ ಅವರೂ ಪ್ರಾಯಶಃ ಒಗ್ಗಿ ವರ್ತಿಸುತ್ತಿದ್ದರು. ಆ ಅಂಶವನ್ನು ಅರ್ಥಮಾಡಿಕೊಂಡ ಪಿಟ್ಟನು ಕೊಟ್ಟ ಎಚ್ಚರಿಕೆಯನ್ನು ರಾಜನು ಲಕ್ಷ್ಯ ಮಾಡಲಿಲ್ಲ. ಭೃತ್ಯರಂತಿದ್ದ ಮಂತ್ರಿಗಳನ್ನಿಟ್ಟುಕೊಂಡು ರಾಜನು ದೂರಾಲೋಚನೆಮಾಡದೆ ಹಟವನ್ನು ಸಾಧಿಸುವ ಯತ್ನ ಮಾಡಿದನು. ತೆರಿಗೆ ಕೊಡುವುದಿಲ್ಲವೆಂದು ಕಾಲೊನಿಗಳವರು ಮುಷ್ಕರ ಹಿಡಿದರು. ರಾಜನು ಅವರನ್ನು ದಂಡಿಸಲು ಸೈನ್ಯವನ್ನು ಕಳುಹಿಸಿದನು. ಯುದ್ಧವೇ ಪರಿಣಾಮವಾಯಿತು.


ಕಾಲೊನಿಗಳ ಜನರು ಯುದ್ಧಕ್ಕೆ ಸನ್ನದ್ಧರಾಗಿಯೂ ಇರಲಿಲ್ಲ, ಯುದ್ಧದ ಅನುಭವಪಡೆದವರಾಗಿಯೂ ಇರಲಿಲ್ಲ. ಮೂರು ಖಂಡಗಳಲ್ಲಿ ಫ್ರೆಂಚರೊಡನೆ ಕಾದಾಡಿ ಗೆದ್ದಿದ್ದ ಸುಶಿಕ್ಷಿತ ಬ್ರಿಟಿಷ್ ಸೈನ್ಯಗಳನ್ನು ಕಾಲೊನಿಗಳವರು ಪ್ರತಿಭಟಿಸಿ ಸೋಲಿಸುವುದಾದರೂ ಹೇಗೆ? ತನ್ನ ಸೈನ್ಯದೆದುರಿನಲ್ಲಿ ಕಾಲೊನಿಗಳವರು ಸುಲಭವಾಗಿ ಸೋತುಹೋಗುವರೆಂದು ರಾಜನು ಭಾವಿಸಿದನು. ಮೊದಮೊದಲು ನಡೆದುದೂ ಹಾಗೆಯೇ. ಆದರೆ ಕಾಲೊನಿಜನರಲ್ಲಿ ಸಂಕಲ್ಪಬಲವಿತ್ತು. ಹಿಂದೆ ಫ್ರೆಂಚರೆದುರಿನಲ್ಲಿ ಯುದ್ಧಮಾಡಿ ಅನುಭವಪಡೆದಿದ್ದ

ತಮ್ಮವರೇ ನಾಯಕರಾಗಿದ್ದರು. ಅವರಲ್ಲಿ ಸಮರ್ಥರಾದವರು ಹಲಕೆಲವರಿದ್ದರು. ಅವರಲ್ಲಿ ಅತಿ ಸಮರ್ಥನೂ ಚತುರನೂ ಆದವನು **ಜಾರ್ಜ್ ವಾಷಿಂಗ್ಟನ್** (George Washington).

ಮುಖ್ಯಪ್ರಶ್ನೆ ೬೨ : ಅಮೆರಿಕನ್ನರಿಗೆ ನಾಯಕನಾಗಿರಲು ವಾಷಿಂಗ್ಟನ್ ಒಪ್ಪಿದ್ದೇಕೆ? ಎಂತೆಂತಹ ಕಷ್ಟಗಳನ್ನು ಆತನು ನಿವಾರಿಸಬೇಕಾಯಿತು?

ನೂರೈವತ್ತು ವರ್ಷಗಳ ಹಿಂದೆ **ಸರ್ ವಾಲ್ಟರ್ ರಾಲಿ** (Sir Walter Raleigh) ಎಂಬ ಇಂಗ್ಲಿಷ್ ನಾವಿಕಸಾಹಸಿಯಿದ್ದನು. ಆಲೂಗಡ್ಡೆ ಹೊಗೆಸೊಪ್ಪುಗಳನ್ನು ಯೂರೋಪಿಗೆ ಮೊದಲು ತಂದವನು ಅವನೇ. ಆತನು ಎಲಿಸಬೆತ್ ರಾಣಿಯ ಹೆಸರಿಟ್ಟು **ವರ್ಜಿನಿಯ** (Virginia) ಎಂಬ ಕಾಲೊನಿಯನ್ನು ಸ್ಥಾಪಿಸಿದ್ದನು. ಕಾಲಕ್ರಮದಲ್ಲಿ ಆ ಕಾಲೊನಿ ವೃದ್ಧಿಗೊಂಡಿತ್ತು. ಜಾರ್ಜ್ ವಾಷಿಂಗ್ಟನ್ ಆ ಕಾಲೊನಿಯಲ್ಲಿ ೧೭೩೨ ರಲ್ಲಿ ಜನಿಸಿದನು.

ಆತನ ತಂದೆ ಬೇಸಾಯಗಾರ. ಜಾರ್ಜ್ ಬೇಸಾಯಗಾರನಾಗಿಯೇ ಬೆಳೆದನು. ನಲವತ್ತನೆ ವಯಸ್ಸಿನವರೆಗೆ ಧಾನ್ಯ ಹೊಗೆಸೊಪ್ಪು ಬೆಳೆಯುತ್ತಿದ್ದ ಹೊಲಗಳನ್ನು ನೋಡಿಕೊಳ್ಳುವುದೇ ಆತನ ಕೆಲಸ. ಫ್ರೆಂಚರೊಡನೆ ಜಗಳರೇಗಿದಾಗ ಮಾತ್ರ ಯುದ್ಧದಲ್ಲಿ ಸೇರಿ ಅಲ್ಪಸ್ವಲ್ಪ ಯುದ್ಧಾನುಭವ ಪಡೆದಿದ್ದನು. ಫ್ರೆಂಚರೊಂದಿಗೆ ಹೋರಾಟವು ಮುಗಿದ ಬಳಿಕ ಅವರ ಕಾಲೊನಿಗಳು ಲಭಿಸಿದವು. ಆಗ ಜಾರ್ಜ್ ಮತ್ತೆ ಬೇಸಾಯಗಾರನಾದನು. ಮಿಸಿಸಿಪ್ಪಿನದಿಯ ಬಳಿಯಿದ್ದ ಭೂಮಿಗಳನ್ನು ಕಟ್ಟಿಕೊಂಡು ವ್ಯವಸಾಯದಲ್ಲಿ ಅಭಿವೃದ್ಧಿ ಪಡೆಯುವ ಆಸೆ ಆತನಿಗೆ. ಆದರೆ ಆ ಪ್ರದೇಶದಲ್ಲಿದ್ದ ತಾಮ್ರವರ್ಣದವರೊಂದಿಗೆ ವೈಷಮ್ಯ ಬೇಡವೆಂದು ನಿಶ್ಚಯಿಸಿ ಬ್ರಿಟಿಷ್



ಜಾರ್ಜ್ ವಾಷಿಂಗ್ಟನ್

ಸರ್ಕಾರದವರು ಓಹಿಯೋ ನದಿಯ ಬಲಗಡೆಯಲ್ಲಿ ಕಾಲೊನಿಗಳವರು ಕ್ಷೇತ್ರ ಸಂಪಾದಿಸಬಾರದೆಂದು ಕಟ್ಟಳೆಯನ್ನು ಮಾಡಿದರು. ದಕ್ಷಿಣದ ಕಾಲೊನಿಗಳವರಲ್ಲಿ ಈ ಕಟ್ಟಳೆ ಅತೃಪ್ತಿಯನ್ನು ಹುಟ್ಟಿಸಿತು. ಉತ್ತರದ ಪ್ಯೂರಿಟನ್ ನಿವಾಸಿಗಳಿಗೆ ತೆರಿಗೆ ವಿಚಾರದಲ್ಲಿ ಅಸಮಾಧಾನ ರೋಷಗಳು ತೋರಿದಂತೆಯೇ ದಕ್ಷಿಣನಿವಾಸಿಗಳಿಗೂ ಅತೃಪ್ತಿ ರೋಷಗಳುಂಟಾದವು. ಔತ್ತರೇಯ ದಾಕ್ಷಿಣಾತ್ಯರಿಬ್ಬರೂ ಬ್ರಿಟಿಷರನ್ನು ಆಕ್ಷೇಪಿಸಿದರು. ೧೭೭೫ ರವೇಳೆಗೆ ಪ್ರಕಟವಾಗಿ ಯುದ್ಧವು ಮೊದಲಾಯಿತು. ಆಗ ಕಾಲೊನಿಗಳವರು ಮೊದಲು ಮಾಡಬೇಕಾಗಿದ್ದುದೇನು? ಸೈನ್ಯವನ್ನು ಸಂಗ್ರಹಿಸಿ ನಡೆಸಬಲ್ಲ ನಾಯಕನೊಬ್ಬನನ್ನು ಆರಿಸಬೇಕಾಯಿತು. ವಾಷಿಂಗ್ಟನ್ ನಾಯಕನಾಗಿರಲೆಂದು ಎಲ್ಲರೂ ಅಪೇಕ್ಷಿಸಿ ಆತನಿಗೆ ಅಧಿಕಾರವನ್ನೊಪ್ಪಿಸಿದರು.

ಅಷ್ಟು ದೊಡ್ಡ ಪದವಿಯನ್ನು ವಹಿಸಿಕೊಳ್ಳಲು ವಾಷಿಂಗ್ಟನ್ ಹಿಂದೆಗೆದನು. ತಕ್ಕಷ್ಟು ಯೋಗ್ಯತೆಯು ತನ್ನಲ್ಲಿಲ್ಲವೆಂದು ಶಂಕಿಸಿದನು. ಆದರೆ ತನ್ನ ಸಹವಾಸಿಗಳೆಲ್ಲರೂ ತನ್ನಲ್ಲಿ ತೋರಿದ ವಿಶ್ವಾಸವನ್ನು ಕಂಡು ಧೈರ್ಯಗೊಂಡು ಆ ಪದವಿಯನ್ನು ವಹಿಸಿಕೊಂಡನು; ಅಸಾಧಾರಣಸಾಮರ್ಥ್ಯವನ್ನು ಬೀರಿದನು; ಯಾವ ಬಗೆಯ ಸಂಬಳವೂ ತನಗೆ ಬೇಡವೆಂದನು. ಸೈನಿಕರಾಗಿ ಸೇರಿದವರೆಲ್ಲರೂ ಹೊಲಗಳಲ್ಲಿಯೂ ಕಾಡುಗಳಲ್ಲಿಯೂ ಶ್ರಮಿಸಿ ದೃಢಕಾಯಗಳನ್ನೇನೋ ಪಡೆದಿದ್ದರು. ಆದರೆ ಅವರಿಗೆ ಸೈನ್ಯಶಿಷ್ಟಿ (discipline) ಯೆಂಬುದು ಅಭ್ಯಾಸದಲ್ಲಿಯೇ ಇರಲಿಲ್ಲ. ಯುದ್ಧ ನಡೆಸಲು ಬೇಕಾದ ಸಾಮಗ್ರಿಯೂ ಇರಲಿಲ್ಲ. ಆದುದರಿಂದ ಮೊದಮೊದಲು ವಾಷಿಂಗ್ಟನ್ನನಿಗೆ ಅತಿಪ್ರಯಾಸವಾಯಿತು. ಒಂದೂವರೆವರ್ಷ ಸೋಲಿನ ಮೇಲೆ ಸೋಲು ಸಂಭವಿಸಿತು. ಆದರೂ ಧೈರ್ಯಗೆಡದೆ ವಾಷಿಂಗ್ಟನ್ ಸೋತವರನ್ನೇ ಪುನಃ ಪುನಃ ಹಿಡಿದು ನಿಲ್ಲಿಸಿದನು. ಸರ್ವಪ್ರಯತ್ನಗಳಿಂದಲೂ ಅವರನ್ನು ಸುಶಿಕ್ಷಿತರನ್ನಾಗಿ ಮಾಡುತ್ತಾ ಯುದ್ಧಸಾಮಗ್ರಿಯನ್ನು ಶೇಖರಿಸಿದನು. ೧೭೭೭ ರ ವೇಳೆಗೆ ಕಾಲಗತಿಯು ಬದಲಾಯಿತು. ಬಾರಿಬಾರಿಗೆ ಸೋತರೂ ಸ್ಥೈರ್ಯ ವಹಿಸಿದ್ದವರಿಗೆ ಜಯವೊದಗಲಾರಂಭವಾಯಿತು. ಇನ್ನು ಮುಂದೆ ಅವರನ್ನು ಅಮೆರಿಕನ್ನರೆಂದು ಕರೆಯೋಣ.

ಮುಖ್ಯಪ್ರಶ್ನೆ ೭೩: ಕಾಲೊನಿಗಳ ಜನರು ಸ್ವಾತಂತ್ರ್ಯವನ್ನು ಹೇಗೆ ಸಾಧಿಸಿದರು? ಅವರು ಯಾವ ತೊಂದರೆಗಳನ್ನು ಪರಿಹರಿಸಿಕೊಳ್ಳಬೇಕಾಯಿತು?

ಬ್ರಿಟಿಷ್ ಪಕ್ಷದ ಅಧಿಕಾರಿಗಳೂ ಸೈನಿಕರೂ ತಮ್ಮ ಸ್ವಜನರೊಂದಿಗೆ ಯುದ್ಧಮಾಡಲು ಇಷ್ಟಪಡದೆ ಅರೆಮನಸ್ಸಿನವರಾಗಿದ್ದುದರಿಂದ ಕಾಲೊನಿಗಳವರಿಗೆ ಅನುಕೂಲವಾದುದು ನಿಶ್ಚಯ. ಆದರೆ ದೊಡ್ಡ ಅನುಕೂಲವು ಇಂಗ್ಲಂಡಿನಲ್ಲಿ ಪಿಟ್ಟನಂತಹ ಯುದ್ಧಸಚಿವನಿಲ್ಲದೆ ಇದ್ದುದು. ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳಲು ಫ್ರೆಂಚರಿಗೆ ಇದು ಸುಸಮಯವಾಗಿ ಕಂಡುದು ಇನ್ನೊಂದಂಶ. ಅಮೆರಿಕನ್ನರ ಸಹಾಯಕ್ಕಾಗಿ ಫ್ರಾನ್ಸಿನಿಂದ ಹಣವೂ ಬಂತು, ಸೈನಿಕರೂ ಬಂದರು. ಎಲ್ಲಕ್ಕೂ ಮುಖ್ಯವಾದ ಅಂಶ ೧೭೭೭ರಲ್ಲಿ ನಡೆಯಿತು. **ಸರಟೋಗ (Saratoga)** ಎಂಬೆಡೆಯಲ್ಲಿ ಅಮೆರಿಕನ್ನರು ಬ್ರಿಟಿಷ್ ಸೈನ್ಯವನ್ನು ಸುತ್ತಿಕೊಂಡು ಅಷ್ಟದಿಗ್ಬಂಧನ ಮಾಡಿದ ಸಮಯ. ಆಗ ಫ್ರೆಂಚ್ ಹಡಗುಪಡೆ ಬಂದು ಕಾದಿದ್ದು ಬ್ರಿಟಿಷರಿಗೆ ಸಹಾಯಮಾಡಲು ಹೊರಟ ಬ್ರಿಟಿಷ್ ಹಡಗುಗಳನ್ನು ಮಾರ್ಗದಲ್ಲಿ ಅಡ್ಡಿಪಡಿಸಿತು. ದಿಗ್ಬಂಧನಕ್ಕೊಳಗಾದ ಬ್ರಿಟಿಷ್ ಸೈನ್ಯವೆಲ್ಲವೂ ನಿರಾಹಾರಸ್ಥಿತಿಯಲ್ಲಿರಲಾರದೆ ಅಮೆರಿಕನ್ನರಿಗೆ ಶರಣೆಂದಿತು. ಸಮುದ್ರ ಮಾರ್ಗಗಳ ಸ್ವಾಧೀನತೆಯು ಎಷ್ಟು ಮುಖ್ಯವೆಂಬುದು ಮತ್ತೊಮ್ಮೆ ನಿದರ್ಶನಕ್ಕೆ ಬಂತು. ಸಮುದ್ರ ಬಲದಲ್ಲಿ ಫ್ರೆಂಚರು ಮೇಲಾಗಿದ್ದುದರಿಂದ ಬ್ರಿಟಿಷರು ಸೋಲಬೇಕಾಗಿ ಸಂಭವಿಸಿತು. ಫ್ರೆಂಚರೊದಗಿಸಿದ ಸಹಾಯದಿಂದ ಅಮೆರಿಕನ್ನರು ಜಯಶಾಲಿಗಳಾದರು. ಹಿಂದೆ ಹೊಸ ಇಂಗ್ಲಂಡ್ ಎಂದೋ ಬ್ರಿಟಿಷ್ ಕಾಲೊನಿಯೆಂದೋ ಎನಿಸಿದ್ದ ಪ್ರದೇಶವು ಸ್ವತಂತ್ರವೂ ಪ್ರತ್ಯೇಕವೂ ಆದ ರಾಷ್ಟ್ರವೆಂದು ಜಾರ್ಜ್ ದೊರೆಯು ೧೭೮೩ರಲ್ಲಿ ಒಪ್ಪಿಕೊಳ್ಳಬೇಕಾಯಿತು. ಈ ಸ್ವಾತಂತ್ರ್ಯ ಸಾಧನೆಯ ಉದ್ಯಮದಲ್ಲಿ ಕನಡ ಮತ್ತು ವೆಸ್ಟಿಂಡೀಸ್ ದ್ವೀಪಗಳ ಬ್ರಿಟಿಷರು ಸೇರಿಕೊಳ್ಳಲಿಲ್ಲ. ಆದ್ದರಿಂದ ಅವರು ಇಂದಿಗೂ ಬ್ರಿಟಿಷ್ ಪ್ರಜೆಗಳಾಗಿಯೇ ಇರುವರು.

ಸ್ವಾತಂತ್ರ್ಯಸಾಧನೆಯಿಂದ ಹುಟ್ಟಿದ ನೂತನರಾಷ್ಟ್ರ ಕಾಲಕ್ರಮದಲ್ಲಿ ಅಭಿವೃದ್ಧಿಯಾಗಿ ಈಗ ಅತಿವಿಸ್ತಾರವಾಗಿಯೂ ಅತಿಪ್ರಬಲವಾಗಿಯೂ ಪೃಥ್ವಿಯಲ್ಲಿ ಅಗ್ರಗಣ್ಯವಾಗಿದೆ. **೧೭೭೬ನೆ ಇಸವಿ, ಜುಲೈ ೪ನೆ ದಿನ** ಕಾಲೊನಿಗಳ ಜನರು ಇನ್ನು ಮೇಲೆ ತಾವು ಯಾರ ಆಧೀನರೂ ಅಲ್ಲವೆಂದು ಪ್ರಕಟಪಡಿಸಿದರು. ಅಂದಿನಿಂದ ಜುಲೈ ನಾಲ್ಕನೆ ದಿನ ಅವರ ರಾಷ್ಟ್ರದಲ್ಲಿ ಸರ್ವತ್ರ ಹಬ್ಬ.

ಆ ಪ್ರಕಟನೆಯನ್ನು ಜಾರ್ಜ್ ದೊರೆಯೊಪ್ಪಿಕೊಳ್ಳಲು ಅಮೆರಿಕನ್ನರು ವರ್ಷ ಗಟ್ಟಲೆ ಹೋರಾಡಬೇಕಾಯಿತು.

ಸ್ವಾತಂತ್ರ್ಯ ಸಿದ್ಧಿಯಾದ ಕೂಡಲೇ ಅವರ ಕಷ್ಟಗಳು ಮಾಯವಾಗಲಿಲ್ಲ. ಆಡಳಿತದಲ್ಲಿ ಅವರಿಗೆ ಯಾವ ಅನುಭವವೂ ಇರಲಿಲ್ಲ. ಸಣ್ಣ ಕಾಲೊನಿಗಳೆಲ್ಲ ಬೇರೆ ಬೇರೆಯಾಗಿದ್ದುದರಿಂದ ಪ್ರತಿಕಾಲೊನಿಜನರೂ ತಮ್ಮ ಷ್ಟಕ್ಕೆ ತಾವಿದ್ದರು. ಈಗ ಎಲ್ಲರೂ ಒಟ್ಟುಗೂಡಿ ಏಕರಾಷ್ಟ್ರವನ್ನು ನಡೆಸಬೇಕಾಯಿತು. ಅದು ಸುಲಭವಾಗಿ ನೆರವೇರಲಿಲ್ಲ. ಬೇರೆಯಾಗಿ ಏರ್ಪಟ್ಟ ಕೇಂದ್ರಸರ್ಕಾರಕ್ಕೆ ಅಧಿಕಾರವನ್ನೊಪ್ಪಿಸಿಕೊಡಲು ಯಾವ ಸಂಸ್ಥಾನಕ್ಕಾದರೂ ಕಾಲೊನಿ ಗಾದರೂ ಇಷ್ಟಬರುವುದಿಲ್ಲ. ತನ್ನ ಪ್ರತ್ಯೇಕತೆ ನಷ್ಟವಾದೀತೆಂಬ ಶಂಕೆ ಬಲವಾಗಿರುವುದು. ಹಿಂದುಸ್ತಾನದಲ್ಲಿ ಏಕರಾಷ್ಟ್ರರಚನೆಯನ್ನು ನಡೆಸಲು ತೋರತಕ್ಕವು ಆ ಕಷ್ಟಗಳೇ. ಆದ್ದರಿಂದ ಅಮೆರಿಕನ್ನರು ಏಕರಾಷ್ಟ್ರವನ್ನು ಹೇಗೆ ಕಟ್ಟಿಕೊಂಡರೆಂಬ ವಿವರದಲ್ಲಿ ನಮಗೆ ಸಹಜಕುತೂಹಲ. ಮೊದಲು ಗಮನಿಸಬೇಕಾದ ಅಂಶ ಇದು. ೧೭೭೬ರಲ್ಲಿ ಸ್ವಾತಂತ್ರ್ಯವನ್ನು ಘೋಷಿಸಿ ದಾಗ್ಯೂ ೧೭೮೭ ರವರೆಗೆ ಸಂಯುಕ್ತರಾಷ್ಟ್ರದ ರೂಪ ಹೇಗೆಂದು ಸರ್ವಾನು ಮತಿಯಿಂದ ನಿರ್ಧರವಾಗಲಿಲ್ಲ.

ಹೋರಾಟವು ಮುಗಿದ ತರುವಾಯ ವಾಷಿಂಗ್ಟನ್ ವರ್ಜೀನಿಯದಲ್ಲಿ ತನ್ನ ಜಮೀನನ್ನು ನೋಡಿಕೊಳ್ಳುತ್ತ ಇದ್ದುಬಿಟ್ಟನು. ಪಡುವಲಲ್ಲಿ ತನ್ನ ಜಮೀನನ್ನು ವಿಸ್ತರಿಸುವ ಉಪಾಯಗಳನ್ನು ಯೋಚಿಸುತ್ತಿದ್ದನು. ಆಗ ಅಮೆರಿಕದ ಸಂಸ್ಥಾನಗಳ ಜನರು ಒಟ್ಟುಗೂಡಿ ಶಾಂತಿಕಾಲದ ಸಾಧನೆಯನ್ನು ನಡೆಸ ಬೇಕಾಗಿತ್ತು. ಶತ್ರುಗಳೊಡನೆ ಹೋರಾಡಲು ಒಟ್ಟುಗೂಡಿದ್ದವರು ತಮ್ಮ ರಾಷ್ಟ್ರವನ್ನು ಸುರೂಪಗೊಳಿಸುವ ಕಾರ್ಯದಲ್ಲಿ ಒಟ್ಟುಗೂಡಿರಲು ಎಷ್ಟೋ ಕಷ್ಟಗಳನ್ನು ಅನುಭವಿಸಿದರು. ಮೊದಲು 'ಮಿತ್ರಮಂಡಲಿ' (League of Friendship) ಯೊಂದನ್ನು ರಚಿಸಿದರು. ಅದನ್ನು ಸೇರಿಕೊಂಡ ಪ್ರತಿ ಸಂಸ್ಥಾನವೂ ತನ್ನ ಸೈನ್ಯ, ನಾಣ್ಯ, ಸುಂಕ ಮೊದಲಾದವುಗಳಲ್ಲಿ ಸಂಪೂರ್ಣಾಧಿ ಕಾರವನ್ನಿಟ್ಟುಕೊಂಡೇ ಇತ್ತು. ಇದರಿಂದ ಐಕ್ಯತೆಯೆಂಬುದಕ್ಕೆ ಅಡ್ಡಿ ಯಾಯಿತೇ ವಿನಾ ಸಹಾಯವಾಗಲಿಲ್ಲ. ೧೭೮೬ ರವೇಳೆಗೆ ಸಂಸ್ಥಾನಗಳು ತಮ್ಮಲ್ಲಿಯೇ ಯಾದವೀಕಲಹಗಳನ್ನಾಡುತ್ತ ಯುದ್ಧಕ್ಕೆ ತೊಡಗುವಂತಿತ್ತು. ಅದನ್ನು ಕುರಿತು ವಾಷಿಂಗ್ಟನ್ 'ಹಿಂದೆ ಶತ್ರುಗಳೊಡನೆ ಹೋರಾಟ ನಡೆಸು ತ್ತಿದ್ದಾಗ ಮಾಡಿದ ಚಿಂತೆಗಿಂತಲೂ ಹೆಚ್ಚು ಚಿಂತೆ ಈಗ ನನಗೆ; ಏನನರ್ಥ

ವಾಗುವುದೋ ಎಂಬ ಶಂಕೆಯು ಬಲವಾಗಿದೆ ಮನಸ್ಸಿನಲ್ಲಿ' ಎಂದು ಆಪ್ತನೊಬ್ಬನಿಗೆ ಬರೆದನು.

೧೭೮೭ ರಲ್ಲಿ ಸಂಸ್ಥಾನಗಳ ಪ್ರತಿನಿಧಿಗಳೆಲ್ಲರೂ ರಾಷ್ಟ್ರಸ್ಥಾಪನೆ ವಿಚಾರವನ್ನು ಇತ್ಯರ್ಥಮಾಡುವ ಉದ್ದೇಶದಿಂದ ರಾಷ್ಟ್ರೀಯಸಭೆಗೂಡಿದರು. ತನ್ನ ಸಂಸ್ಥಾನದ ಪ್ರತಿನಿಧಿಯಾಗಿ ಬಂದಿದ್ದ ವಾಷಿಂಗ್ಟನ್ನನನ್ನು ಆ ಸಭೆಗೆ ಅಧ್ಯಕ್ಷನನ್ನಾಗಿ ಆರಿಸಿ ಗೊತ್ತುಮಾಡಿದರು. ಆ ಬಳಿಕ ಸಂಸ್ಥಾನಗಳೆಲ್ಲವೂ ಒಟ್ಟುಗೂಡಿ ಸಂಯುಕ್ತರೂಪದ ರಾಷ್ಟ್ರ (Federation) ವನ್ನು ರಚಿಸಿಕೊಳ್ಳಬೇಕೆಂದು ನಿರ್ಧರವಾಯಿತು. ಅಂತಹ ಸಂಯುಕ್ತರೂಪದ ರಾಷ್ಟ್ರವನ್ನು ಸೇರಿಕೊಳ್ಳುವ ಸಂಸ್ಥಾನವಾಗಲಿ ಪ್ರಾಂತವಾಗಲಿ ತನ್ನ ಒಳನಾಡಿಗೆ ಮಾತ್ರ ಸಂಬಂಧಿಸಿದ ವಿಚಾರಗಳಲ್ಲಿ ಪೂರ್ಣಾಧಿಕಾರವನ್ನಿಟ್ಟುಕೊಂಡು ಉಳಿದ ವಿಚಾರಗಳಲ್ಲಿ ಸರ್ವಾಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ಅಥವಾ ಸಂಯುಕ್ತರಾಷ್ಟ್ರಕ್ಕೆ ಬಿಟ್ಟುಕೊಡಬೇಕಾಗುವುದು. ದೇಶರಕ್ಷಣೆ, ನಾಣ್ಯ, ವಾಹಕಸೌಕರ್ಯಗಳು (ಟಪಾಲ್, ತಂತಿ, ರೈಲು ಇತ್ಯಾದಿ), ವಿದೇಶೀ ವ್ಯಾಪಾರ, ಸುಂಕ, ಅನ್ಯದೇಶಗಳೊಡನೆ ವ್ಯವಹಾರ, ಯುದ್ಧ ಮುಂತಾದುವೆಲ್ಲವೂ ಸಮಸ್ತರಾಷ್ಟ್ರಕ್ಕೆ ಅನ್ವಯಿಸತಕ್ಕುವಾದುದರಿಂದ ಸಂಯುಕ್ತ ರಾಷ್ಟ್ರದ ಅಧಿಕಾರದಲ್ಲಿ ನಡೆಯತಕ್ಕವು. ಆ ವಿಚಾರಗಳಲ್ಲಿ ಸಂಯುಕ್ತ ರಾಷ್ಟ್ರದ ಆಡಳಿತವನ್ನು ಪ್ರತಿಪ್ರಾಂತವೂ ಒಪ್ಪಿಕೊಳ್ಳಬೇಕು. ಸಂಯುಕ್ತ ರಾಷ್ಟ್ರದ ಆಡಳಿತವನ್ನು ನಡೆಸುವ ಸಭೆಯಲ್ಲಿ ಪ್ರಾಂತಗಳಿಂದ ಬಂದ ಪ್ರತಿನಿಧಿಗಳೇ ಇರುವರು.

ದರ್ಪವೈಭವಗಳಿಂದ ಮೆರೆಯಬೇಕೆಂದು ಆಸೆಬೆಳೆಸಬಹುದಾದ ರಾಜರೇ ಬೇಡವೆನ್ನಿಸಿತು ಅಮೆರಿಕನ್ನರಿಗೆ. ರಾಜತ್ವವೆನ್ನುವುದು ಅಸಹ್ಯವಾಗಿ ಕಂಡಿತು. ನಾಲ್ಕು ವರ್ಷಗಳಿಗೊಮ್ಮೆ ತಮ್ಮಲ್ಲಿಯೇ ಒಬ್ಬಾತನನ್ನು ರಾಷ್ಟ್ರಾಧ್ಯಕ್ಷನನ್ನಾಗಿ ಆರಿಸಿ ಗೊತ್ತುಮಾಡಿಕೊಳ್ಳಲು ನಿರ್ಧರಿಸಿದರು. ನಾಲ್ಕುವರ್ಷ ಮಾತ್ರ ಅಧಿಕಾರ ನಡೆಯುವುದರಿಂದ ಯಾರಿಗೂ ಅತಿಪ್ರಬಲರಾಗಲು ಆಸ್ಪದವಿಲ್ಲ. ಆ ಪದವಿಗೆ ವಾಷಿಂಗ್ಟನ್ನನನ್ನೇ ಮೊದಲು ಆರಿಸಿಕೊಂಡರು. ಆತನೇ ಅಮೆರಿಕದ ಸಂಯುಕ್ತ ಸಂಸ್ಥಾನಗಳ **ಪ್ರಥಮ ರಾಷ್ಟ್ರಾಧ್ಯಕ್ಷ.**

ಅಭ್ಯಾಸಗಳು

೧. ಜಾರ್ಜ್ ವಾಷಿಂಗ್ಟನ್ನನ ಜೀವನ ಚರಿತ್ರೆಯನ್ನೂ ಜೀವನ ಸಾಧನೆಯನ್ನೂ ವಿವರಿಸಿ.

೨. ಅಮೆರಿಕದ ಸ್ವಾತಂತ್ರ್ಯ ಯುದ್ಧದಲ್ಲಿ ಜಲಬಲದಿಂದಾದ ಪರಿಣಾಮಗಳೇನು?

೩ ಸಂಯುಕ್ತರಾಷ್ಟ್ರವೆಂದರೇನು? ರಾಷ್ಟ್ರಮಂಡಲಿ ಅಥವಾ ಮಿತ್ರಮಂಡಲಿಗೂ ಅದಕ್ಕೂ ಏನು ವ್ಯತ್ಯಾಸ?

೨೦ನೇ ಅಧ್ಯಾಯ

ವಾಲ್ಟೇರ್, ರೂಸೊ ಮತ್ತು ಪೇಯ್ನ್

ಮುಖ್ಯಪ್ರಶ್ನೆ ೭೪ : ಜನರ ಮನೋಧರ್ಮವನ್ನು ರೂಪಾಂತರಗೊಳಿಸಿದ ವ್ಯಕ್ತಿಗಳು ಚರಿತ್ರೆಯಲ್ಲಿ ಮುಖ್ಯರಾಗಿರುವುದೇಕೆ?

ಮೂರನೆ ಜಾರ್ಜ್ ದೊರೆಗೆ ಕಾಲೊನಿಜನರ ಮೇಲೆ ತೆರಿಗೆ ಹೊರಿಸುವ ಸಂಕಲ್ಪವು ಹುಟ್ಟಿದಾಗ ಆ ಜನರು ಅದನ್ನು ವಿರೋಧಿಸುವ ನಿರ್ಧರಮಾಡಿ ಕೊಂಡದ್ದನ್ನು ಈಗ ಕಂಡಾಯಿತು. ಒಬ್ಬರಿಗಿಷ್ಟವಾದುದು ಮತ್ತೊಬ್ಬರಿಗೆ ಅನಿಷ್ಟವೆನಿಸಿ ಅಸಹ್ಯವಾಗಿ ತೋರಿತು. ಜಾರ್ಜನ ಮನೋಧರ್ಮಕ್ಕೆ ಆತನ ಸಂಕಲ್ಪ ತಕ್ಕ ಪ್ರವೃತ್ತಿ ; ಆ ಜನರ ಮನೋಧರ್ಮಕ್ಕೆ ಅವರ ಸಂಕಲ್ಪ ತಕ್ಕ ಪ್ರವೃತ್ತಿ. ಲೋಕದಲ್ಲಿ ಜನರಾಡುವುದೂ, ಮಾಡುವುದೂ ಅವರ ಮನೋ ಭಾವಗಳಿಗನುಸಾರವಾಗಿ. ಆ ಕಾರಣದಿಂದ ಲೋಕವ್ಯವಹಾರದಲ್ಲಿ ಮನೋ ಭಾವವೆಂಬುದೇ ದೊಡ್ಡದು; ಅದರಿಂದ ಇಷ್ಟಾನಿಷ್ಟಗಳು ತೋರಿ ತದನುಸಾರ ವಾಗಿ ಸಂಕಲ್ಪಹುಟ್ಟಿ ಕೆಲಸಕಾರ್ಯಗಳು ನಡೆಯುತ್ತವೆ. ಸ್ವಂತವಿಚಾರದಲ್ಲಿ ಎಂತಹ ಮನೋಭಾವವನ್ನು ಬೆಳೆಸಿರುತ್ತಾರೆಯೋ ಅನ್ಯರ ವಿಚಾರದಲ್ಲಿ ಎಂತಹ ಮನೋಭಾವವನ್ನು ಬೆಳೆಸಿರುತ್ತಾರೆಯೋ ಆ ಮನೋಭಾವಕ್ಕೆ ತಕ್ಕಂತೆ ಯಾವ ಜನರಾದರೂ ಕಾರ್ಯತಃ ಆಚರಿಸುವುದು. ಇದಕ್ಕೆ ಒಂದೆ ರಡು ದೃಷ್ಟಾಂತಗಳನ್ನು ನೋಡೋಣ.

ಇಂಗ್ಲೆಂಡ್, ಐರ್ಲಂಡ್ ಮತ್ತು ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ನಿವಾಸಿಗಳಾಗಿರುವ ಜನರೆಲ್ಲರೂ ಒಂದು ರಾಶಿಯವರು. ಇಂಗ್ಲೆಂಡ್ ಆಸ್ಟ್ರೇ ಲಿಯಗಳ ನಿವಾಸಿಗಳೂ ಹಾಗೆಯೇ ಒಂದು ರಾಶಿ. ಆದರೆ ಇಂಗ್ಲೆಂಡ್ ಆಸ್ಟ್ರೇಲಿಯಗಳ ನಿವಾಸಿಗಳು ಅನ್ಯೋನ್ಯರಾಗಿರುವಂತೆ ಐರ್ಲಂಡ್ ಮತ್ತು ಅಮೆರಿಕದವರು ಇಂಗ್ಲೆಂಡಿನವರೊಡನೆ ಇಲ್ಲ. ಇದಕ್ಕೇನು ಕಾರಣ? ಇಂಗ್ಲೆಂಡ್ ಆಸ್ಟ್ರೇಲಿಯಗಳವರು ಒಬ್ಬನೇ ರಾಜನನ್ನು ಒಪ್ಪಿಕೊಂಡು ತಾವಿಬ್ಬರೂ ಒಂದೇ ಎಂಬ ಮನೋಭಾವವನ್ನು ಬೆಳೆಸಿರುತ್ತಾರೆ. ಐರ್ಲಂಡಿ ನವರೂ, ಅಮೆರಿಕದವರೂ ತಾವು ಬೇರೆ ರಾಷ್ಟ್ರದವರೆಂಬ ಮನೋಭಾವ ವನ್ನು ದೃಢಪಡಿಸಿಕೊಂಡಿದ್ದಾರೆ. ಇನ್ನೊಂದು ದೃಷ್ಟಾಂತ. ಹಿಂದುಸ್ಥಾನದ ಉತ್ತರಭಾಗದಲ್ಲಿ ಲಕ್ಷಗಟ್ಟಲೆ ಹಿಂದುಗಳಿದ್ದಾರೆ; ಹಿಂದೆ ಹಿಂದುಗಳಾಗಿದ್ದು

ಅನಂತರ ಮುಸಲ್ಮಾನರಾದವರೂ ಇದ್ದಾರೆ. ಇಬ್ಬರದೂ ಒಂದೇ ರಾಶಿ, ಒಂದೇಭಾಷೆ. ಆದರೆ ತಮ್ಮ ಮತಗಳು ಪರಸ್ಪರವಿರುದ್ಧವೆಂಬ ಭಾವನೆ ಬೆಳೆದಿರುವ ಕಾರಣ ಅತ್ಯಲ್ಪವಿಚಾರಕ್ಕಾಗಿ ಭಯಂಕರವಾದ ದಂಗೆಗಳೂ ಹತ್ಯೆಗಳೂ ನಡೆಯುತ್ತವೆ. ತಾವಿಬ್ಬರೂ ಒಂದು ರಾಷ್ಟ್ರಕ್ಕೆ ಸೇರಿದವರೆಂಬ ಭಾವನೆಗಿಂತ ವಿರುದ್ಧಮತಗಳಿಗೆ ಸೇರಿದವರೆಂಬ ಭಾವನೆ ಬಲವತ್ತರವಾಗಿದೆ. ರಾಷ್ಟ್ರಭಾವನೆ ಬಲವತ್ತರವಾಗುವತನಕ ಹಿಂದುಸ್ತಾನಕ್ಕೆ ಪ್ರಾಬಲ್ಯ ದೊರಕುವುದು ಕಷ್ಟ. ಇಂಗ್ಲಂಡ್ ಫ್ರಾನ್ಸ್ ದೇಶಗಳಲ್ಲಿ ಪ್ರಾಟೆಸ್ಟೆಂಟರೂ ಕ್ಯಾಥೊಲಿಕ್ಕರೂ ಹೀಗೆಯೇ ಪರಸ್ಪರದ್ವೇಷವನ್ನು ಬೆಳೆಸಿದ್ದರು. ಐರ್ಲಂಡಿನ ಉತ್ತರದಲ್ಲಿರುವ ಪ್ರಾಟೆಸ್ಟೆಂಟರಿಗೂ ಉಳಿದ ಭಾಗದಲ್ಲಿರುವ ಕ್ಯಾಥಲಿಕ್ಕರಿಗೂ ಈಗ್ಗೂ ಅದೇ ಬಗೆಯ ಚಿತ್ತವೃತ್ತಿ. ಆದ್ದರಿಂದ ಆ ದ್ವೀಪದಲ್ಲಿ ಎರಡು ಪ್ರತ್ಯೇಕ ಸರ್ಕಾರಗಳಿರಬೇಕಾಗಿದೆ.

ಮನೋಭಾವದ ಮಹಿಮೆ ಲೋಕದಲ್ಲೆಷ್ಟೆಂದು ಈಗ ಸ್ಪಷ್ಟವಾಗಿರಬಹುದು. ಮನೋಭಾವದ ಪ್ರಭಾವದಿಂದಲೇ ಲೋಕವ್ಯವಹಾರದ ಗತಿನಿಷ್ಕರ್ಷೆ. ಹೀಗಿರುವಲ್ಲಿ ಯಾವ ಜನರ ಮನೋಭಾವದಲ್ಲಾದರೂ ವ್ಯತ್ಯಾಸವಾಗಿ ರೂಪಾಂತರವುಂಟಾದರೆ ಆ ಜನರ ಜೀವನದ ರೀತಿಯೂ ಬೇರೆಯಾಗುತ್ತದೆ; ಅವರ ನಡತೆಯೂ ಬೇರೆಯಾಗುತ್ತದೆ. ಆದಕಾರಣ ಜನರ ಮನೋಭಾವವನ್ನು ತಿದ್ದಿ ರೂಪಾಂತರಗೊಳಿಸಬಲ್ಲವರು ಲೋಕದಲ್ಲಿ ಪ್ರಭಾವಶಾಲಿಗಳು. ಯುದ್ಧಗಳಲ್ಲಿ ಹೋರಾಡಿ ಜಯಭೇರಿ ಹೊಡೆಸಿದ ಶೂರರಿಗಿಂತಲೂ ರಾಜರನ್ನು ಪದಚ್ಯುತಗೊಳಿಸಿದ ಸಾಹಸಿಗಳಿಗಿಂತಲೂ ಅವರು ಹೆಚ್ಚು ಮಹಿಮೆಯುಳ್ಳವರು.

ದರ್ಪಿಷ್ಠ ಪ್ರಭುತ್ವವೆಂಬುದನ್ನು ಮೂಲೋತ್ಪಾಟನಗೊಳಿಸುವುದರಲ್ಲಿ ಅತಿಪ್ರಭಾವಶಾಲಿಗಳಾದ ಮೂವರ ವೃತ್ತಾಂತವನ್ನು ನಾವೀಗ ತಿಳಿಯೋಣ. ರಾಜರೊಡನೆ ಅವರು ಯುದ್ಧಕ್ಕೆ ನಿಲ್ಲಲಿಲ್ಲ, ಹೊಡೆದಾಡಲಿಲ್ಲ, ಬಡಿದಾಡಲಿಲ್ಲ; ಶಸ್ತ್ರಧಾರಿಗಳೇ ಅಲ್ಲ. ಬರಿಯ ಬರೆಹಗಾರರು ಮಾತ್ರ. ಆದರೆ ಅವರ ಬರೆಹಗಳಿಂದ ಜನರಿಗೆ ದರ್ಪಿಷ್ಠಪ್ರಭುತ್ವದಲ್ಲಿ ಅಸಮಾಧಾನ ಮೂಡಿ ಬಲಗೊಂಡಿತು. ಹೆಚ್ಚು ಹೆಚ್ಚು ಜನರಲ್ಲಿ ಅಸಮಾಧಾನಭಾವ ಕಾಲಕ್ರಮದಲ್ಲಿ ವ್ಯಾಪಿಸಿತು. ಆ ಜನರ ಅಸಮಾಧಾನ ಬಲಗೊಂಡಂತೆ ದರ್ಪಿಷ್ಠ ಪ್ರಭುಗಳಲ್ಲಿ ಅಸಹನ ಹೆಚ್ಚಿತು. ಆ ಪ್ರಭುತ್ವವನ್ನು ನಡೆಸಿಕೊಳ್ಳುವುದು ಇನ್ನು ಮುಂದೆ ಅಸಾಧ್ಯವೆನ್ನಿಸಿತು.

ಆ ಮೂವರಲ್ಲಿ **ವಾಲ್ಟೇರ್** (Voltaire) ಎಂಬ ಫ್ರೆಂಚರವನೊಬ್ಬ. ಸ್ವಿಟ್ಸರ್ಲಂಡಿನವನಾದ **ರೂಸೊ** (Rousseau) ಎಂಬಾತನು ಇನ್ನೊಬ್ಬ. **ಪೇಯ್ನ್** (Paine) ಎಂಬ ಇಂಗ್ಲಿಷರವನು ಮೂರನೆಯವ.

ಮುಖ್ಯಪ್ರಶ್ನೆ ೭೫ : ವಾಲ್ಟೇರ್ ನಡೆಸಿದ ಮಹತ್ಕಾರ್ಯವೇನು?

೧೬೯೪ರಲ್ಲಿ ಪ್ಯಾರಿಸ್ ನಗರದಲ್ಲಿ ವಾಲ್ಟೇರ್ ಹುಟ್ಟಿದನು. ದೃಢಕಾಯನಾಗಿ ಬೆಳೆಯಲಿಲ್ಲ; ಸದಾರೋಗಿ. ಈತನು ದೀರ್ಘಾಯುವಲ್ಲವೆನ್ನುವಂತಿತ್ತು. ಜೆಸೂಯಿತವ್ರತಿಗಳು ನಡೆಸುತ್ತಿದ್ದ ಒಂದು ಶಾಲೆಗೆ ಹುಡುಗನನ್ನು ಕಳುಹಿಸಿದರು. ಹುಡುಗನ ಬುದ್ಧಿಶಕ್ತಿಯನ್ನು ಕಂಡ ಅಲ್ಲಿಯ ಗುರುಗಳಿಗೆ ಪರಮಾಶ್ಚರ್ಯ. ಅವನು ಕೇಳದ ಪ್ರಶ್ನೆಯಿಲ್ಲ. ಎಲ್ಲವನ್ನೂ ತಿಳಿಯುವ ಕುತೂಹಲ, ಆಮೂಲಾಗ್ರವಾಗಿ ಗ್ರಹಿಸುವ ಶ್ರದ್ಧೆ. ವಿಷಯವನ್ನು ತಿಳಿಯ ಹೇಳುವಾಗ ವಿವರವಾಗಿ ವಿಸ್ತರಿಸದಿದ್ದರೆ ಬಿಡುವವನಲ್ಲ. ಆ ಹುಡುಗನ ಸ್ಮೃತಿಶಕ್ತಿ ಅದ್ಭುತ. ಸ್ವಲ್ಪಕಾಲದಲ್ಲಿಯೇ ವಾಕ್ಛಕ್ತಿಯೂ ಅದ್ಭುತವಾಗಿ ಕಾಣಿಸಿಕೊಂಡಿತು.

ಇಪ್ಪತ್ತು ವರ್ಷ ತುಂಬುವ ವೇಳೆಗೆ ಕೆಲವು ನಾಟಕಗಳನ್ನೂ ಪದ್ಯಗಳನ್ನೂ ಬರೆದು ಅವುಗಳಲ್ಲಿ ಫ್ರಾನ್ಸ್ ರಾಜ್ಯದ ಪ್ರಮುಖರನ್ನು ಅನ್ಯಾಪದೇಶರೀತಿಯಲ್ಲಿ ಗೇಲಿಮಾಡಿ ಖಂಡಿಸಿದನು. ಅದಕ್ಕಾಗಿ ಅವನನ್ನು ಹದಿನೆಂಟು ತಿಂಗಳ ಕಾಲ ಸೆರೆಮನೆಯಲ್ಲಿಟ್ಟರು. ಸೆರೆಯಲ್ಲಿದ್ದಾಗಲೂ ಬಿಡುಗಡೆಯಾದಮೇಲೂ ಅದೇ ರೀತಿಯಲ್ಲಿ ಬರೆಯುವುದೇ ಆತನ ಕೆಲಸ. ಘನವಾದುದೆನಿಸಿದ್ದನ್ನು ಅಪಹಾಸ್ಯಗೊಳಿಸಿ ಅದು ಟೊಳ್ಳೆಂದು ಸ್ಪಷ್ಟಗೊಳಿಸುವ ರೀತಿ ಆತನದು. ಹಾಸ್ಯವೇ ಆತನ ಬ್ರಹ್ಮಾಸ್ತ್ರ. ಆತನ ಅಪಹಾಸ್ಯಕ್ಕೆ ಗುರಿಯಾದ ಕೆಲವರು ಪ್ರಬಲರು ದುಷ್ಟಜನರನ್ನು ಗೊತ್ತುಮಾಡಿ ಆತನನ್ನು ಹೊಡೆಸುವ ಸಂಚನ್ನೂ ಕಟ್ಟಿದರು. ಕಡೆಗೆ ಫ್ರಾನ್ಸಿನಿಂದ ಗಡೀಪಾರಾಗಿ ಹೋಯಿತು. ಇಂಗ್ಲೆಂಡ್, ಪ್ರಷ್ಯ, ಸ್ವಿಟ್ಸರ್ಲಂಡ್ ದೇಶಗಳಲ್ಲಿ ಕಾಲಕಳೆದನು. ಅತ್ಯಾದರದಿಂದ ಪ್ರಷ್ಯದ ಪ್ರಭು ಫ್ರೆಡರಿಕ್ ವಾಲ್ಟೇರನನ್ನು ತನ್ನ ರಾಜಧಾನಿಗೆ ಬರಮಾಡಿಕೊಂಡು ಕಡೆಗೆ ಆತನ ಅಪಹಾಸ್ಯವನ್ನು ತಾಳಲಾರದೆ ಹೊರಗೆ ಕಳುಹಿಸಿಬಿಟ್ಟನು. ಸ್ವಿಟ್ಸರ್ಲಂಡಿಗೂ ಫ್ರಾನ್ಸಿಗೂ ಮಧ್ಯೆ ಗಡಿಪ್ರದೇಶದಲ್ಲಿ ಮನೆಕಟ್ಟಿಕೊಂಡಿರಬೇಕಾಯಿತು. **ಫರ್ನೆ** (Ferney) ಎಂಬ ಆ ಸ್ಥಳ ಐರೋಪ್ಯ ಸಾಹಿತಿಗಳಿಗೆಲ್ಲ ಯಾತ್ರಾಸ್ಥಳವಾಗಿ ಹೋಯಿತು. ತನ್ನ ಆಯುಷ್ಯದ ಬಹುಭಾಗವನ್ನು ವಾಲ್ಟೇರ್ ಸ್ವದೇಶದ ಹೊರಗೇ ಕಳೆದನು.


ಅಷ್ಟು ಕಾಲವೂ ವಾಲ್ಟೇರ್ ಅವಿರತನಾಗಿ ಎಷ್ಟೋ ಪುಸ್ತಕಗಳನ್ನು ಬರೆದನು. ಚರಿತ್ರೆ, ಪ್ರಬಂಧ, ಪತ್ರ, ಪದ್ಯ, ನಾಟಕ ಮುಂತಾದ ಸಾಹಿತ್ಯ ರೂಪಗಳಲ್ಲಿ ಒಂದನ್ನಾದರೂ ಬಿಡಲಿಲ್ಲ. ಆ ಕಾಲದ ಮೌಢ್ಯವನ್ನೂ ದುರಾಚಾರಗಳನ್ನೂ ಎಲ್ಲವುಗಳಲ್ಲಿಯೂ ಅಪಹಾಸ್ಯಮಾಡುತ್ತ ಖಂಡಿಸಿದನು. ಮತಗುರುಗಳೆನಿಸಿದ್ದ ಚಕವರ್ತಿಗಳನ್ನೆಷ್ಟು ಅಪಹಾಸ್ಯಮಾಡಿದನೆಂದು ಹೇಳಲಾಗದು. ಖಡ್ಗದಲ್ಲಿಲ್ಲದ ತೀಕ್ಷ್ಣಶಕ್ತಿ ಆತನ ಲೇಖನಿಯಲ್ಲಿತ್ತು. ಆತನು ಬರೆದುದನ್ನು ಓದಿ ಆನಂದಪಟ್ಟವರು ಎಷ್ಟೋ ಮಂದಿ. ಹಾಗೆ ಓದಿದವರ ಸಂತೋಷವನ್ನು ಕಂಡು ಮನಸ್ಸಿನಲ್ಲಿ ಕುದಿಗೊಂಡವರು ಕೆಲವು ಮಂದಿ. ಆತನನ್ನು ಹರಸಿದವರು ಬಲುಮಂದಿ, ಶಪಿಸಿದವರು ಕೆಲವು ಮಂದಿ. ಕೃತ್ರಿಮವನ್ನು ಕತ್ತರಿಸಿ ಎಸೆಯುವುದರಲ್ಲಿಯೂ ಅಂತರಂಗವನ್ನು ನಿರ್ಭೀತಿಯಿಂದ ಪ್ರಕಾಶಪಡಿಸುವುದರಲ್ಲಿಯೂ ಫ್ರೆಂಚ್‌ಜನರು ಆತನಿಂದ ಚೈತನ್ಯ ಪಡೆದರು. ಆತನನ್ನು ದಂಡಿಸುವ ಇಷ್ಟವಿದ್ದರೂ ದರ್ಪಿಷ್ಠರಾದವರಿಗೆ ಜನರ ಮೆಚ್ಚುಗೆ ಪಡೆದಾತನನ್ನು ಕಂಡು ಅಂಜಿಕೆ.

ಮಹಾವೈಭವಾಟ್ಟಹಾಸಗಳಿಂದ ಮೆರೆದ ಹದಿನಾಲ್ಕನೆ ಲೂಯಿಯ ಕಾಲದಲ್ಲಿ ಹುಟ್ಟಿದವನು ಆ ತರುವಾಯ ಸ್ವಚ್ಛಂದವೃತ್ತಿಯಿಂದಾಳಿದ ಹದಿನೈದನೆ ಲೂಯಿಯ ಕಾಲದಲ್ಲಿ ಜೀವಿಸಿ ದೇಶಾಂತರವಾಸದಲ್ಲಿಯೇ ಬಹುಕಾಲವನ್ನು ಕಳೆದಿದ್ದನು. ಎಂಭತ್ತನೆ ವರ್ಷ ದಾಟಿತ್ತು. ಆತ ಬರೆದ ಕಡೆಯ ನಾಟಕವನ್ನು ಪ್ಯಾರಿಸ್ಸಿನಲ್ಲಿ ಆಡುವ ವೇಳೆಯಲ್ಲಿ ಪ್ಯಾರಿಸ್ಸಿಗೆ ಬಂದನು. ಪುನರಾಗಮನವೊಂದು ದೊಡ್ಡ ಮೆರೆವಣಿಗೆಯಾಯಿತು. ಪೂಜಿಸಬೇಕೆಂದು ಜನರೆಸೆದ ಪುಷ್ಪ ರಾಶಿಯನ್ನು ಆತನು ಹೊರಲಾರದೆಹೋದನು. ಎಂಭತ್ತನಾಲ್ಕನೆ ವರ್ಷದಲ್ಲಿ ಪ್ಯಾರಿಸ್ ನಗರದಲ್ಲಿ ತೀರಿಕೊಂಡನು.

ಮುಖ್ಯಪ್ರಶ್ನೆ ೭೬ : ರೂಸೊ ವಾಲ್ಟೇರುಗಳಿಗೆ ಭೇದವೇನು? ರೂಸೊ ನಡೆಸಿದ ಮಹತ್ಕಾರ್ಯವಾವುದು?

ವಾಲ್ಟೇರ್ ತೀರಿಕೊಂಡ ವರ್ಷದಲ್ಲಿಯೇ ಇನ್ನೊಬ್ಬ ಪ್ರಭಾವಶಾಲಿ ಲೇಖಕನೂ ಕಾಲವಾದನು. ಆತನ ಹೆಸರು ರೂಸೊ. ಬೇರೆ ರೀತಿಯ ಗ್ರಂಥಕರ್ತನಾದಾಗ್ಯೂ ಆತನೂ ವಾಲ್ಟೇರನಂತೆ ಫ್ರಾನ್ಸಿನ ಮಹಾಪಲ್ಲಟಕ್ಕೆ ಕಾರಣಭೂತನಾದವನು. ಸಾಮಾನ್ಯನಾದ ಗಡಿಯಾರಗಾರನ ಮಗನಾಗಿ ಜಿನೀವ (Geneva) ಪಟ್ಟಣದಲ್ಲಿ ರೂಸೊ ೧೭೧೨ರಲ್ಲಿ ಜನಿಸಿದನು. ನಲವತ್ತನೆ ವರ್ಷದವರೆಗೂ ಆತನು ಮಹಿಮೆಯುಳ್ಳ ಪುಸ್ತಕವಾವುದನ್ನೂ ಬರೆಯಲಿಲ್ಲ.

ಆತನ ಗ್ರಂಥಗಳಲ್ಲೆಲ್ಲ ಅತಿಮಹತ್ತ್ವವುಳ್ಳ ಪುಸ್ತಕವನ್ನು ೧೭೬೨ರಲ್ಲಿ ಪ್ರಕಟಿಸಿದಾಗ ಆತನಿಗೆ ೫೦ ವರ್ಷ. ದರ್ಪಿಷ್ಠ ಪ್ರಭುತ್ವವನ್ನು ಮೂಲೋತ್ಪಾಟನಗೊಳಿಸುವುದರಲ್ಲಿ ಆ ಪುಸ್ತಕದ ಪ್ರಭಾವವು ಮತ್ತಾವ ಗ್ರಂಥಕ್ಕೂ ಇಲ್ಲ. ಸೋಷಿಯಲ್ ಕಾನ್ಟ್ರಾಕ್ಟ್ (*The Social Contract*) ಅಥವಾ ಸಾಮಾಜಿಕ ಒಪ್ಪಂದವೆಂದು ಆ ಪುಸ್ತಕದ ಹೆಸರು. ಒಳ್ಳೆ ಆಡಳಿತವೆಂಬುದಕ್ಕೆ ಆಡಳಿತಕ್ಕೊಳಗಾದವರ ಪೂರ್ವಸಮ್ಮತಿ ಆಧಾರವಾಗಿರತಕ್ಕುದೆಂದು ಆ ಪುಸ್ತಕದ ವಾದ. ಅರ್ಥಾತ್ ಆಡಳಿತವು ಜನಸ್ವಾಮ್ಯಭರಿತವಾಗಿರಬೇಕು, ಒಬ್ಬನ ಇಷ್ಟಾನಿಷ್ಟಗಳಂತಿರಬಾರದು. ಅದುವರೆಗೂ ಸ್ವೇಚ್ಛಾಚಾರಿಗಳಾದ ರಾಜರೇ ಆಳುತ್ತಿದ್ದರು. ಪ್ರತಿ ನಿವಾಸಿಯೂ ವೋಟಿನ ಅಧಿಕಾರಪಡೆದು ಪೌರನಾಗಿರತಕ್ಕ ರಿಪಬ್ಲಿಕ್ ರೂಪದ ಆಡಳಿತವೇ ಹಿತವೆಂಬುದು ರೂಸೊ ಅಭಿಪ್ರಾಯ. ಸ್ವಾತಂತ್ರ್ಯ, ಸಮಾನತೆ, ಸೋದರತೆ (Liberty, equality, fraternity) ಗಳೆಂಬುದೇ ಹೊಸಕಾಲದ ಪಲ್ಲವಿಯಾಯಿತು; ರೂಸೊ ಕಾಲವಾದ ಬಳಿಕ ಪಲ್ಲಟಕಾರರ ಸೂತ್ರವಾಯಿತು.



ರೂಸೊ

ಮತ್ತೊಂದು ಗ್ರಂಥ ಅದೇ ವರ್ಷದಲ್ಲಿ ಪ್ರಕಾಶಕ್ಕೆ ಬಂತು. ಐಮಿಲ್ (*Emile*) ಎಂಬ ಆ ಗ್ರಂಥದಲ್ಲಿರುವುದು ಉತ್ತಮ ಶಿಕ್ಷಣೋಪಾಯಗಳನ್ನು ಅವಲಂಬಿಸಬೇಕೆಂಬ ಪ್ರೇರಣೆ. ಆ ಕಾಲದ ಶಿಕ್ಷಣದಲ್ಲಿ ಲ್ಯಾಟಿನ್ ಭಾಷೆಯ ವ್ಯಾಕರಣವೊಂದು, ಮತತತ್ತ್ವವಿಚಾರದಲ್ಲಿ ಪ್ರಶ್ನೋತ್ತರಮಾಲಿಕೆಯೊಂದು ಕಂಠಪಾಠವಾಗುತ್ತಿತ್ತೇ ವಿನಾ ಬೇರೇನೂ ಮುಖ್ಯವಾಗಿರಲಿಲ್ಲ. ಆಹಾರಶೌಚಗಳ ನಿಯಮಗಳನ್ನು ಅವಲಂಬಿಸಿ ಸರಿಯಾದ ಶರೀರದಾರ್ಢ್ಯವನ್ನೂ ಬುದ್ಧಿಮಾತ್ರವನ್ನೂ ಅಲ್ಲದೆ ಮನೋಧರ್ಮವನ್ನೂ ವೃದ್ಧಿಗೊಳಿಸಿ

ಕೊಳ್ಳತಕ್ಕುದೆಂದು ರೂಸೊ ಹೇಳಿದನು. ಆ ಮಾತುಗಳು ಇಂದಿಗೂ ಹೊಸ ದಾಗಿಯೇ ಕಂಡಾವು. ಏಮಿಲ್ ಗ್ರಂಥವನ್ನು ಪ್ರಕಟಿಸಿದ ಕೂಡಲೇ ರೂಸೊ ದಸ್ತಗಿರಿಗೆ ಸಿಕ್ಕುವಂತಾಯಿತು. ಸ್ವತಂತ್ರವಾಗಿ ಆಲೋಚಿಸಿ ಕೊಳ್ಳಲು ಜನರನ್ನು ಪ್ರೋತ್ಸಾಹ ಮಾಡಿದುದು ಅಪರಾಧವಾಯಿತು! ಇಂಗ್ಲಂಡಿಗೋಡಿದನು ರೂಸೊ. ಆ ದೇಶದಲ್ಲಿ ದರ್ಪಿಷ್ಠ ಪ್ರಭುಗಳ ಕಾಲ ಕಳೆದುಹೋಗಿತ್ತಾದ್ದರಿಂದ ಸ್ವದೇಶಕ್ಕಿಂತ ಮೇಲಾಗಿತ್ತು. ಜನರು ಸ್ವತಂತ್ರ ರಾಗಿ ವರ್ತಿಸಬಹುದಾಗಿತ್ತು. ೧೭೭೦ರಲ್ಲಿ ಫ್ರಾನ್ಸಿಗೆ ಹಿಂತಿರುಗಿದ ರೂಸೊ ಕೆಲವು ವರ್ಷಗಳ ತರುವಾಯ ತೀರಿಕೊಂಡನು.

ಮುಖ್ಯಪ್ರಶ್ನೆ ೭೭ : ಅಮೆರಿಕನ್ನರೂ ಫ್ರೆಂಚರೂ ಕಠೋರಪ್ರಭುತ್ವವನ್ನು ನಾಶಗೊಳಿಸಿದ ಸಂಧರ್ಭದಲ್ಲಿ ಪೇಯ್ನ್ ಮಾಡಿದುದೇನು?

ಅಮೆರಿಕದ ಸ್ವಾತಂತ್ರ್ಯ ಯುದ್ಧದಲ್ಲಿಯೂ ಫ್ರಾನ್ಸಿನ ಮಹಾ ಪಲ್ಲಟ ದಲ್ಲಿಯೂ ಕಾರ್ಯಾರಂಭವಾಗಲು ಸಹಾಯಮಾಡಿ ಆ ತರುವಾಯ ನಡೆದ ಹೋರಾಟದಲ್ಲಿ ಭಾಗವಹಿಸಿದ ಇಂಗ್ಲಿಷ್‌ಗ್ರಂಥಕರ್ತನೊಬ್ಬನು ಅದೇ ಕಾಲ ದಲ್ಲಿದ್ದನು. ಆತನ ಹೆಸರು ಟಾಮಸ್ ಪೇಯ್ನ್ (Thomas Paine).

ಮೊದಲು ಪೇಯ್ನ್ ಇಂಗ್ಲಂಡಿನಲ್ಲಿ ಸರ್ಕಾರಿ ನೌಕರಿಯಲ್ಲಿದ್ದನು. ಮೇಲಿನ ಹುದ್ದೆದಾರರು ನಡೆಸಿದ ಕೆಲವು ವಿಧ್ಯಮಾನಗಳು ಆತನಿಗೆ ಅನ್ಯಾಯ ವೆಂದು ಕಂಡವು. ಅವುಗಳನ್ನು ಖಂಡಿಸಿದನು. ಅದಕ್ಕೆ ಆತನನ್ನು ಕೆಲಸದಿಂದ ತೆಗೆದುಹಾಕಿದರು. ಆಗ ಆತನು ಅಮೆರಿಕಕ್ಕೆ ಹೊರಟು ಅಲ್ಲಿ **ಕಾಮನ್ ಸೆನ್ಸ್** (*Common Sense*) ಎಂಬ ಪತ್ರಿಕೆಯನ್ನು ಹೊರಡಿಸಿದನು. ಕಾಲೊನಿಜನ ರಿಗೂ ಬ್ರಿಟಿಷ್ ಸರ್ಕಾರಕ್ಕೂ ಆಗ ನಡೆಯುತ್ತಿದ್ದ ವಾಗ್ವಾದದಲ್ಲಿ ಜನರ ಪಕ್ಷವನ್ನು ಬಲವಾಗಿ ಹಿಡಿದೆತ್ತಿ ಆ ಪತ್ರಿಕೆಯಲ್ಲಿ ಬರೆದನು. ಸ್ವಾತಂತ್ರ್ಯ ಕ್ಕಾಗಿ ಯುದ್ಧ ಮೊದಲಾದಾಗ ಅಮೆರಿಕನರ ಪಕ್ಷವನ್ನು ಸೇರಿ ಯುದ್ಧ ದಲ್ಲಿಯೂ ಭಾಗವಹಿಸಿದನು. ಯುದ್ಧ ಮುಗಿದ ಬಳಿಕ ಅಮೆರಿಕದಲ್ಲಿಯೇ ಸರ್ಕಾರಿ ಹುದ್ದೆ ದೊರಕಿತು. ೧೭೮೭ರಲ್ಲಿ ಇಂಗ್ಲಂಡಿಗೆ ಹಿಂತಿರುಗಿ ನಾಲ್ಕು ವರ್ಷಗಳ ತರುವಾಯ **ರೈಟ್ಸ್ ಆಫ್ ಮ್ಯಾನ್** (*The Rights of Man*) ಅಥವಾ **ಮಾನವನ ಜನ್ಮಸಿದ್ಧವಾದ ಹಕ್ಕುಗಳು** ಎಂಬ ಸುಜ್ಞಾತಗ್ರಂಥವನ್ನು ಪ್ರಕಾಶ ಗೊಳಿಸಿದನು. ಅದರಲ್ಲಿ ಪಲ್ಲಟಕಾರಿಗಳ ಪಕ್ಷವನ್ನು ಸಮರ್ಥಿಸಿದ್ದರಿಂದ ತೊಂದರೆಯು ಮೂಡಿತು; ಫ್ರಾನ್ಸಿಗೋಡಬೇಕಾಯಿತು. ಆ ದೇಶದಲ್ಲಿ ಮಹಾಪಲ್ಲಟವೆಂಬುದು ಆಗತಾನೇ ಮೊದಲಾಗಿತ್ತು. ಅಲ್ಲಿಯ ಮುಖಂಡರು

ಈತನನ್ನು ಆದರದಿಂದ ಬರಮಾಡಿಕೊಂಡು ಕನ್ವೆನ್ಷನ್ (Convention) ಎಂಬ ಪ್ರತಿನಿಧಿಸಭೆಗೆ ಆರಿಸಿ ಕಳುಹಿಸಿದರು. ರಾಜನ ವಿಚಾರಣೆ ನಡೆದ ಸಂದರ್ಭದಲ್ಲಿ ಪೇಯ್ನ್ ಆ ಸಭೆಯಲ್ಲಿ ಸಭಿಕನಾಗಿದ್ದನು. ಆ ತರುವಾಯ ಪೇಯ್ನ್ ಅಮೆರಿಕಕ್ಕೆ ಹೊರಟು ಅಲ್ಲಿಯೇ ತೀರಿಕೊಂಡನು.

ಈ ಮೂವರು ಪ್ರಭಾವಶಾಲಿಗಳ ಲೇಖನಗಳಿಂದ ಆದ ಪರಿಣಾಮವೇನು? ಆ ಲೇಖನಗಳನ್ನೋದಿ ಜನರು ಸ್ವತಂತ್ರವಾಗಿ ಯೋಚಿಸಿಕೊಂಡು ತಾರತಮ್ಯ ಕಾಣಲು ತೊಡಗಿದರು. ಯೋಚನಾಪರರಾದವರೆಲ್ಲರಿಗೂ ಜನಬಾಹುಳ್ಯದ ದುರವಸ್ಥೆ ಸಹನಾತೀತವೆನ್ನಿಸಿತು. ಹೇಗಾದರೂ ಸ್ಥಿತಿಗತಿಗಳು ವ್ಯತ್ಯಾಸ ಗೊಳ್ಳಬೇಕೆನ್ನಿಸಿತು. ಜನರ ಮನೋಭಾವ ಬೇರೆರೂಪ ಪಡೆಯಿತು. ಹೊಸ ಮನೋಭಾವದಿಂದ ತುಂಬಿದವರಾಗಿ ಹಿಂದೆಂದೂ ನಡೆಯದಿದ್ದ ಕರ್ತವ್ಯ ವನ್ನು ನಡೆಸುವ ಸಂಕಲ್ಪವನ್ನು ಮಾಡಿಕೊಂಡರು. ಫ್ರಾನ್ಸಿನಲ್ಲಿಯೇ ಅತಿ ದುರವಸ್ಥೆಯಿದ್ದುದು. ಅದಕ್ಕಾಗಿ ಆ ದೇಶದಲ್ಲಿ ಮಹಾಪಲ್ಲಟವು ಸಂಭವಿ ಸಿತು. ಅದರ ವೃತ್ತಾಂತವನ್ನು ಮುಂದೆ ನೋಡೋಣ.

ಅಭ್ಯಾಸಗಳು

೧. ಮನೋಭಾವವೇ ಕಾರ್ಯಸಾಧನೆಗೆ ಮೂಲವೆಂಬುದನ್ನು ಸ್ಪಷ್ಟಗೊಳಿಸಿ. ಪಾಠ ದಲ್ಲಿ ಕೊಟ್ಟಿರುವುದನ್ನು ಬಿಟ್ಟು ಬೇರೆ ಉದಾಹರಣೆಗಳನ್ನು ಕೊಡಿ.

೨. ವಿಡಂಬನ ಕಾವ್ಯವೆಂದರೇನು? ದೃಷ್ಟಾಂತಗಳನ್ನು ತಿಳಿಸಿ ವಿಶದಗೊಳಿಸಿ. ವಿಡಂಬನ ಕಾರರಲ್ಲಿ ಪ್ರಸಿದ್ಧರಾದವರು ಯಾರು?

೩. ಆಡಳಿತಕ್ಕೊಳಗಾದವರ ಸಮ್ಮತಿಯಿಂದ ನಡೆಯುವ ಸರ್ಕಾರವೇ ಸಮರ್ಪಕ ವಾದುದೆಂಬ ಅಭಿಪ್ರಾಯವು ನಿಮಗೊಪ್ಪಿಗೆಯೇ? ಹಾಗಾದರೆ ಅಂತಹ ಸರ್ಕಾರವು ಜನ ಸ್ವಾಮ್ಯರೂಪಿಯಾಗಿಯೇ ಇರಬೇಕೇ? ಹಿಂದುಸ್ತಾನದ ಇತಿಹಾಸದಿಂದ ಉದಾಹರಣೆ ಗಳನ್ನು ಕೊಟ್ಟು ನಿಮ್ಮ ಅಭಿಪ್ರಾಯವನ್ನು ತಿಳಿಸಿ.

೪. ಸಮಸ್ತರಿಗೂ ವೋಟಿನ ಅಧಿಕಾರವಿದ್ದು ಅದರಂತೆ ನಡೆಯುವ ಸರ್ಕಾರವಿದ್ದಲ್ಲಿ ಅನುಕೂಲವೇನು? ಅನಾನುಕೂಲವೇನು? ಅನಾನುಕೂಲಗಳನ್ನು ತಪ್ಪಿಸಿಕೊಳ್ಳಲು ಯಾವು ದಾದರೂ ಉಪಾಯಗಳನ್ನು ಅವಲಂಬಿಸಲಾದೀತೆ?

J. Raju
6th Form 'C'
Maharaja's High School
Mysore

೨೧ನೇ ಅಧ್ಯಾಯ

ಫ್ರಾನ್ಸ್ ಮಹಾಪಲ್ಲಟ ಮತ್ತು ನಪೋಲಿಯನ್

ಮುಖ್ಯಪ್ರಶ್ನೆ ೭೮: ಫ್ರಾನ್ಸ್ ದೇಶದಲ್ಲಿ ಪಲ್ಲಟಗೊಳ್ಳುವಂತಹ ಪರಿಸ್ಥಿತಿಯಿದ್ದುದು ಹೇಗೆ?

ಫ್ರಾನ್ಸ್ ದೇಶದಲ್ಲಿ ಅತಿದುರವಸ್ಥೆಯಾಗಿತ್ತೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದೆವು. ಬ್ರಿಟಿಷರೊಡನೆ ನಡೆಸಿದ ಯುದ್ಧಗಳಿಂದಲೂ ಹದಿನಾಲ್ಕನೆ ಲೂಯಿಯ ವೈಭವವಿಜೃಂಭಣೆಯಿಂದಲೂ ಸಂಭವಿಸಿದ ನಷ್ಟಗಳಿಂದ ದೇಶವು ಇನ್ನೂ ಚೇತರಿಸಿಕೊಂಡಿರಲಿಲ್ಲ. ತತ್ರಾಪಿ ಅವುಗಳಿಗಾಗಿ ರಾಜ್ಯದಲ್ಲಿ ವಸೂಲಿಯಾಗುತ್ತಿದ್ದ ತೆರಿಗೆ ಸುಂಕಗಳು ಬಡಬಗ್ಗರಾದವರಿಂದ ಹುಟ್ಟಬೇಕಾಗಿತ್ತು. ಶ್ರೀಮಂತವರ್ಗದವರು ತೆರಿಗೆ ತೆರುವ ಸಂಪ್ರದಾಯವೇ ಇರಲಿಲ್ಲ. ಅನ್ಯಾಯಪೂರಿತವಾದ ಆ ಪರಿಸ್ಥಿತಿಯಲ್ಲಿ ಗೋಳಿಟ್ಟು ಬದುಕನ್ನು ನೂಕುತ್ತಿದ್ದ ರೈತಾಪಿ ಜನರೂ ಕೂಲಿಗಾರರೂ ನಿರುಪರಾಯರಾಗಿ ಎಂದಾದರೂ ಮೃಗಪ್ರಾಯರಾಗಿ ವರ್ತಿಸುವಂತಿತ್ತು. ಪಟ್ಟಣಗಳ ವರ್ತಕರು ನ್ಯಾಯವಾದಿಗಳು ಮುಂತಾದ ನೆಮ್ಮದಿವಂತರು ಅದನ್ನು ತಿಳಿದು ಯೋಚನಾಪರರಾಗಿ ಬೇರಾವ ಬಗೆಯಿಂದಲೂ ಮೇಲಾಗುವುದಿಲ್ಲವೆಂದೂ ಗುಂಪುಕಟ್ಟಿ ರಾಷ್ಟ್ರಪಲ್ಲಟ ನಡೆಸುವುದೊಂದೇ ಪರಿಹಾರೋಪಾಯವೆಂದೂ ನಿಶ್ಚಯಿಸಿಕೊಂಡರು. ಸಾಮಾನ್ಯಜನರೆಲ್ಲರೂ ಒಟ್ಟುಗೂಡಿದರು.

ಅಮೆರಿಕದ ಸುದ್ದಿಯು ಆ ಸನ್ನಿವೇಶದಲ್ಲಿ ತಿಳಿದುಬಂತು. ದರ್ಪಿಷ್ಠನಾದ ಬ್ರಿಟಿಷ್ ರಾಜನನ್ನು ಕಾಲೊನಿ ಜನರು ಪ್ರತಿಭಟಿಸಿ ನಿಂತು ಧೀರರಾಗಿ ಹೋರಾಡಿ ಸ್ವಾತಂತ್ರ್ಯವನ್ನು ಸಾಧಿಸಿಕೊಂಡ ಸಮಾಚಾರ. ಕಾಲೊನಿಗಳವರ ಪಕ್ಷದಲ್ಲಿ ಸೇರಿಕೊಂಡಿದ್ದ ಫ್ರೆಂಚ್ ಜನರೂ ಹಿಂತಿರುಗಿ ಬಂದರು. ಅವರೆಲ್ಲರ ಮನೋಭಾವಗಳೂ ಹೊಸರೂಪ ತಾಳಿದ್ದುವು. ಸ್ವದೇಶಕ್ಕೆ ಹಿಂತಿರುಗಿ ಬಂದವರು ಅಲ್ಲಿಯ ರಾಜನ, ಶ್ರೀಮಂತರ ಮತ್ತು ಮತಗುರುಗಳೆನಿಸಿದವರ ಸ್ವಾರ್ಥವನ್ನೂ ಕ್ರೌರ್ಯವನ್ನೂ ಕಂಡು ಸಹಿಸಲಾರದೆ ಹೋದರು. ದೂರದೇಶದವರಿಗೆ ಸಹಾಯಮಾಡಿದವರು ಸ್ವದೇಶದಲ್ಲಿ ಅನ್ಯಾಯಗಳನ್ನು ನೋಡಿಕೊಂಡು ಸುಮ್ಮನಿರುವುದು ಸಾಧ್ಯವೇ? ಬ್ರಿಟಿಷರ ಮೇಲೆ ಪ್ರತೀಕಾರಕ್ಕೆಂದು ಫ್ರೆಂಚ್ ಸರ್ಕಾರದವರು ಕಾಲೊನಿಗಳ ಜನರಿಗೆ ಸಹಾಯಕೊಟ್ಟುದರ ಪ್ರತಿ

ಫಲವು ಅಪೇಕ್ಷಿತವಾದ ರೂಪವನ್ನು ತಾಳಿಕೊಂಡಿತು. ಫ್ರಾನ್ಸಿನ ಆಡಳಿತದ ರೀತಿಯನ್ನೇ ತಲೆಕೆಳಗೆ ಮಾಡಲು ಪ್ರಾರಂಭಿಸಿದರು ಅಮೆರಿಕದಿಂದ ಹಿಂದಿರುಗಿ ಬಂದವರು. ಜಾರ್ಜ್ ದೊರೆಯ ದಬ್ಬಾಳಿಕೆಯನ್ನು ತಡೆಯಲು ನಡೆದ ಅಮೆರಿಕನ್ನರ ದಂಗೆ ಸಫಲವಾದುದನ್ನು ಕಂಡ ಫ್ರೆಂಚ್ ಜನರ ಮನಸ್ಸಿನಲ್ಲಿ ಬಗೆ ಬಗೆಯಾದ ಆಸೆಗಳೂ ಸಂಕಲ್ಪಗಳೂ ಬಲಗೊಂಡವು.


ಮುಖ್ಯಪ್ರಶ್ನೆ ೭೯: ಫ್ರಾನ್ಸಿನ ಮಹಾಪಲ್ಲಟ[1]ದಲ್ಲಿ ನಡೆದ ಮುಖ್ಯಾಂಶವೇನು?

೧೭೮೯ ರಲ್ಲಿ ಮೊದಲಾಯಿತು ಮಹಾಪಲ್ಲಟವೆಂಬುದು. ಮೊದಮೊದಲು ಯಾವ ಉಗ್ರತೆಯೂ ತೋರಲಿಲ್ಲ. **ಸ್ಟೇಟ್ಸ್ ಜೆನೆರಲ್** (States-General) ಎಂಬ ರಾಷ್ಟ್ರೀಯ ಮಹಾಸಭೆ ಸೇರಬೇಕೆಂದು ಜನರು ಮನಃಪೂರ್ವಕ ಇಚ್ಛೆಯಿಂದ ಹೇಳಿದರು. ಆ ಸಭೆಯನ್ನು ಸೇರಿಸಿ ಎಷ್ಟೋ ವರ್ಷಗಳು ಕಳೆದು ಹೋಗಿದ್ದುವು. ಆ ಸಭೆಯು ಸೇರಿದ ಕೂಡಲೇ ಕಾನೂನನ್ನು ಎರಡು ರೀತಿಗಳಲ್ಲಿ ಬದಲಾಯಿಸಬೇಕೆಂದು ನಿರ್ಧರವಾಯಿತು—(೧) ಶ್ರೀಮಂತ ವರ್ಗದವರೂ ತೆರಿಗೆಗಳನ್ನು ಸಲ್ಲಿಸಬೇಕು (೨) ನಿಷ್ಪಕ್ಷಪಾತವಾದ ನ್ಯಾಯತೀರ್ಮಾನವನ್ನು ಪಡೆಯುವುದರಲ್ಲಿ ಬಡವರಿಗೂ ಭಾಗ್ಯವಂತರಿಗೂ ಸಮಾನವಾದ ಹಕ್ಕಿರತಕ್ಕದ್ದು. ರಾಜನು ಇವುಗಳಿಗೆಲ್ಲ ಬಹಿರಂಗದಲ್ಲಿ ಒಪ್ಪಿಗೆಕೊಟ್ಟರೂ ಅಂತರಂಗದಲ್ಲಿ ವಿಳಂಬಮಾಡಿ ನೋಡೋಣವೆಂದುಕೊಂಡನು. ಗೋಪ್ಯವಾಗಿ ಸೈನ್ಯವನ್ನು ಸಿದ್ಧಪಡಿಸಿ ಜನರ ಸೊಕ್ಕನ್ನು ಮುರಿಯಬೇಕೆಂದಿದ್ದ ಆತನ ಅಂತರಂಗದ ಉದ್ದೇಶ ಜನರಿಗೆ ತಿಳಿಯಿತು. ಆ ಕೂಡಲೇ ಪ್ಯಾರಿಸ್ ನಗರದ ಜನರೆಲ್ಲ ಒಟ್ಟಾಗಿ ಸೇರಿ ಹಲವು ಮೈಲಿಗಳು ಹೊರಟು **ವರ್ಸೇಯ್** ಎಂಬ ಅರಮನೆ ಮುಂದೆ ಸಿದ್ಧರಾದರು. ರಾಜನನ್ನು ಬಲಾತ್ಕಾರದಿಂದ ಪ್ಯಾರಿಸ್ಸಿಗೆ ಕರೆದುಕೊಂಡು ಹೊರಟರು. ಅಲ್ಲಿಯ ಅರಮನೆಯಲ್ಲಿ ರಾಜನು ನಿರ್ಬಂಧದಲ್ಲಿ ಸಿಕ್ಕಿದಂತಾಯಿತು. ತನ್ನ ಆಪ್ತರಾದ ಶ್ರೀಮಂತರು ಕೂಡಿಸಿಟ್ಟ ಸೈನ್ಯವನ್ನು ಸೇರಿಕೊಳ್ಳುವ ಉದ್ದೇಶದಿಂದ ೧೭೯೧ ರಲ್ಲಿ ರಾಜನು ವೇಷಧಾರಿಯಾಗಿ ರಹಸ್ಯವಾಗಿ ಪ್ಯಾರಿಸ್ಸಿನಿಂದ ಹೊರಟನು. ಆದರೆ ಸ್ಟ್ರಾಸ್‌ಬುರ್ಗ್ (Strasburg) ಪಟ್ಟಣವನ್ನು ತಲಪುವುದರೊಳಗಾಗಿ ದಾರಿಯಲ್ಲಿಯೇ ಜನರು ರಾಜನನ್ನು ಗುರ್ತಿಸಿ ಹಿಂದಕ್ಕೆ ಪ್ಯಾರಿಸ್ಸಿಗೊಯ್ದರು. ಇದರಿಂದ ರಾಜನ ವಾಗ್ದಾನದಲ್ಲಿ

---

[1] ಫ್ರಾನ್ಸ್ ದೇಶದ ಚರಿತ್ರೆಯಲ್ಲಿ ನಾಲ್ಕು ಪಲ್ಲಟಗಳುಂಟು. ಅವುಗಳಲ್ಲಿ ಮೊದಲನೆಯದು ಪ್ರಳಯದಂತಿತ್ತು. ಆದ್ದರಿಂದ ಅದನ್ನು ಮಹಾಪಲ್ಲಟವೆನ್ನಬೇಕು.

ವಿಶ್ವಾಸವೆಂಬುದು ಮಾಯವಾಯಿತು. ಪಾರ್ಲಿಮೆಂಟ್ ಸಭೆಯ ಸಮ್ಮತಿಗನು ಸಾರವಾದ ವಿಧಿಗಳನ್ನು ಪಾಲಿಸುವ ಸಾಂಕುಶಪ್ರಭುತ್ವ ಸ್ಥಾಪನೆಯ ಆಸೆ ದೂರವಾಯಿತು. ಉಗ್ರಪಕ್ಷದವರು ಪ್ರಬಲರಾದರು.



ಗಿಲ್ಲೊಟೀನ್ ಯಂತ್ರ

ವಿಳಂಬವನ್ನು ಸಹಿಸದವರು ಉಗ್ರಪಕ್ಷದವರು; ರಾಜತ್ವವೇ ಅನರ್ಥಕಾರವೆನ್ನುತ್ತಿಲಿದ್ದವರು. ರಾಜವಂಶಸ್ಥರಾರಾದರೂ ಉಳಿದರೆ ಮುಂದಕ್ಕೆ ತೊಂದರೆ ತೋರಬಹುದೆಂದು ಆ ಪಕ್ಷದವರು ರಾಜನನ್ನೂ ರಾಜಬಂಧುಗಳನ್ನೂ ಕೊನೆಗಾಣಿಸುವ ನಿಶ್ಚಯಮಾಡಿಕೊಂಡರು. ವಿನೂತನವಾಗಿ ರಚಿತವಾಗಿದ್ದ **ಗಿಲ್ಲೊಟೀನ್** (guillotine) ಎಂಬ ಶಿರಃಕೃಂತಕ ಯಂತ್ರಕ್ಕೆ ೧೭೯೩ರಲ್ಲಿ ರಾಜನನ್ನು ಬಲಿಗೊಟ್ಟರು. ೧೭೯೩ ಮತ್ತು ೧೭೯೪ನೆ ವರ್ಷಗಳಲ್ಲಿ ರಾಣಿಯೂ ರಾಜಬಂಧುಗಳೂ ರಾಜಪಕ್ಷದ ಸಾವಿರಾರು ಶ್ರೀಮಂತರೂ ಆಹುತಿಯಾದರು. ಉಗ್ರಪಕ್ಷದವರಿಗೆ ದ್ರೋಹಿಗಳೆಂದು ತೋರಿದವರಿಗೆಲ್ಲ ಇದೇ ಗತಿಯಾಯಿತು. ಈ ರೀತಿ ನಡೆದ ಘೋರ ಮಾರಣಪೂಜೆಗಳಿಂದ ಆ ಕಾಲಕ್ಕೆ **ಬೀಭತ್ಸಪ್ರಕರಣ** (Reign of Terror) ವೆಂದು ಹೆಸರು. ತಾವು ನಡೆಸಿದ ಕಾರ್ಯಕಲಾಪಗಳನ್ನು ವಿರೋಧಿಸಬಹುದೆಂಬ ಗುಮಾನಿಯ ಮೇಲೆ ಅನೇಕ ನಿರಪರಾಧಿಗಳನ್ನೂ ಆ ಪಕ್ಷದವರು ಬಲಿಗೊಟ್ಟರು. ರಾಷ್ಟ್ರದ ಕ್ಷೇಮಕ್ಕಾಗಿ ಎಂತಹ ಅನ್ಯಾಯ ಅತ್ಯಾಚಾರಗಳನ್ನಾದರೂ ಆಚರಿಸಲು ಸಿದ್ಧರಾದ ಆ ಪಕ್ಷಕ್ಕೆ **ರೋಬ್ಸ್‌ಪಿಯೆರ್** (Robespierre) ಎಂಬಾತನು ಪ್ರಮುಖನಾಗಿದ್ದನು. ತನಗೆ ವಿರೋಧಿಗಳಾದವರನ್ನು ಆತನು ಅದೇ ರೀತಿಯಲ್ಲಿ ವಧೆಮಾಡಿಸಿದನು. ಕಡೆಗುಳಿದ ಹಲಕೆಲವರು ವಿರೋಧಿಗಳು ತಮಗೂ ವಿಪತ್ತು ತೋರಬಹುದೆಂದೆಣಿಸಿ ಒಟ್ಟುಗೂಡಿ ರೋಬ್ಸ್

ಪಿಯೆರನನ್ನೇ ಗಿಲ್ಲೊಟೀನಿಗೊಡ್ಡಿದರು. ಆತನು ಸತ್ತಬಳಿಕ ಬೀಭತ್ಸಲೀಲೆ ಮುಗಿದಂತಾಯಿತು. 'ರಿಪಬ್ಲಿಕ್' ರೂಪದ ರಾಷ್ಟ್ರದ ರಚನೆಯಾಯಿತು. ವಂಶಪರಂಪರೆಯಾದ ರಾಜತ್ವ ಮಾಯವಾಗಿ ಜನರ ಚುನಾವಣೆಯಿಂದ ಬಂದ ರಾಷ್ಟ್ರಾಧ್ಯಕ್ಷನ ಪದವಿಗಾರಂಭವಾಯಿತು.

ಮುಖ್ಯಪ್ರಶ್ನೆ ೮೦ : ಫ್ರಾನ್ಸ್ ಮಹಾಪಲ್ಲಟದಲ್ಲಿ ಗುಣದೋಷಗಳು ಯಾವುವು?

ಈ ಪಲ್ಲಟದಲ್ಲಿ ಭಯಾವಹವಾದ ಅತ್ಯಾಚಾರ ಬಲಾತ್ಕಾರಗಳೂ ನಿರಪರಾಧಿಗಳ ಹತ್ಯವೂ ನಡೆದುದು ನಿಶ್ಚಯ. ಆದರೆ ಇದರಿಂದ ಫ್ರೆಂಚ್ ಜನರಿಗೆ ಕೆಲವು ಮಹೋಪಕಾರಗಳು ಸ್ಥಿರಗೊಂಡುವು. ಮೊದಲನೆಯದಾಗಿ ಶ್ರೀಮಂತರೂ ಮತಗುರುಗಳೂ ಅನುಭವಿಸುತ್ತಿದ್ದ ವಿಶೇಷ ಗೌರವಾಧಿಕಾರಗಳು ನಷ್ಟವಾದುವು. ಬಡವರಿಗೂ ಭಾಗ್ಯವಂತರಿಗೂ ಒಂದೇ ವಿಧಿಯು ಏರ್ಪಟ್ಟಿತು. ಬಡವರ ಮೇಲೆ ತೆರಿಗೆ ಹೆಚ್ಚಾಗಿ ಬೀಳುವುದಾಗಲಿ ಶ್ರೀಮಂತರು ತೆರದೆ ತಪ್ಪಿಸಿಕೊಳ್ಳುವುದಾಗಲಿ ಇನ್ನು ಮುಂದೆ ಅಸಾಧ್ಯವಾಗಿ, ಯೋಗ್ಯತೆಗೆ ತಕ್ಕ ತೆರಿಗೆಯನ್ನು ಸಲ್ಲಿಸುವಂತೆ ವ್ಯವಸ್ಥೆಯಾಯಿತು. ಎರಡನೆಯದಾಗಿ ಶ್ರೀಮಂತಜಮೀನ್ದಾರರ ಆಶ್ರಯದಲ್ಲಿ ಬಡಜನರು ಸಿಕ್ಕಿ ಗುಲಾಮರಂತೆ ನರಳುವ ಪರಿಸ್ಥಿತಿಯು ತಪ್ಪಿತು. ಏಕೆಂದರೆ ಶ್ರೀಮಂತರಿಗೆ ಸೇರಿದ್ದ ಭಾರಿ ಜಮೀನುಗಳನ್ನೆಲ್ಲ ಹಂಚಿಕೆಮಾಡಿ ಮಧ್ಯಮವರ್ಗದವರಿಗೂ ನಿಮ್ನವರ್ಗದವರಿಗೂ ಮಾರಿದರು. ಮೂರನೆಯ ಮಹೋಪಕಾರವೆಂದರೆ ವ್ಯಾಪಾರದ ಅಭಿವೃದ್ಧಿಗೆ ಅನುಕೂಲವಾಯಿತು. ಯೋಗ್ಯತೆಗೆ ತಕ್ಕ ಜೀವಿಕವನ್ನು ಪ್ರತಿಯೊಬ್ಬರೂ ಅನುಸರಿಸಬಹುದಾಯಿತು. ಜನ್ಮಸಿದ್ಧ ಹಕ್ಕುಗಳೆಂಬುವು ಎಲ್ಲರಿಗೂ ಸಮಾನವಾದ ರೀತಿಯಲ್ಲಿ ಸ್ಥಾಪನೆಯಾದ ಕಾರಣ ಕೇವಲಜನ್ಮಮಾತ್ರದಿಂದ ಶ್ರೇಷ್ಠರೆನಿಸುವ ಕಾಲವು ಕಳೆದುಹೋಯಿತು.

ಘೋರ ಬಲಾತ್ಕಾರದಿಂದ ಅನೇಕ ಅತ್ಯಾಚಾರಗಳು ಸಂಭವಿಸಿದಾಗ್ಯೂ ಫ್ರೆಂಚ್ ಜನರು ಪಲ್ಲಟವನ್ನು ವಿರೋಧಿಸದಿದ್ದುದೇಕೆ? ಕಠೋರ ಕೃತ್ಯಗಳಿಗಾಗಿ ಹಾಹಾಕಾರಪಟ್ಟು ಪರಿತಾಪಗೊಂಡಾಗ್ಯೂ ಪಲ್ಲಟದ ಪರಿಣಾಮವಾಗಿ ತಮಗೆ ಹೊಸಕಾಲ ಪ್ರಾಪ್ತಿಯಾದೀತೆಂದು ನಂಬಿದರು. ಇಂಗ್ಲಂಡಿನ ಜನರನೇಕರಿಗೆ ಈ ಅಂಶವು ಅರ್ಥವಾಗಲಿಲ್ಲ. ದರ್ಪಿಷ್ಠ ಪ್ರಭುತ್ವವನ್ನು ಕೊನೆಗಾಣಿಸಲು ಇಷ್ಟಪಟ್ಟವರು ಕೂಡ ಈ ಬೀಭತ್ಸ ಪ್ರಕರಣವನ್ನು ಕೇಳಿದಾಗ ವಿಮುಖರಾದರು. ಅಂತಹವರಲ್ಲೆಲ್ಲ ಎಡ್ಮಂಡ್ ಬರ್ಕ್ (Edmund Burke)

ಎಂಬಾತನು ಪ್ರಖ್ಯಾತ. ಭಾಷಣ ಲೇಖನಗಳಲ್ಲಿ ಪ್ರೌಢಿಮೆಯನ್ನೂ ಪಟುತ್ವ ವನ್ನೂ ಕಾಣಿಸಿ ಪ್ರಸಿದ್ಧನಾದವನು. ರಾಷ್ಟ್ರ ನೀತಿಜ್ಞರಲ್ಲಿ ಅಗ್ರೇಸರನೆನಿಸಿ ದವನು. ಆತನೂ ಫ್ರಾನ್ಸ್ ಪಲ್ಲಟವನ್ನು ಖಂಡಿಸುತ್ತ ಭಾಷಣಗಳನ್ನು ಕೊಟ್ಟನು. ಆದರೆ ಇಂಗ್ಲಿಷ್ ಜನರಿಗೆ ದರ್ಪಿಷ್ಠ ಪ್ರಭುತ್ವದ ಆತಂಕವು ಆ ವೇಳೆಗೆ ತೊಲಗಿತ್ತು. ಮೂರನೇ ಜಾರ್ಜ್ ದೊರೆಯು ಅಮೆರಿಕನ್ನರನ್ನು ರೇಗಿಸಿ ಅನರ್ಥವನ್ನು ತಂದಿಟ್ಟ ಬಳಿಕ ಅಂತಹ ತೊಂದರೆ ತೋರುವುದು ಅಸಂಭವವಾಗಿತ್ತು. ಫ್ರೆಂಚ್ ಜನರಿಗೆ ಸ್ವಾತಂತ್ರ್ಯವೆಷ್ಟು ಪ್ರಿಯತಮ ವಾಗಿದ್ದಿತೋ ಅದರ ಸಾಧನೆಗಾಗಿ ಎಷ್ಟು ಘೋರ ಕಷ್ಟಗಳನ್ನು ಅನುಭವಿ ಸಲು ಆ ಜನರು ಸಿದ್ಧರಾಗಿದ್ದರೋ ಇಂಗ್ಲಿಷ್ ಜನರಿಗೆ ಪ್ರಾಯಶಃ ಸರಿಯಾಗಿ ಅರ್ಥವಾಗಲಿಲ್ಲ. ಎಷ್ಟು ನರಕಯಾತನೆಯನ್ನಾದರೂ ಸಹಿಸಿಕೊಳ್ಳುವ ಸ್ಥೈರ್ಯವನ್ನು ತಮ್ಮ ಹೃದಯಗಳಲ್ಲಿ ತಾಳಿದ ಫ್ರೆಂಚರಿಗೆ ಸ್ವಾತಂತ್ರ್ಯ ಕ್ಕಾಗಿ ಎಷ್ಟು ನಷ್ಟವನ್ನಾದರೂ ಪಡುವ ಸಿದ್ಧತೆಯಿತ್ತು. ಎಂತಹ ವಿಪತ್ತು ತೋರಿದರೂ ಅದನ್ನೆದುರಿಸುವ ಧೈರ್ಯಸಾಹಸಗಳು ಅವರ ಹೃದಯಗಳಲ್ಲಿ ಸ್ವಾತಂತ್ರ್ಯ ಪ್ರೇಮದಿಂದ ಹುಟ್ಟಿದ್ದವು. ನೆರೆರಾಜ್ಯಗಳಾದ ಆಸ್ಟ್ರಿಯ ಮತ್ತು ಪ್ರಷ್ಯಗಳ ಪ್ರಭುಗಳು ಒಟ್ಟುಸೇರಿ ಫ್ರೆಂಚರನ್ನಡಗಿಸಲು ಮನಸ್ಸು ಮಾಡಿ, ಏಕಕಾಲದಲ್ಲಿ ತಮ್ಮ ಸೈನ್ಯಗಳನ್ನು ಹೊರಡಿಸಿ ಫ್ರಾನ್ಸನ್ನು ಮುತ್ತಿ ದರು. ಆಗ ಫ್ರೆಂಚ್ ಜನರ ಧೈರ್ಯಸ್ಥೈರ್ಯಗಳ ಪರೀಕ್ಷೆಯಾಯಿತು. ಪಲ್ಲಟ ಪ್ರಕರಣಗಳ ಮಧ್ಯೆ ಅವ್ಯವಸ್ಥೆಯಲ್ಲಿದ್ದಾಗ್ಯೂ ಫ್ರೆಂಚ್ ಜನರು ಸೈನ್ಯ ಗಳನ್ನು ಸಜ್ಜುಗೊಳಿಸಿದರು. ಮುತ್ತಿಬಂದ ಆಸ್ಟ್ರಿಯ ಜರ್ಮನಿ ಸೈನ್ಯಗಳನ್ನು ತಡೆದರು. ಸ್ವಲ್ಪಕಾಲದಲ್ಲಿ ತಮ್ಮನ್ನು ಮುತ್ತಲೆಳಸಿದವರ ದೇಶಗಳನ್ನು ಮುತ್ತಿ ಪಲ್ಲಟಕಾರಕವಾದ ಮನೋಭಾವವನ್ನು ಹಬ್ಬಿಸಿದರು. ಆ ವೇಳೆಯಲ್ಲಿ ಜಗ ತ್ತಿಗೇ ಅತಿ ಪ್ರಚಂಡ ದಂಡನಾಯಕನೆನಿಸಿದ ನಪೋಲಿಯನ್ನನ ಲೀಲೆಯು ನಡೆಯಿತು.

ಮುಖ್ಯಪ್ರಶ್ನೆ ೮೧: ನಪೋಲಿಯನ್ ಫ್ರೆಂಚರ ಸಮ್ರಾಟನಾದುದು ಹೇಗೆ?

ನಪೋಲಿಯನ್ನನ ಹೆಸರು ಸ್ಮರಿಸಿದ ಕೂಡಲೆ ಪೃಥ್ವಿಯಲ್ಲಿ ವಿಜೃಂಭಿಸಿದ ಸರ್ವಾಧಿಕಾರಿಗಳಲ್ಲಿ ಒಬ್ಬನಾಗಿ ತೋರುವನು. ಸ್ವೇಚ್ಛೆಯಿಂದ ಪ್ರಭುತ್ವ ಮಾಡಿದ ಜಗತ್ಪ್ರಚಂಡರಲ್ಲಿ ಅಗ್ರಗಣ್ಯನೆನಿಸುವನು. ಅಂತಹವನು ಫ್ರಾನ್ಸಿನಲ್ಲಿ ಆಳಿದ್ದು ಹೇಗೆ? ಸ್ವೇಚ್ಛೆಯಿಂದಿರಲಾಸೆಪಟ್ಟ ತಮ್ಮ ರಾಜನನ್ನು ಬಲಿಗೊಟ್ಟ ಜನರು ನಪೋಲಿಯನ್ನನ ಸ್ವೇಚ್ಛಾಚಾರವನ್ನು ಹೇಗೆ ಮೆಚ್ಚಿದರು?

ಸ್ವೇಚ್ಛಾಚಾರವೇ ಹುಟ್ಟುಗುಣವಾಗಿದ್ದ ನಪೋಲಿಯನ್ನನಿಗೆ ಫ್ರಾನ್ಸ್ ಪಲ್ಲಟವು ನಡೆಯದಿದ್ದಲ್ಲಿ ಅಧಿಕಾರವೇ ದೊರಕುತ್ತಿರಲಿಲ್ಲ. ಶ್ರೀಮಂತ ಕುಲದವನೂ ಅಲ್ಲ, ಭಾಗ್ಯವಂತನಾಗಿ ಹುಟ್ಟಿದವನೂ ಅಲ್ಲ. ಆದ್ದರಿಂದ ದೊಡ್ಡ ಹುದ್ದೆಗೇರಲು ಅವಕಾಶವೆಲ್ಲಿಯದು!

ಹುಟ್ಟಿನಿಂದ ನಪೋಲಿಯನ್ನನು ಹದಿನಾರಾಣೆ ಫ್ರೆಂಚರವನಲ್ಲ. **ಕಾರ್ಸಿಕ** (Corsica) ದ್ವೀಪದಲ್ಲಿ ೧೭೬೯ರಲ್ಲಿ ಆತನು ಹುಟ್ಟಿದ್ದು. ಇಟಾಲಿಯನ್ ವಂಶ. ಕಾರ್ಸಿಕದ್ವೀಪದಿಂದ ಫ್ರೆಂಚರ ಅಧಿಕಾರವನ್ನು ತಪ್ಪಿಸುವ ಆಸೆ ಆತನಿಗೆ ಚಿಕ್ಕಂದಿನಲ್ಲಿ. ಯುದ್ಧವಿದ್ಯೆಯನ್ನು ಕಲಿಯಲು ಫ್ರಾನ್ಸಿಗೆ ಹೊರಟನು. ಸೇರಿಕೊಂಡ ಶಾಲೆಯಲ್ಲಿ ಶಿಕ್ಷಾರ್ಥಿಗಳಾಗಿದ್ದವರೆಲ್ಲರೂ ಆಗರ್ಭ ಶ್ರೀಮಂತ ಮನೆತನದವರು. ಅವರಿಗೆ ಈತನನ್ನು ಕಂಡರೆ ತಾತ್ಸಾರ. ಅದನ್ನೆಲ್ಲಾ ಸಹಿಸಿ ಕೊಳ್ಳುತ್ತ ತನ್ನ ಯೋಚನೆಗಳನ್ನು ತನ್ನಲ್ಲಿಯೇ ಅಡಗಿಸಿಕೊಂಡು ಮೌನವನ್ನು ಅಭ್ಯಾಸಮಾಡಿದನು. ಇತರರಿಗೆ ಈತನ ಮೌನವು ಸರಿಬೀಳದು. ಶಿಕ್ಷಣಕಾಲ ಮುಗಿಯಿತು. ಸೈನ್ಯದಲ್ಲಿ ಹುದ್ದೆ ಸಿಕ್ಕಿತು. ಪಿರಂಗಿಗಳ ಅಂಗದಲ್ಲಿ ಸೇರಿ ಕೊಂಡನು. ಆ ವೇಳೆಗೆ ರಾಷ್ಟ್ರಪಲ್ಲಟವು ಮೊದಲಾಯಿತು. ಪಲ್ಲಟಕಾರಿ ಗಳಿಗನುಕೂಲನಾಗಿ ವರ್ತಿಸುತ್ತ ತನ್ನ ಯುದ್ಧಚಾತುರ್ಯದಿಂದ ಹೆಸರು ಪಡೆದನು. ಆ ಚಾತುರ್ಯವಾದರೋ ಅಸಮಾನವಾಗಿತ್ತು. ಆದುದರಿಂದ ೨೭ನೆ ವಯಸ್ಸಿನಲ್ಲಿಯೇ ಫ್ರೆಂಚರ ಒಂದಾನೊಂದು ಸೈನ್ಯಸಮೂಹಕ್ಕೆ ಸಮಸ್ತಾಧಿಪತಿಯಾದನು. ಆಸ್ಟ್ರಿಯ ಜರ್ಮನಿ ಪಡೆಗಳು ಮುತ್ತಿಬರುತ್ತಿದ್ದ ಕಾಲ. ಆಸ್ಟ್ರಿಯ ಪಡೆಗೆದುರಾಗಿ ತನ್ನ ಸೈನ್ಯವನ್ನು ನಡೆಸಿದ ನಪೋಲಿಯನ್ ಒಂದು ವರ್ಷ ಮಾತ್ರದಲ್ಲಿ ಆಸ್ಟ್ರಿಯದವರನ್ನು ಫ್ರಾನ್ಸಿನ ಮೂಡಲಿಂದ ಹೊಡೆದಟ್ಟಿದುದಲ್ಲದೆ ಆಲ್ಪ್ಸ್ ಶ್ರೇಣಿಗಳನ್ನು ದಾಟಿ ಇಟಲಿಯ ಉತ್ತರ ಭಾಗವನ್ನು ಆಕ್ರಮಿಸಿದನು. ಆಸ್ಟ್ರಿಯದವರು ಸಂಧಿಯನ್ನು ಯಾಚಿಸಿ ಕೊಂಡರು.

ಆ ವೇಳೆಗೆ ಬ್ರಿಟಿಷರೂ ಕೂಡ ಪಲ್ಲಟಪ್ರವರ್ತಕ ಫ್ರೆಂಚರನ್ನು ವಿರೋಧಿ ಸಲು ಸಿದ್ಧರಾದರು. ದ್ವೀಪನಿವಾಸಿಗಳಾದ ಬ್ರಿಟಿಷರನ್ನು ಸೋಲಿಸಲು ನಪೋಲಿಯನ್ನನು ಆಗಿನ ಫ್ರೆಂಚ್ ಸರ್ಕಾರಕ್ಕೆ ಉಪಾಯವನ್ನು ತೋರಿಸಿ ಕೊಟ್ಟನು. ಹಿಂದುಸ್ಥಾನದೊಂದಿಗೆ ಬ್ರಿಟಿಷರು ನಡೆಸುವ ವ್ಯಾಪಾರವನ್ನು ನಿಲ್ಲಿಸಿ ಮೂಡಲಲ್ಲಿ ಅವರು ಕಟ್ಟಿಕೊಂಡಿದ್ದ ವಿಸ್ತಾರಕ್ಷೇತ್ರಗಳನ್ನು ಗೆದ್ದು ಕೊಳ್ಳುವುದು ಪರಮೋಪಾಯವಾಯಿತು. ಅದನ್ನು ಸಾಧಿಸಲು ನಪೋಲಿ ಯನ್ ಸೈನ್ಯದೊಡನೆ ಹೊರಟು, ಉಪಾಯದಿಂದ ಭೂಮಧ್ಯ ಸಮುದ್ರದಲ್ಲಿ



ನಪೋಲಿಯನ್ ಬೋನಪಾರ್ಟ್

ಯಾನಮಾಡಿ, ಈಜಿಪ್ಟ್ ದೇಶದಲ್ಲಿಳಿದು, ಅದನ್ನು ವಶಪಡಿಸಿಕೊಂಡು, ಆ ತರುವಾಯ ಪ್ಯಾಲೆಸ್ಟೈನ್ ಕಡೆ ತಿರುಗಿದನು. ಅದೇ ಮಾರ್ಗದಲ್ಲಿ ನಿರಾತಂಕವಾಗಿ ಆತನು ಹೊರಟಿದ್ದರೆ ಸಿಕಂದರನನ್ನು ಏಾರಿಸಬಹುದಾಗಿತ್ತು. ಆದರೆ ಫ್ರಾನ್ಸಿನಲ್ಲಿ ಬಿಕ್ಕಟ್ಟು ಕಟ್ಟು ಅವ್ಯವಸ್ಥೆಯಾಗಿರುವ ಸುದ್ದಿಯು ತಲಪಿತು. ಆಗ ಹಿಂತಿರುಗುವ ನಿಶ್ಚಯಮಾಡಿ ಸೈನ್ಯವನ್ನು ಈಜಿಪ್ಟಿನಲ್ಲಿಯೇ ನಿಲ್ಲಿಸಿ ಗೋಪ್ಯವಾಗಿ ಫ್ರಾನ್ಸಿಗೆ ಹೊರಟನು. ಆತನಿಲ್ಲದ ವೇಳೆಯಲ್ಲಿ ಈಜಿಪ್ಟ್ ಬಳಿ ಫ್ರೆಂಚರಿಗೆ ಸೋಲಾಯಿತು. ಆದರೇನು? ಹಿಂತಿರುಗಿ ಫ್ರಾನ್ಸಿನಲ್ಲಿ ಕಾಣಿಸಿಕೊಂಡ ನಪೋಲಿಯನ್ ಸ್ವಲ್ಪಕಾಲದಲ್ಲಿಯೇ ಸರ್ವಶಕ್ತನಾದನು.

ಫ್ರಾನ್ಸಿನ ಆಡಳಿತದಲ್ಲಿ ಆಗ ನಾನಾ ಪಕ್ಷಗಳು, ನಾನಾ ನಾಯಕರು. ದೇಶವನ್ನು ಮುತ್ತಲು ಹವಣಿಸಿ ಹೊಂಚುತ್ತಿದ್ದ ಶತ್ರುಗಳಾದರೋ ಬಲಿಷ್ಠರು. ಅಂತಹ ಸನ್ನಿವೇಶದಲ್ಲಿ ಫ್ರಾನ್ಸಿನ ಜನರೆಲ್ಲರೂ ನಪೋಲಿಯನ್ನನಲ್ಲಿ ಭರವಸೆಗೊಂಡರು. **ಕಾನ್ಸಲ್**‌ಗಳೆಂಬ ಬಿರುದಿನಿಂದ ಮೂವರು ಆಡಳಿತವನ್ನು ನಡೆಸುವ ಏರ್ಪಾಡು ನಡೆಯಿತು. ಆ ಮೂವರಲ್ಲಿ ಪ್ರಥಮಗಣ್ಯನಾಗಿ ಗೊತ್ತಾದವನು ನಪೋಲಿಯನ್. ಅಧಿಕಾರ ವಹಿಸಿದ ಕೂಡಲೇ ನಪೋಲಿಯನ್ ಸೈನ್ಯವೆತ್ತಿ ಹೊರಟನು. ತಾನಿಲ್ಲದ ವೇಳೆಯಲ್ಲಿ ಮುಂದೆ ನುಗ್ಗಿದ್ದ ಶತ್ರುಗಳನ್ನು ತಾಗಿ ಸೋಲಿಸಿದನು. ಆಗ ಜನರು ಮೆಚ್ಚುಗೆಯನ್ನು ತೋರಿ ನಪೋಲಿಯನ್ **ಜೀವಾವಧಿ ಕಾನ್ಸಲ್** (First Consul for life) ಆಗಿರತಕ್ಕುದೆಂಬ ನಿಶ್ಚಯವನ್ನು ೧೮೦೨ ರಲ್ಲಿ ಮಾಡಿ ಆತನಿಗೆ ಸರ್ವಾಧಿಕಾರವನ್ನೊಪ್ಪಿಸಿದರು.

ಇತರ ಶತ್ರುಗಳಡಗಿದಂತಿದ್ದರೂ ಬ್ರಿಟಿಷರು ಮಾತ್ರ ಪ್ರಬಲರಾಗಿಯೇ ಇದ್ದರು. ಯುದ್ಧವು ಮೊದಲಾಯಿತು ಪುನಃ ಬೇಗನೆ. ಇಂಗ್ಲಂಡನ್ನು ಮುತ್ತುವ ಪ್ರಯತ್ನವನ್ನು ಕೈಕೊಂಡು ಸಮುದ್ರಬಲವಿಲ್ಲದೆ ಆ ಯತ್ನವು ವ್ಯರ್ಥವೆನಿಸುವ ವೇಳೆಗೆ ಇತರ ಶತ್ರುಗಳು ಭಾರಿ ವ್ಯೂಹ ಕಟ್ಟಿದರು. ಆ ವೇಳೆಗೆ ನಪೋಲಿಯನ್ನನು ತನ್ನ ವಂಶವನ್ನು ಪಟ್ಟದಲ್ಲಿ ಸ್ಥಾಪಿಸುವ ಆಸೆ ಬೆಳೆಸಿದ್ದನು. ಫ್ರೆಂಚ್ ಜನರು ಆತನಿಗೆ **ಸಮ್ರಾಟ್** ಪದವಿ ಬಿರುದುಗಳನ್ನು ಕೊಟ್ಟರು. ೧೮೦೪ ರಲ್ಲಿ ಫ್ರೆಂಚರ ಸಮ್ರಾಟನೆನಿಸಿದವನು ತನ್ನ ಸೈನ್ಯವನ್ನೆತ್ತಿ ಪ್ರಚಂಡರೀತಿಯಲ್ಲಿ ಹೊರಟು ಒಟ್ಟುಗೂಡಿಸನ್ನದ್ಧರಾಗಿದ್ದ ಆಸ್ಟ್ರಿಯ ರಷ್ಯ ಚಕ್ರವರ್ತಿಗಳ ಬಲವನ್ನು **ಔಸ್ಟರ್ಲಿಟ್ಸ್** (Austerlitz) ರಣರಂಗದಲ್ಲಿ (ಡಿಸೆಂಬರ್ ೨, ೧೮೦೫) ಧ್ವಂಸಗೊಳಿಸಿದನು. ಈ ಕದನದ ಪರಿಣಾಮವಾಗಿ ಆಸ್ಟ್ರಿಯದ ಚಕ್ರವರ್ತಿಯು ಶರಣೆಂದನು; ರಷ್ಯದ ಚಕ್ರವರ್ತಿಯು ಆಪ್ತಮೈತ್ರಿಗಾಸೆಪಟ್ಟನು. ಯೂರೋಪಿನಲ್ಲೆಲ್ಲ ನಪೋಲಿಯನ್ನನಿಗೆ ಎದುರಿಲ್ಲ


ವಾಯಿತು. ಆ ಕದನದ ಸುದ್ದಿಯನ್ನು ಕೇಳಿದಾಗ ಬ್ರಿಟಿಷ್ ಪ್ರಧಾನಿ ಕಿರೀ ಪಿಟ್ಟನು ಎದೆಗೆಟ್ಟನು. ಆದರೆ ಬ್ರಿಟಿಷರಿಗೆ ತೋರಿದ್ದ ಅಪಾಯ ತಪ್ಪಿತ್ತು. ಸಮುದ್ರ ಬಲವನ್ನು ಅಸಮಾನವಾಗಿ ಕಟ್ಟಿದ್ದುದರಿಂದ ಅವರು ಫ್ರೆಂಚರ ಮತ್ತು ಸ್ಪಾನಿಷರ ಹಡಗುಗಳನ್ನು ಟ್ರಫಾಲ್ಗರ್ (Trafalgar) ಬಳಿ ಅದೇ ಸಮಯದಲ್ಲಿ (ಅಕ್ಟೋಬರ್ ೨೧, ೧೮೦೫) ನಾಶಗೊಳಿಸಬಲ್ಲವರಾದರು. ಬ್ರಿಟಿಷರ ನೌಕಾಧಿಪತಿಗಳಲ್ಲಿ ಪ್ರಥಮಗಣ್ಯನಾದ ನೆಲ್ಸನ್ ಎಂಬಾತನು ಬ್ರಿಟಿಷರ ಹಡಗುಗಳನ್ನು ಆ ಜಲಯುದ್ಧದಲ್ಲಿ ನಡೆಸಿ ಜಯಪ್ರಾಪ್ತಿಯಾದ



ಲಾರ್ಡ್ ನೆಲ್ಸನ್.

ಕ್ಷಣದಲ್ಲಿ ಗಾಯಗೊಂಡು ಪ್ರಾಣಕೊಟ್ಟನು. ಆ ಜಯದಿಂದ ಬ್ರಿಟಿಷರಿಗೆ ಹೋದ ಚೈತನ್ಯವು ಬಂದಂತಾಯಿತು. ಸಮುದ್ರಗಳ ಸ್ವಾಧೀನತೆಯು ಭದ್ರಗೊಂಡಿತು.

ಯೂರೋಪಿನಲ್ಲಿ ಅಪ್ರತಿಹತನಾದ ನಪೋಲಿಯನ್ ಫ್ರಾನ್ಸ್ ದೇಶವನ್ನು ಸುಸ್ಥಿತಿಗೆ ತಂದಿಟ್ಟನು. ತನಗೆ ಬಂದ ಚಕ್ರವರ್ತಿಪದವಿಯಿಂದ ತೃಪ್ತನಾಗದೆ ಸ್ವಾಧೀನವಾದ ನಾಡುಗಳಿಗೆ ತನ್ನ ಬಂಧುಗಳನ್ನು ಒಡೆಯರನ್ನಾಗಿ ಗೊತ್ತು ಮಾಡಿದನು. ಹಾಲಂಡಿಗೊಬ್ಬ ಸೋದರನನ್ನೂ ಇಟಲಿಗೊಬ್ಬ ಸೋದರನನ್ನೂ ಗೊತ್ತುಮಾಡಿ ಜರ್ಮನಿಯಲ್ಲಿ ವೆಸ್ಟ್‌ಫೇಲಿಯ (Westphalia) ವೆಂಬ ಹೊಸ ರಾಜ್ಯ ಕಟ್ಟಿ ಅದಕ್ಕೆ ಇನ್ನೊಬ್ಬ ಸೋದರನನ್ನು ಅಧಿಪತಿಯನ್ನಾಗಿಟ್ಟನು. ಆತನ ಅಶ್ವಾರೋಹಿ ದಳಪತಿಗಳಲ್ಲೊಬ್ಬನು ನೇಪಲ್ಸಿಗೆ ದೊರೆಯಾದನು. ಮತ್ತೊಬ್ಬ ದಳಪತಿಯನ್ನು ಸ್ವೀಡನ್ನಿನ ಜನರು ತಮ್ಮ



ಸ್ವಂತ ಆಳಿಕೆ ಆಶ್ರಿತ ರಾಷ್ಟ್ರ

ದೊರೆಯೆಂದು ಆರಿಸಿಕೊಂಡರು. ೧೮೦೮ ರಲ್ಲಿ ನಪೋಲಿಯನ್ ಸ್ಪೈನ್ನನ್ನು ಆಕ್ರಮಿಸಿ ಅಲ್ಲಿಗೆ ತನ್ನ ಸೋದರನೊಬ್ಬನನ್ನು ದೊರೆಯಾಗಿ ಕೂರಿಸಿದನು. ದಿನೇ ದಿನೇ ಆತನ ಪ್ರತಾಪವು ಹೆಚ್ಚಿತು. ಆತನಿಗೆ ಮಕ್ಕಳಿಲ್ಲವೆಂಬ ಕೊರಗು ಮಾತ್ರ ಬಲವಾಯಿತು. ಆಗ **ಜೋಸೆಫೀನ್** (Josephine) ಎಂಬ ಹೆಸರಿನಿಂದ ತನ್ನ ಭಾಗ್ಯಲಕ್ಷ್ಮಿಯಂತಿದ್ದ ರಾಣಿಯನ್ನು ತ್ಯಾಗಮಾಡಿ ಆಸ್ಟ್ರಿಯ ಚಕ್ರವರ್ತಿಯ ಮಗಳನ್ನು ಮದುವೆಯಾದನು. ಅದೇ ಆತನ ಅತ್ಯುನ್ನತದಶೆ. ಪಡುವಲ ಐರೋಪ್ಯ ದೇಶಗಳೆಲ್ಲ ಅಧೀನ; ಮೂಡಲಲ್ಲಿದ್ದ ರಷ್ಯ ಚಕ್ರವರ್ತಿಯು ಆಪ್ತಮಿತ್ರ. ಬ್ರಿಟಿಷರು ಮಾತ್ರ ಅಧೀನರಾಗಿರಲಿಲ್ಲ.

ಹಡಗು ಪಡೆಯಿಲ್ಲದೆ ಬ್ರಿಟಿಷರ ದ್ವೀಪವನ್ನು ಮುತ್ತುವುದಾಗದೆಂದು ಹಿಂದಿನ ಅನುಭವದಿಂದ ನಪೋಲಿಯನ್ನನಿಗೆ ತಿಳಿದಿತ್ತು. ಬ್ರಿಟನ್ನಿನವರು ಮಾತ್ರ ತನ್ನ ಅಧಿಕಾರಪದವಿಗೊಪ್ಪದೆ ಇದ್ದುದನ್ನು ಸಹಿಸಿಕೊಂಡಿರಲಾಗಲಿಲ್ಲ. ಆಗ ಬ್ರಿಟಿಷರ ವ್ಯಾಪಾರವನ್ನು ಬಂಧಿಸುವ ಆಲೋಚನೆ ನಡೆಸಿದನು. ಇಂಗ್ಲಂಡಿನೊಡನೆ ಯಾರೂ ವ್ಯಾಪಾರ ನಡೆಸಕೂಡದೆಂದು ಆಜ್ಞೆಯನ್ನು ತನ್ನ ವಶದಲ್ಲಿದ್ದ ರಾಜ್ಯಗಳೆಲ್ಲಕ್ಕೂ ಸಾರಿದನು. ಬರ್ಲಿನ್ ನಗರದಲ್ಲಿದ್ದಾಗ ಆ ಆಜ್ಞೆಗಳು ಹೊರಟಿದ್ದರಿಂದ ಅವುಗಳಿಗೆ **ಬರ್ಲಿನ್ ಡಿಕ್ರೀಸ್** (Berlin Decrees) ಎಂದು ಹೆಸರು. ವ್ಯಾಪಾರವನ್ನು ಪೂರ್ತಿಯಾಗಿ ನಿಲ್ಲಿಸುವುದು ಅಸಾಧ್ಯವಾಯಿತು. ಐರೋಪ್ಯದೇಶಗಳ ಜನರಿಗೆ ಬೇಕಾಗಿದ್ದ ಅನೇಕ ವಸ್ತುಗಳನ್ನು ಬ್ರಿಟಿಷರೇ ತಂದು ಮಾರುತ್ತಿದ್ದರು. ಆಜ್ಞೆಯನ್ನು ಕೊಟ್ಟ ಮೇಲೆ ಅದೇ ವ್ಯಾಪಾರವು ಕಳ್ಳತನದಿಂದ ನಡೆಯಲಾರಂಭವಾಯಿತು. ಪೋರ್ಚುಗಲ್ ದೇಶಸ್ಥರು ಆ ಕಟ್ಟಪ್ಪಣೆಯನ್ನು ಗೌರವಿಸಲಿಲ್ಲ. ಬ್ರಿಟಿಷರು ಅದನ್ನು ತಿಳಿದು ಪೋರ್ಚುಗೀಸರೊಡನೆ ಆಪ್ತತೆಯನ್ನು ಕಟ್ಟಿ ಸ್ಪೈನ್ನಿನಲ್ಲಿ ನಪೋಲಿಯನ್ನನ ಸೋದರನಿಗೆ ವಿರುದ್ಧವಾಗಿದ್ದ ಜನರಿಗೆ ಸಹಾಯ ನೀಡಿದರು. ದಂಗೆಯೆದ್ದ ಸ್ಪಾನಿಷರನ್ನು ನಪೋಲಿಯನ್ ತಾನೇ ಬಂದು ಅಡಗಿಸಿ ಹಿಂತಿರುಗಿದನು. ಆದರೆ ಆ ಜನರು ಫ್ರೆಂಚರನ್ನು ಅಂತರಂಗದಲ್ಲಿ ದ್ವೇಷಿಸುತ್ತ ಬ್ರಿಟಿಷರೊಡನೆ ಸೇರಿಕೊಂಡರು. ಸ್ಪೈನ್ನಿನಲ್ಲಿ ಬ್ರಿಟಿಷರು ದೀರ್ಘಕಾಲದ ಯುದ್ಧವನ್ನು ಬೆಳೆಸಿದರು.

ಈ ಮಧ್ಯೆ ರಷ್ಯದ ಚಕ್ರವರ್ತಿಗೂ ನಪೋಲಿಯನ್ನನಿಗೂ ಮನಸ್ತಾಪವು ಹುಟ್ಟಿ ಬೆಳೆದಿತ್ತು. ಬ್ರಿಟಿಷ್ ವ್ಯಾಪಾರ ಬಂಧನವು ರಷ್ಯದಲ್ಲಿ ನಡೆಯಲಿಲ್ಲ. ಆದುದರಿಂದ ೧೮೧೨ ರಲ್ಲಿ ನಪೋಲಿಯನ್ನನು ರುಷ್ಟನಾಗಿ ಐದು ಲಕ್ಷ ಸೈನ್ಯವನ್ನು ಸೇರಿಸಿ ರಷ್ಯವನ್ನು ಮುತ್ತಿದನು. ಅಪಾರವಾದ ಸೈನ್ಯ, ಅಸಮಸಾಹಸಿ

ಗಳಾದ ಧಳಪತಿಗಳು! ರಷ್ಯವನ್ನು ಪ್ರವೇಶಿಸಿ ಫ್ರೆಂಚ್ ಸೈನ್ಯ ಮುಂದೆ ನುಗ್ಗಿತು. ಆದರೆ ದುರ್ಗತಿಯೇ ಕಡೆಗೆ ಸಂಭವಿಸಿತು. ಆ ಫ್ರೆಂಚ್ ಸೈನ್ಯ ಸೋತುದು ರಷ್ಯದ ಸೈನ್ಯಗಳಿಂದಲ್ಲ, ರಷ್ಯದ ಚಳಿಯಿಂದ. ರಷ್ಯದ ಸೈನ್ಯವನ್ನು ಗೆದ್ದು ಮಾಸ್ಕೊ ರಾಜಧಾನಿಯನ್ನು ಫ್ರೆಂಚರು ವಾಸ್ತವವಾಗಿ ವಶಪಡಿಸಿ ಕೊಂಡು ಹೊಕ್ಕರು. ಆದರೆ ಆ ನಗರದಲ್ಲಿ ಆಹಾರಲೇಶವೂ ದೊರಕಲಿಲ್ಲ; ಸ್ವಲ್ಪ ಕಾಲದಲ್ಲಿಯೇ ಬೆಂಕಿ ತಗಲಿ ನಗರವೆಲ್ಲವೂ ಉರಿಯಲಾರಂಭಿಸಿತು. ರಷ್ಯದವರು ಜಾಣತನದಿಂದ ವರ್ತಿಸಿ ಫ್ರೆಂಚರೆದುರಿನಲ್ಲಿ ಕಾಣಿಸದೆ ಹಿಮ್ಮೆಟ್ಟು ತ್ತಲಿದ್ದು ಶತ್ರುಗಳಿಗೆ ಆಹಾರಸಿಕ್ಕದಿರುವಂತೆ ಪೈರುಪಚ್ಚೆಗಳನ್ನು ನಾಶ ಗೊಳಿಸಿದ್ದರು. ಫ್ರೆಂಚರಿಗೆ ಉಪವಾಸವೇ ಗತಿಯಾಯಿತು. ಆ ಬಳಿಕ ಚಳಿಗಾಲ ಬಂತು. ಫ್ರಾನ್ಸಿನ ಚಳಿಗೂ ರಷ್ಯದ ಚಳಿಗೂ ಅಜಗಜಾಂತರ; ರಷ್ಯದಲ್ಲಿ ಭಯಂಕರವಾದ ಚಳಿ. ಆಗ ಹಿಂತಿರುಗಿ ಹೊರಡುವುದಲ್ಲದೆ ಬೇರೆ ಉಪಾಯವೇ ಕಾಣಲಿಲ್ಲ. ಕಾಶ್ಮೀರದಿಂದ ಕನ್ಯಾಕುಮಾರಿಗಿರುವಷ್ಟು ದೂರ ಮಾಸ್ಕೊವಿಂದ ಫ್ರಾನ್ಸಿಗೆ. ಆ ಯೆರಡುಸಾವಿರ ಮೈಲಿ ದೂರದ ದಾರಿಯನ್ನು ಕಳೆದು ಸ್ವದೇಶವನ್ನು ಸೇರಿಕೊಳ್ಳುವ ಪ್ರಯತ್ನ ನಡೆಯಬೇಕಾಯಿತು. ಆಹಾರ ವಿಲ್ಲದೆ ಕಂಗೆಟ್ಟ ಫ್ರೆಂಚರು ಚಳಿಗೆ ಸಿಕ್ಕಿ ಅತಿಪ್ರಯಾಸದಿಂದ ಹಿಂತಿರುಗಿ ನಡೆದಾಗ ಹಿಂದಿನಿಂದ ರಷ್ಯದವರು ಅವರನ್ನು ಆಕ್ರಮಿಸುತ್ತ ಮಾಯಾವಿ ಗಳಂತೆ ಕಾದಾಡಿದರು. ಸಾವಿರಗಟ್ಟಲೆಯಾಗಿ ಫ್ರೆಂಚ್ ಸೈನಿಕರು ಪ್ರಾಣ ಗಳನ್ನು ತೊರೆದರು. ಮೊದಲು ಹೊರಟಿದ್ದ ಐದು ಲಕ್ಷಗಳಲ್ಲಿ ಅರ್ಧಲಕ್ಷ ವನ್ನುಳಿಸಿಕೊಂಡು ಹಿಂತಿರುಗಿ ತಂದುದೇ ಪರಮಸಾಹಸವೆನ್ನಿಸಿತು. ಕಡೆಗೆ ಸ್ವದೇಶವನ್ನು ತಲಪಿದ ಫ್ರೆಂಚರು ಇಪ್ಪತ್ತುಸಾವಿರ ಮಾತ್ರ. ರಷ್ಯದ ಮುತ್ತಿಗೆ ನಪೋಲಿಯನ್ನನ ಪತನಕ್ಕೆ ಆರಂಭವಾಯಿತು.

ಮುಖ್ಯಪ್ರಶ್ನೆ ೬೨ : ನಪೋಲಿಯನ್ನನ ಪತನವು ಹೇಗೆ ಸಂಭವಿಸಿತು? ಫ್ರಾನ್ಸಿಗೆ ಆತನಿಂದಾದ ಪ್ರಯೋಜನಗಳೇನು?

ಆದರೂ ನಪೋಲಿಯನ್ನನ ಪ್ರತಾಪವು ಕೊನೆಗಾಣಲಿಲ್ಲ. ಆತನು ಸಂಪಾ ದಿಸಿದ ಕೀರ್ತಿಗೆ ಫ್ರೆಂಚರು ಮೆಚ್ಚಿ ಆತನನ್ನು ಗೌರವಿಸುತ್ತಲಿದ್ದರು. ಆದರೆ ಇತರರೆಲ್ಲರೂ ತಮಗೆ ಸುಸಮಯವೊದಗಿತೆಂದು ತಿಳಿದು ಗುಂಪು ಕಟ್ಟಿದರು. ಸ್ಪೈನಿನಲ್ಲಿ ಬ್ರಿಟಿಷರು ಮುತ್ತಿಗೆ ನಡೆಸಿ ಅಲ್ಲಿಯ ಜನರೆಬ್ಬಿಸಿದ್ದ ದಂಗೆಯಲ್ಲಿ ಸಹಾಯಕೊಟ್ಟು ಜಯಶಾಲಿಗಳಾಗುತ್ತಿದ್ದರು. ಆಗ ಆಸ್ಟ್ರಿಯ, ಪ್ರಷ್ಯ ಮತ್ತು ರಷ್ಯ ಪ್ರಭುಗಳು ಒಟ್ಟುಗೂಡಿ ಬ್ರಿಟಿಷರೊಡನೆ ಮಿತ್ರವ್ಯೂಹವನ್ನು

ರಚಿಸಿದರು. ಆ ವ್ಯೂಹವನ್ನು ಸೋಲಿಸಬೇಕೆಂದು ನಪೋಲಿಯನ್ ಮತ್ತೊಂದು ಸೈನ್ಯವನ್ನು ಕಟ್ಟಿದನು. ವಯಸ್ಸು ಸಾಲದ ತರುಣರೂ ವಯಸ್ಸು ತೀರಿದ ವೃದ್ಧರೂ ಸೇರಿಕೊಂಡ ಸೈನ್ಯವಾಯಿತು. ಮಿತ್ರವ್ಯೂಹದ ಸೈನ್ಯಕ್ಕೂ ನಪೋಲಿಯನ್ನಿಗೂ **ಜನಾಂಗಗಳ ಕದನ** (Battle of the Nations) ಎಂದು ಹೆಸರಾದ ಯುದ್ಧ **ಲೈಪ್ಸಿಗ್** (Leipzig) ಬಳಿ ನಡೆಯಿತು. ನಪೋಲಿಯನ್ ಸೋತು ಫ್ರಾನ್ಸಿಗೆ ಹಿಂತಿರುಗಬೇಕಾಯಿತು. ಸಂಧಿ ಪ್ರಯತ್ನಗಳು ಫಲದಾಯಕವಾಗಲಿಲ್ಲ. ಮಿತ್ರವ್ಯೂಹದವರು ಫ್ರಾನ್ಸನ್ನು ಮುತ್ತಿ ಪ್ಯಾರಿಸ್ ನಗರವನ್ನು ವಶಪಡಿಸಿಕೊಂಡರು. ನಪೋಲಿಯನ್ನನ್ನು ಗಡಿಯ ಹೊರಗಿಟ್ಟಿರಬೇಕೆಂದು ನಿಶ್ಚಯಿಸಿ ಇಟಲಿಯ ಒತ್ತಿನಲ್ಲಿರುವ ಎಲ್ಬ ದ್ವೀಪದಲ್ಲಿ ಆತನಿರಬೇಕೆಂದು ಏರ್ಪಡಿಸಿದರು. ಪಲ್ಲಟಕಾಲದಲ್ಲಿ ತಲೆಕೊಟ್ಟಿದ್ದ ರಾಜನ ತಮ್ಮನಿಗೆ ಫ್ರಾನ್ಸಿನ ಪಟ್ಟ ಕೊಡಿಸಿದರು.

ಒಂದು ವರ್ಷಕಾಲ ಕೂಡ ಈ ಏರ್ಪಾಡು ನಡೆಯಲಿಲ್ಲ. ಪರದೇಶಿಗಳ ಸಹಾಯದಿಂದ ದೊರೆತನಕ್ಕೇರಿದ ಬೋರ್ಬನ್‌ವಂಶಸ್ಥನಲ್ಲಿ ಫ್ರೆಂಚರಿಗೆ ಆದರವಿಶ್ವಾಸಗಳಿರಲಿಲ್ಲ. ವೇಳೆಯನ್ನು ಹೊಂಚಿ ನಪೋಲಿಯನ್ ಹಟಾತ್ತಾಗಿ ಫ್ರಾನ್ಸಿಗೆ ಹಿಂತಿರುಗಿ ಸಾಂಕುಶ ರೀತಿಯಲ್ಲಿ ಪ್ರಭುತ್ವವನ್ನು ನಡೆಸುವುದಾಗಿ ಪ್ರಮಾಣ ಮಾಡಿದನು. ಆದರೆ ಎಂದಾದರೂ ಆತನಿಗೆ ಯುದ್ಧದ ಆಸೆಯೇ ಸಹಜವೆಂದು ಮಿತ್ರಮಂಡಲಿಯವರು ಯುದ್ಧಕ್ಕೆ ಸನ್ನಾಹಮಾಡಿಕೊಂಡರು. ೧೮೧೫ನೆ ಇಸವಿ ಜೂನ್ ತಿಂಗಳಲ್ಲಿ **ವಾಟರ್ಲೂ** (Waterloo) ಬಳಿ ಭಾರಿ ಯುದ್ಧ ನಡೆಯಿತು. ಪೂರ್ತಿಯಾಗಿ ಸೋತನು ನಪೋಲಿಯನ್. ತರುವಾಯ ತಾನಾಗಿಯೇ ಬ್ರಿಟಿಷರಿಗೆ ವಶನಾದನು. ಆತನನ್ನು ಯೂರೋಪಿಗೆ ದೂರದಲ್ಲಿಟ್ಟಿರಬೇಕೆಂದು ನಿಶ್ಚಯಮಾಡಿ ಆಫ್ರಿಕದ ಪಕ್ಕದಲ್ಲಿರುವ **ಸೆಂಟ್ ಹೆಲೆನ** (St Helena) ದ್ವೀಪದಲ್ಲಿ ನಿರ್ಬಂಧದಲ್ಲಿಟ್ಟರು. ಉಳಿದ ಆಯುಸ್ಸನ್ನು ಅಲ್ಲಿಯೇ ಕಳೆದು ೧೮೨೧ರಲ್ಲಿ ಆತನು ಕಾಲಗತಿಯನ್ನು ಪಡೆದನು.

ಆತನು ಹೊರಟುಹೋದ ತರುವಾಯ ಫ್ರಾನ್ಸಿನಲ್ಲಿ ಬೋರ್ಬನ್ ವಂಶಜರು ಕೆಲವುಕಾಲ ಆಳಿದರು. ಹಿಂದಿನಷ್ಟು ದರ್ಪವಿಲ್ಲದಿದ್ದರೂ ಅವರ ಆಳಿಕೆಯು ಜನರಿಗೆ ರುಚಿಸಲಿಲ್ಲ. ೧೮೩೦ರಲ್ಲಿ ಒಂದು ಪಲ್ಲಟವಾಯಿತು; ಪುನಃ ೧೮೪೮ರಲ್ಲಿ ಮತ್ತೊಂದು ಪಲ್ಲಟ; ಪುನಃ ೧೮೭೦ರಲ್ಲಿ ಮಗದೊಂದು ಪಲ್ಲಟ. ಕಡೆಗೆ ಫ್ರಾನ್ಸಿನಲ್ಲಿ **ರಿಪಬ್ಲಿಕ್ ರೂಪದ ರಾಷ್ಟ್ರವು** ಸ್ಥಾಪಿತವಾಯಿತು.

ಸಾಧಾರಣವಾಗಿ ನಪೋಲಿಯನ್ನನ್ನು ಕದನಪ್ರಚಂಡನೆಂದು ಮಾತ್ರ ಸ್ಮರಿಸುತ್ತಾರೆ. ಆದರೆ ಅದಕ್ಕೂ ಹೆಚ್ಚಿನ ಸಾಮರ್ಥ್ಯ ಆತನಲ್ಲಿತ್ತೆಂಬುದನ್ನು

ಮರೆಯಬಾರದು. ಪರಾಕ್ರಮಣದಲ್ಲಿ ಮಾತ್ರವೇ ದಕ್ಷನಾಗಿದ್ದಿದ್ದರೆ ಹದಿನೈದು ವರ್ಷಕಾಲ ಫ್ರಾನ್ಸನ್ನು ಯಶಸ್ವಿಯಾಗಿ ಆಳುತ್ತಿದ್ದನೇ? ವ್ಯವಸ್ಥೆಗೊಳಿಸುವುದರಲ್ಲಿ ಆತನದು ಅದ್ವಿತೀಯವಾದ ಪ್ರತಿಭೆ. ಯುದ್ಧವಲ್ಲದೆ ಇತರ ಅಂಶಗಳಲ್ಲಿಯೂ ಆತನ ಬುದ್ಧಿಶಕ್ತಿಯು ಅಪಾರವಾಗಿತ್ತು. ಪ್ಯಾರಿಸ್ ನಗರದಲ್ಲಲ್ಲದೆ ರೈನ್ ನದಿ ಪಕ್ಕದಲ್ಲಿಯೂ ಆಲ್ಪ್ಸ್ ಪರ್ವತದ ಪ್ರಾಂತದಲ್ಲಿಯೂ ರಸ್ತೆಗಳನ್ನು ಹಾಕಿಸುವ ಮತ್ತು ಸೇತುವೆಗಳನ್ನು ಕಟ್ಟಿಸುವ ಏರ್ಪಾಡು ಆತನದು. ಮನಮೋಹಕವಾದ ಸೌಧಗಳಿಂದಲೂ ಸ್ಮಾರಕಚಿಹ್ನೆಗಳಿಂದಲೂ ತುಂಬಿ ಕಂಗೊಳಿಸುವ ಪ್ಯಾರಿಸ್ ನಗರ ಆತನಿಂದಲೇ ರಮಣೀಯ ರಾಜಧಾನಿಯೆನಿಸಿತು. ನ್ಯಾಯವಿಧಿಗಳು ಅಥವಾ ಧರ್ಮಶಾಸ್ತ್ರಗಳು ಒಂದೊಂದೆಡೆಯಲ್ಲಿ ಒಂದೊಂದು ರೀತಿಯಾಗಿದ್ದುದನ್ನು ಕಂಡಾಗ ಆತನು ತಾನೇ ವಹಿಸಿಕೊಂಡು ನ್ಯಾಯಶಾಸ್ತ್ರಜ್ಞರ ಸಭೆ ಸೇರಿಸಿ ವಿಧಿಕೋಶವನ್ನು ರೂಪಗೊಳಿಸಿಟ್ಟನು. **ಕೋಡ್ ನಪೋಲಿಯನ್** (*Code Napoléon*) ಎಂಬ ಹೆಸರು ಪಡೆದ ಆ ವಿಧಿಕೋಶವೇ ಇಂದಿಗೂ ಫ್ರಾನ್ಸಿನಲ್ಲಿ ಮಾತ್ರವಲ್ಲದೆ ಇತರ ಐರೋಪ್ಯ ರಾಷ್ಟ್ರಗಳಲ್ಲಿಯೂ ಬಳಕೆಯಲ್ಲಿದೆ. ಯುದ್ಧರಂಗದಲ್ಲಿ ಆತನ ಸಾಧನೆಯು ನಶ್ವರವಾದುದು; ರಾಷ್ಟ್ರರಂಗದಲ್ಲಿ ಆತನ ಕೌಶಲದಿಂದ ನಿರ್ಮಿತವಾದುದು ಶಾಶ್ವತವಾಗಿದೆ.

ಅಭ್ಯಾಸಗಳು

೧. ಕಾರಣ, ಘಟನೆ, ಪರಿಣಾಮಗಳನ್ನು ಕಾಣಿಸಿ ಫ್ರಾನ್ಸ್ ಮಹಾಪಲ್ಲಟದ ವೃತ್ತಾಂತವನ್ನು ಸಂಕ್ಷೇಪವಾಗಿ ವಿವರಿಸಿ.

೨. ರಾಜನನ್ನು ವಧೆಮಾಡಿದ ಕಾಲದಲ್ಲಿಯೇ ನಪೋಲಿಯನ್ ಫ್ರಾನ್ಸಿಗೆ ಸಮ್ರಾಟನಾದುದು ಹೇಗೆಂದು ವರ್ಣಿಸಿ.

೩. ನಪೋಲಿಯನ್ನನ ಸ್ವಭಾವವೆಂಥದೆಂದು ಬರೆದು ಯಾವ ಅಂಶಗಳಲ್ಲಿ ಪ್ರಬಲನೂ ಯಾವ ಅಂಶಗಳಲ್ಲಿ ದುರ್ಬಲನೂ ಆಗಿದ್ದನೆಂದು ಸ್ಪಷ್ಟಗೊಳಿಸಿ. ಆತನ ಪತನಕ್ಕೆ ಕಾರಣಗಳೇನು?

೪. ಫ್ರಾನ್ಸಿಗೆ ನಪೋಲಿಯನ್ನಿನಿಂದ ಪ್ರಾಪ್ತವಾದ ಉಪಕಾರಗಳು ಯಾವುವು? ಅಪಕಾರಗಳು ಯಾವುವು?

೫. ಸಮುದ್ರಬಲರಾಹಿತ್ಯದಿಂದ ನಪೋಲಿಯನ್ನನ ಜೀವನಚರಿತ್ರೆಯಲ್ಲಿ ತೋರಿಕೊಂಡುದೇನು ವಿವರಿಸಿ.

೨೨ನೇ ಅಧ್ಯಾಯ

ಆರ್ಕ್‌ರೈಟ್, ವಾಟ್ ಮತ್ತು ಸ್ಟೀವನ್ಸನ್— ಔದ್ಯೋಗಿಕಪಲ್ಲಟ

ಮುಖ್ಯಪ್ರಶ್ನೆ ೮೩: ಬ್ರಿಟಿಷ್ ಸಾಮ್ರಾಜ್ಯವೆಂಬುದು ವಿಸ್ತಾರಗೊಂಡುದು ಏಕೆ ಮತ್ತು ಹೇಗೆ?

ಯೂರೋಪಿನ ವಾಯುವ್ಯಮೂಲೆಯಲ್ಲಿರುವ ಸಣ್ಣ ದ್ವೀಪಗಳ ಜನರು ಬ್ರಿಟಿಷರು. ಕಾಲಕ್ರಮದಲ್ಲಿ ಆ ಜನರು ಸಾಗರಗಳಿಗಾಚೆ ಕ್ಷೇತ್ರಗಳನ್ನು ಸಂಪಾದಿಸಿಕೊಂಡು ವಿಶಾಲ ಸಾಮ್ರಾಜ್ಯವನ್ನು ಕಟ್ಟಿದ ಸಂಗತಿಯನ್ನು ಹಿಂದೆಯೇ ಕಂಡೆವು. ನಪೋಲಿಯನ್ನನ ತರುವಾಯ ಆ ಸಾಮ್ರಾಜ್ಯ ಇನ್ನೂ ವಿಸ್ತಾರವಾಗಿ ಮತ್ತಷ್ಟು ಬಲಿಷ್ಠವಾಯಿತು. ಅಂತಹ ಅಭಿವೃದ್ಧಿಗೆ ಮೂಲ ಕಾರಣಗಳೇನೆಂದು ನೋಡೋಣ.

ಮೊದಲನೆ ಕಾರಣವೆಂದರೆ ಬ್ರಿಟಿಷ್ ದ್ವೀಪನಿವಾಸಿಗಳಿಗೆ ಸಹಜವಾಗಿರುವ ಸಾಹಸಗುಣ. ದ್ವೀಪಗಳಲ್ಲಿಯೋ ಸಮಶೀತೋಷ್ಣವುಳ್ಳುದಾಗಿ ಕಲ್ಲುಬಂಡೆಗಳಿಂದ ಕೂಡಿದ ಸಮುದ್ರತೀರಪ್ರದೇಶಗಳಲ್ಲಿಯೋ ಜೀವಿಸುವ ಜನರಿಗೆ ಹುಟ್ಟುಗುಣವಾಗಿಯೇ ಇರುತ್ತದೆ ಸಾಹಸ. ಬಿರುಗಾಳಿ ಬೀಸುತ್ತಿರುವಾಗಲೂ ತಮ್ಮ ಸಣ್ಣ ದೋಣಿಗಳಲ್ಲಿ ಹೊರಟು ಪ್ರಾಣಾಪಾಯವನ್ನೆದುರಿಸುವುದು ನಿತ್ಯಜೀವನದ ಅಂಶ. ಸಹಜಸಾಹಸಿಗಳಾದ ಬ್ರಿಟಿಷರಿಗೆ ದೂರಪ್ರಯಾಣವೆಂದರೆ ಅಥವಾ ಅಜ್ಞಾತವಸ್ತುಗಳನ್ನೂ ಕ್ಷೇತ್ರಗಳನ್ನೂ ಕಾಣುವುದೆಂದರೆ ಉತ್ಸಾಹ. ಈಗಲೂ ಬ್ರಿಟಿಷರಲ್ಲಿ ಉತ್ಸಾಹಸಾಹಸಗಳಿರುವುದು ಕಾಣುತ್ತದೆ. ಉತ್ತರದಕ್ಷಿಣಧ್ರುವಪ್ರದೇಶಗಳನ್ನು ಹುಡುಕಬೇಕೆಂದು ಅಥವಾ ಅತ್ಯುನ್ನತ ಪರ್ವತಶಿಖರಗಳನ್ನು ಏರಬೇಕೆಂದು ಯತ್ನಿಸುವುದು ಆ ಸ್ವಭಾವದಿಂದಲ್ಲವೆ? ಆ ಸ್ವಭಾವದಿಂದಲೇ ಬ್ರಿಟಿಷರು ಸ್ವದೇಶವನ್ನು ಬಿಟ್ಟು ಹೊರಟು ದೂರದೇಶಗಳಲ್ಲಿ ಆತಂಕಗಳಿದ್ದಾಗ್ಗೂ ಲೆಕ್ಕಿಸದೆ ಮನೆಮಾರುಗಳನ್ನು ಕಟ್ಟಿಕೊಂಡು ವಾಸಿಸಬಲ್ಲವರಾದರು. ಕಾಲೊನಿಗಳನ್ನು ಕಟ್ಟುವ ಯೋಗ್ಯತೆಗೂ ಉತ್ಸಾಹ ಸಾಹಸಗುಣಗಳು ಮೂಲ. ಇನ್ನೂ ಒಂದು ಅಂಶ. ದೂರದೇಶದಲ್ಲಿ ನೆಲೆಸಿದ ತರುವಾಯ ಅವರಾಗಲಿ ಅವರ ಮಕ್ಕಳು ಮೊಮ್ಮಕ್ಕಳಾಗಲಿ ತಮ್ಮ ತಾಯಿನಾಡನ್ನು ಮರೆಯಲಿಲ್ಲ. ಆ ನಾಡನ್ನು ಕಾಣದೆ ಇದ್ದರೂ ಮರೆಯಲಿಲ್ಲ.

ತಾವು ಅಲ್ಲಿಯವರೆಂಬ ಹೆಮ್ಮೆಯನ್ನು ಕಾಪಾಡಿಕೊಂಡರು. ಇದರಿಂದ ಕೆಲ ಸನ್ನಿವೇಶಗಳಲ್ಲಿ ಕಷ್ಟವಾಯಿತು. ತಾವು ಆಕ್ರಮಿಸಿದ ಕ್ಷೇತ್ರದ ಪೂರ್ವ ನಿವಾಸಿಗಳೊಂದಿಗೆ ಸೌಹಾರ್ದವು ಬೆಳೆಯದಾಯಿತು. ಪೂರ್ವನಿವಾಸಿಗಳು ಸಂಸ್ಕೃತರಾಗಿದ್ದ ಪಕ್ಷದಲ್ಲಿ ಆ ಕಷ್ಟವು ಸ್ಫುಟವಾಯಿತು. ಹಿಂದುಸ್ತಾನ, ಈಜಿಪ್ಟ್, ಐರ್ಲಂಡ್ ಕ್ಷೇತ್ರಗಳು ದೃಷ್ಟಾಂತಗಳು. ಅಲ್ಲಿ ನೆಲೆಸಿದ ಇಂಗ್ಲಿಷ್ ಜನರು ಇಂಗ್ಲಂಡಿನಲ್ಲಿ ಭಕ್ತಿಯನ್ನು ಬೆಳೆಸಿಕೊಂಡವರಾಗಿ ದೇಶೀಯರಿಂದ ಪ್ರತ್ಯೇಕರಾಗಿರಬೇಕಾಯಿತು. ಆದರೆ ಆ ಅಂಶದಿಂದ ಬಲವೂ ಉಂಟು. ಪೃಥ್ವಿಯ ನಾನಾ ಭಾಗಗಳಲ್ಲಿ ದೂರದೂರವಾಗಿರುವ ಬ್ರಿಟಿಷರಲ್ಲಿ ಆ ಅಂಶದಿಂದಲೇ ಐಕಮತ್ಯವು ಭದ್ರವಾಗಿರುವುದು. ಆ ಐಕಮತ್ಯದಿಂದಲೇ ಸಾಮ್ರಾಜ್ಯದ ಐಕ್ಯಕ್ಕೆ ಚ್ಯುತಿ ತೋರದಿರುವುದು.

ಬ್ರಿಟಿಷರಿಗೆ ಎರಡನೆ ಗುಣ ವ್ಯಾಪಾರಾಸಕ್ತಿ ಅಥವಾ ವರ್ತಕತನದಲ್ಲಿ ಆಕಾಂಕ್ಷೆ. ಹೊಸ ವ್ಯಾಪಾರವನ್ನು ಪ್ರಾರಂಭಿಸುವುದಕ್ಕೂ ಅನ್ಯಕ್ಷೇತ್ರಗಳಲ್ಲಿ ಮನೆಮಾರುಗಳನ್ನು ಕಟ್ಟಿಕೊಂಡು ನೆಲೆಸುವುದಕ್ಕೂ ಆ ಜನರೇ ಮುಂದು. ತಮ್ಮ ಸರ್ಕಾರದವರು ಅನುಕೂಲಮಾಡಿಕೊಟ್ಟು ಪ್ರೇರಿಸುವವರೆಗೂ ಕಾದಿರಲಿಲ್ಲ. ಈಗ ಬ್ರಿಟಿಷ್ ಸಾಮ್ರಾಜ್ಯದ ಭಾಗಗಳಾಗಿರುವ ಅನೇಕ ಕ್ಷೇತ್ರಗಳು ವರ್ತಕರಿಂದ ಸಂಪಾದನೆಯಾದವು; ಬ್ರಿಟಿಷ್ ಆಡಳಿತದವರು ಉದ್ದೇಶಪೂರ್ವಕವಾಗಿ ಗೆದ್ದ ಭಾಗಗಳಲ್ಲ. ಸ್ವತಂತ್ರ ವ್ಯಾಪಾರಿಗಳಾಗಿ ಮೊದಲಿಟ್ಟರು ಬ್ರಿಟಿಷರು; ವ್ಯಾಪಾರಕ್ಕಾಗಿ ಮಳಿಗೆಗಳನ್ನೂ ಕೋಠಿಗಳನ್ನೂ ಕಟ್ಟಿಕೊಂಡರು; ಹಾಗೆಯೇ ಮನೆಮಾಡಿಕೊಂಡರು. ಅದಷ್ಟನ್ನೂ ಸಾಮಾನ್ಯ ವರ್ತಕರು ಸಾಧಿಸಿದ ತರುವಾಯ ಬ್ರಿಟಿಷ್ ಆಡಳಿತದವರು ಪ್ರವೇಶಮಾಡಿದರು. ಹಿಂದುಸ್ತಾನ, ಕನಡ ಮತ್ತು ದಕ್ಷಿಣ ಆಫ್ರಿಕ ಈ ಗತಿಗೆ ದೃಷ್ಟಾಂತಗಳು.

ಮೂರನೆಯಂಶ ಬ್ರಿಟಿಷರಲ್ಲಿರುವ ನೌಕಾಪ್ರಾವೀಣ್ಯ. ನೀರಿನ ಮೇಲೆ ನುಗ್ಗಲು ಮೊದಲಿಂದಲೂ ಗೀಳು; ಅಂಬಿಗತನ ಅವರಿಗೆ ಅನಿವಾರ್ಯ. ದೂರ ವ್ಯಾಪಾರಕ್ಕಾಗಿ ವೇಗಸಂಚಾರಿಗಳಾದ ಹಡಗುಗಳನ್ನು ಕಟ್ಟಿದರು. ದೂರದೂರದಲ್ಲಿದ್ದ ಜನರು ಪರಸ್ಪರ ಸಂಬಂಧಗಳನ್ನು ಪಾಲಿಸಿದರು. ಮಹಾಸಾಗರವೆಂಬುದು ಮಧ್ಯೆನುಗ್ಗಿ ನಿಂತ ರಾಕ್ಷಸನಂತೆ ಭೀಕರವಾಗಿ ಕಾಣಲಿಲ್ಲ; ವೇಗಸಂಚಾರಕ್ಕೆ ಮಾರ್ಗವನ್ನೊದಗಿಸಿ ದೂರಸ್ಥಬಂಧುಗಳೋಡಾಡುವುದಕ್ಕೂ ಒಟ್ಟುಗೂಡಿರುವುದಕ್ಕೂ ಸಹಾಯಮಾಡಲು ಸಿದ್ಧನಾದ ಮಿತ್ರನಂತೆ ಕಂಡಿತು. ಆದ್ದರಿಂದ ದೂರಬಂಧುಗಳನ್ನು ಅಗಲಿಸಲಿಲ್ಲ ಸಾಗರವೆಂಬುದು; ಅವರನ್ನು ಒಟ್ಟುಗೂಡಿಸಿತು. ಬಲಾಢ್ಯವಾದ ನೌಕಾಸಮೂಹ

ವನ್ನು ಬ್ರಿಟಿಷರು ನಿರ್ಮಿಸಿಕೊಂಡು ತಮ್ಮ ಸಾಮ್ರಾಜ್ಯವನ್ನು ಕಾಪಾಡಿಕೊಂಡುದಲ್ಲದೆ ಇತರ ಜನರ ಪೈಪೋಟಿಯನ್ನೂ ಅಡಗಿಸಿದರು. ನೆಲದ ಮೇಲೆ ಅತಿಪ್ರಬಲನಾದ ನಪೋಲಿಯನ್ನನು ಕೂಡ ಬ್ರಿಟಿಷರ ವ್ಯಾಪಾರವನ್ನಾಗಲಿ ಸಾಮ್ರಾಜ್ಯವನ್ನಾಗಲಿ ಆಕ್ರಮಿಸಲಾರದೆ ಹೋದುದಕ್ಕೆ ಬ್ರಿಟಿಷರ



ವ್ಯಾಪಾರಕ್ಕಾಗಿ ವೇಗಸಂಚಾರಿಗಳಾದ ಹಡಗುಗಳನ್ನು ಕಟ್ಟಿದರು

ನೌಕಾಪ್ರಾವೀಣ್ಯ ಪ್ರಾಬಲ್ಯಗಳೇ ಮುಖ್ಯಕಾರಣ. ಜಲಬಲ ಕಡಿಮೆಯಾದಾಗ ಬ್ರಿಟಿಷರಿಗೆ ದೌರ್ಬಲ್ಯ. ಅಮೆರಿಕದ ಕಾಲೊನಿಗಳವರು ದಂಗೆಯೆದ್ದಾಗ ಬ್ರಿಟಿಷರ ಜಲಬಲವು ತಗ್ಗಿತ್ತು; ಅದರಿಂದಲೇ ಆಗ ನಷ್ಟವಾಯಿತು.

ಬ್ರಿಟಿಷರ ಸ್ವಭಾವದಲ್ಲಿ ಕಡೆಯದಾಗಿ ನಾವು ಇನ್ನೊಂದು ಅಂಶವನ್ನೂ ಕಾಣಬೇಕು. ವಿಘ್ನಗಳನ್ನೋ ಆತಂಕಗಳನ್ನೋ ಕಂಡಾಗ ಅವುಗಳನ್ನು ನಿವಾರಿಸಿಕೊಳ್ಳುವ ಉಪಾಯಗಳನ್ನು ಹೊಂದಿಸಬಲ್ಲವರು ಅವರು. ಉಪಾಯಶಾಲಿಗಳೇನೋ ಹೌದು. ಆದರೆ ಏರೋಪ್ಯ ಜಾತಿಗಳಲ್ಲಿ ಎಲ್ಲರೂ ಬ್ರಿಟಿಷರಂತಲ್ಲ. ನಡೆದುಬಂದ ಪದ್ಧತಿಯನ್ನು ಬ್ರಿಟಿಷರು ಬೇಗ ಬದಲಾಯಿಸಿಕೊಳ್ಳತಕ್ಕವರಲ್ಲ. ಆದಷ್ಟು ಕಾಲ ಹಿಂದಿನ ಪದ್ಧತಿಯನ್ನೇ ಹಾಗೂ ಹೀಗೂ ನಡೆಸುತ್ತಲೇ ಇರುವರು. ತೊಂದರೆ ಹೆಚ್ಚಿಬಂದು ಇನ್ನು ಮುಂದೆ ಹಳೆಯ ಪದ್ಧತಿಯು ಅಸಾಧ್ಯವೆನಿಸಿದಾಗ ಬ್ರಿಟಿಷರು ಹಳೆಯದಕ್ಕೂ ಹೊಸದಕ್ಕೂ

ಮಧ್ಯೆ ಒಂದು ಸಮಾಧಾನನ್ಯಾಯ (compromise) ವನ್ನು ಹಿಡಿಯುವರು. ಮಹಾಪಲ್ಲಟಕಾಲದ ಫ್ರೆಂಚರಂತೆಯೋ, ಇತ್ತೀಚೆಗೆ ನಡೆಸಿದ ರಷ್ಯನರಂತೆಯೋ ರುದ್ರರೂಪತಾಳಿ ಹಳೆಯದೆಲ್ಲವನ್ನೂ ನಾಶಮಾಡಿ ಹೊಸದನ್ನು ಬಲವಂತವಾಗಿ ಹಿಡಿಯುವುದಿಲ್ಲ. ಆದಷ್ಟು ಕಡಿಮೆವ್ಯತ್ಯಾಸಗಳನ್ನು ಮಾಡಿಕೊಳ್ಳುತ್ತ ಹಳೆಯ ರೀತಿಯನ್ನು ರಕ್ಷಿಸಿಕೊಂಡು ಆದಷ್ಟು ಜನರಿಗೆ ಹಿತವನ್ನು ಮಾಡುತ್ತಾರೆ. ಈ ಬಗೆಯ ಸಮಾಧಾನ ನ್ಯಾಯವನ್ನು ಅನುಸರಿಸುವುದರಲ್ಲಿ ಅನುಕೂಲವೂ ಪ್ರತಿಕೂಲವೂ ಉಂಟು. ಅಷ್ಟು ಕೆಡದಿದ್ದ ಪರಿಸ್ಥಿತಿಯಲ್ಲಿ ಆ ಉಪಾಯವನ್ನವಲಂಬಿಸಿದರೆ ವಿನಾಶಕಾರಕವಾದ ಘಟನೆಗಳನ್ನು ತಪ್ಪಿಸಿಕೊಳ್ಳಬಹುದು. ಬಹಳ ಕೆಟ್ಟ ಪರಿಸ್ಥಿತಿಯಲ್ಲಿ ಆ ಉಪಾಯದಿಂದ ಪ್ರತಿಕೂಲವೇ ಪ್ರಾಯಶಃ. ಏಕೆಂದರೆ ಆ ಉಪಾಯದಿಂದ ನಿದಾನವಾಗುವುದು; ಕ್ಷಿಪ್ರತೆಯಿಲ್ಲ. ಅಂತೂ ಬ್ರಿಟಿಷರಲ್ಲಿ ಉಪಾಯಕಲ್ಪನೆಯ ಚಾತುರ್ಯವಿದೆ; ಪಲ್ಲಟಕಾರಿಗಳ ಉಗ್ರವೇಗವಿಲ್ಲ.


ನಪೋಲಿಯನ್ ತರುವಾಯ ಒಂದು ಶತಮಾನ ಕಾಲ ಬ್ರಿಟಿಷರೇ ಅಗ್ರಗಾಮಿಗಳು. ಅದಕ್ಕೆ ಅವರ ಉಪಾಯನೈಪುಣ್ಯವೇ ಮೂಲ. ಹೇಗೆಂದು ಮುಂದೆ ಕಾಣುವ.

ಮುಖ್ಯಪ್ರಶ್ನೆ ೮೪ : ಔದ್ಯೋಗಿಕ ಪಲ್ಲಟವೆಂಬುದೇನು? ಯಾವ ಉಪಾಯ ಕಲ್ಪನೆಗಳಿಂದ ಅದು ವೇಗಗೊಂಡಿತು?

ಈ ಕಾಲದವರೆಗೆ ಕೈಗಾರಿಕೆಯ ವಸ್ತುಗಳು ಹಸ್ತಕೌಶಲದಿಂದ ಸಿದ್ಧವಾಗಿ ನಿಜವಾಗಿಯೂ ಕೈಗಾರಿಕೆಯೇ ಆಗಿತ್ತು. ಹಸ್ತಕೌಶಲದಿಂದಲೇ ವಸ್ತು ನಿರ್ಮಾಣವಾಗುತ್ತಿತ್ತು. ಹಸ್ತಕುಶಲಿಗಳು ತಮ್ಮ ಮನೆಗಳಲ್ಲಿಯೇ ಕೆಲಸ ಮಾಡುತ್ತ ಸಣ್ಣಸಣ್ಣ ರಾಶಿಯ ಸರಕನ್ನೇ ತಯಾರಿಸುತ್ತಿದ್ದರು. ಅಂತಹ ಕೈಗಾರಿಕೆಯನ್ನು ನಾವು ಮನೆಕೈಗಾರಿಕೆ (cottage industries) ಅಥವಾ ಗ್ರಾಮೋದ್ಯೋಗವೆನ್ನುತ್ತೇವೆ. ಹಿಂದುಸ್ತಾನದ ಅನೇಕ ಹಳ್ಳಿಗಳಲ್ಲಿ ಇನ್ನೂ ನಡೆದು ಬರುವ ಬಾರಾಬಲೂತಿ ಅಥವಾ ಹನ್ನೆರಡು ಆಯಗಾರರ ಪದ್ಧತಿಯಲ್ಲಿ ಅದೇ ರೀತಿ ಕಾಣುವುದು. ಇಂಗ್ಲಂಡಿನಲ್ಲಿಯೂ ಸರಿಸುಮಾರಾಗಿ ಹಾಗೆಯೇ ಇತ್ತು. ಅಲ್ಲಿಯ ಗ್ರಾಮಗಳಲ್ಲಿ ಹೆಂಗಸರು ಮನೆಗಳಲ್ಲಿ ಕೈರಾಟೆಗಳಿಂದ ನೂಲುತ್ತಿದ್ದರು. ಆ ನೂಲನ್ನು ನೆಯ್ಗೆಯವರು ನೆಯ್ದುಕೊಡುತ್ತಿದ್ದರು. ನೆಯ್ಗೆಯವರಂತೆ ಕುಂಬಾರ, ಕಮ್ಮಾರ, ಬಡಗಿ, ಚಮ್ಮಾರರು ಗ್ರಾಮದಲ್ಲಿರುತ್ತಿದ್ದರು. ಹೀಗಿರಲು ಕಾಲಕ್ರಮದಲ್ಲಿ ಕೆಲವು ಪ್ರದೇಶಗಳು ಅಥವಾ ಪಟ್ಟಣ


ಗಳು ಅಲ್ಲಿಯ ಹಸ್ತಕುಶಲಿಗಳ ಹೆಚ್ಚುಗಾರಿಕೆಯಿಂದಲೋ ಸಾಮಗ್ರಿಯ ಪುಷ್ಟಿಯಿಂದಲೋ ಪ್ರಸಿದ್ಧಿಪಡೆದವು. ನೆಯ್ದ ಗಾಳಿಯ ಪರೆಗೆ ಢಾಕಾ, ರೇಷ್ಮೆಬಟ್ಟೆಗೆ ದಕ್ಷಿಣಫ್ರಾನ್ಸ್, ಉಣ್ಣೆಬಟ್ಟೆಗೆ ಉತ್ತರ ಇಂಗ್ಲಂಡ್, ಕತ್ತಿ ಚೂರಿಗಳಿಗೆ ಸ್ಪೈನಿನ ಟೊಲೀಡೊಪಟ್ಟಣ ವಿಶೇಷವೆನಿಸಿ ಪ್ರಸಿದ್ಧಿಗೊಂಡುದು ಆ ರೀತಿಯಲ್ಲಿ. ಆ ವಸ್ತುಗಳನ್ನು ವ್ಯಾಪಾರಿಗಳು ತಂದಾಗ ಜನರು ಆದರ ತೋರಿ ಹೆಚ್ಚು ಬೆಲೆ ಕೊಟ್ಟು ಕೊಂಡುಕೊಳ್ಳುತ್ತಿದ್ದರು. ಆದರ ಹೆಚ್ಚಿದಂತೆಲ್ಲ ಹೆಚ್ಚುಹೆಚ್ಚು ರಾಶಿಯನ್ನು ತಯಾರಿಸುವುದು ಆ ಕೆಲಸಗಾರರ ವರ್ತನೆಯಾಯಿತು. ಆ ವೇಳೆಯಲ್ಲಿ ತಮ್ಮ ಕೌಶಲವನ್ನು ಹೆಚ್ಚಿಸಿಕೊಳ್ಳಲೂಬೇಕಾಯಿತು, ಉಪಯೋಗಿಸುತ್ತಿದ್ದ ಸಾಧನಗಳನ್ನು ಅಥವಾ ಉಪಕರಣಗಳನ್ನು ಉತ್ತಮಗೊಳಿಸಿಕೊಳ್ಳಲೂ ಬೇಕಾಯಿತು.


ಉತ್ತರ ಅಮೆರಿಕದಲ್ಲಿ ಬ್ರಿಟಿಷರು ನೆಲೆಸಿದಾಗ ಆ ಪ್ರದೇಶದ ಉಷ್ಣಭಾಗಗಳಲ್ಲಿ ಹತ್ತಿ ಚೆನ್ನಾಗಿ ಬೆಳೆಯುತ್ತದೆಂಬ ಸಂಗತಿ ತಿಳಿಯಿತು. ಇಂಗ್ಲಂಡಿನ ವಾಯವ್ಯಭಾಗದ ಲಂಕಾಷೈರ್ ಜಿಲ್ಲೆಯಲ್ಲಿ ಹತ್ತಿ ಬೆಳೆಯದಿದ್ದರೂ ನೂಲುವುದಕ್ಕೂ ನೇಯುವುದಕ್ಕೂ ಅನುಕೂಲವಾದ ತಂಪು ಹವ ಇರುವ ಸಂಗತಿ ಆ ಸಮಯದಲ್ಲಿಯೇ ತಿಳಿದುಬಂತು. ಹಿಂದುಸ್ತಾನದಿಂದ ಹೊತ್ತುತಂದ ಹತ್ತಿ ಬಟ್ಟೆಯನ್ನು ಜನರು ಆದರದಿಂದ ಹೆಚ್ಚುಬೆಲೆಯನ್ನಾದರೂ ಸಲ್ಲಿಸಿ ತೆಗೆದುಕೊಳ್ಳುತ್ತಿದ್ದ ಕಾಲ. ಲಂಕಾಷೈರಿನ ಜನರು ಅಮೆರಿಕದಿಂದ ಹತ್ತಿಯನ್ನು ತರಿಸಿ ನೂಲನ್ನು ತೆಗೆದು ನೆಯ್ದು ಮಾರಿದರೆ ಲಾಭಬರುವುದೆಂದು ಕಂಡರು. ಕೈರಾಟೆಯವರೂ ಕೈಮಗ್ಗದವರೂ ಸಿದ್ಧಗೊಳಿಸಿದ ರಾಶಿಗಿಂತ ಹೆಚ್ಚಿನ ರಾಶಿಯನ್ನು ತಯಾರಿಸಿ ಹೆಚ್ಚಿನ ಲಾಭಪಡೆಯಲು ಆ ಜನರಲ್ಲಿ ಕಾತರತೆ ಹುಟ್ಟಿತು. ಧನಿಕರಾದವರು ನೆಯ್ಗೆಯವರನ್ನು ಗೊತ್ತುಮಾಡಿ ಕಾರ್ಖಾನೆಗಳಲ್ಲಿ ಅನೇಕ ಮಗ್ಗಗಳನ್ನು ಹಾಕಿಸಿ ಕೆಲಸಮಾಡಿಸಲಾರಂಭಿಸಿದರು. ಸ್ವಂತವಾಗಿ ನೆಯ್ದ ಬಟ್ಟೆಯನ್ನು ತಾನೇ ಮಾರಿಕೊಳ್ಳುವ ಬದಲು ನೇಗಾರನು ಸಂಬಳ ಗೊತ್ತುಮಾಡಿಕೊಂಡು ಬಟ್ಟೆಯನ್ನು ಕಾರ್ಖಾನೆಯ ಧಣಿಗೊಪ್ಪಿಸಲು ತೊಡಗಿದನು. ಆ ಧಣಿಯು ಅದನ್ನು ಲಾಭಕ್ಕೆ ಮಾರಿಕೊಳ್ಳಬಲ್ಲವನು. ಬರಬರುತ್ತ ಧಣಿಯಾದವನು ನೇಗಾರರಿಗೆ ಆದಷ್ಟು ಕಡಿಮೆ ಸಂಬಳವನ್ನೋ ಕೂಲಿಯನ್ನೋ ಕೊಡುವುದು ಹೇಗೆ, ಹೆಚ್ಚು ಹೊತ್ತು ಅವರನ್ನು ದುಡಿಸುವುದು ಹೇಗೆ, ಹೆಚ್ಚುಹೆಚ್ಚು ಲಾಭಪಡೆಯುವುದು ಹೇಗೆ ಎಂದು ಯೋಚನೆ ನಡೆಸಿದ್ದು ಸಹಜ. ನೇಗಾರರಲ್ಲಿಯೂ ಪೈಪೋಟಿಯು ಮೊದಲಾಯಿತು. ಹೀಗೆ ಕಾರ್ಖಾನೆಯ ಪದ್ಧತಿಯೆಂಬುದು ಆರಂಭವಾಯಿತು. ಮನೆಯಲ್ಲಿ ಕೈಗಾರಿಕೆಮಾಡುತ್ತಿದ್ದವರಿಗೆ






ನೂಲುವುದು—ಕಯ್ಯಿಂದ, ಯಂತ್ರದಿಂದ





ನೇಯ್ಗೆ—ಕಯ್ಯಿಂದ, ಯಂತ್ರದಿಂದ

ಕಷ್ಟಕಾಲವೊದಗಿತು. ಕಾರ್ಖಾನೆಗಳೊಂದಿಗೆ ಪೈಪೋಟಿಗೆ ನಿಲ್ಲಲಾರದವರಾದರು. ಕೆಲಸಕ್ಕಾಗಿ ಕಾರ್ಖಾನೆಗೆ ಹೊರಟು ಸ್ವಗ್ರಾಮ ಬಿಟ್ಟು ಬೇರೆ ಸ್ಥಳದಲ್ಲಿ ವಾಸಮಾಡಬೇಕಾಗಿ ಬಂತು. ಕಾರ್ಖಾನೆ ಹುಟ್ಟಿದ ಸ್ಥಳದಲ್ಲಿ ಪಟ್ಟಣ ಬಡಾಯಿಸಿತು. ಅಲ್ಲಿ ಕೂಲಿಗಾಗಿ ಕೆಲಸಕ್ಕೊಪ್ಪಿಕೊಂಡವರು ಗುಂಪುಗೂಡಿ ಜೀವಿಸಬೇಕಾಯಿತು. **ಔದ್ಯೋಗಿಕಪಲ್ಲಟವೆಂದು** ಹೆಸರಾದ ಘಟನೆಯಲ್ಲಿ ಇದಿಷ್ಟೂ ಮೊದಲನೆಯ ಹೆಜ್ಜೆಯ ಹಾಗೆ.



ಹಾರ್ಗ್ರೀವ್ಸನ ಸ್ಪಿನ್ನಿಂಗ್ ಜೆನ್ನಿ

ಮುಂದಿನ ಹೆಜ್ಜೆ **ಯಂತ್ರಯೋಜನೆ.** ಹೆಚ್ಚು ಹೆಚ್ಚು ಬಟ್ಟೆ ತಯಾರಾಗಬೇಕೆಂಬ ಆತುರ ಎಲ್ಲರಿಗೂ. ಆಗ **ಜೇಮ್ಸ್ ಹಾರ್ಗ್ರೀವ್ಸ್** (James Hargreaves) ಯಂತ್ರದ ರಾಟೆಯನ್ನು ೧೭೬೭ರಲ್ಲಿ ಹೊಂದಿಸಿ ಅದಕ್ಕೆ ತನ್ನ ಹೆಂಡತಿ ಹೆಸರಿಟ್ಟು ಸ್ಪಿನ್ನಿಂಗ್ ಜೆನ್ನಿ ('spinning-jenny') ಎಂದು ಕರೆದನು. ಚಕ್ರಕ್ಕೊಂದು ಕದಿರಿತ್ತು ಕೈರಾಟೆಯಲ್ಲಿ. ಒಂದೇ ಚಕ್ರವನ್ನು ಸುತ್ತಿ ಅನೇಕ ಕದಿರುಗಳನ್ನು ತಿರುಗಿಸುವಂತೆ ಒಂದು ಚೌಕಟ್ಟಿಗೆ ಅನೇಕ ಕದಿರುಗಳನ್ನು ಬಿಗಿದು ಅದಕ್ಕೆ ಚಕ್ರವನ್ನು ಕಟ್ಟಿದನು (ಚಿತ್ರನೋಡಿ). ಹಲವು ವರ್ಷಗಳ ಬಳಿಕ **ಆರ್ಕ್‌ರೈಟ್** (Arkwright) ಎಂಬ ಮತ್ತೊಬ್ಬ ಲಂಕಾ

ಷ್ಕರಿಸವನು ಅದರಲ್ಲಿ ಮತ್ತೊಂದಂಶವನ್ನು ಹೊಸದಾಗಿ ಕಲ್ಪಿಸಿದನು. ಅರಳೆಯ ಎಳೆಗಳನ್ನು ಲಟ್ಟಣಿಗೆಗಳ ಮಧ್ಯೆ ಒತ್ತಿಸಿದರೆ ದಾರ ಗಟ್ಟಿಯಾಗುವುದನ್ನು ಕಂಡು ಆ ರಾಟೆಯಂತ್ರದಲ್ಲಿ ಲಟ್ಟಣಿಗೆಗಳನ್ನು ಅಥವಾ ರೋಲರುಗಳನ್ನು ಜೋಡಿಸಿದನು. ಆರ್ಕ್‌ರೈಟ್ ಸ್ವಂತವಾಗಿ ಕಾರ್ಖಾನೆಗಳನ್ನು ಕಟ್ಟಿ ಕೊಂಡಿದ್ದನು. ಅವುಗಳಲ್ಲಿ ಸಾಲುಸಾಲಾಗಿ ರಾಟೆಯಂತ್ರಗಳನ್ನಿಟ್ಟು ಎಲ್ಲ ವನ್ನೂ ಜಲಶಕ್ತಿಯಿಂದ ತಿರುಗಿಸುವ ಉಪಾಯಮಾಡಿದನು. ಕಾರ್ಖಾನೆ ಪಕ್ಕದಲ್ಲಿ ಹರಿಯುವ ನೀರಿತ್ತು. ಅದುವರೆಗೂ ಜನರಿಗೆ ತಿಳಿದಿದ್ದುದು ಎರಡೇ ಶಕ್ತಿಗಳು—ಬೀಸುವಗಾಳಿ, ಹರಿಯುವ ನೀರು. ಹಿಟ್ಟು ಬೀಸಿಕೊಳ್ಳಲು ಅವೆರಡನ್ನು ಹಿಂದಿನಿಂದಲೂ ಉಪಯೋಗಿಸಿಕೊಳ್ಳುತ್ತಿದ್ದರು. ಈ ರೀತಿ ಉಪಾಯಗಳನ್ನು ಚಾತುರ್ಯದಿಂದ ಕಲ್ಪಿಸಿಕೊಂಡು ಆರ್ಕ್‌ರೈಟ್ ಧನಿಕನಾದನು.

ಆರ್ಕ್‌ರೈಟನ ಕಾರ್ಖಾನೆಗಳ ಕೆಲಸವನ್ನು ನೋಡಿದವರಲ್ಲಿ **ಎಡ್ಮಂಡ್ ಕಾರ್ಟ್‌ರೈಟ್** (Edmund Cartwright) ಎಂಬಾತನು ಇನ್ನೊಂದು ಉಪಾಯವನ್ನು ರಚಿಸಿದನು. ಕೈಮಗ್ಗಕ್ಕೆ ಬದಲಾಗಿ ಯಂತ್ರಮಗ್ಗವನ್ನು ಯೋಜಿಸಿದವನು ಆತ. ಯಂತ್ರದ ರಾಟೆಯ ಜೊತೆಗೆ ಯಂತ್ರದ ಮಗ್ಗವೂ ಸಿದ್ಧವಾದ ಮೇಲೆ ಕಾರ್ಖಾನೆಗಳಲ್ಲಿ ಹಿಂದಿನಷ್ಟು ಆಳುಗಳೇ ಬೇಕಾಗಲಿಲ್ಲ. ಅದರ ಪರಿಣಾಮವಾದರೋ ಧನಿಕರಿಗೆ ಅನುಕೂಲ, ನೇಗಾರರಿಗೆ ಪ್ರತಿಕೂಲ.


ಮುಖ್ಯಪ್ರಶ್ನೆ ೮೫ : ಹಬೆಯಂತ್ರದ ಕಲ್ಪನೆ ಹೇಗೆ ನಡೆಯಿತು? ಅದರಿಂದ ಯಾವ ಪ್ರಯೋಜನಗಳನ್ನು ಪಡೆದರು?

ಆ ತರುವಾಯ ತಲೆದೋರಿದ್ದು ಕಡೆಯ ಹೆಜ್ಜೆ. ವೇಗವಾಗಿಯೂ ರಾಶಿ ರಾಶಿಯಾಗಿಯೂ ವಸ್ತುಗಳನ್ನು ತಯಾರಿಸಿಡುವ ಉದ್ಯಮದಲ್ಲಿ **ಹಬೆಯಂತ್ರದ ಉಪಯೋಗ.**

ಕಲ್ಲಿದ್ದಲಗಣಿಗಳಲ್ಲಿ ನೀರು ತುಂಬಿದಾಗ ಅದನ್ನು ಎತ್ತಿಹಾಕಲು ಹಬೆ ಯಂತ್ರವು ಆಗಲೇ ಉಪಯೋಗದಲ್ಲಿತ್ತು. ಗಣಿಯು ಆಳವಾದ ಹಾಗೆಲ್ಲ ನೀರನ್ನು ಕೈಗಳಿಂದ ಸೇದಿ ಎತ್ತಿಹಾಕುವುದು ಹೆಚ್ಚುಹೆಚ್ಚು ಕಷ್ಟಕೊಡುತ್ತಿತ್ತು.

ಹಬೆಯ ಶಕ್ತಿಯಿಂದ ಯಂತ್ರವನ್ನು ತಿರುಗಿಸಬೇಕೆಂಬ ಯೋಚನೆಯು ಬಲು ಪುರಾತನ. ಕ್ರಿ.ಶ. ೧ನೆ ಶತಮಾನದಲ್ಲಿಯೇ ಅಲೆಕ್ಸಾಂಡ್ರಿಯದಲ್ಲಿದ್ದ **ಹೆರನ್** (Heron) ಎಂಬ ಶಾಸ್ತ್ರಜ್ಞನು ಅತಿಸಾಮಾನ್ಯವೆನಿಸಿದ ಯಂತ್ರವನ್ನು ಕಲ್ಪಿಸಿದ್ದನು. ಟೊಳ್ಳಾದ ಲೋಹಗೋಳವೊಂದನ್ನು ಅಡ್ಡವಾದ ಅಕ್ಷದ ಮೇಲೆ ತಿರುಗುವಂತೆ ಸಿಕ್ಕಿಸಿ ಆ ಗೋಳಕ್ಕೆ ಬಿರುಕುಳ್ಳ ಕೊಳವೆಗಳನ್ನು

ಚುಚ್ಚಿಟ್ಟಿದ್ದನು. ನೀರುಕಾಯಿಸುವ ಪಾತ್ರೆಗೆ ಕೊಳವೆಗಳನ್ನು ಕಂಬಗಳಂತೆ ನಿಲ್ಲಿಸಿ ಆ ಕಂಬಗಳಿಗೆ ಗೋಳವನ್ನು ತಗುಲಿಸಿದ್ದನು. ನೀರುಕಾದು ಹಬೆಯಾದ ಕೂಡಲೇ ಕಂಬದ ಕೊಳವೆಗಳಲ್ಲೇರಿ ಆ ಹಬೆಯು ಗೋಳದ ತುಂಬ ತುಂಬಿಕೊಂಡು ಬಿರುಕುಕೊಳವೆಗಳ ಮೂಲಕ ಹೊರಕ್ಕೆ ವೇಗವಾಗಿ ನುಗ್ಗುವುದು. ಹಬೆಯ ನುಗ್ಗುವಿಕೆಯಿಂದ ಗಾಳಿಯು ಬೀಸಿ ಗೋಳವನ್ನು ಗಿರ್ರನೆ ಸುತ್ತಿಸುವುದು. ಚಿತ್ರ ನೋಡಿರಿ. ಇದೇ ಮೊದಲು ನಿರ್ಮಿತವಾದ ಹಬೆಯಂತ್ರ. ಬಹುಕಾಲ ಅದನ್ನು ಒಂದು ವಿನೋದವೆಂದೇ ಬಗೆದಿದ್ದರು. ಪ್ರಯೋಜನಕ್ಕಿಟ್ಟುಕೊಳ್ಳಲಿಲ್ಲ. ರಿನೇಸ್ಸಾನ್ಸ್ ಆದ ತರುವಾಯ ಇಟಲಿಗೆ ಬಂದ ಗ್ರೀಕ ಪುಸ್ತಕಗಳಲ್ಲಿ ಆ ಯಂತ್ರದ ವಿವರಣೆಯು ದೊರಕಿತು. ಅದುವರೆಗೂ ಎಲ್ಲಿಯೋ ಅಡಗಿತ್ತು.



ಹೆರನ್ನನ ಹಬೆಯಂತ್ರ


೧೬೯೮ರಲ್ಲಿ **ಥಾಮಸ್ ಸೇವರಿ** (Thomas Savery) ಎಂಬ ಇಂಗ್ಲಿಷರವನು ನೀರನ್ನೆತ್ತಿಹಾಕುವುದಕ್ಕಾಗಿ ಒಂದು ಯಂತ್ರವನ್ನು ರಚಿಸಿದನು. ಅದೇ ಸಮಯದಲ್ಲಿ ಫ್ರಾನ್ಸಿನಲ್ಲಿಯೂ ಹದಿನಾಲ್ಕನೆಲೂಯಿಕಾಲದಲ್ಲಿ ಫ್ರೆಂಚ್ ಶಾಸ್ತ್ರಜ್ಞನಾದ **ಪ್ಯಾಪಿನ್** (Papin) ಎಂಬಾತನು ಸಿಲಿಂಡರ್ (cylinder) ಮತ್ತು ಪಿಸ್ಟನ್ (piston) ಉಳ್ಳ ಯಂತ್ರವನ್ನು ಮೊದಲು ನಿರ್ಮಿಸಿದನು. ಅದರಲ್ಲಿ ನೀರುಕಾಯಿಸಲು ಬೇರೆ ಪಾತ್ರೆಯಿರಲಿಲ್ಲ. ಸಿಲಿಂದರಿನಲ್ಲಿಯೇ ನೀರನ್ನು ತುಂಬಿ ಕಾಯಿಸಬೇಕಾಗಿತ್ತು; ನೀರು ಕುದಿದು ಆವಿಯೆದ್ದಾಗ ಆವಿಯ ಶಕ್ತಿಗೆ ಪಿಸ್ಟನ್ ಹೊರಕ್ಕೆ ನುಗ್ಗುತ್ತಿತ್ತು; ಬೆಂಕಿ ತೆಗೆದಾಗ ಪುನಃ ಯಥಾಪೂರ್ವಸ್ಥಾನಕ್ಕೆ ಬೀಳುತ್ತಿತ್ತು. ಪುನಃ ಬೆಂಕಿಯಿಡುವುದು, ಪುನಃ ಪಿಸ್ಟನ್ ಕೆಳಕ್ಕೆ ಬೀಳುವುದು ಇತ್ಯಾದಿ. ಇದಂತೂ ತುಂಬಾ ನಿದಾನವಾಯಿತು.

ನೀರೆತ್ತುವ ಯಂತ್ರ (water pump) ವನ್ನು ಸಮರ್ಪಕವಾಗಿ ಮೊದಲು ನಿರ್ಮಿಸಿದವನು **ಥಾಮಸ್ ನ್ಯೂಕೋಮನ್** (Thomas Newcomen) ಎಂಬ ಡೆವನ್‌ಷೈರಿನ ಕಮ್ಮಾರನೊಬ್ಬ. ಸೇವರಿ ಈತನಿಂದ ತನ್ನ ಯಂತ್ರಕ್ಕೆ


ಬೇಕಾದ ಕೆಲವು ಭಾಗಗಳನ್ನು ಮಾಡಿಸಿಕೊಂಡಿದ್ದನು. ಅವುಗಳನ್ನು ಕಂಡಿದ್ದ ನ್ಯೂಕೋಮೆನ್ನನ ಬುದ್ಧಿಯೋಡಿತು. ೧೭೦೫ರಲ್ಲಿ ನ್ಯೂಕೋಮೆನ್ ತಾನೇ ಒಂದು ಯಂತ್ರವನ್ನು ರಚಿಸಿದನು. ಅದರ ಚಿತ್ರವನ್ನು ನೋಡಿ. ಕಲ್ಲಿದ್ದಲ ಗಣಿಗಳಲ್ಲಿ ನೀರೆತ್ತಿಹಾಕಲು ಆ ಯಂತ್ರವೇ ಎಲ್ಲೆಲ್ಲಿಯೂ ಉಪಯೋಗಕ್ಕೆ ಬಂತು.

೧೭೬೪ರಲ್ಲಿ ನ್ಯೂಕೋಮೆನ್ನನ ಯಂತ್ರಗಳಲ್ಲಿ ಒಂದರ ಭಾಗವು ಕೆಟ್ಟಿತ್ತು. ಅದನ್ನು ಸರಿಪಡಿಸಲು **ಜೇಮ್ಸ್ ವಾಟ್** (James Watt) ಎಂಬಾತನಲ್ಲಿಗೆ ಕಳುಹಿಸಿಕೊಟ್ಟರು. ಆತನು **ಗ್ಲಾಸ್ಗೊ** (Glasgow) ವಿಶ್ವವಿದ್ಯಾನಿಲಯಕ್ಕೆ ಶಾಸ್ತ್ರೋಪಕರಣಗಳನ್ನು ಮಾಡಿಕೊಡುತ್ತಿದ್ದವನು. ಕೆಟ್ಟಿದ್ದ ಯಂತ್ರವನ್ನು ಕಂಡಕೂಡಲೆ ವಾಟನಿಗೆ ಅದರಲ್ಲಿ ದೋಷವೇನೆಂಬುದು ತಿಳಿಯಿತು. ಆ ದೋಷನಿವಾರಣೆ ಹೇಗೆಂದು ಆಲೋಚಿಸಿ ಕಡೆಗೆ ೧೭೭೪ರಲ್ಲಿ ವಾಟನು ಹೊಸದಾಗಿಯೇ ಒಂದು ಯಂತ್ರವನ್ನು ಹೊಂದಿಸಿದನು. ನೀರೆತ್ತುವುದಕ್ಕೆ ಮಾತ್ರವೇ ಅಲ್ಲದೆ ಅದನ್ನು ಕಾರ್ಖಾನೆಗಳ ಯಂತ್ರಗಳನ್ನು ತಿರುಗಿಸುವುದಕ್ಕೂ ಹಡಗಿನ ಚಕ್ರವನ್ನು ತಿರುಗಿಸುವುದಕ್ಕೂ ಉಪಯೋಗಿಸಬಹುದಾಗಿತ್ತು. ಕಾರ್ಖಾನೆಗಳ ಮಾಲೀಕರು ತಕ್ಷಣವೇ ಆ ಯಂತ್ರವನ್ನಿಟ್ಟುಕೊಂಡರು. ಏಕಂದರೆ ನೂರುಜನ ಮಾಡತಕ್ಕ ಕೆಲಸವನ್ನು ಆ ಯಂತ್ರವೊಂದರಿಂದಲೇ ನಡೆಸಬಹುದಾಗಿತ್ತು. ಆಳುಗಳಿಗಾದರೆ ವಿರಾಮವಿನೋದಗಳು ಬೇಕು; ಯಂತ್ರಕ್ಕೇನು ಬೇಕು? ಕದಿರುಗಳನ್ನೂ ಮಗ್ಗಗಳನ್ನೂ ನಡೆಸಲು ಜಲಶಕ್ತಿಯಿಂದ ತಿರುಗುವ ಯಂತ್ರಕ್ಕಿಂತ ಹಬೆಯ ಯಂತ್ರವು ಎಷ್ಟೋ ಉತ್ತಮವಾಗಿ ಕಂಡುಬಂತು.

೧೮೦೧ರಲ್ಲಿ **ವಿಲಿಯಂ ಸೈಮಿಂಗ್ಟನ್** (William Symington) ಎಂಬಾತನು ವಾಟನ ಹಬೆಯಂತ್ರವನ್ನು ಒಂದು ದೋಣಿಗಿಟ್ಟು ದೋಣಿಯ ಹಿಂದಿನ ತುದಿಯಲ್ಲಿ ಚಕ್ರವನ್ನು ತಿರುಗಿಸುವಂತೆ ಏರ್ಪಡಿಸಿದನು. ದೋಣಿಯು ನೀರಿನಲ್ಲಿ ಚೆನ್ನಾಗಿ ಸಾಗುವುದೆಂದು ತಿಳಿದು ಅದರ ಹಿಂದೆ ಕೆಲವು ತೆಪ್ಪಗಳನ್ನು ಜೋಡಿಸಿ ಕಟ್ಟಿ ಸ್ಕಾಟ್ಲೆಂಡಿನ ಫೋರ್ತ್‌ಕ್ಲೈಡ್ ಕಾಲುವೆಯಲ್ಲಿ ಬಿಟ್ಟನು. ಇದೇ ಜಹಜೆಂಬುದರ ಮೊದಲನೆ ರೂಪ. ಕೆಲವು ವರ್ಷಗಳಲ್ಲಿ ಹಬೆದೋಣಿಗಳೆಂಬುವು ಸುರೂಪಗೊಂಡವು. ಅಮೆರಿಕದವನಾದ **ರಾಬರ್ಟ್ ಫುಲ್ಟನ್** (Robert Fulton) ಎಂಬಾತನು ವಾಟನ ಯಂತ್ರವನ್ನಿಟ್ಟು ಹಲವು ರೀತಿಯ ಹಬೆದೋಣಿಗಳನ್ನು ರಚಿಸಿದನು. ಅಟ್ಲಾಂಟಿಕ್ ಸಾಗರವನ್ನು ಮೊದಲು ದಾಟಿದ ಹಬೆದೋಣಿಯು ಅಮೆರಿಕದವರು ಮಾಡಿದ್ದೇ. ಮೊದಮೊದಲು ಹಬೆದೋಣಿಗಳಿಗೆಲ್ಲ ಇದ್ದುದು ನೀರುತಳ್ಳುವ ಹಲಗೆಗಳನ್ನು ಹೊಂದಿಸಿದ



ನ್ಯೂಕೋಮೆನ್ನನ ಯಂತ್ರ



ವಾಟನ ಏಕಕ್ರಿಯಾಯಂತ್ರ

A, ಸ್ತಂಭಪಾತ್ರೆ ; B, ಹಬೆಪ್ರವಾಹವನ್ನು ವಾಲ್ವುಗಳ ಮೂಲಕ ಸರಿಪಡಿಸುವ ತಿರುಪುಗಳು ; C, D—ಪ್ರತ್ಯೇಕ ಶೀತಕಾರಿ ; E, ಶೀತೋದಕ ಕೂಪ ; F, ಗಾಳಿಪಂಪು ; G, ಉಷ್ಣವಾಪಿ ; J, ಪ್ರಧಾನ ಪಂಪುಯಷ್ಟಿ.

ಚಕ್ರಗಳೇ; ಯಾವಾಗಲಾದರೂ ಯಂತ್ರವು ನಿಂತು ಹೋದೀತೆಂಬ ಶಂಕೆಯಿಂದ ಗಾಳಿಗೆ ಹರಡುವ ವಸ್ತ್ರಪಟಗಳನ್ನು ಸಿದ್ಧವಾಗಿಟ್ಟುಕೊಂಡೇ ಇದ್ದರು. ಸ್ಕ್ರೂಮೊಳೆಯನ್ನು ನೀರಿನಲ್ಲಿ ತಿರುಗಿಸಿ ಆ ಮೂಲಕ ಯಾನಮಾಡುವ ಉಪಾಯವು ಆ ತರುವಾಯ ಗೊತ್ತಾಯಿತು.

ಮುಖ್ಯಪ್ರಶ್ನೆ ೮೬: ರೈಲ್ದಾರಿಗಳನ್ನು ನಿರ್ಮಿಸಿಕೊಂಡುದು ಹೇಗೆ? ಅವುಗಳ ಸಾಧನೆಯಿಂದ ಆದ ಪರಿಣಾಮಗಳೇನು?

ಚಕ್ರಗಳುಳ್ಳ ಬಂಡಿಗೆ ಹಬೆಯ ಯಂತ್ರವನ್ನು ಜೋಡಿಸಿದುದೇ ಕಡೆಯ ಅಂಶ. ಹಾಗೆ ಜೋಡಿಸಿದಾಗ ತಾನಾಗಿತಾನೇ ಸ್ಥಳದಿಂದ ಸ್ಥಳಕ್ಕೆ ಚಲಿಸುವ ಬಂಡಿಯು ಸಿದ್ಧವಾಯಿತು. ಸ್ವಂತಚಲನವುಳ್ಳ ಯಂತ್ರವೆಂಬುದು ರೂಪಗೊಂಡಿತು. ಬಂಡಿಗಳೋಡಾಡುವುದು ಸಾಧಾರಣವಾಗಿ ರಸ್ತೆಮೇಲೆ. ಕಂಬಿಗಳನ್ನು ಯಾವಾಗ ಅಡಿಗಿಟ್ಟರು? ಎಂದರೆ ಕಲ್ಲಿದ್ದಲಗಣಿಗಳಲ್ಲಿ ಭಾರಹೊತ್ತ ಬಂಡಿಗಳು ಸಾಗಲು ಹಿಂದಿನ ಕಾಲದಿಂದಲೂ ಕಬ್ಬಿಣದ ಕಂಬಿಗಳನ್ನುಪಯೋಗಿಸುತ್ತಿದ್ದರು. ಹದಿನೇಳನೆ ಶತಮಾನದಲ್ಲಿ ಕಲ್ಲಿದ್ದಲಹೇರನ್ನು ಸಾಗಿಸಿ ತಂದ ಬಂಡಿಗಳನ್ನು ಹಲಗೆಗಳ ಮೇಲೆ ಬಿಟ್ಟರು; ಹಲಗೆಗಳು ಬೇಗನೆ ಸವೆದು ಹೋದವು. ಆಗ ೧೭೭೬ ರಲ್ಲಿ ಕಬ್ಬಿಣದ ಕಂಬಿಗಳನ್ನು ಹಾಸಿದರು. ಕೆಲಕಾಲವಾದ ಮೇಲೆ ಬಂಡಿಯ ಚಕ್ರಗಳು ಜಾರಿ ಹೋಗದಂತೆ ತಡೆಯಲೆಂದು ಕಂಬಿಗಳನ್ನು L ಅಕ್ಷರದಾಕೃತಿಯಲ್ಲಿ ರಚಿಸಿದರು. ಇನ್ನೂ ಕಾಲ ಕಳೆದ ಮೇಲೆ ಚಕ್ರದ ಅಂಚನ್ನೇ ಆ ಆಕಾರದಲ್ಲಿ ರಚಿಸಿದರು. ಆ ವೇಳೆಗಾಗಲೇ ಹಬೆಶಕ್ತಿಯ ಉಪಯೋಗದಿಂದ **ಸ್ವಂತಚಲನವುಳ್ಳ** ಯಂತ್ರವು ರೂಪಗೊಂಡಿತ್ತು.

೧೮೦೧ ರಲ್ಲಿ ಕಾರ್ನ್‌ವಾಲ್ (Cornwall) ಜಿಲ್ಲೆಯ ತವರದ ಗಣಿಯೊಂದರಲ್ಲಿ **ರಿಚರ್ಡ್ ಟ್ರಿವೆಥಿಕ್** (Richard Trevethick) ಎಂಬ ಕೆಲಸಗಾರನಿದ್ದನು. ರಸ್ತೆಯ ಮೇಲೋಡಾಡುತ್ತಿದ್ದ ಗಾಡಿಯೊಂದಕ್ಕೆ ಅವನು ಪಾಟನ ಹಬೆಯಂತ್ರವನ್ನು ಜೋಡಿಸಿಟ್ಟನು. ೧೮೦೪ ರಲ್ಲಿ ಕಂಬಿಗಳ ಮೇಲೋಡಾಡುವ ಸ್ವಂತಚಲನದ ಗಾಡಿಯನ್ನು ರಚಿಸಿದನು. ಅದೇ ವೇಳೆಯಲ್ಲಿ ನ್ಯೂಕಾಸಲ್ ಬಳಿ ಒಂದು ಕಲ್ಲಿದ್ದಲಗಣಿಯಲ್ಲಿ ಕೆಲಸ ಮಾಡುತ್ತಿದ್ದ ಯುವಕನೊಬ್ಬನು ತನ್ನ ಬುದ್ಧಿಯನ್ನು ಪ್ರಕಾಶಕ್ಕೆ ತಂದನು. ತಂದೆಯಾದರೋ ಗಣಿಯ ಒಲೆಯಲ್ಲಿ ಕೆಲಸಗಾರ, ಬಡವ. ಯುವಕನನ್ನು ಶಾಲೆಗೆ ಕಳುಹಿಸುವಷ್ಟು ಚೈತನ್ಯವಿರಲಿಲ್ಲ. ತಾನೂ ಆದಷ್ಟು ಸಂಪಾದನೆ ತಂದು ಸಂಸಾರಕ್ಕೆ ಸಹಾಯಮಾಡಬೇಕಾಗಿತ್ತು. ಆ ಯುವಕನೇ **ಜಾರ್ಜ್ ಸ್ಟೀವನ್‌ಸನ್**


(George Stephenson). ಆತನು ಮಾಡಬೇಕಾಗಿದ್ದ ಕೆಲಸವಾದರೂ ಏನು? ಹಗ್ಗದಿಂದ ಬೋರೆಯ ಮೇಲಕ್ಕೆ ಕಲ್ಲಿದ್ದಲ ಗಾಡಿಗಳನ್ನೆಳೆಯಲು ನೆಟ್ಟಿದ್ದ ಯಂತ್ರವನ್ನು ನೋಡಿಕೊಳ್ಳುವುದು. ಜಾರ್ಜ್ ಹಾಗೆಯೇ ಯೋಚನೆ ಮಾಡಿದನು. ಹಗ್ಗ ಕಟ್ಟಿ ಗಾಡಿಗಳನ್ನು ಸೇದಿಸುವ ಬದಲು ಗಾಡಿಗಳನ್ನೆಳೆಯುವ ಯಂತ್ರವನ್ನು ರೂಪಗೊಳಿಸುವುದಾಗಲಾರದೇ ಎಂಬುದಾಗಿ ಯೋಚಿಸಿ ೧೮೧೫ ರವೇಳೆಗೆ ಅಂತಹ ಯಂತ್ರಕ್ಕೆ ಹಬೆಯ ಶಕ್ತಿಯನ್ನಿಟ್ಟು ರಚಿಸಿದನು. ಸ್ವಲ್ಪ ಕಾಲದಲ್ಲೇ ಅನೇಕ ಕಲ್ಲಿದ್ದಲಗಣಿಗಳಲ್ಲಿ ಆತನ ಯಂತ್ರವನ್ನಿಡಿಸಿಕೊಂಡರು. 'ಕಲ್ಲಿದ್ದಲ ಗಾಡಿಗಳನ್ನು ಎಳೆಯಬಲ್ಲ ಯಂತ್ರವು ಜನರು ಕುಳಿತ ಬಂಡಿಗಳನ್ನೆಳೆಯಬಾರದೆ?' ಎನ್ನಿಸಿತು ಜನರಿಗೆ. ೧೮೨೫ರಲ್ಲಿ ಸ್ಟೀವನ್ಸನ್ ಅದನ್ನೂ ಸಾಧಿಸಿದನು; **ಸ್ಟಾಕ್ಟನ್** (Stockton) ಮತ್ತು **ಡಾರ್ಲಿಂಗ್ಟನ್** (Darlington) ಎಂಬೆರಡು ಪಟ್ಟಣಗಳ ಮಧ್ಯೆ ರೈಲ್ದಾರಿಯೂ ರೈಲುಬಂಡಿಗಳೂ ಸಿದ್ಧವಾಗಿ ಮೊದಲನೆ ಪ್ರಯಾಣ ನಡೆಯಿತು. ಆಗ ಬಂಡಿಗಳನ್ನೆಳೆದ ಯಂತ್ರವನ್ನು ಈಗಲೂ ಡಾರ್ಲಿಂಗ್ಟನ್ ರೈಲು ಸ್ಟೇಷನಿನಲ್ಲಿ ಕಾಣಬಹುದು.

೧೮೨೯ ರಲ್ಲಿ ಲಿವರ್‌ಪೂಲ್ ಪಟ್ಟಣದಿಂದ ಮಾಂಚೆಸ್ಟರ್ ಪಟ್ಟಣದವರೆಗೆ ರೈಲ್ದಾರಿಯನ್ನು ಕಟ್ಟಬೇಕೆಂಬ ನಿರ್ಧರವಾಯಿತು. ಅದರ ಉಪಯೋಗಕ್ಕಾಗಿ ಅತ್ಯುತ್ತಮಯಂತ್ರವನ್ನು ನಿರ್ಮಿಸಿಕೊಟ್ಟವರಿಗೆ ಐನೂರು ಪೌಂಡುಗಳ ಬಹುಮಾನ ಕೊಡುವುದಾಗಿ ಪ್ರಕಟಿಸಿದರು. ಎಪ್ಪತ್ತು ಮೈಲಿ ದೂರ ಎಳೆಯುವಂತಿರಬೇಕು; ಹೇರಿದ ಗಾಡಿಗಳ ಸಾಲನ್ನು ಎಳೆಯುವ ಶಕ್ತಿಯಿರಬೇಕು. ನಾಲ್ಕು ಮಂದಿ ತಮ್ಮ ಬುದ್ಧಿಯನ್ನುಪಯೋಗಿಸಿ ಬೇರೆ ಬೇರೆ ಯಂತ್ರಗಳನ್ನು ರಚಿಸಿತಂದರು. ಸ್ಟೀವನ್ಸನ್ ಒಂದು ಯಂತ್ರವನ್ನು ನಿರ್ಮಿಸಿ ಅದಕ್ಕೆ **ರಾಕೆಟ್** (*The Rocket*) ಎಂಬ ಹೆಸರಿಟ್ಟಿದ್ದನು. ಅದನ್ನೇ ಮೊದಲು ಉಪಯೋಗಿಸಿ ನೋಡಿದರು. ಎಪ್ಪತ್ತು ಮೈಲಿ ದೂರಕ್ಕೂ ಹೇರಿನ ಗಾಡಿಗಳನ್ನೆಳೆಯಿತು; ಒಂದನ್ನೇ ಬಿಟ್ಟಾಗ ಗಂಟೆಗೆ ೩೫ ಮೈಲಿಗಳ ವೇಗವನ್ನು ತೋರಿಸಿತು. ಇತರ ಯಂತ್ರಗಳಲ್ಲೊಂದಾದರೂ ಪೂರ್ತಿಯಾಗಿ ದಾರಿಯನ್ನು ಕಳೆಯಲೇ ಇಲ್ಲ. ಆದುದರಿಂದ ಸ್ಟೀವನ್ಸನ್ನಿಗೇ ಬಂತು ಬಹುಮಾನ. ಲಿವರ್‌ಪೂಲ್ ಮಾಂಚೆಸ್ಟರ್ ರೈಲೆಂಬುದೇ ಪೃಥ್ವಿಗೆಲ್ಲ ಜನಪ್ರಯಾಣದಲ್ಲಿ ಮೊದಲಿನದು. ಅದಕ್ಕೆ ಸ್ಟೀವನ್ಸನ್ನನೇ ಯಂತ್ರಯೋಜಕನಾಗಿದ್ದನು.

ಹೊಸದಾದ ಈ ವಾಹನೋಪಾಯ ಕ್ಷಿಪ್ರದಲ್ಲಿಯೇ ರೂಢಿಗೆ ಬಂತು. ಇಂಗ್ಲೆಂಡ್ ಒಂದರಲ್ಲಿ ಹತ್ತುವರ್ಷಗಳೊಳಗಾಗಿ ಇನ್ನೂರೈವತ್ತು ರೈಲು

ಕಂಪನಿಗಳು ರೂಪಗೊಂಡವು! ಎಲ್ಲೆಲ್ಲಿಯೂ ರೈಲ್ದಾರಿಗಳನ್ನು ನಿರ್ಮಿಸಲು ಉಪಕ್ರಮವಾಯಿತು. ಜಾರ್ಜ್ ಸ್ಟೀವನ್ಸನ್ನನ ಹೆಸರು ಅಳಿಯದಾಯಿತು. ಔದ್ಯೋಗಿಕಪಲ್ಲಟವೆಂಬುದರಲ್ಲಿ ಕೊನೆಯ ಹೆಜ್ಜೆಯನ್ನಿಟ್ಟಂತಾಯಿತು.

ಹತ್ತೊಂಭತ್ತನೆ ಶತಮಾನದಲ್ಲಿ ಯಂತ್ರಸಹಾಯ ಪಡೆದು ರಾಶಿರಾಶಿಯಾಗಿ ಸರಕನ್ನು ತಯಾರಿಸಿ ಪೃಥ್ವಿಯಲ್ಲಿ ದೇಶದಿಂದ ದೇಶಕ್ಕೆ ಸಾಗಿಸುವ ಏರ್ಪಾಡಿ.



ಸ್ಟೀವನ್ಸನ್ನನ ಸ್ವಂತ ಚಲನಯಂತ್ರ—ರಾಕೆಟ್

ನಿಂದ ಮಾನವಜೀವನದಲ್ಲಿ ತೋರಿದ ವ್ಯತ್ಯಾಸವು ಬಲುದೊಡ್ಡದು. ಪ್ರಾಯಶಃ ನೂತನಶಿಲಾಯುಗದಲ್ಲಿ ವ್ಯವಸಾಯದ ಜ್ಞಾನದಿಂದಾದ ಪರಿಣಾಮ ಅದಕ್ಕೆ ಸಮಾನವಾದುದೆನ್ನಬಹುದು. ಅಷ್ಟು ಪರಿಣಾಮಕಾರಕವಾದ ಘಟನಾವಳಿಯನ್ನು ನಾವು ಪಲ್ಲಟವೆಂದು ಯಥಾರ್ಥವಾಗಿ ಕರೆಯಬಹುದು. ಹಟಾತ್ತಾಗಿ ಆಡಳಿತದಲ್ಲಿ ರೂಪಾಂತರವಾದಾಗ ಅದನ್ನು ರಾಜಕೀಯಪಲ್ಲಟವೆಂದು ಕರೆಯುತ್ತೇವೆ. ಈ ಪಲ್ಲಟದ ರೀತಿಯೇ ಬೇರೆ. ವಸ್ತುಗಳನ್ನು ಸಿದ್ಧಗೊಳಿಸುವುದರಲ್ಲಿಯೂ ಜೀವಿಕವನ್ನಾರಿಸಿಕೊಂಡು ಬಾಳುವುದರಲ್ಲಿಯೂ ಆಕಸ್ಮಿಕವಾಗಿ ನಡೆದಂತೆ ಬದಲಾವಣೆ ನಡೆಯಿತು. ಔದ್ಯೋಗಿಕ ಮತ್ತು ಸಾಮಾಜಿಕ ರೀತಿನೀತಿಗಳಲ್ಲಿ ದೊಡ್ಡ ವ್ಯತ್ಯಾಸವನ್ನುಂಟುಮಾಡಿತು.

ಯಂತ್ರಗಳನ್ನಿಟ್ಟು ಕಾರ್ಖಾನೆಗಳನ್ನು ನಡೆಸುವ ಮಾಲೀಕರಿಗೂ ತಮ್ಮ ಹಿಂದಿನ ಜೀವಿಕವನ್ನೂ ಬದುಕನ್ನೂ ಕಳೆದುಕೊಂಡ ಕುಶಲಕರ್ಮಿಗಳಿಗೂ ಎಂತೆಂತಹ ಜಟಿಲಸಮಸ್ಯೆಗಳು ತೋರಿದವೆಂಬುದನ್ನು ಮುಂದೆ ವಿವರಿಸಿಕೊಳ್ಳಬೇಕು.

ಅಭ್ಯಾಸಗಳು

೧. "ಜಲಜೀವಿಗಳೂ ಸಾಹಸಪ್ರಿಯರೂ ಆದ ಕಾರಣದಿಂದ ಬ್ರಿಟಿಷರು ಸಾಮ್ರಾಜ್ಯವನ್ನು ಕಟ್ಟಿದರು" ಎಂಬುದನ್ನು ಚರ್ಚಿಸಿ.

೨. ಬ್ರಿಟಿಷ್ ಸಾಮ್ರಾಜ್ಯಕ್ಕೂ ರೋಮಕ ಸಾಮ್ರಾಜ್ಯಕ್ಕೂ ಸಾಮ್ಯವು ಯಾವ ಅಂಶಗಳಲ್ಲಿ ಕಾಣುವುದು? ಯಾವ ಅಂಶಗಳಲ್ಲಿ ವ್ಯತ್ಯಾಸ?

೩. ಈ ಕಾಲದಲ್ಲಿ ನಡೆದ ವಿಪರ್ಯಾಸಗಳೆಲ್ಲವನ್ನೂ ಔದ್ಯೋಗಿಕಪಲ್ಲಟವೆಂದು ಕರೆಯುವುದು ಹೇಗೆ ಒಪ್ಪು?

೪. ಯಂತ್ರೋಪಯೋಗದಿಂದ ಮಾನವಜೀವನದಲ್ಲಿ ನಡೆದಿರುವ ವ್ಯತ್ಯಾಸಗಳು ಎಷ್ಟು ಮಾತ್ರ ಉಪಕಾರಿಗಳು? ಎಷ್ಟು ಮಾತ್ರ ಅಪಕಾರಿಗಳು?

೨೩ ನೇ ಅಧ್ಯಾಯ

ಮಾರ್ಕ್ಸ್ ಮತ್ತು ಷಾಫ್ಟ್ಸ್‌ಬೆರಿ—ಸಮಾಜ ಸಂಸ್ಕಾರ

ಮುಖ್ಯಪ್ರಶ್ನೆ ೪೭ : ಔದ್ಯೋಗಿಕಪಲ್ಲಟದ ದೆಸೆಯಿಂದ ಧನವಂತರಿಗೂ ದರಿದ್ರರಿಗೂ ಅಂತರ ಹೆಚ್ಚಿದುದು ಹೇಗೆ?

ಕಾರ್ಲ್ ಮಾರ್ಕ್ಸ್ (Karl Marx) ಜನ್ಮತಃ ಜರ್ಮನ್. ೧೮೧೮ ರಲ್ಲಿ ಆತನು ಹುಟ್ಟಿದ್ದು. ಆ ಕಾಲದಲ್ಲಿ ಜರ್ಮನಿಯನ್ನು ಆಳುತ್ತಿದ್ದಾತನು ದರ್ಪಿಷ್ಠ ಪ್ರಭುಗಳಲ್ಲಿ ಸೇರಿದವನು. ಪಲ್ಲಟಕಾರಕವಾದ ಮನೋಭಾವವೆಂಬುದು ಸ್ವಲ್ಪವಾದರೂ ಆ ಪ್ರಭುವಿಗೆ ಸಹಿಸದು. ಮಾರ್ಕ್ಸ್ ಸ್ವದೇಶದಲ್ಲಿಯೇ ಇದ್ದಿದ್ದರೆ ಹಿಂಸೆಗೂ ನಿರ್ಬಂಧಕ್ಕೂ ಸಿಕ್ಕಿಕೊಳ್ಳುತ್ತಿದ್ದನು. ಆ ಕಾರಣದಿಂದ ಆತನು ಫ್ರಾನ್ಸಿಗೋಡಿ ಅಲ್ಲಿ ಕೆಲಕಾಲವಿದ್ದನು. ತರುವಾಯ ಇಂಗ್ಲಂಡಿನಲ್ಲಿ ತನ್ನ ಆಯುಷ್ಯವನ್ನು ಕಳೆದು ೧೮೮೩ರಲ್ಲಿ ಕಾಲವಾದನು. ಇಂಗ್ಲಂಡಿನಲ್ಲಿದ್ದಾಗಲೇ ಮುಖ್ಯಗ್ರಂಥಗಳನ್ನು ಬರೆದನು.

ಆತನ ಪುಸ್ತಕಗಳಲ್ಲಿ ಅತಿ ಪ್ರಸಿದ್ಧವಾದುದು **ಕ್ಯಾಪಿಟಲ್** (*Capital*) ಎಂಬುದು; 'ಆಸ್ತಿ' ಎಂದುಕೊಳ್ಳಬಹುದು ನಾವು. ಕಾರ್ಖಾನೆಗಳ ಪದ್ಧತಿ ಮೊದಲಾದ ಔದ್ಯೋಗಿಕಪಲ್ಲಟದಿಂದ ಜನಜೀವನದಲ್ಲಿ ತೋರತಕ್ಕ ಪರಿಣಾಮಗಳನ್ನು ಆ ಪುಸ್ತಕದಲ್ಲಿ ವಿಶದಗೊಳಿಸಿದೆ. ಆತನು ಸೂಚಿಸಿದ ಪರಿಣಾಮಗಳಲ್ಲಿ ಕೆಲವು ಆ ವೇಳೆಗಾಗಲೇ ಸಂಭವಿಸಿದ್ದವು. ಗ್ರಾಮೋದ್ಯೋಗಗಳು ಅಥವಾ ಮನೆ ಕೈಗಾರಿಕೆಗಳೆಂಬವು ಕಾರ್ಖಾನೆಗಳೆದುರಿನಲ್ಲಿ ನಾಶವಾಗಿದ್ದವು.

ರೈಲ್ಬಂಡಿಗಳೂ ಜಹಜುಗಳೂ ಅಭಿವೃದ್ಧಿಯಾಗಿ ದೂರದೇಶಗಳಿಂದ ಅಗ್ಗವಾದ ಪದಾರ್ಥಗಳು ವೇಗವಾಗಿ ಸಾಗಿ ಬಂದಾಗಿನಿಂದ ಇಂಗ್ಲಂಡಿನ ರೈತರಿಗೂ ವಿನಾಶಕಾಲವು ಪ್ರಾಪ್ತವಾಯಿತು. ಕನಡ ಮತ್ತು ಸಂಯುಕ್ತ ಸಂಸ್ಥಾನಗಳ ಅತಿ ವಿಶಾಲ ಪ್ರದೇಶಗಳಲ್ಲಿ ಗೋಧಿಯನ್ನು ಬೆಳೆಸಿ ತರಿಸಿದರೆ ಇಂಗ್ಲಂಡಿನಲ್ಲಿ ಬೆಳೆಸಿದ ಗೋಧಿಗಿಂತ ಅಗ್ಗವಾಗಿ ದೊರುಕುತ್ತದೆಯೆಂದು ಧಾನ್ಯವರ್ತಕರು ಕಂಡುಕೊಂಡರು. ಸ್ವಲ್ಪ ಕಾಲದ ತರುವಾಯ ಹಿಂದುಸ್ಥಾನ ಮತ್ತು ದಕ್ಷಿಣ ಅಮೆರಿಕದ ಕ್ಷೇತ್ರಗಳಲ್ಲಿ ಕಡಿಮೆಕೂಲಿ ಕೊಟ್ಟು ಇನ್ನೂ ಅಗ್ಗವಾಗಿ ತರಿಸಿಕೊಳ್ಳಬಹುದೆಂಬುದನ್ನು ಕಂಡರು. ವಿದೇಶೀ ಧಾನ್ಯದ ರಾಶಿ ಅಗ್ಗವಾಗಿ ಮಾರಾಟಕ್ಕಿರುವಾಗ ಸ್ವದೇಶೀ ಧಾನ್ಯವನ್ನು ಸರಿಯಾದ

ಬೆಲೆಗೆ ರೈತರು ಹೇಗೆ ಮಾರಬೇಕು? ಕೊಳ್ಳುವವರು ಯಾರು? ತಾವೂ ಅಗ್ಗವಾಗಿ ಮಾರಿ ನಷ್ಟಪಡುವುದಕ್ಕಿಂತ ವ್ಯವಸಾಯವೃತ್ತಿಯನ್ನೇ ಬಿಟ್ಟುಬಿಡುವುದು ಮೇಲೆಂದುಕೊಂಡು ತಮ್ಮ ಭೂಮಿಗಳನ್ನು ಮಾರಿಬಿಟ್ಟರು. ಧನಿಕರು ಅವುಗಳನ್ನು ಕೊಂಡುಕೊಂಡು ಕಾವಲುಗಳನ್ನಾಗಿಮಾಡಿ ಕುರಿಗಳನ್ನು ಸಾಕಿ ಉಣ್ಣೆಯನ್ನು ಕಾರ್ಖಾನೆಗಳಿಗೆ ಮಾರಿ ಲಾಭ ಪಡೆಯಲು ತೊಡಗಿದರು. ಈ ರೀತಿಯಲ್ಲಿ ಧಾನ್ಯವನ್ನು ಬೆಳೆಸುವುದು ಬ್ರಿಟಿಷರಿಗೆ ನಷ್ಟದ ಕೆಲಸವೂ ಆಯಿತು; ರೈತರಿಗಿದ್ದ ಜೀವನೋಪಾಯವು ಮಾಯವಾಗಿಯೂ ಹೋಯಿತು. ಹಿಂದೆ ರೈತರಾಗಿದ್ದವರು ಕಾರ್ಖಾನೆಪಟ್ಟಣಗಳಲ್ಲಿ ಕೂಲಿಗಾರರಾಗಿ ಬದುಕಬೇಕಾಯಿತು.

ಈ ರೀತಿಗಳಲ್ಲಿ ಬಡವರಿಗೂ ಭಾಗ್ಯವಂತರಿಗೂ ವ್ಯತ್ಯಾಸವೂ ಅಂತರವೂ ಹೆಚ್ಚಿತು. ವ್ಯವಸಾಯ ವೃತ್ತಿಯನ್ನು ಕಟ್ಟಿಕೊಂಡವರಿಗೂ ಚಿಕ್ಕದಾಗಿ ಕೈಗಾರಿಕೆಯನ್ನಿಟ್ಟುಕೊಂಡವರಿಗೂ ಪ್ರಯೋಜನವೇ ಇಲ್ಲದಾಯಿತು. ಅಂತಹವರಿಗೆ ಎರಡೇ ದಾರಿ; ಕಂಪನಿ ಸೇರಬೇಕು ಅಥವಾ ಪರಾಶ್ರಯದಲ್ಲಿದ್ದುಕೊಂಡು ಬದುಕನ್ನು ನಡೆಸಬೇಕು. ಇದು ಹೇಗೆಂದರೆ ಒಂದು ದೃಷ್ಟಾಂತವನ್ನು ಕಾಣುವ.

ಚಿಕ್ಕದಾಗಿ ಹತ್ತಿಯ ಗಿರಣಿಯೊಂದನ್ನು ಸ್ಥಾಪಿಸಿಕೊಂಡು ಅದನ್ನು ನೀವೇ ನಡೆಸುತ್ತಿರುವಿರಿ ಎಂದಿಟ್ಟುಕೊಳ್ಳಿರಿ. ದೊಡ್ಡ ರಾಶಿಯಲ್ಲಿ ನೀವು ಬಟ್ಟೆ ಮಾಡಿಸಲಾರಿರಿ; ಭಾರಿ ಕಾರ್ಖಾನೆಗಳಲ್ಲಿ ದೊಡ್ಡ ರಾಶಿಯನ್ನು ಸಿದ್ಧಗೊಳಿಸಿ ಮಾರಾಟಕ್ಕಿಡುತ್ತಾರೆ; ಅವುಗಳೊಡನೆ ಪೈಪೋಟಿಗೆ ನಿಲ್ಲಲಾಗುವುದಿಲ್ಲ. ಆದ್ದರಿಂದ ನಿಮ್ಮ ಗಿರಣಿಯನ್ನು ದೊಡ್ಡ ಕಾರ್ಖಾನೆಯನ್ನಾಗಿ ಮಾಡೋಣವೆಂದು ಕಂಪನಿ ಕಟ್ಟುವ ಯೋಚನೆ ಮಾಡುವಿರಿ. ಕಾರ್ಖಾನೆ ಕಟ್ಟಲು ಬೇಕಾದ ಹಣವನ್ನು ಶೇಖರಿಸುವುದಕ್ಕಾಗಿ ಹಣವಂತರಿಗೆ ಆಸೆತೋರಿಸಿ ಅವರಿಂದ ಹಣವನ್ನು ಪಡೆಯಬೇಕಾಗುವುದು. ಕಾರ್ಖಾನೆಯಿಂದ ಹುಟ್ಟಿದ ಲಾಭದಲ್ಲಿ ನಿಮಗಿಷ್ಟು ಪಾಲು ಸಲ್ಲುವುದೆಂದು ಹೇಳಿದಾಗ ಹಣವಂತರು ಆಸೆಯಿಂದ ತಮ್ಮ ಹಣವನ್ನು ಕೊಡುವರು. ಹೀಗೆ ಷೇರುಗಳನ್ನು ಗೊತ್ತುಮಾಡಿ ಇತರರಿಂದ ಹಣವನ್ನು ಶೇಖರಿಸಿ ಕಂಪನಿಯನ್ನು ಕಟ್ಟಲಾಗುವುದು. ಆ ಹಣದಿಂದ ಉತ್ತಮ ಯಂತ್ರಗಳನ್ನು ತಂದಿಟ್ಟು ಹೆಚ್ಚು ಲಾಭವನ್ನು ಪಡೆಯಬಹುದು. ಷೇರುದಾರರಿಗೇನೋ ಆ ಲಾಭದಲ್ಲಿ ತಕ್ಕ ಭಾಗವನ್ನು ಸಲ್ಲಿಸಲೇಬೇಕು. ಅವರು ಯಾವ ಕೆಲಸವನ್ನೂ ಮಾಡದೆ ತೆಪ್ಪನಿದ್ದಾಗ್ಗೂ ಅವರ ಹಣವನ್ನು ಪಯೋಗಿಸಿದ್ದುಂಟಲ್ಲವೇ? ಆ ಹಣಕ್ಕಾಗಿ ಅವರಿಗೆ ಬಡ್ಡಿ

ಬರುತ್ತಿತ್ತಲ್ಲವೆ? ಕಾರ್ಖಾನೆಯು ಇನ್ನೂ ಅಭಿವೃದ್ಧಿಯಾಗುತ್ತ ಯೋಗ್ಯ ರಾದ ಮಣೆಗಾರರನ್ನೂ ಶಾಸ್ತ್ರಜ್ಞರನ್ನೂ ಗೊತ್ತುಮಾಡಬೇಕಾಗುವುದು. ನಾವೆಷ್ಟು ಕೆಲಸಮಾಡುತ್ತಿದ್ದರೂ ಅವರು ವಿಶೇಷಜ್ಞರಾದುದರಿಂದ ಅವ ರಿಂದಾಗುವ ಕೆಲಸ ನಮ್ಮಿಂದಾಗಲಾರದು. ದೊಡ್ಡ ಕಾರ್ಖಾನೆಗಳಲ್ಲಿ ನಡೆಯು ವುದು ಹಾಗೆಯೇ—ಮಾಲೀಕರಾದವರು ಸ್ವಸ್ಥರಾಗಿರುವುದು; ಸಂಬಳಕ್ಕೆ ಗೊತ್ತಾದವರು ಕೆಲಸವನ್ನು ನಡೆಸಿಕೊಂಡು ಹೋಗುವುದು; ಅನೇಕ ಷೇರು ಗಳನ್ನು ಒಂದೇ ಕಂಪನಿಯಲ್ಲಿ ತೆಗೆದುಕೊಂಡೋ ಬೇರೆ ಬೇರೆ ಕಂಪನಿಗಳಲ್ಲಿ ತೆಗೆದುಕೊಂಡೋ ಧನವಂತರಾದವರು ತಮ್ಮ ಭಾಗದ ಲಾಭವನ್ನು ಅಥವಾ ಡಿವಿಡೆಂಡನ್ನು ಸ್ವಸ್ಥವಾಗಿ ಪಡೆಯುತ್ತಲಿರುವುದು. ಅದೇ ರೀತಿಯಲ್ಲಿಯೇ ಭಾರಿ ಜಮೀನ್ದಾರನಾದವನು ತನ್ನ ಭೂಮಿಯನ್ನು ಅನೇಕ ರೈತರಿಗೆ ಗುತ್ತಿಗೆಗೆ ಕೊಟ್ಟು, ಅಥವಾ ನಿವೇಶಗಳನ್ನಾಗಿಮಾಡಿ ಬಾಡಿಗೆ ಮನೆಗಳನ್ನು ಕಟ್ಟಿಸಿ, ಅಥವಾ ಕಾರ್ಖಾನೆ ಕಟ್ಟುವವರಿಗೆ ಭೋಗ್ಯಕ್ಕೆ ಕೊಟ್ಟು, ಅಥವಾ ರೈಲ್ದಾರಿ ಯನ್ನು ಕಟ್ಟಿಕೊಳ್ಳಲು ರೈಲ್ವೆ ಕಂಪನಿಗೆ ಕೊಟ್ಟು ತಾನು ಯಾವ ಕೆಲಸವನ್ನೂ ಸ್ವಂತವಾಗಿ ಮಾಡದಿದ್ದರೂ ಸ್ವಸ್ಥವಾಗಿ ವರಮಾನ ಪಡೆಯುತ್ತ ಇರಬಹುದು. ಈ ರೀತಿಗಳಲ್ಲಿ ತಾನು ಕೃಶವಾಗದೆ ಹೊಸ ವರಮಾನವನ್ನು ತರುವ ಆಸ್ತಿ ಅಥವಾ ಧನವನ್ನು **ಬಂಡವಾಳ** (capital) ವೆಂದು ಕರೆಯುವುದು ಶಾಸ್ತ್ರ ರೂಢಿ. ಯಾವ ರೂಪದಲ್ಲಿಯಾದರೂ ಸರಿಯೆ ಸಂಚಿತವಾದ ಆಸ್ತಿಯಾದರೆ ಬಂಡವಾಲವೆನ್ನಿಸುವುದು. ಷೇರುಗಳನ್ನು ಕೊಳ್ಳುವ ದ್ರವ್ಯವಾಗಬಹುದು; ಕಾರ್ಖಾನೆಯಾಗಬಹುದು; ಬಾಡಿಗೆ ತರುವ ಮನೆಗಳಾಗಬಹುದು; ಫಸ ಲನ್ನೋ ಗುತ್ತಿಗೆಹಣವನ್ನೋ ಕೊಡುವ ಭೂಮಿಯಾಗಬಹುದು. ಯಾವು ದಾದರೂ ಬಂಡವಾಲವೇ.

ಮುಖ್ಯಪ್ರಶ್ನೆ ೮೮: ಔದ್ಯೋಗಿಕಪಲ್ಲಟದಿಂದ ಯಾವ ಪರಿಣಾಮಗಳು ಮೂಡುವುವೆಂದು ಮಾರ್ಕ್ಸ್ ನಿರೀಕ್ಷಿಸಿದನು?

ಕಾರ್ಲ್ ಮಾರ್ಕ್ಸ್ ತನ್ನ ಪುಸ್ತಕದಲ್ಲಿ ವಿವರಿಸಿದ ಮುಖ್ಯಾಂಶವಿಷ್ಟು ಮಾತ್ರ. ಕಾರ್ಖಾನೆ ಪದ್ಧತಿ ಬೆಳೆಯುತ್ತಲೂ ಸರಕಿನ ತಯಾರಿಯಲ್ಲಿ ಪೈಪೋಟಿ ಹೆಚ್ಚುತ್ತಲೂ ಇರುವ ಸ್ಥಿತಿಯಲ್ಲಿ ಬಂಡವಾಲಗಾರರದೊಂದು, ಕರ್ಮಕಾರಿಗಳದೊಂದು ಎರಡು ವರ್ಗಗಳು ಸ್ಫುಟವಾಗಿ ಜನರಾಶಿಯಲ್ಲಿ ಪ್ರತ್ಯೇಕಗೊಳ್ಳುತ್ತವೆ. ಬಂಡವಾಲಗಾರರು ಕೆಲಸಮಾಡದೆ ನೆಮ್ಮದಿಯಾಗಿ ಬದುಕುವವರು; ಕರ್ಮಕಾರಿಗಳು ಯಥಾಶಕ್ತಿ ಕೆಲಸಮಾಡಿ ಬದುಕಲು

ಯತ್ನಿಸುತ್ತಲಿರುವವರು. ಈ ಎರಡು ವರ್ಗಗಳು ಬೇರೆ ಬೇರೆಯಾದರೂ ಎರಡು ವರ್ಗಗಳಿಗೂ ಸೇರತಕ್ಕವರಿರಬಹುದಾದ ಅಂಶವನ್ನು ಮರೆಯಬಾರದು. ಕಾರ್ಖಾನೆಕಟ್ಟಿ ಅದರಲ್ಲಿ ತಾನೇ ಕೆಲಸಮಾಡತಕ್ಕವನು, ಭೂಸ್ಥಿತಿವಂತನಾಗಿ ತಾನೇ ವ್ಯವಸಾಯಮಾಡತಕ್ಕವನು, ಕೆಲವು ಷೇರುಗಳನ್ನು ಕೊಂಡುಕೊಂಡು ತಾನೂ ಉದ್ಯೋಗಿಯಾಗಿರತಕ್ಕವನು, ಬ್ಯಾಂಕಿನಲ್ಲಿ ಹಣವನ್ನು ಠೇವಣಿಯಿಟ್ಟು ಕೊಂಡು ಯಾವುದೋ ನೌಕರಿಯಲ್ಲಿರತಕ್ಕವನು—ಎಲ್ಲರೂ ಉಭಯವರ್ಗಗಳಲ್ಲಿ ಗಣ್ಯರಾಗತಕ್ಕವರು. ಇದು ವಾಸ್ತವ. ಆದರೆ ಮಾರ್ಕ್ಸ್ ಇನ್ನೂ ಮುಂದಿನ ಯೋಚನೆಯನ್ನು ಮಾಡಿದನು. ಕಾಲಕ್ರಮದಲ್ಲಿ ಧನಿಕರು ಹೆಚ್ಚು ಹೆಚ್ಚು ಧನಿಕರಾಗುವರೆಂದೂ ಬಡವರು ಹೆಚ್ಚು ಹೆಚ್ಚು ಬಡವರಾಗಿ ಅತಿದುರವಸ್ಥೆಗೆ ಸಿಕ್ಕಿ ನರಳುವರೆಂದೂ ನಿರ್ಧರಿಸಿ, ಎರಡು ವರ್ಗಗಳಿಗೂ ಬಲವತ್ತರವಾದ ವೈಷಮ್ಯವು ಅನಿವಾರ್ಯವಾಗುವುದೆಂದನು. ಅಲ್ಪಸಂಖ್ಯಾಕರಾದವರು ಬಂಡವಾಲಗಾರರು, ಬಹುಸಂಖ್ಯಾಕರಾದವರು ಕರ್ಮಕಾರಿಗಳು. ಆ ಪರಿಸ್ಥಿತಿಯಲ್ಲಿ ಕರ್ಮಕಾರಿ ಗುಂಪಿನವರು ಬಂಡವಾಲಗಾರರ ಬಂಡವಾಲವನ್ನು ಸ್ವಾಧೀನಗೊಳಿಸಿಕೊಳ್ಳಲು ಯತ್ನಿಸುವುದಲ್ಲದೆ ಬೇರೆ ಉಪಾಯವಿರುವುದಿಲ್ಲ. ಬಂಡವಾಲಗಾರರು ತಮ್ಮ ಬಂಡವಾಲವನ್ನು ಸುಮ್ಮನೆ ಬಿಟ್ಟುಕೊಡುವರೇ? ಸಾಧ್ಯವಾದಷ್ಟು ಬಲವನ್ನು ಕಟ್ಟಿಕೊಂಡು ವಿರೋಧಕ್ಕೆ ನಿಲ್ಲುವರು. ಬಲವಂತವಾಗಿಯೇ ಕರ್ಮಕಾರಿಗಳು ಬಂಡವಾಲಗಾರರ ಬಂಡವಾಲವನ್ನು ವಶಪಡಿಸಿಕೊಳ್ಳಬೇಕು. ಆಗ ಪ್ರಳಯದಂತಹ ಪಲ್ಲಟವು ಘಟಿಸದೆ ತಪ್ಪದು.

ಹಾಗೆ ನಡೆಯುವುದೇ ಆದರೆ ಕಟ್ಟಕಡೆಗೆ ತಮ್ಮ ವಶಕ್ಕೆ ಬಂದ ಬಂಡವಾಲವೆಲ್ಲವನ್ನೂ ಕರ್ಮಕಾರಿಗಳೇನು ಮಾಡಬೇಕು? ಅದನ್ನು ತಮ್ಮಲ್ಲಿ ಹಂಚಿಕೊಂಡು ತಾವೆಲ್ಲರೂ ಸಣ್ಣಪುಟ್ಟ ಬಂಡವಾಲಗಾರರಾಗಿ ನಿಲ್ಲುವುದೇ? ಹಾಗಾದರೆ ಮತ್ತೆ ಯಥಾಪ್ರಕಾರ ಎರಡು ವರ್ಗಗಳ ವೈಷಮ್ಯ ವಿರೋಧಗಳು ಸಿದ್ಧವಾಗುವುದಲ್ಲ! ಮಾರ್ಕ್ಸ್ ಹೇಳಿದುದು ಅದಲ್ಲ. ಭೂಮಿ, ಗಣಿ, ಕಾರ್ಖಾನೆ, ಕಟ್ಟಡ ಮುಂತಾದ ಬಂಡವಾಲವೆಲ್ಲವೂ ಯಾವ ವರ್ಗದವರ ವಶದಲ್ಲಿಯೂ ಇರಬಾರದು. ದೇಶದ ಆಡಳಿತವನ್ನು ವಹಿಸುವ ಸರ್ಕಾರದ ವಶದಲ್ಲಿರಬೇಕು. ರಾಷ್ಟ್ರದ ಆಸ್ತಿಸಮಸ್ತವನ್ನೂ ಸರ್ಕಾರವು ತನ್ನ ಸ್ವಾಧೀನದಲ್ಲಿಟ್ಟುಕೊಂಡು ಕೂಲಿಯನ್ನು ಅಥವಾ ಸಂಬಳವನ್ನು ಗೊತ್ತುಮಾಡಿ ಎಲ್ಲ ಕೆಲಸಗಳನ್ನೂ ನಡೆಸಬೇಕು. ಈಗ ಬೇರೆ ಬೇರೆ ಕಚೇರಿಗಳಲ್ಲಿ ಹುದ್ದೆದಾರರಿಗೂ ನೌಕರರಿಗೂ ಸಂಬಳಕೊಟ್ಟು ಕೆಲಸನಡಿಸುವಂತೆ ಔದ್ಯೋಗಿಕರಂಗ

ದಲ್ಲಿಯೂ ನಡೆಯಬೇಕು. ಆಗ ಯಾರೊಬ್ಬರಲ್ಲಿಯೂ ಸೋಮಾರಿಜೀವನ ವನ್ನು ಕೊಡುವ ಬಂಡವಾಲವಿರುವುದಿಲ್ಲ; ಪ್ರತಿಯೊಬ್ಬರೂ ಏನಾದರೂ ಕೆಲಸಮಾಡಿಯೇ ಬದುಕಬೇಕು; ಆದ್ದರಿಂದ ಸರ್ವರಿಗೂ ತಕ್ಕಮಟ್ಟಿಗೆ ನೆಮ್ಮದಿಯುಂಟಾಗಿ ಸಮಾನವಾದ ಬದುಕು ದೊರಕೀತು. ಇದಿಷ್ಟು ಕಾರ್ಲ್ ಮಾರ್ಕ್ಸ್ ವಿಸ್ತರಿಸಿದ ವ್ಯವಸ್ಥೆಯ ಸಾರಾಂಶ. ಸಾಧಾರಣವಾಗಿ ಅದನ್ನು **ಸೋಷಲಿಸ್ಮ್** (socialism) ಅಥವಾ **ಸಮಾಜವಾದವೆನ್ನು**ವರು.

ರಾಷ್ಟ್ರದಲ್ಲಿರುವ ಸರ್ವರನ್ನೂ ಉದ್ದೇಶಿಸಿ **ಸಮಾಜವೆನ್ನು**ವುದು. ಆ ಸಮಾಜದ ಸ್ವಾಧೀನದಲ್ಲಿ ರಾಷ್ಟ್ರದ ಸಂಪತ್ತು ಅಥವಾ ಆಸ್ತಿಯೆಲ್ಲವೂ ಇರ ತಕ್ಕುದೆಂದು ಹೇಳುವುದು ಸಹಜವಾಗಿ ಸಮಾಜವಾದವೆನಿಸುವುದು. ಕೆಲವು ವೇಳೆ ಅದನ್ನು ಮನಸ್ಸಿನಲ್ಲಿಟ್ಟುಕೊಂಡು **ಕಾಮ್ಯೂನಿಸ್ಮ್** (communism) ಎಂದೂ ಕರೆಯುವುದೂ ಉಂಟು. ಕಾಮ್ಯೂನಿಸ್ಮ್ ಎಂಬುದು **ಸರ್ವಸಮತಾ ವಾದ.** ಆಸ್ತಿಯೆಲ್ಲವೂ ಎಲ್ಲರಿಗೂ ಸೇರಿರಬೇಕೆಂಬುದು ಆ ವಾದದಲ್ಲಿ ಮೊದಲ ನೆಯ ಅಂಶ. ಆದರೆ ಒಂದು ಭೇದವುಂಟು. ಸಮಾಜವಾದವನ್ನೊಪ್ಪಿದವರು ಇಷ್ಟಾರ್ಥವನ್ನು ಸಾಧಿಸಿಕೊಳ್ಳಲು ಬಲಪ್ರಯೋಗ ಮಾಡಬೇಕೆಂದು ಪ್ರಾರಂಭಿಸುವುದಿಲ್ಲ. ಸಮಾಜವಾದದಲ್ಲಿ ವಿಶ್ವಾಸವುಳ್ಳವರನ್ನು ಪ್ರತಿನಿಧಿ ಗಳಾಗಿ ರಾಷ್ಟ್ರಶಾಸಕಸಭೆಗಳಿಗೆ ಚುನಾಯಿಸಿ, ತಮಗೆ ನ್ಯಾಯವೆಂದು ತೋರಿದ ಏರ್ಪಾಡುಗಳನ್ನು ಆ ಪ್ರತಿನಿಧಿಗಳ ಮೂಲಕ ಕ್ರಮವಾಗಿ ಸಾಧಿಸಿಕೊಳ್ಳತಕ್ಕುದೆಂದು ಅವರ ಅಭಿಪ್ರಾಯ. ಆ ರೀತಿಯಲ್ಲಿ ಇಷ್ಟಸಿದ್ಧಿ ಯಾಗುವುದಿಲ್ಲವೆಂದೂ ಪಲ್ಲಟಗೊಳಿಸಿಯೇ ಸಾಧಿಸಬೇಕೆಂದೂ ಸಮತಾ ವಾದಿಗಳ ಅಭಿಪ್ರಾಯ. ರಷ್ಯದಲ್ಲಿ ನಡೆದ ಮಹಾಪಲ್ಲಟವು ಸಮತಾವಾದಿ ಗಳಿಂದ ನಡೆದುದು. ಅಲ್ಲಿ **ಲೆನಿನ್** (Lenin) ಎಂಬ ವಿಖ್ಯಾತನಾಯ ಕನು ಕಾರ್ಖಾನೆಗಳ ಚಾಕರರನ್ನೂ ರೈತರನ್ನೂ ಸಿಪಾಹಿಗಳನ್ನೂ ಒಟ್ಟು ಗೂಡಿಸಿದನು. ಹಿಂದಿನಿಂದಿದ್ದ ಸ್ಸಾರ್ ಬಿರುದಿನ ಚಕ್ರವರ್ತಿಯ ಆಳಿಕೆಯನ್ನು ನಾಶಗೊಳಿಸಿದನು. ಆ ಪಲ್ಲಟವು ಸಂಭವಿಸಿದ ಸಂದರ್ಭದಲ್ಲಿ ಸಾಮಾನ್ಯಜನರ ಪಕ್ಷಕ್ಕೆ ಅಥವಾ ಬಹುಪಕ್ಷಕ್ಕೆ **ಬೋಲ್ಷೆವಿಕ್** (Bolshevik) ಪಕ್ಷವೆಂದು ಹೆಸರಾಯಿತು. ಆದುದರಿಂದ ಸಮತಾವಾದಿಗಳನ್ನು ಬೋಲ್ಷೆವಿಕರೆಂದು ಕರೆಯುವುದೂ ಉಂಟು. ಒಟ್ಟಿನಲ್ಲಿ ಸಮತಾವಾದಿಗಳು ಸಮಾಜವಾದಿಗಳಲ್ಲಿ ಉಗ್ರಗಾಮಿಗಳಾದವರು; ನಾಶವೇ ಪ್ರಥಮಕರ್ತವ್ಯವೆಂದು ಹೇಳತಕ್ಕವರು.

ದರ್ಪಿಷ್ಠರಾಜರು ಆಳುತ್ತಲೋ ಬಂಡವಾಲಗಾರರು ಪ್ರಬಲರಾಗುತ್ತಲೋ ಇದ್ದ ದೇಶಗಳಲ್ಲಿ ಆಡಳಿತಗಾರರಿಗೆ ಕಾರ್ಲ್‌ಮಾರ್ಕ್ಸ್ ವಿವರಿಸಿ ಪ್ರಚಾರ

ಪಡಿಸಿದ ಮನೋಭಾವವು ರುಚಿಸದೆಹೋದುದು ಸಹಜವೇ ಅಲ್ಲವೆ! ಆ ದೇಶಗಳಲ್ಲಿ ಪ್ರಬಲರಾದವರು ಭೂಸ್ಥಿತಿವಂತರಾಗಿಯೋ ಶೇರುದಾರರಾಗಿಯೋ ಇದ್ದುದು ಮಾತ್ರವೇ ವಿರೋಧಕ್ಕೆ ಕಾರಣವಲ್ಲ. ಮಾರ್ಕ್ಸ್ ವಿಸ್ತರಿಸಿದ ವಾದದಲ್ಲಿ ದೋಷಗಳುಂಟೆಂಬ ಭಾವನೆ ಅನೇಕರಲ್ಲಿದ್ದುದೂ ಕಾರಣವಾಯಿತು. ಇರುವ ಪರಿಸ್ಥಿತಿಯನ್ನು ವಿನಾಶಗೊಳಿಸಿ ಅನೇಕಾನೇಕ ಜನರನ್ನು ಕೊಲೆಗಿಟ್ಟು ಹೊಸ ವ್ಯವಸ್ಥೆಯನ್ನು ರಚಿಸುವ ಪಲ್ಲಟವಿಧಾನಕ್ಕಿಂತ ಸಾವಕಾಶವಾದರೂ ಕ್ರಮವಾಗಿಯತ್ನಿಸುತ್ತ ಅನರ್ಥಗಳಿಗೆ ಆಸ್ಪದಕೊಡದೆ ಕರ್ಮಕಾರರ ಸ್ಥಿತಿಯನ್ನುತ್ತಮಗೊಳಿಸುವುದು ಮೇಲಾದ ವಿಧಾನವೆಂದು ಅವರ ನಂಬಿಕೆ.

ಆಸ್ತಿವಂತರೆಲ್ಲರೂ ಸಮಾಜವಾದಕ್ಕೆ ವಿರೋಧಿಗಳೆಂದರೆ ತಪ್ಪಾದೀತು. ಏಕೆಂದರೆ ಹಲಕೆಲವರು ಆಸ್ತಿವಂತರು ಸಮಾಜವಾದವನ್ನೊಪ್ಪುವರು. ವಿರೋಧಿಸಿದವರೆಲ್ಲರೂ ಆಸ್ತಿವಂತರೆಂದರೆ ತಪ್ಪಾಗುವುದಿಲ್ಲ. ಬಲವಂತದಿಂದ ಪಲ್ಲಟಗೊಳಿಸಬೇಕೆಂದು ಅಭಿಪ್ರಾಯಪಟ್ಟವರು ಕರ್ಮಕಾರಿಗಳಲ್ಲಿಯೂ ದರಿದ್ರರಾದವರು ಅಥವಾ ನಾಸ್ತಿವಂತರು.

೧೮೪೮ರಲ್ಲಿ ಅನೇಕ ಐರೋಪ್ಯದೇಶಗಳಲ್ಲಿ ಸಮಾಜವಾದಿಗುಂಪುಗಳು ಉದ್ಯಮಿಸಿದವು. ಸಮಾಜವಾದವನ್ನನುಸರಿಸಿ ವರ್ತಿಸುವಂತಹ ಆಡಳಿತವನ್ನು ಸ್ಥಾಪಿಸುವ ಪ್ರಯತ್ನಗಳು ಫ್ರಾನ್ಸ್, ಇಟಲಿ, ಆಸ್ಟ್ರಿಯ, ದಕ್ಷಿಣ ಜರ್ಮನಿ ಮತ್ತು ಹಂಗರಿ ದೇಶಗಳಲ್ಲಿ ನಡೆದುವು. ಆದರೆ ಸ್ವಲ್ಪಕಾಲದಲ್ಲಿಯೇ ಆ ಗುಂಪುಗಳ ಬಲವು ಕುಂದಿತು. ಫ್ರಾನ್ಸ್ ದೇಶದಲ್ಲಿ ಮಾತ್ರ ಸಮತಾವಾದಿಗಳು ಬಲಿಷ್ಠರಾಗಿದ್ದಂತೆ ತೋರಿತು. ಕಡೆಗೆ ಅವರೂ ಚೈತನ್ಯಹೀನರಾದರು. ಆಡಳಿತಗಾರರು ಕಠೋರವಾಗಿ ವರ್ತಿಸಿ ಅವರನ್ನು ಅಡಗಿಸಿದರು. ಪ್ಯಾರಿಸ್ ಪಟ್ಟಣವೊಂದರಲ್ಲೇ ಹತ್ತುಸಾವಿರ ಜನರು ಹತರಾಗಿ ಹೋದರು. ಹಿಂದಿನ ಬೀಭತ್ಸಪ್ರಕರಣಕ್ಕಿಂತಲೂ ಭಯಂಕರವಾದ ರುದ್ರಘಟನೆಯು ಆಯಿತು.

ಸಮಾಜವಾದಿಗಳ ಮೊದಲಪ್ರಯತ್ನವು ಹೀಗೆ ಮಣ್ಣುಪಾಲಾಯಿತು. ಆದರೂ ಆ ವಾದವು ಹರಡಿಕೊಳ್ಳುತ್ತಲೇ ಇತ್ತು. ಕೆಲವರಿಗೆ ಆ ವಾದದಲ್ಲಿ ನ್ಯಾಯಕಾಣುವುದು; ಕೆಲವರಿಗೆ ನ್ಯಾಯಕಾಣುವುದಿಲ್ಲ. ಕಾಲಕ್ರಮದಲ್ಲಿ ಆ ವಾದವನ್ನು ಯೋಚನಾಪರರು ಒಪ್ಪಿಕೊಂಡರು. ಧನಾಢ್ಯರಿಗೂ ದರಿದ್ರರಿಗೂ ಅಂತರವು ಹೆಚ್ಚದಂತೆ ಆಡಳಿತದಲ್ಲಿ ಉಪಾಯಗಳನ್ನವಲಂಬಿಸತೊಡಗಿದರು. ಉದಾಹರಣೆಗೆ ಆಸ್ತಿವಂತರಿಂದ ಹೆಚ್ಚುಹೆಚ್ಚಾಗಿ ತೆರಿಗೆಯೆತ್ತಿ ಬಂದ ಹಣದಿಂದ ನಿರ್ಗತಿಕರಿಗೆ ಅನುಕೂಲವನ್ನು ಕಲ್ಪಿಸಿಕೊಡುವುದು; ಭಾಗ್ಯವಂತ

ರಾದವರು ಸ್ವಾರ್ಥಪರರಾಗದೆ ತಮ್ಮಲ್ಲಿ ಸೇರಿದ ಆಸ್ತಿಯನ್ನು ನಿಕ್ಷೇಪಮಾತ್ರ ವೆಂದು ಭಾವಿಸತಕ್ಕದು ಎಂಬ ನೀತಿಯನ್ನು ಪ್ರಚಾರ ಮಾಡುವುದು.

ಯಂತ್ರೋಪಯೋಗದಿಂದ ಕಾರ್ಖಾನೆಗಳು ಹುಟ್ಟಿ ಅಭಿವೃದ್ಧಿಗೊಂಡ ವೆಂದೂ ಆ ಬಳಿಕ ಸರಕಿನ ತಯಾರಿಯಲ್ಲಿ ಪೋಟಾಪೋಟಿ ರೇಗಿದಾಗ ಬಂಡ ವಾಲಗಾರರೇ ಪ್ರಬಲರಾದರೆಂದೂ ಅಂತಹ ಬಂಡವಾಲಗಾರರು ಪ್ರಬಲಿಸಿದ ಐರೋಪ್ಯ ದೇಶಗಳಲ್ಲಿ ಆಸ್ತಿವಂತನಾಸ್ತಿವಂತಗುಂಪುಗಳಿಗೆ ಪರಸ್ಪರ ವಿರೋ ಧವು ತೋರಿತೆಂದೂ ನಾವು ಮರೆಯಬಾರದು. ಸಮಾಜವಾದವು ಹೇಗೆ ಹುಟ್ಟಿತು, ಎಷ್ಟು ರೂಪಗಳನ್ನು ಪಡೆಯಿತು, ಎಷ್ಟುಮಾತ್ರ ಆಚರಣೆಯಲ್ಲಿದೆ ಮುಂತಾದ ವಿಚಾರಗಳನ್ನು ನಾವು ಪರಿಶೀಲಿಸಿ ಇತ್ಯರ್ಥ ಮಾಡಿಕೊಳ್ಳಬೇಕು

ಮುಖ್ಯಪ್ರಶ್ನೆ ೮೯: ಎಲಿಸಬೆತ್ ಫ್ರೈ, ಫ್ಲಾರೆನ್ಸ್ ನೈಟಿಂಗೇಲ್ ಮತ್ತು ಲಾರ್ಡ್ ಷಾಫ್ಟ್ಸ್‌ಬೆರಿಯೆಂಬವರು ಯಾವ ದೋಷಗಳನ್ನು ನಿವಾರಿಸಲು ಪ್ರಯತ್ನಿಸಿದರು?

ನೆಮ್ಮದಿವಂತರೆಲ್ಲರೂ ಸ್ವಾರ್ಥಪರರಾಗುವುದಿಲ್ಲವೆಂಬ ಮಾತಿಗೆ ನಿದರ್ಶನ ವಾಗಿ ನಾವು ಮೂವರು ಸಮಾಜಹಿತಸಾಧಕರ ವೃತ್ತಾಂತವನ್ನು ಕಾಣ ಬಹುದು. ಅನ್ಯಾಯವನ್ನು ಕಂಡಾಗ ಸಹಿಸದೆ, ಆ ಸ್ಥಿತಿಯನ್ನು ಮೇಲುಗೊಳಿ ಸಲು ಉಜ್ಜುಗಿಸುವುದು ಸಂಸ್ಕೃತರ ಲಕ್ಷಣ. ಈ ಮೂವರು ಕಳೆದ ಶತಮಾನದಲ್ಲಿದ್ದ ಸಮಾಜಹಿತಸಾಧಕರು. ಅಂತಹವರು ಹೆಚ್ಚಿದಂತೆಲ್ಲ ಮಾನವ ಸಂಸ್ಕೃತಿಯು ಮೇಲ್ಮೆ ಪಡೆಯುವುದರಲ್ಲಿ ಸಂಶಯವಿಲ್ಲ.



ಎಲಿಸಬೆತ್ ಫ್ರೈ

ಎಲಿಸಬೆತ್ ಫ್ರೈ (Elizabeth Fry) ಯೆಂಬಾಕೆ ನೆಮ್ಮದಿಯಲ್ಲಿ ಹುಟ್ಟಿ ಬೆಳೆದವಳು. ವಯಸ್ಕಳಾದ ತರುವಾಯ ಆಕೆಗೆ ಆಗಿನ ಕಾಲದ ಸೆರೆಮನೆಗಳ ದುರವಸ್ಥೆ ತಿಳಿಯಿತು. ತಾನೇ ಹೊರಟು ಕಣ್ಣಾರೆ ನೋಡಿದಳು; ನಡೆಯುತ್ತಿದ್ದ ರಾಕ್ಷಸಲೀಲೆಯನ್ನು ಕಂಡ

ಬಳಿಕ ಹೇಗಾದರೂ ಮಾಡಿ ಎಲ್ಲ ಖೈದಿಗಳಿಗೂ ಆರೋಗ್ಯವಾದ ವಾಸಸ್ಥಳ, ಆಹಾರ, ಬಟ್ಟೆಬರೆಗಳು ದೊರಕುವಂತೆ ಯತ್ನಿಸಬೇಕೆಂದು ಸಂಕಲ್ಪಮಾಡಿ ಕೊಂಡಳು. ಲಂಡನ್ನಿನಲ್ಲಿ ಸೆರೆಮನೆಯಲ್ಲಿದ್ದ ಹೆಂಗಸರ ದುಃಸ್ಥಿತಿಯನ್ನು ನಿವಾರಿಸಲು ಮೊಟ್ಟಮೊದಲು ಪ್ರಯತ್ನಿಸಿದಳು. ತರುವಾಯ ಬ್ರಿಟಿಷ್ ದ್ವೀಪಗಳು ಮಾತ್ರವಲ್ಲದೆ ಇತರ ಐರೋಪ್ಯ ದೇಶಗಳಲ್ಲಿ ಕೂಡ ಕಾರ್ಯಪರಳಾದಳು. ರಾಜರು ಕೂಡ ಆಕೆಯ ಮಾತನ್ನು ಕೇಳುವಂತಾಯಿತು. ಖೈದಿಗಳನ್ನು ಮೃಗಗಳಂತೆ ಕಾಣುತ್ತಿದ್ದುದು ತಪ್ಪಿತು. ಕಾರಾಗೃಹಗಳು ಉತ್ತಮಗೊಳ್ಳುವಂತೆ ಕಾನೂನುಗಳು ರೂಪಗೊಂಡವು. ಆಕೆ ಖೈದಿಗಳ ಹಿತಚಿಂತನೆಯನ್ನಲ್ಲದೆ ತಿರುಕರ ಮತ್ತು ಅನಾಥರ ಉದ್ಧಾರದ ಯೋಜನೆಯನ್ನೂ ನಡೆಸಿದಳು.

ಮತ್ತೊಬ್ಬಾಕೆ **ಫ್ಲಾರೆನ್ಸ್ ನೈಟಿಂಗೇಲ್** (Florence Nightingale). ಆಗರ್ಭಶ್ರೀಮಂತನ ಮನೆಯಲ್ಲಿ ಹುಟ್ಟಿ ಬೆಳೆದವಳಾದಾಗ್ಯೂ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನಡೆಯುವ ಉಪಚಾರವನ್ನು ಉತ್ತಮಗೊಳಿಸಲು ತನ್ನ ಜೀವನವನ್ನೆರೆದಳು. ಬ್ರಿಟಿಷರಿಗೂ ರಷ್ಯದವರಿಗೂ ಕ್ರಿಮಿಯದಲ್ಲಿ ಯುದ್ಧ ನಡೆಯುವ ಕಾಲ. ಆಗ ಆಸ್ಪತ್ರೆಗೆ ದಾಖಲಾದ ಸೈನಿಕರಿಗೆ ತಕ್ಕ ಉಪಚಾರ ನಡೆಸಬೇಕೆಂದು ಆಕೆ ತಾನೇ ಮುಂದಾಗಿ ಹೊರಟು ಹೆಸರುವಾಸಿಯಾದಳು.

ಸಂಕಟಗ್ರಸ್ತರನ್ನುದ್ಧರಿಸಲು ಶ್ರಮಪಟ್ಟವರಲ್ಲೆಲ್ಲ ಪ್ರಾಯಶಃ **ಆನ್ಥೊನಿ ಆಷ್ಲಿ ಕೂಪರ್** (Anthony Ashley Cooper) ಎಂಬಾತನು ಅಗ್ರಗಣ್ಯ. ಧನಿಕನ ಮಗನಾಗಿ ಹುಟ್ಟಿದಾಗ್ಯೂ ಚಿಕ್ಕಂದಿನಲ್ಲಿ ಆತನಿಗೆ ಬಲು ಹಿಂಸೆಯಾಯಿತು. ಮನೆಯಲ್ಲಿ ತಂದೆ ಉಗ್ರಮೂರ್ತಿ; ಶಾಲೆಯಲ್ಲಿ ಪಾಠಕರೂ ಇತರರೂ ಕಲ್ಲೆದೆಯ ಲೋಭಿಗಳು. ವಯಸ್ಕನಾದ ಮೇಲೆ ಚಿಕ್ಕಂದಿನಲ್ಲಿ ತಾನು ಅನುಭವಿಸಿದ್ದ ಸಂಕಟವನ್ನು ಆತನು ಮರೆಯಲಿಲ್ಲ. ಎಳೆಮಕ್ಕಳ ನೆಮ್ಮದಿಗಾಗಿ ನಿರಂತರವಾಗಿ ಶ್ರಮಪಟ್ಟನು.

ಆ ಕಾಲದಲ್ಲಿ ಗಣಿಗಳಲ್ಲಿಯೂ ಹತ್ತಿಗಿರಣಿಗಳಲ್ಲಿಯೂ ಇತರ ಕಾರ್ಖಾನೆಗಳಲ್ಲಿಯೂ ಮಕ್ಕಳ ಪಾಡು ನರಕದಂತಿತ್ತು. ಸಂಸಾರನಿರ್ವಾಹಕ್ಕಾಗಿ ಮಕ್ಕಳು ದುಡಿಯಬೇಕಾಗಿದ್ದ ಕಾಲ; ಅತ್ಯಲ್ಪಸಂಪಾದನೆಯಾದರೂ ಅಷ್ಟು ಮಾತ್ರಕ್ಕೇ ಆಸೆಪಟ್ಟು ಬಡಪಾಯಿಗಳು ಮಕ್ಕಳನ್ನು ದುಡಿತಕ್ಕೆ ಅಟ್ಟುತ್ತಿದ್ದರು. ಬಂಡವಾಲಗಾರರಿಗೆ ಲಾಭದಾಸೆ; ಕಾರ್ಖಾನೆಗಳಲ್ಲಿ ಆದಷ್ಟು ಕಡಿಮೆ ಕೂಲಿ ಕೊಡುವುದು, ಆದಷ್ಟು ಹೆಚ್ಚು ಹೊತ್ತು ದುಡಿಸುವುದು. ಮಕ್ಕಳು ಸರಿಯಾದ ಆಹಾರವಿಲ್ಲದೆ, ವಿಶ್ರಾಂತಿಯಿಲ್ಲದೆ, ವಿನೋದವಿಲ್ಲದೆ ದಿನಕ್ಕೆ ಹದಿನೈದು ಗಂಟೆ ಹೊತ್ತು ತೆರಪಿಲ್ಲದೆ ದುಡಿಯಬೇಕಾಗಿತ್ತು. ಯಂತ್ರಕ್ಕೆ ಮಕ್ಕ

ಳನ್ನು ಸರಪಳಿಯಿಂದ ಕಟ್ಟಿಹಾಕಿ ಹೊಡೆದು ಬೈದು ಕೆಲಸಮಾಡಿಸುತ್ತಿದ್ದರು. ಕಲ್ಲಿದ್ದಲ ಗಣಿಗಳಲ್ಲಿ ನಿಂತುಕೊಳ್ಳುವುದಕ್ಕೂ ಆಗದ ಸುರಂಗದ ಹಾದಿಯು ಕಗ್ಗತ್ತಲಲ್ಲಿ ಸರಪಳಿಕಟ್ಟಿದ ಕಲ್ಲಿದ್ದಲ ಗಾಡಿಗಳನ್ನು ಮಕ್ಕಳು ದಿನವೆಲ್ಲ ಎಳೆಯ ಬೇಕಾಗಿತ್ತು. ಚಿಕ್ಕಸಂತಹ ಪ್ರಾಣಿಯೋಡಾಡುವುದಕ್ಕೂ ಕಷ್ಟವಾದಷ್ಟು ಕಿರಿದೂ ಎತ್ತರವೂ ಆದ ಗೋಪುರಗಳಂತಹ ಹೊಗೆಮಾಳಿಗೆಗಳನ್ನು ಗುಡಿಸಿ ಶುದ್ಧಿಮಾಡಲು ಮಕ್ಕಳನ್ನೇ ಬಲವಂತದಿಂದ ಏರಿಸುತ್ತಿದ್ದರು.



ಲಾರ್ಡ್ ಷಾಫ್ಟ್‌ಸ್‌ಬೆರಿ, ಬಾಲಕರ ರಕ್ಷಕ

ಇವುಗಳನ್ನೆಲ್ಲ ತಿಳಿದ ಕೂಪರ್ ಮಕ್ಕಳ ಪಾಡಿಗಿದ್ದ ಕ್ರೌರ್ಯಕಾರಿಣ್ಯಗಳನ್ನು ಏನಾದರೂಮಾಡಿ ಮಾಯಗೊಳಿಸಬೇಕೆಂಬ ಸಂಕಲ್ಪಮಾಡಿಕೊಂಡನು. ಆತನ ಹೆಸರು ಕೂಪರ್; ಕಾಲಕ್ರಮದಲ್ಲಿ ಶ್ರೀಮಂತಬಿರುದನ್ನು ಪಡೆದುದರಿಂದ **ಲಾರ್ಡ್ ಷ್ಯಾಫ್ಟ್‌ಸ್‌ಬೆರಿ** (Lord Shaftesbury) ಯೆಂದೇ ಆತನು ಪ್ರಸಿದ್ಧನಾದುದು. ತನ್ನ ೨೫ನೆ ವಯಸ್ಸಿನಲ್ಲಿಯೇ ಆತನು ಪಾರ್ಲಿಮೆಂಟ್ ಸಭಿಕನಾದನು. ದೇಶದ ಮಕ್ಕಳ ಸ್ಥಿತಿಯನ್ನು ಮೇಲುಗೊಳಿಸಲು ಅವಿಶ್ರಾಂತನಾಗಿ ಶ್ರಮಪಟ್ಟನು. ಇಪ್ಪತ್ತುವರ್ಷಗಳ ಶ್ರಮದ ಫಲವಾಗಿ ಕಾಮನ್ಸ್

ಸಭೆಯವರು ಕಾರ್ಖಾನೆಗಳಲ್ಲಿ ಮಕ್ಕಳನ್ನು ಹತ್ತುಗಂಟೆಗಿಂತ ಹೆಚ್ಚುಕಾಲ ದುಡಿಸಬಾರದೆಂಬ ಕಾನೂನನ್ನು ರಚಿಸಿದರು.

ಈಗಲೂ ಮುಂಬಯಿ ಕಲಕತ್ತೆಗಳಂತಹ ದೊಡ್ಡ ನಗರಗಳಲ್ಲಿರುವಂತೆ ಲಂಡನ್ ಮುಂತಾದ ದೊಡ್ಡ ಪಟ್ಟಣಗಳಲ್ಲಿ ಸಾವಿರಾರು ಮಕ್ಕಳು ಹೊಟ್ಟೆಗಿಲ್ಲದೆ ತಿರುಪವೆತ್ತುತ್ತಲೂ ಕದಿಯುತ್ತಲೂ ಇದ್ದರು. ಅಂತಹ ನಿರ್ಗತಿಕರಿಗೆ ಅನಾಥಾಲಯಗಳು ಮೊದಲಾದುದು ಷ್ಯಾಫ್ಟ್ಸ್‌ಬೆರಿಯ ಪ್ರಯತ್ನದ ಫಲ. ಬಡಬಗ್ಗರ ಮಕ್ಕಳಿಗೆ ಸಂಜೆಯಲ್ಲಾದರೂ ವಿದ್ಯಾಭ್ಯಾಸಮಾಡಿಸುವ ಉದ್ದೇಶ ಹುಟ್ಟಿ ರಾತ್ರಿಶಾಲೆಗಳು ಕಾಲಾನಂತರ ರೂಪಗೊಂಡವು. ಔದ್ಯೋಗಿಕ ಪಲ್ಲಟದ ಪರಿಣಾಮವಾಗಿ ಮಕ್ಕಳಿಗೆ ಪ್ರಾಪ್ತವಾದ ದುರವಸ್ಥೆ ಈ ರೀತಿಯ ಉಪಾಯಗಳಿಂದ ನಿದಾನವಾಗಿ ತೊಲಗಿತು.

ಕೆಲಸಮಾಡುವ ಯೋಗ್ಯತೆಯಿಲ್ಲದೆಯೋ ಮನಸ್ಸಿಲ್ಲದೆಯೋ ತಿರುಪಬೇಡಿ ಬದುಕನ್ನು ನಡೆಸುವ ಜನರು ಎಲ್ಲ ಕಾಲಗಳಲ್ಲಿಯೂ ಇದ್ದೇ ಇದ್ದರು. ದೊಡ್ಡ ದೊಡ್ಡ ನಗರಗಳು ಹುಟ್ಟಿಕೊಂಡಾಗ ಹೆಚ್ಚು ಹೆಚ್ಚು ಜನರು ತಿರುಪವನ್ನು ಆಶ್ರಯಿಸಿದರು; ತಿರುಪದಿಂದ ಜೀವನವನ್ನು ಸಾಗಿಸುವುದಕ್ಕೂ ಕಷ್ಟವಾಯಿತು. ಹೊಸ ಯಂತ್ರ ಸೃಷ್ಟಿಯಾಗಿ ಉಪಯೋಗಕ್ಕೆ ಬಂದಾಗ ಅದುವರೆಗೆ ಆ ಕೆಲಸದಿಂದ ಬದುಕುತ್ತಿದ್ದವರಿಗೆ ನಿರುದ್ಯೋಗ; ಬೇರೆ ಪ್ರದೇಶದ ಸರಕು ಉತ್ತಮವೆನಿಸಿದಾಗಲೂ ಸ್ಥಳದ ಸರಕಿನ ಮಾರಾಟವು ನಿಂತುಹೋದಾಗಲೂ ನಿರುದ್ಯೋಗ. ಯಂತ್ರದಿಂದಲೂ ವ್ಯಾಪಾರ ಕೈಗಾರಿಕೆಗಳ ಪೈಪೋಟಿಯಿಂದಲೂ ನಿರುದ್ಯೋಗದ ಮೇಲೆ ನಿರುದ್ಯೋಗ ತೋರುತ್ತಲೇ ಇದೆ. ಔದ್ಯೋಗಿಕಪಲ್ಲಟವಾದ ತರುವಾಯ ಪ್ರಾಯಶಃ ಎಲ್ಲ ದೇಶಗಳಲ್ಲಿಯೂ ಅದೇ ಗತಿ. ಹಿಂದೆ ಬದುಕನ್ನು ಕೊಡುತ್ತಿದ್ದ ಜೀವಿಕದ ನಷ್ಟ; ಹೊಸದಾಗಿ ಸಿಕ್ಕಿದ ಜೀವಿಕ ಎಂದಿನವರೆಗೆ ನಡೆವುದೋ ಎಂಬ ಅಧೈರ್ಯ. ಇವುಗಳಿಗೇನು ಪರಿಹಾರೋಪಾಯವೆಂಬ ಚಿಂತೆ ಈಗ ಎಲ್ಲ ದೇಶಗಳಲ್ಲಿಯೂ ದೊಡ್ಡದಾಗಿದೆ.

ಅಭ್ಯಾಸಗಳು

೧. ಔದ್ಯೋಗಿಕಪಲ್ಲಟದಿಂದ ಹುಟ್ಟಿದ ಹೊಸ ಸಮಸ್ಯೆಗಳು ಯಾವುವು ? ಅವುಗಳನ್ನು ಪರಿಹರಿಸಲು ಮಾರ್ಕ್ಸ್ ನಡೆಸಿದ ಯೋಚನೆ ಏನು ?

೨. ಆಸ್ತಿವಂತರಿಗೂ ನಾಸ್ತಿವಂತರಿಗೂ ವಿರೋಧವಿಲ್ಲದಂತೆ ನೆರವೇರಿಸಲು ಪಲ್ಲಟದ ಉಪಾಯವನ್ನು ಬಿಟ್ಟು ಬೇರೆ ಉಪಾಯವನ್ನು ಸೂಚಿಸಬಲ್ಲಿರಾ ? ನಿಮ್ಮ ಸೂಚನೆಯನ್ನು ಸಕಾರಣವಾಗಿ ವಿವರಿಸಿ.

೩. ರೋಮಕಸಾಮ್ರಾಜ್ಯದ ಕಾಲಕ್ಕಿಂತಲೂ ಈ ಕಾಲದಲ್ಲಿ ಮಾನವರು ಹೆಚ್ಚು ಸಂಸ್ಕೃತರೆನ್ನಲು ಚಿಹ್ನೆಗಳೇನು ?

೪. ಆಧುನಿಕ ಸಭ್ಯತೆ ಸಂಸ್ಕೃತಿಗಳಲ್ಲಿ ಇನ್ನೂ ಪರಿಹಾರವಾಗದಿರುವ ಕಷ್ಟಗಳಲ್ಲಿ ಕೆಲವನ್ನು ಹೇಳಿ ಅವುಗಳಿಗೆ ಪರಿಹಾರೋಪಾಯಗಳನ್ನು ಸೂಚಿಸಿ.

೨೪ನೆ ಅಧ್ಯಾಯ

ಬಾಲಿವಾರ್ ಮತ್ತು ಲಿಂಕನ್

ಮುಖ್ಯಪ್ರಶ್ನೆ ೯೦: ದಕ್ಷಿಣ ಅಮೆರಿಕದ ರಾಷ್ಟ್ರಗಳು ಸ್ವತಂತ್ರಗೊಂಡುದು ಹೇಗೆ?

ಕಳೆದ ಅಧ್ಯಾಯಗಳಲ್ಲೆಲ್ಲ ಐರೋಪ್ಯದೇಶಗಳಲ್ಲಿ ನಡೆದ ರಾಷ್ಟ್ರೀಯ ಮತ್ತು ಔದ್ಯೋಗಿಕ ವಿಪರ್ಯಾಸಗಳನ್ನು ಕಂಡೆವು. ಪಾಶ್ಚಾತ್ಯನಾಗರಿಕತೆಯು ಆಧುನಿಕರೂಪವನ್ನು ತಾಳುವುದರಲ್ಲಿ ಮುಖ್ಯವಾದವುಗಳು ಅವು. ಅಮೆರಿಕದಲ್ಲಿಯೂ ಪಾಶ್ಚಾತ್ಯರ ಸಭ್ಯತೆ ಸಂಸ್ಕೃತಿಗಳೇ ಅಲ್ಲವೆ ನೆಲೆಯಾದುದು? ಆ ಖಂಡದಲ್ಲಿ ನಡೆದ ಸಂಗತಿಗಳನ್ನು ಈಗ ಸಂಕ್ಷೇಪವಾಗಿ ಕಾಣೋಣ.

ದರ್ಪಿಷ್ಠಪ್ರಭುಗಳ ದಿವ್ಯಾಧಿಕಾರವೆಂಬುದು ನಾಶವಾದ ಬಳಿಕ ಜನಸ್ವಾಮ್ಯವೆಂಬ ತತ್ತ್ವವು ಪ್ರಚಾರವಾಯಿತಷ್ಟೆ. ದೇಶದಲ್ಲಿ ವಾಸಿಸಿರುವ ಸಮಸ್ತರೂ ನೆಮ್ಮದಿಯಿಂದ ಬದುಕಲು ಅಧಿಕಾರವುಳ್ಳವರೆಂಬುದೂ, ಆಡಳಿತವೆಂಬುದು ಸರ್ವಸಮಾನವಾಗಿರತಕ್ಕುದೆಂಬುದೂ, ಆಡಳಿತದಲ್ಲಿ ಸಕಲಜನರಿಗೂ ಭಾಗವಿರಬೇಕೆಂಬುದೂ ಆ ಬಗೆಯ ಮನೋಭಾವದ ಮುಖ್ಯಾಂಶಗಳು. ಉತ್ತರ ಅಮೆರಿಕದಲ್ಲಿ ಹುಟ್ಟಿದ ಸಂಯುಕ್ತಸಂಸ್ಥಾನಗಳಲ್ಲಿ ಇಂತಹ ಭಾವನೆಯೇ ಮೂಲಾಧಾರ. ಫ್ರಾನ್ಸ್ ಮಹಾಪಲ್ಲಟದಲ್ಲಿಯೂ ಅದೇ ಉದ್ದೇಶ. ಇತರ ದೇಶಗಳಲ್ಲಿಯೂ ಜನರು ಆ ಭಾವನೆಯನ್ನು ಬೆಳೆಸದೆ ಬಿಡಲಿಲ್ಲ. ಮೊದಲು ಅಂತಹ ಉದ್ಯಮವನ್ನು ನಡೆಸಿದವರು ಮಧ್ಯ ಮತ್ತು ದಕ್ಷಿಣ ಅಮೆರಿಕದಲ್ಲಿ ನೆಲೆಸಿದ್ದ ಜನರು.


ಆ ಕ್ಷೇತ್ರಗಳಲ್ಲಿ ಹಿಂದಿನಿಂದಲೂ ಇದ್ದ ರಾಜ್ಯಗಳನ್ನು ಗೆದ್ದವರು ಸ್ಪೈಯ್ನ್ ದೇಶಸ್ಥರು. ಮೆಕ್ಸಿಕೊ ಎಂಬ ದೇಶದಿಂದ ಹಿಡಿದು ದಕ್ಷಿಣಾಗ್ರದವರೆಗೂ ಸ್ಪೈಯ್ನಿನ ಜನರೇ ನೆಲೆಗೊಂಡು ಪ್ರಬಲರಾಗಿದ್ದರು. ಸ್ಪೈಯ್ನ್ ದೇಶವನ್ನು ನಪೋಲಿಯನ್ ಸ್ವಾಧೀನಪಡಿಸಿಕೊಂಡು ತನ್ನ ಸಹೋದರನನ್ನು ಅಲ್ಲಿಗೆ ರಾಜನನ್ನಾಗಿ ಸ್ಥಾಪಿಸಿದ ಸಂದರ್ಭದಲ್ಲಿ ಆ ಜನರು ಸ್ವತಂತ್ರರಾಗಲು ಸಿದ್ಧರಾದರು. ಆ ಪ್ರಯತ್ನದಲ್ಲಿ ನಾಯಕನಾಗಿ ವಿಖ್ಯಾತನಾದವನು **ಸೈಮನ್ ಬಾಲಿವಾರ್** (Simon Bolivar).

೧೭೮೩ರಲ್ಲಿ ಬಾಲಿವಾರ್ **ಕ್ಯಾರಕಾಸ್** (Caracas) ಪಟ್ಟಣದಲ್ಲಿ ಸತ್ಕುಲದಲ್ಲಿ ಹುಟ್ಟಿದವನು. ಶಿಕ್ಷಣ ಪಡೆಯಲು ಸ್ಪೈನ್ನಿಗೆ ಹೋಗಿದ್ದವನು ಫ್ರಾನ್ಸಿನ ಮಹಾಪಲ್ಲಟದ ಘಟನೆಗಳನ್ನು ಸ್ವತಃ ಕಂಡನು. ಸಂಯುಕ್ತ ಸಂಸ್ಥಾನಗಳಲ್ಲಿಯೂ ಅದೇ ವೇಳೆಯಲ್ಲಿ ಸಂಚರಿಸಿದ್ದನು. ತನ್ನ ೨೩ನೆ ವಯಸ್ಸಿನಲ್ಲಿ ಜನ್ಮಸ್ಥಳಕ್ಕೆ ಹಿಂತಿರುಗಿ ಅಲ್ಲಿಯ ಕಾಲೊನಿಗಳು ಸ್ವತಂತ್ರಗೊಳ್ಳುವ ಉದ್ಯಮದಲ್ಲಿ ತೊಡಗಿದನು. ಸಂಯುಕ್ತಸಂಸ್ಥಾನಗಳು ಒಟ್ಟುಗೂಡಿದಂತೆಯೇ ತಾವೂ ನಡೆಸಬೇಕೆಂಬ ಸ್ವಾತಂತ್ರ್ಯಪ್ರಕಟನೆಯೊಂದು ಹೊರಟಿತು. ದಂಗೆಯೂ ಎದ್ದಿತು. ಬಾಲಿವಾರನೇ ದಂಗೆಗೆ ನಾಯಕ. ಮೂರು ವರ್ಷ ಹೋರಾಟವಾಯಿತು; ಸ್ವಾತಂತ್ರ್ಯಸಾಧಕರ ಪಕ್ಷಕ್ಕೆ ಸೋಲೊದಗಿ ಬಾಲಿವಾರ್ **ಕಾರ್ಟೇಜಿನ** (Cartagena) ಎಂಬಲ್ಲಿಗೆ ಹೊರಡಬೇಕಾಯಿತು. ಅಲ್ಲಿ ಪುನಃ ದಂಗೆಯೆಬ್ಬಿಸಿದನು. ಆಗಲೂ ಸೋಲಾಯಿತು. ಕೆಲಕಾಲ ಬಾಲಿವಾರ್ ಬ್ರಿಟಿಷರ ದ್ವೀಪವಾದ ಜಮೈಕದಲ್ಲಿರಬೇಕಾಗಿ ಬಂತು. ಪುನಃ ಬಾಲಿವಾರ್ ಪ್ರಯತ್ನ ನಡೆಸಿದನು. ಘೋರವಾದ ಹೋರಾಟವೇ ನಡೆಯಿತು. ಧೈರ್ಯಮೇರುವಾಗಿ ಬಾಲಿವಾರ್ ತನ್ನ ಸೈನ್ಯವನ್ನು ಆಂಡೀಸ್ ಪರ್ವತ ಶ್ರೇಣಿಗಳ ಮೇಲೂ ನಡೆಸಿದನು. ಕಡೆಗೆ ೧೮೧೯ರಲ್ಲಿ ಸ್ಪೈಯ್ನ್ ರಾಜ್ಯಪಕ್ಷದವರು ಪೂರಾ ಸೋತರು. **ವೆನಿಸ್ವೇಲ, ಕೊಲಂಬಿಯ** ಮತ್ತು **ಈಕ್ವಡಾರ್** ಎಂಬುವು ಸೇರಿ ಹೊಸರಾಷ್ಟ್ರ ಕಟ್ಟಿಕೊಂಡವು. ಆ ರಾಷ್ಟ್ರಕ್ಕೆ ಬಾಲಿವಾರನೇ ಪ್ರಥಮಾಧ್ಯಕ್ಷನಾದನು.

ಹೊಸ ರಾಷ್ಟ್ರವಾದುದನ್ನು ಕಂಡು ಇತರ ಭಾಗಗಳಲ್ಲಿದ್ದ ನೆಲಸುಗಾರರೂ ದಂಗೆಗಳನ್ನೆಬ್ಬಿಸಿದರು. ಮೊದಲು **ಪನಾಮ,** ತರುವಾಯ **ಪೆರು, ಅರ್ಜೆಂಟೀನ** ಮತ್ತು **ಚಿಲಿ** ಎಂಬುವು ಸ್ವತಂತ್ರಗೊಂಡು ಪ್ರತ್ಯೇಕವಾದ ರಿಪಬ್ಲಿಕ್ಕುಗಳಾದವು. **ಬ್ರಸಿಲ್** ಮಾತ್ರ ಪೋರ್ಚುಗೀಸರ ಕಾಲೊನಿಯಾಗಿತ್ತು; ೧೮೨೨ರಲ್ಲಿ ಸ್ವತಂತ್ರವಾಗಿ ೧೮೮೯ರಲ್ಲಿ ರಿಪಬ್ಲಿಕ್ ರೂಪವನ್ನು ತಾಳಿತು.

ಬಾಲಿವಾರನ ಹೆಸರನ್ನು ಅಲ್ಲಿಯ ಜನರು ಇಂದಿಗೂ ಸ್ಮರಿಸುತ್ತಲಿದ್ದಾರೆ. **ಬೊಲಿವಿಯ** ಎಂಬ ಹೆಸರೇ ಒಂದು ರಾಷ್ಟ್ರಕ್ಕಿದೆ. ಆತನು ಜನ್ಮವೆತ್ತಿದ ವೆನಿಸ್ವೇಲದಲ್ಲಿ ಒಂದು ನಾಣ್ಯಕ್ಕೆ **ಬಾಲಿವಾರ್** ಎಂದೇ ಹೆಸರು. ಸ್ವಾತಂತ್ರ್ಯವನ್ನು ಸಾಧಿಸಿದ ತರುವಾಯ ಸಂಯುಕ್ತಸಂಸ್ಥಾನಗಳೊಟ್ಟುಗೂಡಿದಂತೆ ದಕ್ಷಿಣ ಅಮೆರಿಕದ ರಾಷ್ಟ್ರಗಳನ್ನು ಒಟ್ಟುಗೂಡಿಸುವ ಆಸೆಯಿತ್ತು ಆತನಿಗೆ. ಆದರೆ ಬೇರೆ ಬೇರೆ ರಾಷ್ಟ್ರಗಳವರು ಪರಸ್ಪರಕಲಹಗಳನ್ನಾಡುತ್ತಿದ್ದರು. ರಾಷ್ಟ್ರಗಳು ಪ್ರತ್ಯೇಕವಾಗಿಯೇ ಉಳಿದುವು.

ದಕ್ಷಿಣ ಅಮೆರಿಕದ ರಾಷ್ಟ್ರಗಳಿಗೆ ಸ್ವಾತಂತ್ರ್ಯಸಿದ್ಧಿಯಾದ ಕಾಲದಲ್ಲಿ ಸಂಯುಕ್ತ ಸಂಸ್ಥಾನಗಳಿಗೆ ಅಥವಾ ಅಮೆರಿಕಕ್ಕೆ ಮನ್ರೋ (Monroe) ಎಂಬಾತನು ಅಧ್ಯಕ್ಷನಾಗಿದ್ದನು. ಐರೋಪ್ಯ ಪ್ರಭುಗಳು ಆಸೆ ಬೆಳೆಸಿ ಪುನಃ ದಕ್ಷಿಣ ಅಮೆರಿಕದಲ್ಲಿ ಕ್ಷೇತ್ರಗಳನ್ನು ಸಂಪಾದಿಸಲು ಯತ್ನಿಸಿಯಾರೆಂಬ ಶಂಕೆಗೆ ಆಗ ಅವಕಾಶವಿತ್ತು. ಆದುದರಿಂದ ಮನ್ರೋ ಪ್ರಸಿದ್ಧವಾದ ಪ್ರಕಟನೆಯನ್ನು ಹೊರಡಿಸಿದನು. 'ಉತ್ತರವಾಗಲಿ ದಕ್ಷಿಣವಾಗಲಿ ಅಮೆರಿಕ ಖಂಡದಲ್ಲಿ ಹೊಸದಾಗಿ ಕ್ಷೇತ್ರಸಂಪಾದನೆಗೆಂದು ಐರೋಪ್ಯರಾರಾದರೂ ತೊಡಗಿದಲ್ಲಿ ಸಂಯುಕ್ತ ಸಂಸ್ಥಾನಗಳನ್ನು ಯುದ್ಧಕ್ಕೆ ಕರೆದಂತಾಗುವುದು' ಎಂಬುದು ಆ ಪ್ರಕಟನೆಯ ಸಾರಾಂಶ. ಅದನ್ನು ಮನ್ರೋ ಡಾಕ್ಟ್ರಿನ್ (Monroe Doctrine) ಎಂದು ಈಗಲೂ ಸ್ಮರಿಸುವರು. ಅದರ ದೆಸೆಯಿಂದ ಅಮೆರಿಕಖಂಡಗಳಲ್ಲಿ ಯಾವ ಐರೋಪ್ಯರಿಗೂ ಹೊಸದಾಗಿ ರಾಜ್ಯಸಂಪಾದನೆಗೆ ಅವಕಾಶವಿಲ್ಲವಾಯಿತು. ಮೆಕ್ಸಿಕೊ ದಕ್ಷಿಣಕ್ಕಿರುವ ರಾಷ್ಟ್ರಗಳೆಲ್ಲಕ್ಕೂ **ಲ್ಯಾಟಿನ್ ಅಮೆರಿಕ** (Latin America) ಎಂಬ ಹೆಸರು ರೂಢಿ. ಏಕಂದರೆ



ದಕ್ಷಿಣ ಅಮೆರಿಕದ ರಾಷ್ಟ್ರಗಳು

ಅಲ್ಲಿಯ ಜನರು ಸ್ಪಾನಿಷ್ ಅಥವಾ ಪೋರ್ಚುಗೀಸ್ ಮಿಶ್ರಜಾತಿಯವರಾಗಿ ಆ ಭಾಷೆಗಳನ್ನೇ ಆಡುವರು.

ಅಮೆರಿಕ ಎನ್ನುವುದು **ಸಂಯುಕ್ತ ಸಂಸ್ಥಾನಗಳ ಕೂಟರಾಷ್ಟ್ರಕ್ಕೆ** (U.S.A.). ಡಚ್ಚರು, ಬ್ರಿಟಿಷರು, ಫ್ರೆಂಚರು ಮೊದಮೊದಲು ಬಂದು ನೆಲೆಸಿದವರು. ತರುವಾಯ ಕಾರಣಾಂತರಗಳಿಂದ ಪ್ರತಿ ಐರೋಪ್ಯದೇಶದಿಂದಲೂ ಜನರು ಬಂದು ಸೇರಿಕೊಳ್ಳುತ್ತಲೇ ಇದ್ದರು. ಸ್ವಾತಂತ್ರ್ಯಸಾಧನೆಯಾದಾಗ ಮಿಸಿಸಿಪ್ಪಿ ನದಿಯೇ ಪಶ್ಚಿಮದ ಎಲ್ಲೆ. ಹತ್ತೊಂಭತ್ತನೆ ಶತಮಾನದಲ್ಲಿ ಆ ಎಲ್ಲೆಯನ್ನು ದಾಟಿ ಪಶ್ಚಿಮಕ್ಕೂ ದಕ್ಷಿಣಕ್ಕೂ ವಿಸ್ತಾರಗೊಳ್ಳುವಂತೆ ಆಯಿತು. ಇನ್ನೂ ಉಳಿದಿದ್ದ **ಲೂಯಿಸ್ಸಿಯಾನವನ್ನು** ನಪೋಲಿಯನ್ ಮಾರಿಬಿಟ್ಟನು; ಅಮೆರಿಕದವರು ಅದನ್ನು ಕೊಂಡುಕೊಂಡುದಲ್ಲದೆ ಕೆಲವರ್ಷಗಳ ತರುವಾಯ **ಫ್ಲಾರಿಡ** (Florida) ಪರ್ಯಾಯದ್ವೀಪವನ್ನು ಸ್ಪೈನಿನಿಂದ ಕೊಂಡುಕೊಂಡರು. ಮೆಕ್ಸಿಕೊ ಯುದ್ಧದಲ್ಲಿ **ಕ್ಯಾಲಿಫೋರ್ನಿಯ** ಪ್ರಾಂತವನ್ನು ಗೆದ್ದರು. ತರುವಾಯ ಪಸಿಫಿಕ್‌ಸಾಗರದ ತೀರವೇ ಪಡುವಣಮೇರೆಯಾಗಿರಲೆಂದು ನಿಶ್ಚಯಿಸಿ ಮಧ್ಯಪ್ರದೇಶವನ್ನು ಆಕ್ರಮಿಸಿದರು. ನಾನಾ ಐರೋಪ್ಯದೇಶಗಳ ಜನರು ನೆಲೆಸಿದಾಗ್ಗೂ ಅವರೆಲ್ಲರೂ ತಾವು ಅಮೆರಿಕನ್ನರೆಂದು ಭಾವಿಸಿ ಪೂರ್ವಸ್ಮರಣೆಗಳನ್ನು ಬಿಟ್ಟುಬಿಟ್ಟರು. ಆಡಳಿತದ ಭಾಷೆಯು ಇಂಗ್ಲಿಷ್ ಆದುದರಿಂದ ಅಮೆರಿಕವೆಂಬುದು ಬೇರೆ, ಲ್ಯಾಟಿನ್ ಅಮೆರಿಕವೆಂಬುದು ಬೇರೆ.

ಅಮೆರಿಕದಲ್ಲಿ ಹತ್ತೊಂಭತ್ತನೆ ಶತಮಾನದ ಮಧ್ಯಕಾಲದಲ್ಲಿ ಭಾರಿ ಅಂತಃಕಲಹ ರೇಗಿತು. ಅದು ಹೇಗೆಂದು ತಿಳಿಯಲು ನಾವು ಅಲ್ಲಿ ಗುಲಾಮರಾಗಿ ಜೀವವನ್ನು ಹೊತ್ತ ನೀಗ್ರೋಜನರ ವೃತ್ತಾಂತವನ್ನೂ ಔದ್ಯೋಗಿಕಪಲ್ಲಟದ ಪರಿಣಾಮವಾಗಿ ತೋರಿದ ಸಂಗತಿಗಳನ್ನೂ ಗುರುತಿಟ್ಟುಕೊಳ್ಳಬೇಕು.

ಮುಖ್ಯಪ್ರಶ್ನೆ ೯೧: ಗುಲಾಮಿ ವ್ಯಾಪಾರದಲ್ಲಿ ಐರೋಪ್ಯರು ತೊಡಗಿದುದೇಕೆ? ಅಮೆರಿಕದಲ್ಲಿ ಆ ಕಾರಣದಿಂದ ಅಂತರ್ಯುದ್ಧವು ನಡೆದುದು ಹೇಗೆ?

ಲೋಕದಲ್ಲಿ ಮನುಷ್ಯರು ಮನುಷ್ಯರನ್ನು ಹಿಂಸೆಗೆ ಗುರಿಮಾಡಿ ಉದ್ದೇಶಪೂರ್ವಕವಾಗಿ ನರಕಯಾತನೆಯನ್ನೇಕೆ ಕೊಡುವುದು? ತಾಳ್ಮೆಯಿಲ್ಲದುದೊಂದು ಕಾರಣ. ರಾಷ್ಟ್ರಸಂಬಂಧವಾಗಿಯೋ ಮತಸಂಬಂಧವಾಗಿಯೋ ಹೊಸದಾದ ಪ್ರಚಾರವನ್ನು ಕಂಡಾಗ ಸಹನವಿಲ್ಲದೆ ಪೈಶಾಚಿಕಕೃತ್ಯಗಳು ನಡೆದುಹೋಗುತ್ತವೆ. ಮತಭೇದಗಳಿಂದ ರೇಗಿದ ಜಗಳಗಳನ್ನೂ ಆ ಜಗಳಗಳಲ್ಲಿ ಮನುಷ್ಯರು ಪರಸ್ಪರವಾಗಿ ಕಾದಾಡಿ ಹಿಂಸೆಕೊಟ್ಟವನ್ನೂ ಪುಣ್ಯಲಾಭ

ವೆಂದು ಭಾವಿಸಿದ ವಿವರವನ್ನೂ ಹಿಂದೆ ಕಂಡೆವು. ಈಚಿಗೆ ಪೃಥ್ವಿಯ ಅನೇಕ ಭಾಗಗಳಲ್ಲಿ ಜನರು ಜ್ಞಾನವಂತರಾಗಿರುವರೆಂದು ಹೇಳಿಕೊಳ್ಳಬಹುದು. ತಮ್ಮ ಮತಕ್ಕೆ ಇತರರನ್ನು ಬಲವಂತದಿಂದ ಸೇರಿಸಿಕೊಳ್ಳುವುದು ಅವಿವೇಕ ವೆಂಬ ಭಾವನೆಯೇನೋ ನೆಲೆಸಿದಹಾಗಿದೆ.



ವರ್ಜಿನಿಯದಲ್ಲಿ ಗುಲಾಮರ ಹರಾಜು

ಆದರೆ ಮತಭೇದವೊಂದೇ ಪೈಶಾಚವರ್ತನೆಗೆ ಕಾರಣವಲ್ಲ. ಆಸೆಹುಟ್ಟಿ ಬಲಗೊಂಡಂತೆಲ್ಲ ದಯಾದಾಕ್ಷಿಣ್ಯಗಳು ಮಾಯವಾಗುತ್ತವೆ. ಬೇಗಬೇಗ ಧನವಂತರಾಗುವ ಆಸೆ ಹಿಡಿದಾಗ ಎಂತೆಂತಹ ಕ್ರೂರಕೃತ್ಯಗಳೋ ನಡೆಯುತ್ತವೆ. ಔದ್ಯೋಗಿಕಪಲ್ಲಟವೆಂಬುದು ಸಂಭವಿಸಿದಾಗ ವೇಗವಾಗಿ ಧನಿಕರಾಗುವ ಹೊಸ ರೀತಿಗಳೂ ಉಪಾಯಗಳೂ ಕಂಡುಬಂದವು. ಆಗ ಮನುಷ್ಯರು ರಾಕ್ಷಸರಂತೆ ವರ್ತಿಸುವ ಸನ್ನಿವೇಶವೂ ಒದಗಿತು.

ಐರೋಪ್ಯರಿಗೆ ಕಾಫಿ ಹೊಗೆಸೊಪ್ಪುಗಳ ರುಚಿಯು ತಿಳಿದ ತರುವಾಯ ಅವುಗಳ ಉಪಯೋಗ ಹೆಚ್ಚಿತು. ಅವುಗಳೊಂದಿಗೆ ಸಕ್ಕರೆ ಮತ್ತು ಸಂಬಾರದ ದಿನಸುಗಳೂ ಹೆಚ್ಚುಹೆಚ್ಚಾಗಿ ಬೇಕೆನಿಸಿದವು. ಐರೋಪ್ಯದೇಶಗಳಲ್ಲಿ ಅವು ಬೆಳೆಯುವುದಿಲ್ಲ; ಆದರೆ ಅಲ್ಲಿಯ ಜನರಿಗೆ ಬೇಕು. ದಕ್ಷಿಣ ಅಮೆರಿಕದಲ್ಲಿಯೂ

ಉತ್ತರ ಅಮೆರಿಕದ ದಕ್ಷಿಣ ಭಾಗದಲ್ಲಿಯೂ, ಅಂದರೆ ಉಷ್ಣವಲಯದ ಭಾಗಗಳಲ್ಲಿ, ಆ ದಿನಸುಗಳನ್ನು ಯಥೇಷ್ಟವಾಗಿ ಬೆಳೆಸಲು ಅನುಕೂಲ. ಆ ಪ್ರದೇಶಗಳಲ್ಲಿ ಜನಬಾಹುಳ್ಯಮಾತ್ರವಿರಲಿಲ್ಲ; ಮೊದಲಿನಿಂದಲೂ ಇದ್ದ ನಿವಾಸಿಗಳಲ್ಲಿ ಅನೇಕರು ಹತರಾಗಿದ್ದರು, ಉಳಿದವರು ಬೆಟ್ಟಗುಡ್ಡಗಳಲ್ಲಿ ಸೇರಿದ್ದರು. ಸ್ವಲ್ಪ ಕಾಲವಾದರೂ ತಮ್ಮ ಪ್ರಾಬಲ್ಯವನ್ನುಳಿಸಿಕೊಂಡ ತಾಮ್ರವರ್ಣದವರು ಐರೋಪ್ಯರಿಗೆ ಹಗೆಗಳಾಗಿದ್ದುದರಿಂದ ಅನುಕೂಲರಲ್ಲ. ಹಾಗಿದ್ದ ಕ್ಷೇತ್ರಗಳಲ್ಲಿ ನೆಲೆಸಿದ್ದ ಐರೋಪ್ಯರಿಗೆ ಆ ದಿನಸುಗಳನ್ನು ಬೆಳೆಸಿ ಲಾಭಕ್ಕೆ ಮಾರುವ ಆಸೆಯೇನೋ ಬಲವಾಯಿತು. ಆದರೆ ತೋಟಗಳನ್ನು ಮಾಡಿ ಕಷ್ಟಪಟ್ಟು ದುಡಿಯಲು ಅವರಿಗಾಗದು. ಕೂಲಿಯಾಳುಗಳು ಬೇಕು; ಆದರೆ ಕೂಲಿಗೆ ಬರುವವರೇ ಇಲ್ಲ. ಆ ಸನ್ನಿವೇಶದಲ್ಲಿ ಸಮುದ್ರಯಾನಸಾಹಸಿಗಳಾಗಿದ್ದ ಬ್ರಿಟಿಷ್, ಸ್ಪಾನಿಷ್ ಮತ್ತು ಪೋರ್ಚುಗೀಸರು ಆಫ್ರಿಕದ ಪಶ್ಚಿಮತೀರಕ್ಕೆ ಹೊರಟು ಅಲ್ಲಿದ್ದ ನೀಗ್ರೋ ಜನರನ್ನು ಬಲಾತ್ಕಾರದಿಂದ ಹಿಡಿದು ಹಡಗುಗಳಲ್ಲಿ ಕಟ್ಟಿ ಅಮೆರಿಕಕ್ಕೊಯ್ದು ಮಾರಲು ಉಪಕ್ರಮಿಸಿದರು. ೧೬೦೦ ರಿಂದ ಮೊದಲಾದ ನೀಗ್ರೋ ಗುಲಾಮರ ಮಾರಾಟ ನಿರಂತರವಾಗಿ ಇನ್ನೂರು ವರ್ಷಕಾಲ ನಡೆಯುತ್ತಲೇ ಇತ್ತು. ೧೭೯೦ ರ ವೇಳೆಗೆ ಅಮೆರಿಕದಲ್ಲಿ ಏಳು ಲಕ್ಷಗಳಷ್ಟು ಗುಲಾಮರು ದುಡಿತಕ್ಕೆ ಸಿಕ್ಕಿಬಿದ್ದಿದ್ದರು.

ಆದರೆ ಆ ವೇಳೆಗೆ ಅನೇಕರಿಗೆ ಗುಲಾಮಿಪದ್ಧತಿಯು ಘೋರವಾದ ಅನ್ಯಾಯವೆನಿಸಿತ್ತು. ಮನುಷ್ಯರನ್ನು ದನಕುರಿಗಳಂತೆ ಮಾರಿಕೊಳ್ಳುವುದು ಅಸಹ್ಯವೂ ಅವಮಾನಕರವೂ ಆದುದೆಂಬ ಭಾವನೆಯು ಹುಟ್ಟಿತ್ತು. ಫ್ರಾನ್ಸ್ ಮಹಾಪಲ್ಲಟವು ನಡೆದ ಕಾಲದಲ್ಲಿ ಇಂಗ್ಲಂಡಿನಲ್ಲಿ ಗುಲಾಂ ಪದ್ಧತಿಯು ದಂಡಾರ್ಹವೆಂದು ನಿರೂಪಿಸಿದ ಕಾನೂನು ರಚಿತವಾಯಿತು. ವಿಲಿಯಂ ವಿಲ್ಬರ್‌ಫೋರ್ಸ್ (William Wilberforce) ಎಂಬಾತನು ಹೇಗಾದರೂ ಆ ಪದ್ಧತಿಯನ್ನು ನಿಲ್ಲಿಸಿಬಿಡಬೇಕೆಂದು ಪ್ರಚಾರಮಾಡಿದನು. ೧೮೨೪ ಮತ್ತು ೧೮೩೩ ರಲ್ಲಿ ಪುನಃ ಕಾನೂನುಗಳು ಹುಟ್ಟಿದವು. ಬ್ರಿಟಿಷರ ಸ್ವಾಧೀನದಲ್ಲಿದ್ದ ಭೂಭಾಗಗಳಲ್ಲೆಲ್ಲ ಗುಲಾಮರಾಗಿದ್ದವರಿಗೆ ಬಿಡುಗಡೆಯಾಯಿತು. ಇನ್ನು ಮುಂದೆ ಗುಲಾಂ ಪದ್ಧತಿಗೆ ಆಸ್ಪದವೇ ಇಲ್ಲದಂತೆ ನೆರವೇರಿತು. ಐರೋಪ್ಯ ದೇಶಗಳಲ್ಲಿಯೂ ಈ ಬಗೆಯ ಭಾವನೆಯೇ ಜನರಲ್ಲಿ ಊರಿತು. ಗುಲಾಂ ಪದ್ಧತಿಯನ್ನು ನಿಲ್ಲಿಸುವ ಉದ್ದೇಶ ಬಲವಾಯಿತು.

ಅಮೆರಿಕನ್ನರಲ್ಲಿ ಆ ಭಾವನೆ ಬೆಳೆಯಲು ಕಷ್ಟವಾಯಿತು. ಇಂಗ್ಲಂಡಿನಲ್ಲಿ ಹತ್ತಿಯನ್ನು ಕೊಂಡುಕೊಳ್ಳುವುದು ಹೆಚ್ಚಿದಾರಭ್ಯ ದಕ್ಷಿಣ ಸಂಸ್ಥಾನಗಳ

ಅತಿ ವಿಸ್ತಾರವಾದ ಕ್ಷೇತ್ರಗಳಲ್ಲಿ ಹತ್ತಿಯನ್ನು ಬೆಳೆಯಲು ಅನೇಕ ಗುಲಾಮರನ್ನು ಕಟ್ಟಿಕೊಂಡಿದ್ದರು. ಆಫ್ರಿಕದಿಂದ ಹೊಸದಾಗಿ ನೀಗ್ರೋ ಜನರನ್ನು ಹಿಡಿದು ತರಲು ಕಾನೂನು ಪ್ರತಿಬಂಧಕವಾಗಿಯೇನೋ ಇತ್ತು; ಆದರೆ ವ್ಯಾಪಾರಿಗಳು ಕಳ್ಳತನದಿಂದ ಅವರನ್ನು ಹಿಡಿದು ಸಾಗಿಸಿಕೊಂಡು ಬರುತ್ತಿದ್ದರು. ಬಚ್ಚಿಟ್ಟು ತರುವ ಸಂದರ್ಭದಲ್ಲಿ ನೀಗ್ರೋ ಜನರಿಗೆ ಹಿಂದಿದ್ದುದಕ್ಕಿಂತ ಹೆಚ್ಚಿನ ಹಿಂಸೆಯಾಯಿತು. ೧೮೬೧ ರ ವೇಳೆಗೆ ಅಮೆರಿಕದಲ್ಲಿದ್ದ ಗುಲಾಮರ ಸಂಖ್ಯೆ ನಲವತ್ತು ಲಕ್ಷಗಳು! ಗುಲಾಮರನ್ನು ಬಿಡುಗಡೆ ಮಾಡಿದ ಪಕ್ಷದಲ್ಲಿ ತಮಗೆ ಸರ್ವನಾಶವಾಗುವುದೆಂದು ದಾಕ್ಷಿಣಾತ್ಯ ಅಮೆರಿಕನ್ನರ ಮನಸ್ಸಿನಲ್ಲಿ ಭಯ. 'ಔತ್ತರೇಯರಿಗೂ ಐರೋಪ್ಯರಿಗೂ ಏನು ಚಿಂತೆ? ಅವರಲ್ಲಿ ಗುಲಾಮರೇ ಇಲ್ಲ. ಆದ್ದರಿಂದ ಅವರೆಲ್ಲರೂ ಧರ್ಮಾವತಾರರಂತೆ ಮಾತನಾಡುತ್ತಾರೆ. ಅವರಿಗೇನೂ ನಷ್ಟವಿಲ್ಲ. ಆದ್ದರಿಂದ ಹೀಗಾಡುತ್ತಾರೆ' ಎಂದರು. ಔತ್ತರೇಯರಿಗೂ ದಾಕ್ಷಿಣಾತ್ಯರಿಗೂ ಈ ವಿಚಾರದಲ್ಲಿ ದೊಡ್ಡ ಜಗಳವೆದ್ದಿತು.

ಉತ್ತರದ ಸಂಸ್ಥಾನಗಳಲ್ಲಿ ಔದ್ಯೋಗಿಕಪಲ್ಲಟದ ಪ್ರಭಾವ ತೋರಿತ್ತು. ಕಬ್ಬಿಣ ಕಲ್ಲಿದ್ದಲ ಗಣಿಗಳು ಕಾಣಿಸಿಕೊಂಡು ಕಾರ್ಖಾನೆ ಪಟ್ಟಣಗಳು ಬಡಾಯಿಸಿದ್ದವು. ಅಲ್ಲಿಯ ಜನಸಂಖ್ಯೆ ವೇಗವಾಗಿ ಅಭಿವೃದ್ಧಿಗೊಳ್ಳುತ್ತಿತ್ತು. ದಕ್ಷಿಣದ ಸಂಸ್ಥಾನಗಳಲ್ಲಿ ವಿಸ್ತಾರವಾದ ಭೂಸ್ಥಿತಿಗಳು, ಜಮೀನ್ದಾರರು. ಆ ಜಮೀನ್ದಾರರಲ್ಲಿ ಅನೇಕರು ಆಚಾರಶರಣರಾಗಿ ಹಳೆಯ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದು ತಾವು ಕಟ್ಟಿಕೊಂಡಿದ್ದ ಗುಲಾಮರಲ್ಲಿ ಕರುಣೆಯಿಂದಿದ್ದರು. ತಮ್ಮ ಬದುಕಿನ ನೀತಿಯನ್ನು ತಿದ್ದಲು ಯಾರಿಗೇನಧಿಕಾರವೆಂದು ಅವರು ಕೇಳಲಾರಂಭಿಸಿದರು. ಔತ್ತರೇಯರಿಗೂ ತಮಗೂ ಒಂದು ವೇಳೆ ವಾದ ನಡೆದರೆ ಬಹು ಸಂಖ್ಯಾಕರಾದ ಔತ್ತರೇಯರು ಗೆದ್ದಾರೆಂಬ ಭೀತಿಯು ಅವರಲ್ಲಿತ್ತು. ಕಡೆಗೆ ಔತ್ತರೇಯರ ಹಂಗಿಲ್ಲದಂತೆ ನೆರವೇರಿಸಿಕೊಳ್ಳಬೇಕೆಂಬ ನಿಶ್ಚಯಮಾಡಿದರು. ಕೂಟರಾಷ್ಟ್ರವನ್ನು ಬಿಟ್ಟು ತಾವು ಬೇರೆಯಾಗಿ ಪ್ರತ್ಯೇಕ ವ್ಯೂಹಕಟ್ಟಿಕೊಳ್ಳಲು ಸಿದ್ಧರಾದರು. ಹೊಸದಾಗಿ ಹುಟ್ಟಿದ ಈ ವ್ಯೂಹಕ್ಕೆ **ಕಾನ್‌ಫೆಡರೆಸಿ** (Confederacy) ಎಂಬ ಹೆಸರಾಯಿತು.

೧೮೬೦ ರಲ್ಲಿ ಸಂಯುಕ್ತರಾಷ್ಟ್ರಕ್ಕೆ ಹೊಸ ಅಧ್ಯಕ್ಷನಾರೆಂದು ನಿಶ್ಚಯಿಸುವವೇಳೆ. **ಅಬ್ರಹಾಂ ಲಿಂಕನ್** (Abraham Lincoln) ಎಂಬಾತನು ಅಧ್ಯಕ್ಷಪದವಿಗೆ ಚುನಾವಣೆಪಡೆದನು. ಗುಲಾಂ ಪದ್ಧತಿಗೆ ಪರಮವಿರೋಧಿಗಳಲ್ಲಿ ಗಣ್ಯನಾದಾತನು ಲಿಂಕನ್. ಆ ಚುನಾವಣೆಯು ನಡೆದ ಕೂಡಲೇ ದಕ್ಷಿಣಸಂಸ್ಥಾನಗಳವರು ಸಂಯುಕ್ತರಾಷ್ಟ್ರತ್ಯಾಗಮಾಡಿಕೊಳ್ಳಲು ನಿರ್ಧರಿಸಿಕೊಂಡರು.

ಮುಖ್ಯಪ್ರಶ್ನೆ ೯೨ : ಔತ್ತರೇಯರೂ ದಾಕ್ಷಿಣಾತ್ಯರೂ ಪರಸ್ಪರವಾಗಿ ಹೋರಾಡಿದ್ದೇಕೆ? ಆ ಹೋರಾಟದ ಪರಿಣಾಮವೇನಾಯಿತು?

ಕೆಂಟಕಿ (Kentucky) ಯೆಂಬ ಸಂಸ್ಥಾನದಲ್ಲಿ ಇನ್ನೂ ಅರಣ್ಯವೇ ಹೆಚ್ಚಾಗಿತ್ತು; ಅರಣ್ಯಪ್ರದೇಶಗಳಲ್ಲಿ ತಾಮ್ರವರ್ಣದವರು ವಾಸಿಸುತ್ತಿದ್ದರು. ಅಂತಹ ಪ್ರದೇಶದಲ್ಲಿ ಮರದ ದಿಮ್ಮಿಗಳನ್ನು ಪೇರಿಸಿ ಗೋಡೆ ಕಟ್ಟಿ ಮನೆಮಾಡಿಕೊಂಡು ಬದುಕುತ್ತಿದ್ದ ಹಲಕೆಲವರು ರೈತರಿರುತ್ತಿದ್ದರು.



ದಿಮ್ಮಿಗಳಿಂದ ಕಟ್ಟಿದ ಮನೆ

ಅಬ್ರಹಾಂ ಲಿಂಕನ್ ಅಂತಹ ಮನೆಯಲ್ಲಿ ೧೮೦೯ರಲ್ಲಿ ಹುಟ್ಟಿಬೆಳೆದವನು. ತಂದೆಗೆ ಓದುಬರಹವೆಂಬುದು ಬಾರದು. ಹಾಗೂ ಹೀಗೂ ಬದುಕನ್ನು ನಡೆಸುತ್ತಿದ್ದು ಆತನು ಅಬ್ರಹಾಂ ಏಳು ವರ್ಷದವನಾದಾಗ ಓಹಿಯೊ ನದಿಯ ಆಚೆ **ಇಂಡಿಯಾನ** (Indiana) ಸಂಸ್ಥಾನಕ್ಕೆ ವಲಸೆ ಹೊರಟನು. ಹೊಸ ಸ್ಥಳದಲ್ಲಿ ದಿಮ್ಮಿಗಳ ಮನೆಕಟ್ಟಿ ನೆಲಹಿಡಿಸಿಕೊಂಡು ವ್ಯವಸಾಯಕ್ಕೆ ತೊಡಗಿದನು. ಅಬ್ರಹಾಮನಿಗೆ ಹತ್ತೊಂಭತ್ತು ವರ್ಷವಾಗುವವೇಳೆಗೆ ತಂದೆ ಇನ್ನೊಂದು ಸ್ಥಳಕ್ಕೆ ವಲಸೆಹೊರಟನು. ಮಿಸಿಸಿಪ್ಪಿ ನದಿಯ ಬಳಿ ಮೇಲೆಂದು ಇನ್ನೂ ಪಶ್ಚಿಮಕ್ಕೆ **ಇಲ್ಲಿನಾಯ್ಸ್** (Illinois) ಎಂಬ ಸಂಸ್ಥಾನಕ್ಕೆ ಹೊರಟನು. ಈ ರೀತಿ ರೈತಾಪಿ ಜನರು ಹೊಸ ಹೊಸ ಸ್ಥಳಗಳಿಗೆ ವಲಸೆ

ಹೊರಡುತ್ತಿದ್ದುದರಿಂದಲೇ ರಾಷ್ಟ್ರಕ್ಕೆ ರಾಕಿ ಪರ್ವತಶ್ರೇಣಿಯೇ ಮೇರೆಯಾಯಿತು. ಆ ತರುವಾಯ ಪಸಿಫಿಕ್ ತೀರವೇ ಎಲ್ಲೆಯಾಯಿತು.

ಆ ವೇಳೆಗೆ ಅಬ್ರಹಾಂ ಓದುಬರಹ ಕಲಿತಿದ್ದನು. ಒಂದು ಬಾರಿ **ನ್ಯೂ ಆರ್ಲಿಯನ್ಸ್** (New Orleans) ನಗರಕ್ಕೆ ಮಿಸಿಸಿಪ್ಪಿ ನದಿ ಮೇಲೆ ವ್ಯಾಪಾರದ ಸರಕನ್ನು ಅವನೇ ಸಾಗಿಸಬೇಕಾಯಿತು. ಆಗಲೇ ಗುಲಾಂ ಪದ್ಧತಿಯ ದೃಶ್ಯವು ಅವನ ಕಣ್ಣುಗಳಿಗೆ ಎದುರಾಯಿತು. ಆ ನೀಗ್ರೋ ಜನರ ದುರವಸ್ಥೆಯನ್ನು ಕಂಡು ಮರುಕಗೊಂಡು ಎಂದಾದರೂ ಆಸ್ಪದ ದೊರೆತಾಗ ಗುಲಾಂ ಪದ್ಧತಿಯನ್ನು ನಾಶಗೊಳಿಸಬೇಕೆಂಬ ಸಂಕಲ್ಪವನ್ನು ಆಗಲೇ ಮಾಡಿಕೊಂಡನು. ಆ ಪ್ರಯಾಣದಿಂದ ಹಿಂತಿರುಗಿ ಬಂದ ಬಳಿಕ ಒಂದು ಸಣ್ಣ ಮಳಿಗೆಯಲ್ಲಿ ನೌಕರಿಯನ್ನು ಆತನಿಗೆ ಕೊಟ್ಟರು. ಓದುಬರಹ ತಿಳಿದವನಾದುದರಿಂದ ಆತನಲ್ಲಿಗೆ ಜನರು ಬರುತ್ತಿದ್ದರು. ಆ ಪಟ್ಟಣದಲ್ಲಿ ಚುನಾವಣೆಗಳ ಸಮಯ ಬಂತು. ಆಗ ಅಬ್ರಹಾಂ ತಾನೇ ಚುನಾವಣೆಗೆ ನಿಲ್ಲುವ ನಿಶ್ಚಯ ಮಾಡಿಕೊಂಡು ಮೊದಲನೆ ಸಲ ವಲ್ಲದಿದ್ದರೂ ಎರಡನೆ ಸಲ ತನ್ನ ೨೫ನೇ ವಯಸ್ಸಿನಲ್ಲಿ ಅಲ್ಲಿಯ ಶಾಸಕಸಭೆಯನ್ನು ಸೇರಿದನು. ಆ ಬಳಿಕ **ಸ್ಪ್ರಿಂಗ್‌ಫೀಲ್ಡ್** (Springfield) ಎಂಬ ಮುಖ್ಯ ಪಟ್ಟಣದಲ್ಲಿಯೇ ನೆಲೆಸಿ ವಕೀಲಿವೃತ್ತಿ ನಡೆಸಿದನು. ಹತ್ತುವರ್ಷ ಕಳೆಯುವ ವೇಳೆಗೆ ಜನರು ಆತನಲ್ಲಿ ವಿಶ್ವಾಸವಿಟ್ಟು ತಮ್ಮ ಸಂಸ್ಥಾನದ ಪ್ರತಿನಿಧಿಯಾಗಿ ಆರಿಸಿ ಕಾಂಗ್ರೆಸ್ ಸಭೆಗೆ (ಸಂಯುಕ್ತ ಸಂಸ್ಥಾನಗಳ ಶಾಸಕಾಂಗದ ಒಂದು ಸಭೆ) ಕಳುಹಿಸಿದರು. ಆಗ ಆತನು



ಅಬ್ರಹಾಂ ಲಿಂಕನ್

ಗುಲಾಂ ಪದ್ಧತಿಯನ್ನು ವಜಾಮಾಡಿಸಲು ಶ್ರಮಪಟ್ಟನು. ೧೮೬೦ರಲ್ಲಿ ರಿಪಬ್ಲಿಕನ್ ಪಾರ್ಟಿ (Republican Party) ಎಂಬ ಪಕ್ಷದವರು ಆತನೇ ಮುಂದಿನ ಅಧ್ಯಕ್ಷನಾಗಿರಲೆಂದು ಆರಿಸಿಕೊಂಡು ಚುನಾವಣೆಗೆ ನಿಲ್ಲಿಸಿದರು. ಚುನಾವಣೆಯೂ ಆಯಿತು. ಆಗ ನಾಲ್ಕು ದಿವಸಗಳು ಕಳೆಯುವಷ್ಟರಲ್ಲಿ ಅಂತರ್ಯುದ್ಧವು ಮೊದಲಾಯಿತು. ದಕ್ಷಿಣ ಸಂಸ್ಥಾನಗಳವರು ಸಂಯುಕ್ತ ರಾಷ್ಟ್ರತ್ಯಾಗಮಾಡಿ ದಂಗೆಯನ್ನೆಬ್ಬಿಸಿದರು.

ತಂದೆಗಳು ತಮ್ಮ ಮಕ್ಕಳೊಂದಿಗೆ, ಸೋದರರು ಸೋದರರೊಂದಿಗೆ ಹೋರಾಟಕ್ಕೆ ನಿಲ್ಲುವ ಸಂದರ್ಭವೊದಗಿತು. ಕೇವಲ ಗುಲಾಮ ಪದ್ಧತಿಯ ತ್ಯಾಗಕ್ಕಾಗಿ ಲಿಂಕನ್ ಹೋರಾಟಕ್ಕೆ ಆಸ್ಪದ ಕೊಡಲಿಲ್ಲ. ಅಂತಹ ಅನಾಹುತಕ್ಕೆ ಆಸ್ಪದ ಕೊಡುವುದಕ್ಕಿಂತಲೂ ಇಷ್ಟವಿದ್ದ ಸಂಸ್ಥಾನಗಳ ಜನರು ಗುಲಾಮರನ್ನಿಟ್ಟುಕೊಂಡಿರುವಂತೆ ಏರ್ಪಡಿಸುವುದು ಮೇಲೆಂದು ಲಿಂಕನ್ನನ ಅಭಿಪ್ರಾಯ. ಆದರೆ ವಿಚಾರವಷ್ಟು ಮಾತ್ರದ್ದಲ್ಲ. ಇನ್ನೂ ದೊಡ್ಡ ವಿಚಾರವು ಹುಟ್ಟಿಕೊಂಡಿತ್ತು. ಸಂಯುಕ್ತಸಂಸ್ಥಾನಗಳೊಟ್ಟುಗೂಡಿ ಕಟ್ಟಿದ್ದ ಕೂಟರಾಷ್ಟ್ರಕ್ಕೇ ವಿಪತ್ತು ತೋರಿತ್ತು. ದಾಕ್ಷಿಣಾತ್ಯರು ಕೂಟರಾಷ್ಟ್ರತ್ಯಾಗ ಮಾಡಿ ಅದಕ್ಕೆ ಪ್ರತಿಯಾಗಿ ತಮ್ಮದೇ ಒಂದು ಕೂಟವನ್ನು ಕಟ್ಟಿಕೊಂಡರೆ ರಾಷ್ಟ್ರದ ಐಕ್ಯವೆಂಬುದು ಉಳಿಯುತ್ತಿತ್ತೆ? ಈ ದೊಡ್ಡ ವಿಚಾರದ ಇತ್ಯರ್ಥಕ್ಕಾಗಿ ಯುದ್ಧವೇ ಆಗತಕ್ಕುದಾದರೆ ಆಗಲೆಂದನು ಲಿಂಕನ್. ನಡೆದ ಯಾದವೀಕಲಹದಲ್ಲಿ ಐದು ಲಕ್ಷ ಜನರು ತಮ್ಮವರಿಂದಲೇ ಹತರಾಗಬೇಕಾಯಿತು. ಗಾಯಗೊಂಡೋ ರೋಗರುಜನಗಳಿಗೆ ಸಿಕ್ಕಿಯೋ ಲಕ್ಷಾಂತರ ಜನ ಮೃತಪಟ್ಟರು. ಪ್ರಾಣಹೋಗದೆ ಉಳಿದುಕೊಂಡವರಲ್ಲಿ ಸಾವಿರಾರು ಜನರು ಅಂಗಹೀನರು ಅಥವಾ ಸದಾ ದುರ್ಬಲರು. ನಾಲ್ಕು ವರ್ಷಗಳ ಕಾಲ ಹೊಡೆದಾಟವು ನಿರಂತರವಾಗಿ ನಡೆಯಿತು. ದಕ್ಷಿಣಸಂಸ್ಥಾನಗಳೆಲ್ಲ ವಿಶಾಲಸ್ಮಶಾನದಂತಾದುವು. ಹೆಚ್ಚು ಜನಬಲವನ್ನೂ ಧನಬಲವನ್ನೂ ಪಡೆದಿದ್ದ ಔತ್ತರೇಯರಿಗೆ ಕಡೆಯಲ್ಲಿ ಜಯ ಪ್ರಾಪ್ತಿಯಾಯಿತು. ಆ ಪ್ರಾಪ್ತಿಗಾಗಿ ಎಷ್ಟು ಅನರ್ಥಗಳು ನಡೆದುಹೋದುವು!

ಸೋತುಹೋದ ದಾಕ್ಷಿಣಾತ್ಯರನ್ನು ಮನ್ನಿಸಿ ಔದಾರ್ಯದಿಂದ ಕಾಣಬೇಕೆಂದು ಲಿಂಕನ್ ಮನಮಾಡಿದ್ದನು. ನಷ್ಟವನ್ನು ಕಟ್ಟಿಕೊಡುವ ಉಪಾಯಗಳನ್ನೂ ಆಲೋಚಿಸಿದ್ದನು. ಆದರೆ ಆಯುಷ್ಯವಿಲ್ಲದೆಹೋಯಿತು. ಯುದ್ಧ ಮುಗಿದಬಳಿಕ ಒಂದಾನೊಂದು ನಾಟಕಶಾಲೆಯಲ್ಲಿ ಆಟನೋಡಲು ಲಿಂಕನ್ ಕುಳಿತಿದ್ದಾಗ ನೀಚನೊಬ್ಬನು ಅದೇ ಸಮಯವೆಂದು ಪಿಸ್ತೂಲನ್ನು ಗುರಿ

ಯಿಟ್ಟು ಹಾರಿಸಿದನು. ಏಟುವಡೆದ ಲಿಂಕನ್ ಮರುದಿನ ಬೆಳಿಗ್ಗೆಯೇ ತೀರಿಕೊಂಡನು.

ಸೋಲಿನ ಪರಿಣಾಮವಾಗಿ ದಾಕ್ಷಿಣಾತ್ಯರು ಗುಲಾಮರನ್ನು ಬಿಡುಗಡೆ ಮಾಡಲೊಪ್ಪಿಕೊಳ್ಳಬೇಕಾಯಿತು. ನೀಗ್ರೋ ಜಾತಿಯವರೂ ಅಮೆರಿಕದ ಪೌರತನದ ಕರ್ತವ್ಯಾಧಿಕಾರಗಳನ್ನು ಪಡೆದಿರತಕ್ಕವರೆಂಬ ಕಾನೂನುಗಳೂ ಆದುವು. ಆದರೇನು, ಸರಸ್ವತೀಪ್ರಸನ್ನವೆಂದ ಹಾಗಾಯಿತು. ನೀಗ್ರೋಜನರ ದುರವಸ್ಥೆಯು ಕಳೆಯಲಿಲ್ಲ. ಈಗ ಅಮೆರಿಕದಲ್ಲಿ ನೂರಿಪ್ಪತ್ತು ಲಕ್ಷಗಳಷ್ಟಿದ್ದಾರೆ ನೀಗ್ರೋ ಎನಿಸಿದವರು. ಅಮೆರಿಕದ ಒಟ್ಟು ಜನರಾಶಿಯ ಹತ್ತನೆಯೊಂದು ಭಾಗದಷ್ಟು. ಅವರಲ್ಲಿ ಎಷ್ಟೋ ಮಂದಿ ವಿದ್ಯಾವಂತರು, ಕೆಲವರು ಧನವಂತರು. ಕೂಲಿ ಗೊತ್ತಾಗದೆ ಯಾರನ್ನೂ ಅಲ್ಲಿ ಕೆಲಸಕ್ಕೆ ಇಡುವ ಹಾಗಿಲ್ಲ. ಆದರೂ ನೀಗ್ರೋ ಜನರ ಪಾಡು ಶೋಚನೀಯವಾಗಿಯೇ ಇದೆ. ತಮ್ಮ ಪೂರ್ವಿಕರಾದ ಗುಲಾಮರು ಅನುಭವಿಸಿದಂತೆ ತಾವೂ ಸಂಕಟಪಡಬೇಕಾಗಿದೆಯೆಂದು ಆ ಜನರು ಖಿನ್ನರಾಗುತ್ತಾರೆ. ಅವರ ಭವಿಷ್ಯವೇನೆಂಬುದು ಅಮೆರಿಕದವರ ಮುಂದಿರುವ ಸಮಸ್ಯೆಗಳಲ್ಲೊಂದು.

ಅಭ್ಯಾಸಗಳು

೧. ಮನುಷ್ಯರು ಇತರ ಮನುಷ್ಯರನ್ನು ಬುದ್ಧಿಪೂರ್ವಕವಾಗಿ ಹಿಂಸೆಗೆ ಗುರಿಮಾಡಲು ಮುಖ್ಯಕಾರಣಗಳನ್ನು ಸೂಚಿಸಿ.

೨. ಅಮೆರಿಕದಲ್ಲಿ ಗುಲಾಮಗಿರಿಯು ಅಷ್ಟು ಬೇಗನೆ ಹೆಚ್ಚಿದುದು ಹೇಗೆ? ಕೊನೆಗಂಡುದು ಹೇಗೆ? ಕಡೆಗೂ ಆದ ಪರಿಣಾಮವೇನು?

೩. ಇತರ ಯುದ್ಧಗಳಿಗಿಂತ ಅಂತರ್ಯುದ್ಧವೆಂಬುದು ಘೋರವಾದುದು ಹೇಗೆ? ಔತ್ತರೇಯರ ಪಕ್ಷವನ್ನೇ ಲಿಂಕನ್ ಹಿಡಿದುದೇಕೆ?

೨೫ ನೇ ಅಧ್ಯಾಯ

ಶಾಸ್ತ್ರಜ್ಞಾನಸಾಧಕ ಚಾರ್ಲ್ಸ್ ಡಾರ್ವಿನ್

ಮುಖ್ಯಪ್ರಶ್ನೆ ೯೩: ಮಾನವರು ತಮ್ಮ ಕುತೂಹಲಬುದ್ಧಿಯನ್ನು ಯಾವ ಯಾವ ಕಾಲಗಳಲ್ಲಿ ತೋರಿಸಿದರು? ಅದರ ಪರಿಣಾಮವೇನಾಯಿತು?

ಬುದ್ಧಿ ವಿಕಸನವಾಗುತ್ತಿದೆಯೆನ್ನಲು ಪ್ರಾಯಶಃ ಕುತೂಹಲಹುಟ್ಟುತ್ತಲಿರುವುದೇ ಸ್ಪಷ್ಟವಾದ ಚಿಹ್ನೆ. ಮೃಗಪ್ರಾಣಿಗಳಲ್ಲಿ ಕೂಡ ಹೆಚ್ಚು ಬುದ್ಧಿಯುಳ್ಳವುಗಳನ್ನೂ ಕಡಿಮೆ ಬುದ್ಧಿಯುಳ್ಳವುಗಳನ್ನೂ ಆ ಚಿಹ್ನೆಯಿಂದ ಗುರುತಿಸಬಹುದು. ನಾಯಿಗಳು, ಬೆಕ್ಕುಗಳು ಅಥವಾ ಆನೆಗಳು ಹೊಸ ಸ್ಥಳವನ್ನೋ ಅಪರಿಚಿತನನ್ನೋ ಕಂಡಾಗ ಅಲ್ಲಲ್ಲಿ ಮುಸುಡಿಯಿಟ್ಟು ವಾಸನೆ ತಿಳಿದು ಪತ್ತೆಮಾಡಿಕೊಳ್ಳಲು ಎಷ್ಟು ಪ್ರಯತ್ನಿಸುತ್ತವೆ! ಆ ಕುತೂಹಲವಿರುವುದರಿಂದಲೇ ಅವುಗಳ ತಿಳಿವು ಹೆಚ್ಚುವುದು; ಬುದ್ಧಿ ಸೂಕ್ಷ್ಮವಾಗುವುದು. ಮಾನವಜಾತಿಗಂತೂ ಕುತೂಹಲ ತೋರುತ್ತಿದ್ದರೆ ಮನಸ್ಸು ಬುದ್ಧಿಗಳು ಅರಳುತ್ತಿವೆಯೆಂದು ಹೇಳಬಹುದು. ಮಗುವು ಹೇಗಾಡುತ್ತದೆ ಕಾಣಿರಾ? ಸುತ್ತಲೂ ನಡೆಯುವುದನ್ನು ಕಣ್ಣುಬಿಟ್ಟು ಕುತೂಹಲದಿಂದ ನೋಡಿ ಕೈಕಾಲುಗಳನ್ನಾಡಿಸಿ ಸಿಕ್ಕಿದ್ದನ್ನು ಬಾಯಲ್ಲಿಟ್ಟುಕೊಳ್ಳುತ್ತಲಿರುತ್ತದೆ. ಬುದ್ಧಿವಂತರಾದ ಹುಡುಗರೂ, ಹುಡುಗಿಯರೂ ಇದೇತಕ್ಕೆ, ಅದು ಹೇಗೆ, ಎಂದು ಕೇಳುತ್ತಲೇ ಇರುತ್ತಾರೆ. ಆ ಪ್ರಶ್ನೆಗಳನ್ನು ಕೇಳುತ್ತಿರುವವರು ಬೇಗಬೇಗನೆ ಕಲಿಯಲೂ ಪ್ರಯತ್ನಿಸುತ್ತಾರೆ.

ಇತರರು ಹೇಳಿದಷ್ಟು ಮಾತ್ರವನ್ನೇ ನಂಬಿ ತೃಪ್ತರಾಗದೆ ಇನ್ನೂ ಹೆಚ್ಚಿನ ವಿಷಯವನ್ನು ತಿಳಿಯಲು ಇಷ್ಟಪಟ್ಟ ಸ್ತ್ರೀಪುರುಷರು ಎಲ್ಲ ಕಾಲಗಳಲ್ಲಿಯೂ ಜೀವಿಸಿಯೇ ಇದ್ದರು. ಹೆಚ್ಚಾಗಿ ತಿಳಿಯುವ ಆಸೆಯಿಂದ ಅವರು ತಾವೇ ಪರೀಕ್ಷೆ ನಡೆಸಿ ಬೇರೆ ಉತ್ತಮ ರೀತಿಯಲ್ಲಿ ಈ ವಸ್ತುವನ್ನು ಮಾಡಲಾಗುವುದೇ, ಆ ವಸ್ತುವನ್ನು ಮಾಡಲಾಗುವುದೇ ಎಂದು ತಿಳಿಯಲು ತವಕಗೊಂಡರು. ಈ ಬಗೆಯ ಕುತೂಹಲ, ಪರೀಕ್ಷಾಬುದ್ಧಿ, ಹೆಚ್ಚಾಗಿ ತಿಳಿಯುವ ಆಸೆಗಳು ಮಾನವಜಾತಿಯಲ್ಲಿ ಸ್ವಾಭಾವಿಕವಾಗಿಲ್ಲದಿದ್ದರೆ ಅಭಿವೃದ್ಧಿ ಸಾಧ್ಯವೇ? ತಮ್ಮ ಪೂರ್ವಿಕರು ಯೋಚಿಸಿದಷ್ಟನ್ನೇ ಯೋಚಿಸುತ್ತ ಆಚರಿಸಿ

ದಷ್ಟನ್ನೇ ತಾವೂ ಆಚರಿಸುತ್ತ ಇದ್ದುಬಿಡುತ್ತಿದ್ದರು ಜನ; ಜೀವನದಲ್ಲಿ ಯಾವ ವ್ಯತ್ಯಾಸವೂ ಸ್ವಾರಸ್ಯವೂ ಇರುತ್ತಿರಲಿಲ್ಲ.

ಪ್ರತ್ಯೇಕ ರೀತಿಯಲ್ಲಿ ಆಲೋಚಿಸಬೇಕೆನ್ನುವವರೂ ಆಚರಿಸಬೇಕೆನ್ನುವವರೂ ಲೋಕದ ಅಭಿವೃದ್ಧಿಸಾಧನೆಯಲ್ಲಿ ವಾಸ್ತವವಾಗಿ ಮುಖ್ಯರು. ಆದರೆ ಅಂತಹವರು ಯಾವಾಗಲಾದರೂ ತೊಂದರೆಯಲ್ಲಿ ಸಿಕ್ಕಿಕೊಳ್ಳುತ್ತಲೇ ಇರುತ್ತಾರೆ. ಅದೇಕೆ? ನಮ್ಮಲ್ಲಿ ಸಹಜವಾದ ಮತ್ತೊಂದು ಲಕ್ಷಣವಿದೆ; ಕುತೂಹಲವೆಂಬುದಕ್ಕೆ ಅದು ವೈರಿ. ಸೋಮಾರಿತನವೆಂದು ಕರೆದರೂ ಕರೆಯಬಹುದು ಅದನ್ನು. ನಮಗೆ ಹೇಗೆ ಅಭ್ಯಾಸವಾಗಿದೆಯೋ ಹಾಗೆಯೇ ಆಚರಿಸುತ್ತಿರೋಣವೆಂತಲೋ ಪದ್ಧತಿಯಂತೆ ನಡೆಸೋಣವೆಂತಲೋ ಹೇಳಿಸುವುದು ಆ ಗುಣ. ವಯಸ್ಸಾಗುತ್ತ ನಮಗೆ ದೈಹಿಕವರ್ತನೆಯಲ್ಲಿ ಅಭ್ಯಾಸಗಳು ಬೆಳೆದಂತೆ ಆಲೋಚನೆಯ ರೀತಿಯಲ್ಲಿಯೂ ಆಚರಣೆಯ ವಿಧಾನದಲ್ಲಿಯೂ ಅಭ್ಯಾಸಗಳು ಬಲಿಯುತ್ತವೆ. ಅಭ್ಯಾಸವಾದುದನ್ನು ಬದಲಾಯಿಸಿಕೊಳ್ಳುವುದೆಷ್ಟೋ ತೊಂದರೆಯೆನಿಸುತ್ತದೆ. ಅಂತಹ ಸಂದರ್ಭಗಳಲ್ಲಿಯೇ ನಾವು ಸ್ವಲ್ಪ ಮಂಕರಾಗುತ್ತೇವೆ. ಬದಲಾಯಿಸುವುದೇ ತಪ್ಪೆಂದು ನಂಬಿಕೆ ಬೆಳೆಸಿಕೊಳ್ಳುತ್ತೇವೆ. ಯಾರಾದರೂ ಬೇರೆ ಮಾತು ಹೇಳಿದರೆ ಅಥವಾ ಬೇರೆ ರೀತಿಯಲ್ಲಿ ಆಚರಿಸಿದರೆ ನಮಗೆ ಸಹಿಸುವುದಿಲ್ಲ. ಈ ಲಕ್ಷಣವನ್ನು ನಾವು ಪದ್ಧತಿ ಪ್ರೀತಿಯೆನ್ನಬಹುದು. ನಡೆದುಬಂದುದನ್ನು ಕಾಪಾಡಿಕೊಳ್ಳುವುದು ಆ ಪದ್ಧತಿ ಪ್ರೀತಿಯಿಂದಲೇ.

ಕೆಲವು ಸಮಯಗಳಲ್ಲಿ ಕುತೂಹಲವೆಂಬುದಕ್ಕೂ ಪದ್ಧತಿಪ್ರೀತಿಯೆಂಬುದಕ್ಕೂ ವಿರೋಧವು ವಿಷಮರೂಪವನ್ನು ತಾಳಿ ಅಸಹನವೂ ಅದರಿಂದ ಘೋರ ಹಿಂಸೆಯೂ ಪ್ರಾಪ್ತಿಯಾದುವು. ವ್ಯತ್ಯಾಸಮಾಡಬೇಕೆಂಬ ಜನರಿಗೆ ಪದ್ಧತಿ ಪ್ರೀತಿಯನ್ನು ಬಿಡಲಾರದ ಜನರಲ್ಲಿ ತಿರಸ್ಕಾರ ಹುಟ್ಟುವುದು ; ಆಗ ಅವರು ಹಳೆ ರೀತಿನೀತಿಗಳನ್ನು ದೂಷಿಸುವರು. ಅದರಿಂದ ಪದ್ಧತಿಯ ಭಕ್ತರು ಕುಪಿತರಾಗಿ ಸುಧಾರಕರು ಅಥವಾ ಸಂಸ್ಕರಣಕಾರರೆನಿಸಿದ ಪಕ್ಷದವರನ್ನು ನಿರ್ಬಂಧದಲ್ಲಿಡಿಸುವರು, ವಧಿಸುವರು. ಆದರೆ ಒಟ್ಟಿನಲ್ಲಿ ಒಂದುಮಾತನ್ನೊಪ್ಪತಕ್ಕದ್ದು ; ಚರಿತ್ರೆಯೇ ಅದಕ್ಕೆ ಪುನಃಪುನಃ ಸಾಕ್ಷಿ. ಕುತೂಹಲವನ್ನು ದಮನಗೊಳಿಸುವ ಪ್ರಯತ್ನಗಳೂ ವ್ಯತ್ಯಾಸಗಳಾಗದಂತೆ ನಡೆಸುವ ನಿರ್ಬಂಧಗಳೂ ಕಡೆಕಡೆಗೆ ವ್ಯರ್ಥವೇ ಆದವು. ಅಂತಹ ಉದ್ಯಮಗಳು ಆ ರೀತಿಯಲ್ಲಿ ವ್ಯರ್ಥವಾದುದು ಲೋಕಕ್ಕೇನೋ ಒಳ್ಳೆಯದಾಯಿತು. ವ್ಯರ್ಥವಾಗದೆ ಆ ದಮನ ಪ್ರಯತ್ನಗಳು ಸಾರ್ಥಕವಾಗಿದ್ದಿದ್ದರೆ ಹೇಗಿರುತ್ತಿತ್ತೋ ಯೋಚಿಸಿ. ಹಿಂದೆ ಪಶುಪಾಲಕ

ವೃತ್ತಿಯಲ್ಲಿ ನಮ್ಮೆಲ್ಲರ ಪೂರ್ವಿಕರಿದ್ದಹಾಗೆಯೇ ನಾವೂ ಇರುತ್ತಿದ್ದೆವು. ಪ್ರಾಯಶಃ ಮನುಷ್ಯಜಾತಿಯೇ ಇರುತ್ತಿರಲಿಲ್ಲವೋ ಏನೋ! ನಮ್ಮ ಮನಸ್ಸಿನ ರೀತಿಗೆ ವಿರೋಧತೋರುವ ಜನರನ್ನು ನಾವು ಕಂಡಾಗ ಈ ವಿಚಾರವನ್ನು ನಾವು ಸ್ಮರಿಸುವುದೊಳ್ಳೆಯದು. ಅಂತಹವರಲ್ಲಿ ವೈಷಮ್ಯವನ್ನು ಸಾಧಿಸುವ ಅಸಹನವು ನಮಗೆ ಶ್ರೇಯಸ್ಕರವಲ್ಲ.

ಮಾನವಚರಿತ್ರೆಯನ್ನು ಒಟ್ಟಾಗಿ ಕಂಡಾಗ ಎರಡು ಮೂರು ಕಾಲಗಳಲ್ಲಿ ಕುತೂಹಲಬುದ್ಧಿಯು ಹೆಚ್ಚಾಗಿ ಪ್ರಕಾಶಪಡೆದಂತೆ ಭಾಸವಾಗುತ್ತದೆ. ಪ್ರಾಯಶಃ ಆ ಕಾಲಸ್ಥಿತಿಯು ಕುತೂಹಲಬುದ್ಧಿಯುಳ್ಳವರಿಗೆ ಅನುಕೂಲವಾಗಿತ್ತು.

ಕಾಲವಿಭಾಗಸ್ಥಾನವೆಂದು ನಾವು ಹೇಳಿಕೊಂಡ ಕ್ರಿ.ಪೂ. ಶತಮಾನಗಳ ಕಾಲ ಅಂತಹ ಯುಗಗಳಲ್ಲಿ ಒಂದು. ಕ್ರಿ.ಪೂ. ೫೦೦ ರಿಂದ ಏಸುವಿನ ಜನನದವರೆಗೆ ನಡೆದ ಕಾಲದಲ್ಲಿ ಚೀನ ಹಿಂದುಸ್ತಾನ್ ಈಜಿಪ್ಟ್ ಗ್ರೀಸ್ ದೇಶಗಳಲ್ಲಿ ಬುದ್ಧಿಪ್ರಭಾವವನ್ನು ತೋರಿದ ಮಹಾಪುರುಷರು ತಮ್ಮ ಐಹಿಕಜೀವನವನ್ನು ನಡೆಸಿದರು. ೩ ನೆ ಚಿತ್ರವನ್ನು ನೋಡಿ; ಸ್ಪಷ್ಟಪಡುವುದು,

ರಿನೇಸ್ಸಾನ್ಸ್ ಅಥವಾ ನೂತನ ಜ್ಞಾನೋದಯಕಾಲವೆಂಬುದು ಅಂತಹ ದಿನ್ನೊಂದು. ಆ ಜ್ಞಾನೋದಯದ ಪ್ರಾರಂಭ ಇನ್ನೂ ಹಿಂದೆಯೇ, ಅಂದರೆ ಕ್ರಿ.ಶ. ೧೦೦೦ ದಿಂದ ೧೨೦೦ ರವರೆಗೆ, ಬಗದಾದ್ ಕಯ್ರೋ ಸ್ಪೈನ್‌ಗಳಲ್ಲಿದ್ದ ಅರಬ್ಬಿ ವಿದ್ವಾಂಸರಿಂದ ನಡೆಯಿತು. ರಾಜರ್ ಬೇಕನ್, ಲಿಯೊನಾರ್ಡೊಡವಿಂಚೀ ಮುಂತಾದವರಿಂದ ಪೋಷಿತವಾಯಿತು. ರಿನೇಸ್ಸಾನ್ಸ್ ಕಾಲ ೧೫ ನೆ ಶತಮಾನದ ಆದಿಯಲ್ಲಿ ಮೊದಲಾಯಿತೆನ್ನಬಹುದು.

೧೮೦೦ ರವೇಳೆಗೆ ಅಂತಹದಿನ್ನೊಂದು ಕಾಲವು ಮೊದಲಾಯಿತು. ಬುದ್ಧಿಶಕ್ತಿಯು ಅಪೂರ್ವತೇಜಸ್ಸಿನಿಂದ ಪ್ರಕಾಶಿಸಿದ ಕಾರಣ ನಾವು ಅದನ್ನೊಂದು ಪಲ್ಲಟವೆಂದು ಭಾವಿಸಿ[1] ಬುದ್ಧಿಪಲ್ಲಟವೆಂದು ಕರೆದರೂ ಕರೆಯಬಹುದು. ಹಾಗೆ ಕರೆದಾಗ ಶಬ್ದಾರ್ಥವನ್ನು ಮಾತ್ರ ಎಚ್ಚರಿಕೆಯಿಂದ ಮಾಡಿಕೊಳ್ಳಬೇಕು. ಪಲ್ಲಟವೆಂದರೆ ತಲೆಕೆಳಗಾಗುವಂತಹ ಸಂಭವ; ಅದೇ ಪಲ್ಟಿಯೆಂಬುದು. ಅಡಗಿದ್ದುದು ಪ್ರಕಾಶಕ್ಕೆ ಬಂದು, ಮುಖ್ಯವೆನಿಸಿದ್ದುದು ಅಡಗುವುದು. ಹತ್ತೊಂಭತ್ತನೆ ಶತಮಾನದಲ್ಲಿ ಬುದ್ಧಿಶಕ್ತಿಯ ಸಾಹಸ ಪ್ರವೃತ್ತಿಗಳು ನವ್ಯವಿಧಾನಗಳನ್ನು ಅನುಸರಿಸಿದವು; ಶಾಸ್ತ್ರಜ್ಞಾನಸಾಧನೆಯಲ್ಲಿ ಅಪೂರ್ವವಾದ ಸಿದ್ಧಿಯಾಯಿತು.

[1] ಬುದ್ಧಿಪಲ್ಲಟವೆಂದರೆ ಬುದ್ಧಿಗೆಟ್ಟಿತೆಂದೇ ಸಾಮಾನ್ಯವಾದ ಅರ್ಥ.

ಈ ಮೂರು ಕಾಲಗಳಿಗೂ ಅಂತರವೆಷ್ಟು ನೋಡಿ. ಮೊದಲೆರಡು ಕಾಲಗಳ ಮಧ್ಯೆ ಸಾವಿರವರ್ಷಗಳು; ಕಡೆಯೆರಡು ಕಾಲಗಳ ನಡುವೆ ಮುನ್ನೂರೇ ವರ್ಷಗಳು. ಅಂತರವಿತ್ತೆಂದು ಒಟ್ಟಿನಲ್ಲಿ ನಾವು ಭಾವಿಸಿದಾಗ್ಯೂ ವಾಸ್ತವವಾಗಿ ಜ್ಞಾನಸಾಧನೆಯಲ್ಲಿ ಪರಂಪರೆಯಾದ ಪ್ರಯತ್ನವೇ ನಡೆಯಿತು. ಹೊಸ ಭಾವನೆಗಳನ್ನು ಮನಸ್ಸಿನಲ್ಲಿ ಬೆಳೆಸಿಕೊಳ್ಳುವುದೂ ಹೊಸ ಪರೀಕ್ಷೆಗಳನ್ನು ನಡೆಸುವುದೂ ಇತ್ತೀಚಿನ ಕಾಲದಲ್ಲಿ ಎಡೆಬಿಡದೆ ಸಾಗುತ್ತಲೇ ಇದೆ. ಆದ್ದರಿಂದ ಪುರಾತನಕಾಲವನ್ನೂ ಆಧುನಿಕಕಾಲವನ್ನೂ ಹೋಲಿಸಿದರೆ ಆಧುನಿಕಕಾಲದಲ್ಲಿ ಬೇಗ ಬೇಗನೆ ವ್ಯತ್ಯಾಸಗಳು ಸಂಭವಿಸುತ್ತಲಿರುವ ಲಕ್ಷಣವು ಕಾಣುವುದು. ಆಧುನಿಕಕಾಲದ ಜೀವನದಲ್ಲಿ ವೇಗ ತೋರಿಕೊಂಡು ಹೆಚ್ಚುತ್ತಿದ್ದಂತೆ ಕಾಣುತ್ತದೆ. ಇದಕ್ಕೇನು ಕಾರಣ? ಹಿಂದಿನ ಕಾಲದಲ್ಲಿ ಹಲಕೆಲವರು ಮಾತ್ರ ಆಲೋಚನೆಗೂ ಜ್ಞಾನಸಾಧನೆಗೂ ತೊಡಗಿರುತ್ತಿದ್ದರು; ಅವರಲ್ಲಿಯೂ ಅನೇಕರ ಸಾಧನೆಯು ಪ್ರಚುರಗೊಳ್ಳದೆ ಅಡಗಿರಬೇಕಾಗಿತ್ತು. ಇಂದಿನಕಾಲದಲ್ಲಿ ಆಲೋಚನಾಪರರೂ ಕುತೂಹಲಪ್ರೇರಿತರೂ ಹೆಚ್ಚು; ಮುದ್ರಣ, ತಂತಿ, ರೇಡಿಯೊ ಮೂಲಕ ಹೊಸದೆಂಬ ಅಂಶಗಳು ಸುಲಭವಾಗಿಯೂ ವೇಗವಾಗಿಯೂ ಸರ್ವವ್ಯಾಪ್ತಿ ಪಡೆಯಬಹುದು. ಜ್ಞಾನಸಾಧನೆಯನ್ನು ಈಗಿನ ಕಾಲದಲ್ಲಿ ಸಮಸ್ತ ಮಾನವರಾಶಿಗಳೂ ಒಂದು ಮನೆಯವರಂತೆ ಒಟ್ಟುಗೂಡಿ ನಡೆಸಬಹುದು. ಹಿಂದಿನ ಕಾಲಕ್ಕಿಂತ ಇಂದಿನ ಕಾಲದಲ್ಲಿ ಒಗ್ಗಟ್ಟಿನ ಪ್ರಯತ್ನ ನಡೆಯಲು ಅನುಕೂಲ. ಯಾವುದಾದರೊಂದು ದೇಶದಲ್ಲಿ ಹೊಸದಾದ ಉಪಾಯಕಲ್ಪನೆಯಾದರೆ ಆ ಕೂಡಲೇ ಇತರ ದೇಶಗಳಲ್ಲಿಯೂ ಆ ಸುದ್ದಿ ಹರಡುವುದು; ಎಲ್ಲ ದೇಶಗಳ ಶಾಸ್ತ್ರಜ್ಞರೂ ಆ ಹೊಸ ಕಲ್ಪನೆಯನ್ನು ಪರೀಕ್ಷಿಸುವುದಕ್ಕೂ ಮೇಲುಗೊಳಿಸುವುದಕ್ಕೂ ಸಿದ್ಧರಾಗುವರು. ಯುದ್ಧಸಂಭವಿಸಿದಾಗ್ಯೂ ಈ ಉದ್ಯಮಕ್ಕೆ ತಡೆಯಿಲ್ಲ; ಯುದ್ಧದಿಂದಲೇ ಮಾನವಚಾತುರ್ಯಕ್ಕೆ ತೇಜಸ್ಸು ಬಂದು ಉಪಾಯರಚನಾಶಕ್ತಿ ಹೆಚ್ಚಿದೆ. ಯುದ್ಧಸಮಯದಲ್ಲಿ ಸ್ವಾಧೀನಕ್ಕೆ ಬಂದ ಸಿಡಿಗುಂಡು (explosives), ವಿಷವಾಯು, ವಿಮಾನ ಮುಂತಾದ ಸಾಧಕಗಳು ಶಾಂತಿಸಮಯದಲ್ಲಿಯೂ ಅನರ್ಘ್ಯವಾದ ಪ್ರಯೋಜನಗಳನ್ನು ಸಾಧಿಸಲು ಉಪಯುಕ್ತವಾಗುತ್ತವೆ. ಡೈನಮೈಟ್ ಮುಂತಾದ ಸಿಡಿಗುಂಡುಗಳನ್ನು ಗಣಿಗಳಲ್ಲಿಯೂ ಕ್ಷೇತ್ರಗಳಲ್ಲಿಯೂ ಬಂಡೆಯನ್ನೊಡೆಯಲು ಉಪಯೋಗಿಸಬಹುದು. ಕ್ರಿಮಿಕೀಟಗಳ ಹಾವಳಿಯನ್ನು ವಿಷವಾಯು ಪ್ರಯೋಗದಿಂದ ನಿಲ್ಲಿಸಬಹುದು. ವೇಗಪ್ರಯಾಣಕ್ಕೆ ವಿಮಾನಗಳನ್ನೇರಬಹುದು. ಈ ರೀತಿಯಲ್ಲಿ ಉಪಾಯಕಲ್ಪನೆಯೆಂಬು

ದೊಂದು ಸಿದ್ಧವಾದರೆ ತರುವಾಯ ಕ್ಷಿಪ್ರದಲ್ಲಿಯೇ ಅದರಿಂದ ಪ್ರಯೋಜನ ವನ್ನು ಪಡೆಯಬಹುದು.

ಮುಖ್ಯಪ್ರಶ್ನೆ ೯೪: ಬುದ್ಧಿಪ್ರಯೋಗದಲ್ಲಿ ಪಲ್ಲಟಕಾಲವೆಂದರೇನು? ಆ ಸಂದರ್ಭದಲ್ಲಿ ಡಾರ್ವಿನ್ನನ ಪ್ರಭಾವವೇನು?

ಇನ್ನು ಸುಮಾರು ೧೮೦೦ರಲ್ಲಿ ಮೊದಲಾದ ಪಲ್ಲಟವನ್ನು ವಿವರಿಸಿ ಕೊಳ್ಳೋಣ. ಆ ಕಾಲದಲ್ಲಿ ದೇಶಗಳ ಆಡಳಿತರೀತಿರೂಪಗಳಲ್ಲಿ ಅಥವಾ ರಾಜಕೀಯದಲ್ಲಿ ಮಾತ್ರವಲ್ಲದೆ ಆರ್ಥಿಕರೀತಿನೀತಿಗಳಲ್ಲಿ, ಅಥವಾ ಸರಕಿನ ತಯಾರಿಯಲ್ಲಿ ಮತ್ತು ಸಮಾಜದಲ್ಲಿ, ಅಥವಾ ಅನ್ಯೋನ್ಯ ಜೀವನದಲ್ಲಿ ಅತಿ ಮುಖ್ಯವಾದ ವ್ಯತ್ಯಾಸಗಳು ತೋರಿಬಂದುದು ನಮಗೆ ತಿಳಿದಿದೆ. ಅದೇ ವೇಳೆಯಲ್ಲಿ ಶಾಸ್ತ್ರಾಭ್ಯಾಸದಲ್ಲಿ ಅಥವಾ ಜ್ಞಾನಸಾಧನೆಯ ರೀತಿಯಲ್ಲಿಯೂ ದೊಡ್ಡದಾದ ವ್ಯತ್ಯಾಸವೊಂದು ಮೊದಲಾಯಿತು. ಅದನ್ನೇ ಈಗ ನಾವು ಕಾಣಬೇಕಾದುದು.

೧೫೦೦ರ ಮೊದಲೇ ರಿನೇಸ್ಸಾನ್ಸ್ ಗುರುತುಗಳು ಕಾಣಿಸಿಕೊಂಡಂತೆ ೧೮೦೦ರ ಮೊದಲೇ ಈ ಮಹತ್ಪರಿಣಾಮದ ಸೂಚನೆಗಳು ಕಾಣಬಂದವು. ೧೬೨೮ರಲ್ಲಿ ಹಿರೇ ಚಾರ್ಲ್ಸ್ ದೊರೆಯ ಆಸ್ಥಾನಪಂಡಿತನಾಗಿದ್ದ ವಿಲಿಯಂ **ಹಾರ್ವೆ** (Dr William Harvey) ಎಂಬಾತನು ಒಂದು ಪುಸ್ತಕ ಬರೆದನು. ಮನುಷ್ಯದೇಹದಲ್ಲಿ ರಕ್ತಚಲನೆ ಹೇಗೆ ನಡೆಯುವುದೆಂಬುದು ಆ ಪುಸ್ತಕದ ವಿವರ. (ಕ್ರಿ.ಪೂ. ಶತಮಾನಗಳಲ್ಲೇ ಚೀನೀ ಜನರು ಈ ಅಂಶವನ್ನು ಸಾಧಿಸಿದ್ದುದು ಸೋಜಿಗ; ಆದರೆ ಪಾಶ್ಚಾತ್ಯರಿಗೆ ಆ ಜ್ಞಾನ ಲಭಿಸಲಿಲ್ಲ.) ಸುಮಾರು ೧೭೦೦ ರಲ್ಲಿ **ಸರ್ ಐಸ್ಸಕ್ ನ್ಯೂಟನ್** (Sir Isaac Newton) ಎಂಬ ಗಣಿತ ಶಾಸ್ತ್ರಜ್ಞನು ವಸ್ತುಗಳು ಕೆಳಕ್ಕೇಕೆ ಬೀಳುತ್ತವೆಂದು ಯೋಚನೆ ನಡೆಸಿ ಗುರುತ್ವಾಕರ್ಷಣ ತತ್ತ್ವವನ್ನು ಸಾಧಿಸಿದನು. ನ್ಯೂಟನ್ನಿಗೆ ತರುವಾಯ ಸ್ವಲ್ಪಕಾಲದಲ್ಲಿಯೇ ಪ್ರಾಣಿಗಳ ಅಂಗಾಂಗವಿಕಾಸವನ್ನು ಕುರಿತು **ಲಮಾರ್ಕ್** (Lamarck) ಎಂಬ ಫ್ರೆಂಚ್ ಶಾಸ್ತ್ರಜ್ಞನು ಹೊಸ ತತ್ತ್ವವನ್ನು ಹೊರಪಡಿಸಿದನು. ಸಚೇತನಗಳು ಹೇಗೆ ಬೆಳೆಯುತ್ತವೆಂದು ತಿಳಿಯುವ ಕುತೂಹಲದಿಂದ ಆತನು ಸಸ್ಯಗಳ ಮತ್ತು ಪ್ರಾಣಿಗಳ ಬೆಳವಣಿಗೆಯನ್ನು ಸಾವಧಾನವಾಗಿ ಪರೀಕ್ಷೆ ಮಾಡಿದ್ದನು. ಯಾವ ಪರಿಸ್ಥಿತಿಯಲ್ಲಿ ಬದುಕಬೇಕೋ ಅದಕ್ಕೆ ತಕ್ಕಂತೆ ಚೈತನ್ಯದ ಅಂಗಗಳು ವೃದ್ಧಿಗೊಳ್ಳಲೂ ವೃದ್ಧಿಗೊಳ್ಳುತ್ತವೆ, ರೂಪಾಂತರ ಪಡೆಯಲೂ ಪಡೆಯುತ್ತವೆ ಎಂಬ ಸಿದ್ಧಾಂತವನ್ನು ಲಮಾರ್ಕ್ ಸ್ಥಾಪಿಸಿ


ದನು. ಗುರುತ್ವಾಕರ್ಷಣವನ್ನು ನ್ಯೂಟನ್ನಾಗಲಿ, ಪರಿಸ್ಥಿತಿಗನುಗುಣವಾಗಿ ಅಂಗಾಂಗ ವಿಕಾಸತತ್ತ್ವವನ್ನು ಲಮಾರ್ಕ್‌ನಾಗಲಿ ಹೊಸದಾಗಿ ಸೃಷ್ಟಿಸಿರಲಿಲ್ಲ; ಜಗತ್ತಿನಲ್ಲಿ ಮೊದಲಿನಿಂದಲೂ ಇದ್ದ ತತ್ತ್ವಗಳು ಅವು. ಆ ಶಾಸ್ತ್ರಜ್ಞರ ಸಾಧನೆಗೆ ಅವು ಗೋಚರವಾದುವು. ಆದ್ದರಿಂದ ಅವರು ತತ್ತ್ವದ್ರಷ್ಟಾರರು. ಇಂತಹ ತತ್ತ್ವದರ್ಶನವು ಒದಗಿತೆಂದರೆ ಅದಕ್ಕೆ ಕಾರಣವೇನು? ಶಾಸ್ತ್ರಜ್ಞರು ನಿರ್ವಂಚಕಬುದ್ಧಿಯನ್ನು ಪೋಷಿಸಿಕೊಂಡು ಸ್ಥಿತಿಗತಿಗಳನ್ನು ಪರಿಶೀಲಿಸುತ್ತಲೂ ತಾವೇ ಪರೀಕ್ಷೆ ನಡೆಸುತ್ತಲೂ ಇದ್ದ ವರ್ತನೆ; ಇದೇಕೆ, ಅದು ಹೇಗೆ ಎಂಬ ಪ್ರಶ್ನೆಗಳನ್ನು ತಾವೇ ಕೇಳಿಕೊಂಡು ಅವುಗಳಿಗೆ ಸಮಾಧಾನವನ್ನು ಕಾಣಲು ನಡೆಸಿದ ನಿರಂತರಸಾಧನೆ ಅಥವಾ ತಪಸ್ಸು. ಅವರ ಕುತೂಹಲಬುದ್ಧಿಯೇ ಅವರ ಸಾಧನೆಗೆ ಮೂಲ. ಬುದ್ಧಿಯ ಕುತೂಹಲವನ್ನು ಸಮಾಧಾನಗೊಳಿಸುವುದರಲ್ಲಿಯೂ ಪ್ರೇರಿಸುವುದರಲ್ಲಿಯೂ ಆ ಕಾಲದಲ್ಲೆಲ್ಲ ಅತಿ ಪ್ರಸಿದ್ಧವಾದುದೆಂದರೆ ೧೮೫೯ ರಲ್ಲಿ **ಚಾರ್ಲ್ಸ್ ಡಾರ್ವಿನ್** (Charles Darwin) ಎಂಬ ಶಾಸ್ತ್ರಜ್ಞನು ಪ್ರಕಟಿಸಿದ **ಜಾತಿಮೂಲ** ಅಥವಾ **ಆರಿಜಿನ್ ಆಫ್ ಸ್ಪೀಷೀಸ್** (*Origin of Species*) ಎಂಬ ಗ್ರಂಥ.

ಡಾರ್ವಿನ್ ಹುಟ್ಟಿದ್ದು ೧೮೦೯ ರಲ್ಲಿ. ಒಂಭತ್ತನೆ ವಯಸ್ಸಿನಲ್ಲಿ ಆತನನ್ನು **ಷ್ರೋಸ್ಬೆರಿ ಶಾಲೆ** (Shrewsbury School)ಗೆ ಕಳುಹಿಸಿದರು. ಅಲ್ಲಿ ನಡೆಯುತ್ತಿದ್ದುದು ಲ್ಯಾಟಿನ್ ಮತ್ತು ಗ್ರೀಕ್ ಭಾಷೆಯ ಪಾಠ. ರಸಾಯನಶಾಸ್ತ್ರವನ್ನು ಕಲಿಯುವ ಆಸೆ ಆ ಹುಡುಗನಿಗೆ. ಆದರೆ ಆಗಿನ ಶಾಲೆಗಳಲ್ಲಿ ಯಾವ ಶಾಸ್ತ್ರಪಾಠವೂ ನಡೆಯುತ್ತಿರಲಿಲ್ಲ. ಆಸೆ ಬಿಡಲಿಲ್ಲ. ತನ್ನ ಸೋದರನೊಡನೆ ಸೇರಿಕೊಂಡು ತಮ್ಮ ಮನೆಯ ಹಿತ್ತಿಲಲ್ಲಿ ಗುಡಿಸಲನ್ನು ಕಟ್ಟಿ ಅದನ್ನು ಪ್ರಯೋಗಶಾಲೆಯಾಗಿಟ್ಟುಕೊಂಡು ತನ್ನ ಬುದ್ಧಿಗೆ ತೋರಿದ ಪರೀಕ್ಷೆಗಳನ್ನು ಅಲ್ಲಿ ನಡೆಸುತ್ತಿದ್ದನು. ಇದನ್ನು ಕೇಳಿದ ಶಾಲಾಧ್ಯಾಪಕರು ವ್ಯರ್ಥ ಕಾಲಹರಣಮಾಡುತ್ತೀಯೆಂದು ಹೇಳಿದರಂತೆ. ತನ್ನ ಮನಸ್ಸನ್ನು ಸೆಳೆದ ಪದಾರ್ಥಗಳನ್ನು ಶೇಖರಿಸಿಟ್ಟುಕೊಳ್ಳುವುದು ಆತನ ಹವ್ಯಾಸ. ಸಸ್ಯಗಳು, ಚಿಪ್ಪುಗಳು, ಕಲ್ಲುಗಳು—ನೆಲದುಂಬಿಗಳು (beetles) ಆತನ ಭಂಡಾರ.

ತಂದೆತಾತಂದಿರಂತೆ ಈತನೂ ವೈದ್ಯವೃತ್ತಿಯನ್ನವಲಂಬಿಸಲೆಂದು ೧೮೨೫ ರಲ್ಲಿ **ಎಡಿನ್ಬರೊ** ವಿಶ್ವವಿದ್ಯಾಪೀಠಕ್ಕೆ ಕಳುಹಿಸಿದರು. ಎರಡು ವರ್ಷ ವೈದ್ಯಶಾಸ್ತ್ರವನ್ನೋದಿದ ಮೇಲೆ ಈತನಿಗೆ ವನಸ್ಪತಿಶಾಸ್ತ್ರದಲ್ಲಿಯೂ ಪ್ರಾಣಿಶಾಸ್ತ್ರದಲ್ಲಿಯೂ ಆಸೆ ಹೆಚ್ಚಿತು. ವೈದ್ಯಶಾಸ್ತ್ರವನ್ನು ಬಿಟ್ಟು ತನಗಿಷ್ಟವಾದುದನ್ನು

ವ್ಯಾಸಂಗಮಾಡಲು ೧೮೨೮ ರಲ್ಲಿ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಕ್ಕೆ ಹೊರಟನು. ೧೮೩೧ ರಲ್ಲಿ ಅಪೂರ್ವವೆನಿಸಿದ ಸಮಯವು ದೊರಕಿತು.

ಬ್ರಿಟಿಷ್ ಸರ್ಕಾರದವರಿಗೆ ದಕ್ಷಿಣ ಅಮೇರಿಕದ ತೀರಪ್ರದೇಶಗಳ ವಿವರವು ನಿಷ್ಕೃಷ್ಟರೀತಿಯಲ್ಲಿ ಬೇಕಾಗಿ ಬಂತು. ಅದಕ್ಕಾಗಿ ತಕ್ಕ ವಿದ್ವಾಂಸರನ್ನು ಗೊತ್ತುಮಾಡಿ ಅವರಿಗೆ ಬೇಕಾದ ಸಲಕರಣೆಗಳನ್ನೊದಗಿಸಿ ಬೀಗ್ಲ್ (*The Beagle*) ಎಂಬ ಹಡಗನ್ನು ಸಿದ್ಧಪಡಿಸಿದರು. ಕೇಂಬ್ರಿಡ್ಜಿನಲ್ಲಿದ್ದ ಸಸ್ಯಶಾಸ್ತ್ರಾಧ್ಯಾಪಕನು ಆ ಸಂದರ್ಭದಲ್ಲಿ ತನ್ನ ಶಿಷ್ಯ ಡಾರ್ವಿನ್ನನಿಗೆ ಒಂದು ಹುದ್ದೆ ದೊರೆಯುವಂತೆ ಯತ್ನಿಸಿದನು. ಪ್ರಾಣಿಶಾಸ್ತ್ರಜ್ಞನ ಹುದ್ದೆ ಗೊತ್ತಾಯಿತು ಡಾರ್ವಿನ್ನನಿಗೆ. ಆ ಹಡಗನ್ನೇರಿ ಹೊರಟನು. ಐದು ವರ್ಷಕಾಲ ಸ್ಥಳದಿಂದ ಸ್ಥಳಕ್ಕೆ, ದೇಶದಿಂದ ದೇಶಕ್ಕೆ ಪ್ರಯಾಣ ನಡೆಯಿತು. ಪೃಥ್ವೀಪ್ರದಕ್ಷಿಣೆಯೇ ಆಯಿತು. ತಲುಪಿದ ದೇಶಾಂತರ ದ್ವೀಪಾಂತರಗಳಲ್ಲೆಲ್ಲ ಖನಿಜ ವಸ್ತುಗಳನ್ನೂ ಸಸ್ಯಪ್ರಾಣಿ ವಿಶೇಷಗಳನ್ನೂ ಡಾರ್ವಿನ್ ವಿವರವಾಗಿ ಪರಾಮರ್ಶಿಸಿಕೊಂಡನು. ಸ್ವತಃ ಕಂಡು ಸಂಗ್ರಹಿಸಿದ ಅಂಶಗಳು ಅಪಾರರಾಶಿಯಾದುವು. ಸ್ವದೇಶಕ್ಕೆ ಹಿಂತಿರುಗಿದ ಬಳಿಕ ಆ ಅಂಶಗಳೆಲ್ಲವನ್ನೂ ಆಲೋಚಿಸಿ ಪ್ರಸಿದ್ಧವಾದ ಸಿದ್ಧಾಂತವನ್ನು ಸ್ಥಾಪಿಸಿದನು. ನ್ಯಾಚುರಲ್ ಸೆಲೆಕ್ಷನ್ (natural selection) ಅಥವಾ ಪ್ರಾಕೃತಿಕವರಣವೆಂಬುದು ಅದೇ.



ಚಾರ್ಲ್ಸ್ ಡಾರ್ವಿನ್

ಮುಖ್ಯಪ್ರಶ್ನೆ ೯೫ : ಡಾರ್ವಿನ್ನನ ಪ್ರಾಕೃತಿಕವರಣಸಿದ್ಧಾಂತದ ವಿಷಯವೇನು? ಆ ಸಿದ್ಧಾಂತದಿಂದ ಅನೇಕರಿಗೆ ಅಸಮಾಧಾನವೇಕೆ ಉಂಟಾಯಿತು?

ಡಾರ್ವಿನ್ನನ ಸಿದ್ಧಾಂತವನ್ನು '**ಪಟುತಮಜೀವಿಗಳ ಭದ್ರತೆ**' (survival of the fittest) ಯೆಂಬುದಾಗಿಯೂ ಕರೆವುದುಂಟು. ಆಧುನಿಕ ಶಾಸ್ತ್ರಗಳ ವಿಧಾನನಿಷ್ಕರ್ಷೆಯಲ್ಲಿ ಮಹತ್ವಗೊಂಡಿತು ಆ ಸಿದ್ಧಾಂತದ ವಿವರ. ಆದುದರಿಂದ ಅದನ್ನು ನಿರ್ದುಷ್ಟವಾಗಿ ತಿಳಿಯತಕ್ಕದ್ದು ಅವಶ್ಯಕ.

ಜೀವರಾಶಿಯಲ್ಲಿ ಇಷ್ಟೊಂದು ಜಾತಿಗಳು ಹೇಗೆ ಬೇರ್ಪಟ್ಟವೆಂಬುದನ್ನು ವಿವರಿಸುವುದು ಡಾರ್ವಿನ್ನನ ಮುಖ್ಯೋದ್ದೇಶ. ಬೈಬಲ್ ಪುಸ್ತಕದ ವಿವರವು ಪುರಾಣವಾಯಿತು. ಆರುಸಾವಿರ ವರ್ಷಗಳ ಹಿಂದೆ ಭಗವಂತನು ಆರು ಹಗಲುಗಳಲ್ಲಿ ಸೂರ್ಯಚಂದ್ರನಕ್ಷತ್ರಗಳನ್ನೂ ಸಮಸ್ತ ಜೀವರಾಶಿಯ ಪ್ರಭೇದಗಳನ್ನೂ ತುಂಬಿ ಜಗತ್ತನ್ನು ಸೃಷ್ಟಿಮಾಡಿದನೆಂದು ಅದರಲ್ಲಿ ಹೇಳಿದೆ. ಆದರೆ ಶಾಸ್ತ್ರಶೋಧಕರ ಮಾತು ವ್ಯತಿರಿಕ್ತವಾಗಿ ಹೊರಟಿತು. ೧೮೩೦ ರಲ್ಲಿ ಭೂಶಾಸ್ತ್ರ ಪ್ರವೀಣ **ಸರ್ ಚಾರ್ಲ್ಸ್ ಲಯೆಲ್** (Sir Charles Lyell) ಎಂಬಾತನು ಶಿಲಾರಾಶಿಗಳ ಪರೀಕ್ಷೆ ನಡೆಸಿ ಆ ಶಿಲೆಗಳಿಗೆ ಲಕ್ಷಾಂತರ ವರ್ಷಗಳಾಗಿರಬೇಕೆಂದು ತನ್ನ ಪುಸ್ತಕದಲ್ಲಿ (*Principles of Geology*) ಪ್ರತಿಪಾದಿಸಿದ್ದನು. ಡಾರ್ವಿನ್ನನಿಗೆ ಆತನು ಮಿತ್ರ. ಶಿಲೆಗಳ ಪದರಗಳಲ್ಲಿ ಮಧ್ಯೇ ಮಧ್ಯೇ ಅನೇಕಾನೇಕ ವೃಕ್ಷಗಳ ಮತ್ತು ಪ್ರಾಣಿಗಳ ಕಳೇಬರಗಳು ಶಿಲಾಭೂತಗಳಾಗಿರುವುವೆಂದೂ ಆ ಕಾರಣದಿಂದ ಆ ವೃಕ್ಷಗಳೂ ಪ್ರಾಣಿಗಳೂ ಎಷ್ಟೋ ಕಾಲಕ್ಕೆ ಮುಂಚಿತವಾಗಿಯೇ ಪೃಥ್ವಿಯ ಮೇಲೆ ಜೀವಿಸಿದ್ದವೆಂದೂ ಆತನು ವಿಸ್ತಾರವಾಗಿ ಬರೆದಿದ್ದನು.

ನಾನಾ ಜಾತಿಯ ಸಸ್ಯಗಳನ್ನೂ ಪ್ರಾಣಿಗಳನ್ನೂ ತನ್ನ ಪ್ರಯಾಣದಲ್ಲಿ ಪರಿಶೀಲಿಸಿದ್ದ ಡಾರ್ವಿನ್ನನ ಮನಸ್ಸಿನಲ್ಲಿ ಆ ಜೀವಿಜಾತಿಗಳೆಲ್ಲ ಬೇರೊಂದು ರೀತಿಯಲ್ಲಿ ಮೊದಲಾಗಿ ಕಾಲಕ್ರಮದಲ್ಲಿ ಈಗಿನ ರೂಪರೇಖೆಗಳನ್ನು ಪಡೆದವೆಂದು ತೋರಿತ್ತು. ಈ ಬಗೆಯ ರೂಪರೇಖೆಗಳ ವಿಕಸನವು ನಡೆದ ವಿಧಾನವನ್ನು ಪ್ರಾಕೃತಿಕವರಣವೆಂದು ಕರೆದನು. ಒಂದು ಉದಾಹರಣೆಯನ್ನು ನೋಡೋಣ. ಮೆಡೀರಾ ದ್ವೀಪದಲ್ಲಿ ಡಾರ್ವಿನ್ನನಿಗೆ ೫೫೦ ಭಿನ್ನ ಜಾತಿಯ ನೆಲದುಂಬಿಗಳು ಕಾಣಿಸಿದುವು. ಅವುಗಳಲ್ಲಿ ೨೦೦ ಜಾತಿಗಳಿಗೆ ರೆಕ್ಕೆಗಳು ದುರ್ಬಲ. ಸಾಮಾನ್ಯವಾಗಿ ಇತರೆಡೆಗಳಲ್ಲಿ ಕಾಣುವ ರೆಕ್ಕೆಯುಳ್ಳ ದುಂಬಿಗಳು ಅಲ್ಲಿಲ್ಲ. ಇದಕ್ಕೇನು ಕಾರಣ? ಡಾರ್ವಿನ್ ಯೋಚಿಸಿದುದು ಈ ಪರಿ.

ಮೆಡೀರಾ ದ್ವೀಪದಲ್ಲಿ ಬಿರುಗಾಳಿ ಬೀಸುವುದು ಜೋರು; ಹಾರುತ್ತಿದ್ದ ದುಂಬಿಜಾತಿಗಳೆಲ್ಲ ಗಾಳಿಯ ಹೊಡೆತಕ್ಕೆ ಸಿಕ್ಕಿ ಸಮುದ್ರದ ಪಾಲಾದುವು. ಹಾರಾಡದೆ ನೆಲದ ಮೇಲೆಯೇ ಇದ್ದ ದುಂಬಿ ಜಾತಿಗಳು ಉಳಿದುಕೊಂಡುವು. ಹಾರಾಡದಿರುವ ಜಾತಿಗಳಿಗೆ ಅನುಕೂಲವಾಗಿಯೂ, ಹಾರಾಡುವ ಜಾತಿಗಳಿಗೆ ಪ್ರತಿಕೂಲವಾಗಿಯೂ ಇದೆ ಅಲ್ಲಿಯ ಪರಿಸ್ಥಿತಿ. ಪ್ರಾಕೃತಿಕವರಣದಲ್ಲಿ ನೆಲದುಂಬಿ ಜಾತಿಗಳು ಉಳಿಯುವ ಯೋಗ್ಯತೆಯನ್ನು ಪಡೆದುವು.

ಕಾಲಕ್ರಮದಲ್ಲಿ ಜೀವರಾಶಿಯು ವಿಕಾಸಗೊಂಡ ರೀತಿಯನ್ನು ವಿವರಿಸುತ್ತ, ನಿದಾನವಾಗಿ ನಡೆದ ವ್ಯತ್ಯಾಸಗಳನ್ನು ಗುರುತಿಸುತ್ತ ಡಾರ್ವಿನ್ ವಿಶದಗೊಳಿಸಿದ ಅಂಶಗಳಲ್ಲಿ ಪ್ರಾಕೃತಿಕವರಣವೆಂಬುದೊಂದು ಮಾತ್ರ. ಸುಲಭವಾಗಿ ತಿಳಿಯತಕ್ಕ ಅಂಶ ಅದು. ತರುವಾಯ ಡಾರ್ವಿನ್ ಇನ್ನೊಂದು ಪುಸ್ತಕ ಬರೆದನು. **ಮಾನವ ಸಂತತಿಯನ್ನು** ಕುರಿತದ್ದು ಆ ಪುಸ್ತಕ (*Descent of Man*). ಆ ಪುಸ್ತಕದಲ್ಲಿ ಮಾನವಜಾತಿಗಳ ಪರೀಕ್ಷೆಯನ್ನಿಟ್ಟುಕೊಂಡು ಮಾನವಪ್ರಾಣಿಯ ವಿಕಸನವನ್ನು ವರ್ಣಿಸಿದನು. ಮನುಷ್ಯಜಾತಿಯೂ ಕೆಲವು ವಾನರಜಾತಿಗಳೂ ಒಂದಾನೊಂದು ಕಪಿವಿಶೇಷದ ಸಂತತಿಯೆಂಬುದು ಆತನ ಸಿದ್ಧಾಂತ. ದೊಡ್ಡದಾದ ಮೆದುಳು, ದ್ವಿಪಾದಚಲನ, ಉತ್ತಮಹಸ್ತ ಮುಂತಾದ ಲಕ್ಷಣಗಳು ಮನುಷ್ಯಜಾತಿಗೆ ಪ್ರಾಕೃತಿಕವರಣವೆಂಬ ವಿಧಾನದಿಂದ ಪ್ರಾಪ್ತವಾದುವೆಂದು ಸ್ಪಷ್ಟಗೊಳಿಸಿದನು. ಮರಗಳ ಮೇಲೆಯೇ ಬದುಕುವ ಕಪಿಗಳಿಗೆ ದೀರ್ಘಬಾಹುಗಳು, ಹಸ್ತಸಮಾನ ಪಾದಗಳು, ಫಲಾಶನದ ಅಭ್ಯಾಸಗಳು ಅನುಕೂಲವಾದುದರಿಂದ ಆ ಲಕ್ಷಣಗಳು ಸ್ಥಿರಪಟ್ಟುವು.

ಪರಿಸ್ಥಿತಿಗನುಗುಣವಾಗಿ ಜೀವಜಂತುಗಳು ಕ್ರಮದಿಂದ ವೃದ್ಧಿವಿಕಾಸಗೊಳ್ಳುವ ಸಿದ್ಧಾಂತವನ್ನು ಡಾರ್ವಿನ್ ಒಡ್ಡಿದಾಗ ಲಯೆಲ್, ಹಕ್ಸ್ಲಿ (Huxley) ಮುಂತಾದ ಶಾಸ್ತ್ರಪಾರಂಗತರು ಅದನ್ನು ಒಪ್ಪಿ ಬಲಪಡಿಸಿದರು. ಮತನಿಷ್ಠೆಯುಳ್ಳವರು ಅದನ್ನು ಕಂಡು ಹಾಹಾಕಾರಪಟ್ಟರು. ಬೈಬಲಿನಲ್ಲಿರುವುದಕ್ಕೆ ವಿರುದ್ಧವಾಗಿ ಶಾಸ್ತ್ರಸಿದ್ಧಾಂತವಾದರೆ ಏನುಗತಿಯೆಂದುಕೊಂಡರು. ಬೈಬಲಿನಲ್ಲಿರುವ ಒಂದಂಶವು ಸುಳ್ಳೆನಿಸಿದರೆ ಇತರಾಂಶಗಳೂ ಸುಳ್ಳೆನಿಸಿ ಕ್ರೈಸ್ತಮತದ ಸರ್ವಸ್ವವೂ ವಿನಾಶವಾದೀತೆಂದು ಭಯಭ್ರಾಂತಿಗಳಲ್ಲಿ ಸಿಕ್ಕಿ ತಳಮಳಿಸಿದರು. ಆ ಭಯಭ್ರಾಂತಿಗಳಿಗೆ ಕಾರಣವಿರಲಿಲ್ಲ. ಏಕೆಂದರೆ ಯಾವ ಮತಕ್ಕಾದರೂ ಮೂಲಾಧಾರವಾದುದು ಸ್ಥಾಪಕಬೋಧಕರುಗಳ ಆದರ್ಶ ಮತ್ತು ಪ್ರಭಾವ. ಸಾಮಾನ್ಯ ಸ್ತ್ರೀಪುರುಷರಿಗೆಲ್ಲರಿಗೂ ಸ್ಥಾಪಕನ ಜೀವನಚರಿತೆಯೇ ಗತಿದಾಯಕವಾದುದು. ಆದರೆ ಡಾರ್ವಿನ್ನನ ಜೀವಿತಕಾಲದಲ್ಲಿಯೂ

ತದನಂತರವೂ ನಿಷ್ಠಾವಂತರಾದವರು ಶಾಸ್ತ್ರಶೋಧಕರನ್ನು ವಿಪತ್ಕಾರಕರೆಂದು ಕಾಣುತ್ತಿದ್ದರು.

ಮುಖ್ಯಪ್ರಶ್ನೆ ೯೬ : ಪ್ರಾಚೀನಕಾಲದ ಶಾಸ್ತ್ರಸಾಧನೆಗೂ ಆಧುನಿಕಕಾಲದ ಶಾಸ್ತ್ರಸಾಧನೆಗೂ ವ್ಯತ್ಯಾಸವೇನು?

ಜಾತಿಮೂಲಗಳ ವಿವರಣವನ್ನು ಕುರಿತು ಡಾರ್ವಿನ್ ತನ್ನ ಪುಸ್ತಕವನ್ನು ಪ್ರಕಾಶಗೊಳಿಸಬೇಕೆಂದಿದ್ದ ಸಮಯದಲ್ಲಿ ಸೋಜಿಗವೊಂದು ನಡೆಯಿತು. ಮತ್ತೊಬ್ಬ ಜೀವಶಾಸ್ತ್ರಜ್ಞನಾದ **ಆಲ್‌ಫ್ರೆಡ್ ರಸ್ಸೆಲ್ ವ್ಯಾಲೇಸ್** (**Alfred Russel Wallace**) ಎಂಬಾತನಿಂದ ಒಂದು ಕಾಗದ ಬಂತು. ಕಾಗದದ ಸಂಗಡಲೇ ಹಸ್ತಲಿಖಿತವಾದ ಒಂದು ಪ್ರಬಂಧ. ಅದೇನೆಂದು ಬಿಚ್ಚಿ ನೋಡಿದಾಗ ತಾನು ಯಾವ ಸಿದ್ಧಾಂತವನ್ನು ಹೊಸದಾಗಿ ಲೋಕದ ಮುಂದಿಡಬೇಕೆಂದಿದ್ದನೋ ಅದನ್ನೇ ಆತನೂ ಸಾಧಿಸಿ ಪ್ರಬಂಧದಲ್ಲಿ ಬರೆದಿದ್ದನು. ಆ ಸಮಯದಲ್ಲಿ ವಿದ್ವಾಂಸರಿಗೆ ಭೂಷಣದಂತಿರಬೇಕಾದ ಔದಾರ್ಯವನ್ನು ತೋರಿದನು. ತನ್ನ ಪುಸ್ತಕವನ್ನೇ ಮುಂದಾಗಿ ಪ್ರಕಟಿಸಿ ತನ್ನ ಯಶಸ್ಸನ್ನು ಮಾತ್ರ ಬೆಳೆಸಿದರೆ ಸ್ವಾರ್ಥವಾದೀತೆಂದು ಭಾವಿಸಿ ಆತನ ಪ್ರಬಂಧವನ್ನು ಮೊದಲು ಪ್ರಕಟಗೊಳಿಸಲು ನೆರವಾದನು. ಡಾರ್ವಿನ್ನನ ಸಿದ್ಧಾಂತವೇನೆಂದು ತಿಳಿಯಲು ಶಾಸ್ತ್ರಜ್ಞರ ಸಭೆ ಸೇರಿತ್ತು. ಆ ಸಭೆಯಲ್ಲಿ ವ್ಯಾಲೇಸನ ಪ್ರಬಂಧವನ್ನೇ ಓದಲಾಯಿತು. ಇದರಿಂದ ಡಾರ್ವಿನ್ನನ ನಡತೆಯು ಸ್ತೋತ್ರಾರ್ಹವಾಯಿತು. ಸಾಧನೆಯ ಯಶಸ್ಸು ಡಾರ್ವಿನ್ನನಿಗೆ ಸಂದಿತು. ಆದಾಗ್ಗೂ ಇಬ್ಬರು ಶಾಸ್ತ್ರಜ್ಞರೂ ತದೇಕಸಾಧನೆಯನ್ನು ನಡೆಸಿದ್ದ ಅಂಶ ಸ್ಮರಣೆಯಲ್ಲಿರತಕ್ಕುದು.

ಇನ್ನೂ ವಿಸ್ಮಯಕಾರಕವಾದ ಸಂಗತಿ ಇತ್ತೀಚೆಗೆ ತಿಳಿಯಿತು. ಸುಮಾರು ೨,೫೦೦ ವರ್ಷಗಳಷ್ಟು ಹಿಂದಿನ ಕಾಲದಲ್ಲಿ ಚೀನದೇಶದ ತತ್ತ್ವಜ್ಞರು ಇದೇ ಸಿದ್ಧಾಂತವನ್ನು ಸಾಧಿಸಿಕೊಂಡಿದ್ದರು. ಕಾಲವಿಭಾಗಸ್ಥಾನವೆಂದು ನಾವು ಕರೆದ ಕಾಲದಲ್ಲಿದ್ದ ಚೀನೀ ತತ್ತ್ವಜ್ಞರು ಪ್ರಾಣಿವರ್ಗದ ಜಾತಿವಿಜಾತಿಗಳ ವಿಕಸನವನ್ನು ಕುರಿತು ಇದೇ ಬಗೆಯಲ್ಲಿ ವಿವರಿಸಿದ್ದರು. ಪ್ರಾಚೀನಕಾಲದ ಭಾರತೀಯರ ದರ್ಶನಶಾಸ್ತ್ರಗಳಲ್ಲಿ ಅದೇ ವಿವರವು ಸ್ಪಷ್ಟವಾಗಿ ಕಾಣುತ್ತದೆ. ವಾಸ್ತವವಾಗಿ ಪುರಾತನ ಕಾಲದಲ್ಲಿ ಚೀನ, ಹಿಂದುಸ್ಥಾನ್ ಮತ್ತು ಗ್ರೀಸ್ ದೇಶಗಳಲ್ಲಿ ತತ್ತ್ವಜ್ಞರು ತಿಳಿದಿದ್ದುದನ್ನೇ ಆಧುನಿಕ ಕಾಲದವರು ಇತ್ತೀಚಿಗೆ ಮಾತ್ರ ಕಷ್ಟಪಟ್ಟು ಪುನಃ ತಿಳಿದುಕೊಳ್ಳುತ್ತಿರುವಂತೆ ಕಾಣುತ್ತದೆ. ಪ್ರಾಚೀನರು ಸಾಧಿಸಿದ ಜ್ಞಾನರಾಶಿಯು ಯುದ್ಧವೇ ಮೊದಲಾದ ವಿನಾಶಕಾರಕ

ಘಟನೆಗಳ ದೆಸೆಯಿಂದ ಅಂಧಕಾರಯುಗವೆಂಬ ಕಾಲದಲ್ಲಿ ಮಾಯವಾದುದು ನಿಜ. ಆದರೆ ಇನ್ನೊಂದು ಕಾರಣವೂ ಉಂಟು. ಸಾಧಿತವಾದ ಜ್ಞಾನರಾಶಿಯಿಂದ ಪ್ರಾಚೀನಕಾಲದವರು ಉಪಯೋಗಪಡೆಯಲು ಕಾತರರಾಗಿರಲಿಲ್ಲ. ಶಾಸ್ತ್ರಜ್ಞನಿಗೆ ಬೇಕಾಗಿದ್ದುದು ಜ್ಞಾನಮಾತ್ರ; ಉಪಯುಕ್ತವೋ ಅನುಪಯುಕ್ತವೋ ಎಂಬ ಚಿಂತೆ ಆತನಿಗಿರಲಿಲ್ಲ. ಸೂರ್ಯಮಂಡಲದಲ್ಲಿರುವ ವಸ್ತುಗಳೇನು ಅಥವಾ ನಕ್ಷತ್ರಗಳ ಸಂಯೋಜನೆ ಹೇಗೆ, ಅವುಗಳಿಂದ ಹೊರಡುವ ಕಿರಣಗಳ ಸ್ವಭಾವವೇನು ಎಂದು ಮುಂತಾಗಿ ಶಾಸ್ತ್ರಜ್ಞರು ತಪಿಸುತ್ತಾರೆ. ತಕ್ಷಣದಲ್ಲಿ ಅವರ ಸಾಧನೆಗೆ ಪ್ರಯೋಜನ ಕಾಣದಿರಬಹುದು. ಆದರೆ ಒಂದಂಶ ದಿಟ. ಯಾವುದಾದರೂ ಉಪಯೋಗಕ್ಕಿಟ್ಟ ಜ್ಞಾನವು ನಷ್ಟವಾಗಲಾರದು. ರೋಗರುಜನಗಳ ನಿವಾರಣೆಯಲ್ಲಿ ಉಪಯುಕ್ತವಾದ ಜ್ಞಾನವನ್ನು ಕಳೆಯಲಾದೀತೆ? ಹಾಗೆಯೇ ನೂತನವಸ್ತುನಿರ್ಮಾಣದಲ್ಲಿಯೋ ಆರೋಗ್ಯ ಸೌಖ್ಯಗಳನ್ನು ಮೇಲುಗೊಳಿಸುವುದರಲ್ಲಿಯೋ ಪ್ರಯೋಜನಕಾರಕವಾದುದೂ ಕೂಡ.

ಆದುದರಿಂದ ಶಾಸ್ತ್ರವಿಚಾರದಲ್ಲಿ ಎರಡು ಬಗೆಗಳನ್ನು ವಿಂಗಡಿಸುತ್ತಾರೆ. ಒಂದು ಶುದ್ಧವಿಜ್ಞಾನ, ಮತ್ತೊಂದು ಪ್ರಯುಕ್ತವಿಜ್ಞಾನ. ಜಗತ್ತನ್ನು ಪರಾಮರ್ಶಿಸಿ ನವ್ಯಪರೀಕ್ಷೆಗಳನ್ನು ನಡೆಸಿ ಹೊಸದಾದ ಜ್ಞಾನದ ಅಂಶಗಳನ್ನು ಕಂಡುಕೊಳ್ಳುವುದು **ಶುದ್ಧಶಾಸ್ತ್ರದ** (Pure Science) ಸಾಧನೆ. ಡಾರ್ವಿನ್ ಕಾಲದಲ್ಲಿ ಆ ಸಾಧನೆಯೇ ಹೆಚ್ಚು. ಬೇಕಾದ ವಸ್ತುವನ್ನು ಹೊಸ ರೀತಿಯಲ್ಲಿ ರಚಿಸಿಕೊಳ್ಳುವುದು, ಹೊಸ ಪದಾರ್ಥವನ್ನು ಸಿದ್ಧಪಡಿಸಿಕೊಳ್ಳುವುದು, ಹೊಸ ಯಂತ್ರವನ್ನು ನಿರ್ಮಿಸಿಕೊಳ್ಳುವುದು ಮುಂತಾದುವು **ಪ್ರಯುಕ್ತಶಾಸ್ತ್ರ** (Applied Science). ಶುದ್ಧಶಾಸ್ತ್ರಾಭ್ಯಾಸವಿಲ್ಲದೆ ಪ್ರಯುಕ್ತ ಶಾಸ್ತ್ರದ ಅಭ್ಯಾಸವೆಂದಿಗೂ ಆಗುವುದಿಲ್ಲ. ಪ್ರಾಚೀನಕಾಲಕ್ಕೂ ಆಧುನಿಕಕಾಲಕ್ಕೂ ಶಾಸ್ತ್ರಸಾಧನೆಯಲ್ಲಿ ಈ ಅಂಶದ ಭೇದವುಂಟು. ಹಿಂದಿನಕಾಲದಲ್ಲಿ ಪ್ರಯುಕ್ತ ಶಾಸ್ತ್ರದ ಅಭ್ಯಾಸವು ಹೆಚ್ಚಾಗಿರಲಿಲ್ಲ. ಹತ್ತೊಂಭತ್ತನೆ ಇಪ್ಪತ್ತನೆ ಶತಮಾನಗಳ ಶಾಸ್ತ್ರಜ್ಞರು ಹೊಸದಾಗಿ ಸಾಧಿಸಿದ ಅಂಶಗಳು ಜನಜೀವನದಲ್ಲಿ ಉಪಯುಕ್ತಗಳಾಗಿವೆ.

ಶಾಸ್ತ್ರಪ್ರಯೋಗದ ಕೆಲವಂಶಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸಿಕೊಳ್ಳೋಣ.

ಅಭ್ಯಾಸಗಳು

೧. ಕುತೂಹಲಗುಣವು ಮುಖ್ಯವಾದುದೇಕೆ ?

೨. ಶಾಸ್ತ್ರಜ್ಞಾನಸಾಧನೆಯಲ್ಲಿ ಹತ್ತೊಂಭತ್ತನೆ ಶತಮಾನದ ರೀತಿಗೂ ಪುರಾತನ ಕಾಲಗಳ ರೀತಿಗೂ ವ್ಯತ್ಯಾಸಗಳೇನು ?

೩. ಡಾರ್ವಿನ್ ವಿವರಿಸಿದ ಪ್ರಾಕೃತಿಕವರಣಸಿದ್ಧಾಂತವನ್ನು ಕೆಲವು ವಾಕ್ಯಗಳಲ್ಲಿ ವಿವರಿಸಿ ದೃಷ್ಟಾಂತಗಳನ್ನು ಸೂಚಿಸಿ.

೪. ಡಾರ್ವಿನ್ನನ ಸಾಧನೆಯನ್ನು ಕ್ರೈಸ್ತಮತನಿಷ್ಠರು ಏಕೆ ವಿರೋಧಿಸಿದರು ?

೨೬ ನೇ ಅಧ್ಯಾಯ

ಆಧುನಿಕಕಾಲದಲ್ಲಿ ವಿಜ್ಞಾನೋಪಾಯಗಳ ಸಾಧನೆ

ಮುಖ್ಯಪ್ರಶ್ನೆ ೯೭ : ಶಾಸ್ತ್ರಜ್ಞಾನದಿಂದ ಪ್ರಾಣರಕ್ಷಣೆಯು ಹೇಗೆ ನಡೆದಿದೆ? ಸಂಕಟವು ಹೇಗೆ ಕಡಿಮೆಯಾಗಿದೆ?

ಆಧುನಿಕಕಾಲದಲ್ಲಿ ವಿಸ್ತಾರಗೊಂಡಿರುವ ಸಾಮ್ರಾಜ್ಯಗಳನ್ನೂ ರಾಷ್ಟ್ರಗಳನ್ನೂ ಅವುಗಳ ಸ್ಥಿತಿಗತಿಗಳನ್ನೂ ಕಾಣುವ ಮೊದಲು ಶಾಸ್ತ್ರಜ್ಞಾನಸಂಬಂಧವಾದ ಮತ್ತೊಂದಂಶವನ್ನು ವಿವರಿಸುವ. ಪ್ರಕೃತಕಾಲದಲ್ಲಿ ಪ್ರಯುಕ್ತಶಾಸ್ತ್ರದ ಬೆಳೆವಣಿಗೆಯು ಅದ್ಭುತವಾಗಿದೆ. ತತ್ತ್ವಸಾಧನೆಯು ಹೊಸದಾಗಿ ನಡೆದಂತೆಲ್ಲ ಹೊಸದಾದ ಉಪಾಯಗಳ ನಿರ್ಮಾಣವೂ ನಡೆಯುತ್ತಲೇ ಇದೆ.

ಶಾಸ್ತ್ರಪ್ರಯೋಗದ ದೆಸೆಯಿಂದ ಈಚಿನ ಯುದ್ಧಗಳು ಘೋರವಿಪತ್ಕಾರಕಗಳಾಗಿರುವುದು ನಿಜ. ಜಗಳಗಳೂ ಯುದ್ಧಗಳೂ ನಿಂತುಹೋಗಿ ಭದ್ರವಾದ ಶಾಂತಿಕ್ಷೇಮಗಳು ನೆಲೆಸಬೇಕಾದರೂ ಶಾಸ್ತ್ರಪ್ರಯೋಗದ ದೆಸೆಯಿಂದಲೇ ಎಂಬುದು ಅಷ್ಟೇ ವಾಸ್ತವ. ಇದು ಚೋದ್ಯವೆನಿಸುವುದಲ್ಲವೆ? ಪ್ರಾಣಹರಣಕ್ಕೂ ಸರ್ವನಾಶಕ್ಕೂ ಹೊಸಹೊಸದಾಗಿಯೂ ಅತಿ ಭಯಂಕರವಾಗಿಯೂ ಉಪಾಯಗಳನ್ನು ರಚಿಸಿಕೊಡತಕ್ಕ ಅದ್ಭುತಕೌಶಲವನ್ನು ಶಾಸ್ತ್ರಸಾಧಕರು ಪಡೆದಿರುವುದರಿಂದ ಹಿಂದಿನಕಾಲದ ಯುದ್ಧಗಳಿಗಿಂತ ಇಂದಿನಕಾಲದ ಯುದ್ಧಗಳು ಎಷ್ಟೋ ವಿನಾಶಕರ, ಪ್ರಳಯಕಾರಕ. ಹಿಂದೆ ನಡೆದ ಯುದ್ಧಗಳಲ್ಲಿ ಸಾವಿರಾರು ಸೈನಿಕರು ರಣಭೂಮಿಯಲ್ಲಿ ಸತ್ತಿದ್ದಾರು; ಹಲಕೆಲವು ನಗರಗಳು ಮುತ್ತಿಗೆಗೆ ಸಿಕ್ಕಿದ್ದಾವು. ಆದರೆ ಬಹುತರ ಗ್ರಾಮಾಂತರಗಳಲ್ಲಿದ್ದ ರೈತಾಪಿಜನರೂ ಪಟ್ಟಣಗಳಲ್ಲಿದ್ದ ಕಲಾಕುಶಲಿಗಳೂ ತಮ್ಮ ಉದ್ಯೋಗ ಕೈಗಾರಿಕೆಗಳನ್ನು ನಡೆಸುತ್ತಲೇ ಇರುತ್ತಿದ್ದರು. ಈ ಕಾಲದ ದೊಡ್ಡ ಪಟ್ಟಣಗಳಲ್ಲಿ ಲಕ್ಷಾಂತರಜನ ಗುಂಪುಗೂಡಿರುವುದಲ್ಲದೆ ಸರಕಿನ ತಯಾರಿಯು ಕೇಂದ್ರೀಕೃತವಾಗಿ ಭಾರಿ ಕಾರ್ಖಾನೆಗಳಲ್ಲಿ ನಡೆಯುವುದರಿಂದ ಯುದ್ಧವು ಮೊದಲಾಯಿತೆಂದರೆ ಶತ್ರುವಿಮಾನಗಳು ಆಕಾಶದಲ್ಲಿ ಹಾರಿಬಂದು ದೇಶದ ಸಮಸ್ತ ಭಾಗಗಳಲ್ಲಿಯೂ ಸಿಡಿಗುಂಡುಗಳನ್ನೆರಚಿ ನಾಶಗೊಳಿಸುವುದು ಸುಲಭ. ಯುದ್ಧಗಳ ಪರಿಣಾಮವೆಂಬುದು ಸೈನ್ಯಗಳ ಸೋಲಿನಲ್ಲಿಯೋ ಪ್ರಭುತ್ವದ ಬದಲಾವಣೆಯಲ್ಲಿಯೋ ಮುಗಿಯುವುದಿಲ್ಲ. ಬಹುಜನರ ಜೀವನೋಪಾಯ

ಸರ್ವಸ್ವವೂ ವಿನಾಶವಾಗುವುದು ; ಯುದ್ಧಪ್ರಯತ್ನದಿಂದ ದೂರವಾಗಿರತಕ್ಕ ಲಕ್ಷಗಟ್ಟಲೆ ನಿರಪರಾಧಿಗಳೂ ಹತರಾಗುವರು ; ಹಾಗೂ ಹೀಗೂ ಜೀವಂತ ರಾಗಿ ಉಳಿದವರು ಆಹಾರಕಾಣದೆ ಪ್ರಾಣಬಿಡಬೇಕಾಗುವುದು.

ಇಷ್ಟು ಭಯಂಕರವಾದ ವಿನಾಶಕೃತ್ಯ ಶಾಸ್ತ್ರಜ್ಞಾನದಿಂದಲೇ ಉಂಟಾ ದುದು ನಿಜ. ಆದಾಗ್ಯೂ ವಿಜ್ಞಾನವೇ ನಮ್ಮನ್ನು ರಕ್ಷಿಸತಕ್ಕುದು. ವಿಜ್ಞಾನ




ಆಧುನಿಕಕಾಲದ ಏರೋಪ್ಲೇನ್

ದಿಂದ ಪ್ರಾಣಗಳನ್ನು ತೆಗೆಯಲೂಬಹುದು, ಉಳಿಸಲೂಬಹುದು ; ಹೊಸ ದಾಗಿ ನಿರ್ಮಿಸಲೂಬಹುದು, ಇರುವುದನ್ನು ಹಾಳುಮಾಡಲೂಬಹುದು.

ಸಂಕಟವನ್ನು ತಗ್ಗಿಸಿ ರೋಗವನ್ನು ವಾಸಿಮಾಡುವ ವಿದ್ಯೆಯಲ್ಲಿ ಅಥವಾ ಚಿಕಿತ್ಸೆಯಲ್ಲಿ ಮುಖ್ಯವಾದ ಕೆಲವು ಸಾಧನೆಗಳನ್ನು ಮೊದಲು ಗುರುತಿಟ್ಟು ಕೊಳ್ಳೋಣ. ಕಳೆದ ಶತಮಾನದಲ್ಲಿ ನಾನಾ ದೇಶಗಳ ಭಿಷಗ್ವರರೂ ಶಾಸ್ತ್ರ ಜ್ಞರೂ ಎಷ್ಟೋ ಅದ್ಭುತವಾದ ಸಾಧನೆಗಳನ್ನು ನಡೆಸಿದ್ದಾರೆ. ಅವುಗಳಿಂದ ಒಂದೆರಡನ್ನು ಎತ್ತಿಕೊಂಡು ಮುಖ್ಯವೆಂದು ಹೇಳಲಾಗದು. ಆದರೆ ಗಾಯ ಗೊಂಡಾಗಲೂ ಶಸ್ತ್ರಚಿಕಿತ್ಸೆಗೊಳಗಾದಾಗಲೂ ಜನರಿಗಾಗುವ ಸಂಕಟವನ್ನು

ತಗ್ಗಿಸುವುದರಲ್ಲಿ **ಜೋಸೆಫ್ ಲಿಸ್ಟರ್** (Joseph Lister) ಎಂಬಾತನ ಸಾಧನೆಯಿಂದಾದಷ್ಟು ಉಪಕಾರವು ಮತ್ತಾವುದರಿಂದಲೂ ಸೇರವೇರಿಲ್ಲ.

ಗ್ಲಾಸ್ಗೊ ಪಟ್ಟಣದ ಒಂದಾನೊಂದು ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸಕನಾಗಿದ್ದವನು ಲಿಸ್ಟರ್. ಶಸ್ತ್ರಚಿಕಿತ್ಸೆ ತೃಪ್ತಿಕರವಾಗಿ ನಡೆದ ಮೇಲೂ ಅನೇಕರು ಮೃತರಾಗುತ್ತಿದ್ದುದನ್ನು ಕಂಡು ಆತನು ಬಹಳವಾಗಿ ಯೋಚಿಸಿದನು. ಗಾಯ ಪಡೆದ ಅಂಗವನ್ನು ಶಸ್ತ್ರಪ್ರಯೋಗದಿಂದ ಸರಿಪಡಿಸಿದ ತರುವಾಯ ರೋಗಿಯ ದೇಹದಲ್ಲಿನ ರಕ್ತದಲ್ಲಿ ವಿಷ ಹರಡಿಕೊಳ್ಳುತ್ತಿದ್ದುದು ಕಾರಣವೆಂದು ತಿಳಿದನು. ಈ ವಿಷವೆಲ್ಲಿಂದ ಬರುವುದೆಂದು ಲಿಸ್ಟರ್ ಸಾವಧಾನವಾಗಿ ಹುಡುಕಿದನು.



ಲಾರ್ಡ್ ಲಿಸ್ಟರ್

ಎಷ್ಟೋ ಪರೀಕ್ಷೆಗಳನ್ನು ಜಾಗ್ರತೆಯಿಂದ ನಡೆಸಿದ ಬಳಿಕ ಗೂಢವಾಗಿದ್ದ ಅಂಶವು ೧೮೬೫ ರಲ್ಲಿ ತಿಳಿಯಿತು. ಆಕಾಶದಲ್ಲಿಯೂ ನೀರಿನಲ್ಲಿಯೂ ಎಲ್ಲೆಲ್ಲಿಯೂ ಇರುವ ಸೂಕ್ಷ್ಮ ಕ್ರಿಮಿಗಳಿಂದ ಆ ವಿಷವ್ಯಾಪ್ತಿ. ಆ ಕ್ರಿಮಿಗಳು ಗಾಯದಲ್ಲಿ ಹೊಕ್ಕ ಕೂಡಲೇ ಅಲ್ಲಿಯ ಮಾಂಸವು ಕೊಳೆತು ವಿಷವೇರಿ ರಕ್ತವನ್ನು ಸೇರಿ ದೇಹದಲ್ಲೆಲ್ಲ ವ್ಯಾಪಿಸುವುದು. ಇದನ್ನು ನಿವಾರಿಸಲು ವಿಷವನ್ನು ಹರಿಸುವ ಯಾವುದಾದರೂ ಪದಾರ್ಥವನ್ನು ಆರಿಸಬೇಕಾಯಿತು. ಕಾರ್ಬಾಲಿಕ್ ಆಸಿಡ್ (carbolic acid) ಅಂತಹ ಪದಾರ್ಥವೆಂದು ಲಿಸ್ಟರ್ ಗೊತ್ತುಮಾಡಿಕೊಂಡನು. ಅದರಲ್ಲಿ ಸೂಕ್ಷ್ಮಕ್ರಿಮಿಗಳಿರಲು ಸಾಧ್ಯವಿಲ್ಲ; ಮನುಷ್ಯ ದೇಹದ ಹೊರಗಡೆ ಮಾತ್ರ ಅದನ್ನು ಪ್ರಯೋಗಿಸಿದರೆ ಅಪಾಯವಿಲ್ಲ. ಇದನ್ನು ಗೊತ್ತುಮಾಡಿದ ಮೇಲೆ ಲಿಸ್ಟರ್ ತನ್ನ ಆಸ್ಪತ್ರೆಯಲ್ಲಿ ರೋಗಿಗಳ ಗಾಯಕ್ಕೆ ಕಾರ್ಬಾಲಿಕ್ ಆಸಿಡ್ ಬಳಿದು ಕಟ್ಟತೊಡಗಿದನು. ಆ ಉಪಾಯದಿಂದ ಸಾವಿರಾರು ರೋಗಿಗಳ ಪ್ರಾಣವುಳಿಯಿತು. ಅಷ್ಟುಮಾತ್ರವಲ್ಲ. ಚಿಕಿತ್ಸಕನ ಹಸ್ತಗಳಿಂದಾಗಲಿ ಶಸ್ತ್ರಗಳಿಂದಾಗಲಿ ಪರಿವಾರದವರ ವಸ್ತ್ರಗಳಿಂದಾಗಲಿ ವಿಷಕ್ರಿಮಿಗಳಿಗೆ ಅನುಕೂಲವಾಗದಂತೆ ಏರ್ಪಾಡು ನಡೆಸಿದನು. ಸರ್ಜನ್ ಅಥವಾ ಚಿಕಿತ್ಸಕನು ಕೈಗಳಿಗೆ ರಬ್ಬರ್ ಚೀಲಗಳನ್ನು ಕಟ್ಟಿಕೊಳ್ಳುವುದೂ, ಶಸ್ತ್ರಸಾಮಗ್ರಿಯನ್ನು ಕುದಿಯುವ ನೀರಿನಲ್ಲಿಟ್ಟಿರುವುದೂ, ಆಸ್ಪತ್ರೆಯಲ್ಲಿರುವವರು ಶುಭ್ರವಾದ ಬಿಳಿ ನಿಲುವಂಗಿಗಳನ್ನು ತೊಡುವುದೂ, ಆ ನಿಲುವಂಗಿಗಳನ್ನು ಆಗಾಗ್ಗೆ ಶುದ್ಧಿಗೊಳಿಸುತ್ತಿರುವುದೂ ಆ ಏರ್ಪಾಡಿನ ಅಂಶಗಳು.

ಮೊದಲು ಇವುಗಳನ್ನು ಲಿಸ್ಟರ್ ನಡೆಸಿದಾಗ ಆತನನ್ನು ಪರಿಹಾಸ್ಯಮಾಡಿದರು. ಆ ಉಪಾಯಗಳ ದೆಸೆಯಿಂದ ತನ್ನ ಆಸ್ಪತ್ರೆಯಲ್ಲಿ ಮರಣಗಳು ಕಡಿಮೆಯಾದವೆಂದು ಆತನು ಬಿಚ್ಚಿ ಹೇಳಿದಾಗ ಯಾರೂ ನಂಬಲಿಲ್ಲ. ಆದರೆ ಸ್ವಲ್ಪ ಕಾಲದಲ್ಲಿಯೇ ಲಿಸ್ಟರನ ಆಸ್ಪತ್ರೆಗೂ ಇತರ ಆಸ್ಪತ್ರೆಗಳಿಗೂ ಇದ್ದ ಭೇದವು ತಿಳಿಯಿತು. ಇತರ ಆಸ್ಪತ್ರೆಗಳಲ್ಲಿ ಶಸ್ತ್ರಪ್ರಯೋಗವಾದ ಮೇಲೆ ನೂರರಲ್ಲಿ ಎಂಭತ್ತು ಜನರು ರಕ್ತಗತವಿಷದಿಂದ ಸಾಯುತ್ತಿದ್ದರೆ ಲಿಸ್ಟರನ ಆಸ್ಪತ್ರೆಯಲ್ಲಿ ಆ ಕಾರಣದಿಂದ ಸತ್ತ ರೋಗಿಯೊಬ್ಬನಾದರೂ ಇರಲಿಲ್ಲ! ಲಿಸ್ಟರ್ ಆಗ ವಿಖ್ಯಾತನಾದನು. ಇತರ ಶಸ್ತ್ರವೈದ್ಯರೂ ಆತನ ಉಪಾಯಗಳನ್ನು ಆತುರದಿಂದ ಅವಲಂಬಿಸತೊಡಗಿದರು.

ಲಿಸ್ಟರ್ ನಡೆಸಿದ ಸಾಧನೆಗೆ **ಲೂಯಿ ಪ್ಯಾಸ್ಟೂರ್** (Louis Pasteur) ಎಂಬಾತನ ಸಾಧನೆಯು ಅನುಕೂಲ ಮಾಡಿಕೊಟ್ಟಿತ್ತು. ಪ್ಯಾಸ್ಟೂರ್ ಅದೇ ಕಾಲದಲ್ಲಿದ್ದ ಶಾಸ್ತ್ರಜ್ಞರಲ್ಲಿ ಅಗ್ರಗಣ್ಯ; ಜನ್ಮತಃ ಫ್ರೆಂಚರವನು. ಗಾಳಿಯಲ್ಲಿ ಸೂಕ್ಷ್ಮಕ್ರಿಮಿಗಳುಂಟೆಂಬುದನ್ನು ಗೊತ್ತುಮಾಡಿದವನು ಆತ. ಆ ಅಂಶವು ತಿಳಿದುದರಿಂದಲೇ ಲಿಸ್ಟರ್ ವಿಷವ್ಯಾಪ್ತಿಗೆ ನಿವಾರಣೋಪಾಯಗಳನ್ನು ಕಲ್ಪಿಸಬಲ್ಲವನಾದನು. ಕೆಲಕಾಲದ ಮೇಲೆ ಪ್ಯಾಸ್ಟೂರ್ ಮತ್ತೊಂದಂಶವನ್ನು ಸಾಧಿಸಿದನು. ರೋಗಕ್ಕೆ ಕಾರಣಭೂತವಾದ ಕ್ರಿಮಿಗಳನ್ನು ಸ್ವಲ್ಪವಾಗಿ ರೋಗಿಯ ರಕ್ತದಲ್ಲಿ ಬಿಟ್ಟರೆ ಕೆಲವು ರೋಗಗಳು ನಿವಾರಣೆಯಾಗುವುವೆಂಬುದೇ ಆ ಅಂಶ. ಹುಚ್ಚುನಾಯಿಕಡಿದರೆ ತೋರುವ ವ್ಯಾಧಿಯು ಭಯಂಕರವಾದುದು. ಅದಕ್ಕೆ ಯಾವ



ಲೂಯಿ ಪ್ಯಾಸ್ಟೂರ್

ಚಿಕಿತ್ಸೆಯೂ ಇಲ್ಲವೆಂದು ಭಾವಿಸಿದ್ದರು. ಇನಾಕ್ಯುಲೇಷನ್ (inoculation) ವಿಧಾನದಿಂದ ಆ ರೋಗಕ್ಕೆ ಚಿಕಿತ್ಸೆಯಾಗುವುದೆಂದು ಪ್ಯಾಸ್ಟೂರ್ ಸ್ಥಾಪಿಸಿದನು. ಅದರಿಂದ ಆತನ ಹೆಸರು ಎಲ್ಲ ದೇಶಗಳಲ್ಲಿಯೂ ವಿಶ್ರುತವಾಗಿದೆ. ಹುಚ್ಚುನಾಯಿ ಕಡಿದ ಜನರನ್ನು ಪ್ಯಾಸ್ಟೂರ್ ಇನ್‌ಸ್ಟಿಟ್ಯೂಟ್ (Pasteur Institute) ಎಂಬ ಆಸ್ಪತ್ರೆಗೆ ಕಳುಹಿಸುತ್ತಾರೆ.

ನೋವನ್ನು ತಗ್ಗಿಸುವುದರಲ್ಲಿಯೂ ಆಶ್ಚರ್ಯಕರವಾದ ಶಸ್ತ್ರಚಿಕಿತ್ಸೆಯನ್ನು ನಡೆಸುವುದರಲ್ಲಿಯೂ ಪ್ರಭಾವವುಳ್ಳ ಮತ್ತೊಂದು ಸಾಧನೆಯನ್ನೂ ನಾವು ಸ್ಮರಿಸಬಹುದು. ಪ್ರಜ್ಞೆಯನ್ನು ಸ್ವಲ್ಪವಾಗಿಯೋ ಪೂರ್ಣವಾಗಿಯೋ ತಪ್ಪಿಸಿ ಕೊಡುವ ವಸ್ತುಗಳನ್ನು ವೈದ್ಯರು ಉಪಯೋಗಿಸುವುದು ಈಗ ಸಾಮಾನ್ಯ. ಅಂತಹ ವಸ್ತುಗಳಲ್ಲೆಲ್ಲ ಮುಖ್ಯವಾದುದು ಕ್ಲೋರೊಫಾರ್ಮ್ (chloroform). ಅದನ್ನು ೧೮೪೭ರಲ್ಲಿ **ಸರ್ ಜೇಮ್ಸ್ ಸಿಂಪ್ಸನ್** (Sir James Simpson) ಎಂಬಾತನು ಕಂಡುಹಿಡಿದನು.

ಮುಖ್ಯಪ್ರಶ್ನೆ ೯೮ : ಆಕಾಶಸಂಚಾರವು ಹೇಗೆ ಸಾಧ್ಯವಾಯಿತು? ಏರೊಪ್ಲೇನಿನ ಉಪಯೋಗವೇನು?

ಇತರ ರೀತಿಗಳಲ್ಲಿ ಮಹತ್ಪರಿಣಾಮಕಾರಿಗಳಾಗಿ ಕಳೆದ ಶತಮಾನದಲ್ಲಿ ನಡೆದ ಸಾಧನೆಗಳನ್ನೂ ಉಪಾಯರಚನೆಗಳನ್ನೂ ನೋಡೋಣ. ಪ್ರಾಯಶಃ ಅತಿಮುಖ್ಯವಾದುದು ಏರೊಪ್ಲೇನ್. ಆದರೆ ಪೆಟ್ರೋಲಿನಿಂದ ನಡೆಯುವ ಯಂತ್ರವಿಲ್ಲದಿದ್ದರೆ ಏರೊಪ್ಲೇನ್ ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಆ ಯಂತ್ರವೇ ತಕ್ಕಷ್ಟು ಹಗುರವಾದುದು. ಜ್ವಲನಗರ್ಭಯಂತ್ರ ಅಥವಾ ಅಂತರ್ಜ್ವಲನಯಂತ್ರ (internal combustion engine) ವೆಂಬುದು ಒಬ್ಬ ನಿಂದ ಸಿದ್ಧವಾಗಲಿಲ್ಲ; ಪರಂಪರೆಯಾಗಿ ಅನೇಕರಿಂದ ರೂಪಗೊಂಡಿತು. ಜ್ವಲನ + ಗರ್ಭ + ಯಂತ್ರ = ಎಂದರೆ ಯಂತ್ರದ ಒಳಭಾಗದಲ್ಲಿಯೇ ಕಾವು ತೋರುವ ಯಂತ್ರ; ಪೆಟ್ರೋಲ್ ಕಾದು ಸಿಡಿದು ಅನಿಲ ರೂಪಗೊಳ್ಳು ವಂತೆ ನೆರವೇರಿಸುವ ಗರ್ಭವನ್ನುಳ್ಳ ಯಂತ್ರ. ತೈಲವಾಯು ಯಂತ್ರವನ್ನು ಪ್ರಾಯಶಃ ಮೊದಲು ರಚನೆಗೈದಾತನು **ಸ್ಟ್ರೀಟ್** (Street) ಎಂಬ ಇಂಗ್ಲಿಷ ರವನು; ೧೭೯೪ರಲ್ಲಿ ರಚಿಸಿದ್ದನು. ಅದಕ್ಕಿಂತ ಉತ್ತಮವಾದ ಯಂತ್ರವನ್ನು ೧೮೬೦ರಲ್ಲಿ **ಲೆನ್ವಾರ್** (Lenoir) ಎಂಬ ಫ್ರೆಂಚ್ ಯಂತ್ರಜ್ಞನು ನಿರ್ಮಿಸಿ ದನು. ಪೆಟ್ರೋಲಿನಿಂದ ತೃಪ್ತಿಕರವಾಗಿ ನಡೆಯಬಲ್ಲ ಯಂತ್ರವನ್ನು ಜರ್ಮನ್ ಜಾತಿಯವನಾದ **ಡೈಮ್ಲರ್** (Daimler) ರಚಿಸಿದನು. ಅದರಿಂದ ಮೋಟಾರ್ ಬೈಸಿಕಲ್ ರಚನೆಯಾಯಿತು; ಮರುವರ್ಷ ಮೋಟಾರ್‌ಕಾರ್ ರೂಪವೆತ್ತಿತು. ೧೮೯೦ರ ತರುವಾಯ ಜರ್ಮನಿ ಫ್ರಾನ್ಸ್ ದೇಶಗಳಲ್ಲಿ ಮೋಟಾರ್‌ಕಾರು ಗಳಿಗಾಗಿ ಪೆಟ್ರೋಲ್‌ಯಂತ್ರಗಳನ್ನು ಪಯೋಗಿಸುವುದು ವಿಶೇಷವಾಯಿತು. ಇಷ್ಟೆಲ್ಲವೂ ನಡೆದ ಮೇಲೆಯೇ ವಾಯುಮಂಡಲದಲ್ಲಿ ಚಲಿಸಬಲ್ಲ ಯಂತ್ರದ ರಚನೆಯು ಸಾಧ್ಯವಾಯಿತು.

ವಾಯುಮಂಡಲದಲ್ಲಿ ತೇಲಿಕೊಂಡು ಸಂಚರಿಸಲು ೧೮೫೦ ರಷ್ಟು ಹಿಂದೆಯೇ ಪ್ರಯತ್ನಗಳು ನಡೆದಿದ್ದುವು. ಆಕಾಶದಲ್ಲಿ ತೇಲಿಕೊಂಡು ಇಂಗ್ಲಿಷ್ ಜರ್ಮನ್, ಫ್ರೆಂಚ್ ಮತ್ತು ಅಮೆರಿಕನ್ ಸಾಹಸಿಗಳು ಅನುಭವಪಡೆದರು. ಅವರಲ್ಲೆಲ್ಲ **ಲಿಲಿಯೆನ್ಥಲ್** (Lilienthal) ಎಂಬ ಜರ್ಮನಿಯ ಶ್ರೀಮಂತನು ದೊಡ್ಡವನು. **ಅರ್ವಿಲ್ ರೈಟ್, ವಿಲ್ಬರ್ ರೈಟ್** (Orville and Wilbur Wright) ಎಂಬ ಅಮೆರಿಕನ್ ಸೋದರರಿಬ್ಬರು ಸುಮಾರು ೧೯೦೦ ರಲ್ಲಿ ತೇಲಿಕೊಂಡೇ ತೃಪ್ತಿಕರವಾದ ಸಂಚಾರ ನಡೆಸಿದರು. ೧೯೦೩ ರಲ್ಲಿ ತೇಲುವ ಯಂತ್ರಕ್ಕೆ ಪೆಟ್ರೋಲಿನಿಂದ ನಡೆಯುವ ಮೋಟಾರನ್ನು ಜೋಡಿಸಿಕೊಂಡು ಮೊದಲನೆ ಸಲ ನಲವತ್ತುಗಜ ಹಾರಿದರು ; ಆಮೇಲೆ ೨೬೦ ಗಜದಷ್ಟು ದೂರ ಹಾರಿದರು. ಇಂತು ಏರೋಪ್ಲೇನ್ ರಚನೆಯಾಯಿತು !

ಬೇಗಬೇಗ ರಚನೆಯು ಉತ್ತಮಗೊಂಡಿತು. ೧೯೦೪ ರಲ್ಲಿ ರೈಟ್ ಸೋದರರು ಮೂರು ಮೈಲಿ ದೂರವನ್ನು ಸಾಧಿಸಿದರು ; ೧೯೦೮ ರಲ್ಲಿ ಇಪ್ಪತ್ತನಾಲ್ಕು ಮೈಲಿ ದೂರವನ್ನು ಹಾರಿಬಿಟ್ಟರು. ಆದರೆ ಆಕಾಶಗಮನದಲ್ಲಿ ಮೊದಲನೆ ಘೋರಯುದ್ಧ ಸಮಯದಲ್ಲಿ ಅನೇಕಾನೇಕ ಹೊಸ ಸಾಧನೆಗಳು ನಡೆದುವು. ಆಗ ಬಾಂಬುಗಳನ್ನು ಬೀರಲೆಂದಲ್ಲ ಏರೋಪ್ಲೇನುಗಳನ್ನು ಹಾರಿಸಿದ್ದು ; ಅಗ್ರಭಾಗದ ಸ್ಥಿತಿಗತಿಗಳನ್ನು ಕಂಡು ವೈರಿಗಳ ಏರ್ಪಾಟನ್ನು ಫೋಟೊಯೆತ್ತಿಕೊಂಡು ಬರಲೆಂದು. ಹೆಚ್ಚು ಶಕ್ತಿಯುಳ್ಳ ಯಂತ್ರಗಳ ನಿರ್ಮಾಣವಾಯಿತು ; ಆದ್ದರಿಂದ ಏರೋಪ್ಲೇನುಗಳು ವಾಯುಮಂಡಲದಲ್ಲಿ ಬಹಳ ಎತ್ತರದಲ್ಲಿ ಸಂಚರಿಸುತ್ತಿದ್ದು ಶತ್ರುಗಳು ಹಾರಿಸಿದ ಗುಂಡುಗಳನ್ನು ತಪ್ಪಿಸಿಕೊಳ್ಳಬಹುದಾಯಿತು.

ಯುದ್ಧವು ಮುಗಿದ ತರುವಾಯ ಏರೋಪ್ಲೇನುಗಳಿಂದ ಅತಿ ಚಮತ್ಕಾರ ಸಾಧನೆ ನಡೆಯಿತು. ೧೯೧೯ ರಲ್ಲಿ ಅಟ್ಲಾಂಟಿಕ್ ಮಹಾಸಾಗರವನ್ನು ದಾಟಲಾಯಿತು ; ೨೬ ಗಂಟೆಗಳ ಕಾಲ ಹಿಡಿಯಿತು. ಅದೇ ವರ್ಷ ಆಸ್ಟ್ರೇಲಿಯದ ಯುವಕರಿಬ್ಬರು ಇಂಗ್ಲಂಡಿನಿಂದ ಆಸ್ಟ್ರೇಲಿಯಕ್ಕೆ ವಿಮಾನದಲ್ಲಿ ಹಾರಿದರು. ೧೯೨೬ ರಲ್ಲಿ ಅಮೆರಿಕದ **ಅಡ್ಮಿರಲ್ ಬಿರ್ಡ್** (Admiral Byrd) ಎಂಬ ಸಾಹಸಿಯು ಉತ್ತರಧ್ರುವ ಪ್ರದೇಶದ ಮೇಲೆ ಹಾರಿದನು. ೧೯೨೯ ರಲ್ಲಿ ಏರೋಪ್ಲೇನ್ ಹತ್ತಿ ಪೃಥ್ವಿಯ ದಕ್ಷಿಣಾಗ್ರಕ್ಕೆ ಹೊರಟು ನೀರ್ಗಲ್ಲಿನಿಂದ ಮುಚ್ಚಿದ ಪ್ರದೇಶಗಳನ್ನು ಪತ್ತೆಮಾಡಿಕೊಂಡು ದಕ್ಷಿಣಧ್ರುವಪ್ರದೇಶದ ಮೇಲೆ ಹಾರಿದನು. ೧೯೩೩ ರಲ್ಲಿ ಎರಡು ಏರೋಪ್ಲೇನುಗಳನ್ನು ಹಿಮ

ವತ್ಪರ್ವತದ ಗೌರೀಶಂಕರ ಶಿಖರದ ಮೇಲೆ ಹಾರಾಡಿಸಿದರು. ಪೃಥ್ವಿಗೆಲ್ಲ ಎತ್ತರವೆನಿಸಿದ ಆ ಶಿಖರಕ್ಕೂ ಎತ್ತರವಾಗಿ ಹಾರಿದ್ದಾಯಿತು.

ಈ ಮಧ್ಯೆ ಪರೀಕ್ಷೆಗಳೂ ಹೊಸ ಉಪಾಯಸಾಧನೆಗಳೂ ನಡೆಯುತ್ತಲೇ ಇದ್ದುವು. ಇಪ್ಪತ್ತು ಮೂವತ್ತು ಪ್ರಯಾಣಿಕರನ್ನೂ ತತ್ಸಮಾನ ಭಾರ



ಗೌರೀಶಂಕರ ಶಿಖರದ ಮೇಲೆ ಹಾರಾಟ

ವನ್ನೂ ಹೊತ್ತುಕೊಂಡು ವಾಯುಮಂಡಲದಲ್ಲಿ ಸಂಚರಿಸತಕ್ಕ ದೊಡ್ಡ ವಿಮಾನಗಳನ್ನು ತಯಾರಿಸುವ ಪ್ರಯತ್ನ ನಡೆಯುತ್ತಿತ್ತು. ಯೂರೋಪಿನಿಂದ ಹೊರಟು ಹಿಂದುಸ್ತಾನ್ ಮಾರ್ಗವಾಗಿ ಆಸ್ಟ್ರೇಲಿಯಕ್ಕೆ ಟಪಾಲನ್ನೂ ಪ್ರಯಾಣಿಕರನ್ನೂ ಹೊರುವ ಏರೋಪ್ಲೇನ್ ಕಂಪನಿಗಳು ಮೊದಲಾದುವು. ಅಮೆರಿಕದಿಂದ ಹೊರಟು ಪಸಿಫಿಕ್ ಸಾಗರವನ್ನು ದಾಟಿಕೊಂಡು ಏಷ್ಯದ ಸ್ಥಳಗಳನ್ನು ತಲಪುವ ವಿಮಾನಗಳ ಏರ್ಪಾಡೂ ನಡೆಯಿತು. ಈ ಏರ್ಪಾಡುಗಳಲ್ಲಿ ಉಪಯೋಗಿಸಿದುದು ಸೀಪ್ಲೇನುಗಳೆಂಬುವನ್ನು. ಅಂದರೆ ವಾಯುಮಂಡಲದಲ್ಲಿಯೂ ನೀರಿನ ಮೇಲೂ ಸಂಚರಿಸಬಲ್ಲ ವಿಮಾನಗಳನ್ನು. ಭಾರವನ್ನು ಹೊರಬಲ್ಲ ಏರೋಪ್ಲೇನುಗಳ ತಯಾರಿಯಾದ ಮೇಲೆ ಅವುಗಳನ್ನು ಯುದ್ಧಗಳಲ್ಲಿ ಸರ್ವನಾಶಗೊಳಿಸುವ ಹೊಸ ಶಕ್ತಿಗಳಾಗಿ ಪ್ರಯೋಗಿಸಲು

ಮೊದಲಾಯಿತು. ಚೀನ, ಅಬಿಸ್ಸಿನಿಯ, ಸ್ಪೈಯ್ನ್‌ಗಳಲ್ಲಿ ನಡೆದ ಯುದ್ಧಗಳಲ್ಲಿಯೂ ಈಚೆಗೆ ಬ್ರಿಟಿಷ್ ಸಾಮ್ರಾಜ್ಯಕ್ಕೂ ಜರ್ಮನಿಗೂ ನಡೆಯುತ್ತಿರುವ ಯುದ್ಧದಲ್ಲಿಯೂ ಏರೋಪ್ಲೇನುಗಳು ಅತಿಮುಖ್ಯವೆನಿಸಿದುವು. ಟಪಾಲನ್ನೋ ಪ್ರಯಾಣಿಕರನ್ನೋ ಹೊರುವ ಬದಲು ದೊಡ್ಡಬಾಂಬುಗಳನ್ನು ಹೊತ್ತು ಏರೋಪ್ಲೇನುಗಳು ಹೊರಡುವುವು; ಶತ್ರುದೇಶದ ಕಾರ್ಖಾನೆ, ರೈಲ್ದಾರಿ, ಬಂದರು, ನಗರ ಮುಂತಾದವುಗಳನ್ನು ಬಾಂಬುಗಳಿಂದ ಧ್ವಂಸಮಾಡಿ ಭಯಂಕರವಾದ ವಿನಾಶಕಾರ್ಯವನ್ನು ನಡೆಸುವುವು.

ಮುಖ್ಯಪ್ರಶ್ನೆ ೯೯ : ಎಡಿಸನ್ ನಡೆಸಿದಉಪಾಯ ಕಲ್ಪನೆಗಳಲ್ಲಿ ಮುಖ್ಯವಾದುವು ಯಾವುವು?

ತಂತಿ, ರೇಡಿಯೋ ಮುಂತಾದ ಇತರ ಸಾಧನೆಗಳಿಲ್ಲದೆ ಹೋಗಿದ್ದರೆ ವಾಯುಮಂಡಲದಲ್ಲಿ ಕ್ಷೇಮವಾಗಿ ಸಂಚರಿಸುವುದಕ್ಕಾಗುತ್ತಿರಲಿಲ್ಲ. ಆ ಸಾಧನೆಗಳೆಲ್ಲವೂ ಶಾಸ್ತ್ರಸಾಧನೆಯಿಂದ ಲಭಿಸಿದ ವಿಜ್ಞಾನವನ್ನು ಪ್ರಯೋಗಿಸಿದ ಫಲ. ವಿಜ್ಞಾನವನ್ನು ಆ ರೀತಿ ಪ್ರಯೋಗಿಸಿ ಉಪಯುಕ್ತವಾದ ಕಲ್ಪನೆಗಳನ್ನು ಹೊಂದಿಸಿದವರಲ್ಲೆಲ್ಲ ಅಗ್ರಗಣ್ಯನಾದವನು **ಥಾಮಸ್ ಆಲ್ವ ಎಡಿಸನ್** (Thomas Alva Edison).

ಸಂಯುಕ್ತ ಸಂಸ್ಥಾನಗಳಲ್ಲಿ ೧೮೪೭ರಲ್ಲಿ ಎಡಿಸನ್ ಹುಟ್ಟಿದನು. ಚಿಕ್ಕಂದಿನಿಂದಲೂ ಆತನಿಗೆ ಪರೀಕ್ಷೆ ನಡೆಸಿ ಕಾಣುವುದರಲ್ಲಿ ಅತ್ಯಾಸಕ್ತಿ. ಇನ್ನೂ ಮಗುವಾಗಿದ್ದಾಗಲೇ ಒಂದು ಬಾರಿ ಎಡಿಸನ್ ಮನೆಯಂಗಳದಲ್ಲಿ ಬಹಳ ಗಾಂಭೀರ್ಯವಹಿಸಿ ಕುಳಿತಿದ್ದನಂತೆ. ಅಲ್ಲಿಗೆ ಬಂದ ಅವನ ಸೋದರಿಯು 'ಏನು ಮಾಡುತ್ತೀ ನೀನು?' ಎಂದು ಕೇಳಿದರೆ, 'ನಾನು ಬಾತುಮೊಟ್ಟೆ ಮೇಲೆ ಕೂತಿದ್ದೇನೆ; ಅದರ ತಾಯಿ ಮರಿಮಾಡಿದಂತೆ ನಾನೂ ಮಾಡಬಲ್ಲನೇನೋ ನೋಡುತ್ತೇನೆ' ಎಂದನಂತೆ! ಮತ್ತೊಂದು ಬಾರಿ ತನ್ನ ಗೆಳೆಯನೊಬ್ಬನಿಗೆ ಹೇರಳವಾಗಿ ಸಿಡ್ಲಿಟ್ಸ್ ಪುಡಿ ತಿನ್ನಿಸಿದನಂತೆ. ಆ ಪುಡಿಗೆ ನೀರು ಸೋಕಿದ ಕೂಡಲೆ ಬುರುಗೆದ್ದು ವಾಯುವು ಹೊರಡುವುದು. ಗೆಳೆಯನ ಹೊಟ್ಟೆಯಲ್ಲಿ ಆ ರೀತಿ ತುಂಬಿಕೊಂಡ ವಾಯುವಿನ ಬಲದಿಂದ ಗೆಳೆಯನು ಆಕಾಶದಲ್ಲೇರಿ ಹಾರಬಲ್ಲನೇನೋ ನೋಡೋಣವೆಂಬ ಕುತೂಹಲವಿತ್ತಂತೆ ಎಡಿಸನ್ನನಿಗೆ!

ಹದಿನಾಲ್ಕನೆ ವಯಸ್ಸಿನಲ್ಲಿ ಎಡಿಸನ್ ತನ್ನ ಜೀವನವನ್ನು ತಾನೇ ನಡೆಸಿಕೊಳ್ಳಲು ನಿಶ್ಚಯಮಾಡಿ ಸಂಪಾದನೆಗೆ ಹೊರಟನು. ಅಮೆರಿಕದ ರೈಲುಗಾಡಿ

ಗಳಲ್ಲಿ ಉದ್ದಕ್ಕೂ ಓಡಾಡಲು ಓಣಿಯಿರುತ್ತದೆ. ಆ ಓಣಿಯಲ್ಲಿ ಓಡಾಡುತ್ತ ಸಮಾಚಾರ ಪತ್ರಿಕೆಗಳನ್ನು ಪ್ರಯಾಣಿಕರಿಗೆ ಮಾರಿ ಸಂಪಾದನೆ ಮಾಡಿ ಕೊಳ್ಳಲು ಎಡಿಸನ್ ಹೊರಟನು. ಆದರೆ ಅಷ್ಟರಿಂದ ಎಡಿಸನ್ ತೃಪ್ತನಾಗ ಲಿಲ್ಲ. ಗಾರ್ಡನ ಸ್ನೇಹವನ್ನು ಸಂಪಾದಿಸಿಕೊಂಡು ಸಾಮಾನಿನ ಗಾಡಿಯಲ್ಲಿ ಚಿಕ್ಕದಾಗಿ ಅಚ್ಚು ಯಂತ್ರವನ್ನಿಟ್ಟು ತಾನೇ ಒಂದು ಪುಟದ ಪತ್ರಿಕೆಯನ್ನು ಸಿದ್ಧಗೊಳಿಸಿ ಅದನ್ನು ಮಾರಲು ಉಪಕ್ರಮಿಸಿದನು. ಬಿಡುವಾದಾಗ ಸುಮ್ಮ ನಿರದೆ ಸ್ವಂತವಾಗಿ ರಚಿಸಿಕೊಂಡ ತಂತ್ರೀಸಾಮಗ್ರಿಯನ್ನಿಟ್ಟುಕೊಂಡು ತಂತಿ ಮೂಲಕ ಸುದ್ದಿ ಸಮಾಚಾರಗಳನ್ನು ಸಾಗಿಸುವ ಪರೀಕ್ಷೆ ಮಾಡಿಕೊಳ್ಳುತ್ತಿದ್ದನು.

ತಂತಿಯ ಸಮಾಚಾರದ ಏರ್ಪಾಡಿನಲ್ಲಿ ಕುತೂಹಲವನ್ನು ಬೆಳೆಸಿಕೊಂಡು ತಕ್ಕಷ್ಟು ತಿಳಿದಿದ್ದುದರಿಂದ ಎಡಿಸನ್ನನಿಗೆ ಇಪ್ಪತ್ತನೆ ವಯಸ್ಸಿನಲ್ಲಿ ಒಳ್ಳೆ ನೌಕರಿ ಸಿಕ್ಕಿತು. ನ್ಯೂಯಾರ್ಕ್ ನಗರದಲ್ಲಿದ್ದ ದೊಡ್ಡ ಟೆಲಿಗ್ರಾಫ್ ಕಂಪನಿಯವ ರಿಟ್ಟಿದ್ದ ಯಂತ್ರಗಳು ಆಕಸ್ಮಿಕವಾಗಿ ಕೆಟ್ಟುಹೋದವು; ಎಡಿಸನ್ ನೌಕರಿ ಗಾಗಿ ಹೊಂಚುತ್ತಿದ್ದ ಸಮಯ. ಯಂತ್ರಗಳು ಎಲ್ಲಿ ಕೆಟ್ಟಿವೆಯೆಂಬುದನ್ನು ಎಡಿಸನ್ ಬೇಗನೆ ಕಂಡು ಸರಿಪಡಿಸಿದನು. ಕಂಪನಿಯವರು ತಕ್ಷಣವೇ ಅವನಿಗೊಂದು ಹುದ್ದೆಯನ್ನು ಗೊತ್ತುಮಾಡಿದರು. ಆದರೆ ಎಡಿಸನ್ನಿಗೆ ಕೇವಲ ಧನಾರ್ಜನೆಯ ಆಸೆ ಇರಲಿಲ್ಲ. ತಂತ್ರೀವಾರ್ತೆಗಳ ಏರ್ಪಾಟಿನಲ್ಲಿ ಹೊಸ ಉಪಾಯಗಳನ್ನೂ ಪರೀಕ್ಷೆಗಳನ್ನೂ ಅವಿರತನಾಗಿ ಯೋಚಿಸುತ್ತಲೂ ನಡೆಸು ತ್ತಲೂ ಇದ್ದನು. ಹಾಗೆ ರೂಪಗೊಂಡ ಒಂದು ಉಪಾಯಕಲ್ಪನೆಯಿಂದ ಕಂಪನಿಗೆ ಬಹಳ ಲಾಭವಾಯಿತು; ಆಗ ಕಂಪನಿಯವರು ಎಡಿಸನ್ನಿಗೆ ಯಥೇಷ್ಟವಾಗಿ ಹಣಕೊಡಿಸಿದರು. ಆ ಹಣವನ್ನಿಟ್ಟು ಎಡಿಸನ್ ಸ್ವಂತವಾಗಿ ಪ್ರಯೋಗಶಾಲೆಯನ್ನು ಕಟ್ಟಿಕೊಂಡನು. ಆಗ ತನಗೆ ಇಷ್ಟ ತೋರಿದ ಪರೀಕ್ಷೆಗಳೆಲ್ಲವನ್ನೂ ನಡೆಸಬಹುದಾಯಿತು. ಏಕೆಂದರೆ ಸಣ್ಣದಾದರೂ ಆ ಪ್ರಯೋಗಶಾಲೆಯಲ್ಲಿ ಎಡಿಸನ್ ಸರ್ವಸ್ವತಂತ್ರ.


ಡ್ಯೂಪ್ಲಿಕೇಟರನ್ನು ಅಥವಾ ಒಂದು ಸಾರಿ ಬರೆದುದರ ಪ್ರತಿಗಳನ್ನೆತ್ತುವ ಕೈಯಚ್ಚಿನ ಯಂತ್ರವನ್ನು ತಯಾರಿಸಿದ ತರುವಾಯ ಎಡಿಸನ್ ಟೈಪ್ ರೈಟರ್ ಯಂತ್ರದಲ್ಲಿ ಹೊಸ ಏರ್ಪಾಡುಗಳನ್ನು ಹೊಂದಿಸಿ ಉತ್ತಮಗೊಳಿ ಸಿದನು. ಆ ತರುವಾಯ ಟೆಲಿಫೋನ್ ಏರ್ಪಾಡಿನಲ್ಲಿ ಎಡಿಸನ್ನನ ಬುದ್ಧಿ ಹೊರಟಿತು. ಗ್ರಹಾಂ ಬೆಲ್ (Graham Bell) ಎಂಬಾತನು ಅದನ್ನು ಮೊದಲು ರಚಿಸಿದ್ದವನು. ಆದರೆ ಅದರಲ್ಲಿ ಎಡಿಸನ್ ನಡೆಸಿದ ಹೊಸ ಉಪಾಯ ಗಳು ಅನೇಕ. ಟೆಲಿಫೋನ್ ಎಂಬುದು ಈಗ ಎಲ್ಲ ದೇಶಗಳಲ್ಲಿಯೂ ಬಳಕೆ

ಯಾಗಿದೆ. ಅನಂತರ ಎಡಿಸನ್ ರಚಿಸಿದ್ದು ಫೋನೊಗ್ರಾಫ್; ಆಡಿದ ಮಾತುಗಳನ್ನೂ ಹಾಡಿದ ಹಾಡುಗಳನ್ನೂ ಆಕರ್ಷಣ ಅಥವಾ ಗ್ರಹಣ ಮಾಡುವ ಯಂತ್ರ. ಅದರಿಂದಲೇ ಸಾಧ್ಯವಾಯಿತು ಗ್ರಾಮಫೋನ್ ತಯಾರಿ.

ಆ ಬಳಿಕ ಆತನು ಕಲ್ಪಿಸಿಕೊಟ್ಟುದು ಇನ್ನೂ ಮುಖ್ಯ. ವಿದ್ಯುದ್ದೀಪಗಳ ನಿರ್ಮಾಣರೀತಿ ಹೇಗೆಂದು ಎಡಿಸನ್ನನ ಪ್ರಯತ್ನವು ನಡೆಯಿತು. ವಿದ್ಯುತ್ಪ್ರಕಾಶವೇನೋ ತಿಳಿದಿತ್ತು; ಸ್ವಲ್ಪಸ್ವಲ್ಪವಾಗಿ ಆ ಪ್ರಕಾಶವನ್ನು ಉಪಯೋಗಿಸುತ್ತಲೂ ಇದ್ದರು. ಆದರೆ ದೀಪವನ್ನಾಗಿ ಬೆಳಗಿಸಲು ತಕ್ಕ ತಂತು ವಿನ ಪತ್ತೆಯಾಗಿರಲಿಲ್ಲ. ಅದಕ್ಕಾಗಿ ಸಾವಿರಾರು ಪರೀಕ್ಷೆಗಳನ್ನು ನಡೆಸಿ ಕಡೆಗೆ ಅದನ್ನು ಎಡಿಸನ್ ಸಾಧಿಸಿದನು. ಪರಿಣಾಮವಾಗಿ ವಿದ್ಯುತ್ಪ್ರವಾಹವಿರುವೆಡೆಯಲ್ಲೆಲ್ಲ ವಿದ್ಯುದ್ದೀಪಗಳು ಸಿದ್ಧವಾದವು.

ವಿದ್ಯುದ್ದೀಪಗಳನ್ನೊದಗಿಸಿಕೊಡುವ ಏರ್ಪಾಡಿನಲ್ಲಿ ಯಂತ್ರಭಾಗಗಳನ್ನು ಎಡಿಸನ್ ಉತ್ತಮಗೊಳಿಸಿದನು. ಉತ್ತಮವಾದ ಜನರೇಟರುಗಳನ್ನೂ ಹೊಸ ರೀತಿಯ ಡೈನಮೊವನ್ನೂ ತಟಿತ್ಪ್ರವಾಹವೆಷ್ಟೆಂದು ಕಾಣಿಸಿಕೊಡುವ ಸಾಮಗ್ರಿಯನ್ನೂ ರಚಿಸಿಕೊಟ್ಟನು.

ಅಲ್ಲಿಗೇ ವಿಶ್ರಾಂತನಾಗಲಿಲ್ಲ. ಸಿನೆಮಾ ಸೃಷ್ಟಿಗೆ ಮೂಲವಾದ ಕೈನೆಟೋಸ್ಕೋಪ್ ಎಂಬುದನ್ನು ಹೊಂದಿಸಿದನು. ೧೯೧೨ರಲ್ಲಿ ಫೋನೊಗ್ರಾಫನ್ನು ಕ್ಯಾಮೆರಕ್ಕೆ ಜೋಡಿಸಿ ಕೈನೆಟೊಫೋನ್ ತಯಾರಿಸಿದನು. ಅದರಿಂದ ವಾಕ್ಚಿತ್ರಗಳು ಸಾಧ್ಯವಾದವು.


ಫೋನೊಗ್ರಾಫಿನೊಡನೆ ಎಡಿಸನ್

ಮೊದಲನೆ ಘೋರ ಯುದ್ಧವು ನಡೆದಾಗ ಅಮೆರಿಕದ ಸರ್ಕಾರದವರು ಆತನನ್ನಿಟ್ಟುಕೊಂಡರು. ಯುದ್ಧವೇಳೆಯಲ್ಲಿ ಉಪಯುಕ್ತವಾಗತಕ್ಕ ಉಪಾಯಗಳೆಷ್ಟನ್ನೋ ಆತನು ಹೊಂದಿಸಿಕೊಟ್ಟನು. ಹಡಗನ್ನು ನಾಶಗೊಳಿಸಲು ಜಲಾಂತರ್ಗಾಮಿಯಾಗಿ ಬರುವ ಟಾರ್ಪಿಡೊ ಉಂಟಷ್ಟೆ. ಮೂರು ಸಾವಿರ ಗಜ ದೂರದಲ್ಲಿ ಬರುವ ಟಾರ್ಪಿಡೋವನ್ನು

ಶಬ್ದಗ್ರಹಣದಿಂದ ಪತ್ತೆಮಾಡುವ ಯಂತ್ರಸಾಮಗ್ರಿಯನ್ನು ಎಡಿಸನ್ ರಚಿಸಿದನು.

ತನ್ನ ಆಯುಷ್ಯದಲ್ಲಿ ಆತನು ಸ್ವಂತವಾಗಿ ರಚಿಸಿ ಪೇಟೆಂಟ್ ಕಚೇರಿಯಲ್ಲಿ ದಾಖಲೆ ಮಾಡಿಸಿದ ಉಪಾಯಗಳು ೧,೩೦೦! ಮೋಟಾರ್‌ಕಾರುಗಳ ತಯಾರಿಯಲ್ಲಿ ಪ್ರಸಿದ್ಧನಾದ **ಹೆನ್ರಿ ಫೋರ್ಡ್** (Henry Ford) ಎಂಬಾತನಿಗೂ ಎಡಿಸನ್ನನಿಗೂ ಬಹಳ ಸ್ನೇಹ. ೧೯೩೧ರಲ್ಲಿ ಎಡಿಸನ್ ಕಾಲವಶನಾದಾಗ 'ಆತನು ಪಡೆದಿದ್ದ ಜ್ಞಾನರಾಶಿ ವಿಶ್ವವ್ಯಾಪಿಯೆಂದು ಹೇಳಬಹುದಾಗಿತ್ತು. ಕೇವಲ ವಿದ್ಯುಚ್ಛಾಸ್ತ್ರಜ್ಞರ ರಾಶಿಯಲ್ಲಿಯೋ ರಸತಂತ್ರಜ್ಞರ ರಾಶಿಯಲ್ಲಿಯೋ ಆತನನ್ನು ಸೇರಿಸಲಾಗುವುದಿಲ್ಲ. ಆತನನ್ನು ಯಾವ ಒಂದು ವರ್ಗದಲ್ಲಿಯೂ ಸೇರಿಸಲಾಗುವುದಿಲ್ಲ. ಶಾಸ್ತ್ರಜ್ಞರ ಎಲ್ಲ ರಾಶಿಗಳಲ್ಲಿಯೂ ಗಣ್ಯನಾಗತಕ್ಕವನಾತನು. ಆತನನ್ನು ನಾನು ಹೆಚ್ಚು ಹೆಚ್ಚಾಗಿ ತಿಳಿದಂತೆಲ್ಲ ಲೋಕಸೇವಕರಲ್ಲಿಯೂ ಮಾನವರಲ್ಲಿಯೂ ಆತನ ಮಹತ್ವ ಹೆಚ್ಚು ಹೆಚ್ಚಾಗಿಯೇ ನನಗೆ ಕಾಣುತ್ತದೆ.'

ಎಂಬುದಾಗಿ ಫೋರ್ಡ್ ಕೊಂಡಾಡಿದನು. ಎಷ್ಟು ಗಂಭೀರವಾದ ಚರಮಶ್ಲಾಘನೆ!

ಮುಖ್ಯಪ್ರಶ್ನೆ ೧೦೦: ನಮ್ಮ ಕಾಲದಲ್ಲಿ ಆಚರಣೆಗೆ ಬಂದಿರುವ ಅತಿನೂತನನಾದ ಉಪಾಯಗಳಲ್ಲಿ ಮುಖ್ಯವಾದವು ಯಾವುವು? ಶಾಸ್ತ್ರಜ್ಞಾನದಲ್ಲಿ ಶಿಷ್ಟಿಬೆಳೆಯಲು ಪರಿಸ್ಥಿತಿ ಹೇಗಿರಬೇಕು?

ಅತಿನೂತನವಾದುದಲ್ಲದೆ ಕೆಲವು ರೀತಿಗಳಲ್ಲಿ ಅತ್ಯದ್ಭುತವಾದುದು ರೇಡಿಯೊ. ಒಂದು ಸ್ವಿಚ್ಚನ್ನೊತ್ತಿ ಒಂದು ಬಿಲ್ಲೆಯನ್ನು ತಿರುಗಿಸಿದರೆ ಪೃಥ್ವಿಯ ನಾನಾ ಭಾಗಗಳಿಂದ ಧ್ವನಿಯು ಕೇಳಿಬರುವುದು. ೧೮೬೪ರಲ್ಲಿ **ಕ್ಲಾರ್ಕ್ ಮ್ಯಾಕ್ಸ್‌ವೆಲ್** (Clerk Maxwell) ಎಂಬಾತನು ತಟಿತ್ತರಂಗಳನ್ನು ಪತ್ತೆಮಾಡಿದಾರಭ್ಯ ಅನೇಕರ ಬುದ್ಧಿಪ್ರಯತ್ನಗಳು ಇದರ ಸಾಧನೆಯಲ್ಲಿ ಕೂಡಿಬಂದವು. ಆದರೆ ರೇಡಿಯೋ ಪೂರ್ಣರೂಪವನ್ನು ತಾಳುವುದರಲ್ಲಿ ಇತರರೆಲ್ಲರಿಗಿಂತಲೂ **ಮಾರ್ಕೋನಿ** (Marconi) ಎಂಬ ಇಟಲಿ ದೇಶದವನಿಗೆ ಹೆಚ್ಚು ಯಶಸ್ಸು.

ಮಾರ್ಕೋನಿ ೧೮೭೪ರಲ್ಲಿ ಹುಟ್ಟಿದನು. ತನ್ನ ಇಪ್ಪತ್ತೊಂದನೆ ವಯಸ್ಸಿನಲ್ಲೇ ಆತನು ವೈರ್ಲೆಸ್ ಸಾಮಗ್ರಿಯನ್ನು ಹೊಂದಿಸಿದನು. ಮುಂದಿನ ವರ್ಷ ಇಂಗ್ಲಂಡಿಗೆ ಹೊರಟವನು ತಂತಿಯೇ ಇಲ್ಲದೆ ಸಂದೇಶಗಳನ್ನು ಕಳು

ಹಿಸುವುದಕ್ಕೂ ತರಿಸಿಕೊಳ್ಳುವುದಕ್ಕೂ ಉದ್ಯಮಿಸಿ ಹತ್ತುಮೈಲಿ ದೂರವನ್ನು ಸಾಧಿಸಿದನು. ೧೮೯೮ರಲ್ಲಿ ಇಂಗ್ಲಂಡಿನಿಂದ ಫ್ರಾನ್ಸಿಗೆ ಸಂದೇಶಗಳು ತಂತಿಯ ಏರ್ಪಾಡಿಲ್ಲದೆ ಸಾಗಿದವು; ೧೯೦೧ರಲ್ಲಿ ಇಂಗ್ಲಂಡಿನಿಂದ ಅಮೆರಿಕಕ್ಕೆ ವೈರ್ಲೆಸ್ ಮೂಲಕ ಸಮಾಚಾರವನ್ನು ಕಳುಹಿಸಿ ತರಿಸಿಕೊಂಡುದಾಯಿತು. ಸುಮಾರು ಆ ವೇಳೆಯಲ್ಲಿ ಒಬ್ಬಾನೊಬ್ಬ ಅಪರಾಧಿಯು ತಲೆತಪ್ಪಿಸಿಕೊಂಡು ಇಂಗ್ಲಂಡಿನಿಂದ ಅಮೆರಿಕಕ್ಕೆ ಹೋಗುವ ಹಡಗಿನಲ್ಲಿ ಸೇರಿಕೊಂಡಿದ್ದನು; ಹಡಗಿಗೆ ವೈರ್ಲೆಸ್ ಸಮಾಚಾರ ತಲಪಲು ಅವನನ್ನು ಬಂಧಿಸಿದ್ದಾಯಿತು. ಅಂದಿನಿಂದ ವೈರ್ಲೆಸ್ ಎಷ್ಟು ಪ್ರಯೋಜನಕಾರಿಯೆಂಬುದು ತಿಳಿಯಿತು.

ವಿಮಾನಸಾಹಸದ ವೃತ್ತಾಂತದಂತೆಯೇ ವೈರ್ಲೆಸ್ ವೃತ್ತಾಂತವೂ ಕೂಡ. ಮೊದಲನೆ ಘೋರಯುದ್ಧದ ಸಮಯದಲ್ಲಿ ವೈರ್ಲೆಸ್ ಅತ್ಯುಪಯುಕ್ತವಾಗಿ ಕಂಡಿತು. ಯುದ್ಧಮುಗಿದ ಕೂಡಲೇ ೧೯೧೯ರಲ್ಲಿ ಇಂಗ್ಲಂಡಿನಲ್ಲಿ **ಚೆಲ್ಮ್ಸ್‌ಫರ್ಡ್** (Chelmsford) ಎಂಬೆಡೆಯಲ್ಲಿ ಮಾರ್ಕೋನಿ ಬ್ರಾಡ್ ಕ್ಯಾಸ್ಟಿಂಗ್ ಸ್ಟೇಷನ್ ಅಥವಾ ಪ್ರಚಾರಕೇಂದ್ರವನ್ನು ಸ್ಥಾಪಿಸಿದನು. ಪೃಥ್ವಿಗೆಲ್ಲ ಅದೇ ಮೊದಲನೆಯದು. ಮಾರ್ಕೋನಿ ೧೯೩೭ರಲ್ಲಿ ತೀರಿ ಹೋದನು.

ಇಲ್ಲಿಗೆ ಶಾಸ್ತ್ರಜ್ಞಾನ ಸಾಹಸವೆಲ್ಲವೂ ಮುಗಿದುಹೋಯಿತೇ? ಇನ್ನೂ ಸಾಧಿಸತಕ್ಕ ರಾಶಿಯಿಲ್ಲವೇ? ಯಥೇಷ್ಟವಾಗಿದೆ. ತಿಳಿಯಬೇಕಾದ ಅದ್ಭುತ ತತ್ತ್ವಗಳು ಪ್ರಪಂಚದಲ್ಲಿ ಎಷ್ಟೋ ಇವೆ. ಅವೆಲ್ಲವೂ ಮುಂದಿನ ಸಾಹಸಿಗಳ ಭಾಗ್ಯಕ್ಕಾಗಿವೆ. ಆದ್ದರಿಂದ ಅನುಕೂಲಕೊಡುವ ದೇಶಗಳಲ್ಲಿ ತಮ್ಮ ಆಯುಷ್ಯವೆಲ್ಲವನ್ನೂ ಶಾಸ್ತ್ರಜ್ಞಾನಸಾಧನೆಗಾಗಿ ಅರ್ಪಿಸುವ ನಿಪುಣರು ಹೆಚ್ಚುತ್ತಿದ್ದಾರೆ. ಮುಂದಿನ ಕಾಲದಲ್ಲಿ ಎಂತಹ ಜ್ಞಾನಸಿದ್ಧಿಯಾದೀತೋ ಎಂತಹ ಉಪಾಯ ನಿರ್ಮಾಣಗಳು ರೂಪವೆತ್ತಿಯಾವೋ ಹೇಳಲಸಾಧ್ಯ. ಸಮುದ್ರದ ಉಬ್ಬರ ವಿಳಿತಗಳ ಶಕ್ತಿಯನ್ನು ಪಯೋಗಿಸಿಕೊಳ್ಳುವ ವಿಧಾನವನ್ನು ಇನ್ನೂ ಗೊತ್ತು ಪಡಿಸಿಲ್ಲ. ಬಲವತ್ತರ ಮಸೂರಗಳ ದ್ವಾರಾ ಸೂರ್ಯರಶ್ಮಿಯ ಉಷ್ಣವನ್ನು ಪ್ರಾಯಶಃ ವಶಪಡಿಸಿಕೊಳ್ಳುವುದೂ ಆಗಬಹುದು.

ಪ್ರಪಂಚದ ವಸ್ತುರಾಶಿಗೆಲ್ಲ ಮೂಲಭೂತವಾದ ಧಾತುವರ್ಗವನ್ನು ಪರೀಕ್ಷಿಸುವುದರಲ್ಲಿ ಇತ್ತೀಚೆಗೆ ಅಸಾಧಾರಣವಾದ ಉದ್ಯಮವು ನಡೆದಿದೆ. ೧೯೧೯ರಲ್ಲಿ ಕೇಂಬ್ರಿಡ್ಜಿನಲ್ಲಿ **ಲಾರ್ಡ್ ರುದರ್ಫರ್ಡ್** (Lord Rutherford) ಎಂಬಾತನು ಸಾಧಿಸಿದ ಪರಮಾಣುಭೇದನ (splitting the atom) ಕಾರ್ಯವು ತತ್ಸಂಬಂಧವಾದುದು. ಪರಮಾಣುಭೇದನಕ್ರಿಯೆಯು ತೃಪ್ತಿಕರ

ವಾಗಿ ನಡೆದಲ್ಲಿ ಪರಮಾಣುವನ್ನು ಸಂಘಟಿಸಿಟ್ಟಿರುವ ವಿದ್ಯುದ್ರಾಶಿಯು ಬಿಡು ಗಡೆಯಾದೀತೆಂದು ವಿದ್ವಾಂಸರ ಊಹೆ. ಹಾಗಾದರೆ ಕಲ್ಲಿದ್ದಲು ಪೆಟ್ರೋಲು ಗಳಿಗೆ ಬದಲಾಗಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳಲಾದೀತು. ಎಂದಾದರೂ ಗಣಿಗಳಲ್ಲಿ ದೊರಕುವ ಕಲ್ಲಿದ್ದಲು ಪೆಟ್ರೋಲುಗಳು ಮುಗಿದು ಹೋಗಬೇಕಲ್ಲವೆ?

ನಮ್ಮ ಜೀವಿತಕಾಲದಲ್ಲಿಯೇ ನಡೆಯುತ್ತಿರುವ ಜ್ಞಾನಸಾಧನೆಯ ಅದ್ಭುತ ಗಳಲ್ಲಿ ಮತ್ತೊಂದು ಗಮನಾರ್ಹವಾದುದು. ಬ್ರಹ್ಮಾಂಡದಿಂದ ರಶ್ಮಿ ಹೊರಟು ಆ ಕಿರಣಗಳು ಈ ನಮ್ಮ ಪೃಥ್ವಿಯನ್ನು ಸೋಕಿ ನಮ್ಮ ಸ್ಥಿತಿಗತಿಗಳಲ್ಲಿ ಪ್ರಭಾವಬೀರುತ್ತವೆ. ಸೌರವ್ಯೂಹಕ್ಕೂ ದೂರದಲ್ಲಿರುವ ಮಂಡಲಗಳಿಂದ ಬರುವ ಆ ಕಿರಣಗಳ ಪರೀಕ್ಷೆ ನಡೆಸುವುದರಲ್ಲಿ ಅಮೆರಿಕದವನಾದ **ರಾಬರ್ಟ್ ಮಿಲ್ಲಿಕನ್** **(Robert Millikan)** ಎಂಬಾತನು ಪ್ರಾಯಶಃ ಅಗ್ರಗಣ್ಯ. ಪರಮಾಣು ಪರೀಕ್ಷೆಯಿಂದ ಬ್ರಹ್ಮಾಂಡಕಿರಣಗಳ ಪರೀಕ್ಷೆಯವರೆಗೂ ಶಾಸ್ತ್ರಸಾಧನೆ ವ್ಯಾಪಿಸಿದೆ. ತಾಳ್ಮೆಯಿಂದಲೂ ಶ್ರದ್ಧೆಯಿಂದಲೂ ನಿಷ್ಪಕ್ಷಪಾತರೀತಿಯಲ್ಲಿ ಸ್ಥಿತಿಯನ್ನು ಪರೀಕ್ಷಿಸಿ, ಘಟನೆಗಳನ್ನು ಸಂಗ್ರಹಿಸಿ, ಪರಿಷ್ಕರಿಸಿದ ತರುವಾಯ ಅನುಮಾನವಿಧಾನದಿಂದ ತತ್ತ್ವವೇನೆಂದು ಊಹಾಪೋಹಗಳನ್ನು ಕಟ್ಟುವರು; ಹಾಗೆ ಕಟ್ಟಿದ ಊಹೆಯನ್ನು ಸಿದ್ಧಾಂತವೆಂದು ಕರೆಯುವುದಿಲ್ಲ. ಇನ್ನೂ ಮುಂದೆ ಸಂಗ್ರಹವಾಗುವ ಘಟನೆಗಳಿಗೆ ಆ ಊಹೆ ಸಮಾಧಾನವಾಗಿ ಕಂಡು ಬಂದರೆ ಸಿದ್ಧಾಂತವೆನಿಸೀತು; ಹೊಂದಿಕೆ ಸ್ವಲ್ಪ ತಪ್ಪಿದಾಗ್ಗೂ ಆ ಊಹೆಯು ದುಷ್ಟವೆನಿಸಿ ತಿರಸ್ಕೃತವಾಗಬೇಕಾದೀತು. ಯಾವ ಶಂಕೆಸಂಶಯಗಳಿಗೂ ಆಸ್ಪದವಿಲ್ಲದಂತೆ ನಿರ್ವಂಚನೆಯಿಂದ ಘಟಿತಾಂಶಗಳನ್ನು ಸಂಗ್ರಹಿಸಿ ಅವು ಗಳಿಗನುಗುಣವಾಗಿ ಕಟ್ಟುವುದು ತಾತ್ಕಾಲಿಕವಾದ ಸಿದ್ಧಾಂತ ಮಾತ್ರ. ಪುನಃ ಪುನಃ ಕೂಲಂಕಷವಾದ ಪರೀಕ್ಷೆಗೊಪ್ಪಿದ ಹೊರತು ಅದನ್ನು ಭದ್ರ ವೆಂದೊಪ್ಪಲಾಗುವುದಿಲ್ಲ.

ಈ ರೀತಿಯಲ್ಲಿ ಬುದ್ಧಿಯ ವ್ಯವಸಾಯ ಪ್ರವೃತ್ತಿಗಳು ನಡೆಯುತ್ತಿದ್ದರೆ ಆ ಗತಿಯೂ ಶಾಸ್ತ್ರೀಯವೆನಿಸುವುದು. ಶಾಸ್ತ್ರಯೋಗ್ಯವಾದ ಮನಃಪರಿಣತಿ ಯೆಂಬುದು ಆಗಲೇ ಸಿದ್ಧವಾಗತಕ್ಕುದು. ಸತ್ಯಶೋಧಕರಿಗೆ ಅಥವಾ ಶಾಸ್ತ್ರ ಜ್ಞರಿಗೆ ಆ ಮನಃಪರಿಪಾಕವು ಅತ್ಯವಶ್ಯಕವಾದ ಭೂಷಣ. ಮಾನವ ರಾಶಿಯು ಸಾಧಿಸಿಕೊಂಡ ಸಂಸ್ಕೃತಿಗೆ ಅದೇ ಸಲ್ಲಕ್ಷಣ. ದುರಾಸೆಯನ್ನೋ ಅಸಹನವನ್ನೋ ಅಧಿಕಾರಮೋಹವನ್ನೋ ಬೆಳೆಸಿದಾಗ ಮಾನವ ಸಂಸ್ಕೃ ತಿಗೆ ಭೂಷಣವಾದ ಆ ಬುದ್ಧಿಶಿಸ್ತಿಯು ಮಲಿನವಾಗುತ್ತದೆ. ಅನೇಕವೇಳೆ

ಮಾನವ ಸಮೂಹಗಳವರು ತಮ್ಮ ದುರ್ವರ್ತನೆಯಿಂದ ಅದಕ್ಕೆ ಕಳಂಕವನ್ನೊಡ್ಡಿರುತ್ತಾರೆ. ಕೆಲವು ದೇಶಗಳಲ್ಲಿ ಶಾಸ್ತ್ರವೆಂಬುದನ್ನೇ ಅಂಗವಿಕಲಗೊಳಿಸಿರುತ್ತಾರೆ; ಅಲ್ಲಿ ಆಡಳಿತ ನಡೆಸುವವರಿಗೆ ನಿಷ್ಪಕ್ಷಪಾತರೀತಿಯಲ್ಲಿ ಸತ್ಯವನ್ನು ಸಾಧಿಸುವ ಧೈರ್ಯಸ್ಥೈರ್ಯಗಳು ಬೇಕಾಗಿಲ್ಲ. ಅಸತ್ಯವೆಂದೋ ಅಶುದ್ಧವೆಂದೋ ಕಂಡುಬಂದ ಅಂಶಗಳನ್ನು ಬೋಧಿಸಲೊಪ್ಪಲಾರದ ಶಾಸ್ತ್ರಜ್ಞರಿಗೆ ಬಹಿಷ್ಕಾರಪ್ರಾಪ್ತಿಯಾಗಿದೆ. ಮನಸ್ಸಿನ ಸ್ವಾತಂತ್ರ್ಯಕ್ಕೆ ಅವಕಾಶಕೊಡದ ದುಃಶ್ಚೇಷ್ಟೆಗಳು ಅವೆಲ್ಲ. ಆದರೆ ಮನಸ್ಸ್ವಾತಂತ್ರ್ಯಕ್ಕೆ ಅಡ್ಡಿಯನ್ನೊಡ್ಡದ ಹಲವು ದೇಶಗಳು ಇನ್ನೂ ಪೃಥ್ವಿಯಲ್ಲಿವೆ. ಆ ದೇಶಗಳಲ್ಲಿ ಶಾಸ್ತ್ರಜ್ಞರು ನಿರ್ಭೀತರಾಗಿ ತಮ್ಮ ಸಾಧನೆಯನ್ನು ಸ್ವತಂತ್ರರಾಗಿ ನಡೆಸಲು ಆಸ್ಪದವಿದೆ.

ಮನಸ್ಸಿನ ಸ್ವಾತಂತ್ರ್ಯವೇ ಜಗತ್ತಿನಲ್ಲೆಲ್ಲ ಅತಿಪ್ರಿಯವೂ ಅತ್ಯಮೂಲ್ಯವೂ ಆದುದು. ಬುದ್ಧಿಯನ್ನು ಬೆಳೆಸಿ ಸಹಜರೀತಿಯಲ್ಲಿ ಆಲೋಚನೆ ನಡೆಸುವುದಕ್ಕೂ ಆ ಆಲೋಚನೆಯನ್ನು ಪ್ರಕಾಶಪಡಿಸುವುದಕ್ಕೂ ಅಡ್ಡಿ ತೋರಿದರೆ ಮನುಷ್ಯನ ಮನುಷ್ಯತ್ವವೇ ನಾಶವಾದೀತು; ಸರ್ವಸಾಧನೆಗೂ ಮೂಲವಾದ ಕುತೂಹಲವು ಧ್ವಂಸವಾದೀತು. ಬುದ್ಧಿಯ ಕುತೂಹಲವನ್ನು ನೀಗಿದ ಬಳಿಕ ಮನಷ್ಯಪ್ರಾಣಿಯ ಶ್ರೇಷ್ಠತ್ವವು ಅಳಿದು ಮನುಷ್ಯರು ಮೃಗಗಳಂತೆ ಆದಾರು. ಕೇವಲ ಮಾಂಸರಕ್ತಗಳಿಂದ ಕೂಡಿದ ಪಿಂಡಗಳಾಗಿ ಜೀವಿಸಿದರೇನು, ಜೀವಿಸದಿದ್ದರೇನು?

ಅಭ್ಯಾಸಗಳು

೧. ಆಧುನಿಕಕಾಲದ ಶಾಸ್ತ್ರಸಾಧನೆಯಿಂದ ಲೋಕಕ್ಕೆ ಲಭಿಸಿರುವ ಸೌಖ್ಯಕ್ಕಿಂತ ದುಃಖವೇ ಹೆಚ್ಚಾಗಿದೆಯೆಂಬುದನ್ನು ಚರ್ಚಿಸಿ; ಅಥವಾ ಪ್ರಬಂಧ ಬರೆಯಿರಿ.

೨. ಲಿಸ್ಟರ್ ಮತ್ತು ಪ್ಯಾಸ್ಚೂರ್ ನಡೆಸಿದ ಮುಖ್ಯಸಾಧನೆಗಳಾವುವು?

೩. ಉಪಾಯನಿರ್ಮಾಣದಲ್ಲಿ ಪರಂಪರೆಯಾಗಿ ಪ್ರಾಪ್ತಿಯಾದ ಜ್ಞಾನದ ಸಹಾಯವಿರಬೇಕೆಂಬುದನ್ನು ಸ್ಪಷ್ಟಗೊಳಿಸಿ ಏರೂಪ್ಲೇನ್ ಸಾಧನೆಯನ್ನು ಅದಕ್ಕೆ ಉದಾಹರಣೆಯಾಗಿ ವಿವರಿಸಿ.

೪. ಎಡಿಸನ್ ನಿರ್ಮಿಸಿದ ಉಪಾಯಗಳಲ್ಲಿ ಯಾವುದು ಅತ್ಯಮೂಲ್ಯವೆಂದು ನಿಮಗೆ ತೋರುವುದು? ಏಕೆ?

೫, ಶಾಸ್ತ್ರವೃದ್ಧಿಗೆ ಸ್ಥಿತಿಗತಿಗಳು ಹೇಗಿರಬೇಕು? ಅವುಗಳನ್ನು ಹೇಗೆ ಹೊಂದಿಸಿಕೊಳ್ಳಬಹುದು?

೨೭ನೇ ಅಧ್ಯಾಯ

ಇಟಲಿ, ಜರ್ಮನಿ ಮತ್ತು ಜಪಾನ್ ದೇಶಗಳು

ಮುಖ್ಯಪ್ರಶ್ನೆ ೧೦೧: ಇಟಲಿ ರಾಷ್ಟ್ರವು ಐಕ್ಯಹೊಂದಿದುದು ಹೇಗೆ?

ಹಿಂದಿನ ಅಧ್ಯಾಯವೊಂದರಲ್ಲಿ ಲ್ಯಾಟಿನ್ ಅಮೆರಿಕದ ರಾಷ್ಟ್ರಗಳು ಸ್ವತಂತ್ರಗೊಂಡ ಸಂಗತಿಯು ಬಂದಿತ್ತು. ಜ್ಞಾಪಕವಿದೆಯಷ್ಟೆ! ಸುಮಾರು ಅದೇ ಕಾಲದಲ್ಲಿ ಗ್ರೀಸ್ ದೇಶವೆಂಬುದು ಪ್ರತ್ಯೇಕವಾಯಿತು. ಕಾನ್‌ಸ್ಟಾಂಟಿನೋಪಲ್ ನಗರವನ್ನು ೧೪೫೩ ರಲ್ಲಿ ವಶಮಾಡಿಕೊಂಡ ತುರುಷ್ಕರಿಗೆ ನೂರಾರುವರ್ಷ ಗ್ರೀಸ್ ಅಧೀನವಾಗಿತ್ತು. ೧೮೨೯ ರಲ್ಲಿ ಗ್ರೀಸ್ ದೇಶಸ್ಥರು ಫ್ರೆಂಚರಿಂದಲೂ ಬ್ರಿಟಿಷರಿಂದಲೂ ಸಹಾಯಪಡೆದು ಸ್ವತಂತ್ರರಾಗಲು ಉದ್ಯಮಿಸಿದರು. ತುರುಷ್ಕರು ಸೋತರು.

ಆ ವೇಳೆಗೆ ವಾಲ್ಟೇರ್ ರೂಸೋ ಮುಂತಾದವರ ಪ್ರಭಾವವೆಲ್ಲೆಲ್ಲಿಯೂ ಹರಡಿದ್ದು, ಫ್ರಾನ್ಸ್ ಮಹಾಪಲ್ಲಟವು ಸಂಭವಿಸಿ, ಐರೋಪ್ಯ ಜನಸಾಮಾನ್ಯರಲ್ಲಿ **ರಾಷ್ಟ್ರಭಕ್ತಿ**ಯೆಂಬುದು ಉಜ್ಜ್ವಲಗೊಳ್ಳುತ್ತಿತ್ತು. ಆದಾಗ್ಗೂ ನಪೋಲಿಯನ್ ಸೋತ ತರುವಾಯ ಐರೋಪ್ಯ ಪ್ರಭುಗಳು ಹಿಂದಿನಂತೆ ದರ್ಪಿಷ್ಠರಾಗಿರುವ ಉದ್ದೇಶವನ್ನೇ ಬೆಳೆಸಿದರು. **ವಿಯೆನ್ನ** ನಗರದಲ್ಲಿ **ಕಾಂಗ್ರೆಸ್** (Congress) ಎಂಬ ಸಭೆಯಲ್ಲಿ ಸೇರಿದ ಪ್ರಭುಗಳೂ ರಾಯಭಾರಿಗಳೂ ಹಿಂದಿನ ಸ್ಥಿತಿಗತಿಗಳನ್ನೇ ರಕ್ಷಿಸುವ ಏರ್ಪಾಡನ್ನು ನಡೆಸಿದರು. ಆ ಏರ್ಪಾಡಿನಲ್ಲಿ ಅಸಮಾಧಾನಗೊಂಡ ಜನರಲ್ಲಿ ರಾಷ್ಟ್ರಭಕ್ತಿಯೆಂಬುದು ಪ್ರಬಲವಾಯಿತು.


ರಾಷ್ಟ್ರಭಕ್ತಿಯೆಂಬುದನ್ನು ಹಿಂದೊಂದುಸಾರಿ ವಿವರಿಸಿದೆವು. ಪ್ರಬಲವಾದ ಶತ್ರುವು ಕಾಣಿಸಿಕೊಂಡು ವಿಪತ್ತನ್ನೊಡ್ಡಿದಾಗ ಆತ್ಮರಕ್ಷಣೆಗಾಗಿ ದೇಶಸ್ಥರೆಲ್ಲರೂ ಒಟ್ಟುಗೂಡಿ ಉದ್ಯಮಿಸಿದ ಸಂದರ್ಭದಲ್ಲಿ ಒಂದುಬಗೆಯ ರಾಷ್ಟ್ರಭಕ್ತಿ ಕಂಡಿತು. ಅಂತಹ ಸಂದರ್ಭಗಳಲ್ಲಿ ರಾಜರು ಬಲಗೊಂಡು ಯೂರೋಪಿನಲ್ಲಿ ಪ್ರತ್ಯೇಕರಾಜ್ಯಗಳನ್ನು ಕಟ್ಟಿಕೊಂಡರು. ಸ್ಪೆಯ್ನ್, ಫ್ರಾನ್ಸ್ ಸ್ವಿಟ್ಸರ್ಲಂಡ್‌ಗಳಲ್ಲಿಯೂ ಆ ತರುವಾಯ ಇಂಗ್ಲಂಡ್, ಹಾಲಂಡ್, ರಷ್ಯಗಳಲ್ಲಿಯೂ ಆ ರೀತಿ ಸಂಭವಿಸಿದ್ದನ್ನು ಹಿಂದೆಯೇ ತಿಳಿದೆವು. ಇಟಲಿ ಮತ್ತು ಜರ್ಮನಿ ದೇಶಗಳು ಹಿಂದುಳಿದುದೇಕೆಂಬುದನ್ನೂ ಆಗಲೇ ಕಂಡೆವು.

ವಿಯೆನ್ನ ಕಾಂಗ್ರೆಸ್ ನಿಶ್ಚಯಮಾಡಿದಂತೆ ಇಟಲಿಯಲ್ಲಿ ಅನೇಕ ಸಣ್ಣ ಪ್ರಭುಗಳ ಪುಟ್ಟರಾಜ್ಯಗಳು ಪುನಃ ಸ್ಥಾಪಿತವಾದುವು. ಆ ಪ್ರಭುಗಳೋ ಜನರಿಂದ ತೆರಿಗೆಯನ್ನು ಸುಲಿದು ತಮ್ಮ ಅರಮನೆಗಳನ್ನು ಕಟ್ಟಿಕೊಳ್ಳುತ್ತಲೂ ಊಳಿಗದವರಿಗೆ ಅಲಂಕಾರವಸ್ತ್ರಭೂಷಣಗಳನ್ನು ತೊಡಿಸುತ್ತಲೂ ಇದ್ದು ಜನರ ಸುಖದುಃಖಗಳನ್ನು ಗಮನಿಸದೆ ಇದ್ದುಬಿಟ್ಟರು. ಜನರ ಮನಸ್ಸಿನಲ್ಲಿ ಅಸಮಾಧಾನ ಬೆಳೆಯಿತು. ಅಂತಹ ಸ್ಥಿತಿಯಲ್ಲಿ ಇಟಲಿಯಲ್ಲಿ **ಮಡ್ಸೀನಿ** (Mazzini) ಎಂಬ ಧರ್ಮಜ್ಞನು ಜನಾಧಿಕಾರವನ್ನು ವಿವರಿಸಿ ಪುಸ್ತಕಗಳನ್ನೂ ಪ್ರಬಂಧಗಳನ್ನೂ ಬರೆಯತೊಡಗಿದನು; ಗಡೀಪಾರು ಶಿಕ್ಷೆಯಾಯಿತು. ೧೮೩೪ರಲ್ಲಿ ರಾಷ್ಟ್ರಪಲ್ಲಟ ನಡೆಸುವ ಉದ್ದೇಶದಿಂದ ಉತ್ಸಾಹಿಗಳ ಕೂಟವನ್ನು ಕಟ್ಟಿ ಜೆನೋವ (Genoa) ಪಟ್ಟಣದಲ್ಲಿದ್ದ ಬಂದೂಕು ಮದ್ದುಗಳ ಉಗ್ರಾಣವನ್ನು ಸಾಧಿಸಲು ಪ್ರಯತ್ನಪಟ್ಟನು. ಯಾರೋದ್ರೋಹಿ ಸಮಯದಲ್ಲಿ ಮೋಸಮಾಡಲು ಆ ಪ್ರಯತ್ನ ಹಾಳಾಗಿ ಮಡ್ಸೀನಿ ದೇಶವನ್ನೇ ಬಿಟ್ಟೋಡಬೇಕಾಯಿತು. ಆ ಪ್ರಯತ್ನದಲ್ಲಿ ಸೇರಿಕೊಂಡಿದ್ದ ತರುಣನಾವಿಕನಾದ **ಗರಿಬಾಲ್ಡಿ** (Garibaldi) ಎಂಬಾತನೂ ಪಲಾಯನಮಾಡಬೇಕಾಯಿತು.

ಮಹೋತ್ಸಾಹಶಾಲಿ ಗರಿಬಾಲ್ಡಿ. ಹದಿನಾಲ್ಕು ವರ್ಷಕಾಲ ದಕ್ಷಿಣ ಅಮೆರಿಕದಲ್ಲಿದ್ದುಕೊಂಡು ಅಲ್ಲಿ ನಡೆಯುತ್ತಿದ್ದ ರಾಷ್ಟ್ರಪಲ್ಲಟಗಳಲ್ಲಿ ಸೇರಿಕೊಂಡು ಅಸಾಮಾನ್ಯ ಅನುಭವವನ್ನು ಸಂಪಾದಿಸಿಕೊಂಡನು. ೧೮೪೮ರಲ್ಲಿ ಸ್ವದೇಶಕ್ಕೆ ಹಿಂತಿರುಗಿಬಂದನು. ಆಗ ಸಾರ್ಡಿನಿಯದ ಪ್ರಭುವೆನಿಸಿದ್ದ ಇಟಾಲಿಯನ್ ರಾಜನು ಅನ್ಯದೇಶೀಯರನ್ನು ಪ್ರತಿಭಟಿಸುತ್ತಿದ್ದ ಸಮಯ. ಗರಿಬಾಲ್ಡಿ ಆತನನ್ನು ಸೇರಿ ತನ್ನ ದೇಶದಲ್ಲಿ ಪರದೇಶಿಗಳಿಗೆ ಅವಕಾಶವಿಲ್ಲದಂತೆ ಮಾಡಿಕೊಳ್ಳಲು ಯತ್ನಿಸಿದನು. ಯತ್ನವು ವ್ಯರ್ಥವಾಯಿತು. ಪುನಃ ಪಲಾಯನ ಮಾಡಬೇಕಾಯಿತು. ಹತ್ತುವರ್ಷಕಾಲವನ್ನು ಗರಿಬಾಲ್ಡಿ ಅಮೆರಿಕದಲ್ಲಿ ಕಳೆದನು. ಅಷ್ಟುಕಾಲವೂ ತನ್ನ ದೇಶಕ್ಕೆ ಎಂದುಮೋಕ್ಷವೆಂದು ತಪಿಸುತ್ತಲೇ ಇದ್ದನು.

ದೇಶಾಂತರ ಹೊರಟಿದ್ದ ಮಡ್ಸೀನಿಯು ಇತರರ ಸಹಾಯವನ್ನು ಗಳಿಸಿಕೊಳ್ಳುತ್ತಲಿದ್ದನು. ಇಟಾಲಿಯನ್ ಜನರು ಒಗ್ಗಟ್ಟಾಗಿ ತಮ್ಮ ದೇಶವನ್ನು ಏಕರಾಷ್ಟ್ರವನ್ನಾಗಿ ಕಟ್ಟಿಕೊಳ್ಳುವ ಉದ್ಯಮದಲ್ಲಿ ಇಂಗ್ಲೀಷರೂ ಫ್ರೆಂಚರೂ ಸಹಾನುಭೂತಿ ತೋರಿದ್ದರು. ೧೮೫೯ರಲ್ಲಿ ಗರಿಬಾಲ್ಡಿ ಹಿಂತಿರುಗಿ ಬಂದು ಕಡೆ ಪ್ರಯತ್ನವನ್ನು ನಡೆಸಿದನು. ಸಾವಿರಜನಮಾತ್ರ ಆತನನ್ನು ತಾವಾಗಿಯೇ ಸೇರಿದ್ದರು. ಅವರೊಡನೆ ಸಿಸಿಲಿಯಲ್ಲಿಳಿದು ದೇಶಭಕ್ತರನ್ನು ಸೈನ್ಯದಲ್ಲಿ

ಸೇರಿಸಿಕೊಳ್ಳಲು ತೊಡಗಿದನು. ತಾವಾಗಿ ತಾವೇ ಜನರು ಆತನನ್ನು ಸೇರಿದರು. ನೇಪಲ್ಸ್ ನಗರ ಆತನ ವಶವಾಯಿತು. ಇಟಲಿಯ ದಕ್ಷಿಣಾರ್ಧವೆಲ್ಲ ಆತನನ್ನು ಮೆಚ್ಚಿತು. ಆ ವೇಳೆಗೆ ಸಾರ್ಡಿನಿಯ ಪ್ರಭು ಉತ್ತರ ಭಾಗವನ್ನು ಗೆದ್ದುಕೊಂಡಿದ್ದನು. ೧೮೬೧ ರಲ್ಲಿ ಆತನು ಗರಿಬಾಲ್ಡಿಯೊಡನೆ ಸೇರಿಕೊಂಡನು. ಇಟಲಿಯೆಲ್ಲ ಒಟ್ಟುಗೂಡಿ ಏಕ ರಾಜ್ಯವಾಯಿತು; ಸಾರ್ಡಿನಿಯ ಪ್ರಭು ಇಟಲಿಯ ದೊರೆಯೆನಿಸಿದನು; ಜನರಿಗೆ ತಕ್ಕಮಟ್ಟಿಗೆ ಅಧಿಕಾರವೂ ಬಂತು; ಪರದೇಶಿಗಳು ಇಟಲಿಯನ್ನು ತ್ಯಜಿಸಿಬಿಟ್ಟರು.



ಗರಿಬಾಲ್ಡಿ

ರೋಮಕ ಸಾಮ್ರಾಜ್ಯ ಕಾಲಕ್ಕೂ ಇಲ್ಲಿಗೂ ಎಷ್ಟು ಅಂತರ! ಅಷ್ಟು ಕಾಲವೂ ಇಟಲಿ ಶತಚ್ಛಿದ್ರಗಳಾಗಿಯೇ ಇದ್ದು ಹತ್ತೊಂಭತ್ತನೆ ಶತಮಾನದಲ್ಲಿ ಮಾತ್ರ ರಾಷ್ಟ್ರಭಕ್ತರ ಸಾಹಸದಿಂದ ಉದ್ಧಾರವಾಯಿತು.

ಮಡ್ಸೀನಿ ಗರಿಬಾಲ್ಡಿ ಮುಂತಾದವರಿಂದ ಪ್ರೇರಿತರಾಗಿ ರಾಷ್ಟ್ರಕಟ್ಟಿಕೊಂಡ ಇಟಲಿ ದೇಶಸ್ಥರ ರಾಷ್ಟ್ರಭಕ್ತಿ ಬೇರೆ ತೆರನಾದುದಲ್ಲವೆ? ಹಿಂದಿನ ಕಾಲದಲ್ಲಿ ಸ್ವದೇಶವನ್ನು ಪರರಾಜರ ಆಕ್ರಮಣದಿಂದ ಉಳಿಸಿದ ರಾಷ್ಟ್ರಭಕ್ತಿಗೂ ಇಟಲಿಯವರ ರಾಷ್ಟ್ರಭಕ್ತಿಗೂ ಭೇದವಾದರೂ ಏನು? ದೇಶದ ಒಗ್ಗಟ್ಟನ್ನು ಸಾಧಿಸಿ, ದೇಶಸ್ಥರ ಬಾಂಧವ್ಯವನ್ನು ಬೆಳೆಸಿ, ಜನಾಧಿಕಾರವನ್ನು ಸ್ಥಾಪಿಸುವ ಉದ್ದೇಶ ಇಟಲಿಯವರದು. ಆದ್ದರಿಂದ ಅದನ್ನು ಪಲ್ಲಟಕಾರಕವಾದ ಉದ್ದೇಶವೆಂದು ಕರೆಯಬೇಕು. ಕೇವಲ ಆತ್ಮರಕ್ಷಣೆಗಲ್ಲದೆ ತಮ್ಮ ದೇಶದ ಪರಿಸ್ಥಿತಿಯನ್ನು ಮೇಲುಗೊಳಿಸುವುದಕ್ಕೂ ಪ್ರಯತ್ನ ನಡೆಯಿತು. ರಾಷ್ಟ್ರದ ಐಕ್ಯತಾಸಿದ್ಧಿಯಾಗಿ ದರ್ಪಿಷ್ಠ ಪ್ರಭುತ್ವ ಇನ್ನುಮುಂದೆ ನಡೆಯಲಾರದಂತೆ ನೆರವೇರಿದ ತರುವಾಯ ಇಟಲಿಯವರಿಗೆ ಸಮಾಧಾನವಾಯಿತು. ಆಗ ಪಲ್ಲಟ

ಗೊಳಿಸುವ ಉದ್ದೇಶವು ಮಾಯವಾಯಿತು. ಇಷ್ಟಾರ್ಥ ಸಿದ್ಧಿಯಾದ ಮೇಲೆ ಪಲ್ಲಟಪ್ರಯತ್ನವೇಕೆ? ದೊರಕಿಸಿಕೊಂಡ ಅಧಿಕಾರವನ್ನು ಅನುಭವಿಸಲು ಶಾಂತಿಬೇಕು. ಆಗ ಇಟಲಿಯವರು ಸ್ಥಿತಿಯನ್ನು ಕಾಪಾಡತಕ್ಕವರಾದರು, ವ್ಯತ್ಯಾಸಗೊಳಿಸತಕ್ಕವರಾಗಲಿಲ್ಲ. ಕುತೂಹಲಿಗಳಿಗೂ ಪದ್ಧತಿಭಕ್ತರಿಗೂ ಇದ್ದಂತಹ ವ್ಯತ್ಯಾಸವೇ ಇದೂ ಅಲ್ಲವೆ? ಪರಿಸ್ಥಿತಿ ಕೆಟ್ಟಾಗ ಪಲ್ಲಟಕಾರಕವಾದ ರಾಷ್ಟ್ರಭಕ್ತಿ ಬೆಳೆದು ಇಷ್ಟಸಿದ್ಧಿಯಾದಾಗ ಶಾಂತವಾಗುವುದು.

ಚೀನ, ಹಿಂದುಸ್ತಾನ್, ಸಿರಿಯ ಮತ್ತು ಈಜಿಪ್ಟ್ ದೇಶಗಳಲ್ಲಿ ಈಗ ಜನರನ್ನು ಉತ್ತೇಜನಗೊಳಿಸುತ್ತಿರುವುದು ಪಲ್ಲಟಕಾರಕವಾದ ರಾಷ್ಟ್ರಭಕ್ತಿ. ಇಷ್ಟಸಿದ್ಧಿಯಾದ ಮೇಲೆ ಆ ದೇಶಗಳಲ್ಲಿ ಶಾಂತಿ ನೆಲಸುವುದೋ ಇಲ್ಲವೋ ನಿಮ್ಮ ಆಯುಷ್ಯದಲ್ಲಿ ಕಾಣುವಿರಿ.

ಪ್ರಬಲತಮರಾಷ್ಟ್ರಗಳಲ್ಲಿ ಗಣ್ಯವಾದ ಜರ್ಮನಿಯನ್ನು ಕುರಿತು ಇದುವರೆಗೂ ನಾವು ಹೇಳಿಕೊಂಡುದು ಎಲ್ಲಿಯೋ ಅತ್ಯಲ್ಪ. ಜಪಾನ್ ವಿಷಯ ಪನ್ನೆತ್ತಲೇ ಇಲ್ಲ. ಇದಕ್ಕೆ ಕಾರಣವುಂಟು. ಆ ಎರಡು ರಾಷ್ಟ್ರಗಳಲ್ಲಿ ರಾಷ್ಟ್ರಭಕ್ತಿಯು ನೆಲೆಸಿದುದು ಇತ್ತೀಚೆಗೆ ಅಥವಾ ಕಟ್ಟಕಡೆಗೆ. ಅಷ್ಟೇ ಅಲ್ಲ. ಆ ರಾಷ್ಟ್ರಭಕ್ತಿ ಮತ್ತೊಂದು ತೆರನಾದುದು. ಅದನ್ನು ರಣಸನ್ನದ್ಧರಾಷ್ಟ್ರಭಕ್ತಿಯೆಂದು ಕರೆಯಬಹುದು. ತಮ್ಮ ರಾಷ್ಟ್ರದವರು ಇತರ ಎಲ್ಲ ರಾಷ್ಟ್ರಗಳವರಿಗಿಂತ ಹೆಚ್ಚಿಂದೂ ಆದ್ದರಿಂದ ಇತರ ದೇಶಗಳವರನ್ನು ಗೆದ್ದು ಅಧೀನಮಾಡಿಕೊಳ್ಳಲು ತಮಗೆ ಅಧಿಕಾರವುಂಟೆಂದೂ ಅವರ ಅಭಿಮತ. ಎಲ್ಲ ದೇಶಗಳಲ್ಲಿಯೂ ಆ ರೀತಿಯಲ್ಲಿ ಮನಸ್ಸನ್ನು ಬೆಳೆಸಿದವರು ಇದ್ದೇ ಇರುತ್ತಾರೆ. ಆದರೆ ಅಂತಹ ಮನೋವೃತ್ತಿಯುಳ್ಳವರ ಗುಂಪು ಪ್ರಬಲವಾಗಿ ದೇಶದ ಆಡಳಿತವನ್ನು ವಶಪಡಿಸಿಕೊಂಡಾಗ ರಣಸನ್ನದ್ಧರಾಷ್ಟ್ರ ರೂಪವೆತ್ತುವುದು. ಆ ರಾಷ್ಟ್ರದವರಿಗೆ ಇತರರನ್ನಾಕ್ರಮಿಸುವ ಉತ್ಸಾಹವು ತುಂಬಿರುವುದು. ನಮ್ಮ ಕಾಲದಲ್ಲಿ ನಿಮಗೆ ತಿಳಿದಿರುವಂತೆ ಮೂರು ರಾಷ್ಟ್ರಗಳಲ್ಲಿ—ಜರ್ಮನಿ, ಜಪಾನ್, ಇಟಲಿಗಳಲ್ಲಿ—ಈ ಬಗೆಯ ರಾಷ್ಟ್ರಭಕ್ತಿ ಬೆಳೆದಿರುವುದರಿಂದ ಜಗತ್ತಿನಲ್ಲೆಲ್ಲ ಶಾಂತಿ ಭಂಗವಾಗುತ್ತಲಿದೆ. (ಗರಿಬಾಲ್ಡಿ ತರುವಾಯ ಇಟಲಿಯಲ್ಲಿ ವ್ಯತ್ಯಾಸವಾಯಿತು. ಮುಸ್ಸೊಲೀನಿ ನಾಯಕತ್ವದಲ್ಲಿ ರಣಸನ್ನದ್ಧರಾಷ್ಟ್ರ ಹುಟ್ಟಿ ಬೆಳೆಯಿತು). ಇನ್ನು ನಾವು ಜರ್ಮನಿ ಮತ್ತು ಜಪಾನುಗಳ ವೃತ್ತಾಂತವನ್ನು ನೋಡೋಣ.

ಮುಖ್ಯಪ್ರಶ್ನೆ ೧೦೨ : ಜರ್ಮನಿ ರಾಷ್ಟ್ರವು ಒಟ್ಟುಗೂಡಿದ್ದು ಹೇಗೆ?

ಜರ್ಮನಿಗೆ ಏಕರಾಷ್ಟ್ರರೂಪ ಬಂದುದು **ಆಟೊ ಫಾನ್ ಬಿಸ್ಮಾರ್ಕ್** (Otto von Bismarck) ಎಂಬೊಬ್ಬ ರಾಷ್ಟ್ರಕರ್ತನ ಉದ್ಯಮದಿಂದ. ಆತನು ದಳಪತಿಯಾಗಿಯೂ ರಾಜನೀತಿಜ್ಞನಾಗಿಯೂ ಇದ್ದನು. ಒಂದುನೂರು ವರ್ಷಗಳ ಹಿಂದೆ ಜರ್ಮನಿಯೆಂಬುದೇ ಇರಲಿಲ್ಲ. ಅನೇಕಾನೇಕ ಸಣ್ಣ ಸಂಸ್ಥಾನಗಳು ಪ್ರತ್ಯೇಕ ಪ್ರತ್ಯೇಕವಾಗಿದ್ದವು; ಅವುಗಳಲ್ಲೆಲ್ಲ ಪ್ರಷ್ಯ ವೆಂಬುದು ಮುಖ್ಯವಾಗಿತ್ತು. (ಹಿಂದೆ ಫ್ರೆಂಚರನ್ನು ಸೋಲಿಸಲು ಆ ಪ್ರಷ್ಯದ ಸಹಾಯವನ್ನೇ ಹಿರೇಪಿಟ್ ಪಡೆದದ್ದು). ಪ್ರಷ್ಯದಲ್ಲಿ ಮೊದಲಿನಿಂದಲೂ ಭಾರಿ ಜಮೀನ್ದಾರರ ಗುಂಪೊಂದು ಪ್ರಬಲ; ಆ ಗುಂಪಿನವರು ಸ್ವಭಾವವಾಗಿ ದರ್ಪಿಷ್ಠರು, ಯುದ್ಧೋತ್ಸಾಹಿಗಳು; ಅಲ್ಲಿಯ ಕ್ಷತ್ರಿಯರೆನ್ನಬಹುದು. ಅವರನ್ನು **ಯೂಂಗ್ಕರ್** (Junkers) ಗುಂಪೆಂದೂ ಕರೆಯುತ್ತಾರೆ. ಬಿಸ್ಮಾರ್ಕ್ ಆ ಗುಂಪಿನವನು.

೧೮೬೨ರಲ್ಲಿ ಬಿಸ್ಮಾರ್ಕ್ ಪ್ರಷ್ಯದ ರಾಜನಿಗೆ ಮುಖ್ಯಮಂತ್ರಿಯಾದನು. ಕೂಡಲೇ ದೇಹದಾರ್ಢ್ಯವುಳ್ಳ ಪ್ರತಿನಿವಾಸಿಯೂ ಸೈನ್ಯಶಿಕ್ಷಣವನ್ನು ಬಲವಂತವಾಗಿ ಪಡೆಯುವ ಏರ್ಪಾಡನ್ನು ನಡೆಸಿದನು. ಅದರಿಂದ ಹಲಕೆಲವು ವರ್ಷಗಳಲ್ಲಿ ಪ್ರಷ್ಯದ ಸೈನ್ಯವು ಯೂರೋಪಿಗೆಲ್ಲ ಸುಶಿಕ್ಷಿತವೆನಿಸಿತು. ಆಗ ಬಿಸ್ಮಾರ್ಕ್ ಆಸ್ಟ್ರಿಯದೊಡನೆ ಯುದ್ಧವನ್ನು ಹೂಡಿದನು. ಅದುವರೆಗೂ ಜರ್ಮನ್ ಸಂಸ್ಥಾನಗಳಿಗೆಲ್ಲ ಆಸ್ಟ್ರಿಯದ ಪ್ರಭು ಒಡೆಯನೆನಿಸಿದ್ದನು. ಮೂರೇ ವಾರಗಳಲ್ಲಿ ಬಿಸ್ಮಾರ್ಕ್ ಆಸ್ಟ್ರಿಯದವರನ್ನು ಪೂರ್ತಿಯಾಗಿ ಸೋಲಿಸಿ ಇನ್ನು ಮುಂದೆ ಜರ್ಮನ್ ಸಂಸ್ಥಾನಗಳೆಲ್ಲಕ್ಕೂ ಪ್ರಷ್ಯವೇ ಮುಖ್ಯವಾಗಿರತಕ್ಕುದೆಂದೂ ಆಸ್ಟ್ರಿಯದ ಪ್ರಭು ದೂರವಾಗಿರತಕ್ಕುದೆಂದೂ ಕರಾರನ್ನು ಬರೆಸಿಬಿಟ್ಟನು. ಆ ತರುವಾಯ ಪ್ರಷ್ಯಕ್ಕೆ ಸಣ್ಣ ಪುಟ್ಟ ಸಂಸ್ಥಾನಗಳನ್ನು ಸೇರಿಸುವುದು ಸುಲಭವಾಯಿತು.

ಫ್ರಾನ್ಸಿನಲ್ಲಿ ಆಗ ಆಳುತ್ತಿದ್ದಾತನು **ಮೂರನೆ ನಪೋಲಿಯನ್** (Napoleon III) ಎಂಬ ಹೆಸರಿನ ಚಕ್ರವರ್ತಿ. ತನ್ನ ದೊಡ್ಡಪ್ಪನಾದ ಹಿರೇ ನಪೋಲಿಯನ್ ಅತಿ ಪ್ರಚಂಡನಾಗಿದ್ದಂತೆ ತಾನೂ ಇರಬೇಕೆಂಬ ಅಭಿಲಾಷೆಯುಳ್ಳವನು; ಪ್ರಷ್ಯದೊಡನೆ ಯುದ್ಧ ಕಟ್ಟಿದನು. ಅದನ್ನೇ ಹೊಂಚುತ್ತಿದ್ದವನು ಬಿಸ್ಮಾರ್ಕ್. ಅದುವರೆಗೂ ಆತ್ಮರಕ್ಷಣೆಗಾಗಿ ಜರ್ಮನರು ಒಟ್ಟುಗೂಡಿರಲಿಲ್ಲ. ಫ್ರಾನ್ಸಿನವರು ಆಕ್ರಮಿಸಿಕೊಂಡು ಬರುವಾಗ ಸ್ವದೇಶರಕ್ಷಣೆಗೆಂದು ಎಲ್ಲ

ಜರ್ಮನರನ್ನೂ ಒಟ್ಟುಗೂಡಿಸುವ ಸುಸಮಯವು ಪ್ರಾಪ್ತಿಯಾಯಿತು. ಮೂರನೆ ನಪೋಲಿಯನ್ ಹಿರೇ ನಪೋಲಿಯನ್ನಿನಷ್ಟು ಸಮರ್ಥನೂ ಅಲ್ಲ; ಆತನ ಸೈನ್ಯವೂ ಹಿರೇ ನಪೋಲಿಯನ್ನಿನ ಸೈನ್ಯದಂತೆ ಸಾಹಸಯುತವಾದುದೂ ಅಲ್ಲ. ಫ್ರಾನ್ಸಿನ ಸರಹದ್ದಿನ ಬಳಿ **ಸೆಡಾನ್** (Sedan) ಎಂಬೆಡೆಯಲ್ಲಿ ಕದನ ನಡೆದು ಫ್ರೆಂಚ್ ಸೈನ್ಯವು ಪೂರಾ ಸೋತಿತು; ಮೂರನೆ ನಪೋಲಿಯನ್ ಸೆರೆಯಾದನು. ಜರ್ಮನ್ ಸೈನ್ಯವು ಮುಂದೆನುಗ್ಗಿ ಪ್ಯಾರಿಸ್ ನಗರವನ್ನೇ ವಶಮಾಡಿಕೊಂಡಿತು. ಫ್ರೆಂಚರಿಗೆ ಅತ್ಯವಮಾನಕರವಾದ ಪರಾಭವವಾಗಿ ಹೋಯಿತು. ರೈನ್ ನದಿಯ ಪಕ್ಕದಲ್ಲಿ ತಮ್ಮದಾಗಿದ್ದ **ಆಲ್ಸಾಸ್ ಲೊರೇನ್** (Alsace and Lorraine) ಪ್ರಾಂತವನ್ನು ಬಿಟ್ಟುಕೊಡುವುದಲ್ಲದೆ ಯುದ್ಧದ ವೆಚ್ಚವನ್ನು ಜರ್ಮನರಿಗೆ ಸಲ್ಲಿಸಲು ಅಪಾರವಾದ ಧನವನ್ನು ದಂಡತೆರುವುದಕ್ಕೂ ಒಪ್ಪಬೇಕಾಯಿತು.

ಈ ಯುದ್ಧಕ್ಕಾಗಿ ಒಟ್ಟುಗೂಡಿದ್ದ ಜರ್ಮನ್ ಸಂಸ್ಥಾನಗಳು ತಮ್ಮ ಕೂಟವನ್ನು ಶಾಶ್ವತವಾಗಿ ನಡೆಸುವ ನಿಶ್ಚಯಮಾಡಿಕೊಂಡು, ಪ್ರಷ್ಯದ ರಾಜನೇ ಜರ್ಮನಿಗೆ ಚಕ್ರವರ್ತಿಯಾಗಿರಲೆಂದು ಒಪ್ಪಿದವು. ೧೮೭೧ನೆ ಜನವರಿಯಲ್ಲಿ **ಜರ್ಮನಿ ಚಕ್ರಾಧಿಪತ್ಯ** ರೂಪವೆತ್ತಿತು. ಬಿಸ್ಮಾರ್ಕನ ಉದ್ದೇಶ ಸಫಲವಾಯಿತು. ಆ ತರುವಾಯ ನಲವತ್ತು ವರ್ಷಕಾಲ ಜರ್ಮನಿ ಸರ್ವತೋಮುಖವಾದ ಅಭ್ಯುದಯವನ್ನು ಪಡೆಯಿತು. ವ್ಯಾಪಾರೋದ್ಯೋಗಗಳಲ್ಲಿಯೂ ಶಾಸ್ತ್ರಸಾಧನೆ ಶಿಕ್ಷಣವ್ಯಾಪ್ತಿಗಳಲ್ಲಿಯೂ ಸೈನ್ಯಬಲದಲ್ಲಿಯೂ ಜರ್ಮನಿ ಅದ್ಭುತರೀತಿಯಲ್ಲಿ ಅಭಿವೃದ್ಧಿ ಪಡೆಯಿತು. ಆದರೆ ಫ್ರೆಂಚರಿಗೆ ಆಸೆ ನಷ್ಟವಾಯಿತೇ? ನಷ್ಟವಾದ ಕ್ಷೇತ್ರವನ್ನು ಪುನಃ ವಶಪಡಿಸಿಕೊಳ್ಳಲು ಸಮಯವೆಂದು ಬಂದೀತೆಂಬ ಕಾಲನಿರೀಕ್ಷೆಯು ಅವರ ಮನಸ್ಸುಗಳಲ್ಲಿ ನೆಲೆಸಿತು. ತಮ್ಮಿಂದ ದಂಡದ ಹಣವನ್ನು ಸುಲಿದು ಕಷ್ಟನಷ್ಟಗಳನ್ನು ಕೊಟ್ಟುದಕ್ಕಾಗಿ ಜರ್ಮನ್ನರಿಂದ ಹಣಸುಲಿದು ಕಷ್ಟನಷ್ಟಗಳನ್ನುಂಟುಮಾಡುವ ಸಂಕಲ್ಪವು ಬೆಳೆಯಿತು. ಐವತ್ತು ವರ್ಷ ಹೊಂಚಿದ ತರುವಾಯ ೧೯೧೪ರಲ್ಲಿ ಒದಗಿ ಬಂತು ಸಮಯ. ಅದೇ ೧೯೧೪–೧೯೧೮ರವರೆಗೆ ನಡೆದ ಮೊದಲನೆ ಐರೋಪ್ಯ ಯುದ್ಧ.

ಮುಖ್ಯಪ್ರಶ್ನೆ ೧೦೩: ಜಪಾನಿನ ಅಭಿವೃದ್ಧಿಗೂ ಇತರ ರಾಷ್ಟ್ರಗಳ ಅಭಿವೃದ್ಧಿಗೂ ಯಾವ ಅಂಶಗಳಲ್ಲಿ ವ್ಯತ್ಯಾಸ?

ಜರ್ಮನಿಯ ಅಭ್ಯುದಯ ವೃತ್ತಾಂತದಂತೆ ಜಪಾನಿನ ಏಳ್ಗೆಯ ವೃತ್ತಾಂತವಿಲ್ಲ; ಅದರ ರೀತಿಯೇ ಬೇರೆ. ೧೮೪೦ ರವರೆಗೆ ಚೀನ ಮತ್ತು ಜಪಾನ್ ದೇಶಗಳು ಪಾಶ್ಚಾತ್ಯ ದೇಶವಿದೇಶಗಳ ಸಂಪರ್ಕವಿಲ್ಲದಂತೆಯೇ ಇದ್ದುವು. ವೈಭವಶಾಲಿಗಳಾದ ತಮ್ಮ ಪ್ರಭುಗಳ ಆಳಿಕೆಯಲ್ಲಿದ್ದುಕೊಂಡು ಚೀನ ಜಪಾನುಗಳ ಜನರು ಮೊದಲೇ ಪಡೆದಿದ್ದ ಪ್ರೌಢಸಂಸ್ಕೃತಿಯನ್ನು ರಕ್ಷಿಸಿಕೊಂಡು ವಿನೀತರಾಗಿ ಬಾಳುತ್ತಿದ್ದರು. ಚಿತ್ರ, ಮೃತ್ಪಾತ್ರೆಗಳ ರಚನೆ, ರೇಷ್ಮೆ ಕೆಲಸಗಳಲ್ಲಿ ಅಸಾಧಾರಣನೈಪುಣ್ಯವನ್ನು ಪಡೆದಿದ್ದರು. ಇಂದಿಗೂ ಆ ಕೈಗಾರಿಕೆಗಳಲ್ಲಿ ಅವರು ಅತಿಚತುರರೆನಿಸಿಯೇ ಇದ್ದಾರೆ. ಅವರಿಗೆ ಇತರರ ಸಂಪರ್ಕವೇ ಇಲ್ಲದೆ ಇರುವ ಇಷ್ಟವಿತ್ತು. ಆದರೆ ಐರೋಪ್ಯರಿಗೆ ವ್ಯಾಪಾರ ಬೇಕಾಗಿತ್ತು. ಎಷ್ಟೋ ಕಷ್ಟಪಟ್ಟು ಟೀ ರೇಷ್ಮೆಗಳಲ್ಲಿ ಐರೋಪ್ಯರು ಅಲ್ಪಸ್ವಲ್ಪವಾಗಿ ವ್ಯಾಪಾರವನ್ನು ಪ್ರಾರಂಭಿಸಿ ನಡೆಸುತ್ತಿದ್ದರು. ೧೮೪೦ ರಲ್ಲಿ ಕೆಲವು ಐರೋಪ್ಯ ರಾಷ್ಟ್ರಗಳವರು ಬಲಾತ್ಕಾರದಿಂದ ಚೀನದ ಬಂದರುಗಳಲ್ಲಿ ತಮ್ಮ ಹಡಗುಗಳು ಪ್ರವೇಶಿಸುವಂತೆ ನೆರವೇರಿಸಿಕೊಂಡರು. ಐರೋಪ್ಯವ್ಯಾಪಾರಿಗಳು ಪಟ್ಟಣ ಕಟ್ಟಿಕೊಳ್ಳುವುದಕ್ಕಾಗಿ ಅವರ ದೇಶದಲ್ಲಿ ಸ್ಥಳಗಳನ್ನೂ ಕಿತ್ತುಕೊಂಡರು. ಈ ರೀತಿಯಲ್ಲಿ ಬ್ರಿಟಿಷರಿಗೆ ಹಾಂಕಾಂಗ್, ಜರ್ಮನರಿಗೆ ಕಿಯಾಚೌ ಮತ್ತು ರಷ್ಯದವರಿಗೆ ಪೋರ್ಟ್ ಆರ್ಥರ್ ಲಭಿಸಿದುವು.

ಆ ವೇಳೆಗೆ ಅಮೆರಿಕದ ಸಂಯುಕ್ತಸಂಸ್ಥಾನಗಳವರು ತಮ್ಮ ರಾಜ್ಯವನ್ನು ವಿಸ್ತರಿಸುತ್ತಾ ಪಸಿಫಿಕ್ ಸಾಗರದ ತೀರವನ್ನು ಮೇರೆಯಾಗಿ ರಚಿಸಿಕೊಂಡಿದ್ದರು. ಸಾನ್‌ಫ್ರಾನ್ಸಿಸ್ಕೊ ಎಂಬುದು ಮುಖ್ಯವಾದ ರೇವುಪಟ್ಟಣವಾಗಿ ಪ್ರಬಲಿಸುತ್ತಿತ್ತು. ಚೀನದೊಂದಿಗೆ ವ್ಯಾಪಾರ ವೃದ್ಧಿಯಾಗುವಂತಿದ್ದ ವೇಳೆ. ಕಾಲಿಫೋರ್ನಿಯದಿಂದ ಹೊರಟ ಹಡಗುಗಳು ಎಲ್ಲಿಯೂ ನಿಲ್ಲದೆ ಚೀನದ ಬಂದರುಗಳನ್ನು ಸೇರುವುದು ಪ್ರಯಾಸವಾಗಿ ತೋರಿತು. ಮಾರ್ಗಮಧ್ಯದಲ್ಲಿದ್ದುದು ಜಪಾನ್. ೧೮೫೩ ರಲ್ಲಿ ಅಮೆರಿಕದ ರಾಷ್ಟ್ರಾಧ್ಯಕ್ಷನಿಂದ ಜಪಾನಿನ ಪ್ರಭುವಿಗೊಂದು ಕಾಗದವನ್ನು ತೆಗೆದುಕೊಂಡು ನಾಲ್ಕು ಯುದ್ಧದ ಹಡಗುಗಳು ಹೊರಟವು. ಜಪಾನಿನಲ್ಲಿ ಅಮೆರಿಕನ್ನರು ವ್ಯಾಪಾರನಡೆಸಲು ಆಸ್ಪದ ಕೊಡಬೇಕೆಂದೂ ಕೆಲವು ಬಂದರುಗಳಲ್ಲಿ ಅಮೆರಿಕದ ಹಡಗುಗಳು ಪ್ರವೇಶಪಡೆಯಲು ಅನುಕೂಲವಾಗಬೇಕೆಂದೂ ಸಂದೇಶ. ಅದಕ್ಕೆ ಪ್ರತ್ಯುತ್ತರ

ವಾವುದೂ ಬರಲಿಲ್ಲ. ಆಗಲಾ ಯುದ್ಧದ ಹಡಗುಗಳ ನೌಕಾಪತಿಯು 'ಪುನಃ ಬರುವೆ'ನೆಂದು ಬಿಂಕದಿಂದ ಹೇಳಿ ಹೊರಟುಬಿಟ್ಟನು. ಜಪಾನಿನವರಿಗೆ ಕಳವಳವುಂಟಾಯಿತು. ದೊಡ್ಡ ಕಂಭಗಳಂತಹ ಕೊಳವೆಗಳನ್ನು ಕಟ್ಟಿಕೊಂಡು ಕಪ್ಪಾದ ಹೊಗೆಯನ್ನು ಉಗುಳುತ್ತ ಬಂದ ವಿಚಿತ್ರ ಹಡಗುಗಳೇನು! ಕೋಟೆ ಬುರುಜುಗಳ ಮೇಲೇರಿಸಿ ಗುರಿಯಿಟ್ಟಂತಿದ್ದ ಆ ಹಡಗುಗಳ ಫಿರಂಗಿಗಳೇನು? ಪುನಃ ಬಂದರೆ ಹೊಡೆದೋಡಿಸಿಬಿಡೋಣವೆಂಬ ಮಾತುಗಳನ್ನಾಡಿಕೊಂಡರು. ಆದರೆ ಆ ಪ್ರಯತ್ನದಿಂದ ಪ್ರಯೋಜನವಿಲ್ಲವೆಂದು ಸ್ವಲ್ಪಕಾಲದ ತರುವಾಯ ನಿಶ್ಚಯಿಸಿಕೊಂಡರು. ಮುಂದಿನವರ್ಷ ಅಮೆರಿಕದವರು ಪುನಃ ಬಂದರು. ನಾಲ್ಕಲ್ಲ, ಹತ್ತು ಯುದ್ಧದ ಹಡಗುಗಳನ್ನು ತಂದಿದ್ದರು. ಆಗ ಜಪಾನಿನವರು ಅಮೆರಿಕನ್ನರ ಇಷ್ಟವನ್ನು ಸಲ್ಲಿಸಿ ಒಪ್ಪಂದಮಾಡಿಕೊಂಡರು.

ಪೃಥ್ವಿಯ ಸಕಲ ದೇಶವಿದೇಶಗಳಲ್ಲಿ ಸಂಧಿಸಂಬಂಧಗಳು ಬೆಳೆಯಲು ಇದೇ ಮೊದಲು. ಅಮೆರಿಕನ್ನರಂತೆ ಇತರ ಐರೋಪ್ಯರು ಕರಾರುಗಳಿಗಾಗಿ ಯತ್ನಿಸಿದರು. ಬ್ರಿಟಿಷರು, ರಷ್ಯನರು, ಡಚ್ಚರು, ಆ ತರುವಾಯ ಫ್ರೆಂಚರು ಜಪಾನಿನೊಡನೆ ಒಪ್ಪಂದಗಳನ್ನು ಮಾಡಿಕೊಂಡರು.

ಏತನ್ಮಧ್ಯೆ ಜಪಾನಿನ ಒಳಾಡಳಿತದಲ್ಲಿ ಭಾರಿ ಬದಲಾವಣೆಗಳುಂಟಾದುವು. ಆ ದೇಶದಲ್ಲಿ ಏಳುನೂರು ವರ್ಷಕಾಲದಿಂದ ನಡೆದುಬಂದಿದ್ದುದು ಶೋಗುನ್ನನ ಆಡಳಿತ. ಚಕ್ರವರ್ತಿಯು ದೈವಸಮಾನನೆನಿಸಿ ಅರಮನೆಯಲ್ಲಿಯೇ ಇರುತ್ತಿದ್ದನು; ಆತನ ಹೆಸರಿನಲ್ಲಿ ಮುಖ್ಯಮಂತ್ರಿಯಾದಾತನು ಆಡಳಿತ ವಹಿಸಿದ್ದನು. ಮಂತ್ರಿಪದವಿಯು ವಂಶಪರಂಪರೆಯಾಗಿತ್ತು. 'ಸರಿಸುಮಾರು ಪೇಶ್ವೆಗಳಂತೆ, ಅಥವಾ ಈಗಿನ ನೇಪಾಳದಲ್ಲಿರುವಂತೆ. ಮುಖ್ಯಮಂತ್ರಿ ಪದವಿಗೆ ಶೋಗುನ್ನೆಂದು ಹೆಸರು. ೧೮೬೭ರಲ್ಲಿ **ಶೋಗುನ್** ಪದ್ಧತಿಯು ಕೊನೆಗಂಡಿತು. ಹದಿನಾಲ್ಕನೆ ವಯಸ್ಸಿನಲ್ಲಿ ಚಕ್ರವರ್ತಿಪದವಿಗೆ ಬಂದ **ಮುತ್ಸುಹಿಟೊ** ತಾನೇ ಆಡಳಿತವೆಲ್ಲವನ್ನೂ ವಹಿಸಿಕೊಂಡನು. ಆ ಚಕ್ರವರ್ತಿಯ ಆಳಿಕೆ ೧೯೧೨ರ ವರೆಗೆ ನಡೆಯಿತು. ಆ ವರ್ಷವೇ ಆತನು ತೀರಿಕೊಂಡನು. ಆ ಆಳಿಕೆಯ ಕಾಲವೆಲ್ಲ ಜಪಾನಿನ ಅಭ್ಯುದಯದ ಕಾಲ; ಸರ್ವತೋಮುಖವಾದ ಅಭಿವೃದ್ಧಿಯನ್ನು ಸಾಧಿಸಿದ ಕಾಲ. ಅದಕ್ಕೆ **ಮೈಜಿ**ಕಾಲವೆಂಬ ಹೆಸರುಂಟು; ಅದ್ಭುತವಾದ ರೂಪಾಂತರ ನಡೆದುಹೋಯಿತು. ಪೂರ್ವಾಚಾರಪರಾಯಣರಾಗಿ ಪ್ರಶಾಂತರಾಗಿ ಇತರರ ಸಂಪರ್ಕವಿಲ್ಲದಿದ್ದ ಜಪಾನ್ ದೇಶಸ್ಥರು ಆಡಳಿತವನ್ನು ಆ ಕಾಲದಲ್ಲಿ ವ್ಯತ್ಯಾಸಗೊಳಿಸಿ ಐರೋಪ್ಯರ ಸಾಧನೆಯೆಲ್ಲವನ್ನೂ ಮೆಚ್ಚಿ ಅನುಕರಿಸಿ ಅತಿಬಲಾಢ್ಯರೆನಿಸಿದರು. ಹಳೆಗಾಲದಿಂದ ನಡೆದುಬಂದಿದ್ದ

ಫ್ಯೂಡಲ್ ಅಥವಾ ಜಮೀನ್ದಾರಿ ಪದ್ಧತಿ ಹಾಳಾಯಿತು. ಶ್ರೀಮಂತವರ್ಗದವರು ಸಾಮಾನ್ಯಜನರಂತೆ ತೆರಿಗೆಯನ್ನು ಸಲ್ಲಿಸಲೊಪ್ಪಬೇಕಾಯಿತು. ಎಲ್ಲರೂ ಸೈನ್ಯಶಿಕ್ಷಣವನ್ನು ಪಡೆಯಲು ಸಿದ್ಧರಾಗಬೇಕಾಯಿತು. ವ್ಯಾಪಾರವು ಹೆಚ್ಚಿತು, ಧನಸಂಪಾದನೆಯೂ ಅಧಿಕವಾಯಿತು. ಜಪಾನಿನವರೇ ಸ್ವಂತವಾಗಿ ರೈಲ್ದಾರಿಗಳನ್ನು ನಿರ್ಮಿಸಿಕೊಂಡರು; ತಂತೀಟಪಾಲು ಏರ್ಪಾಡುಗಳನ್ನು ಸ್ಥಾಪಿಸಿಕೊಂಡರು. ಜಹಜುಗಳನ್ನೂ ಯುದ್ಧದ ಹಡಗುಗಳನ್ನೂ ಕಟ್ಟಿಕೊಂಡರು. ಕೈಗಾರಿಕೆಗಳಿಗಾಗಿ ಕಾರ್ಖಾನೆಗಳನ್ನು ರಚಿಸಿದರು. ಹಿಂದಿನ ತಲೆಮಾರಿನಲ್ಲಿ ಗವಿಸೇರಿದಂತಿದ್ದ ದೇಶ ಒಂದೇ ಒಂದು ಹಾರಿನಲ್ಲಿ ನಾನಾಮುಖವಾದ ಅಭಿವೃದ್ಧಿಯನ್ನು ಸಾಧಿಸಿ ಪೃಥ್ವಿಯಲ್ಲೆಲ್ಲ ವಿಖ್ಯಾತವಾಯಿತು.

ಐರೋಪ್ಯರಂತೆ ಅಭಿವೃದ್ಧಿಪಡೆಯುವ ಆತುರದಲ್ಲಿ ಜಪಾನಿನ ಹುದ್ದೇದಾರರು ಐರೋಪ್ಯರಂತೆ ವಸ್ತ್ರಭೂಷಣಗಳನ್ನು ಧರಿಸಬೇಕೆಂಬ ಆಜ್ಞೆಯಾಯಿತು! ಆದರೆ ಕೆಲವು ವಿಷಯಗಳಲ್ಲಿ ಜಪಾನ್ ಪಾಶ್ಚಾತ್ಯರಾಷ್ಟ್ರಗಳಂತಿಲ್ಲ. ಆಡಳಿತದಲ್ಲಿಯೂ, ಪ್ರಾಯಶಃ ಕಲಾಭಿರುಚಿ, ಸಾಮಾಜಿಕರೀತಿನೀತಿಗಳಲ್ಲಿಯೂ ಜಪಾನೀಯರದೇ ಬೇರೆ ರೀತಿ. ಜಪಾನಿನಲ್ಲಿ ಪಾರ್ಲಿಮೆಂಟೆಂಬುದಿದೆ, ಕ್ಯಾಬಿನೆಟ್ಟೆಂಬ ಮಂತ್ರಿಮಂಡಲಿಯೂ ಇದೆ; ಆದರೆ ಜನಸ್ವಾಮ್ಯ ನೆಲೆಸಿದ ಆಧುನಿಕ ರಾಷ್ಟ್ರಗಳಲ್ಲಿ ಪಾರ್ಲಿಮೆಂಟಿಗೂ ಕ್ಯಾಬಿನೆಟ್ಟಿಗೂ ಇರುವ ಅಧಿಕಾರಗಳಿಲ್ಲ ಅವುಗಳಿಗೆ. ಚಕ್ರವರ್ತಿಪದವಿಯಲ್ಲಿರತಕ್ಕಾತನು ದರ್ಪಿಷ್ಠಪ್ರಭುವಿನ ಹಾಗೂ ಇಲ್ಲ, ಸರ್ವಾಧಿಕಾರಿಯ ಹಾಗೂ ಇಲ್ಲ. ಯಾವುದಾದರೂ ದೇವತೆಗೆ ಸಲ್ಲುವಷ್ಟು ಭಕ್ತಿಮರ್ಯಾದೆಗಳನ್ನು ತಮ್ಮ ಚಕ್ರವರ್ತಿಯಲ್ಲಿ ಜಪಾನೀ ಜನರು ತೋರುತ್ತಾರೆ. ಆಡಳಿತವನ್ನು ವಾಸ್ತವವಾಗಿ ನಿರ್ವಹಿಸುವ ಮಂತ್ರಿಗಳು ಚಕ್ರವರ್ತಿಯ ಹೆಸರಿನಲ್ಲಿಯೇ ಎಲ್ಲ ಆಜ್ಞೆಗಳನ್ನೂ ಹೊರಡಿಸುತ್ತಾರೆ. ಆದಾಗ್ಗೂ ಚಕ್ರವರ್ತಿಯು ದಿನದಿನವೂ ನಡೆಯುವ ಆಡಳಿತದಲ್ಲಿ ಪ್ರವೇಶಿಸುವುದಿಲ್ಲ. ಜನರು ಆತನ ರೂಪವನ್ನು ಆಗಾಗ್ಗೆ ಕಾಣುವುದೂ ಇಲ್ಲ; ಆತನ ಧ್ವನಿಯನ್ನು ಕೇಳುವುದೂ ಇಲ್ಲ. ಇಷ್ಟು ಭಕ್ತಿಪೂರಿತರಾದ ಜನರಾಶಿಗೆ ಚಕ್ರವರ್ತಿಯೆನಿಸಿದಾತನ ಪದವಿಗೌರವಗಳು ಪರಂಪರೆಯಾಗಿ ಅತಿದೀರ್ಘಕಾಲ ಅವಿಚ್ಛಿನ್ನವಾಗಿ ನಡೆದುಬಂದಿರತಕ್ಕುವು. ಎರಡು ಸಾವಿರ ವರ್ಷಗಳಷ್ಟು ಕಾಲ ನಡೆದುಬಂದಿರುವುದು ಆ ರಾಜವಂಶ. ಜಗತ್ತಿನಲ್ಲೆಲ್ಲ ಅತಿಪ್ರಕಾಶಮಾನನಾದ ಸೂರ್ಯನ ಸಂತತಿಯೇ ಆ ವಂಶವೆಂಬ ನಂಬಿಕೆ ಜಪಾನಿನಲ್ಲಿ ನೆಲೆಸಿದೆ.

ವೈಜಿಕಾಲವೆಂಬುದು ಮೊದಲಾಗಿ ಇನ್ನೂ ೮೦ ವರ್ಷಗಳಾಗಲಿಲ್ಲ. ಅಷ್ಟು ಅಲ್ಪಕಾಲದಲ್ಲಿಯೇ ಜಪಾನೀಯರು ತಮ್ಮ ರಾಷ್ಟ್ರಜೀವನದಲ್ಲಿ ವ್ಯತ್ಯಾಸಗಳನ್ನು ಅತಿವೇಗದಿಂದ ನಡೆಸಿಕೊಂಡ ಕಾರಣ ಅವರ ರೀತಿ ನೀತಿಗಳಲ್ಲಿ ಕಾಣಬರುವ ಪರಿಣಾಮಗಳೆಲ್ಲವೂ ಸಮರ್ಪಕವಾಗಿಲ್ಲದೆ ಇರಬಹುದು. ಪಾಶ್ಚಾತ್ಯರಿಂದ ಕಲಿಯಬಹುದಾದುದನ್ನು ಗ್ರಹಿಸಿಕೊಳ್ಳುವುದರಲ್ಲಿ ಬಿರಳು ತೋರಿಸಿದಾಗ ಕೈಸಂಗಿದಂತೆ ಗುರುಗಳಿಗಿಂತಲೂ ಮುಂದೋಡತಕ್ಕವರಾದರು. ಆಶ್ಚರ್ಯಕರವಾದ ಚಮತ್ಕಾರ ಗುಣವು ಆ ಜನರಲ್ಲುಂಟು. ಆದರೆ ತಮಗೆ ಪ್ರಯೋಜನ ತೋರಿದುದನ್ನು ಸ್ವೀಕಾರಮಾಡಿಕೊಳ್ಳುವುದರಲ್ಲಿ ದಯಾದಾಕ್ಷಿಣ್ಯಗಳನ್ನು ತ್ಯಜಿಸಿ ವರ್ತಿಸಿರುತ್ತಾರೆ. ರೋಮಕರ ಕಾಲದಿಂದ ಹಿಡಿದು ಮೊನ್ನೆಮೊನ್ನೆವರೆಗೆ ಐರೋಪ್ಯ ಪ್ರಭುಗಳು ರಾಜ್ಯವಿಸ್ತಾರದಾಸೆಯಿಂದ ನಡೆಸಿದ ಕ್ರೂರಕೃತ್ಯಗಳನ್ನೋ ಗುಲಾಮಿ ವ್ಯಾಪಾರವನ್ನೋ ಔದ್ಯೋಗಿಕಪಲ್ಲಟಕಾಲದ ರಾಕ್ಷಸಕೃತ್ಯಗಳನ್ನೋ ಸರಿಸುಮಾರಾಗಿ ಹೋಲುವ ಭಯಂಕರ ಕೃತ್ಯಗಳು ಆ ಸಂದರ್ಭಗಳಲ್ಲಿ ನಡೆದವು.

ಅಭ್ಯಾಸಗಳು

೧. ಇತರ ಐರೋಪ್ಯ ರಾಷ್ಟ್ರಗಳಲ್ಲಿ ಏಕೀಕರಣವು ರೂಪಗೊಂಡ ತರುವಾಯವೂ ಜರ್ಮನಿಯಲ್ಲಿ ಒಗ್ಗಟ್ಟು ಹುಟ್ಟಲು ಅಷ್ಟು ವಿಲಂಬವಾದುದೇಕೆ? ಅಷ್ಟು ಬೇಗನೆ ಪ್ರಾಬಲ್ಯಕ್ಕೇರಿದುದು ಹೇಗೆ?

೨. ಇತರ ಆಧುನಿಕ ರಾಷ್ಟ್ರಗಳಿಗಿಂತ ಯಾವ ಅಂಶಗಳಲ್ಲಿ ಜಪಾನ್ ಬೇರೆಯಾಗಿದೆ?

೩. ಜಪಾನೀಯರ ವೃತ್ತಾಂತವನ್ನು ಮತ್ತೆಲ್ಲಿಯಾದರೂ ಓದಿ ಆ ಜನರ ಚಾತುರ್ಯ ಚಮತ್ಕಾರಗಳನ್ನು ವರ್ಣಿಸಿ.

೨೮ ನೇ ಅಧ್ಯಾಯ

ನಮ್ಮ ಸ್ವಂತ ಕಾಲಗತಿಯ ಗುರುತುಗಳು

ಮುಖ್ಯಪ್ರಶ್ನೆ ೧೦೪ : ಲೀಗ್ ಆಫ್ ನೇಷನ್ಸ್ ಅಥವಾ ರಾಷ್ಟ್ರಗಳ ಕೂಟದಿಂದ ಶಾಂತಿಸ್ಥಾಪನೆಯಾಗಲಿಲ್ಲವೇಕೆ?

ಇಪ್ಪತ್ತನೆ ಶತಮಾನದ ಪೂರ್ವಭಾಗದಲ್ಲಿ ಪ್ರಭಾವಬೀರಿದವರಾರೆಂದರೆ ೧೯೧೪ರಿಂದ ೧೯೧೮ರವರೆಗೆ ನಡೆದ ಮೊದಲನೆ ಘೋರಯುದ್ಧವನ್ನು ನಡೆಸಿದ ಜನರು. ಆ ಯುದ್ಧವು ಹಿಂದೆ ನಡೆದ ಔದ್ಯೋಗಿಕಪಲ್ಲಟದ ಪರಿಣಾಮ; ಬಿಸ್ಮಾರ್ಕನ ನಾಯಕತ್ವದಲ್ಲಿ ನಡೆದ ಜರ್ಮನಿಯ ಅಭ್ಯುದಯದ ಫಲಿತಾಂಶ. ಜರ್ಮನಿಗೆ ಚಕ್ರವರ್ತಿಯಾದ ಇಮ್ಮಡಿ ವಿಲ್ಹೆಲ್ಮ್ (Wilhelm II) ಬಿಸ್ಮಾರ್ಕನ ಸಾಧನೆಯನ್ನು ಮುಂದುವರಿಸಿ ಪೃಥ್ವಿಯಲ್ಲೆಲ್ಲ ಜರ್ಮನಿಯೇ ಬಲಿಷ್ಠ ರಾಷ್ಟ್ರವಾಗಿರುವಂತೆ ನೆರವೇರಿಸುವ ಗುರಿಯನ್ನಿಟ್ಟುಕೊಂಡನು. ಸುಶಿಕ್ಷಿತವಾದ ಸ್ಥಳಬಲ ಜಲಬಲಗಳು ಸಿದ್ಧವಾದುವು. ವ್ಯಾಪಾರ ಕೈಗಾರಿಕೆಗಳಲ್ಲಿ ಜರ್ಮನರಿಗೆ ಶಾಸ್ತ್ರಸಾಧನೆಯ ಸಾಮರ್ಥ್ಯಚಮತ್ಕಾರಗಳು ಸುಲಕ್ಷಣಗಳಾಗಿ ಅಗ್ರಸ್ಥಾನವು ಸಮೀಪವಾಯಿತು. ಆದರೆ ಬ್ರಿಟಿಷ್ ಸಾಮ್ರಾಜ್ಯವೆಂಬುದು ದೊಡ್ಡ ಅಡ್ಡಿಯಾಗಿ ಕಂಡಿತು. ಸಮುದ್ರಗಳೆಲ್ಲವೂ ಬ್ರಿಟಿಷರ ಜಲಬಲದ ಸ್ವಾಧೀನ. ಅಲ್ಲದೆ ತಮ್ಮ ಕೈಗಾರಿಕೆ ವಸ್ತುಗಳನ್ನು ಮಾರಿಕೊಳ್ಳಲು ಸಮಸ್ತ ದೇಶಗಳಲ್ಲಿಯೂ ವ್ಯಾಪಾರಸಂಬಂಧಗಳನ್ನು ಬ್ರಿಟಿಷರು ಇತರರಿಗಿಂತ ಮೊದಲೇ ಸ್ಥಾಪಿಸಿಕೊಂಡು ಭದ್ರರಾಗಿದ್ದರು. ಬ್ರಿಟಿಷರಿಗೂ ಜರ್ಮನರಿಗೂ ಪೋಟಾಪೋಟಿ ಅನಿವಾರ್ಯವಾಗಿ ೧೯೧೪ರಲ್ಲಿ ಯುದ್ಧವು ಮೊದಲಾಯಿತು. ಸೆರ್ಬಿಯವನ್ನು ಆಸ್ಟ್ರಿಯ ಮುತ್ತಲು ಹವಣಿಸಿದ್ದೇ ಪ್ರಾರಂಭ. ಬ್ರಿಟನ್ನಿನ ಮಿತ್ರರಾಷ್ಟ್ರಗಳು ಬೇರೆ, ಜರ್ಮನಿಯ ಮಿತ್ರರಾಷ್ಟ್ರಗಳು ಬೇರೆ. ಅವೂ ಎದುರುಬದುರಾಗಿ ಯುದ್ಧದಲ್ಲಿ ನಿಲ್ಲುವ ವೇಳೆಗೆ ಯುದ್ಧವೆಂಬುದು ಜಗದ್ವ್ಯಾಪ್ತಿ ಪಡೆಯಿತು. ಮೊದಮೊದಲು ತಟಸ್ಥವಾಗಿದ್ದ ರಾಷ್ಟ್ರಗಳೂ ಜರ್ಮನಿಯು ಗೆದ್ದಲ್ಲಿ ತಮಗೆ ಅನಿಷ್ಟ ಮೂಡುವುದೆಂದು ತಾಟಸ್ಥ್ಯವನ್ನು ಬಿಟ್ಟು ಬ್ರಿಟಿಷರಕಡೆ ಸೇರಿದುವು. ಜರ್ಮನಿಯ ಪಕ್ಷದಲ್ಲಿ ಆಸ್ಟ್ರಿಯ, ಬಲ್ಗೇರಿಯ ಮತ್ತು ತುರ್ಕಿ ಸೇರಿಕೊಂಡಿದ್ದುವು. ಬ್ರಿಟಿಷ್ ಸಾಮ್ರಾಜ್ಯದೊಡನೆ ಫ್ರಾನ್ಸ್, ಇಟಲಿ,

ಜಪಾನ್, ಅಮೆರಿಕ ಮತ್ತು ಕೆಲವು ಸಣ್ಣ ರಾಷ್ಟ್ರಗಳು ಸೇರಿಕೊಂಡುವು. ೧೯೧೮ರ ವೇಳೆಗೆ ಜರ್ಮನಿಯ ಪಕ್ಷಕ್ಕೆ ಪೂರಾ ಸೋಲಾಯಿತು.

ಅನಂತರ ಶಾಂತಿಕ್ಷೇಮಗಳನ್ನು ನೆಲೆಗೊಳಿಸುವುದರಲ್ಲಿ ಮೂವರು ಮುಖ್ಯರಾದರು. ಯಾರೆಂದರೆ ಫ್ರಾನ್ಸಿನ ಪ್ರಧಾನ **ಕ್ಲಮಾಂಕೊ** (Clemenceau), ಗ್ರೇಟ್ ಬ್ರಿಟನ್ನಿನ ಪ್ರಧಾನ **ಲಾಯ್ಡ್ ಜಾರ್ಜ್** (Lloyd George) ಮತ್ತು ಅಮೆರಿಕದ ರಾಷ್ಟ್ರಾಧ್ಯಕ್ಷ **ವಿಲ್ಸನ್** (Wilson). ಕ್ಲಮಾಂಕೊ ಅಥವಾ ಫ್ರಾನ್ಸಿಗೆ ಬೇಕಾಗಿದ್ದುದು ಜರ್ಮನಿಯ ದೌರ್ಬಲ್ಯ. ೧೮೭೦ ಮತ್ತು ೧೯೧೪ರಲ್ಲಿ ಜರ್ಮನರು ಫ್ರಾನ್ಸನ್ನು ಮುತ್ತಿ ನಾಶಗೊಳಿಸಿದಂತೆ ಮತ್ತೆ ಎಂದೆಂದಿಗೂ ಸಂಭವಿಸಲಾಗದಂತೆ ಜರ್ಮನಿಯ ಬಲಸರ್ವಸ್ವವೂ ನಾಶವಾಗಿರತಕ್ಕುದೆಂಬ ಆಸೆಯಿತ್ತು. ವಿಲ್ಸನ್ ಧರ್ಮಶಾಸ್ತ್ರಜ್ಞನಾದವನು; ಕೆಲವು ಆದರ್ಶಗಳನ್ನು ಸಾಧಿಸಿ ಲೋಕಶಾಂತಿಯನ್ನು ನೆಲೆಗೊಳಿಸುವ ಆಸೆಯುಳ್ಳವನು. ಮಧ್ಯೆ ಲಾಯ್ಡ್ ಜಾರ್ಜ್ ಇದ್ದುಕೊಂಡು ಇಬ್ಬರನ್ನೂ ಸಮಾಧಾನಗೊಳಿಸುವುದಲ್ಲದೆ ಜಯಶಾಲಿರಾಷ್ಟ್ರಗಳ ನಿರೀಕ್ಷೆಗಳನ್ನು ಸಲ್ಲಿಸಿಕೊಡುವ ಪ್ರಯತ್ನಮಾಡಬೇಕಾಗಿತ್ತು. ಬ್ರಿಟನ್ ಮುಂತಾದ ಜಯಶಾಲಿರಾಷ್ಟ್ರಗಳವರು ತಮಗೆ ಯುದ್ಧದಿಂದ ಲಾಭವಾಗಬೇಕೆಂಬ ನಿರೀಕ್ಷೆ ಬೆಳೆಸಿದ್ದರು. ಮಹಾವೈಭವಶಾಲಿ ಹದಿನಾಲ್ಕನೆ ಲೂಯಿ ಕಟ್ಟಿಸಿದ್ದ '**ವರ್ಸೇಯ್**' (Versailles) ಅರಮನೆಯಲ್ಲಿ **ಒಪ್ಪಂದ**ವೇನೋ ರೂಪಗೊಂಡಿತು. ಆದರೆ ಅನೇಕ ಬಗೆಗಳಲ್ಲಿ ಅಸಮಾಧಾನಕಾರಕವಾಗಿಯೇ ನಡೆಯಿತು.

ವಿಲ್ಸನ್ ಯೋಚಿಸಿದ್ದ ಏರ್ಪಾಡು ತೃಪ್ತಿಕರವಾಗಿ ರೂಪಗೊಂಡಿದ್ದ ಪಕ್ಷದಲ್ಲಿ ಸಮಸ್ತರೂ ಉಪಕಾರ ಹೊಂದಿ ಆತನನ್ನು ಕೊಂಡಾಡುವಂತಾಗುತ್ತಿತ್ತು. ರಾಷ್ಟ್ರಗಳು ಪುನಃ ಯುದ್ಧಗಳನ್ನು ಬೆಳೆಸದಂತೆ ಆತನೊಂದು ಏರ್ಪಾಡನ್ನು ಯೋಚಿಸಿದ್ದನು. ರಾಷ್ಟ್ರಗಳೆಲ್ಲವೂ ಸೇರಿ ಕೂಟಗಟ್ಟಿ ಆ ಕೂಟದಲ್ಲಿ ತಮ್ಮ ಮನಸ್ತಾಪಗಳನ್ನೂ ಜಗಳಗಳನ್ನೂ ಪಂಚಾಯತಿಗಿಟ್ಟು ನ್ಯಾಯದಿಂದಲೂ ಶಾಂತಿಯಿಂದಲೂ ಬಾಳುತ್ತಿರಬಹುದಾಗಿತ್ತು. **ಲೀಗ್ ಆಫ್ ನೇಷನ್ಸ್** ಅಥವಾ **ರಾಷ್ಟ್ರಸಂಘ**ವೆಂಬುದರ ಮೊದಲೇನೋ ಆಯಿತು. ಆದರೆ ರಾಷ್ಟ್ರಗಳ ಮಧ್ಯೆ ನ್ಯಾಯವನ್ನು ಸ್ಥಾಪಿಸಲು ಆ ಸಂಸ್ಥೆಗೆ ಆಗದೆ ಹೋದುದೇಕೆ? ಕೆಲವು ವರ್ಷಗಳ ಕಾಲ ಕೂಡ ಯುದ್ಧಗಳು ಕೆರಳದಂತೆ ನೆರವೇರದಾಯಿತಲ್ಲ! ಅದಕ್ಕೆ ಮುಖ್ಯಕಾರಣವೇನೆಂದರೆ ಹಿಂದೆ ಅಮೆರಿಕದಲ್ಲಿ ಕಂಡು ಬಂದಂತಹುದೇ. ಬ್ರಿಟಿಷರನ್ನು ಸೋಲಿಸಿ ಸ್ವಾತಂತ್ರ್ಯವನ್ನು ಸಂಪಾದಿಸಿದ ಬಳಿಕ ಆ ಕಾಲೊನಿಗಳವರು ಪರಸ್ಪರ ಕಲಹಗಳನ್ನು ಬಿಡಲಾಯಿತೇ?

ಕಲಹಗಳು ರೇಗಿ ಅಂತರ್ಯುದ್ಧಕ್ಕಿಟ್ಟುಕೊಳ್ಳುವ ಸಂದರ್ಭಗಳೆಷ್ಟೋ ಕಳೆದ ಬಳಿಕ ಅವರಿಗೆ ಶಾಂತಿಲಾಭವಾದದ್ದು. ಬ್ರಿಟಿಷರೊಡನೆ ಯುದ್ಧ ಮುಗಿದಾಗ ಕಾಲೊನಿಗಳವರು ಕಟ್ಟಿದ ಮಿತ್ರಮಂಡಲಿಯ ಗತಿ ಹೇಗಾಯಿತು? ಆ ಮಂಡಲಿಯಲ್ಲಿ ನೆಲೆಸಿದಂತೆ ಕಂಡ ಒಗ್ಗಟ್ಟನ್ನು ಯಾವ ಒಂದು ಕಾಲೊನಿಯವರಾದರೂ ಮುರಿಯಬಹುದಾಗಿತ್ತು. ಆ ಮಂಡಲಿಯಿಂದ ಸ್ಥಾಪನೆಯಾದಂತೆ ಕಂಡ ಶಾಂತಿಯನ್ನು ಯಾವ ಒಂದು ಕಾಲೊನಿಯವರಾದರೂ ಭಂಗಿಸಬಹುದಾಗಿತ್ತು. ಸಂಯುಕ್ತಸಂಸ್ಥಾನಗಳೆಂಬವು ರೂಪಗೊಂಡು ಕೆಲವು ವಿಷಯಗಳಲ್ಲಿ ಎಲ್ಲರನ್ನೂ ನಿರ್ಬಂಧಪಡಿಸಬಲ್ಲ ಕೇಂದ್ರಸರ್ಕಾರ ಸ್ಥಾಪನೆಯಾಗುವವರೆಗೂ, ಮತ್ತು ಪರಸ್ಪರ ವ್ಯಾಜ್ಯಗಳನ್ನು ತೀರ್ಮಾನಮಾಡಿ ನ್ಯಾಯ ಪಾಲಿಸುತ್ತಿರಲು ಫೆಡರಲ್



ಅಧ್ಯಕ್ಷ ವಿಲ್ಸನ್

ಅಥವಾ ಸಂಯುಕ್ತ ನ್ಯಾಯಸ್ಥಾನವೆಂಬುದು (Federal Court) ಪ್ರತಿಷ್ಠೆಯಾಗುವವರೆಗೂ, ಮತ್ತು ಹೊರಗಿನ ಶತ್ರುಗಳಿಂದ ರಕ್ಷಿಸುವುದಕ್ಕೆ ಮಾತ್ರವಲ್ಲದೆ ಒಳನಾಡಿನಲ್ಲಿ ವ್ಯಾಜ್ಯಕಿತ್ತ ಸಂಸ್ಥಾನವನ್ನು ದಂಡಿಸುವುದಕ್ಕೆ ಸಂಯುಕ್ತ ಸೈನ್ಯವು (Federal Army) ಸಿದ್ಧವಾಗುವವರೆಗೂ ಶಾಂತಿಯಾಗಲಿ ನ್ಯಾಯವಾಗಲಿ ಭದ್ರವಾಗಲಿಲ್ಲ. ಲೀಗ್ ಆಫ್ ನೇಷನ್ಸ್ ಎಂಬ ರಾಷ್ಟ್ರಗಳ ಕೂಟ ಸಂಸ್ಥೆಯ ಪಾಡು ಆ ಮಿತ್ರಮಂಡಲಿಯಂತೆ ಆಯಿತು. ಕೂಟಸಂಸ್ಥೆಯನ್ನು ಸೇರಿದ ರಾಷ್ಟ್ರಗಳಲ್ಲಿ ಯಾರಿಗೂ ತಮ್ಮ ಸ್ವತಂತ್ರವರ್ತನೆಯ ಅಧಿಕಾರವನ್ನು ಬಿಟ್ಟು ಕೊಡುವ ಇಷ್ಟ ಹುಟ್ಟಲಿಲ್ಲ. ಯುದ್ಧವನ್ನು ನಿಲ್ಲಿಸೋಣವೆಂದಾಗಲೂ ಆ ಅಧಿಕಾರವನ್ನು ಬಿಟ್ಟುಕೊಡದಾದರು. ತಮಗೆ ಸಂಬಂಧಪಟ್ಟ ವಿಚಾರಗಳಲ್ಲಿ

ನ್ಯಾಯತೀರ್ಮಾನದ ಅಧಿಕಾರ ತಮ್ಮದಾಗಿಯೇ ಇರಬೇಕೆಂದರು. ತಮ್ಮ ಅಧಿಕಾರಕ್ಕಡ್ಡಿ ತೋರಿದರೆ ಯುದ್ಧ ನಡೆಸಲು ಪ್ರತಿ ರಾಷ್ಟ್ರದವರೂ ಸೈನ್ಯ ಬಲವನ್ನು ಪೋಷಿಸಿಕೊಳ್ಳುತ್ತಲೇ ಬಂದರು. ಇಂತಹ ರಾಷ್ಟ್ರಗಳ ಕೂಟವು ಒಂದಾನೊಂದು ಕಥೆಯಲ್ಲಿ ಕೇಳಬಹುದಾದ ವರ್ತಕಮಂಡಲಿಯಂತಾಯಿತು. ವರ್ತಕರೇನೋ ಒಟ್ಟು ಸೇರಿದರು. ಪ್ರತಿಯೊಬ್ಬನಿಗೂ ಆದಷ್ಟು ಲಾಭವನ್ನು ದಕ್ಕಿಸಿಕೊಳ್ಳುವ ಆಸೆ. ಪ್ರತಿಸ್ಪರ್ಧಿಯಾಗತಕ್ಕವನನ್ನು ಮತ್ತಾರಾದರೂ ಆಕ್ರಮಿಸಿದ ಸಂದರ್ಭದಲ್ಲಿ ಅಂತರಂಗದಲ್ಲಿ ತೃಪ್ತಿ; ಆಕ್ರಾಂತನ ಸಹಾಯಕ್ಕೆ ಹೊರಡದೆ ಸ್ವಸ್ಥನಾಗಿದ್ದು ತನ್ನ ಸ್ವತ್ತಿಗೆ ತೊಂದರೆಯಿಲ್ಲದಿದ್ದರೇಕೆ ಯೋಚನೆ ಯೆಂದುಕೊಳ್ಳತಕ್ಕ ಮನೋಧರ್ಮ. ಹೀಗಿರುವಲ್ಲಿ 'ಪರಸ್ವಾಪಹಾರ ಎಷ್ಟು ಪಾಪಕರ! ಎಷ್ಟು ಅನ್ಯಾಯ! ಪೋಲೀಸ್ ಶಿಬ್ಬಂದಿಯನ್ನು ಕರೆಸಿ ನಿಲ್ಲಿಸ ಬೇಕು!' ಎಂದು ಎಲ್ಲರೂ ಆರ್ಭಟಿಸುವವರೇ. ಆದರೆ ಮಂಡಲಿಗೆ ಸೇರಿದ ಪೋಲೀಸ್ ಪಡೆಯೇ ಇಲ್ಲ. ಇರುವ ಪೋಲೀಸ್ ಶಿಬ್ಬಂದಿಯನ್ನು ಪ್ರತಿ ವರ್ತಕನೂ ಸ್ವಂತಕ್ಕಾಗಿಟ್ಟುಕೊಂಡದ್ದು; ತನ್ನ ಅಂಗಡಿಯನ್ನೋ ಮಳಿಗೆ ಯನ್ನೋ ರಕ್ಷಿಸುವುದಕ್ಕಾಗಿ ಗೊತ್ತುಮಾಡಿಕೊಂಡದ್ದು.

ಹೀಗೆಯೇ ಕೂಟಸಂಸ್ಥೆಯ ಅನುಭವದಲ್ಲಿ ನಡೆಯಿತು. ೧೯೩೧ರಲ್ಲಿ ಜಪಾನಿನವರು ಮಂಚೂರಿಯವನ್ನು ಆಕ್ರಮಿಸಿ ಚೀನದಿಂದ ಕಿತ್ತುಕೊಂಡರು. ೧೯೩೫ರಲ್ಲಿ ಇಟಲಿಯವರು ಅಬಿಸ್ಸಿನಿಯವನ್ನು ಮುತ್ತಿ ಅಪಹರಿಸಿದರು; ೧೯೩೯ರಲ್ಲಿ ಅಲ್ಬೇನಿಯವನ್ನು ಆಕ್ರಮಿಸಿಕೊಂಡರು. ೧೯೩೬ರಲ್ಲಿ ಇಟಲಿ ಜರ್ಮನಿಗಳೊಟ್ಟುಗೂಡಿ ಸ್ಪೈನ್ನಿನಲ್ಲಿ ಆಡಳಿತಕ್ಕೆ ವಿರುದ್ಧವಾಗಿ ಅಂತ ರ್ಯುದ್ಧ ನಡೆಸಲು ಫ್ರಾಂಕೋ ಎಂಬ ದಳಪತಿಗೆ (General Franco) ಸಹಾಯಕೊಟ್ಟುವು. ೧೯೩೯ರಲ್ಲಿ ಫ್ರಾಂಕೋ ಆ ಸಹಾಯದಿಂದ ಸ್ಪೈನ್ ಸರ್ಕಾರವನ್ನು ಕೊನೆಗಾಣಿಸಿದನು. ಕೂಟಸಂಸ್ಥೆಯಲ್ಲಿ ಸೇರಿಕೊಂಡಿದ್ದ ಇತರ ರಾಷ್ಟ್ರಗಳವರೆಲ್ಲರೂ ಹಾಹಾಕಾರಮಾಡಿದರು; ಆದರೆ ಮತ್ತೇನನ್ನೂ ಮಾಡಲು ಇಷ್ಟಪಡಲಿಲ್ಲ.

ರಾಷ್ಟ್ರಗಳ ಕೂಟಸಂಸ್ಥೆಯೆಂಬುದು ಪ್ರಭಾವಶಾಲಿಯೂ ಪರಿಣಾಮಕಾ ರಕವೂ ಆಗಬೇಕಾದಲ್ಲಿ ಹೇಗೆ ನಡೆಯಬೇಕು? ಅಮೆರಿಕದಲ್ಲಿ ಕಾಲೊನಿಗಳ ಮಿತ್ರಮಂಡಲಿಯು ಕೂಟರಾಷ್ಟ್ರದ ರೂಪವನ್ನು ಪಡೆದಂತಾದರೂ ನಡೆಯ ಬೇಡವೇ? ಅಲ್ಲಿಯವರೆಗೂ ರಾಷ್ಟ್ರಗಳ ಕೂಟಸಂಸ್ಥೆಯೆಂಬುದರ ಪ್ರಯತ್ನ ಗಳು ಇದುವರೆಗೂ ನಡೆದಂತೆ ವ್ಯರ್ಥವಾಗಿಯೇ ಪರಿಣಮಿಸಬೇಕು. ಸ್ಥಿರ ವಾದ ಶಾಂತಿಯನ್ನೂ ನ್ಯಾಯವನ್ನೂ ಲೋಕದಲ್ಲಿ ರಕ್ಷಿಸಬಲ್ಲ ರಾಷ್ಟ್ರಗಳ

ಕೂಟಸಂಸ್ಥೆಯು ಮುಂದಕ್ಕಾದರೂ ರೂಪಗೊಂಡೀತೇ? ಆಗುವುದಾದರೆ ಹೇಗಾಗಬೇಕು? ಎಂಬ ಪ್ರಶ್ನೆಗಳು ಮುಂದಿನಕಾಲದ ಸಮಸ್ಯೆಗಳು.

ಮುಖ್ಯಪ್ರಶ್ನೆ ೧೦೫: ಸರ್ವಾಧಿಕಾರಿಗಳಿಗೆ ಬೇಕಾದುದೇನು? ನಡೆದುದೇನು?

ಯುದ್ಧೋತ್ಸಾಹಿಗಳೂ ರಣೋನ್ಮತ್ತರೂ ಆದ ಬಳಿಕ ಶಾಂತಿಸಾಧಕರು ಹೆಜ್ಜೆಹಾಕಿದರಷ್ಟೆ. ಆ ತರುವಾಯ ಅನೇಕ ದೇಶಗಳಲ್ಲಿ ವಿಚಿತ್ರತರವಾಗಿ ನಡೆಯಿತು; ಪ್ರಭಾವಶಾಲಿಗಳು ಪ್ರಕಾಶಕ್ಕೆ ಬಂದರು. ಅವರಲ್ಲಿ ಹೆಚ್ಚು ಕಡಿಮೆಗಳಿದ್ದಾಗ್ಯೂ ಅವರೆಲ್ಲರನ್ನೂ **ಸರ್ವಾಧಿಕಾರಿ** (Dictators) ಗಳೆಂದು ಕರೆದುಕೊಳ್ಳಬಹುದು. ಅವರೆಲ್ಲರೂ ಸಮಸ್ತಾಧಿಕಾರವನ್ನೂ ತಮ್ಮ ಸ್ವಾಧೀನ ಮಾಡಿಕೊಂಡು ಆ ತರುವಾಯ ತಮಗೆ ತೋರಿದಂತೆ ಅಧಿಕಾರವನ್ನು ನಿರ್ವಹಿಸಿದವರು. ಅವರಲ್ಲಿ ಎಲ್ಲರೂ ತಮ್ಮ ದೇಶಸ್ಥರ ಅನುಮತಿಯಿಂದಲೇ ಅಧಿಕಾರವನ್ನು ಪಡೆದರೆಂದು ಹೇಳಬಹುದು. ಆದರೆ ಆ ತರುವಾಯ ಅಧಿಕಾರ ನಡೆಸಿದಾಗ ಎಷ್ಟುಮಾತ್ರ ಜನರಾಶಿಯಲ್ಲಿ ಬಹುಪಕ್ಷದ ಸಮ್ಮತಿಯನ್ನು ಪಡೆದಿದ್ದರೆಂದು ಹೇಳುವುದು ಸುಲಭವಲ್ಲ. ಏಕಂದರೆ ಬಹುತರವಾಗಿ ಆ ಸರ್ವಾಧಿಕಾರಿಗಳು ಹಿಂಸೆಗೊಳಿಸಿಯೋ ನಿರ್ಬಂಧದಲ್ಲಿಡಿಸಿಯೋ ವಧೆಗೆ ಗುರಿಮಾಡಿಯೋ ಗಡೀಪಾರು ಮಾಡಿಯೋ ತಮಗೆ ವಿರೋಧಿಗಳಾಗಿದ್ದವರನ್ನೂ ಆಗಬಹುದಾದವರನ್ನೂ ಉಸಿರೆತ್ತದಂತೆ ಅಡಗಿಸಿಬಿಟ್ಟರು. ಸರ್ವಾಧಿಕಾರಿಗಳಾದವರು ರಾಷ್ಟ್ರದಲ್ಲಿ ಉಳಿಸಿಕೊಂಡದ್ದು ತಮ್ಮ ಪಕ್ಷವೊಂದನ್ನೇ.

ಸರ್ವಾಧಿಕಾರಿಗಳಲ್ಲಿ ಮೊದಲನೆಯಾತ **ಲೆನಿನ್** (Lenin). ೧೯೧೭ ರಲ್ಲಿ ರಷ್ಯದ ರಾಷ್ಟ್ರಪಲ್ಲಟವನ್ನು ನಡೆಸಿದನು ಆತ. ಹಿಂದೆ ಕಾರ್ಲ್‌ಮಾರ್ಕ್ಸ್ ಎಂಬಾತನ ವೃತ್ತಾಂತದಲ್ಲಿ ಸರ್ವಸಮತಾವಾದವನ್ನು ಕಂಡೆವಷ್ಟೆ. ಆ ವಾದವನ್ನು ಅಂಗೀಕರಿಸಿ ಲೆನಿನ್ ಅಖಿಲ ಪೃಥ್ವಿಯನ್ನೂ ವ್ಯಾಪಿಸುವ ರಾಷ್ಟ್ರಸ್ಥಾಪನೆಯ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಅದಕ್ಕೆ ಅಸ್ತಿಭಾರವನ್ನು ನಿರ್ಮಿಸಲು ಯತ್ನಿಸಿದನು. ೧೯೨೪ ರಲ್ಲಿ ಆತನು ಕಾಲವಶನಾದನು. ಆತನ ಪದವಿಗೆ **ಸ್ಟಾಲಿನ್** (Stalin) ಎಂಬ ಆತನ ಶಿಷ್ಯನು ಬಂದನು. **ಯೂನಿಯನ್ ಆಫ್ ಸೋಷಿಯಲಿಸ್ಟ್ ಸೋವಿಯೆಟ್ ರಿಪಬ್ಲಿಕ್ಸ್** (U.S.S.R.) ಎಂಬ ಕೂಟರಾಷ್ಟ್ರವನ್ನು ರಷ್ಯದಲ್ಲಿ ನಡೆಸುತ್ತ ಅದರಲ್ಲಿ ಸಮಾಜವಾದದ ತತ್ತ್ವಗಳನ್ನೂ ನ್ಯಾಯಗಳನ್ನೂ ಪ್ರಬಲವಾಗಿ ರೂಪಗೊಳಿಸಲು ಆತನು ಯತ್ನಿಸುತ್ತಿದ್ದಾನೆ.

ಮುಸ್ಸೊಲೀನಿ (Mussolini) ಎರಡನೆಯಾತ. ೧೯೨೨ ರಲ್ಲಿ ಆತನು ಇಟಲಿಯಲ್ಲಿ **ಫ್ಯಾಸಿಸ್ಟ್** (Fascist) ರೀತಿಯ ಆಡಳಿತವನ್ನು ಸ್ಥಾಪಿಸಿದನು. ಆ

ರೀತಿಯೇನೆಂದು ಮುಂದಿನ ಅಧ್ಯಾಯದಲ್ಲಿ ನೋಡೋಣ. ಮುಸ್ಸೊಲೀನಿಗೆ **ಡುಚೆ** (Duce) ಎಂಬ ಬಿರುದುಂಟು; ನಾಯಕನೆಂಬರ್ಥ ಆ ಪದಕ್ಕೆ. ಇಟಲಿಯ ದೊರೆ ಆತನ ಕೈಗೊಂಬೆಯಾಗಿರುತ್ತಾನೆ. ಅಬಿಸ್ಸಿನಿಯದ ಅಪಹಾರ ಮುಂತಾದ ಕಾರ್ಯಗಳನ್ನು ಇತರೆಡೆಗಳಲ್ಲಿ ಮುಸ್ಸೊಲೀನಿ ನಡೆಸಿದ್ದಾಗ್ಯೂ ಸ್ವದೇಶವನ್ನು ಶುಭ್ರಗೊಳಿಸಿ ಉತ್ತಮವಾದ ರಸ್ತೆಗಳಿಂದಲೂ ಕಟ್ಟಡಗಳಿಂದಲೂ ಶೋಭಿಸುವಂತೆ ನೆರವೇರಿಸಿರುವನು.

ಮೂರನೆಯಾತ **ಮುಸ್ತಫಾ ಕೆಮಾಲ್ ಪಾಷ; ಅಟಾತುರ್ಕ್** ಎಂಬ ಬಿರುದು ಆತನಿಗೆ. ಆಧುನಿಕ ತುರ್ಕಿಯನ್ನು ಕಟ್ಟಿದವನು ಆತ. ೧೯೨೩ ರಲ್ಲಿ ತುರ್ಕಿ ರಿಪಬ್ಲಿಕ್‌ರೂಪತಾಳಿ ಆತನನ್ನು ಪ್ರಥಮಾಧ್ಯಕ್ಷನನ್ನಾಗಿ ವರಿಸಿತು. ರಾಷ್ಟ್ರದ ಏರ್ಪಾಡುಗಳಲ್ಲಿಯೂ ಸಾಮಾಜಿಕ ರೀತಿನೀತಿಗಳಲ್ಲಿಯೂ ವ್ಯಾಪಾರೋದ್ಯೋಗಸಾಧನೆಯಲ್ಲಿಯೂ ಆತನ ಪ್ರಭಾವದಿಂದ ತುರ್ಕಿಯು ಹೊಸ ರೂಪವನ್ನು ಪಡೆಯಿತು.

ಅನೇಕಾಂಶಗಳಲ್ಲಿ ಕೆಮಾಲ್‌ಪಾಷನನ್ನು ಹೋಲಿದ **ರಿಝಾಖಾ ಪಹ್ಲವಿ** ಇರಾನಿನಲ್ಲಿ ತನ್ನ ಮಹಿಮೆಯನ್ನು ಬೀರಿದನು. ಆ ದೇಶದಲ್ಲಿ ಪ್ರಧಾನ ಮಂತ್ರಿಯಾಗಿದ್ದು ೧೯೨೫ ರಲ್ಲಿ ಆತನೇ ಇರಾನ್ ಪ್ರಭುವಾದನು. ಆಧುನಿಕ ಕಾಲಕ್ಕೆ ತಕ್ಕಂತೆ ದೇಶವನ್ನು ರೂಪಾಂತರಗೊಳಿಸುವುದರಲ್ಲಿ ಆತನೂ ಕೃತಕೃತ್ಯನಾದವನು. ಈಗ ಆತನ ಮಗನ ಪ್ರಭುತ್ವ ನಡೆಯುತ್ತಿರುವುದು.

ಸ್ಪೆಯ್ನಿನಲ್ಲಿ ನಡೆಯುತ್ತಿದ್ದ ರಿಪಬ್ಲಿಕ್ ಸರ್ಕಾರವು ೧೯೩೯ ರಲ್ಲಿ ಸೋತಿತಷ್ಟೆ. ಆಗ ಗೆಲುವನ್ನು ಪಡೆದು ಸ್ಪೆಯ್ನಿಗೆ ಸರ್ವಾಧಿಕಾರಿಯಾದ **ಫ್ರಾನ್ಸಿಸ್ಕೊ ಫ್ರಾಂಕೊ** (Francisco Franco) ಎಂಬಾತನನ್ನೂ ಈ ಗುಂಪಿನಲ್ಲಿ ಗಣಿಸಬಹುದು.

ಲೆನಿನ್, ಸ್ಟಾಲಿನ್ ಎಂಬಿಬ್ಬರನ್ನು ಬಿಟ್ಟು ಪ್ರಾಯಶಃ ಉಳಿದೆಲ್ಲರನ್ನೂ ಮೀರಿಸಿದಾತನು ಜರ್ಮನಿಯಲ್ಲಿ **ಫ್ಯೂರರ್** (Fuehrer) ಅಥವಾ ನಾಯಕನೆನಿಸಿರುವ **ಅಡಾಲ್ಫ್ ಹಿಟ್ಲರ್** (Adolf Hitler). ಮುಹಾಯುದ್ಧ ಮುಗಿದಾಗ ಜರ್ಮನಿಯಲ್ಲಿ ರಾಷ್ಟ್ರಪಲ್ಲಟ ನಡೆಯಿತು. ಕೈಸರ್ ಬಿರುದು ಪಡೆದು ಚಕ್ರವರ್ತಿಯಾಗಿದ್ದಾತನು ಅಧಿಕಾರತ್ಯಾಗಮಾಡಬೇಕಾಯಿತು. ರಿಪಬ್ಲಿಕ್ ರೂಪರಚನೆಯಾಯಿತು. ಆದರೆ ಆ ಹೊಸರಾಷ್ಟ್ರದ ನಿರ್ವಾಹ ದುಸ್ಸಾಧ್ಯವಾಯಿತು. ಯುದ್ಧಕ್ಕಾಗಿ ನಡೆದ ವೆಚ್ಚವನ್ನಲ್ಲದೆ ಜಯಶಾಲಿರಾಷ್ಟ್ರಗಳವರು ಹೊರಿಸಿದ ದಂಡದ ಹಣವನ್ನು ಬೇರೆ ಹುಟ್ಟಿಸಬೇಕಾಗಿತ್ತು. ಜರ್ಮನಿ ನಡೆಸಿದ ಯುದ್ಧದಿಂದ ಹಾಳಾದ ನಾಡುಗಳನ್ನುದ್ಧರಿಸಲು ಆ ಹಣದ ಸಂದಾಯ

ವಾಗಬೇಕೆಂದು ಜಯಶಾಲಿಗಳಾದವರು ನಿರ್ಬಂಧಪಡಿಸಿದರು. ಆ ಪರಿಸ್ಥಿತಿಯಲ್ಲಿ ಜರ್ಮನಿಯ ಆದಾಯವ್ಯಯಗಳು ಅಲ್ಲಕಲ್ಲೋಲವಾದುವು; ಜನರು ನಷ್ಟಪಟ್ಟು ನಿರಾಶೆಯನ್ನು ತಾಳಬೇಕಾಯಿತು. ಅಂತಹ ಸಂದರ್ಭದಲ್ಲಿ ಹಿಟ್ಲರ್ ಒಂದು ಪಾರ್ಟಿ ಅಥವಾ ಕಕ್ಷಿಯನ್ನು ಕಟ್ಟಿದನು. **ನ್ಯಾಷನಲ್ ಸೋಷಿಯಲಿಸ್ಟ್ ಪಾರ್ಟಿ** (National Socialist) ಅಥವಾ **ನಾಝಿ**[1] (Nazi) ಎಂದು ಆ ಕಕ್ಷಿಯ ಹೆಸರು. ಆ ಕಕ್ಷಿಯವರು ಕ್ರಮವಾಗಿ ಬಲಗೊಂಡರು. ರಿಪಬ್ಲಿಕ್ ರಾಷ್ಟ್ರವನ್ನು ಕೊನೆಗಾಣಿಸಿದರು. ಹಿಟ್ಲರನಿಗೆ ಸರ್ವಾಧಿಕಾರ ಪ್ರಾಪ್ತಿಯಾಯಿತು. ಸರ್ವನಾಶಕ್ಕೆ ಸಿದ್ಧವಾಗಿದ್ದ ಆ ದೇಶದಲ್ಲಿ ಹಿಟ್ಲರ್ ಅದ್ಭುತವಾದ ಮಹಿಮೆಯನ್ನು ತೋರಿಸಿ ಪುನರುದ್ಧಾರಗೊಳಿಸಿದನು. ಆ ಕರ್ತವ್ಯವನ್ನು ನಡೆಸುವುದರಲ್ಲಿ ಹಿಟ್ಲರ್ ಜರ್ಮನರ ರಣೋತ್ಸಾಹವನ್ನು ಕೆರಳಿಸಿದನು. ಆ ಉತ್ಸಾಹದಿಂದ ಉತ್ತೇಜನಪಡೆದ ಜರ್ಮನರು ರಾಷ್ಟ್ರವನ್ನು ಪುನಃ ಕಟ್ಟಿಕೊಳ್ಳುವುದಕ್ಕೆ ಮಾತ್ರವಲ್ಲದೆ ಜಗತ್ತಿಗೆಲ್ಲ ತಾವು ಸರ್ವಶ್ರೇಷ್ಠರಾಗುವುದಕ್ಕೆ ಅಡ್ಡಿಯೆಂದು ತೋರಿಬಂದವರೆಲ್ಲರನ್ನೂ ದಮನಗೊಳಿಸಲು ಉದ್ರೇಕದಿಂದ ಉದ್ಯುಕ್ತರಾದರು. ಹಿಟ್ಲರನ ಭಾಷಣಶಕ್ತಿಯು ಅಚ್ಚರಿಯಾದುದು. ಆತನ ಭಾಷಣಗಳಿಂದ ಉದ್ರಿಕ್ತರಾಗಿ ಜರ್ಮನರು ಹಿಂದೆ ವರ್ಸೇಯ್ ಒಪ್ಪಂದದ ಪ್ರಕಾರ ನಷ್ಟಮಾಡಿಕೊಂಡಿದ್ದ ಕ್ಷೇತ್ರಗಳಲ್ಲಿ ದೂರದ ಕಾಲೊನಿಗಳನ್ನು ಬಿಟ್ಟು ಉಳಿದವುಗಳೆಲ್ಲವನ್ನೂ ಪಡೆದುಕೊಂಡರು. ೧೯೩೮ರಲ್ಲಿ ಆಸ್ಟ್ರಿಯವನ್ನು ಗೆದ್ದುಕೊಂಡರು. ೧೯೩೯ರಲ್ಲಿ ಝೆಕೊಸ್ಲೊವೇಕಿಯವನ್ನು ಆಕ್ರಮಿಸಿದರು. ಆ ತರುವಾಯ ಪೋಲಂಡನ್ನು ಮುತ್ತಿ ಹಿಡಿದರು. ಈ ದೇಶಗಳ ಗೋಜಿಗೆ ಹೋಗುವುದಿಲ್ಲವೆಂದು ಹಿಟ್ಲರ್ ಹಿಂದೆ ಪ್ರಮಾಣ ಮಾಡಿದ್ದನು. ಪೋಲಂಡನ್ನು ರಕ್ಷಿಸಲು ಸಹಾಯಕ್ಕೆ ಬರುವುದಾಗಿ ಗ್ರೇಟ್ ಬ್ರಿಟನ್ ಮತ್ತು ಫ್ರಾನ್ಸ್ ರಾಷ್ಟ್ರಗಳವರು ವಾಗ್ದಾನಮಾಡಿದ್ದರು. ಆದ್ದರಿಂದ ೧೯೩೯ನೆ ಸೆಪ್ಟೆಂಬರ್ ತಿಂಗಳಲ್ಲಿ ಎರಡನೆ ಘೋರಯುದ್ಧವನ್ನು ಹಿಟ್ಲರ್ ಉಪಕ್ರಮಿಸಿದನು.

ಯುದ್ಧ ಮೊದಲಾದ ಮೊದಲನೆ ವರ್ಷದಲ್ಲಿ ಅಪಾರವಾದ ವಿಮಾನಬಲದಿಂದಲೂ ಯಂತ್ರಬಲಸಜ್ಜಿತ ಸೈನ್ಯಗಳಿಂದಲೂ ಹಿಟ್ಲರನಿಗೆ ಭಾರಿ ಜಯ ವೊದಗಿತು. ಒಂದೊಂದಾಗಿ ಪೋಲಂಡ್, ಡೆನ್ಮಾರ್ಕ್, ನಾರ್ವೆ, ಹಾಲಂಡ್, ಬೆಲ್ಜಿಯಂ ಮತ್ತು ಫ್ರಾನ್ಸ್ ದೇಶಗಳು ಜರ್ಮನಿಯ ವಶವಾದುವು. ಆದರೆ

---

[1] ನಾಝಿ ಎಂಬುದು Nationalen Sozialisten ಎಂಬ ಜರ್ಮನ್ ಶಬ್ದಗಳ (ಅರ್ಥಾತ್ Nalional Socialist) ಸಂಕ್ಷಿಪ್ತ ರೂಪವು.

ಆ ವೇಳೆಗೆ ಬ್ರಿಟಿಷರಿಗೆ ಪ್ರಧಾನನೆನಿಸಿ ನಾಯಕನಾದ **ವಿನ್‌ಸ್ಟನ್ ಚರ್ಚಿಲ್** ಎಂಬ ಸಮರ್ಥನ ಯೋಜನೆ ನಡೆಯಿತು. ಜರ್ಮನರ ನೌಕಾಬಲದಲ್ಲಿ ವಿಶೇಷ ಭಾಗವು ನಾಶವಾಯಿತು; ಬ್ರಿಟಿಷ್ ದ್ವೀಪಗಳನ್ನು ಆಕ್ರಮಿಸಬೇಕೆಂಬ ಜರ್ಮನರ ಪ್ರಯತ್ನ ನಡೆಯದಾಯಿತು. ಜರ್ಮನರ ವಿಮಾನಬಲದವರು ಇಂಗ್ಲಂಡಿನ ಮೇಲೆ ಬಾಂಬುಗಳನ್ನೆರಚಲು ಕಾಣಿಸಿಕೊಂಡಾಗ ಆ ವಿಮಾನ ಬಲಕ್ಕೆ ಹೆಚ್ಚು ನಾಶವೂ ಸಂಭವಿಸಿತು. ೧೯೪೦ ರಲ್ಲಿ ಮುಸ್ಸೊಲೀನಿ ಇಟಲಿ ಯನ್ನು ಜರ್ಮನಿಯೊಡನೆ ಸೇರಿಸಿ ಗ್ರೀಸ್ ದೇಶವನ್ನು ಮುತ್ತಿದನು. ಈಜಿಪ್ಟನ್ನು ಮುತ್ತಲು ಪ್ರಯತ್ನಿಸಿದನು. ಆದರೆ ಬ್ರಿಟಿಷ್ ಸಾಮ್ರಾಜ್ಯದ ಸ್ಥಳಬಲ, ಜಲಬಲ, ಆಕಾಶಬಲಗಳ ಎದುರಿನಲ್ಲಿ ಇಟಲಿಗೆ ಆಫ್ರಿಕದಲ್ಲಿ ಲಭಿಸಿದ್ದ ಸಾಮ್ರಾಜ್ಯದ ಬಹುಭಾಗವನ್ನು ಆ ದೇಶವು ಕಳೆದುಕೊಳ್ಳಬೇಕಾಗಿ ಬಂತು.

ಈ ಮಧ್ಯೆ ಬ್ರಿಟಿಷರಿಗೆ ಡುಮಿನಿಯನ್ನುಗಳಿಂದಲೂ ಅಮೆರಿಕದಿಂದಲೂ ಶಸ್ತ್ರಸಾಮಗ್ರಿಯೂ ಏರೋಪ್ಲೇನುಗಳೂ ಬಂದು ಸೇರಿದವು. ಆ ಸಹಾಯ ದಿಂದ ಬ್ರಿಟಿಷರು ಬಾಂಬುಗಳನ್ನು ಬೀರಿ ಜರ್ಮನಿಗೂ ಇಟಲಿಗೂ ಸೇರಿದ ಕಾರ್ಖಾನೆ ಬಂದರುಗಳನ್ನೂ ತೈಲಖನಿಗಳನ್ನೂ ನಾಶಗೊಳಿಸಿದರು. ಆದರೆ ೧೯೪೧ ನೆ ವರ್ಷದ ಗ್ರೀಷ್ಮದಲ್ಲಿ ಜರ್ಮನರು ತಮ್ಮ ಯುದ್ಧಯಂತ್ರಗಳನ್ನು ಬಾಲ್ಕನ್ ಪರ್ಯಾಯದ್ವೀಪದ ಕಡೆಗೆ ಹೊರಡಿಸಿದರು. ರಷ್ಯ ಮತ್ತು ಬ್ರಿಟಿಷ್ ದ್ವೀಪಗಳನ್ನೂ ಸ್ವೀಡೆನ್, ಸ್ಪೆಯ್ನ್, ಪೋರ್ಚುಗಲ್, ಸ್ವಿಟ್ಸರ್ಲಂಡ್ ಗಳಂತಹ ಹಲವು ಸಣ್ಣ ರಾಷ್ಟ್ರಗಳನ್ನೂ ಬಿಟ್ಟು ಉಳಿದ ಸಮಸ್ತ ಯೂರೋಪ್ ಭೂಭಾಗವೂ ಜರ್ಮನರ ಸ್ವಾಧೀನವಾದಂತೆ ತೋರಿತು. ಅಮೆರಿಕದ ಸಂಯುಕ್ತಸಂಸ್ಥಾನಗಳಿಗೆ ಬಲಾಢ್ಯನಾದ **ಫ್ರಾಂಕ್ಲಿನ್ ರೂಸ್ವಾಲ್ಟ್** (Franklin Roosevelt) ಎಂಬಾತನು ರಾಷ್ಟ್ರಾಧ್ಯಕ್ಷ. ಆತನು ಯುದ್ಧದಲ್ಲಿ ಪ್ರವೇಶಮಾಡದಿದ್ದಾಗ್ಯೂ ಬ್ರಿಟಿಷರಿಗೆ ಆದಷ್ಟು ಸಹಾಯವನ್ನು ನೀಡಿದನು.

೧೯೪೧ ನೇ ಇಸವಿ ಜೂನ್ ವೇಳೆಗೆ ಜರ್ಮನರು ರಷ್ಯದೊಡನೆ ಯುದ್ಧಕ್ಕೆ ಇಳಿದರು. ಇದಕ್ಕೆ ಕಾರಣವನ್ನು ತಿಳಿಯತಕ್ಕುದು. ೧೯೩೯ ರಲ್ಲಿ ಯುದ್ಧವು ಪ್ರಾರಂಭವಾದಾಗ ಜರ್ಮನಿಗೂ ರಷ್ಯಕ್ಕೂ ಮೈತ್ರಿಯ ಒಪ್ಪಂದವಾಗಿತ್ತು. ತಮಗೆ ಬೇಕಾದ ಸಾಧಕಸಾಮಗ್ರಿಯು ಸಮೃದ್ಧಿಯಾಗಿ ಆ ಮೂಲಕ ದೊರಕೀತೆಂಬ ನಿರೀಕ್ಷೆ ಜರ್ಮನರಿಗಿತ್ತು. ೧೯೪೧ ನೇ ವರ್ಷ ಮೂಡಿ ಆರು ತಿಂಗಳು ಕಳೆದಾಗ್ಯೂ ಬೇರೆಡೆಗಳಲ್ಲಿ ನಡೆಸಿದ ಮಿಂಚಿನಂತಹ ಆಕ್ರಮಣ ದಿಂದ ನಿರೀಕ್ಷಿಸಿದಷ್ಟು ಪ್ರಯೋಜನವಾಗಲಿಲ್ಲ. ಯುದ್ಧವು ವಿಲಂಬಿಸಿತು; ದೀರ್ಘಕಾಲದ ಯುದ್ಧಕ್ಕೆ ತಕ್ಕಷ್ಟು ಪೆಟ್ರೋಲಿಯಂ ಸಂಪಾದಿಸಿಟ್ಟುಕೊಳ್ಳ

ಬೇಕಾಗಿತ್ತು. ಈ ಕಾರಣದಿಂದ ಜರ್ಮನರು ಯಂತ್ರಬಲಸನ್ನದ್ಧವಾದ ಅಪಾರಸೈನ್ಯವನ್ನು ರಷ್ಯದ ಮೇಲೆ ಹೊರಡಿಸಿದರು. ಹೆಜ್ಜೆಹೆಜ್ಜೆಗೂ ರಷ್ಯನರು ಅತಿಶಯಶೌರ್ಯದಿಂದ ಕಾದಾಡಿದರು. ತಮ್ಮ ಪೈರುಪಚ್ಚೆಗಳನ್ನೂ ಕೈಗಾರಿಕೆ, ಕ್ಷೇತ್ರಗಳನ್ನೂ ನಾಶಗೊಳಿಸಿ ದೇಶವನ್ನು ಸ್ಮಶಾನದಂತೆ ಮಾಡಿಟ್ಟು ಹಿಮ್ಮೆಟ್ಟಿದರು. ೧೯೪೧ನೇ ಇಸವಿಯಲ್ಲಿ ಚಳಿಗಾಲವು ಮೊದಲಾದಾಗ ಲೆನಿನ್‌ಗ್ರಾಡ್, ಮಾಸ್ಕೊ ಮತ್ತು ರೊಸ್ಟೋಫ್ ನಗರಗಳ ಬಳಿ ಹೊಡೆದಾಟ ನಡೆಯುತ್ತಲಿತ್ತು. ರಷ್ಯನ್ನರು ಸ್ವಭಾವವಾಗಿ ಧೀರರು; ಒಗ್ಗಟ್ಟುಳ್ಳವರು. ಬ್ರಿಟಿಷರೂ ಅಮೆರಿಕನ್ನರೂ ಕೊಟ್ಟು ಕಳುಹಿಸಿದ ಟ್ಯಾಂಕುಗಳೂ ಏರೋಪ್ಲೇನುಗಳೂ ಸಹಾಯಕ್ಕೊದಗಿದುವು. ಸ್ಥೈರ್ಯದಿಂದ ಕಾದಾಡುತ್ತ ರಷ್ಯನರು ಶತ್ರುಗಳನ್ನು ತಡೆದುದಲ್ಲದೆ ಸರಹದ್ದುಗಳ ಕಡೆ ನೂರಾರು ಮೈಲಿದೂರ ಹಿಮ್ಮೆಟ್ಟಿಸಿದರು. ಉಭಯಪಕ್ಷಗಳಲ್ಲಿಯೂ ಕೋಟ್ಯಂತರ ಧನವು ನಷ್ಟವಾಯಿತು. ವೇಗದಿಂದ ರಷ್ಯನ್ನರನ್ನು ವಶಪಡಿಸಿಕೊಳ್ಳುವ ಉದ್ದೇಶದಿಂದ ಆಕ್ರಮಿಸಿದ್ದ ಜರ್ಮನರಿಗೆ ಈಗ ಚಳಿಗಾಲವೆದುರಾಯಿತು. ಹಿಂದೆ ನಪೋಲಿಯನ್ ಮುತ್ತಿದಾಗ ರಷ್ಯನರಿಗೆ ಆಪ್ತಸಖನಾಗಿ ಶತ್ರುಬಲವನ್ನು ನಾಶಪಡಿಸಿದ ಹೇಮಂತನೊಡನೆ ಜರ್ಮನರು ಹೆಣಗಾಡಬೇಕಾಗಿ ಬಂತು.

ಈ ಮಧ್ಯೆ ಯುದ್ಧವಿನ್ನೂ ಪ್ರಬಲವಾಯಿತು. ಬ್ರಿಟಿಷರೂ ಅಮೆರಿಕನ್ನರೂ ರಷ್ಯದ ಸಹಾಯಕ್ಕೆ ತಮ್ಮ ಚೈತನ್ಯವನ್ನು ವಿನಿಯೋಗಿಸುತ್ತಿದ್ದ ವೇಳೆಯೇ ತಮಗೆ ಸುಸಮಯವೆಂದು ಜಪಾನೀಯರು ಹಟಾತ್ತಾಗಿ ಯುದ್ಧವನ್ನು ಆರಂಭಿಸಿದರು. ದೂರಪ್ರಾಚ್ಯದಲ್ಲಿ ಅಮೆರಿಕನ್ನರಿಗೂ ಬ್ರಿಟಿಷರಿಗೂ ಡಚ್ಚರಿಗೂ ಸೇರಿದ್ದ ಪ್ರದೇಶಗಳನ್ನು ಆಕ್ರಮಿಸಿ ಬಹುಭಾಗವನ್ನು ಸ್ವಾಧೀನಪಡಿಸಿಕೊಂಡರು. ಇದರ ಪರಿಣಾಮವಾಗಿ ಅಮೆರಿಕದವರು ಇಟಲಿ ಜರ್ಮನಿ ಜಪಾನುಗಳ ವಿರೋಧಿಗಳಾಗಿ ಯುದ್ಧದಲ್ಲಿ ಪ್ರತ್ಯಕ್ಷವಾಗಿ ಸೇರಿಕೊಳ್ಳಬೇಕಾಯಿತು.

ಆಗ ವಿಚಾರ್ಯವಾದುದಿಷ್ಟು. ಒಟ್ಟುಸೇರಿದ ಬ್ರಿಟಿಷರೂ ರಷ್ಯನರೂ ಚೀನೀಯರೂ ಅಮೆರಿಕನರೂ ತಮ್ಮ ಅಪಾರ ಜನಬಲವನ್ನೂ ಯುದ್ಧಕೈಗಾರಿಕೆಗಳನ್ನೂ ಸನ್ನದ್ಧಗೊಳಿಸಿ ಹೋರಾಟನಡೆಸುವ ಪರಿಸ್ಥಿತಿಯಲ್ಲಿ ಜರ್ಮನರೂ ಜಪಾನೀಯರೂ ತಾವು ಹೊಸದಾಗಿ ಆಕ್ರಮಿಸಿಕೊಂಡದೇಶಗಳನ್ನು ವಶಪಡಿಸಿಕೊಂಡು ಅವುಗಳ ಸಂಪತ್ತನ್ನು ಪ್ರಯೋಗಿಸಬಲ್ಲವರಾದಾರೇ ಎಂಬ ವಿಷಯ.

ಅಭ್ಯಾಸಗಳು

೧. ಮೊದಲನೆ ಮತ್ತು ಎರಡನೆ ಘೋರಯುದ್ಧಗಳಿಗೆ ಮುಖ್ಯ ಕಾರಣಗಳೇನು ?

೨. ಲೀಗ್ ಆಫ್ ನೇಷನ್ಸ್ ಎಂಬ ರಾಷ್ಟ್ರಗಳ ಕೂಟಸಂಸ್ಥೆಯಿಂದ ನಡೆದ ಪ್ರಯೋಜನವೇನು ?

೩. ಸರ್ವಾಧಿಕಾರಿಯ ಆಳಿಕೆಯಲ್ಲಿ ಅನುಕೂಲಗಳೇನು ? ಅನಾನುಕೂಲಗಳೇನು ?

೪. ಎರಡು ಯುದ್ಧಗಳಲ್ಲಿಯೂ ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಮೆರಿಕದವರು ಸಹಾಯ ಮಾಡಿದುದೇಕೆ ?

೨೯ ನೆ ಅಧ್ಯಾಯ

ಸಮಸ್ತ ಸೈನ್ಯಾಧಿಪತಿ ಚಿಯಾಂಗ್ ಕೈಷೇಕ್ ಮತ್ತು ಸತ್ಯಾಗ್ರಹಿ ಗಾಂಧೀಜೀ

ಮುಖ್ಯಪ್ರಶ್ನೆ ೧೦೬ : ಆಧುನಿಕ ಚೀನ ಛಿದ್ರಗೊಂಡುದು ಹೇಗೆ? ಪುನಃ ಒಂದಾದುದು ಹೇಗೆ?

ಏಷ್ಯಖಂಡದಲ್ಲೆಲ್ಲ ಅತಿವಿಸ್ತಾರವೂ ಅತಿಪ್ರಾಚೀನವೂ ಬಹುಜನಭರಿತವೂ ಆದುದು ಚೀನ. ನೂರಾರು ವರ್ಷಗಳೇ ಏಕೆ, ಸಾವಿರಾರು ವರ್ಷಗಳ ಕಾಲ ಪಲ್ಲಟಗೊಳ್ಳದೆ ಸ್ವಸ್ಥವಾಗಿ ಉತ್ಕೃಷ್ಟಸಂಸ್ಕೃತಿಯನ್ನು ಪೋಷಿಸಿದ ದೇಶ. ಕಳೆದ ಮೂವತ್ತು ವರ್ಷಕಾಲದಲ್ಲಿ ಆ ದೇಶಕ್ಕೊದಗಿದ ಭಯಂಕರದುರವಸ್ಥೆಯನ್ನೂ ಪುನಃ ಪುನಃ ನಡೆದ ಪಲ್ಲಟಗಳನ್ನೂ ವಿವರಿಸಿಕೊಳ್ಳುವುದೇ ಶಕ್ಯವಲ್ಲ. ೧೯೧೧ ರಲ್ಲಿ ರಾಷ್ಟ್ರಪಲ್ಲಟ ನಡೆಯಿತು. ಮಂಚು ಸಂತತಿಯವರ ಪ್ರಭುತ್ವವು ಮಾಯವಾಗಿ ೧೯೧೨ ನೆ ಇಸವಿ ಜನವರಿ ಮೊದಲನೆ ದಿನ **ರಿಪಬ್ಲಿಕ್** ರೂಪದ ರಾಷ್ಟ್ರಸ್ಥಾಪನೆಯಾಯಿತು. ಇನ್ನು ಮುಂದೆ ದೊರೆಗಳೂ ಚಕ್ರವರ್ತಿಗಳೂ ಬೇಡವೆಂದು ಚೀನೀಯರು ನಿರ್ಧರಿಸಿದರು. ರಿಪಬ್ಲಿಕ್ಕಿಗೆ ಪ್ರಥಮಾಧ್ಯಕ್ಷನಾದಾತನು **ಡಾಕ್ಟರ್ ಸನ್ಯಾತ್ಸೇನ್** (Dr. Sun Yat Sen) ಎಂಬ ಮಹನೀಯನು. ಅನೇಕಾನೇಕ ಸಂಸ್ಕರಣ ಪ್ರಯತ್ನಮಾಡಿ ವಿದಗ್ಧನಾಗಿ ಘನತೆ ಪಡೆದವನು.

ನೂತನವಾಗಿ ರೂಪವೆತ್ತಿದ ರಿಪಬ್ಲಿಕ್‌ರಾಷ್ಟ್ರದಲ್ಲಿ ದಾಕ್ಷಿಣಾತ್ಯರಿಗೆ ಭಕ್ತಿಯು ವಿಶೇಷವಾಗಿತ್ತು. ದೇಶದ ದಕ್ಷಿಣಾರ್ಧದಲ್ಲಿ ಯಾಂಗ್‌ಚೀಯಾಂಗ್ ಮತ್ತು ಸೀಕಿಯಾಂಗ್ ನದಿಗಳು ಪ್ರವಹಿಸಿ ನೆಲವನ್ನು ಫಲಶೋಭಿತಗೊಳಿಸುತ್ತವೆ; ಯಾಂಗ್ಚಿ ನದಿಯು ತನ್ನ ದಡಗಳಲ್ಲಿ ವ್ಯಾಪಾರಕ್ಕಾಗಿ ಖ್ಯಾತಿವೆತ್ತ ಹಾಂಕೌ, ನಾನ್ಕಿಂಗ್, ಷಾಂಘೈ ನಗರಗಳನ್ನು ಹೊತ್ತಿದೆ; ಸೀಕಿಯಾಂಗ್ ಮುಖದಲ್ಲಿ ಕಾನ್ಟನ್ ಪಟ್ಟಣವಿದೆ. ಉತ್ತರಾರ್ಧವೆಂದರೆ ಹ್ವಾಂಘೊ ನದಿಯ ಪ್ರದೇಶ; ವಿಸ್ತಾರವಾದ ಹುಲ್ಲುಗಾವಲುಗಳಿಂದ ಕೂಡಿದ್ದು. ಪೆಕಿನ್ ಅಲ್ಲಿಯ ಮುಖ್ಯಪಟ್ಟಣ; ಹಿಂದಣ ರಾಜಧಾನಿ. ಉತ್ತರಾರ್ಧದಲ್ಲಿ ಚಕ್ರವರ್ತಿಯ ಆಸ್ಥಾನ ಮಾಯವಾದ ಮೇಲೆ ಅನೇಕ ದಳಪತಿಗಳು ಯಥಾಶಕ್ತಿ ಪ್ರದೇಶಗಳನ್ನು ವಶಪಡಿಸಿಕೊಂಡು ಸರ್ವಾಧಿಕಾರಿಗಳಾಗಿದ್ದರು. ಆ ದಳಪತಿಗಳು ಸೈನ್ಯಗಳನ್ನು ಕಟ್ಟಿ ಪರಸ್ಪರ ಹೋರಾಡುತ್ತ ದೇಶವನ್ನು ಕೊಳ್ಳೆಗೆ ಕೊಟ್ಟು

ಹಾಳುಮಾಡುತ್ತಿದ್ದರು. ನವನಾಯಕರಪಾಳ್ಯದಂತಾದ ಉತ್ತರಾರ್ಧದಲ್ಲಿ ರಿಪಬ್ಲಿಕ್ ಭಕ್ತರು ದುರ್ಬಲರು; ದಾಕ್ಷಿಣಾತ್ಯರಾದರೋ ಪಲ್ಲಟವನ್ನು ನಡೆಸಿ ರಿಪಬ್ಲಿಕ್ ಸ್ಥಾಪಿಸಿ ತಮ್ಮ ದೇಶದ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳಲು ಕಾತರರಾದರು.

೧೯೧೨ ರಿಂದ ೧೯೨೫ ರವರೆಗೆ ಸನ್ಯಾತ್ಸೇನ್ ಜೀವಂತನಾಗಿದ್ದನು. ರಾಷ್ಟ್ರಾಧ್ಯಕ್ಷತೆ ವಹಿಸಿದ ಬಳಿಕ ಅವಿಶ್ರಾಂತನಾಗಿ ಕಾರ್ಯನಿರ್ವಾಹ ಮಾಡಿದನು. ಕ್ಯಾನ್ಟನ್ ನಗರದಲ್ಲಿ ಕೇಂದ್ರವಿಟ್ಟು ಹೊಸರಾಷ್ಟ್ರವನ್ನು ಸುಸ್ಥಿತಿಗೆ ತಂದನು. ಆತನು ಕಟ್ಟಿದ ಪಕ್ಷಕ್ಕೆ **ಕುಓಮಿನ್ಟ್ಯಾಂಗ್** (*Kuo-Min-Tang*) ಎಂದು ಹೆಸರು; ರಾಷ್ಟ್ರಭಕ್ತರ ಪಕ್ಷವೆಂಬ ಅರ್ಥ. ರೈತಾಪಿಜನರಿಗೂ ಕಾರ್ಖಾನೆಗಳ ಕರ್ಮಕಾರಿಗಳಿಗೂ ಆತನು ಪಟ್ಟ ಶ್ರಮದಿಂದ ಎಷ್ಟೋ ಮೇಲಾಯಿತು. ೧೯೧೭ ರಲ್ಲಿ ರಷ್ಯದಲ್ಲಿ ಸರ್ವಸಮತಾವಾದಿಗಳು ರಾಷ್ಟ್ರಪಲ್ಲಟಗೊಳಿಸಿ ಹೊಸ ರಾಷ್ಟ್ರವನ್ನು ಕಟ್ಟಿದ ತರುವಾಯ ಅಲ್ಲಿಯ ಅನುಭವಶಾಲಿಗಳ ಸಹಾಯವನ್ನು ಡಾಕ್ಟರ್ ಸನ್ಯಾತ್ಸೇನ್ ಸಂಪಾದಿಸಿದನು. ರಷ್ಯದಲ್ಲಿ ರೂಪಗೊಂಡಿದ್ದ ಸಮಾಜವಾದಿರಿಪಬ್ಲಿಕ್ಕುಗಳಂತೆ ದಕ್ಷಿಣ ಚೀನವನ್ನು ವ್ಯವಸ್ಥಗೊಳಿಸುವ ಪ್ರಯತ್ನ ನಡೆಯಿತು. ಆದರಿಂದ ದೊಡ್ಡ ಜಮೀನ್ದಾರರಿಗೂ, ಕಾರ್ಖಾನೆಗಳ ಮಾಲೀಕರಿಗೂ, ವರ್ತಕಧನಿಕರಿಗೂ ಅಥವಾ ಆಸ್ತಿವಂತರಿಗೂ ಗಾಬರಿಹುಟ್ಟಿತು. ರಷ್ಯದಲ್ಲಿ ಜಮೀನ್ದಾರರಿಗೆ ಪ್ರಾಪ್ತಿಯಾದ ನಾಶವೇ ತಮಗೂ ಸಂಭವಿಸೀತೆಂಬ ಭಯವು ತೋರಿತು. ಆದಾಗ್ಯೂ ಕುಓ ಮಿನ್ಟ್ಯಾಂಗ್ ಪಕ್ಷದ ಪ್ರಾಬಲ್ಯ ಹೆಚ್ಚಿತು. ೧೯೨೭ ರವೇಳೆಗೆ ಚೀನದ ಮಧ್ಯಭಾಗದಲ್ಲೂ ತೆಂಕಣಭಾಗದಲ್ಲೂ ಆ ಪಕ್ಷದವರಿಂದ ನಡೆದ ಆಡಳಿತ ಭದ್ರಗೊಂಡಿತ್ತು. ಆಗ ನಾನಾ ನಾಯಕರ ಪೀಡಾಗಿದ್ದ ಉತ್ತರಾರ್ಧವನ್ನು ವಶಪಡಿಸಿಕೊಳ್ಳುವ ಉದ್ದೇಶ ಮೂಡಿತು.

ಆದರೆ ಕುಓ ಮಿನ್ಟ್ಯಾಂಗ್ ಪಕ್ಷದಲ್ಲಿ ಒಗ್ಗಟ್ಟು ಕೆಡುತ್ತಿತ್ತು. ಅದರಲ್ಲಿ ಪ್ರಬಲರೆನಿಸಿದ್ದ ಅನೇಕರಿಗೆ ರಷ್ಯದ ಸಂಪರ್ಕವಾಗಲಿ ಸಮತಾವಾದಪ್ರಚಾರವಾಗಲಿ ಇಷ್ಟವಾಗಲಿಲ್ಲ. ಬೇಗನೆ ತಾವು ಉದ್ಯಮಿಸದಿದ್ದಲ್ಲಿ ಸಮತಾವಾದಿಗಳೇ ರಾಷ್ಟ್ರದಲ್ಲಿ ಸರ್ವತ್ರ ಪ್ರಬಲಿಸಿಯಾರೆಂದುಕೊಂಡು ಬೇರೆ ರಾಷ್ಟ್ರವನ್ನು ಕಟ್ಟುವ ಸಂಕಲ್ಪಮಾಡಿಕೊಂಡರು. ಸಮತಾವಿರೋಧಿಗಳ ಪಕ್ಷ ಇದು. ಸುಪ್ರಸಿದ್ಧನಾದ **ಚಿಯಾಂಗ್ ಕೈಷೇಕ್** ಇದಕ್ಕೆ ಪ್ರಮುಖ. ಪ್ರಥಮಾಧ್ಯಕ್ಷ ಸನ್ಯಾತ್ಸೇನನ ನಾದಿನಿಯನ್ನು ಮದುವೆಯಾದವನು. ಯಾಂಗ್ಚಿಕಿಯಾಂಗ್ ನದೀ ಪ್ರದೇಶದ ನಗರಗಳಲ್ಲಿದ್ದ ಆಸ್ತಿವಂತರು ಆತನಿಗೆ ಸಹಾಯಕ

ಕಾದರು. ನಾನ್ಕಿಂಗ್ ನಗರದಲ್ಲಿ ಸಮತಾವಿರೋಧಿಗಳರಾಷ್ಟ್ರ ಹುಟ್ಟಿತು. ಚಿಯಾಂಗ್ ಕೈಷೇಕ್ ಆ ರಾಷ್ಟ್ರಕ್ಕೆ ನಾಯಕನಾದನು. ಈ ರೀತಿಯಲ್ಲಿ ಕುಓ ಮಿಂಟಾಂಗ್ ಪಕ್ಷದಲ್ಲಿ ಹುಟ್ಟಿದ ಎರಡು ಕಕ್ಷಿಗಳಿಗೆ ಸ್ವಲ್ಪಕಾಲದಲ್ಲಿಯೇ ಯುದ್ಧವು ಮೊದಲಾಯಿತು. ಒಂದಲ್ಲ; ಎರಡಲ್ಲ; ಅಂತರ್ಯುದ್ಧಗಳು ಅನೇಕ; ಅವೂ ಅವಿರತ. ೧೯೩೫ ರವರೆಗೆ ರೇಗಿ ಸಮಸ್ತ ದೇಶವನ್ನೂ ದುರವಸ್ಥೆಯಲ್ಲಿ ಮುಳುಗಿಸಿದ ಅಂತರ್ಯುದ್ಧಗಳ ಪರಂಪರೆಯ ಕಾಲದಲ್ಲಿ ನಾಲ್ಕು ಪಂಗಡಗಳನ್ನು ವಿಂಗಡಿಸಿಕೊಳ್ಳಬಹುದು; (೧) ಕ್ಯಾಂಟನ್ ನಗರವನ್ನು ಕೇಂದ್ರವಾಗಿಟ್ಟುಕೊಂಡಿದ್ದ ಕುಓ ಮಿಂಟಾಂಗ್ ಪಕ್ಷ; ಅಥವಾ ದಕ್ಷಿಣಾಗ್ರ; (೨) ನಾನ್ಕಿಂಗ್ ರಾಜಧಾನಿಯನ್ನು ಪಡೆದು ಯಾಂಗ್ಚಿಕಿಯಾಂಗ್ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡಿದ್ದ ಚಿಯಾಂಗ್ ಕೈಷೇಕನ ರಾಷ್ಟ್ರ; ಮಧ್ಯಭಾಗ; (೩) ಯಾಂಗ್ಚಿಕಿಯಾಂಗ್ ಪ್ರದೇಶಕ್ಕೂ ದಕ್ಷಿಣಕ್ಕೂ ನಡುವಣ ಬೆಟ್ಟಗುಡ್ಡಗಳಲ್ಲಿಯೂ ಇತರೆಡೆಗಳಲ್ಲಿಯೂ ಚದರಿಕೊಂಡಿದ್ದ ಸಮತಾವಾದಿಗಳ ಗುಂಪು; (೪) ಉತ್ತರದಲ್ಲಿ ತಂತಮ್ಮೊಳಗೆ ಕಾದಾಡುತ್ತಿದ್ದ ದಂಡನಾಯಕರುಗಳು.



ಚಿಯಾಂಗ್ ಕೈಷೇಕ್

ಇಂತಹ ಪರಿಸ್ಥಿತಿಯಲ್ಲಿ ಜಪಾನೀಯರು ಕಣ್ಣಿಟ್ಟರು; ಉತ್ತರಭಾಗವನ್ನು ಆಕ್ರಮಿಸಿದರು. ೧೯೩೧ ರಲ್ಲಿ ಪ್ರಕಟವಾಗಿ ಜಪಾನೀದಳಗಳು ಮಂಚೂರಿಯವನ್ನು ಮುತ್ತಿ ವಶಪಡಿಸಿಕೊಂಡಿದ್ದುವು. ೧೯೩೭ ರಲ್ಲಿ ಚೀನವನ್ನೇ ಮುತ್ತಲು ಜಪಾನೀಯರು ಅಣಿಯಾದರು. ಆಗ ಚೀನೀ ಜನರಲ್ಲಿ ಬೆಳೆದಿದ್ದ ಪಕ್ಷವಿಪಕ್ಷಗಳು ತಮ್ಮ ಪರಸ್ಪರ ವೈಷಮ್ಯಗಳನ್ನು ಮರೆತು ಒಗ್ಗಟ್ಟಾಗುವ ಕಾಲವೂ ಒದಗಿತು. ಔರಂಗಜ಼ೇಬ್ ಪಾದಶಾಹನನ್ನು ಎದುರಿಸಲು ಮರಾಟೆಯವರೊಟ್ಟುಗೂಡಿದಂತೆ ಅಥವಾ ಗ್ರೇಟ್ ಬ್ರಿಟನ್ನನ್ನು ಪ್ರತಿಭಟಿಸಲು ಅಮೆರಿಕದ

ಕಾಲೊನಿಗಳ ಜನರು ಒಗ್ಗಟ್ಟುಕಟ್ಟಿದಂತೆ ನಡೆಯುವ ಸಂದರ್ಭವೇರ್ಪಟ್ಟಿತು.

ಜಪಾನೀಯರ ಆಸೆ ಹಿಂದೆಯೇ ಹುಟ್ಟಿತ್ತು. ೧೯೧೦ ರಲ್ಲಿಯೇ ಚೀನದ ಭಾಗವಾದ **ಕೊರಿಯ** ಪರ್ಯಾಯದ್ವೀಪವನ್ನು ಸಾಧಿಸಿಕೊಂಡಿದ್ದರು. ೧೯೩೧ ರಲ್ಲಿ **ಮಂಚೂರಿಯ**ವನ್ನಾಕ್ರಮಿಸಿದ ತರುವಾಯ ೧೯೩೫ರಲ್ಲಿ ಪೆಕಿನ್‌ನಗರದ ಉತ್ತರಕ್ಕಿರುವ ಭಾಗವನ್ನು ಮುತ್ತಿದರು. ಈ ರೀತಿ ಜಪಾನೀಯರ ದಂಡಯಾತ್ರೆ ನಡೆದು ಒಂದು ವರ್ಷ ಕಳೆದಾಗ್ಯೂ ಚಿಯಾಂಗ್ ಕೈಷೇಕ್ ಲಕ್ಷ್ಯ ಮಾಡದೆ ಸಮತಾವಾದಿಗಳ ಗುಂಪನ್ನು ಅಡಗಿಸುವ ಪ್ರಯತ್ನದಲ್ಲಿದ್ದುಬಿಟ್ಟನು. ೧೯೩೬ರಲ್ಲಿ ಅತಿಸೋಜಿಗವೊಂದು ನಡೆಯಿತು. ಚಿಯಾಂಗ್ ಕೈಷೇಕನನ್ನು ಆಕಸ್ಮಿಕವಾಗಿ ಹಿಡಿದೆತ್ತಿಕೊಂಡು ಹೋದರು ಸಮತಾವಾದಿ ಪಕ್ಷದವರು! ಚಿಯಾಂಗ್ ಕೈಷೇಕನ ಅಧಿಕಾರಿಗಳಲ್ಲೊಬ್ಬಾತನು ತನ್ನ ಯಜಮಾನನನ್ನು ಸಮತಾವಾದಿಗಳ ಬಿನ್ನಹಕ್ಕೊಪ್ಪಿಸಲು ಬೇರಾವ ಉಪಾಯವನ್ನೂ ಕಾಣದೆ ದೇಶಭಕ್ತಿಯಿಂದಲೂ ಸ್ವಾಮಿಭಕ್ತಿಯಿಂದಲೂ ಪ್ರೇರಿತನಾಗಿ ತನ್ನ ಸ್ವಾಮಿಯನ್ನು ಹಿಡಿಸಿಕೊಟ್ಟನು. ಸಮತಾವಾದಿಗಳಾದರೋ ಚಿಯಾಂಗ್ ಕೈಷೇಕನಲ್ಲಿ ಪೂಜ್ಯಭಾವವನ್ನು ತೋರಿಸಿ ಸಮಸ್ತದೇಶಕ್ಕೂ ವಿಪತ್ತನ್ನೊಡ್ಡಿದ ಶತ್ರುವಿನೆದುರಿನಲ್ಲಿ ತಾವೆಲ್ಲರೂ ಒಟ್ಟುಗೂಡಬೇಕೆಂದೂ ತಮ್ಮೆಲ್ಲರನ್ನೂ ತನ್ನ ಸೈನ್ಯದಲ್ಲಿಟ್ಟುಕೊಂಡು ಜಪಾನೀಯರ ಮೇಲೆ ಯುದ್ಧವನ್ನು ನಡೆಸಬೇಕೆಂದೂ ಭಿಕ್ಷೆ ಬೇಡಿದರು. ಸ್ವದೇಶಬಂಧುಗಳಿಗೆದುರಾಗಿ ಹೊಡೆದಾಟವನ್ನು ನಿಲ್ಲಿಸಿ ಎಲ್ಲರಿಗೂ ಶತ್ರುವಾದ ಜಪಾನೀಯರೊಡನೆ ಹೊಡೆದಾಟ ನಡೆಸಲು ಕಾತರರಾಗಿದ್ದರು. ಚಿಯಾಂಗ್ ಕೈಷೇಕ್ ಈ ರೀತಿಯಲ್ಲಿ ಚೀನೀಯರೆಲ್ಲರಿಗೂ ನಾಯಕನಾದನು. ಆತನನ್ನು ಸೆರೆಹಿಡಿದು ಎತ್ತಿಕೊಂಡು ಹೋದವರು ಅತಿ ಗೌರವದಿಂದ ಏರೋಪ್ಲೇನಿನಲ್ಲಿ ಹಿಂತಿರುಗಿ ಪ್ರಯಾಣ ಮಾಡಿಸಿ ಆತನನ್ನು ರಾಜಧಾನಿಗೆ ಸೇರಿಸಿದರು. ಜಪಾನೀಯರ ದುರಾಕ್ರಮಣವನ್ನು ವಿರೋಧಿಸಲು ಚೀನೀಯರು ಒಟ್ಟಾಗಿ ನಿಂತರು.

ಆದರೆ ಆ ವೇಳೆಗೆ ವಿಸ್ತಾರವಾದ ದೇಶಭಾಗ ಜಪಾನೀಯರ ಹಸ್ತಗತವಾಗಿತ್ತು. ಚೀನೀಯರು ಬಡವರು, ಶಸ್ತ್ರಸಾಮಗ್ರಿ ಸಾಕಾದಷ್ಟಿಲ್ಲದವರು. ಜಪಾನೀಯರಾದರೋ ನೂರಾರು ವಿಮಾನಗಳನ್ನೂ ಸುಸಜ್ಜಿತ ಸೈನ್ಯಗಳನ್ನೂ ಚೀನದಲ್ಲಿ ಸಿದ್ಧಗೊಳಿಸಿದ್ದರು. **ಪೆಕಿನ್, ಷಾಂಘೈ, ನಾನ್ಕಿಂಗ್, ಹಾನ್ಕೌ** ನಗರಗಳೊಂದೊಂದನ್ನಾಗಿ ಮುತ್ತಿ ಹಿಡಿದರು; ಕಡೆಗೆ ಕಾನ್ಟನ್ ಪಟ್ಟಣವನ್ನು ಆಕ್ರಮಿಸಿಕೊಂಡರು. ಆದಾಗ್ಯೂ ಚೀನೀಜನರು ಎದೆಗೆಡದಾದರು. ರಾಜಧಾನಿ

ಯನ್ನು ಪಡುವಲಿಗೆ ಬದಲಾಯಿಸುತ್ತ ಚಿಯಾಂಗ್ ಕೈಷೇಕ್ ಹೊರಟನು; ನಾನ್ಕಿಂಗ್ ಬಿಟ್ಟು ಹಾನ್ಕೌ ಆಯಿತು; ಹಾನ್ಕೌ ಬಿಟ್ಟು ಚುಂಗ್‌ಕಿಂಗ್ ನಗರ ರಾಜಧಾನಿಯಾಯಿತು. ಆಡಳಿತದ ಇಲಾಖೆಗಳನ್ನು ಮಾತ್ರವೇ ಅಲ್ಲ ಬೇರೆ ಸ್ಥಳಕ್ಕೆ ಸಾಗಿಸಿದ್ದು; ಶಸ್ತ್ರಾಸ್ತ್ರಸಾಮಗ್ರಿಯ ತಯಾರಿ ನಿಲ್ಲಲಾಗದಂತೆ ಕಾರ್ಖಾನೆಗಳನ್ನೇ ಎತ್ತಿ ಬೇರೆಡೆಗಳಲ್ಲಿಡಿಸಿದನು. ಯುದ್ಧಕಾಲವಾದರೂ ಶಿಕ್ಷಣವೇಕೆ ನಿಲ್ಲಬೇಕೆಂದು ವಿಶ್ವವಿದ್ಯಾನಿಲಯಗಳನ್ನೂ ಬೇರೆಡೆಗಳಲ್ಲಿ ಗೊತ್ತು ಮಾಡಿದನು. ಇನ್ನು ಜಪಾನೀಯರು ಆಕ್ರಮಿಸಿಕೊಂಡ ಪ್ರದೇಶಗಳ ಚೀನೀ ಜನರ ದೇಶಭಕ್ತಿಯೋ! ಕಡುಬಡವನಾದವನು ಕೂಡ ಶತ್ರುವಿಗೆ ಸಹಾಯ ಮಾಡಲು ಬೆರಳನ್ನೆತ್ತುವುದಿಲ್ಲ. ಸಮತಾವಾದಿಗಳ ಪ್ರಚಾರ ನಡೆದಿದ್ದ ಭಾಗ ಗಳಲ್ಲಂತೂ ಚೀನೀಜನರು ಗೋಪ್ಯರೀತಿಯಲ್ಲಿ ಜಪಾನೀಯರೊಡನೆ ಕಿರುಕುಳಿ ಯುದ್ಧವನ್ನೋ ಮಾಯಾಯುದ್ಧವನ್ನೋ ನಡೆಸತೊಡಗಿದರು. ರೈಲ್ದಾರಿಗಳ ಸಂಧಿಸ್ಥಳಗಳನ್ನೂ ರೇವುಪಟ್ಟಣಗಳನ್ನೂ ಜಪಾನೀಯರು ವಶಪಡಿಸಿಕೊಳ್ಳ ಲಾಯಿತು. ಅವರ ನೌಕಾಬಲವು ದೊಡ್ಡದು. ಆದರೆ ಇತರ ಪ್ರದೇಶಗಳಲ್ಲಿ ಜಪಾನೀಯರು ಆಡಳಿತ ನಡೆಸುವುದೇ ಅಸಾಧ್ಯವಾಯಿತು.

ಶಾಂತಿಪ್ರಿಯರೂ ಸನ್ನಾಹರಹಿತರೂ ಘೋರದಾರಿದ್ರ್ಯಗ್ರಸ್ತರೂ ಆದ ಜನರಾಶಿಯವರು ಈ ರೀತಿಯಲ್ಲಿ ಸರ್ವಸನ್ನದ್ಧವಾಗಿ ಕವಿದ ರಾಕ್ಷಸಬಲವುಳ್ಳ ಶತ್ರುವನ್ನು ಎದುರಿಸಿದ ಸಂಗತಿ ಹಿಂದೆಂದೂ ಲೋಕದಲ್ಲಿ ನಡೆಯಲಿಲ್ಲ. ಆದರೆ ಚೀನೀ ಜನರು ಲೋಕಕ್ಕೆ ಹಿರಿಯರು; ಮೂರುಸಾವಿರ ವರ್ಷಕಾಲ ಉತ್ತಮ ಸಂಸ್ಕೃತಿಯನ್ನು ಬೆಳೆಸಿ ರಕ್ಷಿಸಿಕೊಂಡವರು. ದಂಡನಾಯಕರ ದುರಾಸೆ ಯಿಂದಲೂ ಅಂತರ್ಯುದ್ಧಗಳ ವಿಷಜ್ವಾಲೆಯಿಂದಲೂ ಸಂಭವಿಸಿದ ಘೋರ ದುರವಸ್ಥೆಯ ಕಾಲದಲ್ಲಿ ಕೂಡ ಚೀನೀಯರು ಹಿರಿಯರು. ಸರ್ವನಾಶವಾಗು ವಂತಿದ್ದರೂ ಜಗತ್ತಿಗೆ ಆಶ್ಚರ್ಯವನ್ನು ಬೀರಿ ಆದರ್ಶವನ್ನು ತೋರತಕ್ಕ ಸುಸಂಸ್ಕೃತರು.

ಮುಖ್ಯಪ್ರಶ್ನೆ ೧೦೭ : ಸತ್ಯಾಗ್ರಹವೆಂಬುದೇನು? ಅದರ ಪ್ರಯೋಗವನ್ನು ಗಾಂಧೀಜೀ ಹೇಗೆ ತೋರಿಸಿಕೊಟ್ಟರು?

ಚೀನದಂತೆ ಅತಿಪುರಾತನವೂ ಜ್ಯೇಷ್ಠವೂ ಆದ ಇನ್ನೊಂದು ದೇಶ ಹಿಂದು ಸ್ತಾನ್. ಹಿಂದುಸ್ತಾನದ ಹಿರಿಮೆಯು ಬೇರೊಂದು ರೀತಿಯಲ್ಲಿ ಶೋಭಿಸಿತು. ಅನೇಕ ಭೇದಗಳನ್ನು ಒಳಗೊಂಡಿರುವ ಆ ದೇಶಸ್ಥರಲ್ಲಿ ಹಿಂದುಮತಸ್ಥರಾದ ಮರಾಟೆಯವರು ಹದಿನೇಳನೆ ಶತಮಾನದಲ್ಲಿ ಒಟ್ಟುಗೂಡಿ ಶಿವಾಜಿಯ ನಾಯ

ಕತ್ವದಲ್ಲಿಯೂ ಪೇಶ್ವೆಗಳ ಅಧ್ಯಕ್ಷತೆಯಲ್ಲಿಯೂ ಆಯುಧಪಾಣಿಗಳಾಗಿ ಶೌರ್ಯಸಾಹಸಗಳನ್ನು ತೋರಿಸಿದರು. ಅನಂತರ ಬ್ರಿಟಿಷರಿಗೆ ವಿರೋಧವಾಗಿ ಹಿಂದುಸ್ಥಾನದ ಜನರಾಶಿಗಳು ಒಟ್ಟುಗೂಡಲಿಲ್ಲ. ನಡೆದುದೇನೆಂದು ತಿಳಿಯುವ ಮೊದಲೇ ದೇಶೀಯ ಪ್ರಭುಗಳು ಬ್ರಿಟಿಷರಿಗೆ ಸಹಾಯಮಾಡಿ ಅವರ ಆಶ್ರಯದಲ್ಲಿದ್ದವರಾಗಿ ಪರಿಣಮಿಸಿದ್ದರು. ಅಪರೂಪವಾದ ಕೆಲವು ಸಂದರ್ಭಗಳನ್ನು ಬಿಟ್ಟರೆ ಬ್ರಿಟಿಷರ ಆಡಳಿತದಲ್ಲಿ ಉದ್ದೇಶಪೂರ್ವಕವಾದ ಕ್ರೌರ್ಯವಿಲ್ಲ. ಬ್ರಿಟಿಷರ ಸಂಪರ್ಕದಿಂದ ತಮಗೆದುರಾದ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಸುಶಿಕ್ಷಿತರಾದ ಭಾರತೀಯರಿಗೆ ಎಷ್ಟೋ ಭಾಗವು ಶ್ಲಾಘ್ಯವಾಗಿಯೂ ಅನುಸರಣೀಯವಾಗಿಯೂ ಕಂಡಿತು. ನಡೆದ ಪರಾಕ್ರಮಣಗಳಲ್ಲಿ ಇದೇ ಕಡೆಯದು; ಅದನ್ನು ವಿರೋಧಿಸಲು ಒಟ್ಟುಗೂಡುವುದರಲ್ಲಿ ಈ ಅಂಶಗಳ ಪ್ರಭಾವವು ಅಡ್ಡಿ ತೋರಿತು.

ಆಕ್ರಮಣ ನಡೆಸಿದವರು ಸುಸಭ್ಯರಾಗಿರುವುದಲ್ಲದೆ ಅನೇಕ ಬಗೆಗಳಲ್ಲಿ ಮೈತ್ರಿಯಿಂದಲೂ ಇರುವ ಪರಿಸ್ಥಿತಿಯಲ್ಲಿ ಪರಿಣಾಮಕಾರಕವಾಗುವಂತೆ ವಿರೋಧ ತೋರುವ ವಿಧಾನವನ್ನು ಒಬ್ಬ ಮಹನೀಯಗುಣಾತ್ಮನು ತೋರಿಸಿಕೊಟ್ಟನು. ಮಹಾತ್ಮಾ ಗಾಂಧೀಯೆಂಬುದಾಗಿ ಸಮಸ್ತಲೋಕವೂ ಆತನನ್ನು ಕರೆದಾಗ್ಯೂ ಆತನ ಹೆಸರು '**ಮೋಹನದಾಸ್ ಕರಮಚಂದ್ ಗಾಂಧೀ**'.

ಹಿಂದುಸ್ಥಾನದ ಪಶ್ಚಿಮಭಾಗದ ಕಾಠೇವಾಡದಲ್ಲಿ ಪುರಿಬಂದರ್ ಎಂಬ ಸಂಸ್ಥಾನದಲ್ಲಿ ಗಾಂಧೀಜೀ ೧೮೬೯ ರಲ್ಲಿ ಜನಿಸಿದರು. ಪಕ್ಕದ ಸಂಸ್ಥಾನವಾದ ರಾಜಕೋಟೆಯಲ್ಲಿ ಆತನ ತಂದೆಯು ಮುಖ್ಯಮಂತ್ರಿಯಾಗಿದ್ದಾತನು. ತಾರುಣ್ಯ ಕಳೆದ ಮೇಲೆ ಗಾಂಧೀಜೀ ವಕೀಲಿವೃತ್ತಿಯನ್ನವಲಂಬಿಸತಕ್ಕದೆಂದು ನಿಶ್ಚಯವಾಯಿತು. ೧೯ ನೆ ವಯಸ್ಸಿನಲ್ಲಿ ಇಂಗ್ಲಂಡಿಗೆ ನ್ಯಾಯಶಾಸ್ತ್ರ ವ್ಯಾಸಂಗಕ್ಕಾಗಿ ಹೊರಟರು. ಲಂಡನ್ನಿನಲ್ಲಿದ್ದಾಗ ಮಿಸಸ್ ಬೆಸಂಟ್ ಮುಂತಾದ ಥಿಯಾಸಫಿಸಮಾಜದವರ ಸಂಪರ್ಕವುಂಟಾಯಿತು. ಆ ಸಮಾಜದವರಿಗೆ ಪ್ರಾಚೀನ ಭಾರತೀಯರ ತತ್ತ್ವಗ್ರಂಥಗಳಲ್ಲಿ ಬಹಳ ಆಸಕ್ತಿಯಿತ್ತು. ವರ್ಣಾಶ್ರಮಧರ್ಮವೆಂಬುದನ್ನೂ ಇತರ ಧರ್ಮಗಳನ್ನೂ ಪರಿಶೀಲನ ಬುದ್ಧಿಯಿಂದ ತಿಳಿದುಕೊಳ್ಳಬೇಕೆಂಬ ಇಷ್ಟವು ಗಾಂಧೀಜಿಯವರ ಮನಸ್ಸಿನಲ್ಲಿ ಅವರಿಂದ ಪ್ರೇರಿತವಾಯಿತು. ರಷ್ಯದೇಶದಲ್ಲಿ ಸಂಸ್ಕರ್ತನೆನಿಸಿದ **ಟಾಲ್‌ಸ್ಟಾಯ್ ಶ್ರೀಮಂತನು** ಹಿಂದೆ ಏಸು ಹೇಳಿದ್ದುದನ್ನು ಅಕ್ಷರಶಃ ನಂಬಿಕೊಂಡಿದ್ದ ಅಂಶವೂ ತಿಳಿಯಿತು. 'ಯಾರಾದರೂ ನಿನ್ನ ಒಂದು ಕೆನ್ನೆಗೆ ಏಟುಕೊಟ್ಟರೆ ಪ್ರತಿಯಾಗಿ ಮತ್ತೊಂದು ಕೆನ್ನೆಯನ್ನು ಒಡ್ಡುವವನಾಗು'

ಎಂಬುದು ಏಸುವಿನ ವಾಕ್ಯ. ಕಠೋರತನಕ್ಕೆ ಮೃದುತನವನ್ನೇ ತೋರಿಸುವ ಮಂತ್ರ ಅದು. ಗಾಂಧೀಜೀಯ ಮನೋಗತಿಗೆ ಅದೊಪ್ಪಿತು.

೧೮೯೧ ರಲ್ಲಿ ಬ್ಯಾರಿಸ್ಟರ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಅದೇ ವರ್ಷ ಸ್ವದೇಶಕ್ಕೆ ಹಿಂತಿರುಗಿದರು. ಬ್ಯಾರಿಸ್ಟರ್ ವೃತ್ತಿಯನ್ನು ನಡೆಸಲು ಮೊದಲಿಟ್ಟರು. ಹಾಗಿದ್ದಾಗ ೧೮೯೩ ರಲ್ಲಿ ಆಯುಷ್ಯದಲ್ಲಿಯೇ ಮುಖ್ಯವೆನಿಸಿಸುವ ಸಂದರ್ಭವೊಂದೊದಗಿತು. ದಕ್ಷಿಣ ಆಫ್ರಿಕದ ನೆಟಾಲ್ ಕಾಲೊನಿಯಲ್ಲಿ ವ್ಯಾಪಾರ ನಡೆಸುತ್ತಿದ್ದ ದಾದಾ ಅಬ್ದುಲ್ಲಾ ಕಂಪನಿಯೆಂಬ ವರ್ತಕ ಮಂಡಲಿಯವರು ಮತ್ತೊಂದು ಮಂಡಲಿಯವರ ಮೇಲೆ ದಾವಾ ನಡೆಸುತ್ತಿದ್ದರು. ತಮ್ಮ ಪರವಾಗಿ ವಕೀಲಿ ನಡೆಸಬೇಕೆಂದು ಅವರು ಗಾಂಧೀಜೀಯನ್ನು ಕೇಳಿದರು. ಗಾಂಧೀಜೀ ಒಪ್ಪಿ ಹೊರಟರು. ಆ ಹೊಸ ದೇಶದಲ್ಲಿ ಹಲಕೆಲವು ದಿನಗಳನ್ನು ಕಳೆಯುವಷ್ಟರಲ್ಲಿಯೇ ಐರೋಪ್ಯರಾದ ಬೋಯೆರರೂ ಬ್ರಿಟಿಷರೂ ಅನ್ಯರನ್ನು ಎಷ್ಟು ಹೀನಾಯಗೊಳಿಸಿ ಅವಮಾನಪಡಿಸುತ್ತಿದ್ದರೆಂಬುದು ಅವರಿಗೆ ಸ್ಪಷ್ಟವಾಯಿತು. ಅಷ್ಟು ಮಾತ್ರವೇ ಅಲ್ಲ. ಹಿಂದುಸ್ತಾನದಿಂದ ಬಂದು ಜೀವನ ನಡೆಸಲು ಆ ದೇಶದಲ್ಲಿದ್ದ ಭಾರತೀಯರು ಬ್ರಿಟಿಷರ ಪ್ರಜೆಗಳೆನಿಸಿದ್ದರೂ ಸಾಮಾನ್ಯ ಪ್ರಜೆಗಳಿಗಿದ್ದ ಹಕ್ಕು ಬಾಧ್ಯತೆಗಳನ್ನೂ ಪಡೆಯದಿದ್ದ ಸ್ಥಿತಿಯು ತಿಳಿಯಿತು. ಆ ದೇಶದಲ್ಲಿ ಅವರಿರುವುದೇ ಕಷ್ಟವಾಗಿ ಕಾಣಬರಲೆಂದು ನಾನಾ ಬಗೆಯ ಕಿರುಕುಳಗಳನ್ನು ಆಡಳಿತದವರು ಕಲ್ಪಿಸಿದ್ದರು. ಅದೆಲ್ಲವನ್ನೂ ಕಂಡು ಗಾಂಧೀಜೀ ಮನಸ್ಸಿನಲ್ಲಿ ಬಹಳವಾಗಿ ಅನುತಾಪಪಟ್ಟರು. ದಾವಾ ತೀರ್ಮಾನವಾದ ಬಳಿಕ ದಕ್ಷಿಣ ಆಫ್ರಿಕದಲ್ಲಿಯೇ ನೆಲೆಸಿ ತಮ್ಮ ನಾಯಕರಾಗಿದ್ದುಕೊಂಡು ನ್ಯಾಯಪ್ರಾಪ್ತಿಗಾಗಿ ತಮ್ಮನ್ನು ನಡೆಸಬೇಕೆಂದು ಅಲ್ಲಿಯ ಭಾರತೀಯರು ಕೇಳಿಕೊಂಡರು.



ಮಹಾತ್ಮಾ ಗಾಂಧೀಜೀ

ಅದಕ್ಕೆ ಗಾಂಧೀಜೀ ಒಪ್ಪಿಕೊಂಡು ೧೮೯೪ನೇ ಇಸವಿ ಮೇ ತಿಂಗಳಲ್ಲಿ **ನೆಟಾಲ್ ಇಂಡಿಯನ್ ಕಾಂಗ್ರೆಸ್** ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ದಕ್ಷಿಣ ಆಫ್ರಿಕದಲ್ಲಿ ಆಳುತ್ತಿದ್ದ ಬ್ರಿಟಿಷರ ಬಲಾಢ್ಯ ಸರ್ಕಾರವನ್ನು ವಿರೋಧಿಸಲು ಆಯುಧಗಳನ್ನು ನಂಬಿ ದಂಗೆಯೇಳುವ ಉಪಾಯವನ್ನು ಯೋಚಿಸ ತಕ್ಕದ್ದೇ ಆಗಿರಲಿಲ್ಲ. ಸಾಧ್ಯತೆಯ ವಿಚಾರ ಹಾಗಿತ್ತು. ಗಾಂಧೀಜೀಗೆ ಆ ಮಾರ್ಗದಲ್ಲಿ ವಿಶ್ವಾಸವೂ ಇರಲಿಲ್ಲ. ಆತನ ಸಂಕಲ್ಪವು ಬೇರೆಯಾಯಿತು. ಹಿಂದೆ ಹಿಂದುಸ್ತಾನದಲ್ಲಿ ಬೌದ್ಧರೂ ಯೂರೋಪ್ ಅಮೆರಿಕಗಳಲ್ಲಿ ಕ್ವೇಕರ್ (Quaker) ಮುಂತಾದ ಕ್ರೈಸ್ತ ಗುಂಪುಗಳವರೂ ಅನುಸರಿಸಿದ ವಿಧಾನವನ್ನು ಅವಲಂಬಿಸುವ ನಿಶ್ಚಯ ಹುಟ್ಟಿತು ಆತನ ಮನಸ್ಸಿನಲ್ಲಿ. ಅದನ್ನು ಅನುಸರಿಸಿ ಯಾವ ಬಗೆಯ ಹಿಂಸೆಯನ್ನೂ ಕೊಡದ ಸತ್ಯಾಗ್ರಹವನ್ನು ಸಾಧಿಸಿ ದಕ್ಷಿಣ ಆಫ್ರಿಕದ ಸರ್ಕಾರದೊಡನೆ ಆತನು ವ್ಯವಹಾರ ನಡೆಸಿದ ವಿವರವನ್ನು ಎಲ್ಲರೂ ಕೇಳಿರುತ್ತಾರೆ. ಇಪ್ಪತ್ತು ವರ್ಷಗಳ ಕಾಲದ ತಪಸ್ಸನ್ನು ನಡೆಸಿದಂತಾಯಿತು; ಆತನೂ ಆತನ ಅನುಯಾಯಿಗಳೂ ಪುನಃ ಪುನಃ ಸೆರೆಮನೆಯ ನಿರ್ಬಂಧದಲ್ಲಿದ್ದುದಲ್ಲದೆ ಇನ್ನೂ ಕಠಿಣವಾದ ಕಷ್ಟಗಳನ್ನು ಸಹಿಸಿಕೊಳ್ಳಬೇಕಾಯಿತು. ಕಡೆಗೆ ೧೯೧೪ರಲ್ಲಿ ಜಯವು ಲಭಿಸಿತು. **ಇಂಡಿಯನ್ ರಿಲೀಫ್ ಆಕ್ಟ್** (Indian Relief Act) ಎಂಬ ಕಾನೂನು ರಚನೆಯಾಗಿ ಅತ್ಯನ್ಯಾಯವೆನಿಸಿದ್ದ ಅಂಶಗಳು ಅದರ ಬಲದಿಂದ ದೂರವಾದವು.

ತರುವಾಯ ಹಿಂದುಸ್ತಾನಕ್ಕೆ ಹಿಂತಿರುಗಿ ಬಂದರು ಗಾಂಧೀಜಿ. ಸ್ವಲ್ಪ ಕಾಲದಲ್ಲಿ ಅಂತಹದೇ ಮತ್ತೊಂದು ಸತ್ಯಾಗ್ರಹವನ್ನು ಸ್ವದೇಶದಲ್ಲಿರುವ ದೇಶಬಂಧುಗಳಿಗಾಗಿ ನಡೆಸುವ ಪ್ರಯತ್ನದಲ್ಲಿ ಶ್ರಮಿಸಬೇಕಾಯಿತು. ಮೊನ್ನೆ ಮೊನ್ನೆ ನಡೆದ ಆ ಪ್ರಯತ್ನದ ವಿವರವನ್ನು ಇಲ್ಲಿ ಹೇಳಿಕೊಳ್ಳಲಾಗುವುದಿಲ್ಲ. ಗಾಂಧೀಜಿಯ ಬೋಧೆಯನ್ನೊಪ್ಪಿಕೊಂಡರೂ ಒಪ್ಪಿಕೊಳ್ಳದಿದ್ದರೂ ಒಂದಂಶವನ್ನು ಎಲ್ಲರೂ ಗೌರವಿಸಲೇಬೇಕು. ಶಿವಾಜಿ ಮಹಾರಾಜನ ತರುವಾಯ ಹಿಂದುಸ್ತಾನದಲ್ಲಿ ಗಾಂಧೀಜಿಯಷ್ಟು ಪ್ರಭಾವಶಾಲಿಯಾದ ಸ್ತ್ರೀಯಾಗಲಿ ಪುರುಷನಾಗಲೀ ಹುಟ್ಟಲೇ ಇಲ್ಲವೆಂಬ ಅಂಶ. ಗಾಧೀಜಿಯ ಮನಸ್ಸಿನ ಆಸೆಯಾದರೂ ಏನು? ಆಯುಧಗಳನ್ನು ಹಿಡಿದು ಜಪಾನೀಯರನ್ನು ಪ್ರತಿಭಟಿಸುವ ಪ್ರಯತ್ನದಿಂದ ಚೀನದಲ್ಲಿ ರೂಪವೆತ್ತಿದ ಘೋರ ಹಿಂಸೆಹತ್ಯೆಗಳು ಮುಂದೆ ಸಂಭವಿಸದಿರಲೆಂದು. ಹಿಟ್ಲರನ್ನು ಎದುರಿಸಲು ಬ್ರಿಟಿಷರು ತೊಡಗಿದಾಗ ಪೃಥ್ವಿಯಲ್ಲಿ ವಾಸಿಸುವ ಕೋಟ್ಯಂತರ ಜನರಿಗೊದಗಿದ ಕಷ್ಟಸಂಕಟಗಳು ಪುನಃ ಒದಗದಿರಲೆಂದು. ಆತನ ಆಸೆ ಪೂರ್ತಿಯಾದರೆ ಪೃಥ್ವಿಯೇ ಆತನ

ಮಾರ್ಗವನ್ನು ಅನುಸರಿಸೀತು. ಇದೆಷ್ಟು ಮಾತ್ರ ಯಥಾರ್ಥವಾದೀತೋ ಮುಂದಿನ ಕಾಲದಲ್ಲಿ ಮಾತ್ರ ವ್ಯಕ್ತವಾಗಬೇಕು. ಎಂತಾದರೂ ಗಾಂಧೀಜಿಯವರ ಜೀವನವು ಕೋಟಿಗಟ್ಟಲೆ ಜನರಿಗೆ ಆದರ್ಶಭೂತವಾದುದು; ಮನಃಮೋಹಕವಾದುದು.

ಆತನ ವೃತ್ತಾಂತದೊಂದಿಗೆ ಗತಕಾಲದ ಗುರುತುಗಳ ವಿವರವನ್ನೂ ಸದ್ಯದಲ್ಲಿ ಮಾನವರಾಶಿಯ ಸ್ಥಿತಿಯ ವರ್ಣನೆಯನ್ನೂ ನಾವು ಮುಕ್ತಾಯಮಾಡಿಕೊಳ್ಳಬಹುದು. ಭವಿಷ್ಯತ್ಕಾಲದಲ್ಲಿ ತೋರಬಹುದಾದ ಸಮಸ್ಯೆಗಳನ್ನೂ ಸಂಭವಗಳನ್ನೂ ಕಡೆಯ ಅಂಶವಾಗಿ ಕಂಡುಕೊಳ್ಳೋಣ.

ಅಭ್ಯಾಸಗಳು

೧. ಚಿಯಾಂಗ್‌ಕೈಷೇಕನ ವೃತ್ತಾಂತವನ್ನೆಲ್ಲಿಯಾದರೂ ಸಂಗ್ರಹಿಸಿಕೊಳ್ಳಿ. ಆತನ ಜೀವನಚರಿತ್ರೆಯನ್ನು ಬರೆದಿಡಿ.

೨. ಆಯುಧ ಸಾಮಗ್ರಿ ಸಾಲದಿದ್ದಾಗ್ಗೂ ಚೀನೀಜನರು ಜಪಾನೀಯರನ್ನು ಇಷ್ಟು ವರ್ಷಗಳ ಕಾಲ ಪ್ರತಿಭಟಿಸಲು ಸಮರ್ಥರಾದುದು ಹೇಗೆ?

೩. ಜಪಾನೀಯರನ್ನು ಎದುರಿಸಲು ಚೀನೀಜನರು ಮಹಾತ್ಮಾ ಗಾಂಧೀಜೀಯವರ ವಿಧಾನವನ್ನು ಅನುಸರಿಸಿದ್ದರೆ ಮೇಲಾಗಿರುತ್ತಿತ್ತು ಎಂಬುದನ್ನು ಚರ್ಚಿಸಿ.

೪. ಔರಂಗಜ಼ೇಬ್ ಬಾದಶಾಹನನ್ನು ವಿರೋಧಿಸಿದಾಗ ಪಡೆದಷ್ಟು ಗೆಲುವನ್ನು ಮರಾಟಿಯವರು ಬ್ರಿಟಿಷರನ್ನು ವಿರೋಧಿಸಿದಾಗ ಪಡೆಯಲಿಲ್ಲವೇಕೆ?

೫. ಹಿಂದುಸ್ತಾನವನ್ನು ಪರದೇಶೀ ಸರ್ವಾಧಿಕಾರಿಗಳ ದುರಾಕ್ರಮಣದಿಂದ ರಕ್ಷಿಸಲು ಬಲಿಷ್ಠವಾದ ಸ್ಥಲಜಲಾಕಾಶಸೈನ್ಯಗಳನ್ನು ಸಜ್ಜುಗೊಳಿಸುವುದಕ್ಕಿಂತಲೂ ಭಾರತೀಯ ತರುಣತರುಣಿಯರನ್ನು ಸತ್ಯಾಗ್ರಹದಲ್ಲಿ ಶಿಕ್ಷಿಸುವುದು ಮೇಲೆಂಬುದನ್ನು ಚರ್ಚಿಸಿ.

೩೦ನೇ ಅಧ್ಯಾಯ

ಕಡೆಗೆ ನಮ್ಮ ಗುರಿಯೇನು?

ಮುಖ್ಯಪ್ರಶ್ನೆ ೧೦೪: ನಿಷ್ಪಕ್ಷಪಾತವಾಗಿರುವುದು ಹೇಗೆ ಅವಶ್ಯಕ? ಮನೋಧರ್ಮವನ್ನು ಆ ರೀತಿ ನಡೆಸುವುದರಲ್ಲಿ ಕಾಣುವ ತೊಂದರೆಯೇನು?

ಈ ಸಣ್ಣ ಪುಸ್ತಕವನ್ನು ನಾನು ಬರೆದಿಡುವ ಉದ್ದೇಶಗಳಲ್ಲೊಂದು ಏನೆಂದರೆ ವಿದ್ಯಾರ್ಥಿಗಳಲ್ಲಿ ನಿಷ್ಪಕ್ಷಪಾತಬುದ್ಧಿಯನ್ನು ಪ್ರೇರಿಸಬೇಕೆಂಬುದು. ನಿಷ್ಪಕ್ಷಪಾತವಾಗಿರಬೇಕೆಂಬ ಇಷ್ಟ ಹುಟ್ಟಬೇಕು. ಮುಖ್ಯ ಸಂಗತಿಗಳನ್ನು ಕಾಣುವಾಗ ಪಕ್ಷಪಾತವನ್ನು ಬಿಟ್ಟು ಕಾಣಬೇಕು. ಯಾವ ವಿಷಯವಾದರೂ ವಾದಪ್ರತಿವಾದಗಳೆಲ್ಲವನ್ನೂ ಸಾವಧಾನದಿಂದ ಪರಿಶೀಲಿಸಿದ ತರುವಾಯ ಇತ್ಯರ್ಥಮಾಡಿಕೊಳ್ಳಬೇಕು.

ಇದರಲ್ಲಿ ಕಷ್ಟವೇನೆಂಬುದನ್ನು ಒಂದು ದೃಷ್ಟಾಂತವೆತ್ತಿಕೊಂಡು ಸ್ಪಷ್ಟವಾಗಿ ಕಾಣಬಹುದು. ಹಿಂದೆ ನಾವು ವಿವರಿಸಿಕೊಂಡ ರೋಮಕರ ಮತ್ತು ಕಾರ್ಥೇಜಿನವರ ವೃತ್ತಾಂತವನ್ನು ಪರ್ಯಾಲೋಚಿಸಿದಾಗ ನೀವು ಪಕ್ಷಪಾತವಿಲ್ಲದೆ ಇರಬಹುದು. ಏಕಂದರೆ ನೀವು ರೋಮಕರೂ ಅಲ್ಲ, ಕಾರ್ಥೇಜಿನವರೂ ಅಲ್ಲ. ಒಂದುವೇಳೆ ಕಾರ್ಥೇಜಿನ ಜನರಲ್ಲಿ ನಿಮಗೆ ಅನುತಾಪ ತೋರಿದಾಗ್ಯೂ ರೋಮಕರಾಗಿದ್ದ ಪಕ್ಷದಲ್ಲಿ ರೋಮಕರ ಪಕ್ಕದಲ್ಲಿ ನಿಂತು ಶತ್ರುಗಳೆನಿಸಿದವರನ್ನು ಅನಿವಾರ್ಯವಾಗಿ ಎದುರಿಸುತ್ತಿರಲಿಲ್ಲವೇ ಎಂದು ಮನಸ್ಸಿನಲ್ಲಿ ಭಾವಿಸಿಕೊಳ್ಳಲು ಸಾಧ್ಯ.

ಆದರೆ ಸಮೀಪಕಾಲದ ವಿಚಾರವನ್ನೆತ್ತಿಕೊಂಡಾಗ ಉಭಯಪಕ್ಷಗಳ ವಿವರಗಳನ್ನು ಏಕದೃಷ್ಟಿಯಿಂದ ಕಾಣುವುದು ಅಷ್ಟು ಸುಲಭವಾಗಿರುವುದಿಲ್ಲ. ಪೂರ್ವಪಕ್ಷದವರ ಸ್ಥಾನದಲ್ಲಿ ನಿಂತು ಎಲ್ಲವನ್ನೂ ಗ್ರಹಿಸಿದ ತರುವಾಯ ಪ್ರತಿಪಕ್ಷದವರ ಸ್ಥಾನದಲ್ಲಿ ನಿಂತು ಪುನಃ ಎಲ್ಲವನ್ನೂ ಕಾಣುವಷ್ಟು ಸಾವಧಾನವು ನಮಗಿರುವುದಿಲ್ಲ. ಬೇರೆ ಬೇರೆ ದೃಷ್ಟಿಗೆ ಹೇಗೆ ಹೇಗೆ ಕಂಡೀತೆಂದು ತೊಂದರೆಪಡದೆ ಬೇಗನೆ ಇತ್ಯರ್ಥಮಾಡಿಕೊಳ್ಳಲು ಇಷ್ಟಪಡುತ್ತೇವೆ. ಅನೇಕ ವೇಳೆ ಅಷ್ಟೂ ಇಲ್ಲದೆ ಪಾಲುಮಾರಿಕೆಯಿಂದ ಕೀಳಾದ ದಾರಿಯನ್ನು ಹಿಡಿದು ನಮ್ಮ ಇಷ್ಟಮಿತ್ರರು ಸಿದ್ಧಗೊಳಿಸಿಕೊಂಡ ಅಭಿಪ್ರಾಯಗಳನ್ನೋ ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಅಭಿಪ್ರಾಯಗಳನ್ನೋ ಸ್ವೀಕರಿಸಿಬಿಡುತ್ತೇವೆ.

ಯುದ್ಧ ಸಂಭವವಾಗುವಂತಹ ವಿಷಮಸಮಯುಗಳಲ್ಲಿ ಉನ್ಮತ್ತರಾಗುವ ಜನರು ಅಂತಹವರು. ಚುನಾವಣೆಗಳ ಕಾಲವಾದರೂ ಕಾಂಗ್ರೆಸ್, ಪಾರ್ಲಿಮೆಂಟ್ ಅಥವಾ ಉಪಸಭೆಗಳಲ್ಲಿ ಮುಖ್ಯವಿಷಯಗಳ ಚರ್ಚೆನಡೆಯುವ ಸಮಯುವಾದರೂ ಅಂತಹ ಜನರು ಹೆಚ್ಚೋ ಕಡಿಮೆಯೋ ಉದ್ರೇಕದಿಂದಲೇ ಇರುತ್ತಾರೆ. ಸ್ವಬುದ್ಧಿಯನ್ನುಪಯೋಗಿಸದೆ ಮೈಮರೆತಂತೆಯೇ ಆ ಬಗೆಯ ನಡತೆ. ಆದ್ದರಿಂದ ದೇಶದ ಕ್ಷೇಮಕ್ಕಾಗಿಯೂ ನಿಮ್ಮ ಮೇಲಿಗಾಗಿಯೂ ನಿಮ್ಮಲ್ಲಿ ಎಚ್ಚರದಿಂದ ಕೂಡಿದ ಪರಿಶೀಲನಬುದ್ಧಿಯಿರುವುದು ಬಲುಮುಖ್ಯ. ಅಂತಹ ನಿಷ್ಪಕ್ಷಪಾತಬುದ್ಧಿಯಿಂದ ವಿಚಾರಮಾಡಿಕೊಳ್ಳುವ ಅಭ್ಯಾಸ ಅವಶ್ಯಕ. ಚರಿತ್ರೆಯನ್ನೋದುವುದರಿಂದ ಇಂತಹ ಬುದ್ಧಿಯನ್ನು ನಾವು ಬೆಳೆಸಿಕೊಳ್ಳಲು ಸಹಾಯವಾಗುವುದು ನಿಜ; ಆದರೆ ಚರಿತ್ರಲೇಖಕನು ನಿಷ್ಪಕ್ಷಪಾತಬುದ್ಧಿಯನ್ನೇ ಆದಷ್ಟು ಮಟ್ಟಿಗೂ ಬೆಳೆಸಿ ಬರೆದಿಟ್ಟಿದ್ದರೆ ಮಾತ್ರ ಆ ಮಾತು ವಾಸ್ತವ. ಆದ್ದರಿಂದ ಈ ಪುಸ್ತಕದಲ್ಲಿ ನನ್ನ ಪ್ರಯತ್ನವಿಷ್ಟುಮಾತ್ರ; ಗತಕಾಲದಲ್ಲಿ ಮಹತ್ವದಿಂದ ಬಾಳಿದ ನರನಾರಿಯರು ಅನುಸರಿಸಿದ ಮಾರ್ಗವನ್ನೂ ಆ ಮಾರ್ಗದಲ್ಲಿ ಅವರಿಟ್ಟ ಹೆಜ್ಜೆಗಳನ್ನೂ ಗುರುತಿಸಿಕೊಡುವುದು, ಅವರ ಮಹಿಮೆ ಲೋಕದಲ್ಲಿ ಹೇಗೆ ಕಾಣಿಸಿತೆಂದು ತಿಳಿಸುವುದು, ಆ ತರುವಾಯ ಆ ಗತಿಯ ಯುಕ್ತಾಯುಕ್ತತೆಯನ್ನು ನಿಮ್ಮ ಸ್ವಬುದ್ಧಿಯಿಂದ ನಿಶ್ಚಯಿಸಿಕೊಳ್ಳಲು ಸಹಾಯವಾಗುವುದು. ನೀವು ಯಾವ ಇತ್ಯರ್ಥಮಾಡಿಕೊಳ್ಳುವಿರೋ ಅದು ನೀವು ಭಾವಿಸಬಹುದಾದುದಕ್ಕಿಂತ ಮುಖ್ಯವಾದುದು. ಏಕೆಂದರೆ ನಮ್ಮ ಕಾಲ ಪೃಥ್ವಿಯಚರಿತ್ರೆಯಲ್ಲಿ ಒಂದು ವಿಷಮ ಸಮಯ. ನಾಳೆಯೋ ನಾಳಿದ್ದೋ ಜನರು ಇತ್ಯರ್ಥಮಾಡಿಕೊಂಡಂತೆ ಸಮಸ್ತ ಮಾನವ ಸಮುದಾಯದ ಸಂಸ್ಕೃತಿಯು ರೂಪತಾಳಬೇಕಾಗುತ್ತದೆ. ಹಿಂದೆಂದೂ ಕಾಣದಂತಹ ಕ್ಷೇಮಸೌಭಾಗ್ಯಗಳನ್ನು ಮುಂದಿನ ಕಾಲದಲ್ಲಿ ಕಂಡರೂ ಕಾಣಬಹುದು, ಅಥವಾ ನಮ್ಮ ಜೀವಮಾನದಲ್ಲಿಯೇ ಸಭ್ಯತೆ ಸಂಸ್ಕೃತಿಗಳು ಸರ್ವನಾಶಹೊಂದಿ ಆ ತರುವಾಯ ಉಳಿದವರಾರಾದರೂ ಇದ್ದಲ್ಲಿ ಹಿಂದೆ ಅಂಧಕಾರಯುಗದಲ್ಲಿ ಅನುಭವಿಸಿದ ಹೀನಸ್ಥಿತಿಗಿಂತಲೂ ನಿಕೃಷ್ಟವಾದ ಸ್ಥಿತಿಗೆ ಇಳಿಯಬೇಕಾಗಿ ಸಂಭವಿಸಿದರೂ ಸಂಭವಿಸಬಹುದು.

ಇನ್ನೂ ಪರಿಹಾರವನ್ನು ಕಾಣದಿರುವ ಕೆಲವು ಸಮಸ್ಯೆಗಳನ್ನು ಹಿಂದಿನ ಅಧ್ಯಾಯಗಳಲ್ಲಿ ಸೂಚಿಸಿದ್ದಾಯಿತು: ನೀಗ್ರೋಜನರ ಭವಿಷ್ಯ, ಆಗಿಂದಾಗ್ಗೆ ಒದಗುವ ನಿರುದ್ಯೋಗ, ನ್ಯಾಯಶಾಂತಿಗಳ ಸ್ಥಾಪನೆ ಇತ್ಯಾದಿ. ಕಡೆಯದಾದ ಈ ಅಧ್ಯಾಯದಲ್ಲಿ ಮಾನವಸಮುದಾಯದ ಮುಂದಿರುವ ಎರಡು

ದೊಡ್ಡ ಸಮಸ್ಯೆಗಳನ್ನು ನೋಡೋಣ. ನೀವು ವಯಸ್ಕರಾದಾಗ ಆ ವಿಚಾರಗಳನ್ನು ಇತ್ಯರ್ಥಗೊಳಿಸುವುದರಲ್ಲಿ ನೀವೂ ಭಾಗಿಗಳಾಗುವಿರಿ. ಆದುದರಿಂದ ವಿದ್ಯಾರ್ಥಿದಶೆಯಲ್ಲಿರುವಾಗಲೇ ಆ ವಿಚಾರಗಳ ಸಂಬಂಧವಾಗಿರುವ ಬೇರೆ ಬೇರೆ ಅಭಿಮತಗಳನ್ನು ತಿಳಿದಿದ್ದರೆ ಮುಂದೆ ನಿಶ್ಚಯ ಮಾಡಿಕೊಳ್ಳಲು ಅನುಕೂಲ.

ಮುಖ್ಯಪ್ರಶ್ನೆ ೧೯: ಈಗಿನ ಕಾಲದಲ್ಲಿ ಮುಖ್ಯವಾಗಿರುವ ಮೂರು ರಾಷ್ಟ್ರಪದ್ಧತಿಗಳಾವುವು? ಬೇರೆಬೇರೆಯಾಗಿ ಅವುಗಳ ಮುಖ್ಯಲಕ್ಷಣಗಳನ್ನು ತಿಳಿಯಹೇಳಿ.

ಆ ಎರಡು ಸಮಸ್ಯೆಗಳು ಯಾವುವೆಂದರೆ:

(೧) ಸರ್ವಾವಶ್ಯವಾದ ಸರಕಿನ ಉತ್ಪತ್ತಿಯನ್ನೂ ಪ್ರಾಪ್ತಿಯನ್ನೂ ಎಷ್ಟು ಮಾತ್ರ ರಾಷ್ಟ್ರವೆಂಬುದು ಸ್ವಾಧೀನದಲ್ಲಿಟ್ಟುಕೊಂಡು ನಡೆಸಬೇಕು?

(೨) ಪ್ರತಿವ್ಯಕ್ತಿಗೂ ಇರಬೇಕಾದ ಮಾನಸಿಕಸ್ವಾತಂತ್ರ್ಯಕ್ಕೂ ಇರತಕ್ಕಷ್ಟು ಆಚಾರಸ್ವಾತಂತ್ರ್ಯಕ್ಕೂ ಲೋಪ ತೋರದಂತೆ ಸಾರ್ವಜನಿಕ ವಿದ್ಯಮಾನಗಳನ್ನು ತೃಪ್ತಿಕರವಾಗಿ ನಡೆಸಿಕೊಡಲು ಯಾವ ರಾಷ್ಟ್ರರೂಪ ನಮಗೆ ಅತ್ಯುತ್ತಮ?

ಕಾರ್ಲ್‌ಮಾರ್ಕ್ಸ್‌ನ ವೃತ್ತಾಂತವನ್ನು ಹೇಳಿಕೊಂಡಾಗ ಆತನು ಮೊದಲನೆ ಪ್ರಶ್ನೆಯನ್ನು ಆಲೋಚಿಸಿ ಸೂಚಿಸಿದ ಪರಿಹಾರೋಪಾಯವನ್ನು ಕಂಡೆವು. ಆತನು ಮೊದಲುಮಾಡಿದ ಕಾಮ್ಯೂನಿಸ್ಟ್ ಅಥವಾ ಸಮತಾವಾದವೆಂಬುದು ಒಂದುಬಗೆಯ ರಾಷ್ಟ್ರನೀತಿಯ ವಿವರ. ಭೂಸ್ಥಿತಿಗಳು, ಗಣಿಗಳು, ಕಾರ್ಖಾನೆಗಳು ಮುಂತಾಗಿ ಉತ್ಪತ್ತಿಗೆ ಮೂಲಭೂತವಾದವುಗಳು ಯಾವ ವ್ಯಕ್ತಿಗಳ ವಶದಲ್ಲಿಯೂ ಇಲ್ಲದೆ ರಾಷ್ಟ್ರಕ್ಕೆ ಅಥವಾ ಆಡಳಿತ ನಡೆಸುವ ಸರ್ಕಾರಕ್ಕೆ ಸೇರಿರತಕ್ಕದ್ದು ಅದರ ಮುಖ್ಯಾಂಶ. ದೇಶದ ಜನಸಮುದಾಯಕ್ಕೆ ಬೇಕಾದಷ್ಟು ಪದಾರ್ಥಗಳ ಉತ್ಪತ್ತಿಗಾಗಿಯೂ ಪ್ರತಿಪದಾರ್ಥವನ್ನೂ ತಕ್ಕ ಮಟ್ಟಿಗೆ ಪ್ರಜೆಗಳಲ್ಲಿ ಹಂಚಿಕೊಡುವುದಕ್ಕಾಗಿಯೂ ಸರ್ಕಾರದವರು ವಿವರವಾದ ಕರ್ತವ್ಯಕ್ರಮವನ್ನೇರ್ಪಡಿಸಿಟ್ಟುಕೊಳ್ಳಬೇಕು. ಕಾಮಗಾರರೆಲ್ಲರಿಗೂ ಉದ್ಯೋಗಗಳನ್ನು ಹೊಂದಿಸಿಕೊಡುವುದೂ ಸಂಬಳ ಸಲ್ಲಿಸುವುದೂ ಸರ್ಕಾರದ ಕರ್ತವ್ಯವಾಗಿರತಕ್ಕದು. ಸ್ವಂತಕ್ಕೆಂದು ಯಾರೂ ಸ್ವತಂತ್ರಿಸಿ ವ್ಯಾಪಾರ ಮಾಡಕೂಡದು; ಲಾಭ ಸಂಪಾದನೆ ಮಾಡಬಾರದು. ಜನತೆಯ ಶಿಕ್ಷಣಕ್ಕೂ ಆರೋಗ್ಯಪಾಲನೆಗೂ ಉಲ್ಲಾಸವಿನೋದಗಳಿಗೂ ವೃದ್ಧಾಪ್ಯವೇತನಗಳಿಗೂ

ಸರ್ಕಾರದವರೇ ತಕ್ಕ ವ್ಯವಸ್ಥೆಯನ್ನು ಏರ್ಪಡಿಸಬೇಕು. ಹೆಂಗಸಾಗಲಿ ಗಂಡಸಾಗಲಿ ಚೈತನ್ಯವುಳ್ಳವರು ಯಾರೂ ನಿರುದ್ಯೋಗಿಗಳಾಗಿರಲಾಗದು.

ಈ ಸಿದ್ಧಾಂತವನ್ನು ಸರ್ವಲಕ್ಷಣಯುಕ್ತವಾಗಿ ಯಾವ ದೇಶದಲ್ಲಿಯೂ ಆಚರಿಸಿಲ್ಲ. ಆದರೆ ರಷ್ಯದಲ್ಲಿ ಮಹಾಪಲ್ಲಟ ನಡೆದ ಬಳಿಕ ಲೆನಿನ್ ನಾಯಕತ್ವದಲ್ಲಿ ೧೯೧೭ರಿಂದ ಕಾಮ್ಯೂನಿಸ್ಟ್ ರಾಷ್ಟ್ರವನ್ನು ನಡೆಸುವ ಉದ್ಯಮ ನಡೆಯಿತು. ಲೆನಿನ್ ತರುವಾಯ ಅಲ್ಲಿಯ ನಾಯಕನಾದ ಸ್ಟಾಲಿನ್ ಕಾಲದಲ್ಲಿ ಆ ರಾಷ್ಟ್ರದಲ್ಲಿ ಎಷ್ಟೋ ವ್ಯತ್ಯಾಸಗಳು ನಡೆದುವು; ಶುದ್ಧವಾದ ಕಾಮ್ಯೂನಿಸ್ಟ್ ರಾಷ್ಟ್ರರೂಪ ನಡೆಯಲಿಲ್ಲ. ಆದರೂ ಈಗಿನ ರಷ್ಯದ ಕೂಟರಾಷ್ಟ್ರದಲ್ಲಿ ಸರ್ವಾವಶ್ಯಕ ಸಾಮಗ್ರಿಯ ಉತ್ಪತ್ತಿಯಾಗುವುದು ಸರ್ಕಾರಕ್ಕೆ ಸೇರಿದ ಕಾರ್ಖಾನೆಗಳಲ್ಲಿಯೇ; ಸಾಮಗ್ರಿರಾಶಿಯ ಹಂಚಿಕೆಯಾಗುವುದು ಸರ್ಕಾರದವರ ಏರ್ಪಾಟಿನಂತೆಯೇ. ಸಮಾಜವಾದ ಸಮತಾವಾದಗಳಿಗನುಸಾರವಾಗಿ ಮೆಕ್ಸಿಕೊ ದೇಶದಲ್ಲಿಯೂ ಚೀನದ ಕೆಲವು ಭಾಗಗಳಲ್ಲಿಯೂ ಪ್ರಯತ್ನಗಳು ಹೆಚ್ಚು ವ್ಯಾಪ್ತಿಯಿಲ್ಲದಿದ್ದರೂ ನಡೆದಿವೆ.

ಅನೇಕ ದೇಶಗಳಲ್ಲಿ ಸೌಭಾಗ್ಯಸಂಪತ್ತುಗಳು ಈಗ ಜನರಾಶಿಯಲ್ಲಿ ನೆಲೆಯಾಗಿರುವುದಕ್ಕಿಂತಲೂ ನ್ಯಾಯವಾದ ರೀತಿಯಲ್ಲಿ ನೆಲೆಯಾಗಲು ರಾಷ್ಟ್ರವೇ ಸರ್ವಸ್ವವನ್ನೂ ನಡೆಸಿಕೊಡತಕ್ಕುದೆಂಬ ವಾದವನ್ನು ಒಪ್ಪಲಾರದವರು ಬಹುಮಂದಿಯಿದ್ದಾರೆ. ಅವರೆಲ್ಲರೂ ಧನವಂತರಾದವರಲ್ಲ; ಸಮಾಜವಾದದ ಪ್ರಕಾರ ರಾಷ್ಟ್ರ ರೂಪಗೊಂಡಲ್ಲಿ ಮೊದಲು ನಷ್ಟಪಡತಕ್ಕ ಆಸ್ತಿವಂತಗುಂಪಿನವರಲ್ಲ. ಅವರಿಗೆ ನ್ಯಾಯವೂ ಸಮತ್ವವೂ ಇಷ್ಟವಾದುದು; ಆದರೆ ಪ್ರತಿಯೊಬ್ಬರಿಗೂ ನ್ಯಾಯ ದೊರಕುವಂತೆ ಸರ್ಕಾರದವರು ನಡೆಸಿಕೊಡಬಹುದೆಂಬ ಅಭಿಪ್ರಾಯವುಂಟು. ಧನಾಢ್ಯರಿಂದ ಹೆಚ್ಚು ಹೆಚ್ಚಾದ ತೆರಿಗೆಗಳನ್ನು ಎತ್ತಿ ಆ ವರಮಾನದಿಂದ ಸರ್ಕಾರದವರು ಜನರಾಶಿಗೆ ಪ್ರಯೋಜಕವಾದ ಶಾಲೆ, ಆಸ್ಪತ್ರೆ, ನಿರುದ್ಯೋಗ ಕಾಲವೇತನ, ವೃದ್ಧಾಪ್ಯವೇತನ ಮುಂತಾದವುಗಳನ್ನು ಒದಗಿಸಬಹುದು. ಯಾವ ಕಾಮಗಾರಿಯಲ್ಲಿಯೂ ಅತಿಯಾದ ದುಡಿತಕ್ಕಾಗಲಿ ಅತ್ಯಲ್ಪ ಕೂಲಿಗಾಗಲಿ ಕರ್ಮಕಾರಿಗಳು ಸಿಕ್ಕಿಕೊಳ್ಳದಂತೆ ಕಾರ್ಖಾನೆಗಳ ಸ್ಥಿತಿಗತಿಗಳನ್ನು ಕಾನೂನು ನಿಬಂಧನೆಗಳ ಮೂಲಕ ಮೇಲುಗೊಳಿಸಬಹುದು. ಔದ್ಯೋಗಿಕ ಪಲ್ಲಟವು ನಡೆದ ಮೊದಲಲ್ಲಿ ಕಂಡುಬಂದ ಘೋರ ಅನ್ಯಾಯಗಳಿಗೆ ಅವಕಾಶವಿಲ್ಲದಂತೆ ಸರ್ಕಾರದವರು ನೆರವೇರಿಸಬಹುದು. ಉತ್ಪತ್ತಿಗೆ ಮೂಲಭೂತವಾದ ಆಸ್ತಿಗಳನ್ನು ಜನರು ಸ್ವಂತವಾಗಿಟ್ಟುಕೊಂಡೇ ಇದ್ದು ಜನರ ಸ್ವಾಮಿತನಕ್ಕೊಗ್ಗಿ ನಡೆಯುವ ಆಡಳಿತದ ಸ್ವಾಧೀನದಲ್ಲಿ ನಡೆಸುತ್ತಿರುವುದರಿಂದ ಅನ್ಯಾಯಗಳು

ಕಾಲಕ್ರಮದಲ್ಲಿ ತೊಲಗಿಯಾವು. ಬ್ರಿಟಿಷ್ ಡುಮಿನಿಯನ್ನುಗಳಲ್ಲಿಯೂ ಅಮೆರಿಕದಲ್ಲಿಯೂ ನಾರ್ವೆ, ಸ್ವೀಡೆನ್, ಡೆನ್ಮಾರ್ಕ್ ದೇಶಗಳಲ್ಲಿಯೂ ಅಂತಹ ಸ್ಥಿತಿಯೇ ನಡೆಯುತ್ತಿರುವುದು.

ಮೂರನೆಯದಾದ ಮಾರ್ಗವೂ ಹತ್ತು ವರ್ಷಗಳ ಹಿಂದಿನಿಂದ ಈ ಸಮಸ್ಯಾಪರಿಹಾರ ಪ್ರಯತ್ನದಲ್ಲಿ ಕಾಣಿಸಿಕೊಂಡಿದೆ. ೧೯೨೨ರಲ್ಲಿ ಇಟಲಿಯಲ್ಲಿ **ಸಿನ್ಯೋರ್ ಮುಸ್ಸೊಲೀನಿಯು** (Signor Mussolini) ಅಧಿಕಾರ ವಹಿಸಿದಾಗ ಮೊದಲಿಟ್ಟ ರೀತಿ ; ಅದಕ್ಕೆ **ಫ್ಯಾಸಿಸ್ಮ್** (Fascism) ಎಂಬುದಾಗಿ ಹೆಸರು. ಸಮತಾವಾದಕ್ಕೂ ಇದಕ್ಕೂ ದೂರ; ಫ್ಯಾಸಿಸ್ಮ್ ವ್ಯವಸ್ಥೆಯಲ್ಲಿ ಭೂಸ್ಥಿತಿ, ಗಣಿ, ಕಾರ್ಖಾನೆ ಮುಂತಾದವು ರಾಷ್ಟ್ರದ ಸ್ವತ್ತಾಗಬೇಕಾಗಿಲ್ಲ. ಆ ಆಸ್ತಿಗಳು ಜನರಿಗೆ ಸ್ವಂತವಾಗಿರಬಹುದು. ಆದರೆ ಫ್ಯಾಸಿಸ್ಮ್ ಎಂಬುದು ಬಂಡವಾಳಗಾರರ ಪ್ರಾಬಲ್ಯವನ್ನು ನಡೆಸುವ ಏರ್ಪಾಟೂ ಅಲ್ಲ. ಕಾರ್ಖಾನೆ ಮಾಲೀಕನಿಗಾಗಲಿ ಜಮೀನ್ದಾರನಿಗಾಗಲಿ ವರ್ತಕನಿಗಾಗಲಿ, ಕಡೆಗೆ ಕೂಲಿಗಾಗಿ ದುಡಿಯುವ ಕರ್ಮಕಾರಿಗಾಗಲಿ, ಸ್ವಾತಂತ್ರ್ಯವೆಂಬುದು ಫ್ಯಾಸಿಸ್ಮ್ ವ್ಯವಸ್ಥೆಯಲ್ಲಿರತಕ್ಕದು ಅತ್ಯಲ್ಪ. ಇದು ಹೊಸ ರೀತಿಯೆನಿಸಿತು. ಇದುವರೆಗೂ ರಾಷ್ಟ್ರನೀತಿಜ್ಞರಲ್ಲಿಯೂ ರಾಷ್ಟ್ರಕರ್ತರಲ್ಲಿಯೂ ಜನರಾಶಿ ದೊಡ್ಡದೆಂಬ ಭಾವನೆ ನೆಲೆಸಿತ್ತು. ನೆರೆಹೊರೆಯವರಿಗೆ ತೊಂದರೆಯಿಲ್ಲದಂತೆ ಜನರು ವರ್ತಿಸುವುದರಲ್ಲಿ ಎಷ್ಟು ಸ್ವಾತಂತ್ರ್ಯವಾದರೂ ಇರಬೇಕೆಂಬ ಅಂಶವು ಮುಖ್ಯವೆನಿಸಿತ್ತು. ಆದ್ದರಿಂದ ಸರ್ಕಾರ ಅಥವಾ ರಾಷ್ಟ್ರದ ಏರ್ಪಾಡು ಎಂಬುದು ಜನಜೀವನದಲ್ಲಿ ಎಷ್ಟು ಕಡಿಮೆಯಾಗಿ ಪ್ರವೇಶಿಸಿದರೆ ಅಷ್ಟು ಹಿತವೆಂಬ ನಂಬಿಕೆ ಭದ್ರವಾಗಿತ್ತು. ಸಮಾಜವಾದಿಗಳ ಅಭಿಮತವೂ ಹಾಗೆಯೇ ; ಪ್ರತಿಪೌರನಿಗೂ ಸಾಧ್ಯವಾದಷ್ಟು ವಿರಾಮವನ್ನೂ ಆ ವಿರಾಮವನ್ನು ಸುಭೋಗಿಸಲು ಆದಷ್ಟು ಸ್ವಾತಂತ್ರ್ಯವನ್ನೂ ದೊರಕಿಸಿಕೊಡಬೇಕೆಂಬ ಪರಮೋದ್ದೇಶಕ್ಕಾಗಿಯೇ ಉತ್ಪತ್ತಿವಿಭಜನಪ್ರಕರಣಗಳು ರಾಷ್ಟ್ರದ ಸ್ವಾಧೀನದಲ್ಲಿರಬೇಕೆಂಬುದು. ಆದರೆ ರಾಷ್ಟ್ರವೆಂಬುದೇ ಸರ್ವಪ್ರಧಾನವೆಂಬದು ಮುಸ್ಸೊಲೀನಿಯ ಅಭಿಮತ. ಜರ್ಮನಿಯಲ್ಲಿ **ನ್ಯಾಷನಲ್ ಸೋಷಿಯಲಿಸ್ಮ್** (National Socialism) ಎಂಬ ಹೆಸರಿನಿಂದ ಹಿಟ್ಲರ್ ಕಟ್ಟಿದ ವ್ಯವಸ್ಥೆಯೂ ಮುಸ್ಸೊಲೀನಿಯ ಏರ್ಪಾಡಿನಂತೆಯೇ. ಆದ್ದರಿಂದ ಆ ಇಬ್ಬರು ಸರ್ವಾಧಿಕಾರಿಗಳದೂ ಒಂದೇ ಮಾರ್ಗ.

ಆ ಮಾರ್ಗದಲ್ಲಿ ಮುಖ್ಯಾಂಶಗಳೇನು? ಪ್ರತಿ ಪೌರನೂ ಸುಖಿಯಾಗಿರುವುದು ಮುಖ್ಯವಲ್ಲ. ಎಲ್ಲಕ್ಕಿಂತಲೂ ರಾಷ್ಟ್ರವೆಂಬುದು ಹಿರಿದು, ಮುಖ್ಯ

ವಾದುದು. ದೇಶವಿದೇಶಗಳ ಮಧ್ಯೆ ತಮ್ಮ ರಾಷ್ಟ್ರವು ಪ್ರಬಲವಾಗಿರ ತಕ್ಕುದು ಪರಮೋದ್ದೇಶ. ಆ ಉದ್ದೇಶಕ್ಕನುಸಾರವಾಗಿ ಪ್ರತಿಪೌರನೂ ರಾಷ್ಟ್ರಭಕ್ತನಾಗಿ ರಾಷ್ಟ್ರಸೇವೆ ಸಲ್ಲಿಸಬೇಕು. ರಾಷ್ಟ್ರಪ್ರಾಬಲ್ಯಕ್ಕೆ ಸಹಾಯವಾಗದ ಕೆಲಸ ಕೂಡದು; ವ್ಯಕ್ತಿಗಳು ಸ್ವಂತಹಿತವನ್ನು ಯೋಚಿಸದೆ ರಾಷ್ಟ್ರದ ಹಿತವನ್ನೇ ಯೋಚಿಸುತ್ತಿರಬೇಕು. ಉದಾಹರಣೆಗೆ ಭೂಸ್ಥಿತಿವಂತರು ತಮಗೆ ತೋರಿದ ಬೆಳೆ ಬೆಳೆಸಬಾರದು; ಕೈಗಾರಿಕೆಯವರು ತಮಗೆ ಇಷ್ಟವಾದ ವಸ್ತುವನ್ನು ನಿರ್ಮಿಸಬಾರದು. ರಾಷ್ಟ್ರಮುಖ್ಯಸ್ಥರು ಹೇಳಿದ ಬೆಳೆ ಬೆಳೆಸಬೇಕು: ಸೂಚಿಸಿದ ಪದಾರ್ಥವನ್ನು ನಿರ್ಮಿಸಬೇಕು. ಶ್ರಮಕ್ಕೆ ಪ್ರತಿಫಲವಾಗಿ ಬರತಕ್ಕ ಲಾಭವೆಂಬುದು ರಾಷ್ಟ್ರಮುಖ್ಯರು ಹೇಳಿದ ಪ್ರಮಾಣದಷ್ಟೇ ಇರಬೇಕು; ಉಳಿದುದೆಲ್ಲವೂ ರಾಷ್ಟ್ರದ ವರಮಾನವಾಗಬೇಕು. ಕರ್ಮಕಾರಿಗಳು ತಮ್ಮ ಸ್ಥಿತಿಗತಿಗಳನ್ನು ಮೇಲುಗೊಳಿಸಿಕೊಳ್ಳಲು ಮುಷ್ಕರ ಮುಂತಾದುವನ್ನು ನಡೆಸಕೂಡದು; ಏಕೆಂದರೆ ಅಂತಹ ವಿಘ್ನಗಳಿಂದ ಉತ್ಪತ್ತಿಯು ಕಡಿಮೆಯಾಗಿ ರಾಷ್ಟ್ರಗೌರವಕ್ಕೆ ಕುಂದುತೋರೀತು. ಕರ್ಮಕಾರಿಗಳ ಸ್ಥಿತಿಗತಿಗಳು ಅಸಮರ್ಪಕವೆಂದು ತೋರಿದಾಗ ರಾಷ್ಟ್ರಮುಖ್ಯರು ಹೇಗಿರತಕ್ಕುದೆಂದು ನಿರ್ಧರಿಸಿ ತಮ್ಮ ನಿರ್ಧಾರಕ್ಕನುಸಾರವಾಗಿ ವರ್ತಿಸುವಂತೆ ಮಾಲೀಕರನ್ನೂ ಕರ್ಮಕಾರಿಗಳನ್ನೂ ಬಲವಂತಪಡಿಸುವರು. ಇದಿಷ್ಟೂ ತೃಪ್ತಿಕಾರಕವಾಗಿ ಕಾಣಬಹುದು. ಆದರೆ ರಾಷ್ಟ್ರಪ್ರಾಧಾನ್ಯವೆಂಬುದು ಇನ್ನೂ ಬಲುದೂರ ಹೊರಡುವುದು. ಮಗುವಿಗೆ ಎಂತಹ ಪಾಠಕಲಿಸಬೇಕು, ಪೌರನಾದವನು ಯಾವ ಅಭಿಪ್ರಾಯಗಳನ್ನು ಇಟ್ಟುಕೊಳ್ಳಬೇಕು, ವಿದ್ವಾಂಸರೂ ಪಂಡಿತರೂ ಯಾವುದನ್ನು ಸತ್ಯವೆಂದು ಬೋಧಿಸಬೇಕು ಮುಂತಾದುವು ರಾಷ್ಟ್ರಮುಖದಿಂದಲೇ ನಿರ್ಣಯವಾದರೆ ವ್ಯಕ್ತಿಸ್ವಾತಂತ್ರ್ಯವೆಂಬುದೇನು ಉಳಿಯಿತು? ಫ್ಯಾಸಿಸ್ಮ್ ಮತ್ತು ನಾಝಿಸ್ಮ್ (Nazism) ಎಂಬ ವ್ಯವಸ್ಥೆಗಳಲ್ಲಿ ಅಂತಹ ಆಪತ್ತು ಅತಿಸುಲಭವಾಗಿ ತೋರಿಕೊಳ್ಳಬಹುದು. ಫ್ಯಾಸಿಸ್ಮ್ ನೆಲೆಸಿರುವ ಇಟಲಿ, ನಾಝಿಸ್ಮ್ ಹಬ್ಬಿರುವ ಜರ್ಮನಿ, ಕಾಮ್ಯೂನಿಸ್ಮ್ ರೂಪಗೊಂಡಿರುವ ರಷ್ಯದೇಶಗಳ ಇತ್ತೀಚಿನ ಇತಿಹಾಸವನ್ನು ಸ್ಮರಿಸಿ ಆ ದೇಶಗಳಲ್ಲಿ ಅಭಿಪ್ರಾಯ ಸ್ವಾತಂತ್ರ್ಯದಲ್ಲಿ ಇಷ್ಟವುಳ್ಳವರಿಗೂ, ತತ್ತ್ವಸಾಧನೆಯಲ್ಲಿ ಸ್ವಾತಂತ್ರ್ಯಬೇಕೆಂದವರಿಗೂ ಒದಗಿದ ಪಾಡನ್ನು ಇದಕ್ಕೆ ನಿದರ್ಶನವಾಗಿಟ್ಟುಕೊಳ್ಳಬಹುದು. ರಾಷ್ಟ್ರಪ್ರಮುಖ (ಡುಚೆಯಾಗಲಿ, ಫ್ಯೂರರ್ ಆಗಲಿ, ಯಾವ ಹೆಸರಾದರೂ ಇರಲಿ) ನ ಅಭಿಪ್ರಾಯಗಳಿಗೆ ವಿರೋಧವಾದ ಅಭಿಪ್ರಾಯ

ಗಳನ್ನು ಬೆಳೆಸಿದವರು ರಾಷ್ಟ್ರಕಂಟಕರೆನಿಸಿ ಮಾಯವಾಗಿ ಹೋದರು. ಗಡೀಪಾರಾದವರು ಮಾತ್ರ ಜೀವಂತರಾಗಿ ಉಳಿದರು.

ನೀವು ಆಲೋಚನಾಪರರಾಗಿದ್ದರೆ ಇದಕ್ಕೆ ಪ್ರತ್ಯುತ್ತರವಾಗಿ ಒಂದು ಪ್ರಶ್ನೆಯನ್ನೇ ಒಡ್ಡಬಹುದು. ಯಾವುದಾದರೂ ರಾಷ್ಟ್ರದಲ್ಲಿ ಕೆಲವರು ರಾಷ್ಟ್ರಪಾತಕ್ಕೆ ಕಾರಣವಾದ ಅಭಿಪ್ರಾಯಗಳನ್ನು ಬೆಳೆಸಿ ಪ್ರಚಾರ ನಡೆಸುತ್ತಿದ್ದ ಪಕ್ಷದಲ್ಲಿ ಆ ರಾಷ್ಟ್ರಪ್ರಮುಖರು ಅಥವಾ ಸರ್ಕಾರದವರು ಅಂತಹವರನ್ನು ನಿರ್ಬಂಧದಲ್ಲಿಟ್ಟೋ, ಅವಶ್ಯ ತೋರಿದರೆ ವಧೆಗೊಳಿಸಿಯೋ ಆ ಆಂದೋಲನವನ್ನು ನಿಲ್ಲಿಸಿದರೆ ನ್ಯಾಯವಲ್ಲದೆ ಮತ್ತೇನು ಎಂದು ಕೇಳಬಹುದಲ್ಲವೆ?

ಮುಖ್ಯಪ್ರಶ್ನೆ ೧೧೦: ಸ್ವಾತಂತ್ರ್ಯವನ್ನೂ ಅಭಿವೃದ್ಧಿಯನ್ನೂ ಅನುಭೋಗಿಸಬಲ್ಲ ಜನತೆಯುಳ್ಳ ರಾಷ್ಟ್ರವ್ಯವಸ್ಥೆಯಲ್ಲಿ ಅವಶ್ಯಕವಾಗಿರಬೇಕಾದ ಮುಖ್ಯಲಕ್ಷಣಗಳೇನು?

ನೀವು ಕೇಳಬಹುದಾದ ಅಥವಾ ಕೇಳುವ ಪ್ರಶ್ನೆಗೆ ಪ್ರತಿಯಾಗಿ ನಿಮ್ಮ ಮುಂದೆ ಕಡೆಯದಾಗಿ ಒಂದು ವಿಚಾರವನ್ನಿಡುವೆನು. ಲೋಕದಲ್ಲಿ ಮುಂದಿನ ಪೌರರಾಗಿ ಬಾಳುವವರು ನೀವು. ಆ ವಿಚಾರದಲ್ಲಿ ನಿಮಗೆ ಆಸಕ್ತಿಯು ಹುಟ್ಟಬೇಕಾದುದು ಸಹಜ. ಆ ವಿಚಾರವಿದು; ದಕ್ಷತೆಯಿಂದ ಸ್ಥಿತಿಗತಿಗಳನ್ನು ವ್ಯವಸ್ಥೆಗೊಳಿಸುತ್ತಲೂ ವ್ಯಕ್ತಿಸ್ವಾತಂತ್ರ್ಯವನ್ನು ಕಾಪಾಡುತ್ತಲೂ ವರ್ತಿಸತಕ್ಕ ರಾಷ್ಟ್ರರೂಪವನ್ನು ಅಥವಾ ಸರ್ಕಾರದ ರೀತಿಯನ್ನು ನಾವು ಹೊಂದಿಸಲಾರೆವೇ?

ಡೆಮೊಕ್ರಸಿ ಅಥವಾ ಜನಸ್ವಾಮ್ಯವೆಂದು ಒಂದು ರೂಪವನ್ನು ಕರೆಯುತ್ತೇವಲ್ಲವೆ? ಸ್ಥಿತಿಗತಿಗಳನ್ನು ಆ ರೀತಿ ನಡೆಸುವ ಏರ್ಪಾಡು ಹುಟ್ಟಿದ್ದು ಕಠೋರವಾದ ಆಡಳಿತವನ್ನೂ ದರ್ಪಿಷ್ಠಪ್ರಭುಗಳನ್ನೂ ಅಡಗಿಸುವುದಕ್ಕೆ ತಾನೆ! ತಮ್ಮ ಪ್ರತಿನಿಧಿಗಳಿಂದ ತುಂಬಿದ ಸಭೆಗೆ ಅಧೀನವಾಗಿ ನಡೆಯುವ ಆಡಳಿತವನ್ನೇರ್ಪಡಿಸಿದಾಗ ತಮ್ಮ ಅನುಮತಿಯಿಂದ ಆಡಳಿತ ನಡೆಯುವಂತೆ, ಅಥವಾ ಬಹುಪಕ್ಷಕ್ಕೆ ಅನುಸಾರವಾಗಿ ನಡೆಯುವಂತೆ, ಜನರು ಏರ್ಪಡಿಸಿಕೊಂಡರು. ಆದರೆ ಇದುವರೆಗೂ ಜನಸ್ವಾಮ್ಯರೂಪದಿಂದ ದಕ್ಷತೆಯುಳ್ಳ ವ್ಯವಸ್ಥೆ ನೆರವೇರದಾಯಿತು. ಪೆರಿಕ್ಲೀಸ್ ಕಾಲದ ಅಥೆನ್ಸ್ ಪಟ್ಟಣದಲ್ಲಿ ಅಲ್ಪಸಂಖ್ಯಾಕ ಜನರಿದ್ದು ಪ್ರತ್ಯಕ್ಷ ಜನಸ್ವಾಮ್ಯ ನಡೆಯುತ್ತಿತ್ತು; ಆಗಲೂ ಪಕ್ಷಪ್ರತಿಪಕ್ಷಿಗಳ ಕಿತ್ತಾಟ, ವ್ಯಕ್ತಿಗಳ ಮತ್ಸರಗಳು ರೇಗುತ್ತಿದ್ದುದರಿಂದ ಕರ್ತವ್ಯಸಾಧನೆಗೆ ಅತಿ ವಿಲಂಬವಾಗುತ್ತಿತ್ತು. ಈಗಿನಕಾಲದಲ್ಲಿ ವಿಶಾಲ

ಪ್ರದೇಶಗಳೂ ಕೋಟಿಗಟ್ಟಲೆ ಜನಸಮೂಹಗಳೂ ಉಳ್ಳ ರಾಷ್ಟ್ರಗಳಲ್ಲಿ ಸಾಧ್ಯವಾದುದು ಪರೋಕ್ಷ ಜನಸ್ವಾಮ್ಯಮಾತ್ರ. ನಾಲ್ಕೂ ಮುಕ್ಕಾಲುಕೋಟಿ ಜನರಾಶಿಯುಳ್ಳ ಗ್ರೇಟ್‌ಬ್ರಿಟನ್ ಮತ್ತು ಹದಿಮೂರುಕೋಟಿ ಜನಬಾಹುಳ್ಯವುಳ್ಳ ಅಮೆರಿಕ ರಾಷ್ಟ್ರಗಳಲ್ಲಿ ಜನರಿಂದ ವೃತರಾಗಿ ಸೇರಿದ ನೂರಾರು ಪ್ರತಿನಿಧಿಗಳು ಕೂಡಿದ ಪಾರ್ಲಿಮೆಂಟೋ ಕಾಂಗ್ರೆಸ್ಸೋ ಉಂಟು; ಆ ಸಭೆಗೆ ಅಧೀನವಾಗಿಯೇ ನಡೆಯತಕ್ಕದು ಆಡಳಿತ. ಜನಸ್ವಾಮ್ಯದ ಬೃಹದ್ರೂಪಗಳು ಅವು. ಆದರೆ ಅವುಗಳಲ್ಲಿ ಎಷ್ಟೋ ರಂಪು, ಎಷ್ಟೋ ಅವಾಂತರ, ಕಾರ್ಯಸಿದ್ಧಿಯಲ್ಲಿ ಎಷ್ಟೋ ವಿಳಂಬ. ಫ್ಯಾಸಿಸ್ಟ್‌ ನಾಡಿಸ್ಟ್‌ಗಳು ಹುಟ್ಟಿಕೊಳ್ಳಲು ಇದೂ ಒಂದು ಕಾರಣ. ಇಟಲಿ ಜರ್ಮನಿಗಳೆರಡರಲ್ಲಿಯೂ ಕೆಲವು ವರ್ಷಕಾಲ ಪಾರ್ಲಿಮೆಂಟ್ ರೀತಿಯ ಆಡಳಿತದ ಅನುಭವವಾಗಿತ್ತು; ಮೊದಲನೆ ಘೋರಯುದ್ಧದ ತರುವಾಯ ಬಹಳವಾದ ಅತೃಪ್ತಿ ನೆಲೆಸಿತ್ತು. ಅಸಂಖ್ಯಾಕ ಕಕ್ಷಿಪ್ರತಿಕಕ್ಷಿಗಳನ್ನು ಬೆಳೆಸುವ ಪಾರ್ಲಿಮೆಂಟ್ ಪದ್ಧತಿಯ ಅನುಸರಣೆಗಿಂತಲೂ ಬಲಿಷ್ಠನೂ ಸಮರ್ಥನೂ ಆದಾತನೊಬ್ಬನು ಆಡಳಿತವನ್ನು ನಡೆಸಿದಲ್ಲಿ ಇಷ್ಟಾರ್ಥವು ಶೀಘ್ರವಾಗಿ ಸಿದ್ಧಿಸುವುದೆಂದು ಆ ಜನರಿಗೆ ತೋರಿತು. ಆ ನಿರೀಕ್ಷೆ ವಾಸ್ತವವಾಗಿ ಪೂರ್ತಿಯಾಯಿತು; ಶೀಘ್ರ ಸಿದ್ಧಿಯೊದಗಿತು. ಯುದ್ಧಕಾಲದ ತೊಂದರೆಗಳಲ್ಲಿ ಸಿಕ್ಕಿ ನರಳುತ್ತಿದ್ದಂತಹದೇಶಗಳು ಮುಸ್ಸೊಲೀನಿ ಹಿಟ್ಲರುಗಳ ಆಡಳಿತದಲ್ಲಿ ಸುಭಿಕ್ಷಗೊಂಡುದು ನಿಜವೆಂದೊಪ್ಪತಕ್ಕದ್ದು.

ಆದರೆ ಶೀಘ್ರ ಸಿದ್ಧಿಯಾಗಲೆಂದು ದಕ್ಷತೆಯನ್ನು ಮೆಚ್ಚಿಕೊಂಡಾಗ ಇತರಾಂಶಗಳನ್ನು ಮರೆಯಬಾರದು. ದಕ್ಷತೆಯನ್ನು ಪೂಜ್ಯಸ್ಥಾನದಲ್ಲಿಟ್ಟು ಅತಿ ಪ್ರಿಯವಾದುದನ್ನು ಕಳೆದರೆ ಆಗ ತೋರುವುದು ಕೊರತೆಯೇ. ವ್ಯಕ್ತಿಸ್ವಾತಂತ್ರ್ಯಕ್ಕೆ ಲೋಪತೋರದೆ ಕಾರ್ಯಸಿದ್ಧಿಯನ್ನು ದಕ್ಷತೆಯಿಂದ ಪಡೆಯುವುದು ಹೇಗೆ ಎಂಬುದು ವಿಚಾರದ ಮುಖ್ಯಾಂಶ. ಸ್ವಾತಂತ್ರ್ಯಕ್ಕೆ ಕುಂದುಬೇಡ; ದಕ್ಷತೆಗೂ ಲೋಪಬೇಡ. ಇದು ಹೇಗೆ ಒಡಗೂಡಬೇಕು? ನನ್ನ ಅಭಿಮತವಾದರೋ ಇಷ್ಟುಮಾತ್ರ. ಸ್ವಂತ ಲಾಭವನ್ನು ಗಳಿಸುವುದರಲ್ಲಿ ನಿರ್ಬಂಧವನ್ನೊಡ್ಡಿದರೆ ಅದನ್ನು ಸಹಿಸಬಲ್ಲೆನು. ರಾಷ್ಟ್ರಹಿತಕ್ಕಾಗಿ ಇಂತಹ ಕೆಲಸವನ್ನೇ ಮಾಡತಕ್ಕದ್ದೆಂದು ಜನರನ್ನು ಬಲಾತ್ಕಾರಗೊಳಿಸಿದರೆ ಅದನ್ನೂ ಸಹಿಸಿಯೇನು. ಆದರೆ ಜನರ ಮಾನಸಿಕ ಸ್ವಾತಂತ್ರ್ಯವನ್ನು ಅಪಹರಿಸಿದರೆ ಸಹಿಸಲಾರೆ. ಈ ರೀತಿಯ ಅಭಿಪ್ರಾಯಗಳನ್ನೇ ಇಟ್ಟುಕೊಳ್ಳಬೇಕು, ಆ ರೀತಿಯ ಅಭಿಪ್ರಾಯಗಳನ್ನು ಬೆಳೆಸಬಾರದು ಎಂದಾಗ ಬಲು ದೊಡ್ಡ ಹಿಂಸೆ ನಡೆಯುವುದೆಂದು ನನ್ನ ಅಭಿಪ್ರಾಯ. ಹುಟ್ಟಿದ ಮಕ್ಕಳೆಲ್ಲರಿಗೂ ಒಂದೇ

ಬಗೆಯ ಪಾಠವನ್ನು ಗೊತ್ತುಮಾಡಿ ಆ ಪಾಠವಿಷಯವನ್ನೊಪ್ಪಲಾರದವರನ್ನು ಸೆರೆಮನೆಗೆ ದೂಡುತ್ತಲೋ ಹಿಂಸೆಗೊಳಿಸುತ್ತಲೋ ವಧಿಸುತ್ತಲೋ ನಡೆಸುತ್ತಿದ್ದರೆ ಮುಂದಾಗುವುದೇನು? ತಾವು ಪಾಠ ಕಲಿತಷ್ಟು ಮಾತ್ರವೇ ಸರಿಯೆಂದೂ ಬೇರೆಯಾದುದು ದುಷ್ಟವೆಂದೂ ಆ ಮಕ್ಕಳ ಮನಸ್ಸಿನಲ್ಲಿ ನಾಟಿ ಅವರು ದೊಡ್ಡವರಾದ ಮೇಲೆ ಅಸಹನೆಯನ್ನು ತಾಳದಿದ್ದರೂ ಅಮೂಲ್ಯವಾದ ಕುತೂಹಲಗುಣವನ್ನು ಕಳೆದುಕೊಳ್ಳುವರು. ಕುತೂಹಲಬುದ್ಧಿಯ ನಾಶವು ಬಹು ನಷ್ಟಕರವಾದುದು. ಕುತೂಹಲ ಬುದ್ಧಿಯಿಂದಲೇ ಅಲ್ಲವೆ ಪೃಥ್ವಿಯಲ್ಲಿ ಮಾನವನ ಬದುಕು ಇಷ್ಟು ಆಶ್ಚರ್ಯಕರವಾದ ಅಭಿವೃದ್ಧಿ ಪಡೆದಿರುವುದು!

ಈ ವಿಷತ್ತು ನಿಜವೆಂಬುದಕ್ಕೆ ಜರ್ಮನಿಯೇ ಸಾಕ್ಷಿ. ತತ್ತ್ವಶೋಧನೆಯಲ್ಲಿಯೂ ಶಾಸ್ತ್ರಸಾಧನೆಯಲ್ಲಿಯೂ ಅಗ್ರಗಾಮಿಯೆನಿಸಿದ್ದ ಆ ದೇಶದಲ್ಲಿ ಇತ್ತೀಚಿಗೆ ಶಾಸ್ತ್ರವೃದ್ಧಿಯೆಂಬುದಿಲ್ಲ; ಕ್ಷೀಣತೆ ಕಾಣುತ್ತಲಿದೆ.

ಆದ್ದರಿಂದ ಪುಸ್ತಕವನ್ನು ಮುಗಿಸುವಮುನ್ನ ಮಿತ್ರರಾದ ನಿಮ್ಮಲ್ಲಿ ನನ್ನದೊಂದು ಬಿನ್ನಹ. ಇತರರಿಂದ ಲಭಿಸಿದ ಅಭಿಪ್ರಾಯಗಳು ಎಷ್ಟು ಒಳ್ಳೆಯವಾಗಿದ್ದಾಗ್ಗೂ ಅವುಗಳಷ್ಟಕ್ಕೆ ಮಾತ್ರ ತೃಪ್ತರಾಗಬೇಡಿ. ಕಂಡು ಕೇಳಿದ್ದನ್ನು ಪರೀಕ್ಷಿಸಿ ಕಾಣಿರಿ; ಪ್ರತಿಪಕ್ಷದ ವಾದದಲ್ಲಿರುವ ಅಂಶಗಳನ್ನು ತಿಳಿದುಕೊಳ್ಳಿ. ಪ್ರಾಚೀನಕಾಲದಲ್ಲಿದ್ದ ಮಹನೀಯರನ್ನು ಗೌರವಿಸಿ ಅವರ ಮನೋಧರ್ಮವನ್ನೂ ಬೋಧನೆಯನ್ನೂ ಕಾರ್ಯಕಲಾಪಗಳನ್ನೂ ಎಚ್ಚರದಿಂದ ವ್ಯಾಸಂಗಮಾಡಿ ಅರಿತುಕೊಳ್ಳಿ; ಆದರೆ ಅಂಧಶ್ರದ್ಧೆಯನ್ನು ಬೆಳಸದಂತಿರಿ. ಸ್ವಂತಬುದ್ಧಿಯನ್ನುಪಯೋಗಿಸಿ ನಿಮ್ಮ ಸುತ್ತಮುತ್ತ ಕಾಣಬರುವ ಸಮಸ್ಯೆಗಳ ವಿಚಾರವನ್ನಿಟ್ಟುಕೊಂಡು ಸಾವಧಾನವಾಗಿ ಆಲೋಚನೆ ನಡೆಸಿ. ತೃಪ್ತಿಕರವಾದ ಇತ್ಯರ್ಥವಾಗದಿದ್ದರೂ ನಿಮಗೆ ಹಿತವೇ ನಡೆಯುವುದು. ಬುದ್ಧಿಗೆ ಈ ಅಭ್ಯಾಸದಿಂದ ಪಟುತ್ವವು ಬರುವುದು; ನಿರ್ಮಾಣಶಕ್ತಿಯು ವೃದ್ಧಿಗೊಳ್ಳುವುದು. ಆ ತರುವಾಯ ನಿಮ್ಮ ಕಾಲದಲ್ಲಿ ನೀವೂ ಪ್ರಭಾವಶಾಲಿಗಳಾಗಿ ಮಹನೀಯರಲ್ಲಿ ಗಣ್ಯರಾದೀರಿ. ಆಗುವುದಿಲ್ಲವೆಂದು ಖಂಡಿತವಾಗಿ ಹೇಳಬಲ್ಲವರು ಯಾರು? ಹಿಂದಿನ ಆರ್ಯೋಕ್ತಿಯೂ ಇಷ್ಟೇ ಅಲ್ಲವೆ!

'ಯದ್ಭಾವಂ ತದ್ಭವತಿ'

K. H. Manjanath Setty. esqr.

S. S. L. C.

Maharaja's High School.

Mysore.

C L


Shop. Raju.

V Form 'c'

Maharaja's High School


Mysore.

15-7-1947.



ಗುಲಕ್ಕೆ ೩೭೫ ವರ್ಷಗಳು

,, ೨೫೦ ,,


ವ್ಯವಸಾಯ
ಮೃಗಪೋಷಣೆ
ಗಾಲಿ
ಸಾಧನ
ಬೆಂಕಿ